JJ-54 SRS

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

(B) 25221

ಅಧಿಕೃತ ವರದಿ
OFFICIAL REPORT

೧೨ನೇ ಅಧಿವೇಶನ

12TH SESSION

ಸಂಪುಟ – ೧೪ (ಕ್ರಮಾಂಕ – ೦೩)

Volume - 14 (No. 03)

(೧೧, ೧೨ ಮತ್ತು ೧೩ನೇ ಜುಲೈ ೨೦೦೭,)

(11th, 12th & 13th July 2007)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

(B) 25221

ಅಧಿಕೃತ ವರದಿ
OFFICIAL REPORT

೧೨ನೇ ಅಧಿವೇಶನ

12TH SESSION

ಸಂಪುಟ – ೧೪ (ಕ್ರಮಾಂಕ – ೦೩)

Volume - 14 (No. 03)

(೧೧, ೧೨ ಮತ್ತು ೧೩ನೇ ಜುಲೈ ೨೦೦೭,)

(11th, 12th & 13th July 2007)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ವಿಷಯಾನುಕ್ರಮಣಿಕೆ-11-07-2007

1 ಪ್ರಶ್ನೋತ್ತರಗಳು 01-65

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

1 ಶ್ರೀ ಹೆಚ್ ಹಾಲಪ್ಪ

2 ಶ್ರೀ ಬಸವರಾಜ ರಾಯ ರೆಡ್ಡಿ

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು (ಅನುಬಂಧ-1)

2 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 65-125

ವಿಷಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಕ್ಸಲೀಯರ ಚಟುವಟಿಕೆ ಕುರಿತು

1 ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

2 ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

3 ಶ್ರೀ ಕೆ ಆರ್ ರಮೇಶ್ ಕುಮಾರ್

4 ಶ್ರೀ ಆರ್ ರೋಶನ್ ಬೇಗ್

5 ಶ್ರೀ ವಾಟಾಳ್ ನಾಗರಾಜ್

6 ಶ್ರೀ ಸುನಿಲ್ ಕುಮಾರ್

7 ಶ್ರೀ ಅರಗ ಜ್ಞಾನೇಂದ್ರ

8 ಶ್ರೀ ಮಲ್ಲಿಕಾರ್ಜುನ ಖರ್ಗೆ

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 125-136

ವಿಷಯ ತಿಪಟೂರು ಡಿವಿಷನ್ ಬೆಸ್ಕಾಂ ಟೆಂಡರ್ ಕುರಿತು

1 ಶ್ರೀ ಜೆ ಸಿ ಮಾಧುಸ್ವಾಮಿ

2 ಶ್ರೀ ಹೆಚ್ ಡಿ ರೇವಣ್ಣ (ಇಂಧನ ಸಚಿವರು)

4 ನಿಲುವಳಿ ಸೂಚನೆ ಮಂಡನೆಗೆ ಅವಕಾಶ **136–191**
ಕೋರಿ ಮುಂದುವರಿದ ಚರ್ಚೆ
ವಿಷಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಕ್ಸಲೀಯರ ಹಾವಳಿ ಕುರಿತು
1 ಶ್ರೀ ಜಿ ವಿ ಶ್ರೀರಾಮ ರೆಡ್ಡಿ
2 ಡಾ ಹೆಚ್ ಸಿ ಮಹದೇವಪ್ಪ
3 ಶ್ರೀ ಎಸ್ ರಾಜೇಂದ್ರನ್

ಉತ್ತರ
ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

5 ಪ್ರಕಟಣೆ· **191–191**
ವಿಷಯ ಶ್ರೀ ಶಿವಾನಂದ ಎಸ್ ಪಾಟೀಲ್ ರವರು ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ

6 ಅನುಬಂಧ **191–318**

ವಿಷಯಾನುಕ್ರಮಣಿಕೆ-12-07-2007

1 ಪ್ರಶ್ನೋತ್ತರಗಳು 319-373

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

1 ಶ್ರೀ ನರಸಿಂಹ ಸ್ವಾಮಿ ಜೆ

2 ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ

3 ಶ್ರೀ ರಘುಪತಿ ಭಟ್ ಕೆ

4 ಶ್ರೀ ಐವಾನ್ ನಿಗ್ಲಿ

5 ಶ್ರೀ ಪದ್ಮನಾಭ ಕೊರಾರಿ ಕೆ

6 ಶ್ರೀ ಬಾಲರಾಜ್ ಎಸ್

7 ಶ್ರೀ ವಾಟಾಳ್ ನಾಗರಾಜ್

2 ವರದಿಯನ್ನೊಪ್ಪಿಸುವುದು 373-374

ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 115ನೇ ವರದಿ (ಒಪ್ಪಿಸಲಾಯಿತು)

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 374-400

ಅ) ವಿಷಯ ರಾಜ್ಯದಲ್ಲಿ 14,000 ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು)

ಆ) ವಿಷಯ ಕೋಲಾರದ ರೇಷ್ಮೆ ಕಾಲೇಜಿನಲ್ಲಿ ಬಿ ಎಸ್ಸಿ ಕೃಷಿ ಕೋರ್ಸ್ ಪ್ರಾರಂಭಿಸುವುದರ ಬಗ್ಗೆ

ಶ್ರೀ ಕೆ ಶ್ರೀನಿವಾಸ ಗೌಡ

ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು)

ಇ) ವಿಷಯ ಹುಬ್ಬಳ್ಳಿಯ KIMS Hospital ನಿಂದ 22 ಜನರನ್ನು ಹರಾತ್ತನೆ ವರ್ಗ ಮಾಡಿರುವ ಬಗ್ಗೆ

ಶ್ರೀ ಎಸ್ ಆರ್ ಮೋರೆ

ಶ್ರೀ ಆರ್ ವಿ ದೇಶಪಾಂಡೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು)

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

ಈ) ವಿಷಯ ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೆ MCI ಅನುಮತಿ ಪಡೆಯುವ ಬಗ್ಗೆ

ಶ್ರೀ ಡಿ ಆರ್ ಪಾಟೀಲ್

ಶ್ರೀ ಆರ್ ರಮೇಶ್ ಕುಮಾರ್

ಡಾ, ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಉ) ವಿಷಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯ ವ್ಯಾಪಕವಾಗಿ ಹಬ್ಬುತ್ತಿರುವ ಬಗ್ಗೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟಯುಂಬ ಕಲ್ಯಾಣ ಸಚಿವರು)

ಊ) ವಿಷಯ ಶಿರಹಟ್ಟಿ ಕ್ಷೇತ್ರದಲ್ಲಿ ಮಲೇರಿಯಾ ವ್ಯಾಪಕವಾಗಿ ಹರಡಿರುವ ಬಗ್ಗೆ

ಶ್ರೀ ಜಿ ಎಸ್ ಗಡ್ಡದ್ಯವರ ಮಠ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

4 ಹಕ್ಕುಚ್ಯುತಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ **400–422**

ವಿಷಯ ಈ ಸಂಜೆ ಪತ್ರಿಕೆಯಲ್ಲಿ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಬಗ್ಗೆ ಪ್ರಕಟವಾಗಿರುವ ಆಕ್ಷೇಪಾರ್ಹ ಪ್ರಕಟಣೆಯ ಬಗ್ಗೆ

ಶ್ರೀ ದಿನೇಶ್ ಗುಂಡೂರಾವ್

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಶ್ರೀ ಕೆ ಆರ್ ರಮೇಶ್ ಕುಮಾರ್

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಸಿ ಬಿ ಕೃಷ್ಣಭೈರೇಗೌಡ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

ಶ್ರೀ ವಾಟಾಳ್ ನಾಗರಾಜ್

(ತೀರ್ಪನ್ನು ಕಾದಿರಿಸಲಾಯಿತು)

5 ಗಮನ ಸೆಳೆಯುವ ಸೂಚನೆಗಳು **422–423**

ಅ) ವಿಷಯ "ಸಳ್ಳುರು" ಜನಾಂಗಕ್ಕೆ ಸೇರಿದವರಲ್ಲಿ ಕೆಲವರನ್ನು 1ಎ ವರ್ಗಕ್ಕೆ ಮತ್ತು ಇನ್ನು ಕೆಲವರು 3ಎ ವರ್ಗಕ್ಕೆ ಸೇರಿರುವುದರಿಂದ ಉಂಟಾಗಿರುವ ತಾರತಮ್ಯದ ಬಗ್ಗೆ

ಶ್ರೀ ಜೆ ಸಿ ಮಾಧುಉಸ್ವಾಮಿ

ಶ್ರೀ ಬಾಲಚಂದ್ರ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಆ) ರಾಷ್ಟ್ರೀಯ ತೋಟಗಾರಿಕಾ ಯೋಜನೆಯು ರಾಜ್ಯದ 17 ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿದ್ದು, ಇನ್ನುಳಿದ ಜಿಲ್ಲೆಗಳಲ್ಲಿ9 ತೋಟಗಾರಿಕೆ ಹಿಂದುಳಿದಿರುವುದರಿಂದ ಈ ಜಿಲ್ಲೆಗಳಿಗೆ ರಾಜ್ಯ ಅನುದಾನವನನು ಹೆಚ್ಚಿಸುವ ಕುರಿತು

ಶ್ರೀ ಆರ್ ಧೃವನಾರಾಯಣ

ಶ್ರೀ ಶಶಿಕಾಂತ ಅ ನಾಯಿಕ (ತೋಟಗಾರಿಕಾ ಸಚಿವರು)

ಶ್ರೀ ವಾಟಾಳ್ ನಾಗರಾಜ್

ಇ) ವಿಷಯ ಡಾ ಬಂಜಗೆರೆ ಜಯಪ್ರಕಾಶ್ ಅವರು ಬರೆದು ಪ್ರಕಟಿಸಿರುವ "ಆನುದೇವಾ ಹೊರಗಣವನು" ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ

ಶ್ರೀ ಎಸ್ ಎಸ್ ಪಾಟೀಲ್

ಶ್ರೀ ವಿ ಸೋಮಣ್ಣ

ಶ್ರೀ ಬಿ ಸಿ ಪಾಟೀಲ್

ಶ್ರೀ ಹೆಚ್ ಎಸ್ ಮಹಾದೇವ ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಈ) ವಿಷಯ ಅಫಜಲ್‌ಪುರ ತಾಲ್ಲೂಕಿನಲ್ಲಿ ಬೆಳೆ ವಿಮೆ ಸಮೀಕ್ಷೆಯಲ್ಲಿ ಉಂಟಾಗಿರುವ ದೋಷದ ಕುರಿತು

ಶ್ರೀ ಎಂ ವೈ ಪಾಟೀಲ್

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್

6 ವಿತ್ತೀಯ ಕಾರ್ಯಕಲಾಪ 473

2007–08 ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ

(ಬೇಡಿಕೆಗಳನ್ನು ಮಂಡಿಸಲಾಯಿತು)

7 ಅನುಬಂಧ **500–655**

13-07-2007
ವಿಷಯಾನುಕ್ರಮಣಿಕೆ

ಅ) ಚುಕ್ಕೆ ಗುರಿತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು 655-722

ಪ್ರಶ್ನೆಸಂಖ್ಯೆ 61(574) ಶ್ರೀ ಬಸವರಾಜ್, ಐ ಎಸ್

63(550) ಶ್ರೀ ವಾಟಳ್ ನಾಗರಾಜ್

64(401) ಶ್ರೀ ಸೋಮಣ್ಣ ವಿ

67(409) ಶ್ರೀ ಬಾದರ್ಲಿ ಹಂಪಗೌಡ

68(246) ಶ್ರೀ ಪಾಟೀಲ್ ಎಸ್ ಎಸ್

69(411) ಶ್ರೀ ಬಾಲಕೃಷ್ಣ ಹೆಚ್ ಸಿ

70(115) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್

71(408) ಶ್ರೀ ಬಿ ಆರ್ ಪಾಟೀಲ್

72(405) ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್

73(560) ಶ್ರೀ ಶ್ರೀರಾಮರೆಡ್ಡಿ ಜಿ ವಿ

75(399) ಶ್ರೀ ಹೆಚ್ ಹಾಲಪ್ಪ

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು (ಅನುಬಂಧ) **722–722**

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು **722–747**

ಅ) ವಿಷಯ ಬಿಜಾಪುರ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಗೆ ಆದಂತಹ ಅವಮಾನದ ಬಗ್ಗೆ

ಶ್ರೀ ಧರಂಸಿಂಗ್, ವಿರೋಧ ಪಕ್ಷದ ನಾಯಕರು

ಶ್ರೀ ಮಲ್ಲಿಕಾರ್ಜುನ ಖರ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಎಂ ಪಿ ಪ್ರಕಾಶ್, ಗೃಹ ಸಚಿವರು

ಆ) ವಿಷಯ ಎಳೆಯ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿರುವ ಕುರಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಇ) ವಿಷಯ ಕೋಲಾರ ಕಾರಾಗೃಹದಲ್ಲಿ ಹೊರ ಜಿಲ್ಲೆಗಳ ಬಂದಿಗಳನ್ನು ವರ್ಗಾಯಿಸಿರುವುದರಿಂದ ಉಂಟಾಗಿರುವ ಸಮಸ್ಯೆ ಕುರಿತು

ಶ್ರೀ ಕೆ ಶ್ರೀನಿವಾಸಗೌಡ

ಶ್ರೀ ಎಂ ಪಿ ಪ್ರಕಾಶ್, ಗೃಹ ಸಚಿವರು

ಡಾ ಸುಧಾಕರ ರೆಡ್ಡಿ

3) ಗಮನ ಸೆಳೆಯುವ ಸೂಚನೆ **747–753**

ಅ) ವಿಷಯ ಲಾಪು ಕ್ಷೇತ್ರಕ್ಕೆ ಬಯಲು ರಂಗ ಮಂದಿರ ಮಂಜೂರು ಮಾಡುವ ಬಗ್ಗೆ

ಶ್ರೀ ಲಾಲಾಜಿ ಆರ್ ಮೆಂಡಸ್

ಶ್ರೀ ಎಂ ಪಿ ಪ್ರಕಾಶ್, (ಗೃಹ ಸಚಿವರು)

ಆ) ವಿಷಯ ರಾಷ್ಟ್ರೀಯ ಹೆದ್ದಾರಿ 13ರಲ್ಲಿರುವ ಆಲೂರಿನ ಆಸ್ಪತ್ರೆ ಮತ್ತು ರಸ್ತೆ ಸುಧಾರಣೆ ಬಗ್ಗೆ

ಶ್ರೀಮತಿ ಭಾಗೀರಥಿ ಟಿ

ಶ್ರೀ ಆರ್ ಅಶೋಕ್, (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

4) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು **753–771**

ನಿಯಮ 234ರ ಅಡಿಯಲ್ಲಿ ಅವಕಾಶ ಕೋರಿ ಚರ್ಚೆ

ಇ) **ವಿಷಯ** ಸಾರ್ವಜನಕ ಉದ್ಯಮಗಳ ಸಮಿತಿಯ ವರದಿಯನ್ನು ಸದನದಲ್ಲಿ ಚರ್ಚೆ ಮಾಡುವ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಎಂ ಪಿ ಪ್ರಕಾಶ್

ಶ್ರೀ ವಾಟಾಳ್ ನಾಗರಾಜ್

5) ನಿಯಮ 234ರ ಮೇಲೆ ಚರ್ಚೆ 771-803

ವಿಷಯ ಸಾರ್ವಜನಿಕ ಉದ್ಯಮಗಳ ಸಮಿತಿಯ ಮೈಸೂರು ಮಿನರಲ್ಸ್ ಬಗ್ಗೆ ನೀಡಿದ ವರದಿ ಬಗ್ಗೆ ಚರ್ಚೆ

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ

ಶ್ರೀ ಕೆ ಶ್ರೀನಿವಾಸಗೌಡ

ಶ್ರೀ ಆರ್ ರೋಷನ್ ಬೇಗ್

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

6) ಅನುಬಂಧ- 803-931

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ
ಐದನೇ ಅಧಿವೇಶನದ ಮುಂದುವರೆದ ಉಪವೇಶನ
ಶುಕ್ರವಾರ 11 ನೇ ಜುಲೈ 2007 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 09 ಗಂಟೆ 27 ನಿಮಿಷಗಳಿಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರಾದ ಶ್ರೀ ಕೃಷ್ಣ ರವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು

1 ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ನಾನು ಒಂದು ಅಡ್ಜರ್ನ್‌ಮೆಂಟ್ ಮೋಶನ್ ಕೊಟ್ಟಿದ್ದೆ

ಅಧ್ಯಕ್ಷರು ಪ್ರಶ್ನೋತ್ತರ ಮುಗಿಯಲಿ ಜಿ ಕೃಷ್ಣ ಪಾಲೇಮಾರ್

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು ಹೆಚ್ ಹಾಲಪ್ಪನವರೆ, ತಾವು ಪ್ರಶ್ನೆ ಕೇಳಿ

ಶಾಲೆಗಳಲ್ಲಿ ಸೈಕಲ್ ಸ್ಟ್ಯಾಂಡ್‌ಗಳನ್ನು ನಿರ್ಮಿಸುವುದು

32(336) ಶ್ರೀ ಹಾಲಪ್ಪ ಹೆಚ್(ಹೊಸನಗರ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರಿ ಪ್ರಡಶಿಕ್ಷಣ ಶಾಲೆ ವಿದ್ಯಾರ್ಥಿಗಳಿಗೆ ಸರ್ಕಾರ ವಿತರಿಸುವ ಉಚಿತ ಸೈಕಲ್‌ಗಳನ್ನು ನಿಲ್ಲಿಸಲು ಸೂಕ್ತ ವ್ಯವಸ್ಥೆ ಇಲ್ಲದೆ ಇದ್ದು ಮಲೆನಾಡಿನಲ್ಲಿ ಮಳೆಯಲ್ಲಿ ತೋಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸರ್ಕಾರವು ಶಾಲೆಗಳಲ್ಲಿ ಸೈಕಲ್ ಸ್ಟ್ಯಾಂಡ್ ನಿರ್ಮಿಸುವ ಉದ್ದೇಶವಿದೆಯೇ?

ಉತ್ತರ ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ

ಅ) ಸೈಕಲ್‌ಗಳನ್ನು ನಿಲ್ಲಿಸಲು ಸೂಕ್ತ ವ್ಯವಸ್ಥೆ ಇಲ್ಲದೆ ಇದ್ದರೆ ಮಳೆಯಲ್ಲಿ ನೆನೆಯುವುದು ಸ್ವಾಭಾವಿಕ

ಆ) ಆದರೆ ಲಭ್ಯವಿರುವ ಆಯವ್ಯಯದಲ್ಲಿ ಶಾಲಾ ಕೊಠಡಿಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಸೈಕಲ್ ಸ್ಟ್ಯಾಂಡ್‌ಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಸದ್ಯಕ್ಕೆ ಇರುವುದಿಲ್ಲ

ಶ್ರೀ ಹೆಚ್ ಹಾಲಪ್ಪ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ ಈ ಸರ್ಕಾರ ಒಂದು ಒಳ್ಳೆಯ ಕೆಲಸವನ್ನು ಮಾಡಿದೆ ಮಾನ್ಯ ಯಡಿಯೂರಪ್ಪನವರು ಪ್ರೌಢಶಾಲಾ ಮಕ್ಕಳಿಗೆ ಸೈಕಲ್‌ಗಳನ್ನು ಕೊಟ್ಟಿದ್ದಾರೆ ಮಲೆನಾಡಿನಲ್ಲಿ ಮೂರು ತಿಂಗಳುಗಳ ಕಾಲ ಮಳೆಗಾಲವಿರುತ್ತದೆ ಹೀಗಿರುವಾಗ ಈ ಸೈಕಲ್‌ಗಳನ್ನು ನಿಲ್ಲಿಸಲು ಸೈಕಲ್ ಸ್ಟ್ಯಾಂಡ್ ಅಗತ್ಯವಿರುತ್ತದೆ ಕಳೆದ ವರ್ಷ 8ನೇ ತರಗತಿಯವರೆಗೆ ಸೈಕಲ್ ಕೊಟ್ಟಿದ್ದಾರೆ ಅವರು ಈಗ 9ನೇ ತರಗತಿಗೆ ಬರುತ್ತಾರೆ ಈ ವರ್ಷ ಹೊಸದಾಗಿ ಬರುವ 8ನೇ ತರಗತಿಯವರೆಗೆ ಸೈಕಲ್ ಕೊಡುತ್ತಾರೆ ಅಂದರೆ ಮುಂದಿನ ವರ್ಷಕ್ಕೆ ಪ್ರೌಢಶಾಲೆಯ ಎಲ್ಲ ಮಕ್ಕಳು ಸೈಕಲ್‌ಗಳನ್ನು ಹೊಂದೆ ಇರುತ್ತಾರೆ ಮಳೆಯಲ್ಲಿಯೇ ಸೈಕಲ್‌ಗಳನ್ನು ನಿಲ್ಲಿಸಿದರೆ ಒಂದೆರಡು ವರ್ಷದಲ್ಲಿಯೇ ಸೈಕಲ್‌ಗಳು ಹಾಳಾಗಿ ಹೋಗುತ್ತದೆ ಆದುದರಿಂದ ಮಲೆನಾಡಿನಲ್ಲಿ ಸೈಕಲ್ ಸ್ಟ್ಯಾಂಡ್‌ಗಳಿಗೋಸ್ಕರ ಮುಂದಿನ ಹಣಕಾಸು ವರ್ಷದಲ್ಲಿ ಹಣವಿಟ್ಟು ಸೈಕಲ್ ಸ್ಟ್ಯಾಂಡ್‌ಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಉತ್ತಮವಾದ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ ಈಗ ಆದ್ಯತೆಗಳನ್ನು ನಾವು ನಿರ್ಣಯ ಮಾಡಬಹುದು ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲಾ ಹೆಣ್ಣುಮಕ್ಕಳು ವಿದ್ಯಾವಂತ ರಾಗಬೇಕೆನ್ನುವ ಸದುದ್ದೇಶದಿಂದ ಈ ಒಂದು ಕಾರ್ಯಕ್ರಮವನ್ನು ಪ್ರಾರಂಭಿಸಿದರು ಏಕೆಂದರೆ ಹೆಣ್ಣುಮಕ್ಕಳು ದೂರು ದೂರದಿಂದ ಬಂದು ವಿದ್ಯಾಭ್ಯಾಸವನ್ನು ಪಡೆಯಲಿ ಎಂದು ಈ ಕಾರ್ಯಕ್ರಮವನ್ನು ಮಾಡಿದ್ದರಿಂದ 1,75,023 ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಸಂಪೂರ್ಣವಾದ ಲಾಭವನ್ನು ಪಡೆದಿದ್ದಾರೆ

ಹಾಗೆ ಗಂಡುಮಕ್ಕಳಿಗೂ ಸಹ ಕೊಡಬೇಕೆನ್ನುವ ಪ್ರಸ್ತಪ ಇದ್ದುದರಿಂದ ಆ ಬಗ್ಗೆಯೂ ಕೂಡ 8ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುವಂತಹ ವರಿಗೆ ಕೊಟ್ಟಿದ್ದೇವೆ ಒಟ್ಟು 49,79,59,000 ರೂಪಾಯಿಗಳನ್ನು 2,45,300 ವಿದ್ಯಾರ್ಥಿಗಳಿಗೆ ಕೊಡುವುದರ ಮೂಲಕ ಭಾರತ ದೇಶದಲ್ಲಿ ನಮ್ಮ ಕರ್ನಾಟಕ ವಿಕ್ರಮವನ್ನು ಸಾಧಿಸಿದೆ ಶೀಕ್ಷಣಕ್ಕೆ ಎಂತಹ ಆದ್ಯತೆ ಹಾಗೂ ಪ್ರಧಾನ್ಯತೆಯನ್ನು ಕೊಟ್ಟಿದೆ ಎನ್ನುವುದನ್ನು ತೋರಿಸಿಕೊಡುತ್ತದೆ ಮಾನ್ಯ ಸದಸ್ಯರು ಹೇಳಿದಂತೆ ನಮ್ಮ ಆದ್ಯತೆ ಮೊದಲು ಶಾಲಾ ಕೊಠಡಿಗಳನ್ನು ಕಟ್ಟಬೇಕು ಎನ್ನುವುದು ಮುಖ್ಯವಾಗಿರುವುದರಿಂದ ಮೊದಲು ಅದನ್ನು ಕಟ್ಟುತ್ತೇವೆ ಅದಾದ ಮೇಲೆ ಎರಡನೇ ಆದ್ಯತೆ ಸೈಕಲ್ ಸ್ಟ್ಯಾಂಡ್‌ಗಳನ್ನು ಮಾಡಿಕೊಡತಕ್ಕಂಥಾದ್ದು ಮಾಡುತ್ತೇವೆ

ಶ್ರೀ ಹೆಚ್ ಹಾಲಪ್ಪ ಸೈಕಲ್ ಕೊಡುವಂತಹ ಒಳ್ಳೆಯ ಕೆಲಸ ಮಾಡಿದ್ದಾರೆ ಆ ಸೈಕಲ್ಲುಗಳು ಸ್ವಲ್ಪ ದಿನ ಬಾಳಿಕೆ ಬರಬೇಕು ಎಂದರೆ, ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಇದ್ದಾರೆ ಅದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು

ಶ್ರೀ ಎಂ ಪಿ ಪ್ರಕಾಶ್ ಆದ್ಯತೆ ಮೇಲೆ ಸೈಕಲ್ ಸ್ಟ್ಯಾಂಡ್ ಕಟ್ಟಿಸುವುದಕ್ಕೆ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ

ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಮಂಜೂರಾತಿ

234 ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) 2007-08 ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ಗ್ರಾಮ ಮತ್ತು ನಗರಗಳಿಗೆ ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ

2) ಈ ಅವಧಿಯಲ್ಲಿ ಸರ್ಕಾರಕ್ಕೆ ಬಂದಿದ್ದ ಪ್ರಸ್ತಾವನೆಗಳು ಎಷ್ಟು? (ಮಂಜೂರಾಗಿರುವ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಒದಗಿಸವುದು)

3) ರಾಜ್ಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳ ಅವಾಶ್ಯಕತೆ ಇದೆ

4) ಪ್ರಸಕ್ತ ಸಾಲಿನಲ್ಲಿ ಗುಲ್ಬರ್ಗಾ, ಬೀದರ್ ರಾಯಚೂರು ಕೊಪ್ಪಳ ಜಿಲ್ಲೆಗಳಿಗೆ ಅತ್ಯಂತ ಕಡಿಮೆ ಪ್ರಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಮಂಜೂರು ಮಾಡಿ ತಾರತಮ್ಯ ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

5) ಈ ತಾರತಮ್ಯ ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಉತ್ತರ ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ

1) 2007–08 ನೇ ಸಾಲಿನಲ್ಲಿ 199 ಸರ್ಕಾರಿ ಪ್ರೌಢ ಶಾಲೆಗಳನ್ನು ಮತ್ತು 101 ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದ್ದು ವಿವರಗಳ ಪಟ್ಟಿಯನ್ನು ಅನುಭಂಧ –1 ರಲ್ಲಿ ಲಗತ್ತಿಸಿದೆ

2) ಸರ್ಕಾರಕ್ಕೆ ಬಂದಿರುವ ಸರ್ಕಾರಿ ಪ್ರೌಢಶಾಲೆಗಳ ಪ್ರಸ್ತಾವನೆಗಳ ಸಂಖ್ಯೆ 707

ಸರ್ಕಾರಕ್ಕೆ ಬಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಸ್ತಾವನೆಗಳ ಸಂಖ್ಯೆ 479

ಮಂಜೂರಾಗಿರುವ ಕ್ಷೇತ್ರವಾರು ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ

ಜಿಲ್ಲಾ ಉಪ ನಿರ್ದೇಶಕರುಗಳಿಂದ ಸ್ಥಳ ಪರಿಶೀಲನೆ ಮಾಡಿ ಸ್ಥಳೀಯ ಅಗತ್ಯತೆಯನ್ನನುಸರಿಸಿ ಬರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಆಯವ್ಯಯದ ಲಭ್ಯತೆಯ ಆಧಾರದ ಮೇಲೆ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತದೆ ಇದೊಂದು ಸತತವಾದ ಪ್ರಕ್ರಿಯೆಯಾಗಿದೆ

	ಪ್ರೌಢಶಾಲೆಗಳು	ಪ ಪೂ ಕಾ
ಗುಲ್ಬರ್ಗಾ	8	5
ಬೀದರ್	2	3
ರಾಯಚೂರು	8	1
ಕೊಪ್ಪಳ	4	2

ಮೇಲಿನಂತೆ ಈ ಜಿಲ್ಲೆಗಳಿಗೂ ಅಗತ್ಯವಿರುವ ಕಡೆಗಳಲ್ಲಿ ಮಂಜೂರಾತಿ ನೀಡಿರುವುದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ ಆಯವ್ಯಯದ ಲಭ್ಯತೆಯನ್ನು ಅನುಸರಿಸಿ ಅಗತ್ಯತೆ ಅನುಸಾರ ಹೆಚ್ಚಿನ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು

ಪ್ರೌಢಶಾಲೆ ಮಂಜೂರು ಮಾಡಲು ಸರ್ಕಾರದಲ್ಲಿ ಸಲ್ಲಿಸಿರುವ ಪ್ರಸ್ತಾವನೆಗಳ ವಿವರ

ಜಿಲ್ಲಾವಾರು

ಕ್ರ.ಸಂ	ಜಿಲ್ಲೆ	ಪ್ರಸ್ತಾವನೆಗಳ ಸಂಖ್ಯೆ
1	ಬೆಂಗಳೂರು ಉತ್ತರ	03
2	ಬೆಂಗಳೂರು ದಕ್ಷಿಣ	04
3	ಬೆಂಗಳೂರು ಗ್ರಾಮಾಂತರ	07
4	ಕೋಲಾರ	21
5	ಚಿಕ್ಕಬಳ್ಳಾಪುರ	13
6	ತುಮಕೂರು	13
7	ಮಧುಗಿರಿ	12
8	ಚಿತ್ರದುರ್ಗ	21
9	ದಾವಣಗೆರೆ	18
10	ಶಿವಮೊಗ್ಗ	27
11	ಮೈಸೂರು	22
12	ಚಾಮರಾಜನಗರ	12
13	ಮಂಡ್ಯ	12
14	ಹಾಸನ	16
15	ಚಿಕ್ಕಮಗಳೂರು	13
16	ಕೊಡಗು	05
17	ದಕ್ಷಿಣ ಕನ್ನಡ	24
18	ಉಡುಪಿ	09

19	ಬೆಳಗಾಂ	33
20	ಚಿಕ್ಕೋಡಿ	63
21	ಬಿಜಾಪುರ	26
22	ಬಾಗಲಕೋಟೆ	26
23	ಧಾರವಾಡ	31
24	ಗದಗ	26
25	ಹಾವೇರಿ	18
26	ಉತ್ತರಕನ್ನಡ	25
27	ಯಾದಗಿರಿ	05
28	ಗುಲ್ಬರ್ಗಾ	45
29	ಬಳ್ಳಾರಿ	54
30	ರಾಯಚುರು	30
31	ಕೊಪ್ಪಳ	32
32	ಬೀದರ್	06
	ಒಟ್ಟು	707

ಸರ್ಕಾರಿ ಆದೇಶ ಸಂಖ್ಯೆ ಇಡಿ77 ಎಸ್ಇಎಸ್ 2007 ದಿನಾಂಕ 11 06 2007 ಅನುಬಂಧ

ಗುಲ್ಬರ್ಗಾ ವಿಭಾಗ

ಕ್ರಸಂ	ಜಿಲ್ಲೆಯಹೆಸರು	ಬ್ಲಾಕ್‌ಹೆಸರು	ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸುವ ಸ್ಥಳ	ಮಾಧ್ಯಮ
ಬೀದರ್ ಜಿಲ್ಲೆ				
1	ಬೀದರ್	ಬಸವಕಲ್ಯಾಣ	ಬೊಸಗಾ	ಕನ್ನಡ
2	ಬೀದರ್	ಹುಮ್ನಾಬಾದ್	ನಂದಗಾವ್	ಕನ್ನಡ
ಬಳ್ಳಾರಿ ಜಿಲ್ಲೆ				
3	ಬಳ್ಳಾರಿ	ಸಂಡೂರು	ಎಂತುಂಬದಗಡ್ಡೆ	ಕನ್ನಡ
4	ಬಳ್ಳಾರಿ	ಸಂಢೂರು	ಲಕ್ಷ್ಮೀಪುರ	ಕನ್ನಡ
5	ಬಳ್ಳಾರಿ	ಸಿರಗುಪ್ಪ	ಸಿರಗುಪ್ಪ ವಾರ್ಡ್–5	ಉರ್ದು/ ಕನ್ನಡ
6	ಬಳ್ಳಾರಿ	ಹಗರಿ ಬೊಮ್ಮನಹಳ್ಳಿ	ಬಟ್ಟಮ್ಮನಹಳ್ಳಿ	ಕನ್ನಡ
7	ಬಳ್ಳಾರಿ	ಬಳ್ಳಾರಿ ಪೂರ್ವ	ಅಂದ್ರಾಳ್	ಕನ್ನಡ
8	ಬಳ್ಳಾರಿ	ಬಳ್ಳಾರಿ ಪೂರ್ವ	ಕೊಳಗಲ್ಲ	ಕನ್ನಡ
ಗುಲ್ಬರ್ಗಾ ಜಿಲ್ಲೆ				
9	ಗುಲ್ಬರ್ಗಾ	ಆಳಂದ	ಗುಂಬಜಬಲಾದ	ಕನ್ನಡ
10	ಗುಲ್ಬರ್ಗಾ	ಗುಲ್ಬರ್ಗಾ	ಸಂಗೋಳಗಿ ಸಿ	ಕನ್ನಡ
11	ಗುಲ್ಬರ್ಗಾ	ಚಿಂಚೋಲಿ	ಬಯ್ಯಾಪುರ ಕೆ	ಕನ್ನಡ
12	ಗುಲ್ಬರ್ಗಾ	ಚಿಂಚೋಲಿ	ರುದ್ರನೂರು	ಕನ್ನಡ
13	ಗುಲ್ಬರ್ಗಾ	ಜೇವರ್ಗಿ	ಗುಡೂರು	ಕನ್ನಡ
14	ಗುಲ್ಬರ್ಗಾ	ಚಿತ್ತಾಪೂರ	ಕಲಕುರ್ಕಿ	ಕನ್ನಡ

15	ಗುಲ್ಬರ್ಗಾ	ಚಿತ್ತಾಪುರ	ತಾಜಾಸುಲ್ತಾನಪುರ	ಕನ್ನಡ
16	ಗುಲ್ಬರ್ಗಾ	ಚಿತ್ತಾಪುರ	ಡೊಣಾಗಾಂ	ಕನ್ನಡ

ಕೊಪ್ಪಳ ಜಿಲ್ಲೆ

17	ಕೊಪ್ಪಳ	ಗಂಗಾವತಿ	ಹಿರೇಕೆಡಾ	ಕನ್ನಡ
18	ಕೊಪ್ಪಳ	ಕುಷ್ಟಗಿ	ಹಿರೇಸೊಣ್ಣಿನಗರ	ಕನ್ನಡ
19	ಕೊಪ್ಪಳ	ಯಲಬುರ್ಗಿ	ಮಾಟಲದಿನ್ನೆ	ಕನ್ನಡ
20	ಕೊಪ್ಪಳ	ಕೊಪ್ಪಳ	ಹೊತನ್ನಾಳ್	ಕನ್ನಡ

ರಾಯಚೂರು

21	ರಾಯಚೂರು	ಲಿಂಗಸಗೂರು	ಮಾರಲ್‌ದಿನ್ನೆ	ಕನ್ನಡ
22	ರಾಯಚೂರು	ಲಿಂಗಸಗೂರು	ನಲೋಗಲ್ಲಕ್ರಾಸ್	ಕನ್ನಡ
23	ರಾಯಚೂರು	ಮಾನ್ವಿ	ತೋರಣದಿನ್ನೆ	ಕನ್ನಡ
24	ರಾಯಚೂರು	ಸಿಂಧನೂರು	ಸುಕಾಲಪೇಟೆ ಸಿಂಧನೂರು	ಕನ್ನಡ
25	ರಾಯಚೂರು	ರಾಯಚೂರು	ಮಲಿಯಾಬಾದ್	ಕನ್ನಡ
26	ರಾಯಚೂರು	ದೇವದುರ್ಗ	ಕಮಲದಿನ್ನೆ	ಕನ್ನಡ
27	ರಾಯಚೂರು	ದೇವದುರ್ಗ	ಹಿರೇರಾಯರಕಂಪಿ	ಕನ್ನಡ
28	ರಾಯಚೂರು	ದೇವದುರ್ಗ	ಎನ್‌ಗಣೇಕಲ್	ಕನ್ನಡ

ಯಾದಗಿರಿ ಶೈಕ್ಷಣಿಕ ಜಿಲ್ಲೆ

29	ಯಾದಗಿರಿ	ಸೇಡಂ	ಚಂದಾಪುರ	ಕನ್ನಡ
30	ಯಾದಗಿರಿ	ಶಹಾಪುರ	ರಸ್ತಾಪುರ	ಕನ್ನಡ
31	ಯಾದಗಿರಿ	ಶೋರಾಪುರ	ಹೊತ್‌ಪೇಟೆ	ಕನ್ನಡ
32	ಯಾದಗಿರಿ	ಶೊರಾಪುರ	ಯಾದಿಯಾಪುರ	ಕನ್ನಡ
33	ಯಾದಗಿರಿ	ಯಾದಗಿರಿ	ಬೀಳಾರ್	ಕನ್ನಡ
34	ಯಾದಗಿರಿ	ಯಾದಗಿರಿ	ಹಾಲಗೇರಿ	ಕನ್ನಡ

ಬೆಳಗಾಂ ವಿಭಾಗ

35	ಬೆಳಗಾಂ	ಸವದತ್ತಿ	ಚಿಕ್ಕುಂಬಿ	ಕನ್ನಡ
36	ಬೆಳಗಾಂ	ಬೈಲಹೊಂಗಲ	ಬೈಲಹೊಂಗಲ	ಕನ್ನಡ
37	ಬೆಳಗಾಂ	ರಾಮದುರ್ಗ	ಓಬಳಾಪುರ	ಕನ್ನಡ
38	ಬೆಳಗಾಂ	ರಾಮದುರ್ಗ	ಕಲ್ಹಾಳ	ಕನ್ನಡ
39	ಬೆಳಗಾಂ	ಬೆಳಗಾಂ ಗ್ರಾಮಾಂತರ	ಕರಡಿಗುಡ್ಡ	ಕನ್ನಡ
40	ಬೆಳಗಾಂ	ಬೆಳಗಾಂ ಗ್ರಾಮಾಂತರ	ಸಾಂಬ್ರಾ	ಕನ್ನಡ
41	ಬೆಳಗಾಂ	ಖಾನಾಪುರ	ಚಿಕ್ಕಹಟ್ಟಿಹೊಳ್ಳಿ	ಕನ್ನಡ
42	ಬೆಳಗಾಂ	ಖಾನಾಪುರ	ಹಿರೇಮನನಹಳ್ಳಿ	ಕನ್ನಡ

ಬಿಜಾಪುರ ಜಿಲ್ಲೆ

43	ಬಿಜಾಪುರ	ಬಸವನ ಬಾಗೇವಾಡಿ	ಕಾರ್ಜೋಳ	ಕನ್ನಡ
44	ಬಿಜಾಪುರ	ಇಂಡಿ	ರೇವತಗಾಂವ್	ಕನ್ನಡ
45	ಬಿಜಾಪುರ	ಸಿಂಧಗಿ	ಹುಣಸಾಳ	ಕನ್ನಡ/ಉರ್ದು
46	ಬಿಜಾಪುರ	ಬಿಜಾಪುರ	ಕಂಬಾಗಿ	ಕನ್ನಡ

ಬಾಗಲಕೋಟೆ ಜಿಲ್ಲೆ

47	ಬಾಗಲಕೋಟೆ	ಬಾದಾಮಿ	ಸೊಲೆಕೆರೆ	ಕನ್ನಡ
48	ಬಾಗಲಕೋಟೆ	ಜಮಖಂಡಿ	ಹನಗಂಡಿ	ಕನ್ನಡ/ಉರ್ದು

49	ಬಾಗಲಕೋಟೆ	ಮುಧೋಳ	ಅಮಲಜರಿ	ಕನ್ನಡ

ಚಿಕ್ಕೋಡಿ ಶೈಕಗಷಣಿಕ ಜಿಲ್ಲೆ

50	ಚಿಕ್ಕೋಡಿ	ರಾಯ್ಬಾಗ್	ನಪನಾಳ	ಕನ್ನಡ
51	ಚಿಕ್ಕೋಡಿ	ಅಥಣಿ	ನಿವರಕೋಡ	ಕನ್ನಡ
52	ಚಿಕ್ಕೋಡಿ	ಅಥಣಿ	ಜುಂಬರವಾಢ	ಕನ್ನಡ
53	ಚಿಕ್ಕೋಡಿ	ಅದಣಿ	ಪಾರ್ದನಹಳ್ಳಿ	ಕನ್ನಡ
54	ಚಿಕ್ಕೋಡಿ	ಅದಣಿ	ಸಿರಗುಪ್ಪ	ಕನ್ನಡ
55	ಚಿಕ್ಕೋಡಿ	ಗೋಕಾಕ್	ಕೊಪದಟ್ಟಿ	ಕನ್ನಡ
56	ಚಿಕ್ಕೋಡಿ	ಗೋಕಾಕ್	ಶಿವಾಪುರ	ಕನ್ನಡ
57	ಚಿಕ್ಕೋಡಿ	ಗೋಕಾಕ್	ಚೋಕಾನಟ್ಟಿ	ಕನ್ನಡ
58	ಚಿಕ್ಕೋಡಿ	ಗೋಕಾಕ್	ಮಸಗುಪ್ಪಿ	ಕನ್ನಡ
59	ಚಿಕ್ಕೋಡಿ	ಹುಕ್ಕೇರಿ	ಹೊಸೂರು	ಕನ್ನಡ
60	ಚಿಕ್ಕೋಡಿ	ಚಿಕ್ಕೋಡಿ	ಚಿಕ್ಕೋಡಿನಗರ	ಕನ್ನಡ
61	ಚಿಕ್ಕೋಡಿ	ಚಿಕ್ಕೋಡಿ	ಬೆಳಕೋಡು	ಕನ್ನಡ
62	ಚಿಕ್ಕೋಡಿ	ಮೂಡಲಗಿ	ಮೂಡಲಗಿನಗರ	ಕನ್ನಡ
63	ಚಿಕ್ಕೋಡಿ	ಮೂಡಲಗಿ	ನಿಪ್ಪಾಣಿ ನಗರ	ಕನ್ನಡ

ಧಾರವಾಢ ಜಿಲ್ಲೆ

64	ದಾರವಾಢ	ನವಲಗುಂದ	ನಾವಳ್ಳಿ	ಕನ್ನಡ
65	ಧಾರವಾಢ	ಕಲಘಟಗಿ	ಉಗ್ಗಣಕೇರಿ	ಕನ್ನಡ
66	ದಾರವಾಡ	ಕುಂದಗೋಳ	ಕುಂದಗೋಳನಗರ	ಕನ್ನಡ

67	ಧಾರವಾಢ	ಧರವಾಡ ಗ್ರಾ.	ಕಲಕೆರೆ	ಕನ್ನಡ
68	ಧಾರವಾಡ	ಹುಬ್ಬಳ್ಳಿ	ಬೆಳಗಲಿ	ಕನ್ನಡ

ಗದಗ್ ಜಿಲ್ಲೆ

69	ಗದಗ	ರೋಣ	ಅಬ್ಬಿಗೆರೆ	ಕನ್ನಡ
70	ಗದಗ	ಶಿರಹಟ್ಟಿ	ಮಾಚೇನಹಳ್ಳಿ	ಕನ್ನಡ
71	ಗದಗ	ಗದಗ	ರಾಜೀವ್‌ಗಾಂದಿ ನಗರ	ಕನ್ನಡ

ಹಾವೇರಿ ಜಿಲ್ಲೆ

72	ಹಾವೇರಿ	ಹಿರೇಕೆರೂರು	ಹೊಸಕಟ್ಟೆ	ಕನ್ನಡ
73	ಹಾವೇರಿ	ಶಿಗ್ಗಾವ್	ಹೊಸ್ಲೂರ	ಕನ್ನಡ
74	ಹಾವೇರಿ	ಹಾವೇರಿ	ದೇವಿಹೊಸುರು	ಕನ್ನಡ
75	ಹಾವೇರಿ	ಹಾನಗಲ್ಲು	ಹಿರೂರು	ಕನ್ನಡ
76	ಹಾವೇರಿ	ಹಾನಗಲ್ಲು	ಮಕರವಳ್ಳಿ	ಕನ್ನಡ
77	ಹಾವೇರಿ	ರಾಣಿಬೆನ್ನೂರು	ಹಲಗೇರಿ	ಉರ್ದು

ಉತ್ತರಕನ್ನಡ ಜಿಲ್ಲೆ

78	ಉತ್ತರಕನ್ನಡ	ಜೊಯಿಡಾ	ತಿನ್ಯೆಘಾಟ್	ಕನ್ನಡ
79	ಉತ್ತರಕನ್ನಡ	ಬಟ್ಕಳ	ಭಟ್ಕಳಭಂಡಾರ್	ಕನ್ನಡ
80	ಉತ್ತರಕನ್ನಡ	ಕಾರವಾರ	ತೊಡುರುಪುನರ್ ವಸತಿಕೇಂದ್ರ	ಕನ್ನಡ
81	ಉತ್ತರಕನ್ನಡ	ಹಳಿಹಾಳ	ಸಾತನಹಳ್ಳಿ	ಕನ್ನಡ
82	ಉತ್ತರಕನ್ನಡ	ಮುಂಡಗೋಡ	ಅಂದಲಗಿ	ಕನ್ನಡ
84	ಉತ್ತರಕನ್ನಡ	ಕುಮಟ	ಮಿರ್ಜಾನ್	ಉರ್ದು

ಚಿತ್ರದುರ್ಗ ಜಿಲ್ಲೆ

85	ಚಿತ್ರದುರ್ಗ	ಹಿರಿಯೂರು	ದಿಂಡವಾರ	ಕನ್ನಡ
86	ಚಿತ್ರದುರ್ಗ	ಹೊಸದುರ್ಗ	ವಿ ಕೆ ಗುಡ್ಡ	ಕನ್ನಡ
87	ಚಿತ್ರದುರ್ಗ	ಚಿತ್ರದುರ್ಗ	ಜಾಲಿಹಳ್ಳಿ ಗೊಲ್ಲರಹಟ್ಟಿ	ಕನ್ನಡ
88	ಚಿತ್ರದುರ್ಗ	ಚಿತ್ರದುರ್ಗ	ವಡ್ಡರಸಿದ್ದನವಳ್ಳಿ	ಕನ್ನಡ

ಕೋಲಾರ ಜಿಲ್ಲೆ

89	ಕೋಲಾರ	ಕೋಲಾರ	ಬೆಲ್ಲಮಾರನ ಹಳ್ಳಿ	ಕನ್ನಡ
90	ಕೋಲಾರ	ಶಿಡ್ಲಘಟ್ಟ ತಾ	ಆಸಗಾನಹಳ್ಳಿ	ಕನ್ನಡ

ಮಿಟ್ಟೇಮರಿಹೋಬಳಿ

91	ಕೋಲಾರ	ಶಿಡ್ಲಘಟ್ಟ ತಾ	ಪಲಿಚೆರಲು	ಕನ್ನಡ
92	ಕೋಲಾರ	ಮುಳಬಾಗಿಲುತಾ	ವಿರೂಪಾಕ್ಷಿ	ಕನ್ನಡ
93	ಕೋಲಾರ	ಮುಳಬಾಗಿಲುತಾ	ಯಳಗೊಂಡಹಳ್ಳಿ	ಕನ್ನಡ
94	ಕೋಲಾರ	ಮುಳಬಾಗಿಲುತಾ	ಗುಮ್ಲಾಪುರ	ಕನ್ನಡ

ಚಿಕ್ಕಬಳ್ಳಾಪುರ ಶೈಕ್ಷಣಿಕ ಜಿಲ್ಲೆ

95	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	ಗಂಟವಾರಪಲ್ಲಿ	ಕನ್ನಡ

ಶಿವಮೊಗ್ಗ ಜಿಲ್ಲೆ

96	ಶಿವಮೊಗ್ಗ	ಶಿಕಾರಿಪುರ ತಾ	ಸುರುಗೇನಹಳ್ಳಿ	ಕನ್ನಡ
97	ಶಿವಮೊಗ್ಗ	ಶಿಕಾರಿಪುರ ತಾ	ಮಲ್ಲೇನಹಳ್ಳಿ	ಕನ್ನಡ
98	ಶಿವಮೊಗ್ಗ	ಶಿಕಾರಿಪುರ ತಾ	ಕಿಟ್ಟದಹಳ್ಳಿ	ಕನ್ನಡ

99	ಶಿವಮೊಗ್ಗ	ಶಿಕಾರಿಪುರ ತಾ	ಉಡುಗಣಿ	ಕನ್ನಡ

ತುಮಕೂರು ಜಿಲ್ಲೆ

100	ತುಮಕೂರು	ಕಸಬಾಹೋಬಳಿ	ಗಂಗನಘಟ್ಟ ತಿಪಟೂರು ತಾ	ಕನ್ನಡ
101	ತುಮಕೂರು	ತಿಪಟೂರು ತಾ	ಬಜಾಗೂರು	ಕನ್ನಡ

ನೊಣವಿನಕೆರೆ

102	ತುಮಕೂರು	ತಿಪಟೂರು ತಾ	ಗುಂಗುರುಮಳೆ	ಕನ್ನಡ
103	ತುಮಕೂರು	ಕುಣಿಗಲ್ ತಾ	ಯಕಗಲವಾಡಿ ಹೊಸದುರ್ಗ ಹೋ	ಕನ್ನಡ
104	ತುಮಕೂರು	ತುರುವೇಕೆರೆ	ಮುಗಳೂರು ಮಾಯಸಂದ್ರ ಹೋ	ಕನ್ನಡ
105	ತುಮಕೂರು	ಶಿರಾ ತಾ	ಗೋಣಿಹಳ್ಳಿ	ಕನ್ನಡ
106	ತುಮಕೂರು	ಶಿರಾ ತಾ	ಭೂವನಹಳ್ಳಿ	ಕನ್ನಡ
107	ತುಮಕೂರು	ಮದುಗಿರಿತಾ	ಬಜಾಗೂರು ಶಿವನಗೆರೆ	ಕನ್ನಡ

ದೊಡ್ಡೇರಿಹೋಬಳಿ

108	ತುಮಕೂರು	ತುಮಕೂರು ತಾ	ನೆಲಹಾಲ್ ಬೆಳ್ಳಾವಿ ಹೋ	ಕನ್ನಡ
109	ತುಮಕೂರು	ಕೊರಟಗೆರೆ ತಾ	ತಿಮ್ಮಸಂದ್ರ	ಕನ್ನಡ
110	ತುಮಕೂರು	ಕೊರಟಗೆರೆ ತಾ	ಬಜಾಗೂರು	ಕನ್ನಡ
111	ತುಮಕೂರು	ಗುಬ್ಬಿ ತಾ	ಕೊಂಡ್ಲಿ	ಕನ್ನಡ
112	ತುಮಕೂರು	ಗುಬ್ಬಿ ತಾ	ಹಿಂಡಸಗೆರೆ	ಕನ್ನಡ
113	ತುಮಕೂರು	ಪಾವಗಡ ತಾ	ಬೂದಿಬೆಟ್ಟ	ಕನ್ನಡ
114	ತುಮಕೂರು	ಪಾವಗಡ ತಾ	ಸಿದ್ದಾಪುರ	ಕನ್ನಡ
115	ತುಮಕೂರು	ತುರುವೇಕೆರೆ ತಾ	ಮುದ್ದನಹಳ್ಳಿ ದಬ್ಬೇಘಟ್ಟ ಹೋ	ಕನ್ನಡ
116	ತುಮಕೂರು	ತುರುವೇಕೆರೆ ತಾ	ಮುನಿಯೂರು ಕಸಬಾ ಹೋ	ಕನ್ನಡ

ಬೆಂಗಳೂರು ಗ್ರಾಮಾಂತರ ಜಿಲ್ಲೆ

117	ಬೆಂಗಳೂರು ಗ್ರಾಮಾಂತರ	ಚೆನ್ನಪಟ್ಟಣ ತಾ	ಸೋಗಾಲ	ಕನ್ನಡ
118	ಬೆಂಗಳೂರು ಗ್ರಾಮಾಂತರ	ರಾಮನಗರ ತಾ	ಹೆಬ್ಬಗೋಡಿ ತುಂಬೇನಹಳ್ಳಿ ಕೈಲಾಂಚ ಹೋಬಳಿ	ಕನ್ನಡ
119	ಬೆಂಗಳೂರು ಗ್ರಾಮಾಂತರ	ರಾಮನಗರ ತಾ	ಕ್ಯಾಸಾಪುರ ಕೊಟುಗಲ್ ಹೋ	ಕನ್ನಡ
120	ಬೆಂಗಳೂರು ಗ್ರಾಮಾಂತರ	ರಾಮನಗರ ತಾ	ಹರಿಸಂದ್ರ ಕಸಬಾ ಹೋ	ಕನ್ನಡ
121	ಬೆಂಗಳೂರು ಗ್ರಾಮಾಂತರ	ಹೊಸಕೋಟೆ ತಾ	ಹಸಿಗಾಳ, ಸೂಲಿಬಲೆ ಹೋ	ಕನ್ನಡ
122	ಬೆಂಗಳೂರು ಗ್ರಾಮಾಂತರ	ಚನ್ನಪಟ್ಟಣ ತಾ	ತಗಚಗೆರೆ	ಕನ್ನಡ

ಬೆಂಗಳೂರು ಉತ್ತರ ಜಿಲ್ಲೆ

123	ಬೆಂಗಳೂರು ಉತ್ತರ	ಬೆಂಗಳೂರು ಉತ್ತರ ತಾ	ನರಸೀಪುರ (ವಿದ್ಯಾರಣ್ಯಪುರ)	ಕನ್ನಡ

ಬೆಂಗಳೂರು ದಕ್ಷಿಣ ಜಿಲ್ಲೆ

124	ಬೆಂ ದಕ್ಷಿಣ	ದಕ್ಷಿಣವಲಯ	ಬ್ಯಾಟರಾಯನಪುರ	ಕನ್ನಡ
125	ಬೆಂ ದಕ್ಷಿಣ	ಬೆಂ ದಕ್ಷಿಣ ತಾ	ಅಗರ	ಕನ್ನಡ
126	ಬೆಂ ದಕ್ಷಿಣ	ಬೆಂ ದಕ್ಷಿಣ	ಕೋನಪ್ಪನ ಅಗ್ರಹಾರ	ಕನ್ನಡ

ಮೈಸೂರು ವಿಭಾಗ

ಮೈಸೂರು ಜಿಲ್ಲೆ

127	ಮೈಸೂರುಜಿಲ್ಲೆ	ಕೆ ಆರ್ ನಗರ ತಾ	ದೂರನಹಳ್ಳಿ	ಕನ್ನಡ
128	ಮೈಸೂರುಜಿಲ್ಲೆ	ಕೆ ಆರ್ ನಗರ ತಾ	ಬಂಡಹಳ್ಳಿ	ಕನ್ನಡ

129	ಮೈಸೂರುಜಿಲ್ಲೆ	ಪರಿಯಾಪಟ್ಟಣ ತಾ	ಚಿಕ್ಕನೇರಳೆ	ಕನ್ನಡ
130	ಮೈಸೂರುಜಿಲ್ಲೆ	ಹೆಚ್ ಡಿ ಕೋಟೆ ತಾ	ಬಾಚೇಗೌಡನಹಳ್ಳಿ	ಕನ್ನಡ
131	ಮೈಸೂರುಜಿಲ್ಲೆ	ಹೆಚ್ ಡಿ ಕೋಟೆ ತಾ	ಯರಹಳ್ಳಿ	ಕನ್ನಡ
132	ಮೈಸೂರು	ಬನ್ನೂರು ತಾ	ಹೆಗ್ಗೂರು	ಕನ್ನಡ
133	ಮೈಸೂರು	ನಂಜನಗೂಡು ತಾ	ನಂಜನಗೂಡು	ಕನ್ನಡ

(ಬಾಲಕಿಯರ)

134	ಮೈಸೂರು	ನಂಜನಗೂಡು ತಾ	ಹುರ	ಕನ್ನಡ
135	ಮೈಸೂರು	ಹುಣಸೂರು	ಚಿಕ್ಕಹುಣಸೂರು	ಕನ್ನಡ
136	ಮೈಸೂರು	ಹುಣಸೂರು	ಕಡೇಮನುಗನಹಳ್ಳಿ	ಕನ್ನಡ
137	ಮೈಸೂರು	ಮೈಸೂರು ತಾ	ಎಸ್ ಕಲ್ಲಹಳ್ಳಿ	ಕನ್ನಡ
138	ಮೈಸೂರು	ಟಿ ನರಸೀಪುರ ತಾ	ಬನ್ನಳ್ಳಿ ಹುಂಡಿ	ಕನ್ನಡ
139	ಮೈಸೂರು	ಮೈಸೂರು ದಕ್ಷಿಣ	ಒಂಟಿಕೊಪ್ಪಲು	ಕನ್ನಡ
140	ಮೈಸೂರು	ಮೈಸೂರು ಉತ್ತರ	ಕುಂಬಾರಕೊಪ್ಪಲು	ಕನ್ನಡ
141	ಮೈಸೂರು	ಪಿರಿಯಾಪಟ್ಟಣ ತಾ	ಮುತ್ತೂರು	ಕನ್ನಡ

ಹಾಸನ ಜಿಲ್ಲೆ

142	ಹಾಸನ	ಆಲೂರು ತಾ	ಕಲ್ಲಾರೆ, ಕೆ ಹೊಸ ಕೋಟೆ ಹೋಬಳಿ	ಕನ್ನಡ
143	ಹಾಸನ	ಅರಸೀಕೆರೆ ತಾ	ರಂಗಾಪುರ ಗಂಡಸಿ ಹೋಬಳಿ	ಕನ್ನಡ
144	ಹಾಸನ	ಅರಸೀಕೆರೆ ತಾ	ಬಂದೂರು	ಕನ್ನಡ
145	ಹಾಸನ	ಅರಕಲಗೂಡು ತಾ	ಬಿದನೂರು ಕೊಣ ನೂರು ಹೋಬಳಿ	ಕನ್ನಡ
146	ಹಾಸನ	ಅರಕಲಗೂಡು ತಾ	ಹೆಚ್‌ಕೊಂಗಳಲೆ ಮಲ್ಲೀಪಟ್ಟಣ ಹೋ	ಕನ್ನಡ
147	ಹಾಸನ	ಬೇಲೂರು ತಾ	ಬಿಕ್ಕೋಡು	ಕನ್ನಡ

148	ಹಾಸನ	ಬೇಲೂರು ತಾ	ಲಿಂಗನಕೊಪ್ಪಲು	ಕನ್ನಡ
149	ಹಾಸನ	ಚೆನ್ನರಾಯಪಟ್ಟಣ ತಾ	ಚೆನ್ನರಾಯಪಟ್ಟಣಟೌನ್	ಕನ್ನಡ
150	ಹಾಸನ	ಚೆನ್ನರಾಯಪಟ್ಟಣ ತಾ	ಹಳೇಬೆಳಗೊಳ ಶ್ರವಣಬೆಳಗೊಳ ಹೋ	ಕನ್ನಡ
151	ಹಾಸನ	ಹಾಸನ ತಾಲ್ಲೂಕು	ಶ್ರೀರಾಮನಗರ (ಅಲ್ಲಾನ) ಕಾಫಿಕ್ಯೂರಿಂಗ್ ಹತ್ತಿರ	ಕನ್ನಡ
152	ಹಾಸನ	ಹಾಸನ ತಾಲ್ಲೂಕು	ಗೋಪನಹಳ್ಳಿ ಮತ್ತು ಕಂಬರಗಿ ಕ್ರಾಸ್ ದುದ್ದ ಹೋಬಳಿ ಹೆರಗು ಪಂ	ಕನ್ನಡ
153	ಹಾಸನ	ಹೊಳೆನರಸಿಪುರ ತಾಲ್ಲೂಕು	ಆಲದಹಳ್ಳಿ ಕಸಬಾ ಹೋಬಳಿ	ಕನ್ನಡ
154	ಹಾಸನ	ಹೊಳೆನರಸಿಪುರ ತಾಲ್ಲೂಕು	ಬೇಡಿಗನ ಹಳ್ಳಿ ಮೈಸೂರು ಹೋ	ಕನ್ನಡ
155	ಹಾಸನ	ಸಕಲೇಶಪುರ ತಾಲ್ಲೂಕು	ದೇವಾಲದ ಕೆರೆ ಹಾನಬಾಳು ಹೋಬಳಿ	ಕನ್ನಡ

ಮಂಡ್ಯ ಜಿಲ್ಲೆ

156	ಮಂಡ್ಯ	ನಾಗಮಂಗಲ	ನಾಗತಿಹಳ್ಳಿ	ಕನ್ನಡ
157	ಮಂಡ್ಯ	ಮಂಡ್ಯ ತಾ	ಸಂತೇಕಸಲಕೆರೆ, ಕೊತ್ತತ್ತಿ ಹೋಬಳಿ	ಕನ್ನಡ
158	ಮಂಡ್ಯ	ಮಂಡ್ಯ ತಾ	ಹೊನ್ನಾಯ್ಕನ ಹಳ್ಳಿ ಕೆರಗೋಡು ಹೋಬಳಿ	ಕನ್ನಡ
159	ಮಂಡ್ಯ	ಕೆ ಆರ್ ಪೇಟೆ ತಾಲ್ಲೂಕು	ಚಿಲ್ಲದ ಹಳ್ಳಿ ಹೊಸ ಬಡಾವಣೆ ಅಗ್ರಹಾರ ಬಾಚಹಳ್ಳಿ ಗ್ರಾಮ ಪಂಚಾಯತ್	ಕನ್ನಡ
160	ಮಂಡ್ಯ	ಕೆ ಆರ್ ಪೇಟೆ ತಾಲ್ಲೂಕು	ಹೊಸಹೊಳಲು ಕಸಬಾ ಹೋಬಳಿ	ಕನ್ನಡ
161	ಮಂಡ್ಯ	ಶ್ರೀರಂಗಪಟ್ಟಣ ತಾಲ್ಲೂಕು	ಬಾಬುರಾಯನ ಕೊಪ್ಪಲು	ಕನ್ನಡ
162	ಮಂಡ್ಯ	ಶ್ರೀರಂಗಪಟ್ಟಣ ತಾಲ್ಲೂಕು	ಕೆ ಶೆಟ್ಟಿ ಹಳ್ಳಿ	ಕನ್ನಡ

163	ಮಂಡ್ಯ	ಮಳವಳ್ಳಿ ತಾಲ್ಲೂಕು	ಚಿಕ್ಕಬಾಗಿಲು ಬಿ ಜಿ ಪುರ ಹೋಬಳಿ	ಕನ್ನಡ
164	ಮಂಡ್ಯ	ಮಳವಳ್ಳಿ ತಾಲ್ಲೂಕು	ಆಲದ ಹಳ್ಳಿ ಕಸಬಾಹೋಬಳಿ	ಕನ್ನಡ
165	ಮಂಡ್ಯ	ನಾಗಮಂಗಲ ತಾಲ್ಲೂಕು	ಹೆಚ್ ಕೋಡಿ ಹಳ್ಳಿ ಬೆಳ್ಳುರು ಹೋಬಳಿ	ಕನ್ನಡ
166	ಮಂಡ್ಯ	ಮದ್ದೂರು ತಾಲ್ಲೂಕು	ಅಬುಲವಾಡಿ	ಕನ್ನಡ
167	ಮಂಡ್ಯ	ಪಾಂಡವಪುರ ತಾಲ್ಲೂಕು	ಟಿ ಎಸ್ ಛತ್ರ	ಕನ್ನಡ
168	ಮಂಡ್ಯ	ಪಾಂಡವಪುರ ತಾಲ್ಲೂಕು	ಶಾಂತಿ ನಗರ	ಕನ್ನಡ
169	ಮಂಡ್ಯ	ಪಾಂಡವಪುರ ತಾಲ್ಲೂಕು	ಎಲೆಕೆರೆ ಹ್ಯಾಂಡ್ ಪೋಸ್ಟ್	ಕನ್ನಡ

ಚಾಮರಾಜನಗರ ಜಿಲ್ಲೆ

170	ಚಾಮರಾಜನಗರ ಜಿಲ್ಲೆ	ಕೊಳ್ಳೇಗಾಲ ತಾ	ಬೈರನತ್ತ ಹನೂರು ಹೋಬಳಿ	ಕನ್ನಡ
171	ಚಾಮರಾಜನಗರ ಜಿಲ್ಲೆ	ಕೊಳ್ಳೇಗಾಲ ತಾ	ಕೆಂಪಯ್ಯನಹಟ್ಟಿ ಹನೂರು ಹೋಬಳಿ	ಕನ್ನಡ
172	ಚಾಮರಾಜನಗರ ಜಿಲ್ಲೆ	ಗುಂಡ್ಲುಪೇಟೆ ತಾ	ಕೆಲಸೂರು	ಕನ್ನಡ
173	ಚಾಮರಾಜನಗರ ಜಿಲ್ಲೆ	ಗುಂಡ್ಲುಪೇಟೆ ತಾ	ಆಲತ್ತೂರು	ಕನ್ನಡ
174	ಚಾಮರಾಜನಗರ ಜಿಲ್ಲೆ	ಕೊಳ್ಳೇಗಾಲ ತಾ	ಹೊಸಮಾಲಂಗಿ	ಕನ್ನಡ
175	ಚಾಮರಾಜನಗರ ಜಿಲ್ಲೆ	ಚಾಮರಾಜನಗರ ತಾಲ್ಲೂಕು	ಜ್ಯೋತಿಗೌಡನಪುರ	ಕನ್ನಡ

ಚಿಕ್ಕಮಗಳೂರು ಜಿಲ್ಲೆ

176	ಚಿಕ್ಕಮಗಳೂರು	ಕಡೂರು ತಾ	ಚಿಕ್ಕದೇವನೂರು	ಕನ್ನಡ
177	ಚಿಕ್ಕಮಗಳೂರು	ಚಿಕ್ಕಮಗಳೂರು ತಾಲ್ಲೂಕು	ಬಿಳೀಕಲ್ಲಹಳ್ಳಿ	ಕನ್ನಡ
178	ಚಿಕ್ಕಮಗಳೂರು	ತರೀಕೆರೆ ತಾ	ಉಡೇವಾ	ಕನ್ನಡ
179	ಚಿಕ್ಕಮಗಳೂರು	ಮೂಡಿಗೆರೆ ತಾ	ಗಬಗಲ್	ಕನ್ನಡ
180	ಚಿಕ್ಕಮಗಳೂರು	ಕಡೂರು ತಾ	ಕುಪ್ಪಾಳು	ಕನ್ನಡ

ಕೊಡಗು ಜಿಲ್ಲೆ

181	ಕೊಡಗು	ಸೋಮವಾರಪೇಟೆ ತಾಲ್ಲೂಕು	ನೇರುಗಳಲೆ	ಕನ್ನಡ
182	ಕೊಡಗು	ಸೋಮವಾರಪೇಟೆ ತಾಲ್ಲೂಕು	ಏಳನೇ ಹೊಸಕೋಟೆ	ಕನ್ನಡ
183	ಕೊಡಗು	ವಿರಾಜಪೇಟೆ ತಾಲ್ಲೂಕು	ಚೆನ್ನಿಯನ ಕೋಟೆ	ಕನ್ನಡ

ದಕ್ಷಿಣ ಕನ್ನಡ ಜಿಲ್ಲೆ

184	ದಕ್ಷಿಣ ಕನ್ನಡ	ಮೂಡಬಿದರೆ	ಮೂಡುಕೊಣಾಜೆ	ಕನ್ನಡ
185	ದಕ್ಷಿಣ ಕನ್ನಡ	ಬೆಳ್ತಂಗಡಿ	ನಲ್ಯಾಡ ರೇಖ್ಯಾಗ್ರಾಮ	ಕನ್ನಡ
186	ದಕ್ಷಿಣ ಕನ್ನಡ	ಬೆಳ್ತಂಗಡಿ	ನಾವೂರು ಗ್ರಾಮ	ಕನ್ನಡ
187	ದಕ್ಷಿಣ ಕನ್ನಡ	ಮಂಗಳೂರು	ಕೋಡಾಜೆ ಪದವು ಕೋಡಾಜೆ ಗ್ರಾಮ	ಕನ್ನಡ
188	ದಕ್ಷಿಣ ಕನ್ನಡ	ಮಂಗಳೂರು	ವಾಲ್ಪಾಡಿ ಮೂಡುಬಿದರೆ ಕ್ಷೇತ್ರ	ಕನ್ನಡ

ಉಡುಪಿ ಜಿಲ್ಲೆ

189	ಉಡುಪಿ	ಉಡುಪಿ	ರಾಜೀವನಗರ ಬೆಡಗು ಬೆಟ್ಟ	ಕನ್ನಡ
190	ಉಡುಪಿ	ಉಡುಪಿ	ಕಲ್ತೂರು ಸಂತೆ ಕಟ್ಟೆ	ಕನ್ನಡ
191	ಉಡುಪಿ	ಉಡುಪಿ	ಬೆಳಪು	ಕನ್ನಡ

ಚಾಮರಾಜನಗರ ಜಿಲ್ಲೆ

192	ಚಾಮರಾಜನಗರ	ಚಾಮರಾಜನಗರ	ಮೇಗಲಹುಂಡಿ	ಕನ್ನಡ
193	ಚಾಮರಾಜನಗರ	ಚಾಮರಾಜನಗರ	ಸಾಗಡೆ	ಕನ್ನಡ
194	ಚಾಮರಾಜನಗರ	ಚಾಮರಾಜನಗರ	ಬಾಗಳಿ	ಕನ್ನಡ
195	ಚಾಮರಾಜನಗರ	ಗುಂಡ್ಲು ಪೇಟೆ	ಮೇಗಲಹುಂಡಿ	ಕನ್ನಡ
196	ಚಾಮರಾಜನಗರ	ಕೊಳ್ಳೇಗಾಲ	ಬೇರನತ್ತ	ಕನ್ನಡ
197	ಚಾಮರಾಜನಗರ	ಯಳಂದೂರು	ಯಳಂದೂರು ಬಾಲಕಿಯರು	ಕನ್ನಡ

ಬೆಂಗಳೂರು ಗ್ರಾಮಾಂತರ

198	ಮಾಗಡಿ	ಮಾಗಡಿ	ಮಾಗಡಿ ಟೌನ್	ಉರ್ದು

ಬಳ್ಳಾರಿ ಜಿಲ್ಲೆ

199	ಬಳ್ಳಾರಿ	ಹಡಗಲಿ	ಬ್ಯಾಲ ಹುಣಿಸಿ ಗ್ರಾಮ	ಕನ್ನಡ

ಕ್ಷೇತ್ರವಾರು ಮಂಜೂರಾದ ಸರ್ಕಾರಿ ಪ್ರೌಢ ಶಾಲೆಗಳ ವಿವರ

ಜಿಲ್ಲೆಯ ಹೆಸರು	ವಿಧಾನಸಭಾ ಕ್ಷೇತ್ರದ ಹೆಸರು	ಮಂಜೂರಾದ ಸರ್ಕಾರಿ ಪ್ರೌಢ ಶಾಲೆಗಳ ವಿವರ
ಬೀದರ್	ಬಸವಕಲ್ಯಾಣ	1 ಬೋಸಗಾ
	ಹುಮ್ನಾಬಾದ್	2 ನಂದಗಾಂವ
	ಸಂಡೂರು	3 ಎಂ ತುಂಬದ ಗುಡ್ಡೆ
	ಸಿರಗುಪ್ಪ	4 ಲಕ್ಷ್ಮೀಪುರ
ಬಳ್ಳಾರಿ	ಹಗರಿಬೊಮ್ಮನಹಳ್ಳಿ	5 ಸಿರಗುಪಪ್ ವಾರ್ಡ್–5

	ಕುರುಗೋಡು	6 ಪುಟ್ಟಮ್ಮನ ಹಳ್ಳಿ
		7 ಅಂದ್ರಾಳ್
		8 ಕೊಳಗಲ್
	ಹಡಗಿ	9 ಬ್ಯಾಲಹುಣಸಿ
	ಆಳಂದ	10 ಗುಂಜಬಲಾದ
		11 ಸಂಗೋಳಗಿ ಸಿ
		12 ಬಯ್ಯಾಪುರ ಕೆ
	ಚಿಂಚೋಳಿ	13 ರುದ್ರನೂರು
ಗುಲ್ಬರ್ಗಾ	ಜೇವರ್ಗಿ	14 ಗುಡೂರು
		15 ದೊನಾಗಂ '
	ಚಿತ್ತಾಪುರ	16 ಕಲಕುರ್ಕಿ
	ಅಫಜಲಪುರ	17 ತಾಜಾ ಸುಲ್ತಾನ ಪುರ
	ಕೊಪ್ಪಳ	18 ಹೊರನ್ನಾಳ್
	ಕನಕಗಿರಿ	19 ಹಿರೇಕೆಡಾ
ಕೊಪ್ಪಳ	ಕುಷ್ಟಗಿ	20 ಹಿರೇದೊಣ್ಣಾಗರ
	ಯಲಬುರ್ಗಾ	21 ಮಾಟಲದಿಣ್ಣೆ
		22 ಮಾರಲ್ ದಿನ್ನೆ
	ಲಿಂಗಸಗೂರು	23 ನೆಲೋಗಲ್ ಕ್ರಾಸ್
	ಮಾನ್ವಿ	24 ತೋರಣ ದಿನ್ನೆ
	ಸಿಂಧನೂರು	25 ಸುಕಾಲಪೇಟೆ
ರಾಯಚುರು	ರಾಯಚೂರು	26 ಮಲಿಯಾಬಾದ
		27 ಕಮಲದಿನ್ನೆ
	ದೇವದುರ್ಗ	28 ಹಿರೇರಾಯರ ಕಂಪಿ
		29 ಎನ್ ಗಣೇ ಕಲ್
	ಸೇಡಂ	30 ಚಂದಾಪುರ
		31 ರಸ್ತಾಪುರ
ಯಾದಗಿರಿ	ಶಹಾಪುರ	32 ಬೀಳಾರ್
		33 ಹಾಲಗೇರಿ
		34 ಹೊತ್‌ಪೇಟೆ
	ಸುರಪುರ	35 ಯಾದಿಯಾಪುರ
	ಪರಸಗಡ	36 ಚಿಕ್ಕುಂಬಿ
	ಬೈಲಹೊಂಗಲ	37 ಬೈಲಹೊಂಗಲ
ಬೆಳಗಾವಿ	ರಾಮದುರ್ಗ	38 ಓಬಳಾಪುರ
		39 ಕಲ್ಲಾಳ
		40 ಕರಡಿಗುಡ್ಡ
	ಬಾಗೇವಾಡಿ	41 ಸಾಂಬ್ರಾ
		42 ಚಿಕ್ಕಹಳ್ಳಿಹೊಳ್ಳ
	ಖಾನಾಪುರ	43 ಹಿರೇಮಾನನಳ್ಳೀ
	ಬಸವನಬಾಗೇವಾಡಿ	44 ಕಾಜೋರ್ಳ
	ಬಳ್ಳುಳ್ಳಿ	45 ರೇವತಗಾಂವ್
ಬಿಜಾಪುರ	ಸಿಂಧಗಿ	46 ಹುಣಹಾಳ

	ತಿಕೋಟಾ	47 ಕಂಬಾಗಿ
	ಬಾದಾಮಿ	48 ಸೂಲಿಕೆರೆ
	ಜಮಖಂಡಿ	49 ಹನಗುಂಡಿ
	ಮುಧೋಳ	50 ಅಮಲಜರಿ
	ರಾಯಭಾಗ್	51 ನಿತನಾಳ
		52 ಅವರಕೋಡ
	ಅಥಣಿ	53 ಜುಂಜುರವಾಡ
		54 ಪಾರ್ಥನ ಹಳ್ಳಿ
	ಕಾಗವಾಡ	55 ಸಿರಗುಪ್ಪಿ
		56 ಕೂಪದ ಕಟ್ಟಿ
ಚಿಕ್ಕೋಡಿ	ಅರಬಾವಿ	57 ಶಿವಾಪುರ
		58 ಜೋಕಾನಟ್ಟಿ
		59 ಮಸಗುಪ್ಪಿ
	ಹುಕ್ಕೇರಿ	60 ಹೊಸೂರು
	ಚಿಕ್ಕೋಡಿ	61 ಚಿಕ್ಕೋಡಿ
		62 ಬೆಳಕೋಡ
	ಅರಬಾವಿ	63 ಮೂಡಲಗಿರಿನಗರ
	ನಿಪ್ಪಾಣಿ	64 ನಿಪ್ಪಾಣಿ ನಗರ
	ನವಲ ಗುಂದ	65 ನಾವಳ್ಳಿ
ಧಾರವಾಡ	ಕಲಪಟಗಿ	66 ಉಗ್ಗಣಕೇರಿ
	ಕುಂದಗೋಳ	67 ಬೆಳಗಲಿ
		68 ಕುಂದಗೋಳ
	ಧಾರವಾಡ ಗ್ರಾಮೀಣ	69 ಕಲಕೆರೆ
	ರೋಣ	70 ಅಬ್ಬಿಗೆರೆ
ಗದಗ	ಶಿರಹಟ್ಟಿ	71 ಮಾಚೇನಹಳ್ಳಿ
	ಗದಗ	72 ರಾಜೀವ್‌ಗಾಂಧಿ ನಗರ
	ಹಿರೇಕೆರೂರು	73 ಹೊಸಕಟ್ಟೆ
	ಸವಣೂರು	74 ಹೊಸೂರು
	ಹಾವೇರಿ	75 ದೇವಿ ಹೊಸೂರು
ಹಾವೇರಿ	ಹಾನಗಲ್	76 ಹಿರೂರು
		77 ಮಕರಬಳ್ಳಿ
	ರಾಣೆಬೆನ್ನೂರು	78 ಹಲಗೇರಿ
	ಕಾರವಾರ ಜೋಯಿಡಾ	79 ತಿನ್ನೈಘಾಟ್
		80 ತೋಡುರು ಪುನರ್‌ವಸತಿ ಕೇಂದ್ರ
	ಭಟ್ಕಳ	81 ಭಟ್ಕಳ ಭಂಡಾರ
ಉತ್ತರ ಕನ್ನಡ	ಹಳಿಯಾಳ	82 ಅಂದಲಗಿ
		83 ಸಾತನ ಹಳ್ಳಿ
	ಶಿರಸಿ	84 ನೆಗ್ಗು
	ಕುಮಟಾ	85 ಮಿರ್ಜಾನ್
	ಹಿರಿಯೂರು	86 ದಿಂಡವಾರ
ಚಿತ್ರದುರ್ಗ	ಬರಮಸಾಗರ	87 ಜಾಲಹಳ್ಳಿ ಗೊಲ್ಲರ ಹಟ್ಟಿ

		88 ವಡ್ಡರಸಿದ್ದನಹಳ್ಳಿ
	ಕೋಲಾರ	89 ಬೆಲ್ಲಿಮಾರನ ಹಳ್ಳಿ
ಕೋಲಾರ	ಮುಳಬಾಗಿಲು	90 ವಿರೂಪಾಕ್ಷಿ
		91 ಯಳಗೊಂಡನಹಳ್ಳಿ
		92 ಗುಮ್ಲಾಪುರ
ಚಿಕ್ಕಬಳ್ಳಾಪುರ	ಶಿಡ್ಲ ಘಟ್ಟ	93 ಅಸಗಾನ ಹಳ್ಳಿ ಮಿಟ್ಟೆಮೇರಿ
		94 ಪಲಿಚೆರಲು
	ಬಾಗೇಪಲ್ಲಿ	95 ಗಂಟಿವಾರಪಲ್ಲಿ
		96 ಸುರಗೇನಹಳ್ಳಿ
		97 ಮಲ್ಲೇನ ಹಳ್ಳಿ
ಶಿವಮೊಗ್ಗ	ಶಿಕಾರಿಪುರ	98 ಕಿಟ್ಟದಹಳ್ಳಿ
		99 ಗಂಗನ ಘಟ್ಟ
	ತಿಪಟೂರು	100 ಬಜಾಗೂರು
	ಹುಲಿಯೂರುದುರ್ಗ	101 ಗುಂಗುರ ಮಳೆ
		103 ಯಲಗಲವಾಡಿ
		104 ಮುಗಳೂರು
ತುಮಕೂರು	ತುರುವೆಕೆರೆ	105 ಮುದ್ದನಹಳ್ಳಿ ದಬ್ಬೇಪಟ್ಟ
		106 ಮುನಿಯಾರು
	ಬೆಳ್ಳಾವಿ	107 ನೆಲಹಾಲ್ ಬೆಳ್ಳಾವಿ ಹೋಬಳಿ
	ಗುಬ್ಬಿ	108 ಹಿಂಡಸಗೇರಿ
		109 ಕುಂಡ್ಲಿ
		110 ಗೋಣಿ ಹಳ್ಳಿ
		111 ಭೂವನಹಳ್ಳಿ
	ಬೆಳ್ಳಾವಿ	112 ಶಿವನಗೆರೆ ದೊಡ್ಡೇರಿ
ಮಧುಗಿರಿ	ಕೊರಟಗೆರೆ	113 ಕೋಡ್ಲಹಳ್ಳಿ
		114 ತಿಮ್ಮಸಂದ್ರ
	ಪಾವಗಡ	115 ಬೂದಿಬೆಟ್ಟ
		116 ಸಿದ್ದಾಪುರ
		117 ಸೋಗಾಲ
	ಚೆನ್ನಪಟ್ಟಣ	118 ತಗಚಗೆರೆ
		119 ಹೆಬ್ಬಗೋಡಿ
ಬೆಂಗಳೂರು	ರಾಮನಗರ	120 ಕ್ಯಾಸಾಪುರ
ಗ್ರಾಮಾಂತರ		121 ಹರಿಸಂದ್ರ
	ಹೊಸಕೋಟೆ	122 ಹಸಿಗಾಳ
	ಮಾಗಡಿ	123 ಮಾಗಡಿ ಟೌನ್
		124 ಶಿವನಸಂದ್ರ
ಬೆಂಗಳೂರು ಉತ್ತರ	ಯಲಹಂಕ	125 ನರಸೀ ಪುರ
	ಬಿನ್ನಿಪೇಟೆ	126 ಬ್ಯಾಟರಾಯನಪುರ
ಬೆಂಗಳೂರು ದಕ್ಷಿಣ	ಉತ್ತರಹಳ್ಳೀ	127 ಅಗರ
		128 ಕೋನಪ್ಪನ ಅಗ್ರಹಾರ
ಮೈಸೂರು	ಚಾಮರಾಜ	129 ಒಂಟಿಕೊಪ್ಪಲು

	ಕೆ ಆರ್ ನಗರ	130 ದೂರನಹಳ್ಳಿ
		131 ಬಂಡೆ ಹಳ್ಳಿ
	ಪಿರಿಯಾಪಟ್ಟಣ	132 ಚಿಕ್ಕನೇರಳೆ
		133
	ಹೆಗ್ಗಡದೇವನ ಕೋಟೆ	134 ಬಾಚೇಗೌಡನಹಳ್ಳಿ
		135 ಯರಹಳ್ಳಿ
	ಬನ್ನೂರು	136 ಹೆಗ್ಗೂರು
	ನಂಜನಗೂಡು	137 ನಂಜನಗೂಡು
		138 ಹುರ
	ಹುಣಸೂರು	139 ಚಿಕ್ಕಹುಣಸೂರು
		140 ಕಡೇಮಗನ ಹಳ್ಳಿ
		141 ಎನ್ ಕಲ್ಲಹಳ್ಳಿ
	ಚಾಮುಂಡಿ	142 ಕುಂಬಾರಕೊಪ್ಪಲು
	ಟಿ ನರಸೀಪುರ	143 ಬನ್ನಹಳ್ಳಿ ಹುಂಡಿ
	ಸಕಲೇಶಪುರ	144 ಕಲ್ಲಾರೆ ಕೆ ಹೊಸಕೋಟೆ
		145 ದೇವಾಲದ ಕೆರೆ
	ಗಂಡಸಿ	146 ರಂಗಾಪುರ
	ಅರಸೀಕೆರೆ	147 ಬಂದೂರು
		148 ಬಿದರೂರು–ಕೊಣನೂರು
	ಅರಕಲಗೂಡು	149 ಹೆಚ್ ಕೊಂಗಳಲೆ
ಹಾಸನ	ಬೇಲೂರು	150 ಚಿಕ್ಕೋಡು
		151 ಲಿಂಗನಪ್ಪನಕೊಪ್ಪಲು
		152 ಚೆನ್ನರಾಯಪಟ್ಟಣ
		153 ಹಳೆಬೆಳಗೊಳ
		154 ಶ್ರೀರಾಮನಗರ
	ಹಾಸನ	155 ಗೋಪನಹಳ್ಳಿ ಕಂಬರಗಿ
		156 ಆಲದಹಳ್ಳಿ
	ಹೊಳೆನರಸೀಪುರ	157 ಬೇಡಿಗನಹಳ್ಳಿ
	ನಾಗಮಂಗಲ	158 ನಾಗತಿಹಳ್ಳಿ
	ಮಂಡ್ಯ	158 ಸಂತೆಕೆಲಸಗೆರೆ
	ಕೆರೆಗೊಡ	160 ಹೊನ್ನಾಯ್ಕನಹಳ್ಳಿ
	ಕೆ ಆರ್ ಪೇಟೆ	161 ಬೆಲ್ಲದಹಳ್ಳಿ–ಹೊಸಬಡಾವಣೆ
		162 ಹೊಸಹೊಳಲು
ಮಂಡ್ಯ	ಶ್ರೀರಂಗಪಟ್ಟಣ	163 ಕೆ ಶೆಟಿಹಳ್ಳಿ
		164 ಬಾಬುರಾಯನಕೊಪ್ಪಲು
		165 ಚಿಕ್ಕಬಾಗಿಲು ಬಿಜಿಪುರ
	ಮಳವಳ್ಳಿ	166 ಆಲದಹಳ್ಳಿ
		167 ಹೆಚ್ ಕೋಡಿಹಳ್ಳಿ
	ಮದ್ದೂರು	168 ಅಬುಲವಾಡಿ
		170 ಶಾಂತಿನಗರ
		171 ಎಲೆಕೆರೆ ಹ್ಯಾಂಡ್‌ಪೋಸ್ಟ್
		172 ಬೈರನತ್ತ ಹನೂರು

	ಹನೂರು	173	ಬೈರನತ್ತ
	ಕೊಳ್ಳೇಗಾಲ	174	ಕೆಂಪಯ್ಯನಹಟ್ಟಿ
		175	ಸಾಗಡೆ
	ಚಾಮರಾಜನಗರ	176	ಮೇಗಲಹುಂಡಿ
		177	ಬಾಗಳಿ
	ಸಂತೇಮರಹಳ್ಳಿ	178	ಜ್ಯೋತಿಗೌಡನಪುರ
ಚಾಮರಾಜನಗರ		179	ಕೆಲಸೂರು
	ಗುಂಡ್ಲುಪೇಟೆ	180	ಬನ್ನಿತಾಳಪುರ
		181	ಆಲತ್ತೂರು
		182	ಹೊಸಮಾಲಂಗಿ
	ಕೊಳ್ಳೇಗಾಲ	183	ಯಳಂದೂರು (ಬಾಲಕಿಯರು)
		184	ಚಿಕ್ಕದೇವನೂರು
	ಬಿರೂರು	185	ಉಡೆವಾ
ಚಿಕ್ಕಮಗಳೂರು	ಚಿಕಮಗಳೂರು	186	ಬಿಳ್ಳೇಕಲ್ಲಹಳ್ಳಿ
	ಮೂಡಿಗೆರೆ	187	ಗಬ್‌ಗಲ್
	ಕಡೂರು	188	ಕುಪ್ಪಾಳು
ಕೊಡಗು	ಸೋಮವಾರಪೇಟೆ	189	ನೇರುಗಳಲೆ
		190	ಏಳನೇ ಹೊಸಕೋಟೆ
	ವಿರಾಜಪೇಟೆ	191	ಚೆನ್ನಯ್ಯನಕೋಟೆ
	ಮೂಡಬಿದ್ರೆ	192	ಮೂಡುಕೋಣಾಜೆ
		193	ಮಲ್ಯಾಡಿ (ಶಿರ್ತಾಡಿ)
ದಕ್ಷಿಣ ಕನ್ನಡ	ಬೆಳ್ತಂಗಡಿ	194	ನೆಲ್ಯಾಡಿ ರೇಖ್ಯಾ ಗ್ರಾಮ
		195	ನಾವೂರು ಗ್ರಾಮ
	ಉಲ್ಲಾಳ	196	ಕೋಣಾಜೆಪದವು
		197	ರಾಜೀವನಗರ ಬೆಡಗುಬೆಟ್ಟು
ಉಡುಪಿ	ಉಡುಪಿ		
		198	ಕಲ್ತೂರು-ಸಂತೆಕಟ್ಟೆ
		199	ಬೆಳಪು ಗ್ರಾಮ

2007-08ನೇ ಸಾಲಿನಲ್ಲಿ ಮಂಜೂರಾಗಿರುವ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಮತಕ್ಷೇತ್ರವಾರು ಪಟ್ಟಿ (ದಿನಾಂಕ 04-07-2007 ರಲ್ಲಿದ್ದಂತೆ)

ಕ್ರ.ಸಂ	ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಿರುವ ಸ್ಥಳ ಮತ್ತು ವಿಳಾಸ	ಮತಕ್ಷೇತ್ರದ ಹೆಸರು
1	ಬೆಂಗಳೂರು ಉತ್ತರ ಜಿಲ್ಲೆ	
1	ಜಕ್ಕೂರು	ಯಲಹಂಕ
2	ಬಾಗಲೂರು	ದೇವನಹಳ್ಳಿ
	ಬೆಂಗಳೂರು ಗ್ರಾಮಾಂತ ಜಿಲ್ಲೆ	

3	ಸುಗ್ಗನಹಳ್ಳಿ ಕಸಬಾ ಹೋಬಳಿ	ರಾಮನಗರ
4	ಅಣ್ಣಹಳ್ಳಿ, ಕೈಲಂಚ ಹೋಬಳಿ	ರಾಮನಗರ
5	ಯರೇಹಳ್ಳಿ ಕೊಟಗಲ್ ಹೋಬಳಿ	ರಾಮನಗರ
6	ಬನ್ನಿಕುಪ್ಪೆ ಕೈಲಂಚ ಹೋಬಳಿ	ರಾಮನಗರ
7	ಮಾಕಳಿ	ಚೆನ್ನಪಟ್ಟಣ
	ದಾಬಣಗೆರೆ ಜಿಲ್ಲೆ	
8	ಚಿಗಟೇರಿ	ಹೂವಿನ ಹಡಗಲಿ
ಕೋಲಾರ ಜಿಲ್ಲೆ		
9	ಮುಳಬಾಗಿಲು	ಮುಳಬಾಗಿಲು
10	ಬಶೆಟ್ಟಿಹಳ್ಳಿ	ಶಿಡ್ಲಘಟ್ಟ
ಶಿವಮೊಗ್ಗ ಜಿಲ್ಲೆ		
11	ಹರಗುವಲ್ಲಿ	ಶಿಕಾರೊಪುರ
12	ಸಾಲೂರು	ಶಿಕಾರಿಪುರ
ತುಮಕೂರು ಜಿಲ್ಲೆ		
13	ಹೊನ್ನವಳ್ಳಿ	ತಿಪಟೂರು
14	ತುರುವೇಕೆರೆ (ಮಹಿಳಾ)	ತುರುವೇಕೆರೆ
15	ಹೊಸಕೆರೆ ತ್ರಿಪುಇರಾಂತಕಶ್ವರಮರ ಹತ್ತಿದುರ್ಗ ಹೋಬಳಿ	ಕುಣಿಗಲ್
16	ಚೌಡನಕುಪ್ಪೆ	ಹುಲಿಯೂರು ದುರ್ಗ
17	ಕೆ ಜಿ ಟೆಂಪಲ್	ಗುಬ್ಬಿ
18	ಕೊಡಿಯಾಲ	ಬೆಳ್ಳಾವಿ
19	ಗುಳಿಗೇನಹಳ್ಳಿ	ಶಿರಾ
20	ಬಿ ಡಿ ಪುರ	ಕೊರಟಗೆರೆ
ಮೈಸೂರು ಜಿಲ್ಲೆ		
21	ಹಲಗನಹಳ್ಳಿ	ಪಿರಿಯಾಪಟ್ಟಣ
22	ಬೀಚನಹಳ್ಳಿ	ಹೆಚ್ ಡೊ ಕೋಟೆ
23	ಹೆಬ್ಬಾಳು	ಕೆ ಆರ್ ನಗರ
24	ಗಂಧನ ಹಳ್ಳಿ	ಕೆ ಆರ್ ನಗರ
25	ಬನ್ನಿಗುಪ್ಪೆ	ಹುಣಸೂರು
26	ರತ್ನಗಿರಿ	ಹುಣಸುರು
ಮಂಡ್ಯ ಜಿಲ್ಲೆ		
27	ಕನ್ನಲಿ, ಕಸಬಾ ಹೋಬಳಿ	ಮಂಡ್ಯ
28	ಮಂದಗೆರೆ ಕಿಕ್ಕೇರಿ ಹೋಬಳಿ	ಕೆ ಆರ್ ಪೇಟೆ
29	ಹೊನ್ನಾವರ	ನಾಗಮಂಗಲ
30	ಮಳವಳ್ಳಿ (ಬಾಲಕಿಯರು)	ಮಳವಳ್ಳಿ
31	ಚಿಕ್ಕಬ್ಯಾಡರ ಹಳ್ಳಿ ಸರ್ಕಲ್	ಪಾಂಡವಪುರ

32	ಎಂ ಶೆಟ್ಟಿ ಹಳ್ಳಿ	ಶ್ರೀರಂಗಪಟ್ಟಣ
33	ಬಂಡಳ್ಳಿ	ಹನೂರು
34	ಅಮಚವಾಡಿ	ಚಾಮರಾಜನಗರ
35	ಆಲೂರು	ಸಂತೇಮರಹಳ್ಳಿ
36	ಸಂತೇಮರಹಳ್ಳಿ	ಸಂತೇಮರಹಳ್ಳಿ

ಕೊಡಗು ಜಿಲ್ಲೆ

37	ಕೊಡಿಗೆ	ಸೋಮವಾರ ಪೇಟೆ
38	ಕಬ್ಬತ್ತಿ ಕ್ರಾಸ್ ಕಟ್ಟಾಯ ಹೋಬಳಿ	ಸಕಲೇಶಪುರ
39	ಕೆರೆಗೋಡು ಹಳ್ಳಿಮೈಸೂರು ಹೋಬಳಿ	ಅರಕಲಗೂಡು
40	ನಗರನ ಹಳ್ಳಿ ಹಳ್ಳಿಮೈಸೂರು ಹೋಬಳಿ	ಅರಕಲಗೂಡು
41	ಬೇಲೂರು (ಬಾಲಕಿಯರ)	ಬೇಲೂರು
42	ಆಲೂರು	ಸಕಲೇಶಪುರ
43	ಸಕಲೇಶಪುರ	ಸಕಲೇಶಪುರ
44	ಹಾನುಬಾಳು	ಸಕಲೇಶಪುರ
45	ಅಗ್ರಹಾರ ಗೇಟ್ ದಂಡಿಗನ ಹಳ್ಳಿಹೋಬಳಿ	ಹೊಳೆ ನರಸೀಪುರ
46	ಆನೆಕೆರೆ ದಂಡಿಗನಹಳ್ಳಿ ಹೋಬಳಿ	ಹೊಳೆ ನರಸೀಪುರ
47	ಸಾತೇನಹಳ್ಳಿ ದಂಡಿಗನ ಹಳ್ಳಿ ಹೋಬಳಿ	ಹೊಳೆ ನರಸೀಪುರ
48	ಆರಾಮ ನಗರ ಚೆನ್ನರಾಯಪಟ್ಟಣ	ಶ್ರವಣಬೆಳಗೊಳ
49	ಸಿದ್ದಾರ್ಥ ಗೇಟ್ ಕೊಣನೂರು ಹೋಬಳಿ	ಅರಕಲಗೂಡು
50	ದೊಡ್ಡಪಟ್ಟಣಗೆರೆ	ಕಡೂರು
51	ಹೋಚ್ಚಿ ಹಳ್ಳಿ	ಕಡೂರು
52	ಹಿರೇಬೈಲು	ಮೂಡಿಗೆರೆ

ದಕ್ಷಿಣ ಕನ್ನಡ ಜಿಲ್ಲೆ

53	ಸೂಳ್ಯ	ಸೂಳ್ಯ
54	ನಡ	ಬೆಳ್ತಂಗಡಿ
55	ಗೊಬ್ಬೂರ	ಅಪಜಲಪುರ
56	ಶ್ರೀನಿವಾಸ ಸರಡಗಿ	ಚಿತ್ತಾಪುರ
57	ಕಮಲಾಪುರ	ಕಮಲಾಪುರ
58	ಜೇವರ್ಗಿ	ಜೇವರ್ಗಿ
59	ಸಗರ	ಶಹಾಪೂರ್

ಬೀದರ್ ಜಿಲ್ಲೆ

60	ಮಂಠಾಳ	ಬಸವಕಲ್ಯಾಣ
61	ಕಮಠಾಣ	ಬೀದರ್
62	ಹಳ್ಳೀಖೇಡ(ಕೆ)	ಹುಮ್ನಾಬಾದ್
63	ರೋಡಲಬಂಡಾ (ಯುಕೆಪಿ)	ಲಿಂಗಸಗೂರು
64	ಕತರಕಿ ಗುಡ್ಲಾನೂರು	ಕೊಪ್ಪಳ
65	ಬನ್ನಿಕೊಪ್ಪ	ಯಲಬುರ್ಗಾ

ಬಳ್ಳಾರಿ ಜಿಲ್ಲೆ

66	ಕುಡುತಿನಿ	ಕುರುಗೋಡು
67	ಸಂಡೂರು	ಸಂಡೂರು
68	ಬಾಚಿಗೊಂಡನಹಳ್ಳಿ	ಕೂಡ್ಲಿಗಿ\

ಬೆಳಗಾಂ ಜಿಲ್ಲೆ

69	ಬೈಲಹೊಂಗಲ	ಬೈಲಹೊಂಗಲ
70	ವಡಗಾಂವ್ ಬೆಳಗಾಂವಿ	ಉಚಗಾಮವ
71	ಮುಗಳಿಹಾಳ	ಖಾನಾಪೂರ
72	ಸುರೇಬಾನ-ಮನೀಹಾಳ	ರಾಮದುರ್ಗ
73	ಬಳೋಬಾಳ	ಅರಭಾವಿ
74	ಹಳ್ಳೂರ	ಅರಭಾವಿ
75	ಯರಗಟ್ಟಿ	ಹುಕ್ಕೇರಿ

ಬಾಗಲಕೋಟೆ ಜಿಲ್ಲೆ

76	ಯಡಹಳ್ಳೀ	ಮುಧೋಳ
77	ಮಹಾಲಿಂಗಪುರ	ಮುಧೋಳ
78	ಬಿಳಗಿ	ಬೀಳಗಿ
79	ನಾಯನಗೇಲಿ	ಬಾಗಲಕೋಟೆ

ಬಿಜಾಪುರ ಜಿಲ್ಲೆ

80	ಯಂಕಂಚಿ	ಸಿಂಧಗಿ
81	ಹಿಳಗುಣಕಿ	ಬಳ್ಳೋಳ್ಳಿ
82	ಬೊಮ್ಮನಹಳ್ಳೀ	ಹಾನಗಲ್
83	ಗುತ್ತಲ	ಹಾವೇರಿ
84	ರಟ್ಟಿಹಳ್ಳಿ	ಹಿರೇಕೆರೂರು
85	ತಡಸ	ಶಿಗ್ಗಾಂವ

ಧಾರವಾಢ ಜಿಲ್ಲೆ

86	ಕರಡಿಗುಡ್ಡ	ಧಾರವಾಢ ಗ್ರಾಮೀಣ
87	ನಿಗದಿ	ಧಾರವಾಢ ಗ್ರಾಮೀಣ
88	ಕುಂದಗೋಳ	ಕುಂದಗೋಳ
89	ಮಂಟೂರು	ಕಲಘಟಗಿ
90	ಭ್ಯಾಹಟ್ಟಿ	ಹುಬ್ಬಳ್ಳಿ ಗ್ರಾಮೀಣ
91	ಮೊರಬ	ನವಲಗುಂದ

ಗದಗ್ ಜಿಲ್ಲೆ

92	ಹೆಬ್ಬಾಳ	ಶಿರಹಟ್ಟಿ
93	ಶಿರಹಟ್ಟಿ	ಶಿರಹಟ್ಟಿ
94	ಯಾವಗಲ್	ನರಗುಂದ
95	ನಿಡಗುಂದಿ	ರೋಣ

96	ಕುರ್ತಕೋಟಿ	ಗದಗ
97	ಹಿರೇಹಾಳ	ರೋಣ
98	ಡೋಣೀ	ಮುಂಡರಗಿ

ಉತ್ತರಕನ್ನಡ ಜಿಲ್ಲೆ

99	ತೇರಗಾಂವ್	ಹಳಿಯಾಳ
100	ಜೊಯ್ಡಾ	ಕಾರವಾರ
101	ಕೋಲ್‌ಸಿರಸಿ	ಶಿರಸಿ–ಸಿದ್ದಾಪುರ

2007=08 ನೇ ಸಾಲಿನಲ್ಲಿ ಮಂಜೂರಾಗಿರುವ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಜಿಲ್ಲಾವಾರು ತಾಲ್ಲೂಕುವಾರು ಮತ್ತು ವಿಭಾಗವಾರು ಪಟ್ಟಿ (ದಿನಾಂಕ 04–07–2007)

ತಾಲ್ಲೂಕುಗಳು	ಕ್ರಮ ಸಂ	ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಿರುವ ಸ್ಥಳ ಮತ್ತು ವಿಳಾಸ
		ಬೆಂಗಳೂರು ವಿಭಾಗ
		ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು ದಕ್ಷಿಣ		—
ಬೆಂಗಳೂರು ಉತ್ತರ	1	ಜಕ್ಕೂರು
	2	ಬಾಗಲೂರು
ಆನೇಕಲ್		—
		ಬೆಂಗಳೂರು ಗ್ರಾಮಾಂತರ ಜಿಲ್ಲೆ
ನೆಲಮಂಗಲ		—
ದೊಡ್ಡಬಳ್ಳಾಪುರ		—
ದೇವನಹಳ್ಳೀ		—
ಹೊಸಕೋಟೆ		—
ಮಾಗಡಿ		—
ರಾಮನಗರ	3	ಸುಗ್ಗನ ಹಳ್ಳಿ ಕಸಬಾ ಹೋಬಳಿ
	4	ಅಣ್ಣಹಳ್ಳಿ, ಕೈಲಂಚ ಹೋಬಳಿ
	5	ಯರೇಹಳ್ಳಿ ಕೊಟಗಲ್ ಹೋಬಳಿ
	6	ಬನ್ನಿಕುಪ್ಪೆ, ಕೈಲಂಚ ಹೋಬಳಿ
ಕನಕಪುರ		——
ಚೆನ್ನಪಟ್ಟಣ	7	ಮಾಕಳಿ
		ದಾವಣಗೆರೆ ಜಿಲ್ಲೆ
ಚೆನ್ನಗಿರಿ		—
ದಾವಣಗೆರೆ		—

ಹರಿಹರ		—
ಹರಪನಹಳ್ಳಿ	8	ಚಿಗಟೇರಿ
ಹೊನ್ನಾಳಿ		—
ಜಗಳೂರು		—

ಚಿತ್ರದುರ್ಗ ಜಿಲ್ಲೆ

ಚಿತ್ರದುರ್ಗ		—
ಹಿರಿಯೂರು		—
ಹೊಳಲ್ಕೆರೆ		—
ಹೊಸದುರ್ಗ		—
ಮೊಳಕಾಲ್ಮೂರು		—

ಕೋಲಾರ ಜಿಲ್ಲೆ

ಬಂಗಾರ ಪೇಟೆ		—
ಕೋಲಾರ		—
ಚಿಕ್ಕಬಳ್ಳಾಪುರ		—
ಮುಳಬಾಗಿಲು	9	ಮುಳಬಾಗಿಲು (ಬಾಲಕಿಯರ)
ಮಾಲೂರು		—
ಶ್ರೀನಿವಾಸ ಪುರ		—
ಬಾಗೇಪಲ್ಲಿ		—
ಚಿಂತಾಮಣಿ		—
ಗೌರೀಬಿದನೂರು		—
ಶಿಡ್ಲಘಟ್ಟ	10	ಬಶೆಟ್ಟಿಹಳ್ಳಿ
ಗುಡಿಬಂಡೆ		—

ಶಿವಮೊಗ್ಗ ಜಿಲ್ಲೆ

ಭದ್ರಾವತಿ		—
ಹೊಸನಗರ		—
ತೀರ್ಥಹಳ್ಳಿ		—
ಶಿಕಾರಿಪುರ	11	ಹರಗುವಲ್ಲಿ
	12	ಸಾಲೂರು
ಶಿವಮೊಗ್ಗ		—
ಸಾಗರ		—
ಸೊರಬ		—

ತುಮಕೂರು ಜಿಲ್ಲೆ

ಮಧುಗಿರಿ		—
ತಿಪಟೂರು	13	ಹೊನ್ನವಳ್ಳಿ
ಚಿಕ್ಕನಾಯಕನ ಹಳ್ಳಿ		—
ತುರುವೇಕೆರೆ	14	ತುರುವೇಕೆರೆ (ಮಹಿಳಾ)

ಕುಣಿಗಲ್	15	ಹೊಸಕೆರೆ ತ್ರಿಪುರಾಂತಕೇಶ್ವರ ಮಠ ಹತ್ರಿದುರ್ಗ ಹೋಬಳಿ
	16	ಚೌಡನ ಕುಪ್ಪೆ
ಗುಬ್ಬಿ	17	ಕೆ ಹಿ ಟೆಂಪಲ್
	18	ಕೊಡಿಯಾಲ
ಪಾವಗಡ		
ಶಿರಾ	19	ಗುಳಿಗೇನ ಹಳ್ಳಿ

ತುಮಕೂರು

ಕೊರಟಗೆರೆ	20	ಬಿ ಡಿ ಪುರ

ಮೈಸೂರು ವಿಭಾಗ
ಮೈಸೂರು ಜಿಲ್ಲೆ

ನಂಜನಗೂಡು		
ಟಿ ನರಸೀಪುರ		—
ಪಿರಿಯಾಪಟ್ಟಣ	21	ಹಲಗನಹಳ್ಳಿ
ಹೆಚ್ ಡಿ ಕೋಟೆ	22	ಬೀಚನಹಳ್ಳಿ
ಮೈಸೂರು		—
ಕೆ ಆರ್ ನಗರ	23	ಹೆಬ್ಬಾಳು
	24	ಗಂಧನಹಳ್ಳಿ
ಹುಣಸೂರು	25	ಬನ್ನಿಕುಪ್ಪೆ
	26	ರತ್ನಗಿರಿ

ಮಂಡ್ಯ ಜಿಲ್ಲೆ

ಮಂಡ್ಯ	27	ಕನ್ನಲಿ ಕಸಬಾ ಹೋಬಳಿ
	28	ಮಂದಗೆರೆ ಕಿಕ್ಕೇರಿ ಹೋಬಳಿ
ಮದ್ದೂರು		—
ನಾಗಮಂಗಲ	29	ಹೊನ್ನಾವರ
ಕೆ ಆರ್ ಪೇಟೆ		—
ಮಳವಳ್ಳಿ	30	ಮಳವಳ್ಳಿ (ಬಾಲಕಿಯರ)
ಪಾಂಡವಪುರ	31	ಚಿಕ್ಕಬ್ಯಾಡರಹಳ್ಳಿ ಸರ್ಕಲ್
ಶ್ರೀರಂಗಪಟ್ಟಣ	32	ಎಂ ಶೆಟ್ಟಿ ಹಳ್ಳಿ

ಚಾಮರಾಜನಗರ ಜಿಲ್ಲೆ

ಕೊಳ್ಳೇಗಾಲ	33	ಬಂಡಳ್ಳಿ
ಗುಂಡ್ಲುಪೇಟೆ		—
ಯಳಂದೂರು		—

ಚಾಮರಾಜನಗರ	34	ಅಮಚವಾಡಿ
	35	ಆಲೂರು
	36	ಸಂತೇಮರಹಳ್ಳಿ
ಕೊಡಗು ಜಿಲ್ಲೆ		
ಮಡಿಕೇರಿ		—
ವಿರಾಜಪೇಟೆ		—
ಸೋಮವಾರ ಪೇಟೆ	37	ಕೊಡಿಗೆ

ಹಾಸನ ಜಿಲ್ಲೆ

ಹಾಸನ	38	ಕಬ್ಬತ್ತಿ ಕ್ರಾಸ್ ಕಟ್ಟಾಯ ಹೋಬಳಿ
ಹೊಳೆನರಸಿಪುರ	39	ಕೆರೆಗೋಡು ಹಳ್ಳಿ ಮೈಸೂರು ಹೋಬಳಿ
	40	ನಗರನಹಳ್ಳಿ, ಹಳ್ಳಿ ಮೈಸೂರು
ಬೇಲೂರು	41	ಬೇಲೂರು (ಬಾಲಕಿಯರ)
ಅರಸೀಕೆರೆ		
ಆಲೂರು	42	ಆಲೂರು (ಬಾಲಕಿಯರ)
ಸಕಲೇಶಪುರ	43	ಸಕಲೇಶಪುರ (ಬಾಲಕಿಯರ)
	44	ಹಾನಬಾಳು
ಚೆನ್ನರಾಯಪಟ್ಟಣ	45	ಅಗ್ರಹಾರ ಗೇಟ್, ದಂಡಿಗನಹಳ್ಳಿ ಹೋಬಳಿ
	46	ಆನೆಕೆರೆ ದಂಡಿಗನ ಹಳ್ಳಿ ಹೋಬಳಿ
	47	ಸಾತೇನಹಳ್ಳಿ ದಂಡಿಗನ ಹಳ್ಳಿ ಹೋಬಳಿ
	48	ಶ್ರೀರಾಮನಗರ ಚೆನ್ನರಾಯಪಟ್ಟಣ
ಅರಕಲಗೂಡು	49	ಸಿದ್ದಾಪುರ ಗೇಟ್, ಕೊಣನೂರು ಹೋಬಳಿ

ಚಿಕ್ಕಮಗಳೂರು

ಚಿಕ್ಕಮಗಳೂರು		—
ಕಡೂರು	50	ದೊಡ್ಡಪಟ್ಟಣಗೆರೆ
	51	ಹೋಚ್ಚಿ ಹಳ್ಳಿ
ಕೊಪ್ಪ		
ಮೂಡಿಗೆರೆ	52	ಹಿರೇಬೈಲು
ಎನ್ ಆರ್ ಪುರ		—
ಶೃಂಗೇರಿ		—
ತರೀಕೆರೆ		—

ಉಡುಪಿ ಜಿಲ್ಲೆ

ಸೂಳ್ಯ	53	ಸೂಳ್ಯ
ಬೆಳ್ತಂಗಡಿ	54	ನಡ
ಪುತ್ತೂರು		—
ಬಂಟ್ವಾಳ		—
ಮಂಗಳೂರು		—

ಗುಲ್ಬರ್ಗಾ ವಿಭಾಗ

ಗುಲ್ಬರ್ಗಾ ಜಿಲ್ಲೆ

ಯಾದಗಿರಿ		—
ಸುರಪುರ		—
ಅಫಜಲಪುರ	55	ಗಬ್ಬೂರ
ಆಳಂದ		—
ಚಿಂಚೋಳಿ		—
ಚಿತ್ತಾಪುರ	56	ಶ್ರೀನಿವಾದ ಸರಡಗಿ
ಗುಲ್ಬರ್ಗಾ	57	ಕಮಲಾಪುರ
ಜೇವರ್ಗಿ	58	ಜೇವರ್ಗಿ
ಸೇಡಂ		—
ಶಹಾಪುರ	59	ಸಗರ

ಬೀದರ್ ಜಿಲ್ಲೆ

ಔರಾದ್		—
ಬಸವಕಲ್ಯಾಣ	60	ಮಂಠಾಳ
ಬೀದರ್	61	ಕಮಠಾಣಾ
ಭಾಲ್ಕಿ		—
ಹುಮ್ನಾಬಾದ್	62	ಹಳ್ಳಿಖೇಡ (ಕೆ)

ರಾಯಚೂರು ಜಿಲ್ಲೆ

ಸಿಂಧನೂರು		—
ರಾಯಚೂರು		—
ಮಾನ್ವಿ		—
ದೇವದುರ್ಗ		—
ಲಿಂಗಸಗೂರು	63	ರೊಡಲಬಂಡಾ (ಯುಕೆಪಿ)

ಕೊಪ್ಪಳ ಜಿಲ್ಲೆ

ಕೊಪ್ಪಳ	64	ಕಾತರಕಿ ಗುಡ್ಲಾನೂರು
	65	ಬನ್ನಿಕೊಪ್ಪ
ಯಲಬುರ್ಗಾ		—
ಕುಷ್ಟಗಿ		—
ಗಂಗಾವತಿ		—

ಬಳ್ಳಾರಿ ಜಿಲ್ಲೆ

ಬಳ್ಳಾರಿ	66	ಕುಡುತಿನಿ
ಹಡಗಲಿ		—
ಹೊಸಪೇಟೆ		—
ಕೂಡ್ಲಿಗಿ		—
ಸಂಗೂರು	67	ಸಂಡೂರು (ಬಾಲಕಿಯರ)
ಸಿರಗುಪ್ಪ		—
ಹಗರಿಬೊಮ್ಮನಹಳ್ಳಿ	68	ಬಾಚಿಗೊಂಡನಹಳ್ಳಿ

ಬೆಳಗಾವಿ ವಿಭಾಗ
ಬೆಳಗಾಂ ಜಿಲ್ಲೆ

ಬೈಲಹೊಂಗಲ	69	ಬೈಲಹೊಂಗಲ
ಬೆಳಗಾವಿ	70	ವಡಗಾಂವ್ ಬೆಳಗಾವಿ
ಖಾನಾಪುರ	71	ಮುಗಳಿಹಾಳ
ರಾಮದುರ್ಗ	72	ಸುರೇಬಾನ-ಮನಿಹಾಳ
ಸವದತ್ತಿ		—
ಅಥಣಿ		—
ಚಿಕ್ಕೋಡಿ		—
ಗೋಕಾಕ್	73	ಬಳೋಬಾಳ
74	74	ಹಳ್ಳೂರ
ಹುಕ್ಕೇರಿ	75	ಯರಗಟ್ಟಿ
ರಾಯಭಾಗ್		—

ಬಾಗಲಕೋಟೆ ಜಿಲ್ಲೆ

ಮುಧೋಳ	76	ಯಡಹಳ್ಳಿ
	77	ಮಹಾಲಿಂಗಪುರ
ಜಮಖಂಡಿ		—
ಬೀಳಗಿ	78	ಬೀಳಗಿ
ಬಾದಾಮಿ		—
ಹುನಗುಂದ		—
ಬಾಗಲಕೋಟೆ	79	ನಾಯನೇಗಲಿ

ಬಿಜಾಪುರ

ಬಿಜಾಪುರ		—
ಸಿಂಧಗಿ	80	ಯಂಕಂಚಿ
ಇಂಡಿ	81	ಹಿಳಗುಣಕಿ
ಬಸವನ ಬಾಗೇವಾಡಿ		—
ಮುದ್ದೇಬಿಹಾಳ		—

ಹಾವೇರಿ ಜಿಲ್ಲೆ

ಬ್ಯಾಡಗಿ		—
ರಾಣಿಬನ್ನೂರು		—
ಹಾನಗಲ್	82	ಬೊಮ್ಮನಹಳ್ಳಿ
ಹಾವೇರಿ	83	ಗುತ್ತಲ
ಹಿರೇಕೆರೂರು	84	ರಟ್ಟಿಹಳ್ಳಿ
ಸವಣೂರು		—
ಶಿಗ್ಗಾಂವ	85	ತಡಸ

ದಾರವಾಢ ಜಿಲ್ಲೆ

ಧಾರವಾಢ	86	ಕರಡಿಗುಡ್ಡ
	87	ನಿಗದಿ
	88	ಕುಂದಗೋಳ
ಹುಬ್ಬಳ್ಳೀ	89	ಮಂಟೂರು
	90	ಬ್ಯಾಹಟ್ಟಿ
ಕಲಘಟಗಿ		—
ಕುಂದಗೋಳ		—
ನವಲಗುಂದ	91	ಮೊರಬ

ಗದಗ ಜಿಲ್ಲೆ

ನರಗುಂದ		—
ಶಿರಹಟ್ಟಿ	92	ಹೆಬ್ಬಾಳ
	93	ಶಿರಹಟ್ಟಿ
ರೋಣ	94	ಯಾವಗಲ್
	95	ನಿಡಗುಂದಿ
	96	ಕುರ್ತಕೋಟಿ
	97	ಹಿರೇಹಾಳ
ಮುಂಡರಗಿ	98	ಡೋಣಿ

ಉತ್ತರ ಕನ್ನಡ ಜಿಲ್ಲೆ

ಕುಮಟಾ		—
ಹಳಿಯಾಳ	99	ತೇರಗಾಂವ್
ಶರಸಿ		—
ಹೊನ್ನಾವರ		—
ಭಟ್ಕಳ		—
ಜೋಯ್ಡಾ	100	ಜೋಯ್ಡಾ
ಅಂಕೋಲಾ		—
ಕಾರವಾರ		—
ಮುಂಡಗೋಡು		—
ಸಿದ್ದಾಪುರ	101	ಕೋಲ್‌ಸಿರಸಿ
ಯಲ್ಲಾಪುರ		—

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ತಾವು ಸಂಸದೀಯ ವ್ಯವಹಾರ ಸಚಿವರಾಗಿದ್ದೀರಿ ತಾವು ಅವರ ಪರವಾಗಿ ಹೇಳುವಂಥಾದ್ದು ಬೇಡ ನಾವು ಸಂಬಂಧ ಪಟ್ಟ ಮಂತ್ರಿಗಳಿಗೆ ನೇರವಾಗಿ ಪ್ರಶ್ನೆಗಳನ್ನು ಕೇಳಬೇಕಾಗಿದೆ ಇದು ಬಹಳ ಮಹತ್ವವಾದಂತಹ ಪ್ರಶ್ನೆ ಇವತ್ತು ಆ ಭಾಗದಲ್ಲಿ ಸರಿಯಾದ ರಿತಿಯಲ್ಲಿ ಪ್ರೌಢಶಾಲೆಗಳನ್ನು ಮತ್ತು ಜೂನಿಯರ್ ಕಾಲೇಜುಗಳನ್ನು ಕೊಟ್ಟಿಲ್ಲ ಅದಕ್ಕೆ ಇದನ್ನು ಮಾನ್ಯ ಬಸವರಾಜ ಹೊರಟ್ಟಿಯವರು ಬಂದಾಗ ಈ ಪ್ರಶ್ನೆಗೆ ಉತ್ತರ ಕೊಡಬಹುದು ನೀವು ಉತ್ತರ ಕೊಡುವುದಾದರೆ ಇದು ಆಗುವುದಿಲ್ಲ ಅವರೇ ಬರಬೇಕು, ಏಕೆಂದರೆ ಇದು ಬಹಳ ಮಹತ್ವವಾದಂತಹ ಪ್ರಶ್ನೆ ಯಾಗಿದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಬಹಳ ಮಹತ್ವದ್ದಾಗಿರುವಂಥಾದ್ದು ಪ್ರಾದೇಶಿಕ ಅಸಮಾನತೆಗೆ ಎಡೆ ಕೊಡಬಾರದು ಎನ್ನುವ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಿದ್ದಾರೆ ಇದರಲ್ಲಿ ಜಂಟಿ ಜವಾಬ್ದಾರಿ ಎನ್ನುವುದು ಕೂಡ ಹಿರಿಯರಾಗಿರುವ ತಮಗೆ ಮನವರಿಕೆಯಾಗಿರುವಂತಹ ವಿಷಯವಾಗಿದೆ ಸರ್ಕಾರ ಉತ್ತರವನ್ನು ಕೊಡುತ್ತದೆ ಆ ಉತ್ತರದಿಂದ ತೃಪ್ತರಾಗದೇ ಇದ್ದಂತಹ ಸಂದರ್ಭದಲ್ಲಿ ಮಾನ್ಯ ಶಿಕ್ಷಣ ಸಚಿವರು ಬಂದಾಗ ಕೂಡ ಪ್ರಶ್ನೆಯನ್ನು ಕೇಳಬಹುದು ಅಥವಾ ಮತ್ತೊಂದು ರೂಪದಲ್ಲಿಯಾದರೂ ಕೂಡ ಅದನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಆದುದರಿಂದ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ನಾನು ಉತ್ತರವನ್ನು ಕೊಡುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, general question ಆದರೆ ನಾವು adjust ಮಾಡಿಕೊಂಡು ಹೋಗಬಹುದು ನೀವು ವರ್ಷಕ್ಕೆ ಒಂದು ಸಲ ಮಾಡತಕ್ಕಂಥ allotment It is a major policy decision of the Government ಮೇಲ್ನೋಟಕ್ಕೆ ಹೆಚ್ಚು ಕಡಿಮೆ ಮಾಡಿರುವಂಥಾದ್ದು ಕಾಣುತ್ತದೆ ಆ ಇಲಾಖೆಯ ಜವಾಬ್ದಾರಿ ಹೊತ್ತಿರುವವರಿಗೆ ಪೂರ್ಣ ಮಾಹಿತಿ ಇರುತ್ತದೆ I did not question your competence, but we have out hesitation

ಶ್ರೀ ಎಂಪಿ ಪ್ರಕಾಶ್ I can understand your anciety in the matter ಆದರೆ ನಾನು ಉತ್ತರ ಕೊಡಬೇಕು ಎನ್ನುವ ಉದ್ದೇಶಕ್ಕೆ ನಿಂತಿದ್ದೇನೆ ತಾವು ತಪ್ಪಾಗಿ ಭಾವಿಸಬಾರದು ಈ ಪ್ರಶ್ನೆ ಏನಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ನೇರವಾಗಿ ಸರ್ಕಾರ ಉತ್ತರವನ್ನು ಕೊಡುತ್ತದೆ ಒಂದು ವೇಳೆ ತೃಪ್ತರಾಗದೆ ಇದ್ದಂತಹ ಸಂದರ್ಭದಲ್ಲಿ ಬಂದರೆ ಮಾನ್ಯ ಸಚಿವರು ಬಂದಾಗ ಕೂಡ ಪ್ರಸ್ತಾಪ ಎಂದು ಹೇಳುತ್ತಿದ್ದೇನೆ ಅದಕ್ಕೆ ನೀವೆಲ್ಲರೂ ಒಪ್ಪುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ ಈಗ ಎಲ್ಲರಿಗೂ ಕೂಡ ಕೊಟ್ಟಿದ್ದೇವೆ 215 ಶಾಲೆಗಳಿಗೆ ಸಂಭಂಧ ಪಟ್ಟಂತೆ ಆರ್ಥಿಕ ಇಲಾಖೆಯಲ್ಲಿ ಬಿಡುಗಡೆಯಾಗುವುದಿದೆ ಪ್ರಾದೇಶಿಕ ಅಸಮಾನತೆ ಆಗಬಾರದು ಎನ್ನುವ ಪ್ರಶ್ನೆ ಏನಿದೆ, ಅದಕ್ಕೆ ನಾನು ಉತ್ತರ ಕೊಡುತ್ತೇನೆ ಒಂದು ವೇಳೆ ತಾವು ಅವರ ಅಭಿಪ್ರಾಯಕ್ಕೆ ಒಪ್ಪಿಕೊಳ್ಳುವುದಿದ್ದಲ್ಲಿ ಈ ಪ್ರಶ್ನೆಯನ್ನು ತಡೆ ಹಿಡಿಯಿರಿ ನನ್ನದೇನೂ ಆಕ್ಷೇಪಣೆ ಇಲ್ಲ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ತಡೆಹಿಡಿಯುವುದು ಬೇಡ ಇದನ್ನು ಅರ್ಧಗಂಡೆ ಕಾಲ ಚರ್ಚೆಗೆ ತೆಗೆದುಕೊಳ್ಳಿ ಈಗ ಪ್ರಮುಖವಾಗಿ ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ ಈ ವರ್ಷ 199 ಹೈಸ್ಕೂಲುಗಳನ್ನು ತಾವು ಕೊಟ್ಟಿದ್ದೀರಿ ಅದರಲ್ಲಿ ಐದು ಜಿಲ್ಲೆಗಳನ್ನು ಹೊಂದಿರುವಂತಹ ಇಡೀ ಹೈದರಾಬಾದ್ ಕರ್ನಾಟಕಕ್ಕೆ ಕೊಟ್ಟಿರುವುದು ಕೇವಲ 22 ಹೈಸ್ಕೂಲುಗಳು ನೀವು ತಾರತಮ್ಯ ಮಾಡಿದ್ದೀರಿ ಎಂದು ಹೇಳಿದರೆ ಅದಕ್ಕೆ ಉತ್ತರದಲ್ಲಿ ಈಗಾಗಲೇ ಮಂಜೂರಾತಿ ನೀಡಿರುವುದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳುತ್ತಾರೆ ಇಲ್ಲಿ ತಾರತಮ್ಯ ಹೇಗಾಗಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ ಕರ್ನಾಟಕ ಮಾನವ ಅಭಿವೃದ್ಧಿ ವರದಿ 2005, ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದಮೇಲೆ ಈ ವರದಿ release ಆಗಿರುವುದು ಇಲ್ಲಿ ಶಿಕ್ಷಣ ಸೂಚ್ಯಂಕ ಎಂದು ಇದೆ ಅಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಹೈದರಾಬಾದ್ ಕರ್ನಾಟಕವು ಅನೇಕ ಸೂಚ್ಯಂಕಗಳಲ್ಲಿ ಬಹಳ ಕಡಿಮೆ ಮಟ್ಟದ ಪ್ರಗತಿಯನ್ನು ಹೊಂದಿರುತ್ತದೆ ಅದರ ವಿವರಕ್ಕೆ ನಾನು ಹೋಗುವುದಿಲ್ಲ ಏಕೆಂದರೆ ಅದು ಬಹಳಷ್ಟು ಇದೆ ಅತ್ಯಂತ ಕಡಿಮೆ ಇದೆಯೆಂದು ಬಹಳ ಸ್ಪಷ್ಟವಾಗಿ ಹೇಳುತ್ತಾರೆ ಅದರ ಜೊತೆಗೆ ಎಲ್ಲೆಲ್ಲಿ ಸಾಕ್ಷರತೆ ಪ್ರಮಾಣ ಇದೆ ಎಂದು ನೋಡಿ

least Literacy ರಾಯಚೂರು ಮತ್ತು ಕೊಪ್ಪಳದಲ್ಲಿ ಇದೆ ಅಲ್ಲಿ ಇಷ್ಟು ಕಡಿಮೆ ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ 22 ಹೈಸ್ಕೂಲುಗಳಲ್ಲಿ ಕಾಂಗ್ರೆಸ್ಸಿಗೆ ಕೇವಲ ಮೂರು ಹೈಸ್ಕೂಲು ಕೊಟ್ಟಿರುವುದು

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ 199 ಹೈಸ್ಕೂಲುಗಳನ್ನು ಏನು ಕೊಟ್ಟಿದ್ದಾರೆ, ಇಡೀ ವಿರೋಧ ಪಕ್ಷದ ಕಾಂಗ್ರೆಸ್ಸಿನ ಶಾಸಕರಿಗೆ ಕೊಟ್ಟಿರುವುದು ಕೇವಲ ಮೂರು ಇದರಲ್ಲಿ 90% ಜೆಡಿಎಸ್ ಮತ್ತು ಬಿಜೆಪಿಯವರಿಗೆ ಕೊಟ್ಟಿದ್ದಿರಿ ಇಲ್ಲಿ ಕೂಡ ತಾರತಮ್ಯ ಬಹಳಷ್ಟು ಆಗಿದೆ ಸರ್ಕಾರ ದಯಮಾಡಿ ಈ ರೀತಿ ತಾರತಮ್ಯ ಮಾಡಬಾರದು ಇದು ಸರಿಯಲ್ಲ, ಇದು ಸರ್ಕಾರಕ್ಕೆ ಶೋಭೆ ತರುವುದಿಲ್ಲ ಇದರ ಬಗ್ಗೆ ಪಕ್ಷಾತೀತವಾಗಿ ನಡೆದುಕೊಳ್ಳ ಬೇಕಾಗುತ್ತದೆ ಅದು ನಿಮ್ಮ ಕರ್ತವ್ಯ ಕೂಡ ಹೌದು ಅದಕ್ಕೆ ವಿರೋಧ ಪಕ್ಷದ ಸಾಲಿನಲ್ಲಿ ಏನು ಶಾಸಕರು ಕುಳಿತಿದ್ದಾರೆ, ಅವರು ಕೇವಲ ಕಾಂಗ್ರೆಸ್ ಎಂದು ಅಲ್ಲ, ಇನ್ನು ಯಾರ್ಯಾರು ಕುಳಿತಿದ್ದಾರೆ, ಅವರೆಲ್ಲರಿಗೂ ಆದ್ಯತೆ ಮೇಲೆ ಎಲ್ಲೆಲ್ಲಿ ಅಗತ್ಯವಿದೆ ಎಂದು ಅಲ್ಲ, ಇನ್ನು ಯಾರ್ಯಾರು ಕುಳಿತಿದ್ದಾರೆ, ಅವರೆಲ್ಲರಿಗೂ ಆದ್ಯತೆ ಮೇಲೆ ಎಲ್ಲೆಲ್ಲಿ ಅಗತ್ಯವಿದೆ ಎಂದು ನೋಡಿ ಅಲ್ಲಿ ಹೈಸ್ಕೂಲುಗಳನ್ನು ಮಂಜೂರು ಮಾಡಬೇಕು Junior college ವಿಚಾರದಲ್ಲಿ ಕೂಡ ಬಹಳ ಅನ್ಯಾಯವಾಗಿದೆ junior College ನೀವು ಹೈದರಾಬಾದ್ ಕರ್ನಾಟಕಕ್ಕೆ ನೂರರಲ್ಲಿ ಎಷ್ಟು ಕೊಟ್ಟಿರುವುದು ಎಂದರೆ ಹನ್ನೊಂದು ಮಾತ್ರ ಕೊಟ್ಟಿದ್ದೀರಿ ಮಾನ್ಯ ಉಪ ಮುಖ್ಯಮಂತ್ರಿಗಳು ನಾವು ಹೈದರಾಬಾದ್ ಕರ್ನಾಟಕಕ್ಕೆ ಹಾಗೆ ಮಾಡುತ್ತೇವೆ, ಇಷ್ಟು ಹಣ ಕೊಡುತ್ತೇವೆಂದು ಹೇಳುತ್ತಿದ್ದೀರಿ ಆದರೆ ಎಷ್ಟೊಂದು ತಾರತಮ್ಯವನ್ನು ನೀವು ಮಾಡಿದ್ದಿರಿ ಇಡೀ ರಾಜ್ಯದಲ್ಲಿ JDS & BJPಗೆ ಎಷ್ಟು ಕೊಟ್ಟಿದ್ದೀರಿ ಎಂದು ಲೆಕ್ಕ ಹಾಕುತ್ತಿದ್ದೆ 200 ಹೈಸ್ಕೂಲುಗಳಲ್ಲಿ ಆ ಎರಡು ಸೇರಿ ಸುಮಾರು 180 ಕ್ಕಿಂತ ಹೆಚ್ಚು ಕೊಟ್ಟಿದ್ದಾರೆ Congress, MES (JD(U) ಈ ಎಲ್ಲಾ 20ರೊಳಗೆ ಬರುತ್ತದೆ 99 Junior college ನಲ್ಲಿ Opposition ನವರಿಗೆ 10ಕ್ಕಿಂತ ಕಡಿಮೆ ಬರುತ್ತವೆ 90 Junior College ಗಳನ್ನು Ruling Party ಯವರಿಗೆ ಕೊಟ್ಟಿದ್ದಾರೆ ಈ ರೀತಿ ಅನ್ಯಾಯ

ವಾಗಿದೆ, ಅದನ್ನು ಸರಿಪಡಿಸಬೇಕು ಹೈಸ್ಕೂಲು ಮತ್ತು ಜೂನಿಯರ್ ಕಾಲೇಜುಗಳನ್ನು ಕೂಡ ವಿರೋಧ ಪಕ್ಷದವರಿಗೆ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಇದರಲ್ಲಿ ಕಾಂಗ್ರೆಸ್, ದಳ ಎಂದು ಚರ್ಚೆಯಾಗಬಾರದು

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಪ್ರಕಾಶ್‌ರವರು ರಾಜ್ಯದ ಹಿರಿಯ ಸದಸ್ಯರು ಅದರಲ್ಲೂ ವಿಶೇಷವಾಗಿ ಅವರು ಬಳ್ಳಾರಿ ಜಿಲ್ಲೆಯಿಂದ ಬಂದವರು ಮಾನ್ಯ ಮಾಧುಸ್ವಾಮಿಯವರು Congress, JD(S) JD(U) ಎಂದು ಮಾತನಾಡುವುದಿಲ್ಲವೆಂದು ಹೇಳಿದರು ಇವತ್ತು ರಾಜ್ಯದಲ್ಲಿ ಶಿಕ್ಷಣದ ಸಮಸ್ಯೆಗಳು ಏನಿವೆ, ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ ಡಾ ನಂಜುಡಪ್ಪ ವರದಿಯ ಮೇಲೆ ಹಿಂದುಳಿದ ಜಿಲ್ಲೆಗಳು ಹಾಗೂ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಇದೆಯೆಂದು ಗೊತ್ತು ಇವತ್ತು ನಾವು ಬಿಡಿಸಿ ಹೇಳಬೇಕಾಗುತ್ತದೆ ಮೊದಲು ಎಷ್ಟೋ ಸರ್ಕಾರ ಬಂದು ಹೋಗಿದೆ, ನಾವು ಕೂಡ ಸರ್ಕಾರವನ್ನು ನಡೆಸಿದ್ದೇವೆ ಈ ರೀತಿಯ ತಾರತಮ್ಯವನ್ನು ನಾವು ಯಾವಾಗಲೂ ಕೂಡ ಮಾಡಿಲ್ಲ ಇವತ್ತು Junior College ಮತ್ತು High School ಕೊಡುವಂತಹ ಸಂದರ್ಭದಲ್ಲಿ ಆ ಪ್ರದೇಶಗಳ ಬಗ್ಗೆ ನಮ್ಮನ್ನು ವ್ಯಕ್ತಿಗತವಾಗಿ ಕೇಳುತ್ತಿಲ್ಲ ಇವತ್ತು ನಮ್ಮ ನಮ್ಮ ಜಿಲ್ಲೆಯಾದ ಗುಲ್ಬರ್ಗಕ್ಕೆ ತಾವು ಮೂರು Highschool ಕೊಟ್ಟಿದ್ದಿರಿ ಈ ರೀತಿ ತಾರತಮ್ಯ ಏಕೆ? ಲೆಕ್ಕೆ ಹಾಕಿ ಇದೊಂದೋ ಅಲ್ಲ, ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಎಲ್ಲಾ ಇಲಾಖೆಯಲ್ಲಿ ಕೂಡ ತಾರತಮ್ಯ ನಡೆಯುತ್ತದೆ ಬಹಳಷ್ಟು ಕೂಡ Junior College ಮತ್ತು High school ಆ ಪ್ರದೇಶಕ್ಕೆ ಸಿಕ್ಕಿದೆ ಎಂದು ಅಂಕಿ ಅಂಶಗಳ ಮುಖಾಂತರ ಗೊತ್ತಾಗುತ್ತದೆ ಇವತ್ತು ಒಳ್ಳೆಯದಾಯಿತು ತಾವೇ ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ನಿಂತಿದ್ದೀರಿ ಹೆಚ್ಚಾಗಿ ಪ್ರತಿಪಾದನೆ ಮಾಡುವಂತಹ ಐದು ಜಿಲ್ಲೆಗಳ ಸಾರಥ್ಯವನ್ನು ತಾವು ವಹಿಸಿದ್ದಿರಿ ತಮ್ಮ ಜವಾಬ್ದಾರಿ ಇದೆ ಜನರಿಗೆ ಇವತ್ತು ತಾವು ಹೇಳಬೇಕು You are answerable to the people of the Karnataka State ಈ ರೀತಿ ಅನ್ಯಾಯವಾದ ಮೇಲೆ ಮಾನ್ಯ ರಾಯರೆಡ್ಡಿಯವರು ಬಹಳಷ್ಟು ನೇರ ವಾದಂಥಹ ಪ್ರಶ್ನೆಯನ್ನು ಕೇಳಿದ್ದಾರೆ ಈ ರೀತಿ ಅನ್ಯಾಯವಾಗಬಾರದು,

ಇದು party wise ಆಗಬಾರದು ಯಾವ್ಯಾವ ಪ್ರದೇಶದಲ್ಲಿ ಎಷ್ಟೆಷ್ಟು Colleges ಸಿಗಬೇಕಾಗಿದೆ, ಅಷ್ಟು ಸಿಗುವಂತಹ ರೀತಿಯಲ್ಲಿ ಮಾಡಬೇಕು ಆ ರೀತಿ ಸಿಕ್ಕಿಲ್ಲವೆಂದು ನೇರವಾದ ಪ್ರಶ್ನೆಯನ್ನು ಅವರು ಕೇಳಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಯಾರಿಗೆ ಕೊಟ್ಟಿದ್ದಾರೆ? ಯಾವಕಾಲದಲ್ಲಿ ಕೊಟ್ಟಿದ್ದಾರೆ? ಅವರಿಗೆ ಕೊಟ್ಟಿದ್ದಾರೆ ನಮಗೆ ಏಕೆ ಕೊಡಲಿಲ್ಲ? ಎಂದು ಚರ್ಚೆ ಮಾಡುವುದುಕ್ಕೆ ನಾವು ತಯಾರಾಗಿಲ್ಲ ನಿಮ್ಮ ನೀತಿ ಮತ್ತು ಆದ್ಯತೆ ಏನು? ಯಾವ ಆಧಾರದ ಮೇಲೆ Junior College ಮತ್ತು School ಗಳನ್ನು ಕೊಡುತ್ತಿದ್ದೀರಿ? ಅದಕ್ಕೆ ಏನು ನೀತಿಯನ್ನು ಅನುಸರಿಸುತ್ತಿದ್ದೀರಿ ಎಂದು ತಾವು ಇಲ್ಲಿ ಹೇಳಿದರೆ ನಾಗವು ಅದಕ್ಕೆ ಪ್ರಶ್ನೆಯನ್ನು ಮಾಡುವುದಕ್ಕಾಗುತ್ತದೆ ಉಪನಿರ್ದೇಶಕರ ಶಿಫಾರಸ್ಸಿನ ಮೇಲೆ ಕೊಟ್ಟಿದ್ದಿರಿ ಎಂದು ಹೇಳುತ್ತೀರಿ ಎಷ್ಟು ಜನ ಉಪನಿರ್ದೇಶಕರು ಶಿಪಾರಸ್ಸು ಮಾಡಿದ್ದರು? ನಮ್ಮ ತಾಲ್ಲೂಕಿನಿಂದ ಮಾಡಿದ್ದರಾ? ಇಲ್ಲವಾ ಎಂದು ನಮಗೂ ಗೊತ್ತಾಗಬೇಕಲ್ಲ? ಈಗ ನಮಗೆ school ಕೊಟ್ಟಿಲ್ಲ ನಮ್ಮ deputy director, BEO ಶಿಪಾರಸ್ಸು ಮಸಡಿದ್ದರಾ ಇಲ್ಲವಾ ಗೊತ್ತಾಗಬೇಕಲ್ಲ ನಾವ್ಯಾರಿಗಾದರೂ ಕೇಳಿದ್ದೇವೆ ಇಲ್ಲವೆ ಇದೆಲ್ಲಾ ಚರ್ಚೆಯಾಗಬೇಕು ದಯಮಾಡಿ ಇದಕ್ಕೆ ಅರ್ಧಗಂಟೆ ಚರ್ಚೆಯನ್ನು ಮಾಡುವುದಕ್ಕೆ ತಾವು ಅವಕಾಶ ಮಡಿಕೊಡಬೇಕು ಆಗ ವ್ಯಾಪಕವಾಗಿ ಎಲ್ಲರೂ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಈಗ ಏನೆಮದರೆ ಯಾರು DDPI ನಿಂದ ಬಂತೋ, ಬಿಡುತ್ತೋ, ಈ ರೀತಿಯಲ್ಲಿ ನೂರಾರು ರೆಕಮೆಂಡೇಷನ್ಸ್ ಬರುತ್ತದೆ ಈಗ ಪ್ರಶ್ನೆ ಇರುವಂಥಾದ್ದು ಅದಲ್ಲ ಡಾ ನಂಜುಂಡಪ್ಪ ವರದಿ ನಿಮ್ಮ ಕಣ್ಣ ಮುಂದೆ ಇದೆ ನೀವು Most back-ward ತಾಲ್ಲೂಕುಗಳಿಗೆ ಎಷ್ಟು ಕೊಡಬೇಕು? ಮತ್ತು backward ತಾಲ್ಲೂಕುಗಳಿಗೆ ಏನು ಕೊಡಬೇಕು? ಸಾಮಾನ್ಯ ತಾಲ್ಲೂಕುಗಳಿಗೆ ಏನು ಕೊಡಬೇಕು? ಎನ್ನುವಂತಾದ್ದು ಮಾನದಂಡವನ್ನು ಹಾಕಿಕೊಂಡು ಹೋಗು ತ್ತೀರಿ ರೆಕಮೆಂಡೇಷನ್ಸ್ ಅನ್ನು DDPI ನವರು ಮಾಡೇ ಮಾಡುತ್ತಾರೆ, ಏಕೆಂದರೆ ನೀವು ಅದಿಕಾರದಲ್ಲಿ ಇದ್ದೀರಿ, ರೆಕಮೆಂಡೇಷನ್ ತೆಗೆದುಕೊಂಡು

ಬರುತ್ತಾರೆ, ಒಂದು ಫೋನ್ ಮಾಡಿದರೆ ಅವರು ರೆಕೆಮೆಂಡ್ ಮಾಡುತ್ತಾರೆ ಆದರೆ ಉದ್ದೇಶವೇನೆಂದರೆ, ಎಲ್ಲಾ ಕಡೆಗಳಲ್ಲಿ ಇಡೀ ರಾಜ್ಯದಲ್ಲಿ ಶಿಕ್ಷಣ ಇಲಾಖೆಯಲ್ಲಿ ಅಭಿವೃದ್ಧಿಯಾಗಬೇಕೆಂದರೆ, ನೀವು ಈ ಮಾನದಂಡವನ್ನು ಇಟ್ಟಿಕೊಂಡು ಕೊಡುತ್ತೇವೆಂದು ನೀವೇ ಹೇಳಿ ಅದು ರಸ್ತೆ ಇರಬಹುದು, health sector ಇರಬಹುದು, education sector ಇರಬಬಹುದು, ಕಮ್ಯುನಿಕೇಶನ್ ಇರಬಹುದು, ಅದೆಲ್ಲದಕ್ಕೂ ಇಟ್ಟುಕೊಂಡು ಸಾಮಾನ್ಯವಾಗಿ ನೀವು ಮುಂದುವರೆದ ಭಾಗಗಳಲ್ಲಿ 10 ಕೊಟ್ಟರೆ, ಈ ಬಾಗದಲ್ಲಿ ಇಪ್ಪತ್ತೋ ಮೂವತ್ತೋ ಕೊಡುವಂಥಾದ್ದನ್ನು ನೀವೇ ಹೇಳಿಕೊಂಡು ಬಂದಿದ್ದೀರಿ ಆದರೆ ಇವತ್ತು ಅದರ ತದ್ವಿರುದ್ಧ ಏನು ಆಗಿದೆ, ಎಲ್ಲಿ ಅಸಮಾನತೆ ಇದೆ, ಅಲ್ಲಿ ಸಮಾನತೆಯನ್ನು ತರುತ್ತೇವೆಂಬ ಮಾತನ್ನು ಹೇಳಿದಂದವರು, ನೀವು ಫರ್ದರ್ ಅಸಮಾನತೆಯನ್ನು ಕ್ರಿಯೇಟ್ ಮಾಡುತ್ತಿದ್ದೀರಿ ಇಲ್ಲಿ ಪಾರ್ಟಿಯನ್ನು ಬಿಟ್ಟುಬಿಡಿ ಈ ಕಡೆ ವಿರೋಧ ಪಕ್ಷದವರು, ಆ ಕಡೆ ಆಡಳಿತ ಪಕ್ಷದವರು ಎನ್ನುವುದನ್ನು ಬಿಡಿ ಒಟ್ಟಿನಲ್ಲಿ ರಾಜ್ಯದಲ್ಲಿ ಶಿಕ್ಷಣದ ಬಗ್ಗೆ ಪ್ರಚಾರವಾಗಬೇಕು, ಹೆಚ್ಚಿನ ರೀತಿಯಲ್ಲಿ ಎಲ್ಲಿ ವಿಶೇಷವಾಗಿ ಸಾಕ್ಷರತೆಯಲ್ಲಿ percentage ಕಡಿಮೆ ಇದೆ, ಎಲ್ಲಿ ಹೆಣ್ಣುಮಕ್ಕಳ ಲಿಟರೆಸಿಯಲ್ಲಿ percentage ಕೆಇಮೆ ಇದೆ, ಅದಕ್ಕೆ ತಾವು ಒತ್ತು ಕೊಡುತ್ತೀರೋ ಇಲ್ಲವೋ? ಇಲ್ಲಿ ಕಾಲೇಜು ಹಾಗೆ, ಜೂನಿಯರ್ ಕಾಲೇಜು ಹಾಗೆ, ಹೈಸ್ಕೂಲ್ ಹಾಗೆ, ನಾನು ನೆನ್ನೆ ದಿವಸ ಹೇಳಿದೆ ಇದು ಬಫೇ ಸಿಸ್ಟಂ ಆಗಿದೆ ಯಾರ ಕೈಯಲ್ಲಿ ಇದೆಯೋ ಅದನ್ನು ಅವರೇ ತಿಂದು ಬಿಡುವುದು ಹಿಂದಿನವರಿಗೆ ಬಡಿಸುವುದು ಏನು ಇಲ್ಲ ಅದಕ್ಕೆ ತಾವು ದಯವಿಟ್ಟು ಇದೆ ಬಗ್ಗೆ ಗಂಭೀರವಾಗಿ ಮಾತನಾಡಿ ಬೇರೆ ವಿಚಾರಗಳು ಬೇರೆ ಆಗುತ್ತದೆ ಆದರೆ ಇಲ್ಲಿ ಇದು ಡೆವೆಲಪ್‌ಮೆಂಟ್ ಬಗ್ಗೆ ಕೂಡ ನೀವೆಲ್ಲರ ಬಾಯಿ ಮುಚ್ಚಿಕೊಂಡು ಕುಳಿತರೆ, ಖಂಡಿತವಾಗಿಯೂ ಇದು ಅನ್ಯಾಯವಾಗುತ್ತದೆ ನಾಳೆ ಅಲ್ಲಿ ಏನಾದರೂ ದಂಗೆಗಳು ಆದರೆ ಅದಕ್ಕೆ ನಾವೇ ಕಾರಣಕರ್ತರು ಎನ್ನುವಂಥಾ ಮಾತನ್ನು ನಾನು ಹೇಳಬೇಕಾಗುತ್ತದೆ ಇದು ಸ್ಪಷ್ಟ

ಅಧ್ಯಕ್ಷರು ಎಲ್ಲರೂ ಈ ರೀತಿಯಾಗಿ ಎದ್ದು ನಿಂತರೆ ಸಾಧ್ಯ ವಾಗುವುದಿಲ್ಲ ಇದು ಪ್ರಶ್ನೆ

(ಗೊಂದಲ)

ಅಧ್ಯಕ್ಷರು ಈ ಪ್ರಶ್ನೆಯನ್ನು ಪ್ರಾಧಮಿಕ ಶಿಕ್ಷಣ ಸಚಿವರು ಸದನಕ್ಕೆ ಬಂದಮೇಲೆ ತೆಗೆದುಕೊಳ್ಳೋಣ

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಪ್ರಾದೇಶಿಕ ಅಸಮಾನತಯೆ ಕುರಿತಾಗಿ, ಅವರು ಪ್ರಸ್ತಾಪ ಮಾಡಿರುವಂಥಾದ್ದು ಬಹಳ ಯೋಗ್ಯವಾಗಿರುವಂಥಾದ್ದು ಮತ್ತು ಇದನ್ನು ಸರಿ ಪಡಿಸಲೇಬೇಕಾಗಿರುವಂಥ ಜವಾಬ್ದಾರಿ ಎಲ್ಲಾ ಸರ್ಕಾರಗಳ ಮೇಲೆ ಇದೆ ಈ ಕಾರಣಕ್ಕಾಗಿ ಮಾನ್ಯ ಜಿ ಸಿ ಮಾಧುಸ್ವಾಮಿಯವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು, ಹೇಳಿದಂಥಾ ರೀತಿಯಲ್ಲಿ ಈ ವಿಷಯ ಅರ್ಧ ಗಂಟೆ ಚರ್ಚೆ ಮಾಡಲು ಸರ್ಕಾರ ಸಮ್ಮತಿಯನ್ನು ಕೊಡುತ್ತದೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆವಿಗೂ ಸದನದಲ್ಲಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಬಂದಿಲ್ಲ ಕಾರಣಾಂತರಗಳಿಂದ ಅರ್ಧ ಗಂಟೆ ಚರ್ಚೆ ಯಾವತ್ತೂ ಕೂಡ ಮೂರು ವರ್ಷಗಳಲ್ಲಿ ಒಂದು ಸಾರಿಯೂ ಬಂದಿಲ್ಲ

ಶ್ರೀ ಎಂ ಪಿ ಪ್ರಕಾಶ್ ಪ್ರಮುಖವಾದ ವಿಷಯದ ಬಗ್ಗೆ ಯಾರು ಹಿಂದೆ ಸರಿಯುವಂಥಾ ಪ್ರಶ್ನೆಯೇ ಇಲ್ಲ ಆದುದರಿಂದ ತಾವು ಈ ಚರ್ಚೆಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕು ನಾವು ತಾರತಮ್ಯವನ್ನು ಪ್ರತಿಪಾದಿಸುತ್ತೇವೆಂದು ಹೇಳುತ್ತಿದ್ದೀರಿ ಅದಕ್ಕೆ ಸರಿಯಾದಂಥ ಉತ್ತರವನ್ನು ಕೊಡುವುದಕ್ಕೆ ಸರ್ಕಾರದ ಹತ್ತಿರ ಇದೆ ಪ್ರಾದೇಶಿಕ ಅಸಮಾನತೆಯ ಬಗ್ಗೆ ಮಾನವ ಇಂಡೆಕ್ಸ್ ಬಗ್ಗೆ ಮಾನ್ಯ ಸದಸ್ಯರು ಏನು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದು ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿ ಇದ್ದಾಗ ಪ್ರಕಟಣೆಯಾದಂಥ ಒಂದು ಇಂಡೆಕ್ಸ್ ಪೇಪರ್ ಆಗಿದೆ ಅದರಲ್ಲಿ 8 ನೇ ಸ್ಥಾನದಲ್ಲಿ ಬಳ್ಳಾರಿ ಜಿಲ್ಲೆಯವರು ಆದಾಯದಲ್ಲಿ ಇದ್ದರೂ ಕೂಡ, ಆರೋಗ್ಯ ವಿಷಯದಲ್ಲಿ 17 ನೇ ಸ್ಥಾನದಲ್ಲಿ ಇದ್ದೇವೆ ಶಿಕ್ಷಣ ವಿಚಾರದಲ್ಲಿ ರಾಯಚೂರು ಕೊನೆಯ ಸ್ಥಾನದಲ್ಲಿ ಇದೆ ನಾವು ಇವೆಲ್ಲವನ್ನೂ ಓದಿದ್ದೇವೆ ಈ ಕಾರಣಕ್ಕಾಗಿಯೇ ಮಾನದಂಡ

ವಿರುವಂಥಾದ್ದು ಅಲ್ಲಿ ಉಪನಿರ್ದೇಶಕರು ಕಳುಹಿಸಿ ಕೊಟ್ಟಿರುವಂಥಾ ಮಾತನ್ನು ಹೇಳಿದರೂ ಕೂಡ, ಈಗ ಈ ರಿತಿ ಪ್ರಾದೇಶಿಕ ಅಸಮಾನತೆ ಇದೆಯೆನ್ನುವ ಕಾರಣಕ್ಕಾಗಿಯೇ ನಾವು ಯಾರೂಕೂಡ ಸುಮ್ಮನೆ ಕುಳಿತಿಲ್ಲ ಇದರ ಬಗ್ಗೆ ಪ್ರಸ್ತಾಪ ಮಾಡಿದ ಮೇಲೆ 315 ಹೊಸ ಹೈಸ್ಕೂಲ್‌ಗಳನ್ನು ಸ್ಯಾಂಕ್ಷನ್ ಮಾಡುವುದಕ್ಕೆ ಸರ್ಕಾರ ಈಗಾಗಲೇ ಶಿಫಾರಸ್ಸನ್ನು ಮಾಡಿ, ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟಿದೆ ಆರ್ಥಿಕ ಇಲಾಖೆಯಲ್ಲಿ ಸನ್ಮಾನ್ಯ ಉಪಮುಖ್ಯಮಂತ್ರಿಯವರು ಅದಕ್ಕೆ ತಾತ್ವಿಕವಾಗಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ ಈ 315 ಪ್ರಸ್ತಾವಿಕ ಆರ್ಥಿಕ ಇಲಾಖೆಯಲ್ಲಿ ಇರುವಂಥಾದ್ದು ಪ್ರಕಟ ಗೊಂಡಾಗ, ಈ ಅಸಮಾನತೆ ಪ್ರಶ್ನೆ ಉದ್ಭವವಾಗುವುದಿಲ್ಲ ಒಪ್ಪಬೇಕಾಗಿರು ವಂಥಾದ್ದು, ತಾವು ಅಭಿನಂದಿಸಬೇಕಾಗಿರುವಂಥಾದ್ದು 2006 ಮತ್ತು 2007 ರಿಂದ ಇಲ್ಲಿಯವರಗೆ ಒಂದು ಸಾವಿರ ಪ್ರೌಢಶಾಲೆಗಳನ್ನು ಕೊಟ್ಟಿರುವಂಥಾ ವಿಕ್ರಮ ಈ ಸರ್ಕಾರಕ್ಕೆ ಇದೆ

ಶ್ರೀ ಕೆ ಗೋಪಾಲ ಪೂಜಾರಿ ಯಾರಿಗೆ ಕೊಟ್ಟಿದ್ದೀರಿ? ನಮಗೆ ಕೊಟ್ಟಿಲ್ಲ

(ಗೊಂದಲ)

ಅಧ್ಯಕ್ಷರು ಮಾನ್ಯ ಸಚಿವರು ಕೊಡುವ ಉತ್ತರವನ್ನು ಕೇಳದೆ, ಈ ರೀತಿ ಮಾಡಿದರೆ ಹೇಗೆ? ಮೊದಲು ಉತ್ತರವನ್ನು ಕೇಳಿ

(ಗೊಂದಲ)

ಅಧ್ಯಕ್ಷರು ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ನೀವು react ಮಾಡಿ ಕುಳಿತುಕೊಳ್ಳಿ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಅರ್ಧ ಗಂಟೆ ಕಾಲ ಚರ್ಚೆಗೆ ಎಂದು ಹೇಳಿ ಮತ್ತೆ ಈ ವಿಷಯದ ಚರ್ಚೆ ಏಕೆ?

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದರು

ಮಾನ್ಯ ಬಸವರಾಜ ರಾಯರೆಡ್ಡಿಯವರು ಪ್ರಶ್ನೆಯನ್ನು ಕೇಳುತ್ತೇವೆಂದು ಹೇಳಿದ್ದರಿಂದ ಅವರು ಹೇಳಿದ ವಿಚಾರಗಳೆಲ್ಲ ದಾಖಲೆಗೆ ಹೋಗಿವೆ ನಾಳೆ ಅದು ಪತ್ರಿಕೆಗಳಿಗೂ ಹೋಗುತ್ತದೆ ಅದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ ಮತ್ತೆ ಚರ್ಚೆಗೂ ನಾವು ತಯಾರಿದ್ದೇವೆಂದು ಹೇಳುತ್ತೇವೆ ಆಯಿತು, ಚರ್ಚೆಗೆ ತಯಾರಿದ್ದೇವೆಂದು ಏಕೆ ಮಾಡಬಾರದು? ಈಗ ನಾನು ಹೇಳುವಂಥಾದ್ದು, ಮಾನ್ಯ ಸದಸ್ಯರ ಪ್ರಶ್ನೆ ಬಂದಿದೆ, ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ತಾವು ಈ ವಿಷಯವನ್ನು ಅರ್ಧ ಗಂಟೆ ಚರ್ಚೆಯಾಗಲಿ ಎಂದು ಹೇಳಿದ್ದೀರಿ ಮತ್ತೆ ಇದು ಏಕೆ?

ಶ್ರೀ ಎಂ ಪಿ ಪ್ರಕಾಶ್ ಏಕೆ? ಎಂದರೆ ಈಗ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು, ನಡವಳಿಕೆಯನ್ನು ದಾಖಲಿಸಬಾರದೆಂದು ತಿಳಿಸಿದರು)

ಅಧ್ಯಕ್ಷರು ಈಗ ಮಾನ್ಯ ಸಚಿವರು ಉತ್ತರ ಹೇಳುತ್ತಿದ್ದಾರೆ ಅವರು ಉತ್ತರ ಹೇಳುವಾಗ ನೀವೆಲ್ಲರೂ ಆ ಉತ್ತರವನ್ನು ಕೇಳಿ ರಿಯಾಕ್ಟ್ ಮಾಡಿದರೆ ಅರ್ಥವಿದೆ ಆದರೆ ಒಟ್ಟಿಗೆ 30 ಜನ ಸದಸ್ಯರು ನಿಂತುಕೊಂಡರೆ ಇದು ಏನು ಗರಡಿ ಮನೆಯಾ? ಏನು ಇದು?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಹೊಸ ಹೊಸ ಪದಗಳನ್ನು ತಾವೇ ತರುತ್ತಿದ್ದೀರಿ, ನಾವು ಗರಡಿ ಮನೆ ಎಂದು ಹೇಳಿದೆವಾ?

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಿದ್ದಾರೆ ಅವರು ಹೇಳಲಿ, ಅವರು ಇನ್ನೂ ಉತ್ತರವನ್ನೇ ಹೇಳಿಲ್ಲ ನೀವು ಈ ರೀತಿ ಮಾಡಿದರೆ ಹೇಗೆ? ಅವರು ಉತ್ತರವನ್ನು ಹೇಳಲಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಹೇಳುವುದಕ್ಕೆ ಮುಂಚೆ ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ

ಅಧ್ಯಕ್ಷರು ಮಾನ್ಯ ಸಚಿವರು ಇನ್ನು ಉತ್ತರವನ್ನೇ ಹೇಳಿಲ್ಲ ಮೊದಲೇ ಕೇಳುವುದಕ್ಕೆ ಹೋದರೆ ಹೇಗೆ? ಅವರು ಮೊದಲು ಉತ್ತರವನ್ನು ಹೇಳಲಿ ನೀವು ಏನು ಹೇಳಬೇಕೋ ಹೇಳಿ, ಕುಳಿತುಕೊಳ್ಳಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರು ಆತಂಕವನ್ನು ವ್ಯಕ್ತ ಪಡಿಸಿರುವ ಬಗ್ಗೆ ಸರ್ಕಾರ ಸಂಪೂರ್ಣ ಗೌರವವನ್ನು ತೋರಿಸುತ್ತದೆ ಈ ಪ್ರಾದೇಶಿಕ ಅಸಮಾನತೆ ಆಗಬಾರದು, ಮಾನದಂಡದ ಪ್ರಕಾರ ಆಗಬೇಕೆನ್ನುವ ಮಾತನ್ನು ಸರ್ಕಾರ ಸಂಪೂರ್ಣವಾಗಿ ಒಪ್ಪುತ್ತದೆ ಇದರ ಬಗ್ಗೆ ಮಾನ್ಯ ಪತಿಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ ನಾನು ಉತ್ತರವನ್ನು ಕೊಡುತ್ತೇನೆಂದು ಹೇಳಿದೆ ಅದಕ್ಕೆ ಬೇರೆಯವರು ಹೇಳಿದಂಥ ಸಂದರ್ಭದಲ್ಲಿ ಆಗಬಹುದು, ಸದನ ಒಪ್ಪುವುದಾದರೆ, ಈ ಪ್ರಶ್ನೆಯನ್ನು ಹಾಗೆ ತಡೆ ಹಿಡಿಯಿರಿ ಮಾನ್ಯ ಪ್ರೌಢ ಶಿಕ್ಷಣ ಸಚಿವರು ಸದನಕ್ಕೆ ಬಂದಾಗ ಈ ವಿಷಯ ಚರ್ಚೆಯಾಗಲಿದೆಯೆಂದು ಹೇಳಿದರು ಆದರೆ ಪ್ರಶ್ನೆ ಕೇಳಿದಂಥ ಸನ್ಮಾನ್ಯ ಸದಸ್ಯರು, ಇಲ್ಲ ನಾನು ಈ ಪ್ರಶ್ನೆಯನ್ನು ಕೇಳುತ್ತೇನೆಂದು ಹೇಳಿದರು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದರು ಅದಕ್ಕೆ ಹೇಳಬೇಕಾದಂಥ ಪೂರಕ ಮಾತುಗಳನ್ನು ಕೂಡ ಹೇಳಿದರು ಅದು ಆದಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಜೆ ಸಿ ಮಾಧುಸ್ವಾಮಿಯವರು, ಕೆಲವು ವಿಷಯಗಳನ್ನು ಚರ್ಚಿಸಿ ಅವರು ಒಂದು ಸಲಹಯನ್ನು ಕೊಟ್ಟರು ಎಲ್ಲರೂ ಈ ಬಗ್ಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡಬೇಕಾದಂಥ ಅಗತ್ಯತೆ ಇರುವುದರಿಂದ ಅರ್ದ ಗಂಟೆ ಚರ್ಚೆಗೆ ಅವಕಾಶವನ್ನು ಕಲ್ಪಿಸಿಕೊಂಡಿಯೆಂದು ಹೇಳಿದೆವು ಇದು ಚರ್ಚೆಗೆ ಯೋಗ್ಯವಾದ ವಿಷುಯವಾಗಿದ್ದು ಅದಕ್ಕೆ ನಾವು ತಯಾರು ಇದ್ದೇವೆ ಆದರೆ ಚರ್ಚೆಗೆ ಒಪ್ಪಿದ ಮೇಲೆ ಮತ್ತೆ ಏಕೆ ಚರ್ಚೆ ಎಂದು ಮಾನ್ಯ ಶ್ರೀ ಜಿ ವಿ ಶ್ರೀರಾಮು ರೆಡ್ಡಿಯವರು ಹೇಳುವುದಾದರೆ ಅದಕ್ಕೆ ಉತ್ತರವನ್ನು ಕೊಡುತ್ತೇನೆ ಮಾನ್ಯ ಸದಸ್ಯರು ಹೇಳಿದಂಥ ಮಾತುಗಳು ದಾಖಲೆಯಾಗಿವೆ ಅವು ನಾಳೆ ದಿವಸ ಪತ್ರಿಕೆಗಳಲ್ಲಿ ವರದಿಯಾಗುತ್ತದೆ ಸರ್ಕಾರ ಚರ್ಚೆಗಾಗಿ ಏಕೆ ಮುಂದಕ್ಕೆ

ಹೋಯಿತು ಎಂದು ಆದರೆ ಸಾಮಾನ್ಯ ಓದುಗರು ಏನು ತಿಳಿದು ಕೊಳ್ಳುತ್ತಾರೆಂದರೆ, ಇವರ ಹತ್ತಿರ ನಿರುತ್ತರವಿರುವುದರಿಂದ ಆ ರೀತಿಯಾಗಿದೆ ಎನ್ನುವಂಥಾದ್ದು ಆಗಿದೆ ಎನ್ನುವಂಥಾ ಕಾರಣಕ್ಕಾಗಿಯೇ, ನಾನು ಕೊಡುವ ಉತ್ತರವನ್ನು ಕೊಡುತ್ತೇನೆ ಆದುದರಿಂದ ಚರ್ಚೆಗೆ ನಿಮ್ಮನ್ನು ಪ್ರತ್ಯಕ್ಷಿಸಿದ್ದೇವೆಂಬ ಪ್ರಶ್ನೆ ಇಲ್ಲ ಮಾನ್ಯ ಫ್ರೌಢ ಶಿಕ್ಷಣ ಸಚಿವರು ಸದನಕ್ಕೆ ಬಂದಾಗ ಈ ವಿಷಯ ಚರ್ಚೆ ಕೂಡ ಆಗುತ್ತದೆ ಆದರೆ ಅನುಸಂಗಿಕವಾಗಿ ಹೇಳಿದಂದ ಮಾತು, ಒಂದುಸಾವಿರ ಪ್ರೌಢ ಶಾಲೆಗಳನ್ನು ಕಳೆದ 16,17 ತಿಂಗಳುಗಳಲ್ಲಿ ಕೊಟ್ಟಿರುವಂಥಾದ್ದು ಇದರಲ್ಲಿ 315 ಪ್ರಸ್ತಾವಗಳು ಈ ರೀತಿ ತಪ್ಪಾಗಿದೆನ್ನುವ ಕಾರಣಕ್ಕಾಗಿಯೇ, ಅದು ಈಗಾಗಲೇ ಆರ್ಥಿಕ ಇಲಾಖೆಯಲ್ಲಿ ಇದೆ ಅದಕ್ಕೆ ಅವರು ಸಹಮತಿಯನ್ನು ಕೊಟ್ಟಿದ್ದಾರೆ ಅದು ಇಷ್ಟರಲ್ಲೇ ಅದು ಪ್ರಕಟಣೆಯಾಗುತ್ತದೆ ಇದರ ಜೊತೆಗೆ ಆಳಂಥದಂಥಾ ಊರಿನ ಬಗ್ಗೆ ಮಾನ್ಯ ಬಿ ಆರ್ ಪಾಟೀಲ್‌ರವರು ಪ್ರಸ್ತಾಪ ಮಾಡಿದರು ಆಳಂದ ಊರಿಗೂ ಶಾಲೆಯನ್ನು ಕೊಟ್ಟಿದ್ದಾರೆ

ಶ್ರೀ ಬಿ ಆರ್ ಪಾಟೀಲ್ ಕಮಲಾಪುರ ಕ್ಷೇತ್ರಕ್ಕೆ ತಾವು ಕೊಟ್ಟಿದ್ದಿರಿ ಬರಗೂರು ರಾಮಚಂದ್ರಪ್ಪನವರ ವರದಿಯಲ್ಲಿ ಮತ್ತು ವಾಟಾಳ್ ನಾಗರಾಜ್‌ರವರು ವರದಿಯಲ್ಲಿ ಕನ್ನಡವನ್ನು ಬೆಳಸಬೇಕು, ಉಳಿಸಬೇಕು ಎನ್ನುವ ಕಾರಣಕ್ಕಾಗಿ, ಎಲ್ಲೆಲ್ಲಿ ಹೈಸ್ಕೂಲುಗಳನ್ನು ಕೊಡಬೇಕು, ಜೂನಿಯರ್ ಕಾಲೇಜುಗಳನ್ನು ಕೊಡಬೇಕು ಎನ್ನುವುದನ್ನು ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ ಒಂದು ಕಡೆ, ನಕ್ಸಲೈಟ್‌ಗಳು ಬಂದು ಗಲಾಟೆ ಮಾಡುತ್ತಾರೆ ಎಂದು ನಾವು ಇಲ್ಲಿ ಹೇಳುತ್ತೇವೆ, ಇನ್ನೊಂದು ಕಡೆ ಶಿಕ್ಷಣ ಕ್ಷೇತ್ರದಲ್ಲಿ ನಾವು ಈ ರೀತಿಯ ತಾರತಮ್ಯವನ್ನು ಮಾಡಿದರೆ ಯಾವುದೇ ಸರ್ಕಾರಕ್ಕೂ ಅದು ಸರಿಯಾದುದಲ್ಲ ಹಿಂದೆ ರಾಚಯ್ಯನವರು ಅಧಿಕಾರದಲ್ಲಿದ್ದಾಗ ಕೂಡ ಬಹಳ ದೊಡ್ಡ ಸಂಖ್ಯೆಯಲ್ಲಿ ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ ಈಗ ಶಾಲೆಗಳನ್ನು ಕೊಟ್ಟಿರುವಂಥಾದ್ದು ಬಸವರಾಜ ಹೊರಟ್ಟಿಯವರು ಮಾಡಿದಂಥ ಲಿಸ್ಟ್ ಅಲ್ಲ ಸನ್ಮಾನ್ಯ ರೇವಣ್ಣನವರು ಮಾಡಿದ ಲಿಸ್ಟ್ ಇದು ಆ ಕಾರಣಕ್ಕಾಗಿ ಈ ರಾಜ್ಯದಲ್ಲಿ ಯಾರಿಗೂ ನ್ಯಾಯ ಸಿಗುತ್ತಿಲ್ಲ ಇರುವ ಸತ್ಯ ಸಂಗತಿಯನ್ನು ಹೇಳುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ ನೀವು ಎಡಗೈನಿಂದ ಹೇಳಿದರೂ ಚಿಂತೆಯಿಲ್ಲ ಈ ವರ್ಷ 101 ಪದವಿಪೂರ್ವ ಕಾಲೇಜುಗಳನ್ನು ಪ್ರಕಟ ಮಾಡಿದ್ದೇವೆ, ಮತ್ತು ಆರ್ಥಿಕ ಇಲಾಖೆಗೆ 120 ಕ್ಕೆ ಹೊಸದಾಗಿ ಪ್ರಸ್ತಾವನೆ ಹೋಗಿದೆ ಆರ್ಥಿಕ ಇಲಾಖೆಯ ಸಹಮತ ಬಂದ ತಕ್ಷಣವೇ ಅವುಗಳನ್ನು ಪ್ರಾರಂಭ ಮಾಡುತ್ತೇವೆ

ಶ್ರೀ ಧರಂ ಸಿಂಗ್. ತಡೆ ಹಿಡಿಯಿರಿ ಎಂದು ನಾವು ಏಕೆ ಹೇಳಿದೆವೆಂದರೆ ಇದರ ಬಗ್ಗೆ ಅರ್ಧ ಗಂಟೆ ಕಾಲಾವಧಿಯ ಚರ್ಚೆ ದೀರ್ಘವಾಗಿ ಆಗಬೇಕು, ಸಂಬಂಧ ಪಟ್ಟಂಥ ಮಂತ್ರಿಗಳು ಇರಬೇಕೆಂದು ಹೇಳಿದೆವು ತಮ್ಮ ಬಳಿ ಉತ್ತರವಿದೆ ಎಂದು ಅವರು ವಿಷಯವನ್ನು ಪ್ರಸ್ತಾಪ ಮಾಡಿದರು ನಮ್ಮ ಸರ್ಕಾರ ಸಾವಿರಾರು ಹೈಸ್ಕೂಲುಗಳನ್ನು ಕೊಟ್ಟಿದೆ ಎಂದು ನೀವು ಹೇಳಿದಿರಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ಪ್ರಾದೇಶಿಕ ಅಸಮಾನತೆಯ ವಿಷಯವನ್ನು ಮೀರಿ

ಶ್ರೀ ಸಿದ್ದು ಸವದಿ ನಿಮ್ಮ ಆಢಳಿತ ಕಾಲದಲ್ಲಿ ವಿರೋದ ಪಕ್ಷದವರಿಗೆ ಒಂದೂ ಹೈಸ್ಕೂಲನ್ನು ಕೊಟ್ಟಿಲ್ಲ ಒಂದು ರಸ್ತೆಯನ್ನೂ ಕೊಟ್ಟಿಲ್ಲ ಇವರ ಆಡಳಿತವಿದ್ದಾಗ ಎಷ್ಟು ತಾರತಮ್ಯವಾಗಿದೆ ಎಂದು ಹೇಳುತ್ತೇನೆ ನಮ್ಮ ಕ್ಷೇತ್ರಕ್ಕೆ 10 ಲಕ್ಷ ರೂಪಾಯಿಯ ಒಂದೇ ಒಂದು ರಸ್ತೆಯನ್ನೂ ಕೊಡಲಿಲ್ಲ ಆದರೆ, ನಮ್ಮ ಮಗ್ಗುಲಲ್ಲಿದ್ದಂಥ ಗುಳೇದಗುಡ್ಡಕ್ಕೆ 6 ಕೋಟಿ ರೂಪಾಯಿಗಳ ಕೆಲಸವನ್ನು ಕೊಟ್ಟಿದ್ದರು ಅದು ತಾರತಮ್ಯವಲ್ಲವೆ? ಸಮಾನತೆಯೇ ಅದು? ನಮ್ಮ ಕ್ಷೇತ್ರಗಳಿಗೆ ನೀವು ಹೈಸ್ಕೂಲು, ಕಾಲೇಜುಗಳನ್ನು ಯಾವಾಗ ಕೊಟ್ಟಿದ್ದೀರಿ

ಶ್ರೀ ಬಸವರಾಜರಾಯರೆಡ್ಡಿ: ಇಷ್ಟು ವರ್ಷ ಬರಲೇ ಇಲ್ಲ ನಿಮಗೆ ಈಗ ಮಾತ್ರ ಸ್ಕೂಲುಗಳು ಕಾಲೇಜುಗಳು, ಬಂದಿವೆ ಅಲ್ಲವೆ?

ಶ್ರೀ ಸಿದ್ದು ಸವದಿ ತಾರತಮ್ಯವೇನಾದರೂ ನಡೆದಿದ್ದರೆ, ಅದು ಕಾಂಗ್ರೆಸಿನ ಕಾಲದಲ್ಲಿ ಎಂದು ನಾನು ಹೇಳಬಯಸುತ್ತೇನೆ ಅವರು

ಮಾಡಿದ್ದೇ ಅದು ಅದನ್ನೇ ಈಗ ಇವರು ಉಣ್ಣುತ್ತಿದ್ದಾರೆ ಆದರೆ ನಮ್ಮ ಸರ್ಕಾರ ಹಾಗಲ್ಲ ಸಾವಿರಾರು ಹೈಸ್ಕೂಲು, ಕಾಲೇಜುಗಳನ್ನು ಎಲ್ಲ ತಾಲ್ಲೂಕುಗಳಿಗೂ ಕೊಟ್ಟಿದೆ, ವಿರೋಧ ಪಕ್ಷದವರಿಗೂ ಕೊಟ್ಟಿದೆ

ಅಧ್ಯಕ್ಷರು ಪ್ರಕಾಶ್‌ರವರೇ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಬಂದ ಮೇಲೆ ಇದರ ಮೇಲೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಈಗ Question hourನಲ್ಲಿದ್ದೇವೆ ಇದನ್ನು ಹೀಗೆ ಮುಂದುವರೆಸುತ್ತಾ ಹೋದರೆ ಬೇರೆ ಪ್ರಶ್ನೆಗಳೆಲ್ಲಾ lapse ಆಗುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೇ, ನನಗೆ ತಾವು ಆಗಲೇ ಅನುಮತಿಯನ್ನು ಕೊಟ್ಟಿರಿ ನಾನು ತಮ್ಮ ಮೂಲಕ ಪ್ರಕಾಶ್‌ರವರಲ್ಲಿ ವಿನಂತಿ ಮಡಿಕೊಳ್ಳುತ್ತೇನೆ, ಇದು ಕೇವಲ ಪ್ರಾದೇಶಿಕ ಅಸಮಾನತೆಗಷ್ಟೇ ಸೀಮಿತವಾಗುವುದಿಲ್ಲ ತಾವು ಬಹಳ ವಿಚಾರವಂತರು ಒಂದು demoratic setupನಲ್ಲಿ ಸಂಖ್ಯಾಬಲದ ಆಧಾರದಲ್ಲಿ ತಾವು ಸರ್ಕಾರವನ್ನು ನಡೆಸುತ್ತಿದ್ದಿರಿ ಹಿಂದಿದ್ದಂಥ ಸರ್ಕಾರಗಳೂ ಕೂಡ ತಾವು ಆಢಳಿತ ನಡೆಸುವಾಗ ತಮ್ಮ ಪಕ್ಷಕ್ಕೆ ಸೇರಿದವರಿ ಕಡೆಗೆ ಸ್ವಲ್ಪ ಹೆಚ್ಚಿ ಒಲವು ತೋರಿಸತಕ್ಕಂಥಾದ್ದು ಆಗಿರುತ್ತದೆ It is natural ಆದರೆ, indiscrite ಆಗಿ ಯಾವುದೇ ವಿದವಾದಂಥ rationale ಇಲ್ಲದೆ ಚಕ್ರಾಧಿಪತ್ಯ ನಡೆಸಿದಂಥೆ ನಡೆಸಿದರೆ, ನಿಮ್ಮಂಥವರಿಗೂ ಕೂಡ ಅದಕ್ಕೆ ಸಮರ್ಥನೆ ಕೊಡುವಂಥ ಪ್ರಯತ್ನವನ್ನು ಮಾಡಬಹುದೇ? ನಾನು ತಮಗೆ ಇಷ್ಟೇ ಹೇಳುತ್ತೇನೆ ತಾವು ಕೊಟ್ಟಿರುವ ಉತ್ತರವನ್ನೇ ನೋಡಿ ಕೋಲಾರ ಜಿಲ್ಲೆಯಿಂದ 21 ಪ್ರಸ್ತಾವನೆ ಬರುತ್ತದೆ 21 ರಲ್ಲಿ ನಾಲ್ಕನ್ನು ನೀವು ಮಂಜೂರು ಮಾಡುತ್ತೀರಿ 2 ಶಿಡ್ಲಘಟ್ಟಕ್ಕೆ ಕೊಡುತ್ತೀರಿ, 2 ಮುಳಬಾಗಿಲಿಗೆ ಕೊಡುತ್ತಿರಿ incidentally, ಆ ಎರಡೂ ಕ್ಷೇತ್ರಗಳೂ ತಮ್ಮ ಪಕ್ಷಕ್ಕೆ ಸೇರಿದಂಥವು ನಾನು ಹೇಳತಕ್ಕಂಥಾದ್ದು prima facie ಮೇಲು ನೋಟಕ್ಕೆ ಹೇಗೆ ಕಾಣುತ್ತದೆ ನೋಡಿ ನಮಗೆ ಅಧಿಕಾರವಿದೆ, ಸಂಖ್ಯೆ ಉಇದೆ, ನಮ್ಮ ಖುಷಿ ಬಂದ ಹಾಗೆ ನಡೆಸುತ್ತೇವೆ ಅನ್ನತಕ್ಕಂಥಾದ್ದೇ, ಇದಕ್ಕೆ ಉಪನಿರ್ದೇಶಕರುಗಳು ಏಕೆ ಬೇಕು? ಪಾಪ ಅವರನ್ನು victimise ಮಾಡುವುದು ಬೇಡ ಉಪ ನಿರ್ಧೇಶಕರುಗಳೇನು ಮಡುತ್ತಾರೆ? ನಾವು ಹಿಂದಿನಿಂದಲೂ ನೊಡಿಲ್ಲವೇ? ನಾನೇನು ಹೇಳುತ್ತಿದ್ದೇನೆಂದರೆ, the

element of arrogance that has entered ınto the heads of men at the held of attaırs for gıvıng a total dısregard to the value ıs goınt to rebound Hısotry repeates ıtself, wıth vengeance Absolutely no problem People thınk they are goıng to be here eternelly Thıs ıs what every other peroson thought when he sat there ಇದು ಯಾರ ಹಣ? ಸಾರ್ವಜನಿಕರ ಹಣವನ್ನು ಕೊಡುವಾಗ ಚಕ್ರಾದಿಪತ್ಯವನ್ನು ನಡೆಸುವಿರಾ?

ಅಧ್ಯಕ್ಷರು ರಮೇಶ್ ಕುಮಾರ್‌ರವರು values ಅದು ಇದು ಎಂದು ಹೇಳಿದರಲ್ಲ ಯಾರ ಹಣ ಎಂದು ಕೇಳಿದರಲ್ಲ ಯಾರ ಹಣ ಎಂದರೆ ಅಧಿಕಾರಿಗಳು, ಜನ ಪ್ರತಿನಿಧಿಗಳು, ಯಾರು ಜೋರಾಗಿದ್ದಾರೆ ಅವರು ತಿಂದುಕೊಳ್ಳವುದಕ್ಕೇ ಅದು ಇರುವುದು ಸ್ವಾಮಿ

ಶ್ರೀ ರಮೇಶ್‌ಕುಮಾರ್ ಕೆಲವು ನಿಮಿಷಗಳ ಹಿಂದೆ ತಾವೇ ಹೇಳಿದಂತೆ ಸರ್ಕಾರವನ್ನು ಶಾಸನಸಭೆಯನ್ನು ಗರಡಿ ಮನೆಯನ್ನಾಗಿ ಮಾಡೋಣ ಯಾರು ಗಟ್ಟಿಯಾಗಿರುತ್ತಾರೋ ಅವರು ತೆಗೆದುಕೊಂಡು ಹೋಗಲಿ

ಅಧ್ಯಕ್ಷರು No, no, no, what ıs happenıng means that ıs happehıng ಅದಕ್ಕೆ ರಾರು ಕಾರಣ? ನಾವೇ ಕಾರಣ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅಧ್ಯಕ್ಷರಾದ ನೀವೇ ಈ ರೀತಿ ಹೇಳಿದರೆ ಅದಕ್ಕೆ ಅರ್ಥವೇನು?

ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರು ಈ ಮಾತನ್ನು ಹೇಳುವುದಾದರೆ ಈ ಸದನ ಬೇಕಾಗಿಲ್ಲ

ಅಧ್ಯಕ್ಷರು ನಮ್ಮ ಮಾತನ್ನು ಅರ್ಥ ಮಾಡಿಕೊಳ್ಳಿರಿ Moral Standards ಇಳಿದು ಹೋಗಿರುವುದಕ್ಕೆ ಕಳ್ಳಕಾಕರು ಜಾಸ್ತಿಯಾಗಿರುವುದಕ್ಕೆ ನಾವೇ ಕರಣ ಅದು ನನ್ನ ಅಭಿಪ್ರಾಯ ಅದನ್ನು ಹೇಳಿದ್ದೇನೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ· ತಿಂದುಕೊಂಡು ಹೋಗುತ್ತಾರೆ ಎಂದರೆ ನಾವು ಇಲ್ಲೇನೂ ಮಾತನಾಡುವ ಅವಶ್ಯಕತೆ ಇಲ್ಲ

ಶ್ರೀ ವಾಟಾಳ್ ನಾಗರಾಜ್ ನನ್ನ ತೀವ್ರವಾದಂಥ ಪ್ರತಿಭಟನೆಯಿದೆ ಈ ಮಾತಿಗೆ ಈ ಮಾತನ್ನು ತಾವು ಇಲ್ಲಿ ಹೇಳಬಾರದು

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನೀವು ಈ ರೀತಿ ಹೇಳಿದರೆ ನಾವು ಇಲ್ಲ ಏನೂ ಮಾತನಾಡುವ ಹಾಗೆಯೇ ಇಲ್ಲ ಎಲ್ಲ ಕುಲಗೆಟ್ಟು ಹೋಗಿಬಿಟ್ಟಿದೆ ಎಂದರೆ ಅರ್ಥವೇನು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ತಾವು ಈ ರಿತಿ ಹೇಳಿದರೆ ಸಮಾಜದ ಗತಿಯೇನು?

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ನೀವೇ ರೀತಿ ಕಾಮೆಂಟ್ ಅನ್ನು ಪಾಸ್ ಮಾಡಿದರೆ ಹೇಗೆ? ಬಹಳ ಹಗುರವಾಗಿ ಈ ಸಭೆಯನ್ನು ಪರಿಗಣಿಸಿದ ಹಾಗಾಗುತ್ತದೆ

(ಗೊಂದಲ)

ಅಧ್ಯಕ್ಷರು ಇದೆಲ್ಲವನ್ನೂ ಬೇಕೆಂದೇನೂ ಹೇಳುತ್ತಿಲ್ಲ ರಾಜಕೀಯ ವ್ಯವಸ್ಥೆ ಹಾಗೆ ಆಗಿಬಿಟ್ಟಿದೆ ಎನ್ನುವುದನ್ನು ಹೇಳುತ್ತಿದ್ದೇನೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಎಲ್ಲ ಕುಲಗೆಟ್ಟು ಹೋಗಿದೆ ಎಂದರೆ ನಾವು ಸುಮ್ಮನೆ ಕುಳಿತುಕೊಳ್ಳಬೇಕೆ

ಶ್ರೀ ವಾಟಾಳ್ ನಾಗರಾಜ್ ಹಾಗಿದ್ದರೆ ಈ ಸದನ ಏಕಿರಬೇಕು?

ಅಧ್ಯಕ್ಷರು ಈಗ ಪ್ರತಿ ಜನರೂ, ಪ್ರತಿ ಪಾರ್ಟಿ, ಪ್ರತಿಯೊಬ್ಬರೂ ಆತ್ಮ ಶೋಧನೆ ಮಾಡಿಕೊಳ್ಳಬೇಕು

ಶ್ರೀ ವಾಟಾಳ್ ನಾಗರಾಜ್ ಈ ಸದನದಲ್ಲಿ ಏನು ನಡೆಯುತ್ತಿದೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅಸಮತೋಲನ ಆಗಿರತಕ್ಕಂಥಾದ್ದು ಪ್ರಾಮಾಣಿಕವಾಗಿ ಸತ್ಯ ಪ್ರಕಾಶ್‌ರವರೇ ತಾವು ಆಗಲೇ ಉತ್ತರ ಹೇಳುವಾಗ ಸಿಟ್ಟು ಮಾಡಿಕೊಂಡಿರಿ ಇವತ್ತು ತಾವು ಸಿಟ್ಟು ಮಾಡಿಕೊಳ್ಳಬಾರದು ಇಂದು ತಮ್ಮ 67ನೇ ಜನ್ಮ ದಿನಾಚರಣೆ ನಿಮಗೆ ನಾನು ಶುಭವನ್ನು ಕೋರುತ್ತೇನೆ ನಿವು ಶತ ಮಾನೋತ್ಸವವನ್ನು ಆಚರಿಸಬೇಕು ನಾನು ಬಹಳ ಸಂತೋಷವನ್ನು ಪಡುತ್ತೇನೆ ಇವತ್ತು ನೀವು ಹೆಚ್ಚು ಲವಲವಿಕೆಯಿಂದ ಉತ್ತರ ಕೊಡ ಬೇಕಾಗಿತ್ತು ಯಾವುದೋ ಮಂತ್ರಿಗಳು ಹೇಳಬೇಕಾದಂಥ ಉತ್ತರಕ್ಕೆ ನೀವೇಕೆ ತಲೆಕೆಡಿಸಿಕೊಳ್ಳಬೇಕು ಆದರೂ, ಇವತ್ತು ನೀವು ಶಾಂತರೀತಿಯಿಂದ ಉತ್ತರ ಕೊಡಬೇಕಾಗಿತ್ತು ಇವತ್ತು ತಮ್ಮ ಜನ್ಮದಿನ ಎಂದು ಹೊರಗಡೆ ನೋಡಿದೆ ಬಹಳ ಸಂತೋಷ ನಾನೇನು ಹೇಳುತ್ತೇನೆ ಎಂದರೆ ಅನೇಕ ಕ್ಷೇತ್ರಗಳಲ್ಲಿ ಪಕ್ಷ ರಹಿತವಾಗಿ, ಎಂದರೆ ಸಮ್ಮಿಶ್ರ ಸರ್ಕಾರಕ್ಕೆ ಬೆಂಬಲ ಕೊಡುತ್ತಿರುವಂಥ ಶಾಸಕರ ಕ್ಷೇತ್ರಗಳಿಗೂ ಅಸಮತೋಲನವಾಗಿದೆ ಆದ್ದರಿಂದ ಅಧ್ಯಕ್ಷರೇ, ನಿಮ್ಮ ಅಧ್ಯಕ್ಷತೆಯಲ್ಲೇ ನಿಮ್ಮ ಕೊಠಡಿಯಲ್ಲಿ ಎಲ್ಲ ಕಡತಗಳನ್ನು ತರಿಸಿ ಯಾರ್‍ಯಾರಿಗೆ ಎಷ್ಟೆಷ್ಟು ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ, ಯಾರ್‍ಯಾರಿಗೆ ಎಷ್ಟೆಷ್ಟು ಕಾಲೇಜುಗಳನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಕಡತವನ್ನು ತರಿಸಿ ನೋಡಿ

ಅಧ್ಯಕ್ಷರು ಅರ್ದ ಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನಲ್ಲ

ಶ್ರೀ ವಾಟಾಳ್ ನಾಗರಾಜ್ ಸುಮ್ಮನೆ ಇವರು ಸಾವಿರ ಪ್ರೌಢ ಶಾಲೆಗಳನ್ನು ಕೊಟ್ಟಿದ್ಧೇವೆ ಎಂದರೆ ಮುಗಿಯುವುದಿಲ್ಲ ನಾವೆಲ್ಲಿಗೆ ಹೋಗಬೇಕು? ಪಕ್ಕದ ಕ್ಷೇತ್ರಕ್ಕೆ ನೀವು ಶಾಲೆಗಳನ್ನು ಕೊಟ್ಟು, ನನ್ನ ಕ್ಷೇತ್ರಕ್ಕೆ ಶಾಲೆ ಕೊಡಲಿಲ್ಲವೆಂದರೆ ನಮ್ಮ ಜನಗಳ ಗತಿಯೇನು? ಈ ರಾಜ್ಯದ ಗತಿ ಯೇನು? ಇಲ್ಲಿ ನಾವು ವಂಚನೆ ಮಾಡಬಾರದು ಯಾರೇ ಅಧಿಕಾರದಲ್ಲಿ ರಬಹುದು, ಯಾವುದೇ ಪಕ್ಷ ಅಧಿಕಾರದಲ್ಲಿರಬಹುದು ಆದರೆ ಈ ವಿಷಯದಲ್ಲಿ ಯಾರೂ ವಂಚನೆ ಮಾಡಬಾರದು

ಅಧ್ಯಕ್ಷರು ಆಯಿತು, ಮುಗಿಸಿ, ಈಗಾಗಲೇ 11 ಗಂಟೆಯಾಯಿತು ಇದರ ಬಗ್ಗೆ ಇನ್ನೊಂದು ದಿವಸ ಚರ್ಚೆಗೆ ಅವಕಾಶ ಕೊಡೋಣ ಎಂದು ನಾನು ಹೇಳುತ್ತಿದ್ದೇನೆ

ಶ್ರೀ ಧರಂ ಸಿಂಗ್ ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್ ರವರು, ರಾಜ್ಯದ ಗೃಹ ಸಚಿವರಿಗೆ ಇಂದು 67ನೇ ಜನ್ಮ ದಿನ ಎನ್ನುವ ಮಾತನ್ನು ಹೇಳಿದರು ಹಿಂದೆ ಎಸ್ ಎಂ ಕೃಷ್ಣಾರವರು ತಮ್ಮ ಪೀಠದಲ್ಲಿ ಕುಳಿತಿದ್ದರು ಸದನ ನಡೆಯತಕ್ಕಂಥ ಕಾಲದಲ್ಲಿ ಯಾರ್‍ಯಾರ ಜನ್ಮ ದಿನ ಬರುತ್ತದೆ, ಆಗ ಅವರೇ ಸ್ವತಃ ಬಂದು ಗ್ರೀಟ್ ಮಾಡುತ್ತಿದ್ದರು ಅದನ್ನು ಡೆಕ್ಲೇರ್ ಮಾಡುತ್ತಿದ್ದರು ಅದನ್ನು ಮುಂದುವರೆಸಿಕೊಂಡು ಹೋಗಬೇಕು ಇವತ್ತು ರಾಜ್ಯದ ಗೃಹಸಚಿವರ ಜನ್ಮದಿನ ಎಂದು ವಾಟಾಳ್ ನಾಗರಾಜ್ ರವರು ಹೇಳಿದ ಮೇಲೆ ನಮಗೆ ಗೊತ್ತಾಯಿತು ಆದರೆ, ನಾವು ಅವರನ್ನು ನಕ್ಸಲೈಟ್ ಬಗ್ಗೆ ತರಾಟೆಗೆ ತೆಗೆದುಕೊಂಡಿದ್ದೆವು ಸದನದ ಯಾವ್ಯಾವ ಸದಸ್ಯರ ಜನ್ಮ ದಿನ ಯಾವಾಗ ಬರುತ್ತದೆ ಎಂದು ತಾವು ಬಯೋ ಡೇಟಾ ನೋಡಿ ಅದನ್ನು ಸದನದಲ್ಲಿ ಡಿಕ್ಲೇರ್ ಮಾಡಬೇಕು ಹಾಗೆಯೇ, ಕಾರ್ಯದರ್ಶಿಯವರು ಮತ್ತು ನಿಮ್ಮ ಸಿಬ್ಬಂದಿಯವರು ಈ ಬಗ್ಗೆ ನಿಮಗೆ ನೆನಪು ಮಾಡಿಕೊಡಬೇಕು ಸದನ ಸೇರಿದ ತಕ್ಷಣ ಅಭಿನಂದ ನೆಗಳನ್ನು ಸಲ್ಲಿಸತಕ್ಕಂಥಾದ್ದು ತಮ್ಮ ಕರ್ತವ್ಯ, ಅದನ್ನು ಈಗ ಮಾಡಲಿಲ್ಲ ಮುಂದೆ ಮಾಡಿ parliament ನಲ್ಲೂ ಕೂಡ ಆ ಪದ್ಧತಿ ಇದೆ ಅದನ್ನು ನೀವು ಮಾಡಬೇಕು

ಅಧ್ಯಕ್ಷರು ಆಯಿತು, ಇನ್ನು ಮೇಲೆ ಅದನ್ನು ಮಾಡೋಣ

ಶ್ರೀ ಬಸವರಾಜು ರಾಯರೆಡ್ಡಿ ದಯಮಾಡಿ ಆ ಸಂಪ್ರದಾಯವನ್ನು ಹಾಕಿಕೊಳ್ಳಿ ಅವರಿಗೆ ಜನ್ಮದಿನದ ಶುಭಾಷಯಗಳನ್ನು ನಾವೆಲ್ಲರೂ ಹೇಳೋಣ

ಶ್ರೀ ಎಂ ಪಿ ಪ್ರಕಾಶ್ Thank You sir

ಅಧ್ಯಕ್ಷರು ಹಿರಿಯ ಸದಸ್ಯರಾದಂಥ ವಾಟಾಳ್ ನಗರಾಜ್‌ರವರು ಈ ಬಗ್ಗೆ ಹೇಳಿದ ಮೇಲೆ ನಮಗೆಲ್ಲ ಗೊತ್ತಾಗಿದೆ

ಶ್ರೀ ಎನ್ ಧರ್ಮ ಸಿಂಗ್ ತಮ್ಮ ಸಿಬ್ಬಂದಿಯವರು ಇದರ ಬಗ್ಗೆ ತಮಗೆ ಹೇಳಬೇಕು

ಅಧ್ಯಕ್ಷರು ಈ ಹಿಂದೆ ಏನು ಸಂಪ್ರದಾಯವಿದೆ, ನಮ್ಮ ಸಿಬ್ಬಂದಿ ಗಳೇನು ಮಾಡುತ್ತಿಲ್ಲ, ಅವರು ಅದರ ಬಗ್ಗೆ ನಮ್ಮ ಗಮನಕ್ಕೆ ತಂದಿಲ್ಲ

ಶ್ರೀ ಎನ್ ಧರ್ಮಸಿಂಗ್ whi is who ಪುಸ್ತಕವನ್ನು ನೋಡಿ ಹೇಳಬೇಕಾಗುತ್ತದೆ

ಶ್ರೀ ಬಸವರಾಜರಾಯ ರೆಡ್ಡಿ ಲೋಕಸಭೆಯಲ್ಲಿ ಅಧ್ಯಕ್ಷರು ಅಂದು ಏನಾದರೂ ಸದನ ನಡೆಯುತ್ತಿದ್ದು ಸದಸ್ಯರ ಜನ್ಮ ದಿವಸವೇನಾದರೂ ಇದ್ದರೆ ಮೊದಲೇ ಶುಭಾಷಯವನ್ನು ಕೋರುತ್ತಿದ್ದರು ಅದು ತಮಗೂ ಗೊತ್ತಿದೆ ಆದ್ದರಿಂದ ತಾವು ದಯಮಾಡಿ ಸದನದ ಪರವಾಗಿ ಅವರಿಗೆ ಶುಭಾಷಯಗಳನ್ನು ಕೋರಬೇಕೆಂದು ಹೇಳುತ್ತೇನೆ

ಅಧ್ಯಕ್ಷರು ಈ ಸಂದರ್ಭದಲ್ಲಿ ಹಿರಿಯ ಸಚಿವರಾದ ಮಾನ್ಯ ಎಂ ಪಿ ಪ್ರಕಾಶ್‌ರವರಿಗೆ 67ನೇ ವರ್ಷದ ಹುಟ್ಟುಹಬ್ಬದ ಎಲ್ಲಾ ಸದಸ್ಯರ ಪರವಾಗಿ ಕೋರುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಪ್ರಕಾಶ್‌ರವರ ಆರೋಗ್ಯ ಚೆನ್ನಾಗಿರಲಿ ಅವರು ಸುಖವಾಗಿರಲಿ, ಅವರು ನೂರು ವರ್ಷ ಈ ಸದನಕ್ಕೆ ಬರಬೇಕು ಅವರು ಇವತ್ತು ಲವಲವಿಕೆಯಿಂದ ಇರಬೇಕು ಆದರೆ ಇವತ್ತು ನಗುವುದನ್ನು ಬಿಟ್ಟು ಏಕೆ ಕೋಪದಲ್ಲಿ ಬಂದರೋ ಎಂಬ ಬಗ್ಗೆ ನನಗೆ ಅನುಮಾನ ಬಂತು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ವಯಸ್ಸು ಎಲ್ಲರಿಗೂ ಆಗುತ್ತದೆ ಇದಕ್ಕೆ ಸಂಬಂದಿಸಿದಂತೆ ಓಷೋರವರ ಮಾತುಗಳನ್ನು ಹೇಳಿದರೆ ಅಸಂಬದ್ಧವಾಗುತ್ತದೆಂದು ನಾನು ಹೇಳುವುದಿಲ್ಲ ಓಷೋ ಬಹಳ ಸ್ಪಷ್ಟವಾಗಿ ಈ ಜನ್ಮ ದಿನಾಚರಣೆ ಮಾಡಿಕೊಳ್ಳುವುದೆಂದರೆ ಸಾವಿಗೆ ಒಂದು ವರ್ಷ ಹತ್ತಿರ ಆದಂತೆ ಎಂದು ಹೇಳಿದ್ದಾರೆ ನನ್ನ ಜನ್ಮ ದಿನದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು, ವಾಟಾಳ್ ನಾಗರಾಜ್‌ರವರು ಇತರರು ಅಭಿನಂದನೆಯನ್ನು ಹೇಳಿದ್ದಕ್ಕಾಗಿ ನಾನು ಅವರಿಗೆಲ್ಲಾ ಕೃತಜ್ಞನಾಗಿದ್ದೇನೆ ತಾವು ಹೇಳಿದಂತೆ ಅಸಮಾನತೆ ಮತ್ತೊಂದು ಎಲ್ಲದರೆ ಬಗ್ಗೆ ಚರ್ಚೆಯಾಗಲಿ ಅದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ ಇದಕ್ಕೆ ಸಂಬಂಧಿಸಿದಂತೆ 315 ಪ್ರಸ್ತಾವಗಳು ಆರ್ಥಿಕ ಇಲಾಕೆಯಲ್ಲಿವೆ ಪಿ ಯು ಸಿ ಗೆ ಸಂಬಂದಿಸಿದಂತೆ 120 ಪ್ರಸ್ತಾವನೆಗಳು ಆರ್ಥಿಕ ಇಲಾಖೆಯಲ್ಲಿದೆ 101ನ್ನು ಈ ವರ್ಷದಲ್ಲಿ ಕೊಟ್ಟಿದ್ದೇವೆ ಇನ್ನೂ 120 ಆರ್ಥಿಕ ಇಲಾಖೆಯಲ್ಲಿದೆ ಮಾನ್ಯ ಶಿಕ್ಷಣ ಸಚಿವರು ಬಂದಾಗ ಇರ ಬಗ್ಗೆ ಕೂಲಂಕುಷವಾಗಿ ಚರ್ಚೆಯನ್ನು ಮಾಡಲು ತಯಾರಿದ್ದೇವೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಶಿಕ್ಷಣ ಸಚಿವರು ಈ ಲಿಸ್ಟನ್ನು ನಾನು ಮಾಡಿಲ್ಲ, ಮಾನ್ಯ ರೇವಣ್ಣನವರು ಮಾಡಿದ್ದಾರೆ, ಬೇರೆಯವರು ಮಾಡಿದ್ದಾರೆಂದು ಹೇಳುತ್ತಾರೆ

ಅಧ್ಯಕ್ಷರು ಪ್ರಾಧಮಿಕ ಶಿಕ್ಷಣ ಸಚಿವರು ಬಂದಮೇಲೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಈಗ ಮುಂದಿನ ಪ್ರಶ್ನೆಗೆ ಹೋಗೋಣ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಗೃಹ ಮಂತ್ರಿಯವರನ್ನು ಕೇಳಿದರೂ ಇದೇ ಉತ್ತರ ಬರುತ್ತದೆ

ಅಧ್ಯಕ್ಷರು ಪದ್ಮನಾಭ ಕೊರಾರಿಯವರೆ ತಮ್ಮ ಪ್ರಶ್ನೆ ಕೇಳಿ

ಶ್ರೀ ಜಿ ಟಿ ದೇವೇಗೌಡ ನಿಮ್ಮ ರಾಮು ಲಿಂಗಾರೆಡ್ಡಿಯುವರು ಸಚಿವರಾಗಿದ್ದಾಗ ಎಷ್ಟು ಕೊಟ್ಟಿದ್ದಾರೆ ಅದನ್ನೂ ತರಿಸಿ ನೀವು ಎಷ್ಟಷ್ಟು ಕೊಟ್ಟಿದ್ದಿರಿ, ಸಮಾನತೆ ಎಷ್ಟು ಮಾಡಿದ್ದಿರಿ ನೋಡೋಣ

ಅಧ್ಯಕ್ಷರು ಆಯಿತು, ಕುಳಿತುಕೊಳ್ಳಿ ಈಗ ಧೃವನಾರಾಯಣ್‌ರವರು ಪ್ರಶ್ನೆಯನ್ನು ಕೇಳುತ್ತಿದ್ದಾರೆ

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರಸ್‌ನ ಸದಸ್ಯರಾದ ಎಂ ಟಿ ಬಿ ನಾಗರಾಜು, ಡಾ ಶರಣ ಪ್ರಕಾಶ ರುದ್ರಪ್ಪ ಪಟೀಲ್‌ರವರು ಭಾವಿಗೆ ಬಂದು ಧರಣಿ ಹೂಡಿ ಮಾತನಾಡುತ್ತಿದ್ದರು)

ಅಧ್ಯಕ್ಷರು ಆಯಿತು, ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ ಸಂಬಂಧ ಪಟ್ಟ ಸಚಿವರು ಇಲ್ಲ ಆದ್ದರಿಂದ ದಯಮಾಡಿ ನಿಮ್ಮ ಸ್ಥಾನಗಳಿಗೆ ತೆರಳಿ ಏಕೆ ಈ ರೀತಿ ಮಾಡುತ್ತೀರಿ

(ಬಾವಿಯಲ್ಲಿ ನಿಂತುಕೊಂಡಿ ಮಾತನಾಡುತ್ತಿದ್ದರು)

ಅಧ್ಯಕ್ಷರು ನಾನು ಅವರನ್ನು ಕರೆದಿದ್ದೇನೆ ಚಚೆಗೆ ಅವಕಾಶ ಕೊಡುತ್ತೇನೆ ತಾವು ಏಕೆ ಈ ರಿತಿ ಮಾಡುತ್ತೀರಿ? ನೀವು ಏನು ಮಾತನಾಡಿ ದರೂ ಕಡತಕ್ಕೆ ಹೋಗುವುದಿಲ್ಲ ಅವರು ಹೀಗೆ ಮಾತನಾಡಿದ್ದು ಯಾವುದೂ ಪ್ರೊಸೀಡಿಂಗ್ಸ್‌ಗೆ ಹೋಗಬಾರದು

(ಮಾನ್ಯ ಸದಸ್ಯರುಗಳು ಬಾವಿಯಲ್ಲಿ ನಿಂತುಕೊಂಡು ಮಾತ ನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು ಧ್ರುವನಾರಾಯಣ್‌ರವರು ನಿಮ್ಮ ಪ್ರಶ್ನೆಯನ್ನು ಕೇಳಿ

(ಗೊಂದಲ)

ಅಧ್ಯಕ್ಷರು ನಿಮ್ಮ ಸ್ಥಾನಗಳಿಗೆ ಹೋಗಿ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಿರಿ ಅದರಂತೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ ಆದ್ದರಿಂದ ನೀವು ನಿಮ್ಮ ಸ್ಥಾನಗಳಿಗೆ ನಡೆಯಿರಿ

ಶ್ರೀ ಅಪ್ಪಾಜಿ ಎಸ್ ನಾಡಗೌಡರ್ ಮಾನ್ಯ ಅಧ್ಯಕ್ಷರೆ, ಹಿಮದಿನ ಅಧಿವೇಶನದಲ್ಲಿ ಕೂಡ ಇದೇರಿತಿಯಾದಂಥ ಅವಕಾಶವನ್ನು ಕೊಟ್ಟಿದ್ದಿರಿ ಚರ್ಚೆ ಮಾಡಿ ಅವರಿಗೆ ಅಸಮಾನತೆ ಇದ್ದರೆ ಸರಿಪಡಿಸುತ್ತೇವೆಂದು ಸರ್ಕಾರದಿಂದ ಹೇಳಿದ್ದರು ಆದರೆ ಇವತ್ತಿನವರೆಗೆ ಸರಿಪಡಿಸಲಿಲ್ಲ ತಾವು ಸಂಬಂದ ಪಟ್ಟ ಸಚಿವರು ಇಲ್ಲವೆಂದು ಹೇಳುತ್ತೀರಿ ಇದನ್ನು ಸಂಬಂಧ ಪಟ್ಟ ಮಂತ್ರಿಯವರು ಮಾತ್ರ ಕೊಡತಕ್ಕದ್ದಲ್ಲ It has to be a cabinet decision ಇದು ಸರ್ಕಾರದ ನಿಲುವು

ಅಧ್ಯಕ್ಷರು ದಯಮಾಡಿ ನಿಮ್ಮ ಸ್ಥಾನಗಳಿಗೆ ಹೋಗಿ ಪ್ರಾಥಮಿಕ ಶಿಕ್ಷಣ ಸಚಿವರು ಬಂದಾಗ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಹೇಳಿದ್ದೇನೆ ಆದರೂ ನೀವು ಈ ರೀತಿ ಮಾಡಿದರೆ ಹೇಗೆ? ನಿಮ್ಮ ಸ್ಥಾನಗಳಿಗೆ ನಡೆಯಿರಿ

(ಗೊಂದಲ)

ಪ್ರಾಥಮಿಕ ಶಿಕ್ಷಣ ಸಚಿವರು ಇಲ್ಲಿ ಇಲ್ಲ ಅವರು ಬಂದ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆ ನಿವು ವೆಲ್‌ಗೆ ಬಂದಿರುವುದೇ ತಪ್ಪು ನಿಮಗೆ ರಕ್ಷಣೆಯನ್ನು ಹೇಗೆ ಕೊಡಲು ಸಾಧ್ಯ? ಚಚೆಗೆ ಅವಕಾಶ ಕೊಡುತ್ತೇನೆಂದು ನಾನು ಒಪ್ಪಿದ್ದೇನೆ ಪ್ರಾಥಮಿಕ ಶಿಕ್ಷಣ ಸಚಿವರು ಬರಲಿ ಆಗ ನಿಮ್ಮ ವಿಚಾರಗಳೇನೇ ಇದ್ದರೂ ಹೇಳಿ ದಯಮಾಡಿ ನಿಮ್ಮ ಸ್ಥಾನಗಳಿಗೆ ನಡೆಯಿರಿ

(ಈ ಹಂತದಲ್ಲಿ ಸದಸ್ಯರಾದ ಶ್ರೀ ಕೆ ಅಭಯಚಂದ್ರ, ಶ್ರೀ ಅಪ್ಪಾಜಿ ಎಸ್ ನಾಡಗೌಡರ್, ಶ್ರೀ ಹಂಪನಗೌಡ ಬಾದರ್ಲಿ, ಶ್ರೀ ಶಿವಶಂಕರ ರೆಡ್ಡಿ, ಎನ್ ಹೆಚ್, ಶ್ರೀ ಕೆ ವೆಂಕಟೇಶ್, ಶ್ರೀ ಬಿ ಆರ್ ಪಾಟೀಲ್ ಮುಂತಾದವರು ಬಾವಿಗೆ ಬಂದರು)

ಅಧ್ಯಕ್ಷರು ಈಗ ಎಲ್ಲಾ ಪ್ರಶ್ನೆಗಳು ಹೋದವಲ್ಲಾ? ಅವರನ್ನು ಕರೆದೆ ಅವರು ಪ್ರಶ್ನೆ ಕೇಳಲು ನಿಂತಿದ್ದಾರೆ

(ಗೊಂದಲ)

ಇದು ಸರಿಯಲ್ಲ, ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಪ್ರಾಥಮಿಕ ಶಿಕ್ಷಣ ಸಚಿವರು ಬರಲಿ ಅವರು ಬಂದ ಮೇಲೆ ನಿಮ್ಮ ವಿಚಾರಗಳನ್ನು ಹೇಳಿ ಎಂದು ಹೇಳಿದರೂ ನೀವು ವೆಲ್‌ಗೆ ಬರುವುದು ಸರಿಯಲ್ಲ

ಶ್ರೀ ವಾಟಾಳ್ ನಾಗರಾಜ್ ಅವರಿಗೆ ಅನ್ಯಾಯವಾಗಿರುವುದರಿಂದ ಈ ರೀತಿ ಪ್ರತಿಭಟನೆ ಮಾಡುತ್ತಿದ್ದಾರೆ ಅದಕ್ಕೆ ನಾನೂ ಕೂಡ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ ಇಲ್ಲಿ ನಿಜವಾಗಿಯೂ ಅನ್ಯಾಯವಾಗಿದೆ

ಶ್ರೀ ಎನ್ ಧರ್ಮಸಿಂಗ್ ಇದರ ಬಗ್ಗೆ ಬಹಳಷ್ಟು ಪ್ರಸ್ತಾಪವನ್ನು ನಾವು ಮಾಡಿದ್ದೇವೆ ಒಟ್ಟಾರೆ ಸರ್ಕಾರ ಎಷ್ಟು ಹೈಸ್ಕೂಲು, ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದಾರೆ

ಅಧ್ಯಕ್ಷರು ಆದ್ದರಿಂದ ಪ್ರಾಥಮಿಕ ಶಿಕ್ಷಣ ಸಚಿವರು ಬರಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

ಶ್ರೀ ಎನ್ ಧರ್ಮಸಿಂಗ್ ಇದು ಸಮಾಧಾನವಾಗುವುದಿಲ್ಲ ಆದ್ದರಿಂದ ಈಗ ಅರ್ಧ ಗಂಟೆ ಸದನವನ್ನು ಮುಂದೂಡಿ ತಮ್ಮ ಕೊಠಡಿಯಲ್ಲಿ ಕರೆಸಿ ಸಮಾಲೋಚನೆ ಮಾಡಿ ನಾವೆಲ್ಲಾ ಮಾತನಾಡುತ್ತೇವೆ ಇಲ್ಲದಿದ್ದರೆ ಸದನ ನಡೆಸಲು ಅವರು ಬಿಡುವುದಿಲ್ಲ ಆದ್ದರಿಂದ ಸದನವನ್ನು ಅರ್ಧಗಂಟೆ ಮುಂದೂಡಿ ನಿಮ್ಮ ಕೊಠಡಿಯಲ್ಲಿ ಕರೆಸಿ ಮಾತನಾಡಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಸಭೆಯನ್ನು ಅರ್ದ ಗಂಟೆ ಮುಂದಕ್ಕೆ ಹಾಕಿ

(ಬಾವಿಯಲ್ಲಿದ್ದ ಸದಸ್ಯರೆಲ್ಲಾ ದಿಕ್ಕಾರ ಕೂಗುತ್ತಿದ್ದರು)

ಅಧ್ಯಕ್ಷರು ಈ ರೀತಿ ಕೂಗುವುದೇ? ನಿಮಗೆ ಜವಾಬ್ದಾರಿ ಇಲ್ಲವೆ? ಸದನದಲ್ಲಿ ಈ ರೀತಿ ಮಾಡುವುದು ಸರಿಯೇ? ನನ್ನ ಮಾತನ್ನು ಕೇಳುವುದಿಲ್ಲವೇ? ಈಗ ಸದನವನ್ನು ಅರ್ಧಗಂಟೆಗಳ ಕಾಲ ಮುಂದೂಡ ಲಾಗಿದೆ

(ಸದನವನ್ನು ಅರ್ದಗಂಟೆಯ ಕಾಲ ಮುಂದೂಡಲಾಯಿತು)

ಸದನವು ಪುನಃ ಮಧ್ಯಾಹ್ನ 12 ಗಂಟೆ 27 ನಿಮಿಷಕ್ಕೆ ಆರಂಭ ಗೊಂಡಿತು ಅಧ್ಯಕ್ಷರು ಪೀಠದಲ್ಲಿದ್ದರು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಕ್ಷೇತ್ರಗಳ ತಾರತಮ್ಯದ ಬಗ್ಗೆ ಈಗಾಗಲೇ ಅನೇಕ ಸಲ ಧರಣಿಯಾಯಿತು ತಮ್ಮ ಕಾರ್ಯಾಲಯದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ ಅನೇಕ ಕ್ಷೇತ್ರಗಳಲ್ಲಿ ಏನು ಅನ್ಯಾಯವಾಗಿರುವುದನ್ನು ಸರಿಪಡಿಸುವ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ತಮ್ಮ ಮೂಲಕ ನಾವು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇವೆ

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಸವರಾಜರಾಯರೆಡ್ಡಿಯವರು ಇರ ಬಗ್ಗೆ ಕೇಳಿದರು ಅದೇ ರೀತಿ ನಾನು ಮತ್ತು ಖರ್ಗೆ, ರಮೇಶ್‌ಕುಮಾರ್, ಕೊನೆಗೆ ಹಿಂದಿನ ಸಾಲಿನಲ್ಲಿರುವ ಶಾಸಕರುಗಳು ಮಾತನಾಡಿ, ನಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅನ್ಯಾಯ ವಾಗಿದೆ ಎಂದು ಪ್ರತಿಭಟನೆ ಮಾಡಿದ್ದಾರೆ ತಾವು ಆ ಕುರಿತಾದ ಪ್ರಶ್ನೆಯನ್ನು ತಡೆ ಹಿಡಿದಿದ್ದಿರಿ ಅವರು ಹೊರದೇಶಕ್ಕೆ ಹೋಗಿದ್ದಾರೆ ಅವರು ಬಂದ ನಂತರ ಚರ್ಚೆಯಾಗಬೇಕೆಂಬುದು ಒಂದು ವಿಷಯ ಮತ್ತೊಂದು ವಿಚಾರ ವೇನೆಂದರೆ, ಇವತ್ತು ಏನು ಅನ್ಯಾಯವಾಗಿದೆ, ಮಾನ್ಯ ಮುಖ್ಯ ಮಂತ್ರಿಗಳು

ಅದನ್ನು ಸರಿಪಡಿಸಬೇಕು ಕಡತವನ್ನು ತರಿಸಬೇಕು ಖುದ್ದಾಗಿ ನೋಡಬೇಕು ಇದೊಂದೇ ಇಲಾಖೆಯಲ್ಲಲ್ಲ, ಬೇರೆ ಇಲಾಖೆಯಲ್ಲೂ ಕೂಡ ಈ ತರಹದ ತಾರತಮ್ಯಗಳು ನಡೆಯುತ್ತಿದೆ ವಿಶೇಷವಾಗಿ, ಕರ್ನಾಟಕ, ರಾಜ್ಯದಲ್ಲಿರುವ ಎಲ್ಲಾ ಭಾಗಗಳಿಗೂ ಎಲ್ಲಾ ಕ್ಷೇತ್ರಗಳಿಗೂ ಸರಿಸಮಾನವಾದ ಕಾಲೇಜು ಗಳಾಗಲೀ, ಜೂನಿಯರ್ ಕಾಲೇಜುಗಳಾಗಲೀ, ಹೈಸ್ಕೂಲುಗಳಾಗಲೀ, ಹಾಸ್ಟೆಲ್‌ಗಳಾಗಲೀ, ಕೊಡ ಬೇಕೆಂದು ಇವತ್ತು ಅವರು ಏನು ಪ್ರತಿಭಟನೆ ಮಾಡಿದ್ದಾರೆ, ತಮ್ಮ ಮುಂದೆ ಇದರ ಬಗ್ಗೆ ಸಮಗ್ರವಾಗಿ ಚಚೆಯಾಗುತ್ತಿದೆ ಈಗ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ ನಾವೆಲ್ಲರೂ ಹೇಳಿದ್ದೇವೆ ಮುಖ್ಯಮಂತ್ರಿಗಳು ಖುದ್ದಾಗಿ ಬಂದು ಇದರ ಬಗ್ಗೆ ಉತ್ತರ ಕೊಡುತ್ತಾರೆಂದು ಹೇಳಿದ್ದೇವೆ ಅದಕ್ಕೆ ಉತ್ತರ ಕೊಡುವ ಮೂಲಕ ಇವತ್ತು ಆಗಿರುವ ಎಲ್ಲಾ ಅನ್ಯಾಯಗಳನ್ನೂ ಸರಿಪಡಿಸತಕ್ಕಂಥ ರಿತಿಯಲ್ಲಿ ಹೇಳಬೇಕೆಂದು ಕೇಳಿ ಕೊಳ್ಳುತ್ತೇನೆ

ಶ್ರೀ ಬಸವರಾಜರಾಯರೆಡ್ಡಿ ಅಧ್ಯಕ್ಷರೆ, ಈ ಸೂಚ್ಯಂಕದಲ್ಲಿ

ಅಧ್ಯಕ್ಷರು ಈಗ ಒಳಗಡೆ ಚರ್ಚೆಯಾಗಿದೆ ನಿಮ್ಮ ಮುಖಂಡರು ಗಳೆಲ್ಲರೂ ಮಾತನಾಡಿ ಬಂದಿದ್ದಾರೆ, ಉತ್ತರ ಹೇಳುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ ಅವರು ಉತ್ತರ ಹೇಳಲಿ

ಶ್ರೀ ಬಸವರಾಜರಾಯರೆಡ್ಡಿ ಅಧ್ಯಕ್ಷರೆ, ಅದಲ್ಲ ನಾನು ಬಹಳ ಮಹತ್ವದ ವಿಚಾರದ ಬಗ್ಗೆ ಕೇಳುತ್ತಿದ್ದೇನೆ 2005 ನೇ ಸಾಲಿನಲ್ಲಿ ಒಟ್ಟು 9,000 ಹೈಸ್ಕೂಲುಗಳಿವೆ ಇಡೀ ಉತ್ತರ ಕರ್ನಾಟಕಕ್ಕೆ ಇರುವುದು ಕೇವಲ 3,327 ಹೈಸ್ಕೂಲುಗಳು, ದಕ್ಷಿಣ ಕರ್ನಾಟಕಕ್ಕೆ, 5700, ಇಡೀ ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕಕ್ಕೆ ಕೇವಲ 3,300 ದಕ್ಷಿಣ ಕರ್ನಾಟಕಕ್ಕೆ 5,700 ಇದೆ ಇದರಿಂದ ಬಹಳ ತಾರತಮ್ಯವಾಗುತ್ತಿದೆ ಇದನ್ನು ಸರಿಪಡಿಸುವುದಕ್ಕೆ ಹೆಚ್ಚು ಹೈಸ್ಕೂಲುಗಳನ್ನು ಈಗ ಏನು 315 ಕೊಡುತ್ತಿದ್ದಿರಿ, ಅದರಲ್ಲಿ 50% ಅನ್ನು ಹೈದರಾಬಾದ್ ಕರ್ನಾಟಕಕ್ಕೆ ದಯವಿಟ್ಟು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಈ ದಿನ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರತಕ್ಕಂಥ ಸಂದರ್ಭದಲ್ಲಿ ಸರ್ಕಾರದ ಹಲವಾರು ಇಲಾಖೆಗಳಲ್ಲಿ ತಾರತಮ್ಯವಾಗಿದೆ ಎಂಬ ವಿಷಯವನ್ನು ಸದನದಲ್ಲಿ ಸದಸ್ಯರುಗಳೇನು ಕಳವಳವನ್ನು ವ್ಯಕ್ತಪಡಿಸಿದ್ದಾರೆ, ಯಲಬುರ್ಗ ಕ್ಷೇತ್ರದ ರಾಯರೆಡ್ಡಿಯವರು ಅವರ ಅವರ ಕ್ಷೇತ್ರಕ್ಕಾಗಿರುವ ತಾರತಮ್ಯದ ಬಗ್ಗೆ ಪ್ರಶ್ನೆ ಮಾಡಿದ್ದಾರೆ ಅವರ ಕ್ಷೇತ್ರದಲ್ಲಿ ಈಗ ಆಗಿರತಕ್ಕಂಥ ಬಿಸಿಎಮ್ ಹಾಸ್ಟಲ್ ಇರುಬಹುದು, ಅವರ ಕ್ಷೇತ್ರಕ್ಕೆ ಆಗಿರುವ ಅಭಿವೃದ್ಧಿಯ ಬಗ್ಗೆ ಪಟ್ಟಿಯನ್ನು ಇಡಲು ಸಿದ್ದನಾಗಿದ್ದೇನೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶಾಲೆಗಳನ್ನು ಮಂಜೂರು ಮಡುವ ವಿಚಾರದಲ್ಲಿ ತಾರತಮ್ಯವಾಗಿರುವ ಬಗ್ಗೆ ಸದಸ್ಯರೇನು ಸದನದಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ, ಇದನ್ನು ಒಂದುವಾರದಲ್ಲಿ ಯಾವ್ಯಾವ ಕ್ಷೇತ್ರಗಳಲ್ಲಿ ಎಲ್ಲೆಲ್ಲಿ ತಾತಮ್ಯವಾಗಿದೆ ಎಂದು ನೋಡಿ ಮೊದಲನೆಯ ಕಂತಿನಲ್ಲಿ ಪ್ರೌಢ ಶಾಲೆಗಳು, ಜೂನಿಯರ್ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳನ್ನು ಈಗಾಗಲೇ ಕೊಟ್ಟಿದ್ದೇವೆ ಎರಡನೆಯ ಹಂತದಲ್ಲಿ ಸಹ ಕೆಲವು ತಾಲ್ಲೂಕುಗಳಿಗೆ ಆಗಿರುವ ತಾರತಮ್ಯವನ್ನು ಸರಿಪಡಿಸಲು ಈಗಾಗಲೇ ಸರ್ಕಾರ ತೀರ್ಮಾನ ಮಾಡಿ ಕ್ರಮವನ್ನೇನು ತಗೆದುಕೊಂಡಿದ್ದೇವೆ, ಅದನ್ನು ಇನ್ನೊಂದು ವಾರದಲ್ಲಿ ಸರಿಪಡಿಸುವ ಕುರಿತು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ ಎಲ್ಲಾ ತಾಲೂಕುಗಳಿಗೂ ಯಾವ ರಿತಿಯಾಗಿ ಅನುಕೂಲ ವಾಗಬೇಕು ಎನ್ನುವ ಬಗ್ಗೆ, ಬಿ ಸಿ, ಎಂ ಹಾಸ್ಟೆಕ್ ಇರುಬಹುದು, ಶಿಕ್ಷಣ ಕ್ಷೇತ್ರಕ್ಕೇನು ಇವತ್ತು ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ ಅದು ಸರಿಯಾದ ರೀತಿ ಎಲ್ಲಾ ತಾಲ್ಲೂಕುಗಳಿಗೂ ಪಕ್ಷಬೇಧ ಮರೆತು ಆಗಬೇಕು ಎಂಬ ವಿಷಯ

ಶ್ರೀ ಹೆಚ್ ವೈ ಮೇಟಿ ತಾಲ್ಲೂಕುವಾರು ಆದರೆ ಸರಿಯಾಗುವುದಿಲ್ಲ ಕ್ಷೇತ್ರವಾರು ತೆಗೆದುಕೊಳ್ಳಿ ಕ್ಷೇತ್ರವಾರು ಕೊಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಹೈದ್ರಾಬಾದ್ ಕರ್ನಾಟಕಕ್ಕೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ಎರಡನೇ ಕಂತಿನ ಪಟ್ಟಿ ಬಂದಾಗ ತಮಗೆ ಮನವರಿಕೆಯಾಗುತ್ತದೆ ಎಂಬುದನ್ನು ಈ ಸಂದರ್ಬದಲ್ಲಿ ತಮ್ಮ ಗಮನಕ್ಕೆ ತರುತ್ತಾ, ಉತ್ತರ ಕರ್ನಾಟಕದ ಭಾಗದಲ್ಲಿ, ಅದರಲ್ಲೂ ಹೈದ್ರಾಬಾದ್

ಕರ್ನಾಟಕದ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಇದ್ದಂತಹ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಲೋಕೋಪ ಯೋಗಿ ಇಲಾಖೆಯಲ್ಲಿ ಹೆಚ್ಚಿನ ಆದ್ಯತೆ ನೀಡಿ ಅಪ್‌ಗ್ರೇಡೇಷನ್ ಮಾಡುವು ದೇನಿದೆ, ಮೇಲ್ದರ್ಜೆಗೆ ಏರಿಸಿರುವ ಕೆಲಸವನ್ನು ಮಾಡಿದ್ದೇವೆ ಸ್ವಲ್ಪ ತಾಳ್ಮೆ ಇದ್ದರೆ ಅದು ನಿಮಗೆ ಮನವರಿಕೆಯಾಗುತ್ತದೆ ಇವತ್ತು ಏನು ಸದನದಲ್ಲಿ ಈ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಿರಿ, ಈ ರೀತಿಯ ತಾರತಮ್ಯ ಗಳನ್ನು ಸಂಪೂರ್ಣವಾಗಿ ಸರಿಪಡಿಸಲು ಒಂದು ವಾರದಲ್ಲಿ ಸರ್ಕಾರ ಕ್ರಮವನ್ನು ತಗೆದುಕೊಳ್ಳುತ್ತದೆ ಅದರ ಜೊತೆಗೆ ಮಾನ್ಯ ಜಯಪ್ರಕಾಶ ಹೆಗಡೆಯವರು ನೆನ್ನೆ ಸಹ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು ಅವರು ಹಿಂದೆ ಶಾಸಕರಾಗಿದ್ದ ಸಂದರ್ಭದಲ್ಲಿ ಅವರು ಕೊಟ್ಟಂಥ ಕೆಲಸದ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಅದಕ್ಕೆ ಒಪ್ಪಿಗೆಯನ್ನು ಕೊಡದಿರುವುದೇನಿದೆ, ಶಾಸಕರು ಕೊಡತಕ್ಕ ಕೆಲಸದ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಶಾಸಕರ ಸಲಹೆಗಳನ್ನು ಪುರಸ್ಕಾರ ಮಾಡುವುದಕ್ಕೂ ಜಿಲ್ಲಾಧಿಕಾರಿಗಳಿಗೆ ಇವತ್ತು ಸೂಚನೆ ಕೊಡುವ ಕೆಲಸವನ್ನೂ ಮಾಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ

ಶ್ರೀ ಸಿದ್ದ ರಾಮಯ್ಯ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿ ಯವರು ಉತ್ತರವನ್ನು ಕೊಟ್ಟಿದ್ದಾರೆ ಆದರೆ, ಅದನ್ನು ಕೊಡುವಾಗ ಒಂದು ನಾರ್ಮ್ಸ್ ಅಥವಾ ಪಾಲಿಸಿಯನ್ನು ಮಾಡಿಕೊಂಡರೆ ಈ ರೀತಿಯ ಸಮಸ್ಯೆಗಳು ಉದ್ಭವವಾಗುವುದು ಬಹಳ ಕಡಿಮೆಯಾಗುತ್ತದೆ ನೀವು ಬಜೆಟ್‌ನಲ್ಲಿ ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರುತ್ತೇವೆ, Regional imbalance ನ್ನು ತೆಗೆದು ಹಾಕುತ್ತೇವೆಂದು ಸಹ ಬಹಳ ಸ್ಪಷ್ಟವಾಗಿ ಹೇಳಿದ್ದಿರಿ Regional imbalance ನ್ನು ತೆಗೆದು ಹಾಕುವಾಗ, ನಂಜುಂಡಪ್ಪನವರು literacy ಬಗ್ಗೆ, health ಬಗ್ಗೆ , ರಸ್ತೆಗಳ ಅಭಿವೃದ್ಧಿಯ ಬಗ್ಗೆ, infrastructure ಬಗ್ಗೆ, ಹಾಸ್ಟೆಲ್‌ಗಳ ಬಗ್ಗೆ, ಕಾಲೇಜುಗಳ ಬಗ್ಗೆ ಇರಬಹುದು, ಇವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು, ಎಲ್ಲಿ ಸಮಾನ ಬೆಳವಣಿಗೆಯಾಗಬೇಕು ಎಂಬುದು ಕೇವಲ ಮಾತಿನಲ್ಲಿ ಆಗಬರದು ಅಥವಾ ಬಜೆಟ್‌ನ ಭಾಷಣದಲ್ಲಿ ಬರೀ ಮಾತಿನಲ್ಲಿರಬಾರದು ಸಮಾನ ಬೆಳವಣಿಗೆಗೆ ಅನುಕೂಲವಾಗುವ ರೀತಿಯಲ್ಲಿ ಈ ರೀತಿಯದನ್ನು ಕೊಟ್ಟರೆ ರಾಜ್ಯದ ಒಟ್ಟಾರೆ ಸರ್ವತೋಮುಖ ಬೆಳವಣಿಗೆಯಾಗುವುದಕ್ಕೆ ಸಾಧ್ಯ

ವಾಗುತ್ತದೆ ಅದನ್ನು ಕೊಡುವಾಗ ಇದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು ಎಂದು ನನ್ನ ಸಲಹೆಯಾಗಿದೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅದ್ಯಕ್ಷರೆ, ಈಗ ನಂಜುಂಡಪ್ಪ ವರದಿಯ ಆಧಾರದ ಮೇಲೆ ಅಭಿವೃದ್ಧಿಯಾಗಬೇಕು, ಅದು ಉತ್ತರ ಕರ್ನಾಟಕವಿರಲಿ, ದಕ್ಷಿಣ ಕರ್ನಾಟಕವಿರಲಿ, ಮಧ್ಯ ಕರ್ನಾಟಕವಿರಲಿ, ಯಾವ್ಯಾವುದು ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಿವೆ, ಅವೆಲ್ಲ ಕಡೆ ಅನುಕೂಲಗಳು ಸಿಗಲಿ, ಅದಕ್ಕೇನೂ ತಕರಾರು ಇಲ್ಲ ಅದು ಬರೀ ಹೈದರಾಬಾದ್ ಕರ್ನಾಟಕವೇ ಇರಲಿ ಆದರೆ 39 ತಾಲ್ಲೂಕುಗಳು ಒಟ್ಟಾರೆ ರಾಜ್ಯದಲ್ಲಿರಬೇಕಾದರೆ, ಆ 39 ರ ಪೈಕಿ 21 ತಾಲ್ಲೂಕುಗಳು ಹೈದರಾಬಾದ್ ಕರ್ನಾಟಕದಲ್ಲಿದೆ ಹಾಗಾಗಿ ಆ ಭಾಗಕ್ಕೆ ಹೆಚ್ಚಿನ ಹಣಕಾಸು ಬರಬೇಕು ಮಾನ್ಯ ಯಡಿಯೂರಪ್ಪನವರು 125 ಕೋಟಿ ರೂಪಾಯಿಗಳನ್ನು ಮೊದಲನೇ ಕಂತಿನಲ್ಲಿ ಆ ಹಣವನ್ನು ಬಿಡುಗಡೆ ಮಾಡಿದ್ದಾರೆ ಆದರೆ, ನಂಜುಡಪ್ಪ ವರದಿಯ ಶಿಫಾರಸ್ಸು ಏನು ಹೇಳುತ್ತದೆಯೆಂದರೆ, ಯಾವ ತಾಲ್ಲೂಕು ಅತ್ಯಂತ ಹಿಂದುಳಿದ ಇವತ್ತು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿಗೆ ಹೆಚ್ಚಿನ ಹಣ ಹೋಗಬೇಕು ಅದೇರೀತಿ ಕನಕಪುರ ತಾಲ್ಲೂಕು ಕೂಡ ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದೆ ಆದರೆ, ಅವೆರಡಕ್ಕೂ ಸಮಾನ ದೃಷ್ಟಿಯಿಂದ ನೋಡುವಂತಾಗಬಾರದು ರೇಷಿಯೋ 50 30 20 ಏನು ಮಾಡಿದ್ದಾರೆ, ಅತ್ಯಂತ ಹಿಂದುಳಿದ ತಾಲ್ಲೂಕಿಗೆ 50% ಅತಿ ಹಿಂದುಳಿದ ತಾಲ್ಲೂಕಿಗೆ 30% ಮತ್ತು ಹಿಂದುಳಿದ ತಾಲ್ಲೂಕಿಗೆ 20% ಎಂದು ಏನು ಹಂಚಿಕೆ ಮಾಡಿದ್ದಾರೆ, ಆದರಂತೆ ಆ 39 ತಾಲ್ಲೂಕುಗಳಲ್ಲಿ ದೇವದುರ್ಗ ತಾಲ್ಲೂಕಿಗೆ ಅತ್ಯಂತ ಹೆಚ್ಚನ ಹಣ ಸಿಗಬೇಕು, ಅನಂತರ ಜೇವರ್ಗಿ, ಚಿತ್ತಾಪುರ, ಸೇಡಂ ಈ ತರಹ ಕೊಡಬೇಕು

ಶ್ರೀ ಹೆಚ್ ಹಾಲಪ್ಪ ಬರೀ ಹಣ ಹೋದರೆ ಆಗುವುದಿಲ್ಲ ಅಲ್ಲಿ ಅಭಿವೃದ್ಧಿ ಕೂಡ ಆಗಬೇಕು

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಈ ನಂಜುಂಡಪ್ಪ

ಸಮಿತಿಯ ವರದಿಯ ಇಂಪ್ಲಿಮೆಂಟ್ ಮಾಡುವುದಕ್ಕೆ ರಾಜ್ಯ ಸರ್ಕಾರದವರು ಶ್ರೀ ಮಾನ್ ಎ ರವೀಂದ್ರರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದಾರೆ ನಾನು ಹೋಗಿ ಅವರನ್ನು ಭೇಟಿಯಾದೆ ಆವಾಗ ಅವರು ಏನು ಹೇಳಿದರೆಂದರೆ, ಸಂಬಂಧಪಟ್ಟಂಥ ಇಲಾಖೆಗೆ ಅದನ್ನು ಕಾರ್ಯಗತ ಮಾಡುವುದಕ್ಕೆ ಹೇಳಿದ್ದೇವೆಂದು ಹೇಳಿದರು ಆದರೆ, ಸಂಭಂದ ಪಟ್ಟ ಇಲಾಖೆಗಳು ಅದನ್ನು ಅಳವಡಿಸಿಕೊಳ್ಳದೇ ಹೋಗಿದ್ದರೆ, ನಂಜುಂಡಪ್ಪ ವರದಿ ಹಳಿ ತಪ್ಪಿ ಹೋಗುತ್ತಿತ್ತು ಈಗ ಮಾನ್ಯ ಮುಖ್ಯಮಂತ್ರಿಗಳು ಮಾತು ಕೊಟ್ಟ ಹಾಗೆ ಇದಕ್ಕೆ ವೈಜ್ಞಾನಿಕವಾದ ಒಂದು ರೂಪು ರೇಷೆ ಕೊಟ್ಟು ಇದಕ್ಕೆ ಒಂದು ಪರಿಹಾರ ಕಂಡುಹಿಡಿಯಬೇಕು ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕೆಂದು ಈ ವಿಷಯದಲ್ಲಿ ವಿನಂತಿಸಿ ಕೊಳ್ಳುತ್ತೇನೆ

(ಗೊಂದಲ)

ಶ್ರೀ ಎಂ ಟಿ ಕೃಷ್ಣಪ್ಪ ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಮಾತನಾಡುವುದಕ್ಕೆ ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು ಮತ್ತೆ ಇಲ್ಲಿ ತಾವು ಚಚೆ ಮಾಡತಕ್ಕಂಥ ಅಗತ್ಯವಿಲ್ಲ

(ಗೊಂದಲ)

ಶ್ರೀ ಎಂ ಟಿ ಕೃಷ್ಣಪ್ಪ ಕಳೆದ ಕಾಂಗ್ರೆಸ್ ಸರ್ಕಾರವಿದ್ದಾಗಲೂ ಹೈಸ್ಕೂಲು ಗಳ ಮಂಜೂರು ಮಾಡಿದ್ದಾರೆ ಅವರು ಯಾರ್‍ಯಾರಿಗೆ ಎಲ್ಲೆಲ್ಲಿ ಕೊಟ್ಟಿದ್ದಾರೆನ್ನು ವುದಕ್ಕೆ ಅದೂ ಕೂಡ ರೆವ್ಯೂ ಆಗಲಿ

ಅಧ್ಯಕ್ಷರು ಆಯಿತು ಬಿಡಿ ಮತ್ತೆ ಮತ್ತೆ ಅದರ ಚರ್ಚೆ ಬೇಡ

ಶ್ರೀ ಎಂ ಟಿ ಕೃಷ್ಣಪ್ಪ ನಮಗೆ 15 ಲಕ್ಷ ಕೊಟ್ಟು ಮೂರು ಮೂರು ಕೋಟಿ ತೆಗೆದುಕೊಂಡ ಇತಿಹಾಸ ಈ ಸದನದಲ್ಲಿದೆ ಅವುಗಳನ್ನು ದಯಮಾಡಿ ರಿವ್ಯೂ ಮಾಡಿ ಅದನ್ನು ನೋಡಲಿ

ಅಧ್ಯಕ್ಷರು ಅದು ಈಗ ಹಳೆಯ ಕತೆ

ಶ್ರೀ ಎಂ ಟಿ ಕೃಷ್ಣಪ್ಪ ಹಾಗಾದರೆ ಇದೂ ಕೂಡ ಹಳೆ ಕತೆ ಬಿಡಿ ಸೆಕ್ಷನ್ ಆಗಿರುವುದು ಹಳೆ ಕತೆ

(ಗೊಂದಲ)

ಅಧ್ಯಕ್ಷರು ಆಯಿತು ಎಲ್ಲರೂ ಕುಳಿತುಕೊಳ್ಳಿ ದಯಮಾಡಿ ನಾನು ಹೇಳುವುದನ್ನು ಎಲ್ಲರೂ ಕೇಳಿ ಈಗ ಮಾನ್ಯ ಮುಖ್ಯಮಂತ್ರಿಗಳು ಸದನದ ಸದಸ್ಯರಿಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಇನ್ನು ಒಂದು ವಾರದೊಳಗೆ ಎಲ್ಲವನ್ನೂ ಸರಿಪಡಿಸುತ್ತೇನೆನ್ನುವ ಮಾತನ್ನು ಹೇಳಿದ್ದಾರೆ ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಗಿಸುತ್ತೇನೆ ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಮಾನವ ಹಕ್ಕುಗಳ ಸಚಿವರು) ಮಾನ್ಯ ಅಧ್ಯಕ್ಷರೆ, ದಿನಾಂಕ 11-07-2007ರ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 3 ನೇ ಪಟ್ಟಿಯಲ್ಲಿರುವ 69 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

2 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ ಚಿಕ್ಕ ಮಗಳೂರು ಜಿಲ್ಲೆಯಲ್ಲಿ ನಕ್ಸಲಿಯರ ಚಟುವಟಿಕೆ ಕುರಿತು ನಿಲುವಳಿ ಸೂಚನೆ ಮಂಡಿಸಲು ಅವಕಾಶ ಕೋರಿಕೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಈಗ ಚಿಕ್ಕ ಮಗಳೂರು ಜಿಲ್ಲೆಯಲ್ಲಿ

ಅಧ್ಯಕ್ಷರು ತಾವು ಎದ್ದು ನಿಂತುಕೊಂಡ ತಕ್ಷಣ ನನಗೆ ಅರ್ಥ ವಾಯಿತು ಈಗ ಎರಡು adjournment notice ಬಂದಿದೆ

ಶ್ರೀ ಎನ್ ಧರ್ಮಸಿಂಗ್ ಎರಡೂ ಸಹ ಒಂದೇ ವಿಚಾರವಿದೆ

ಅಧ್ಯಕ್ಷರು ಇಲ್ಲ ಬೇರೆ ಬೇರೆ ವಿಷಯವಿದೆ ಮೊದಲು ಅವರಿಂದ notice ಬಂದಿದೆ ನಾವು ನಿಯಮದ ಪ್ರಕಾರ ದಿವಸಕ್ಕೆ ಎರಡು adjournment motion ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಆದ್ದರಿಂದ ಅವರಿಗೆ ನಾನು ಈಗ ಅವಕಾಶ ಕೊಡುತ್ತೇನೆ ದಯಮಾಡಿ ನಾನು ಹೇಳುವುದನ್ನು ಕೇಳಿ

ಶ್ರೀ ಎನ್ ದರ್ಮಸಿಂಗ್ ರಾಜ್ಯಕ್ಕೆ ಜರೂರಿಯಾದಂಥ ನಕ್ಸಲರಿಂದ ಪೋಲೀಸ್ ಹಲ್ಲೆಯಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಮಾಯಕರ ಹತ್ಯೆಯಾಗಿದೆ

ಅಧ್ಯಕ್ಷರು ತಾವು ಪ್ರಸ್ತಾಪ ಮಾಡುತ್ತಿರುವ ವಿಷಯವನ್ನು ಒಪ್ಪಿಕೊಳ್ಳುತ್ತೇನೆ ಆದರೆ ಬೇರೆ ರೂಪದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರೆ ಅದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

ಶ್ರೀ ಎನ್ ಧರ್ಮಸಿಂಗ್ ಅದರ ಬಗ್ಗೆ ಚರ್ಚೆಯಾಗಬೇಕಲ್ಲ ಅದಕ್ಕೋಸ್ಕರ ಆ ವಿಷಯವನ್ನು ತೆಗೆದುಕೊಳ್ಳಿ ನಕ್ಸಲೈಟ್ ಚಟುವಟಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಆದ್ಯತೆ ಕೊಡಬೇಕು ಚರ್ಚೆಗೆ ಅವಕಾಶ ಕೊಡಬೇಕು

ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಡುತ್ತೇನೆ

ಶ್ರೀ ಎನ್ ಧರ್ಮಸಿಂಗ್ ಸರ್ಕಾರ ಉತ್ತರ ಕೊಡಬೇಕು ಸರ್ಕಾರ Sou-motu statement ಕೊಡಮಾಡಲಿ ಅದನ್ನು ಅವರು ಮೊದಲು ಮಾಡಲಿ ಪತ್ರಿಕೆಗಳಲ್ಲಿ ಬಂದಿರುವುದನ್ನು ಜನ ಓದುತ್ತಿದ್ದಾರೆ ಆ ಭಾಗದಲ್ಲಿ ಜನರು ತತ್ತರಿಸಿ ಹೋಗಿದ್ದಾರೆ ಇವತ್ತು ನಕ್ಸಲರನ್ನು ಹತ್ತಿಕ್ಕಬೇಡಿ ಎಂದೇನೂ ನಾವು ಹೇಳುತ್ತಿಲ್ಲ ಸರ್ಕಾರ ಈ ಕೆಲಸವನ್ನು ಮಾಡಲಿ ರಾಮೇಗೌಡರು ಮತ್ತು ಅವರ ಪತ್ನಿ ಕಾವೇರಿ ಹಾಗೂ ಇತರ ಐದು ಜನ ಅಮಾಯಕರ ಹತ್ಯೆಯಾಗಿದೆ ಇವತ್ತಿನ ದಿವಸ ಸರ್ಕಾರದ ವಿರುದ್ಧ ಜನತೆ ಬಹಳಷ್ಟು ಆಕ್ರೋಷ ವ್ಯಕ್ತಪಡಿಸಿದ್ದಾರೆ ಇದರ ಬಗ್ಗೆ ಸರ್ಕಾರ ಏನು ಮಾಡುತ್ತಿದೆ? ಅದರ ಬಗ್ಗೆ ಮೊದಲು ಚರ್ಚೆಯಾಗಲಿ ಅದಾದ ಮೇಲೆ ಮಾನ್ಯ ಮಾಧುಸ್ವಾಮಿಯವರ adjournment motion ನಾಳೆಗೆ ತೆಗೆದುಕೊಳ್ಳಿ

ಅಧ್ಯಕ್ಷರು ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅದ್ಯಕ್ಷರೆ, ಅಲ್ಲಿ ಅಮಾಯಕರನ್ನು ಕೊಂದಿದ್ದಾರೆ ಅದರ ಬಗ್ಗೆ ಅವರೂ ಕೊಟ್ಟಿದ್ದಾರೆ ನಾವೂ ಕೊಟ್ಟಿದ್ದೇವೆ

ಇದರ ಬಗ್ಗೆ ಸಮಗ್ರವಾದಂಥಹ ಚರ್ಚೆಯಾಗಬೇಕು ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ಸರ್ಕಾರವೇ ಹೇಳಿಕೆಯೊಂದನ್ನು ಈಗಾಗಲೇ ಕೊಡಬೇಕಾಗಿತ್ತು ಆದರೆ ಸರ್ಕಾರದವರು ಯಾವುದೇ ಹೇಳಿಕೆ ಕೊಟ್ಟಿಲ್ಲ ಅದರ ಬಗ್ಗೆ ಕನಿಷ್ಠ ನಾವಾದರೂ ಚರ್ಚೆ ಮಾಡಬೇಕಾಗಿದೆ ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ನಾವೇನೂ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿಲ್ಲ ಸರ್ಕಾರದ ಕಾರ್ಯತಂತ್ರವೇನು? ಅಲ್ಲಿ ಏನಾಗಿದೆ? ಎಂಬ ಬಗ್ಗೆ ರಾಜ್ಯದ ಜನತೆಗೆ ಗೊತ್ತಾಗಬೇಕು ಮಾನ್ಯ ಗೃಹ ಸಚಿವರು ಇಲ್ಲೇ ಇದ್ದಾರೆ ಅವರು Sou-motu statement ಮಾಡಲಿ ಅವರು statement ಮಾಡಿದಮೇಲೆ ಅದರ ಬಗ್ಗೆ ವಿವರವಾದಂಥ ಚರ್ಚೆಯಾಗಲೇಬೇಕು

ಅಧ್ಯಕ್ಷರು ಮೊದಲು ಅವರಿಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ

ಶ್ರೀ ಧರ್ಮಸಿಂಗ್ ಏನೊಂದು ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ? ಪೋಲೀಸ್ ಇಲಾಖೆ ತೆಗೆದುಕೊಂಡಿದೆ? ಎಂಬುದರ ಬಗ್ಗೆ ಸದನದಲ್ಲಿ Sou-motu statement ಮಾಡಲಿ ಅದರ ಮೇಲೆ ಚರ್ಚೆ ಮಾಡೋಣ ನಂತರ ಮಾನ್ಯ ಮಾಧುಸ್ವಾಮಿಯವರು ತೆಗೆದುಕೊಳ್ಳಿ

ಅಧ್ಯಕ್ಷರು ದಯಮಾಡಿ ನಾಮನು ಹೇಳುವುದನ್ನು ಕೇಳಿ ಈಗ ಮೊದಲು ಅವರದು ತೆಗದುಕೊಂಡು ಬಿಡುತ್ತೇನೆ ಏಕೆಂದರೆ ಅವರದು ಮೊದಲು ಬಂದಿದೆ

ಶ್ರೀ ಮಲ್ಲಿಖಾರ್ಜುನ ಖರ್ಗೆ ಇಲ್ಲಿ ಮೊದಲು ಅಥವಾ ಹಿಮದಿನದು ಎಂಬ ಪ್ರಶ್ನೆ ಇಲ್ಲ one hour ಒಳಗಾಗಿ ಅವರದ್ದೂ ಬಂದಿದ್ದರೆ ಅಥವಾ one and half hour ಅವರದ್ದು ಮುಂಚೆ ಬಂದಿದ್ದರೆ opposition leader ಗೆ ರೂಲ್ಸ್ ಪ್ರಕಾರ ಮಾನ್ಯತೆ ಕೊಡಬೇಕು ಆ ಬಗ್ಗೆ precedents ಇದೆ ಅದನ್ನು ನಾವು ಅಥವಾ ನೀವು ಡಿಸೈಡ್ ಮಾಡಲಿಕ್ಕೆ ಆಗುವುದಿಲ್ಲ

ಅಧ್ಯಕ್ಷರು ದಯಮಾಡಿ ನಾನು ಹೇಳುವುದನ್ನು ಕೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರದ್ದೂ ಕೇಳಿ ಮೊದಲು ನಮಗೆ ಅವಕಾಶ ಕೊಡಿ

ಅಧ್ಯಕ್ಷರು ಮೊದಲು ಐದು ನಿಮಿಷ ಅವರದ್ದು ಕೇಳೋಣ ಆನಂತರ ಬೇರೆ ರೂಪದಲ್ಲಿ ಚರ್ಚೆ ಮಾಡಲಿಕ್ಕೆ ನಾನು ಅವಕಾಶವನ್ನು ಮಾಡಿ ಕೊಡುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಹಾಗೆಯೇ ಮಾಡಿ ಇನ್ನು ಮೇಲೆ ನೀವು ಬೇರೆಯವರದ್ದು ಕೇಳಲಿಕ್ಕೆ ಹೋಗಬೇಡಿ

ಅಧ್ಯಕ್ಷರು ವಿಷಯ ಬೇರೆ ಬೇರೆ ಆಗಿರುವುದರಿಂದ ಮೊದಲು ಅವರಿಗೆ ಪ್ರಸ್ತಾಪಿಸಲು ಅವಕಾಶ ಕೊಡುತ್ತಿದ್ದೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಆಯಿತು, ಅವರೇ ಮೊದಲು ಪ್ರಸ್ತಾಪ ಮಾಡಲಿ

(ಗೊಂದಲ)

ಅಧ್ಯಕ್ಷರು ನಾನು ನಿಮಗೂ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಗೃಹ ಸಚಿವರು ಇದರ ಬಗ್ಗೆ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದರೆ, ಇದು ಮುಗಿದೇ ಹೋಗುತ್ತದೆ

(ಗೊಂದಲ)

ಅಧ್ಯಕ್ಷರು ಮೊದಲು ಅವರು ಕೊಟ್ಟಿದ್ದಾರೆ ಆದ್ದರಿಂದ ಮೊದಲು ಐದು ನಿಮಿಷ ಅವರದ್ದು ಕೇಳುತ್ತೇನೆ ಆನಂತರ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಒಂದು ನಿಮಿಷ, ನಾನು ಒಂದು ಮಾತು ಹೇಳಿಬಿಡುತ್ತೇನೆ

(ಗೊಂದಲ)

ಶ್ರೀ ಧರ್ಮಸಿಂಗ್ ಯಾರು ಏನು ಕೊಟ್ಟಿದ್ದಾರೆ? ಅದರಲ್ಲಿ ಯಾರ ವಿಷಯಕ್ಕೆ ಪ್ರಾಮುಖ್ಯತೆ ಕೊಡಬೇಕು? ಎಂಬುದು ಇಲ್ಲಿಲ್ಲ ನಮಗಿಂತಲೂ ಅವರದು ಜರೂರಾಗಿರುವ ವಿಷಯವೇ?

ಅಧ್ಯಕ್ಷರು ಮೊದಲು ಅವರು ಕೊಟ್ಟಿದ್ದಾರೆ ನಿಯಮಾವಳಿಗಳ ಪ್ರಕಾರ ಮೊದಲು ಮಾತನಡಲು ನಾನು ಅವರಿಗೆ ಅನುಮತಿ ಕೊಡ ಬೇಕಾಗುತ್ತದೆ

(ಗೊಂದಲ)

ಶ್ರೀ ಧರ್ಮಸಿಂಗ್ I am the leader of the opposition ನೀವು ನನಗೆ ಮಾತನಾಡಲು allow ಮಾಡಬೇಕು ಚರ್ಚೆಗೆ ಅವಕಾಶ ಮಾಡಿಕೊಡಲೇಬೇಕು

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಅವರದ್ದು ಆದ ಮೇಲೆ ನನಗೆ ಮಾತನಾಡಲು ಅವಕಾಶ ಕೊಡಿ ಎಂದು ನಾನು ಹೇಳಲಿಕ್ಕೂ ಕೂಡ ಅವಕಾಶ ಮಾಡಿಕೊಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು ಮಾನ್ಯ ಮಾಧುಸ್ವಾಮಿಯವರು ಏನು ಹೇಳುತ್ತಾರೋ ಕೇಳೋಣ ನಿಯಮಾವಳಿಗಳನ್ನು ನಾವು ಫಾಲೋ ಮಾಡೋಣ

(ಗೊಂದಲ)

ಶ್ರೀ ಧರ್ಮಸಿಂಗ್ ತಾವು ಏನು ಹೌಸ್ ನಡೆಸುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ ತಾವು ಅಧ್ಯಕ್ಷರಾಗಿ ಸದನವನ್ನು ನಡೆಸಬೇಕಾಗಿದೆ

ಅಧ್ಯಕ್ಷರು ನಾನು ಅದನ್ನು ನಡೆಸುತ್ತಿದ್ದೇನೆ ಚರ್ಚೆಗೆ ನಿಮಗೆ ಅವಕಾಶ ಕೊಡುತ್ತೇನೆಂದರೂ ನೀವು ಕೇಳುತ್ತಿಲ್ಲ

(ಗೊಂದಲ)

ಶ್ರೀ ಧರ್ಮಸಿಂಗ್ ಮಾನ್ಯ ಗೃಹ ಸಚಿವರೆ, ನೀವು Sou-motu statement ಮಾಡಿ ಘಟನೆಯಲ್ಲಿ ಏನಾಗಿದೆ ಎಂದು ಸದನಕ್ಕೆ ತಿಳಿಸಿ ಇದರಿಂದ ರಾಜ್ಯದ ಜನತೆಗೂ ಕೂಡ ಅದರ ಬಗ್ಗೆ ಗೊತ್ತಾಗುತ್ತದೆ ತಾವು ಏತಕ್ಕಾಗಿ ಸುಮ್ಮನೆ ಕುಳಿತಿದ್ದೀರಿ? ಈಗಾಗಲೇ ತಾವು ಹೇಳಿಕೆ ಕೊಡಬೇಕಾಗಿತ್ತು ಇನ್ನೂ ಏಕೆ ಮಾಡಿಲ್ಲ?

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಒಂದು ನಿಮಿಷ ಸಾರ್ ನಾನು ನಿಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ ನಾನು ಹೇಳುವುದನ್ನು ಕೇಳುವುದಕ್ಕೇ ನಿವು ತಯಾರಿಲ್ಲ

(ಗೊಂದಲ)

ಶ್ರೀ ಧರ್ಮಸಿಂಗ್ ಇದರಲ್ಲಿ ಪ್ರತಿಷ್ಠೆ ವಿಚಾರವಿಲ್ಲ ನಾನು ಜರೂರು ಸಮಸ್ಯೆ ಬಗ್ಗೆ ಪ್ರಸ್ತಾಪಿಸಲು ಇಲ್ಲಿ ಕೇಳಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ ನಾನು ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡು ಮಾತನಾಡುತ್ತಿದ್ದೇನೆ ದಯಮಾಡಿ ಒಂದುನಿಮಿಷ ಯೀಲ್ಡ್ ಆಗಿ

(ಗೊಂದಲ)

ಶ್ರೀ ಧರ್ಮಸಿಂಗ್ ಮಾನ್ಯ ಗೃಹ ಸಚಿವರೇ, ತಾವು ಹೇಳಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅರ್ಧಯಕ್ಷರೆ, ನಾನು ಅವರ ಬಗ್ಗೆ ಬಹಳ ಗೌರವ ಇಟ್ಟುಕೊಂಡು ಹೇಳುತ್ತಿದ್ದೇನೆ ನಾನು ಈ ನಿಯಮದ ಕೆಳಗೆ ಪ್ರಸ್ತಾಪಿಸಲು ಕೊಟ್ಟಾಗ ಅವರು ಬೇರೆ ವಿಚಾರವನ್ನು ಇದೇ ನಿಯಮದ ಅಡಿಯಲ್ಲಿ ಮೂವ್ ಮಾಡುತ್ತಿರುವುದು ನನಗೆ ಗೊತ್ತಿರಲಿಲ್ಲ Opposition Leader ಅನ್ನು over look ಮಾಡಿ ನನಗೆ ಮಾತನಾಡಲು ಅವಕಾಶ ಕೊಡಿ ಎಂದು ನಾನು ಹೇಳುತ್ತಿಲ್ಲ ಅವರದಾದ ಮೇಲೆಯೇ ನನಗೆ ಮಾತನಡಲಿಕ್ಕೆ ಅವಕಾಶ ಕೊಡಿ ಎಂದು ನಾನು ಹೇಳುವುದಕ್ಕೂ ಸಹ ಅವರು ಬಿಡಲಿಲ್ಲವೆಂದರೆ, ನಾವು ಈ ಸಭೆಯಲ್ಲಿ ಏನು ಮಾಡಲಿಕ್ಕಾಗುತ್ತದೆ? ಅವರ ಬಗ್ಗೆ ನಾವು ಅಷ್ಟೊಂದು ಗೌರವ ಕೊಟ್ಟಿದ್ದೇ ನಮ್ಮ ಅಪರಾಧವೇ? ನಾನೊಂದು adjournment motion ಅನ್ನು ತರಬಾರದೆಂದಿದೆಯೇ? ಅವರದ್ದು ಮುಗಿದ ಮೇಲೆಯೇ ನನಗೆ ಅವಕಾಶ ಕೊಡಿ

ಅಧ್ಯಕ್ಷರು ಆಯಿತು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ,

ಶ್ರೀ ಸಿದ್ದರಾಮಯ್ಯ are you goint to make a statement?

(ಗೊಂದಲ)

ಅಧ್ಯಕ್ಷರು ಮಾನ್ಯ ಮಾದುಸ್ವಾಮಿಯವರು ತಮಗೆ ಅವರದ್ದು ಆದ ಮೇಲೆಯೇ ನನಗೆ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳಿದ್ದಾರೆ ನಾನು ಅವರಿಗೂ ಅವಕಾಶ ಕೊಡುತ್ತೇನೆ, ನಿಮಗೂ ಅವಕಾಶ ಕೊಡುತ್ತೇನೆ

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ನಾನು privilage motion notice ಕೊಟ್ಟು 3–4 ದಿವಸಗಳಾಯಿತು ತಾವು ನನಗೆ ಅದನ್ನು ಪ್ರಸ್ತಾಪಿಸಲು ಅವಕಾಶ ಕೊಡಲೇ ಇಲ್ಲ

ಅಧ್ಯಕ್ಷರು ಇದು ಬಹಳ ಪ್ರಾಮುಖ್ಯವಾದ ವಿಚಾರ ಇದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂದು ನಿಮ್ಮ leader of opposition ಎಷ್ಟು ಗಲಾಟೆ ಮಾಡಿಬಿಟ್ಟರು ಎಂಬುದನ್ನು ನೀವೇ ನೋಡಿದಿರಿ ಅವರು ಈಗ ಘರ್ಜನೆ ಮಾಡುತ್ತಿದ್ದಾರೆ ಅವರ ಮುಂದೆ ಬೇರೇನೂ ನಡೆಯುವುದಿಲ್ಲ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ಈ ವಿಚಾರ ತಕ್ಷಣವೇ ನನಗೆ ಅವಕಾಶ ಕೊಡಬೇಕು

ಅಧ್ಯಕ್ಷರು ನಿಮ್ಮ ವಿಚಾರ ಕೇಳುವುದಕ್ಕೆ ನಾವು ಅವಕಾಶ ಕೊಡುತ್ತೇವೆ ಈಗ ಕುಳಿತುಕೊಳ್ಳಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ನಮ್ಮ ರೂಲ್ಸ್ ಪ್ರಕಾರ ನಿಯಮ 191 ರಲ್ಲಿ privilage Notice ಕೊಟ್ಟರೆ, You have to hear him ಬೇರೆ ಬೇರೆ ಸಬ್ಜೆಕ್ಟ್ಸ್ ಇಲ್ಲಿ ಪ್ರಸ್ತಾಪವಾಗುತ್ತಿರುವುದರಿಂದ ಪ್ರಸ್ತಾಪ ಮಾಡಲಿಕ್ಕಾಗುತ್ತಿಲ್ಲ at least, ಯಾವಾಗ ಪ್ರಸ್ತಾಪಿಸಲು ನಿಗದಿ ಮಾಡಿದ್ದೀರಿ, ಎಂಬುದನ್ನಾದರೂ ಅವರಿಗೆ ತಾವು ಹೇಳಬೇಕು as per rules ಅವರು ಕೊಟ್ಟಾಗ ಅವರಿಗೆ ಅವಕಾಶ ಕೊಡಲೇಬಾಕಾಗುತ್ತದೆ

ಅಧ್ಯಕ್ಷರು ಇವತ್ತೇ ಅವರಿಗೆ ಪ್ರಸ್ತಾಪಿಸಲು ಅವಕಾಶ ಕೊಡುತ್ತೇನೆ I will alllow him

ಶ್ರೀ ಜೆ ಸಿ ಮಾಧುಸ್ವಾಮಿ ಸನ್ಮಾನ್ಯ ಅಧ್ಯಕ್ಷರೆ, ಬೆಸ್ಕಾಂ ಸಂಸ್ಥೆಯವರು ಜನವರಿ ಫೆಬ್ರುವರಿಯಲ್ಲಿ ಏನು ತೀರ್ಮಾನ ತೆಗೆದುಕೊಂಡು ಇಡೀ ತಿಪಟೂರು ಡಿವಿಷನ್‌ದ್ದು

ಶ್ರೀ ಧರ್ಮಸಿಂಗ್ ಮಾನ್ಯ ಮಾಧುಸ್ವಾಮಿಯವರೆ, ಒಂದು ನಿಮಿಷ ನಾವೇನೂ ನಿಮಗೆ ಅಡ್ಡಿಪಡಿಸುತ್ತಿಲ್ಲ ಇವತ್ತು ಮಾನ್ಯ ಗೃಹ ಸಚಿವರು statement ಮಾಡಿದ ಮೇಲೆ ನೀವು ಅದನ್ನು ಪ್ರಾರಂಭಿಸಿ ಮಾನ್ಯ ಗೃಹ ಸಚಿವರೇ ಈಗಲೇ statement ಮಾಡಿ

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಆದ್ಯಕ್ಷರೆ, ಮಾನ್ಯ ಮಾಧುಸ್ವಾಮಿ ಯವರದ್ದು emergency ಇದೆ ಅದನ್ನೇ ಮೊದಲು ತಗೆದುಕೊಂಡಿ ಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ ರೇವಣ್ಣ, ನಿಮಗಿಂತ ಮೊದಲು ವಿದ್ಯೆ ಕಲಿತುಕೊಂಡು ಬಂದಿರುವವನು ನಾನು ಇದು emergency ಇದೆಯೋ ಇಲ್ಲವೋ ಎಂದು ಮಾನ್ಯ ಅಧ್ಯಕ್ಷರಿಗೆ convince ಮಾಡಲಿಕ್ಕೆ ಯೋಗ್ಯತೆ ಇರುವುದರಿಂದಲೇ ನಾನಿಲ್ಲಿ ಮಾತನಾಡಲಿಕ್ಕೆ ನಿಂತಿದ್ದೇನೆ ಈ ಆಟವನ್ನೆಲ್ಲಾ ನೀವು ಆಚೆ ಇಟ್ಟುಕೊಳ್ಳಿ ಇದು ಶಾಸನ ಸಭೆ ನನಗೆ convince ಮಾಡಲಿಕ್ಕೆ ಯೋಗ್ಯತೆ ಇದ್ದರೆ ಮಾತ್ರ ನಾನು ಅದನ್ನು ಪ್ರಸ್ತಾಪ ಮಾಡುತ್ತೇನೆ

ಶ್ರೀ ಹೆಚ್ ಡಿ ರೇವಣ್ಣ ನಿಮೆ convince ಮಾಡಲಿಕ್ಕೆ ಯೋಗ್ಯತೆ ಇಲ್ಲವೆಂದು ನಾನು ಹೇಳುತ್ತಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಾನಿಲ್ಲಿ ದಂದೆ ಮಾಡಲಿಕ್ಕೆ ಬಂದಿಲ್ಲ ವ್ಯಂಗ್ಯ ಆಡುವುದಕ್ಕೂ ಒಂದು ಮಿತಿ ಇಲ್ಲವೆ? we re not here to hear all these things

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಮಾದುಸ್ವಾಮಿಯವರು ಹಿರಿಯ ರಾಗಿದ್ದಾರೆ ಮಾನ್ಯ ಅಧ್ಯಕ್ಷರೆ, ಅವರ ವಿಚಾರವನ್ನೇ ಚರ್ಚೆಗೆ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದು ತಪ್ಪೇ? ಎಂಬುದನ್ನು ನೀವೇ ಹೇಳು ಅವರ ವಿಚಾರವನ್ನೇ ಚರ್ಚೆಗೆ ತೆಗೆದುಕೊಳ್ಳಿ ನಾನು ಅದಕ್ಕೆ ಉತ್ತರ ಕೊಡಲಿಕ್ಕೆ ತಯಾರಾಗಿದ್ದೇನೆ ಎಂದು ನಾನು ಹೇಳಿದೆ ಮಾನ್ಯ ಅಧ್ಯಕ್ಷರೆ, ಅವರು ಪ್ರಸ್ತಾಪ ಮಾಡಲು ಎದ್ದು ನಿಂತಾಗ, ತಾವು ರೇವಣ್ಣನವರೆ, ತಮ್ಮ ವಿಚಾರ

ಚರ್ಚೆಗೆ ಬರುತ್ತಿದೆ ಎಂದು ಹೇಳಿದಿರಿ ಆಗ ನಾನು ಅದನ್ನೇ ಚರ್ಚೆಗೆ ತೆಗೆದುಕೊಳ್ಳಿ ಸಾರ್, ನಾನು ಉತ್ತರ ಕೊಡಲಿಕ್ಕೆ ಸಿದ್ದನಿದ್ದೇನೆ ಎಂದು ಹೇಳಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಇಲ್ಲಿ ನಾವು ದರ್ಬಾರ್ ನಡೆಸಲಿಕ್ಕಾಗಿ ಇಲ್ಲ

ಶ್ರೀ ಹೆಚ್ ಡಿ ರೇವಣ್ಣ ನಾವು ಇಲ್ಲಿ ದರ್ಬಾರ್ ನಡೆಸುತ್ತಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಮಾನು ಅಧ್ಯಕ್ಷರೆ, ಏನು ಸಾರ್ ಅವರು ಈ ರಿತಿ ವ್ಯಂಗ್ಯವಾಗಿ ಮಾತನಾಡುವುದೇ? ನನಗೆ emergency ಇದೆ ಎಂದು ಮನವರಿಕೆ ಮಾಡಿಕೊಡಲು ಆಗದಿದ್ದರೆ, ನೀವು ಅದನ್ನು ರಿಜೆಕ್ಟ್ ಮಾಡಿ

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡುವುದಕ್ಕೆ ಉತ್ತರ ಹೇಳಲು ನಾನು ರೆಡಿ ಇದ್ದೇನೆ ಅದನ್ನು ತೆಗೆದುಕೊಳ್ಳಿ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ ಎಂದಷ್ಟೇ ನಾನು ಹೇಳಿದೆ ಯಾವ ತಮಾಷೆ ಮಾಡಲಿಕ್ಕಾಗಿ ಅಥವಾ ಮಾನ್ಯ ಸದಸ್ಯರಿಗೆ ಅವಮಾನ ಮಾಡಲಿಕ್ಕಾಗಿ ನಾನು ಇಲ್ಲಿಗೆ ಬಂದಿಲ್ಲ ಯಾವುದೇ ಉತ್ತರ ಹೇಳುವುದಕ್ಕೂ ನಾನು ರೆಡಿ ಇದ್ದೇನೆ

ಶ್ರೀ ಎಂ ಪಿ ಪ್ರಕಾಶ್ ದಯವಿಟ್ಟು ಮಾನ್ಯ ಪ್ರತಿಪಕ್ಷದ ನಾಯಕರು ತಪ್ಪು ಭಾವಿಸಬಾರದು ತಾವೇ ಇದರ ಬಗ್ಗೆ ಸಲಹೆಯೊಂದನ್ನು ಕೊಟ್ಟಿದ್ದೀರಿ ಮೊದಲನೆಯದಾಗಿ, ಇದರ ಬಗ್ಗೆ suo moto stament ಒಂದನ್ನು ನಾವು ಕೊಡಬಹುದು ಆದರೆ, adjournment Motion ಆಗಿ ಕೊಟ್ಟಿರತಕ್ಕದ್ದರ ಬಗ್ಗೆ ದಾಖಲೆಗೆ ಸರಿಯಾಗಿ ಹೋಗಲಿ ಎಂಬ ಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ adjournment Motion ಅನ್ನು ಈಗ ತಾವು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ ಏಕೆಂದರೆ, ಕಾನೂನಿನ ವಿವಾದಗಳಿಗೆ ಸಂಬಂಧಪಟ್ಟಂತೆ ವಿಚಾರ law and order ಗೆ ಸಂಬಂಧ ಪಟ್ಟಂಥ ವಿಚಾರ, ಲಾರಿ ಚಾರ್ಜ್ ಟಥವಾ ಫೈರಿಂಗ್

ಆಗಿರುವಂಥಹ ವಿಚಾರಗಳು ಈ ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬ ಬಗ್ಗೆ ಅನೇಕ ಸಾರಿ ಇಲ್ಲಿ ನಿರ್ಣಯ ಆಗಿರತಕ್ಕಂಥದ್ದು ಇದೆ

> There is along line of rulings not only in the old mysore state, but in every legislature in India and elesewhere on this question Where the subject matter of an adjournment motion involves the ordinary administration of law and the maintenance of law and order, such a motion would be in admissible Whether it is a lathi charge or police firing, so long as it was undertaken in the maintenance of law and order, it cannot form the subject of an adjournment motion As an adjournment motion therefore the matters raised in the several notices are inadmissible and I have, therefore, to hold that all these notices are not in order

ಈ ತರಹದ ರೂಲಿಂಗ್‌ಗಳು ನೀಡಲಾಗಿರುವ ಹಿನ್ನೆಲೆಯಲ್ಲಿ ಇದು adjournment motion ವ್ಯಾಪ್ತಿಗೆ ಬರುವುದಿಲ್ಲ ಪ್ರತಿ ಪಕ್ಷದ ನಾಯಕರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದು ಬಹಳ ಮಹತ್ವವಾದುದು, ಆದ್ದರಿಂದ ಈ ಬಗ್ಗೆ ನೀವೇ suo moto stament ಮಾಡಿ ಎಂದು ಹೇಳಿರುವುದರಿಂದ, ಈ adjournment motion ಅನ್ನು inadmissible ಎಂದು ಮಾನ್ಯ ಅಧ್ಯಕ್ಷರು reject ಮಾಡ ಬೇಕಾಗುತ್ತದೆ ಯಾವುದೇ ಮಂತ್ರಿ ಹೇಳಿಕೆಯೊಂದನ್ನು ಕೊಟ್ಟಂತಹ ಸಂದರ್ಭದಲ್ಲಿ ಅದರ ಬಗ್ಗೆ ಚರ್ಚೆಗೆ ಅವಕಾಶ ಇರುತ್ತದೆ ಇದು ಎಲ್ಲರಿಗೂ ಕೂಡ ಗೊತ್ತಿರುವ ವಿಚಾರವೇ ಆಗಿದೆ ಹಿಂದೆ ಮಾನ್ಯ ರಮೇಶ್ ಕುಮಾರ್ ರವರೂ ಸಹ ಇಂತಹ ಸಂದರ್ಭಗಳು ಬಂದಾಗ ಚರ್ಚೆಗೆ ಅವಕಾಶವನ್ನು

ಕಲ್ಪಿಸಿಕೊಟ್ಟಿದ್ದಾರೆ ಇದರ ಬಗ್ಗೆ ಚರ್ಚೆ ಆಗಬೇಕೆಂಬುದೇ ಅವರ ಉದ್ದೇಶವಾಗಿರುವುದರಿಂದ, ತಾವು ಈ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ಅವರೇ ಕೊಟ್ಟಂಥಹ ಸಲಹೆ ಮೇರೆಗೆ, ಇದು ಬಹಳ ಮಹತ್ವವಾದಂಥಹ ವಿಚಾರವಾಗಿರುವುದರಿಂದ, ಈ ಬಗ್ಗೆ ನಾನೇ ಒಂದು ಸ್ವಯಂಪ್ರೇರಿತ ಹೇಳಿಕೆಯನ್ನು ಸದನಕ್ಕೆ ಕೊಡುತ್ತೇನೆ `

ಶ್ರೀ ಎಂ ಮಲ್ಲಿಖಾರ್ಜುನ ಖರ್ಗೆ ಸರ್, ಈಗ ನೀವು ತೆಗೆದು ಕೊಂಡು ಚರ್ಚೆಗೆ ಈಗಲೇ ಅವಕಾಶ ಮಾಡಿಕೊಡಿ ಎಂದು ನಾವು ಒತ್ತಾಯ ಮಾಡಲಿಲ್ಲ ನಮ್ಮ ಅನಿಸಿಕೆ ಏನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ, ನೆನ್ನೆಯಾದ ಒಂದು ಎನ್‌ಕೌಂಟರ್, ಬಗ್ಗೆ ಸಂಶಯ ಮೂಡಿದೆ ಅದೇನು ಫಾಲ್ಸ್ ಎನ್‌ಕೌಂಟರೋ, ನಿಜವಾದಂಥದ್ದೋ ಎನ್ನುವ ಒಂದು ಸಂಶಯ ಮೂಡಿದ ಮೇಲೆ, ಇದನ್ನು ನಾವು ಹೆಚ್ಚಿನ ರೀತಿಯಲ್ಲಿ ಬೆಳೆಸುವುದು ಬೇಡ ಸತ್ಯಾಂಶ ಬೆಳಕಿಗೆ ಬಂದು ಸಾರ್ವಜನಿಕರಿಗೆ ಗೊತ್ತಾಗಲಿ ಇಡೀ ದೇಶಕ್ಕೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ನಾವು suo moto ಸ್ಟೇಟ್‌ಮೆಂಟ್ ಮಾಡಿ ಎಂದು ಹೇಳಿದ್ದೇವೆ ಅದನ್ನೇ ಅದನ್ನೇ ವಿರೋಧ ಪಕ್ಷದ ನಾಯಕರು ಕೂಡ ಹೇಳುತ್ತಿದ್ದಾರೆ ಅದನ್ನು ಬಿಟ್ಟು ನೀವು ಕಾನೂನನ್ನು ತೆಗೆದುಕೊಂಡು ಇರು ಫೈರಿಂಗ್ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ, ಇದು ಎನ್‌ಕೌಂಟರ್, ಅದರಲ್ಲಿ ಎನ್‌ಕೌಂಟರ್ ಎಂದು ಇದೆಯಾ?, ಇಲ್ಲ, ಹಾಗಾದರೆ ನೀವು ಒಂದೊಂದು ಶಬ್ದಕ್ಕೂ ಸರ್, ಇದು ಎನ್‌ಕೌಂಟರ್ ಇದೆ, ಇನೊಸೆಂಟ್ ಎಂದ ಮೇಲೆ ಎನ್‌ಕೌಂಟರ್ ಅದಕ್ಕಾಗಿ ಇದು ನಿಲುವಳಿ ಸೂಚನೆಯಲ್ಲಿ ಬರುತ್ತದೆ ತೆಗೆದುಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ ನೀವು ಇಲ್ಲವೆಂದು ಹೇಳಿ, ಅದು ಫೈರಿಂಗಿದ್ದರೆ, ಪೋಲೀಸ್‌ನವರು ಯಾವುದೇ ಲಾಟಿ ಚಾರ್ಜ್ ಮಾಡಿದರೆ ಬರುವುದಿಲ್ಲವೆಂದು ಹೇಳುತ್ತಿರಿ ಪೋಲೀಸ್ ಲಾಠಿಚಾರ್ಜ್ ಮಾಡಿದರೆ ಬರುವುದಿಲ್ಲ, ಫೈರಿಂಗ್ ಮಾಡಿದರೂ ಬರುವುದಿಲ್ಲ, ಎನ್‌ಕೌಂಟರ್ ಮಾಡಿದರೆ ಬರುತ್ತದೆ ಚರ್ಚೆಗೆ ತೆಗೆದುಕೊಳ್ಳುತ್ತೀರಾ? ಅದಕ್ಕೆ ಈ ಬಗ್ಗೆ ತಕರಾರು ಬೇಡ, ನಾವು ಒಪ್ಪಿಕೊಂಡಿದ್ದೇವಲ್ಲಾ, ನೀವು suo moto ಸ್ಟೇಟ್‌ಮೆಂಟ್ ಮಾಡಿ, ನಮಗೇನೂ ಸಂಶಯಗಳಿವೆ ಅವನ್ನು ನಾವು ಸೇರಿದಂತೆ ಎಲ್ಲಾ ಸದಸ್ಯರು ಕೇಳುತ್ತಾರೆ, ಕ್ಲಾರಿಫೈ ಆಗಲಿ

ಶ್ರೀ ವಾಟಾಳ್ ನಾಗರಾಜ್ ಸರ್ಕಾರ ಸದನ ನಡೆಯುತ್ತಿರುವಾಗ, ಇಂಥ ವಿಚಾರ ಬಂದಾಗ ತಕ್ಷಣ ನೆನ್ನೆಯೇ ತಾವು ಸದನದಲ್ಲಿ ಹೇಳಿಕೆ ಮಾಡಬೇಕಾಗಿತ್ತು ಮಧ್ಯೆ ಮಾತನಾಡುವಾಗ ತಾವು ಅರ್ಥಬಂರ್ಧ ಹೇಳಿದಿರಿ ಹಾಗೆ ಹೇಲಿ ನಂತರ ಸಂಜೆ ಮುಖ್ಯಮಂತ್ರಿಗಳ ಸಬೆ ಇದೆ, ಅದಾದ ನಂತರ ಸದನದಲ್ಲಿ ಹೇಳಿಕೆ ಕೊಡುತ್ತೇವೆಂದು ತಾವು ಹೇಳಿದಿರಿ ನಾವು ಇಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟು ನಿಮ್ಮನ್ನು ಕೇಳುವ ಬದಲು, ಗೃಹ ಸಚಿವರಾದವರು ನೆನ್ನೆ, ಈ ಪರಿಸ್ಥಿತಿ ನಡೆದಿದೆ ಎಂದು ಹೇಳಿಕೆ ಕೊಡಬೇಕಾಗಿತ್ತು ಅದು ನಿಜಕ್ಕೂ ನಿಮ್ಮ ಜವಾಬ್ದಾರಿ, ಕರ್ತವ್ಯ

ಶ್ರೀ ಕೆ ಆರ್ ರಮೇಶ್ ಕುಮಾರ್ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅಡ್ಮಿಸಿಬಿಲಿಟಿ ಇಲ್ಲವೆಂದು ಹೇಳಿದಿರಿ kındly go through the notıce that we have gıven ತಮಗೆ ಸ್ಪಷ್ಟವಾಗಿ ಅರ್ಥ ಬರುವಂತೆ ನೋಟೀಸ್‌ನಲ್ಲಿ ನಾವು ಹೇಳಿದ್ದೇವೆ ಹ್ಯುಮನ್ ರೈಟ್ಸ್ ವಯೊಲೇಷನ್ ಅಡ್ಜರ್ನಮೆಂಟ್ ಮೋಷನ್‌ನಲ್ಲಿ ತರಬಾರದೆಂದು ಯಾವ ರೂಲಿಂಗ್ ಇಲ್ಲ ಈ ಸದನದಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಂ ಬಂದಾಗ ನೋಟೀಸ್ ಕೊಡುವುದು ಚರ್ಚೆಯಾಗುವುದು, ಪ್ರಿಲಿಮಿನರಿ ಸಬ್‌ಮಿಷನ್ ಆಗುವುದು, ಲಾಸ್ಟ್‌ಗೆ ಅಧ್ಯಕ್ಷರು ತಮ್ಮ ಡಿಸ್ಕ್ರಿಷನ್ ಉಪಯೋಗಿಸುವುದು ನಡೆದುಕೊಂಡು ಬಮದಿರುವ ಪದ್ಧತಿ ಇಲ್ಲಿ ನಿಮ್ಮವರು ಏಕೆ ಹೋದರು, ಎಷ್ಟು ಹೊಡೆದರು ಎಂದು ನಾವು ಕೇಳುತ್ತಿಲ್ಲ ಪತ್ರಿಕೆಗಳಲ್ಲಿ ಬಂದಿರುವ ವರ್ತಮಾನ .ಮತ್ತು ನಮಗೆ ಬಂದಿರುವ ಇತರೆ ಎಲ್ಲ ಮಾಹಿತಿಗಳನ್ನಿಟ್ಟುಕೊಂಡು ಹ್ಯುಮನ್ ರೈಟ್ಸ್ ವೈಲೇಷನ್ ಆಗಿದೆ ಎಂಬುದನ್ನು ಪ್ರಸ್ತಾಪ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ Understandıng the sensıtıvıty ofthe sıtuatıon, ತಾವು ಮಾಡುವ suomoto statement ನಲ್ಲಿ ನಮಗೆ ತೃಪ್ತಿಯಾಗುವುದಾದರೆ, we wıll stop there ಅಥವಾ ıf we have to seek some clarıficatıon, ಅಗತ್ಯವಿದ್ದರೆ ನಾವು ಕೇಳಿತ್ತೇವೆ But ıt ıs already 1'O clock ನಿಮ್ಮ ಇಲಾಖೆಯವರು ಮೃತರಾಗಿರುವ ಪೈಕಿ ಇಬ್ಬರನ್ನು, ವಾರಸುದಾರರಿಲ್ಲವೆಂದು ಹಾಗೆ ಜಬರ್ದಸ್ತಿಯಿಂದ ದಫನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ whıch ıs a very serıous thıng ಮೃತರಾಗಿರುವವವರ ಪೈಕಿ ವಾರಸುದಾರರು ಒಬ್ಬರು ಇಲ್ಲ post mortem should be held ın the presence of ȷudıcıal

officers These are two important things Kindly bear this in mind and make a statement

ಅಧ್ಯಕ್ಷರು ಈಗ ಇದು ಅಡ್ಜರ್ನಮೆಂಟ್ ಮೋಷನ್‌ಗೆ ಬರುವುದಿಲ್ಲ suomoto statement ಮಾಡುತ್ತಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ನಾವಿನ್ನೂ ಸಬ್‌ಮಿಷನ್ನೇ ಮಾಡಿಲ್ಲ In the absence of material before you how can you pass the judgement? if we have made out submission and if you have heard us and pronounced the judgement, then it becomes a fair judgement Even before we could start making out submission judgement pronounce ಮಾಡಿದರೆ, it is fair? it is very unfortunate Please sir, kindly hold restraint

ಶ್ರೀ ಆರ್ ರೋಷನ್ ಬೇಗ್ as per the Human rights commissions recommendation post - mortem should be videographed and photographed

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ, ಈ ನಿಲುವಳಿ ಸೂಚನೆಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡದಂತೆ ಎನ್‌ಕೌಂಟರ್ ಎನ್ನುವ ಶಬ್ದವಿದೆ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬುದನ್ನು ಇದರಲ್ಲಿ ಪ್ರಸ್ತಾಪ ಮಾಡಿಲ್ಲ ಎನ್‌ಕೌಂಟರ್ ಆಗಬೇಕಾಗಿದ್ದರೂ ಕೂಡ in order to maintain ಫೈರಿಂಗ್ ಆಗಬೇಕಾಗುತ್ತದೆ ಒಬ್ಬೊಬ್ಬರು ಒಂದೊಂದು ದೃಷ್ಟಿಕೋನದಿಂದ ಹೇಳಬಹುದು, ನೀವು ಉದ್ದೇಶ ಪೂರ್ವಕವಾಗಿ ಎನ್ಕೌಂಟರ್ ಎಂದು ಮಾಡಿದ್ದರೆಂದು ಹೇಳಬಹುದು ಅದೇನಾದರೂ ಇರಲಿ, ತಾವೇ ನಾಯಕರಾಗಿ ನನಗೆ ಒಂದು ಸಲಹೆಯನ್ನು ಕೊಟ್ಟಿದ್ದಿರಿ ಏಕೆಂದರೆ ಮತ್ತೆ ಇದು ವಿವಾದಗಳಾಗುತ್ತದೆ ಅನೇಕ ನಮ್ಮ ಸದನದಲ್ಲಿ ಕೊಟ್ಟಿರುವುದರಲ್ಲಿ ಅದೊಂದು ಪರಂಪರೆಯಾಗಬಾರದೆನ್ನುವ ಕಾರಣಕ್ಕಾಗಿಯೇ 60 ರ ಕೆಳಗಡೆ ನಿಲುವಳಿ ಸೂಚನೆ ರೂಪದಲ್ಲಿ ಲಾ

ಅಂಡ್ ಆರ್ಡರ್ ಮೆಂಟೇನೆನ್ಸ್ ಆಗಿರುವುದನ್ನು ತೆಗೆದುಕೊಳ್ಳಬಾರದು ಆದರೆ suo-moto statement ಅನ್ನು ಮಾಡಲೇಬೇಕಾಗುತ್ತದೆಂದು ನಾನು ಹೇಳಿದದು, suomoto statement ಮಾಡಿದ ಸಂದರ್ಭದಲ್ಲು ಕೂಡ ಎಲ್ಲರಿಗೂ ಚರ್ಚೆಗೆ ಅವಕಾಶವಿದೆ ಉದ್ದೇಶ ನೆರವೇರುತ್ತದೆನ್ನುವ ಕಾರಣಕ್ಕಾಗಿಯೇ ತಾವು ಅದನ್ನು ತಿರಸ್ಕರಿಸಿ ಎನ್ನುವ ಅರಿಕೆಯನ್ನು ನಾನು ಮಾಡಿಕೊಂಡಿದ್ದೇನೆ ನಾನು ಈ ಸಂದರ್ಭದಲ್ಲಿ ಏನು ನಡೆಯಿತೆನ್ನುವ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆ ಅದರ ಜೊತೆಗೆ ಇಲ್ಲಿ ತಾವೇನು ಹ್ಯುಮನ್ ರೈಟ್ಸ್ ಬಗ್ಗೆ ಹೇಳಿದಿರಿ, ಮ್ಯಾಜಿಸ್ಟ್ರೇಟ್ ಇರುತ್ತಾರೆ, ವಿಡಿಯೋಗ್ರಾಫ್ ಇರುತ್ತದೆ, ಇದುವರೆವಿಗೆ ಬಂದಿರುವ ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ತಾವು ಕೂಡ ಗೃಹ ಮಂತ್ರಿಗಳಾಗಿದ್ದವರು, ಆ ಕಾರಣಕ್ಕೆ ಇದೆಲ್ಲವೂ ಆ ತರಹದಲ್ಲಿ ಆಗುತ್ತದೆ ಏಕೆಂದರೆ ಬರಿ ನಾವೆಂದಲ್ಲ, ನಡೆದಿರತಕ್ಕಂಥ ಹೋರಾಟವು ಕೂಡ ನಿಷ್ಪಕ್ಷಪಾತವಾಗಿರಬೇಕೆನ್ನುವ ಕಾರಣಕ್ಕಾಗಿ ಇವತ್ತು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುವಲ್ಲಿ autopsy ಆಗುವಾಗ ವಿಡಿಯೋಗ್ರಫಿ ಆಗುತ್ತದೆ ಮತ್ತೆ ಮಾಜಿಸ್ಟ್ರೇಟ್ ಅವರು ಪಕ್ಕದಲ್ಲಿರುತ್ತಾರೆ ಆ ಕಾರಣಕ್ಕಾಗಿ ಆ ಬಗ್ಗೆ ಯಾವುದೇ ಸಂಶಯವನ್ನಿಟ್ಟುಕೊಳ್ಳುವ ಅಗತ್ಯವಿಲ್ಲವೆಂದು ತಮ್ಮ ಮೂಲಕ ಸದನಕ್ಕೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ

ಈ ಸದನದಲ್ಲಿ ಈ ರೀತಿಯ ಹೇಳಿಕೆ ಕೊಡಲು ಬಯಸುತ್ತೇನೆ

1 ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜ ಪೋಲೀಸ್ ಠಾಣೆ ವ್ಯಾಪ್ತಿಯ ಮೆಣಸಿನಹಾಡ್ಯದ ವೊಡೆಯರ ಮರ ಎಂಬಲ್ಲಿ ತಲೆ ಮರೆಸಿ ಕೊಂಡಿದ್ದ ನಕ್ಸಲೀಯರ ಪತ್ತೆ ಮತ್ತು ಬಂಧನಕ್ಕೆ ಹೋದಾಗ ನಕ್ಸಲರು ನಕ್ಸಲ್ ನಿಗ್ರಹ ದಳದ ಪೋಲೀಸರ ಮೇಲೆ ಗುಂಡು ಹಾರಿಸಿರುತ್ತಾರೆ ನಕ್ಸಲ್ ನಿಗ್ರಹ ದಳವು ಪ್ರತಿಯಾಗಿ ಗುಂಡು ಹಾರಿಸಿದಾಗ ಎನ್‌ಕೌಂಟರ್‌ನಲ್ಲಿ ಐದು ನಕ್ಸಲರು ಸಾವನ್ನಪ್ಪಿದ್ದು, ಸ್ಥಳದಲ್ಲಿ ಒಂದು 9 ಎಂ ಎಂ ಸ್ಟೆನ್ ಗನ್ 12, ಜೀವಂತ ಗುಂಡುಗಳು ಮತ್ತು 5 ಖಾಲಿ ಕಾರ್ತೂಸ್‌ಗಳು, ಎಕೆ 47, ಖಾಲಿ ಗುಂಡುಗಳು, ಎಸ್ ಎಲ್ ಆರ್ ಮತ್ತು ಒಂದುದೇಶೀಯ ಪಿಸ್ತೂಲು (ತಪಂಚ), ಹ್ಯಾಂಡ್ ಗ್ರೆನೇಡ್ ಹಾಗೂ ಕಾಂಪಾಸ್, ಮ್ಯಾಪ್, ಕರಪತ್ರಗಳು, ಮಾವೋ ಪುಸ್ತಕಗಳು ಹಾಗೂ ತರಬೇತಿ ಪುಸ್ತಕಗಳು ಇವುಗಳನ್ನು ಸ್ಥಳದಿಂದ

ವಶಪಡಿಸಿಕೊಳ್ಳಲಾಗಿದೆ ಈ ಎನ್‌ಕೌಂಟರ್ ದಿನಾಂಕ 10 07 2007 ಬೆಳಿಗ್ಗೆ 8 00 ರಿಂದ 10 45 ರ ಒಳಗೆ ನಡೆದಿರುತ್ತದೆ

2 ಈ ಎನ್‌ಕೌಂಟರಿನಲ್ಲಿ ಸಾವಿಗೀಡಾದ ನಕ್ಸಲರ ಗುರುತು ಈ ಕೆಳಕಂಡಂತಿದೆ

1 ಗೌತಮ್ ವಯಸ್ಸು 30 ವರ್ಷ ರಾಜ್ಯ ಸಿ ಪಿ ಐ ಮಾವೋ ಸಂಘಟನೆಯ ಸದಸ್ಯ ಈ ಸಂಘಟನೆಯ ಕಾನೂನು ಬಾಹಿರ ಸಂಘಟನೆ ಯೆಂದು ಘೋಷಿಸಲಾಗಿದೆ

ಇವನು ಆಲ್ದೂರು ಪೋಲೀಸ್ ಠಾಣೆ ಅಪರಾಧ ಸಂ 187/ 2006, ಕಲಂ 143, 144, 147, 148, 342, 506, 457 395 ರೆಡ್ ವಿತ್ 149 ಐಪಿಸಿ, 25 ಮತ್ತು 27 ಆರ್ಮ್ಸ್ ಆಕ್ಟ್ ರಲ್ಲಿ ಬಾಗಿಯಾಗಿರುತ್ತಾನೆ

2 ಪರಮೇಶ್ ವಯಸ್ಸು 30 ವರ್ಷ ಇವರು ಎರಡು ಪ್ರಕರಣಗಳಲ್ಲಿ ಅಪರಾಧಿಯಾಗಿರುತ್ತಾನೆ

1 ಬಾಳೆ ಹೊನ್ನೂರು ಪೋಲೀಸ್ ಠಾಣೆಯ ಅಪರಾಧ ಸಂ 175/2006 ಕಲಂ 143, 144, 113, 338 (2) ರೆಡ್ ವಿತ್ 149 ಐಪಿಸಿ ಮತ್ತು ಕಲಂ 3 ಮತ್ತು 25 ಆರ್ಮ್ಸ್ ಆಕ್ಟ್

2 ಬಾಳೆ ಹೊನ್ನೂರು ಪೋಲೀಸ್ ಠಾಣೆಯ ಅಪರಾಧ ಸಂ 4/2004 ಕಲಂ 124 (ಎ) ರೆಡ್ ವಿತ್ 34 ಐಪಿಸಿ ಇವನು ನಕ್ಸಲರು ಕಳದ ನಾಲ್ಕು ವರ್ಷಗಳಲ್ಲಿ ನಡೆಸಿದ ಘೋರ ಅಪರಾಧಗಳಲ್ಲಿ ಭಾಗಿಯಾಗಿರುತ್ತಾನೆ

3 ಸುಬ್ರಮಣ್ಯ ವಯಸ್ಸು 25 ವರ್ಷ

4 ರಾಮೇಗೌಡ ವಯಸ್ಸು 50 ವರ್ಷ

5 ಕಾವೇರಿ ವಯಸ್ಸು 40 ವರ್ಷ

ಈ ಎನ್‌ಕೌಂಟರ್‌ನಲ್ಲಿ ಸಾವನ್ನಪ್ಪಿದ್ದ ವ್ಯಕ್ತಿಗಳ ಪೂರ್ಣ ವಿವರಗಳನ್ನು ಪರಿಶೀಲಿಸಲಾಗುತ್ತಿದೆ ಈ ಎನ್‌ಕೌಂಟರಿನಲ್ಲಿ ಗಾಯಗೊಂಡ ಶ್ರೀ ರಾಘವ್, ಪಿ ಸಿ ರವರನ್ನು ಉಡುಪಿ 'ಜಿಲ್ಲೆಯ ಮಣಿಪಾಲ್ ಆಸ್ಪತ್ರೆಗೆ ಸೇರಿಸಲಾಗಿದೆ ಇವರು ಅಪಾಯದಿಂದ ಪಾರಾಗಿದ್ದು ಚೇತರಿಸಿಕೊಳ್ಳುತ್ತಿದ್ದಾರೆ

3 ವೊಡೆಯರ್ ಮರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಕ್ಸಲ್ ನಿಗ್ರಹ ದಳದವರು ನಕ್ಸಲರಿಗಾಗಿ ಹುಡುಕಾಟವನ್ನು ಮುಂದುವರೆಸಿದ್ದಾರೆ ಈ ಎನ್‌ಕೌಂಟರ್ ಸಂದರ್ಭದಲ್ಲಿ ಇಬ್ಬರು ನಕ್ಸಲರು ತಪ್ಪಿಸಿಕೊಂಡಿದ್ದು ಅವರನ್ನು ಹುಡುಕಲು ಮತ್ತು ಬಂಧಿಸಲು ಕ್ರಮ ಪ್ರಗತಿಯಲ್ಲಿರುತ್ತದೆ

ಈ ಘಟನೆಯ ಬಗ್ಗೆ ವಿಚಾರಣೆ ನಡೆಯುತ್ತಿದೆ ಹೆಚ್ಚಿನ ಮಾಹಿತಿ ನನಗೆ ಬಂದ ತಕ್ಷಣ ಸದನಕ್ಕೆ ಅದನ್ನು ತಿಳಿಸುತ್ತೇನೆ

ತಾವು ಈಗ ಆ ಪ್ರಶ್ನೆ ಎತ್ತಿದ್ದರಿಂದ ಹೇಳುತ್ತಿದ್ದೇನೆ ಈ ಘಟನೆ ಬಗ್ಗೆ SDM ಚಿಕ್ಕಮಗಳೂರು ಇವರು ನಿಯಮಾನುಸಾರ ವಿಚಾರಣೆ ಮಡುತ್ತಿದ್ದಾರೆ SDM ರವರೇ ಸ್ಥಳ ಪರೀಕ್ಷೆ ಮತ್ತು ಮಹಜರು ಮಾಡಿರುತ್ತಾರೆ ಈ ಬಗ್ಗೆ ಮಾನವ ಹಕ್ಕುಗಳ ಆಯೋಗದ ನಿಯೋಗದ ಪ್ರಕಾರ ಸಂಪೂರ್ಣ ತನಿಖೆ ಮತ್ತು ವೊಚಾರಣಾ ಕ್ರಮವನ್ನು ಮುಂದುವರೆಸಿದ್ದೇವೆ ಇಗ ತಾವು ಹೇಳಿದಂತೆ ಗೌತಮ್‌ರವರು ಏನು ಮಾಡಿದ್ದಾರೆ ಹೊಸದಾಗಿ ಬಂದ ವಿವರಗಳಂತೆ ಆತನ ಸಹೋದರ ಪೋಲೀಸ್ ಪೇದೆ ಆಗಿ ನೇಮಕಾತಿ ಅಗಿದ್ದಾನೆ ಆತ ಈಗ ಖಾನಾಪುರದ ಪೋಲೀಸ್ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾನೆ ಆತನನ್ನು ಕರೆಸಿಕೊಂಡು ಚಿಕ್ಕಮಗಳೂರಿಗೆ ಕಳುಹಿಸಿಕೊಡುತ್ತೇವೆ ಏಕೆಂದರೆ ತಾವು ಏನು ಹೇಳಿದ್ದೀರಿ, ಶವಸಂಸ್ಕಾರ ಆಗತಕ್ಕಂಥಾದ್ದು ಗುರುತಿಸಬೇಕೆಂದು ಹೇಳಿದ್ದೀರಿ ಆ ವಿಚಾರದಲ್ಲಿ ನಮಗೆ ಹೆಚ್ಚಿನ ಮಾಹಿತಿ ಸಿಕ್ಕಿದೆ ಆ ಮಾಹಿತಿ ಪ್ರಕಾರ ಖಾನಾಪುರದಿಂದ ಆತನನ್ನು ಕರೆಸಿಕೊಂಡು ಚಿಕ್ಕಮಗಳೂರಿಗೆ ಇದು ಇಲ್ಲಿಯವರೆಗೆ ಆಗಿರತಕ್ಕಂತಹ ಘಟನೆ ಬಹಳ ಸೂಕ್ಷ್ಮವಾದ ವಿಷಯವಾಗಿರುವುದರಿಂದ ಅದರ ಗಾಂಭಿರ್ಯತೆಗೆ ಅನುಗುಣವಾಗಿ ತಾವು ಯಾವುದೇ ಚರ್ಚೆ ಮಾಡಿದರೂ ನಮ್ಮ ಸ್ವಾಗತವಿದೆ

ಶ್ರೀ ಎನ್ ಧರ್ಮ ಸಿಂಗ್ ಮಾನ್ಯ ಅಧ್ಯಕ್ಷರೆ, ಈ ಘಟನೆ ಮೊನ್ನೆ ನಡೆದಿದೆ ಇಲ್ಲಿಯವರೆಗೆ Sou-motu statement ಮಾನ್ಯ ಗೃಹ ಸಚಿವರು ಕೊಡಬೇಕಾಗಿತ್ತು

ಇವತ್ತು ಕೊಟ್ಟಿದ್ಧೀರಿ ಇಂತಹ ಮಹತ್ವವಾದ ಘಟನೆ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸಿದಾಗ ಅದರ ಶಬ್ದಗಳು interpretation ಅಲ್ಲ, ಇದು ಭವನಾತ್ಮಕವದ ವಿಚಾರ ರಾಜ್ಯದಲ್ಲಿ ನಕ್ಸಲೈಟ್ ಚಟುವಟಿಕೆ ಬೆಳೆಯುತ್ತಿದೆ ಇದು curb ಮಾಡತಕ್ಕಂತಹ ರೀತಿಯಲ್ಲಿ ಕೆಲವು ವಿಚಾರ ಗಳನ್ನು ಪ್ರಸ್ತಾಪ ಮಡುತ್ತೇವೆ ಅದಕ್ಕೆ ತಾವು ಪ್ರಸ್ಟೀಜ್‌ನಲ್ಲಿ ಇರಲಾರದೆ ಇವತ್ತು ರಾಜ್ಯದ ಗೃಹ ಸಚಿವರಾಗಿ ವಾಸ್ತವಾಂಶಗಳನ್ನು ಪ್ರಸ್ತಾಪ ಮಡುತ್ತೇವೆ ಅದಕ್ಕೆ ತಾವು ಪ್ರಸ್ಟೀಜ್‌ನಲ್ಲಿ ಇರಲಾರದೆ, ಇವತ್ತು ರಾಜ್ಯದ ಗೃಹ ಸಚಿವರಾಗಿ ವಾಸ್ತವಾಂಶಗಳನ್ನು ಹೇಳಬೇಕು ಮೊನ್ನೆ ತಾವು ಒಂದು ಸಭೆ ಮಾಡಿದಿರಿ ನಕ್ಸಲೈಟ್ Activities ಬಗ್ಗೆ It is a socio- economic problem ಸಾಕೇತ್ ರಾಜನ್ ಸತ್ತರೂ Saket rajan has written 14 books you must be knowing ದೊಡ್ಡ intellectual ಆಗಿದ್ದ ಆತ ಕೂಡ ಆಪರೇಷನ್ ಮಾಡತಕ್ಕಂತಹ ಮಾತನ್ನು ಹೇಳಿದ್ದೀರಿ because you have got socialist background, philosophy ಎಂದು ನಾವು ತಿಳಿದುಕೊಂಡಿದ್ದೇವೆ ಈಗ ತಾವು ರಾಜ್ಯದ ಗೃಹ ಸಚಿವರಾದ ಮೇಲೆ ಮುಖ್ಯಮಂತ್ರಿಗಳು ಬಂದ ಮೇಲೆ ಈ ಸೂಕ್ಷ್ಮವಾದ ವಿಚಾರಗಳ ಬಗ್ಗೆ ಒಬ್ಬರನ್ನು ಸಭೆಗೆ ಕರೆದಿಲ್ಲ you have not taken the opposition into confidence apart from the legislature ಬೇರೆ ಬೇರೆ ಜನರು ನೀವು ಎಲ್ಲ ಮುಖಂಡರನ್ನು ವಿಚಾರವಾದಿಗಳನ್ನು ಕರೆಸಿ ಮಾತನಾಡಬೇಕಿತ್ತು ಏಕೆಂದರೆ ಕುದುರೆ ಮುಖದಲ್ಲಿ ಇರತಕ್ಕಂತಹ ಸಮಸ್ಯೆಗಳು ಬೇರೆ, ಇಲ್ಲಿ ಇರತಕ್ಕಂತಾದ್ದು ಏನೆಂದರೆ, ನಕಲಿ enocounter ಆಗಿದೆ ರೈತರನ್ನು ಕೊಂದು ಹಾಕಿದ್ದಿರಿ ಅಲ್ಲಿ ಬಹಳ ಕರುಣಾಜನಕವಾದ ವಾತಾವರಣ ನಿರ್ಮಾಣವಾಗಿದೆ ಅದರ ಬಗ್ಗೆ ನಾವು ಇವತ್ತು ಕೇಳುತ್ತಿದ್ದೇವೆ ಒಳಗಡೆ ಹೋಗಿ ನಿವು ಕೂಡ ಇದ್ದೀರಿ ಎನ್ನತಕ್ಕಂತಹ ಮಾತನ್ನು ಹೇಳಿದ್ದೀರಿ ಯಾರು ನಕ್ಸಲರು ಇದ್ದಾರೆ ಅವರನ್ನು ಹತ್ತಿಕ್ಕತಕ್ಕಂತಹ ಪ್ರಯತ್ನ ಮಾಡಿ, ಅದರ ಬಗ್ಗೆ ಬೇರೆ ವಿಚಾರ ಇಲ್ಲ ಛತ್ತೀಸ್‌ಘಡದಲ್ಲಿ ನಡೆಯುತ್ತಿದೆ ಆಂದ್ರ ಪ್ರದೇಶದಲ್ಲಿ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ

ಇಂತಹ activities ನಡೆಯುತ್ತಿದೆ ಅಲ್ಲಿರತಕ್ಕಂತಹ ಮುಖ್ಯಮಂತ್ರಿಗಳು ಫತೆ ಮೈದಾನ ಎಂದು ಎಂದು ಒಂದು ಮೈದಾನ ಇದೆ ಈ ಮೈದಾನದಲ್ಲಿ ನಕ್ಸಲೈಟರನ್ನು ಕರೆಸಿ ಗದ್ದಾರ್ ಎಂದು ಪ್ರತಿಪಾದನೆ ಮಾಡತಕ್ಕಂತಹ ವ್ಯಕ್ತಿಗಳನ್ನು ಕರೆಸಿ ಸಮಾಲೋಚನೆ ಮಾಡಿದ್ದಾರೆ ಅದು ಕೂಡ ಬಗೆಹರಿದಿಲ್ಲ ದೇಶದಲ್ಲಿ ನಾವು socio economic problem ಎಂದು ಏನು ಹೇಳುತ್ತೇವೆ, ಆ ಭಾಗದಲ್ಲಿ ಇರತಕ್ಕಂತಹ ಸಮಸ್ಯೆಗಳು ವಿರಲ್ ಎಂದು ಹೋರಾಟಗಾರರಿದ್ದಾರೆ, ನಮ್ಮ ಶ್ರೀ ರಾಮ ರೆಡ್ಡಿಯವರಿಗೆ ಗೊತ್ತಿರಬಹುದು, ಅವರನ್ನು ಕರೆಸಿ ಮಾತನಾಡಿದ್ದೇನೆ ನೀವು ಮಾತನಾಡ ಬೇಕಾಗುತ್ತದೆ ಚರ್ಚೆ ಮಾಡಬೇಕಾಗುತ್ತದೆ, ಸಮಸ್ಯೆಗಳು ಬಗೆ ಹರಿಸಬೇಕೆಂದು ಹೇಳ ಬೇಕಾಗುತ್ತದೆ ಅವರು ಬಂದರೂ ಪೋಲೀಸ್‌ನವರು ಗುಂಡು ಹೊಡೆದರು that is not the solution you cannot, bullet ನಿಂದ violence silence ಮಾಡುವುದಕ್ಕಾಗುವುದಿಲ್ಲ ಆ background ನನಗೆ ಗೊತ್ತಿದೆ, ಆ background ನನಗೆ ಗೊತ್ತಿದೆ ಆ background ನಿಂದ ನಾನು ಬಂದಿದ್ದೇನೆ ನೋಡಿದ್ದೇನೆ ಆ ಜನರ ಜೊತೆಯಲ್ಲಿ ಮತನಡಿದ್ದೇನೆ ಇವತ್ತು ಸಾಕೇತ್‌ರಾಜನ್ ಸತ್ತಾಗ ಗದ್ದಾರ್ ಕೃಷ್ಣದಲ್ಲಿ ಬುದಿ ಹಿಡಿದುಕೊಂಡು ಬಂದಿದ್ದ ಅದನ್ನು ನೋಡಿದರೆ ನಮಗೇ ಅಳು ಬರುತ್ತದೆ ಇಂತಹ ಎಲ್ಲ ಘಟನೆಗಳೂ ಇವೆ ರಾಷ್ಟ್ರಮಟ್ಟದಲ್ಲಿ ಕೂಡ ಬಹಳಷ್ಟು ವಿಚಾರ ನಡೆಯುತ್ತಿದೆ ನೀವು ಮಾಡಿದ್ದು ಏನು? ನೀವೇನಾದರೂ ನಮಗೆ ಕರೆಸಿದ್ದಿರಾ? ಇಂತಹ ವಿಚಾರಗಳನ್ನು ಕೇಳತಕ್ಕಂತಹ ಪ್ರಯತ್ನ ಮಾಡಿದ್ದೀರಾ? ಗಡಿ ಭಾಗದಲ್ಲಿರ ತಕ್ಕಂತಹ ಅರಣ್ಯದ ಬಗ್ಗೆ ನೀವು ಕೇಂದ್ರ ಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗಿದ್ಧೀರಾ? ಮಾನ್ಯ ಶಿವರಾಜ್ ಪಾಟೀಲ್‌ರವರು ಕೂಡ ಈ ರಾಜ್ಯಕ್ಕೆ ಬಂದು ತಮ್ಮ ಸಮಸ್ಯೆಗಳನ್ನು ತಿಳಿದುಕೊಂಡು ಹೋಗಿದ್ಧರೆ ಇವತ್ತು ಏನೂ ಕೆಲಸವಾಗಿಲ್ಲ ಸುಮ್ಮನೆ ಅಲ್ಲಿ ಬಂದರು, ಪೋಲೀಸ್‌ನವರು ಹೇಳಿದರು, ಒಳ್ಳೆಯ ಕೆಲಸ ಮಾಡತಕ್ಕಂತಹ, Sri Madhukar Shetty one of the efficient SP's, we had posted and you have removed him now for political reasons ಇವತ್ತು ಇವೆಲ್ಲಾ ಆಗಲೇಬಾರದು ಇದರ ಬಗ್ಗೆ ನಿಗಾವಹಿಸಿ ಸರಿಯಾಗಿ ಕೆಲಸ' ಮಡಬೇಕು ಮತ್ತು ವಿಚಾರಗಳನ್ನು ತಿಳಿಯತಕ್ಕಂತಹ ಪ್ರಯತ್ನದಲ್ಲಿ ಮೆಥಾಡಿಕಲ್ ಆಗಿ ವ್ಯವಸ್ಥಿತ ರೀತಿಯಿಂದ ಈಗಿನ ಸರ್ಕಾರ ಸಮಸ್ಯೆಯನ್ನು ಬಗೆಹರಿಸಬೇಕು ಈಗಿನ ಸರ್ಕಾರಕ್ಕೆ philosophy ಇಲ್ಲ

ನೀವು ಬಿ ಜೆ ಪಿ ಜೊತೆಯಲ್ಲಿ ಹೋಗುತ್ತಿದ್ದೀರಿ ಬಿ ಜೆ ಪಿ ಯವರು ಇದಕ್ಕೆ ಒಪ್ಪುತ್ತಿಲ್ಲ ನೀವು ಏನೇ ಮಾಡಬೇಕೆಂದರೂ ಬೇರೆಯವರು ಮಾಡುವುದಕ್ಕೆ ಬಿಡುವುದಿಲ್ಲ ಪ್ರಗತಿಪರ ವಿಚಾರಧಾರೆ ಜನರನ್ನು ಕೂಡ you have to take into confidence, ಇವತ್ತು ಮುಂದೆ ಬೆಳೆಯ ತಕ್ಕಂತಹ ರಿತಿಯಲ್ಲಿ ಮಾಡಬೇಕು ಮಾನವತೆ ದೃಷ್ಟಿಯಿಂದ ಅಲ್ಲಿ ಏನು ಘಟನೆ ನಡೆದಿದೆ ಸರ್ಕಾರ ಅದಕ್ಕೆ ಸರಿಯಾದ ರೀತಿಯಲ್ಲಿ ಇಲ್ಲಿ ಸರ್ಕಾರ ಇದೆ, they have come to our rescue ಎನ್ನತಕ್ಕಂತಹ ರಿತಿಯಲ್ಲಿ you have to create confidence ಅದು ಮಾಡಲೇ ಬೇಕು ಇದರಲ್ಲಿ ಕೂಡ ತಾವು ಬಿಗಿಯಾಗಿ ವರ್ತನೆ ಮಾಡಬೇಕು

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳ ಹೇಳಿಕೆ ನಮ್ಮ ಕೈಯಲ್ಲಿ ಇದೆ ನಮ್ಮ ಅನುಮಾನ ನಾವು ಏನು ವ್ಯಕ್ತಪಡಿಸಿದ್ದೇವೆ ಅದು ಇದರಲ್ಲಿ ಪ್ರತಿಬಿಂಬವಾಗಿದೆ ಸಾವನ್ನಪ್ಪಿದವರು ಐದು ಜನ ನೀವು ನಿಮ್ಮ statement ಪ್ರಕಾರ ವಶಪಡಿಸಿ ಕೊಂಡಿರ ತಕ್ಕಂಥಾದ್ದು ಒಂದೇ ಆಯುಧ ಉಳಿದವೆಲ್ಲ ಸಣ್ಣಪುಟ್ಟವು that means so say, ಅದರಲ್ಲಿ ಇದ್ದವರ ಪೈಕಿ armed persons ಒಬ್ಬನೇ anti-naxal squad ನವರು ಎಷ್ಟು ಜನ ಇದ್ದರು ಇವರ ಹತ್ತಿರ ಏನೇನು weapons ಇತ್ತು ಎಂಬ ಬಗ್ಗೆ ನಮಗೆ ಮಾಹಿತಿ ಇಲ್ಲ relation ಆಗಿ encounter ಆಗಿ, ಈ ಕಡೆಗೆ ಆಗಿರ ತಕ್ಕಂತಹ ಡ್ಯಾಮೇಜ್ ಏನು, one constable is injured ನಾವು ಈ ರಾಜ್ಯದ ಪೋಲೀಸ್ ಇಲಾಖೆಯಲ್ಲಿರತಕ್ಕಂತಹ ಪ್ರತಿಯೊಬ್ಬ constable ನ ಜೀವನವನ್ನು ಕೂಡ ಅತ್ಯಮೂಲ್ಯವೆಂದು ಭಾವಿಸತಕ್ಕಂಥಾದ್ದು ಇವರ ಪರ ವಕಾಲತ್ತು ವಹಿಸುತ್ತಿದ್ದೇವೆ ಪೋಲೀಸ್‌ನವರು ಸತ್ತರೂ ಪರವಾಗಿಲ್ಲವೆಂದು ನಾವು ಹೇಳುವುದಿಲ್ಲ ನಮಗಾಗಿ ಯೂನಿಫಾರಂ ಹಾಕಿಕೊಂಡು ಸರ್ವಿಸ್ ಮಾಡತಕ್ಕಂತಹವರ ಬಗ್ಗೆ ಅಷ್ಟೇ ಗೌರವ ಇದೆ ಅವರ ಜೀವನವೇನು ಸುಲಭಕ್ಕೆ ಸಿಗುತ್ತದೆ ಎಂದು ಹೇಳುವುದಿಲ್ಲ ಈ statement ಗೆ ಏನಾದರೂ ಗಾಂಭೀರ್ಯತೆ ಇದೆಯಾ? ಒಂದು ದನ ಸತ್ತಿದೆ ರಾತ್ರಿ ಟೀವಿಯಲ್ಲಿ ತೋರಿಸಿದರು ಆ ಮನೆ ಏನಿದೆ, it is not a concrete house ಮಾಮೂಲು ಮಣ್ಣಿನ ಮನೆ ಪಂಜಾಬಿನಲ್ಲಿ golden temple ಗೆ ಹೊಡೆದಿದ್ದರಲ್ಲಾ, ಆ ರೀತಿ ಹೊಡೆದಿದ್ದಾರೆ it is all visible

ಬಚ್ಚಿಡುವುದಕ್ಕಾಗುವುದಿಲ್ಲ ಎಲ್ಲಾ ತೋರಿಸುತ್ತಿತ್ತು ಅಷ್ಟು ಗುಂಡು ಹಾರಿಸುವ ಅಗತ್ಯವಿತ್ತಾ? ದನ ಯಾವ ನಕ್ಸಲೈಟ್ activity ಮಾಡುತ್ತಿತ್ತು? ಯಾವ ರೇಂಜ್ ನಿಂದ ಇವರು ಫೈರ್ ಓಪನ್ ಮಾಡಿದ್ದಾರೆ ಆ ಮನೆ ಸುತ್ತುವರೆದು ಅವರನ್ನು ಹಾಗೆಯೇ ಹಿಡಿದುಕೊಳ್ಳವುದಕ್ಕೆ ಸಾದ್ಯವಿರಲಿಲ್ಲವಾ? ಇಷ್ಟಲ್ಲಾ ಮಾಡಿ ಇವರು ಹಿಡಿದಿದ್ದು ಏನು? ಒಬ್ಬ avtivist ಅನ್ನು ಹಿಡಿದಿದ್ದಾರೆ ಉಳಿದವರು ನಿಮ್ಮ ಪ್ರಕಾರವೇ ನಿರಪರಾದಿಗಳು they are not accused ಈ ಇಬ್ಬರ ಮೇಲೆ ನಂ 1, ಮತ್ತು ನಂ 2 paramesh and Goutam ಮೇಲೆ ಕೂಡ ಪೋಲೀಸ್‌ನವರೇ ರಿಜಿಸ್ಟರ್ ಮಾಡಿರತಕ್ಕಂತಹ ಕ್ರೈಮ್ಸ್, IPC ಪ್ರಕಾರ, hypothetically speaking they would hve been convicted ಯಾವ ಕಲಂ ಕೂಡ does'nt atract even life sentence Capital punishment ಅಲ್ಲ ಗಲ್ಲಿಗೇರಿಸುವುದು ಅಲ್ಲ life sentence ಕೊಡಿ ಎಂದು demand ಮಾಡುವುದಿಲ್ಲ what is that you have done? IPC ಯಲ್ಲಿ ನೀವೇ ಅವರ ಮೇಲೆ ಹಾಕಿರತಕ್ಕಂತಹ ಕಲಂಗಳ ಪ್ರಕಾರ ಒಂದು ವೇಳೆ ಅಪರಾಧ 'ರುಜುವಾತಾಗಿ ಶಿಕ್ಷೆ ಆಗಿದ್ದಿದ್ದರೂ ಅವರಿಗೆ ಜಿವಾವಧಿ ಶಿಕ್ಷೆ ಕೂಡ ಆಗುತ್ತಿರಲಿಲ್ಲ ಅಂಥದ್ದರಲ್ಲಿ ಅವರನ್ನು ಸ್ವರ್ಗಲೋಕಕ್ಕೆ ಕಳುಹಿಸಿಬಿಟ್ಟಿದ್ದೀರಿ ಅದನ್ನು ಎನ್‌ಕೌಂಟರ್ ಎಂದು ಕರೆಯುತ್ತೀರಿ ನಾವೇನು ಭಾಷೆ, ಇನ್ನೆಷ್ಟು ನಿಗ್ರಹವನ್ನು ವಹಿಸಬೇಕು ಎಂದು ನೀವೇ ಹೇಳಿ ನಮಗೆ ಇಲಾಖೆಯ ಮೊರೇಲ್ ಅನ್ನು ಕಳೆಯತಕ್ಕಂತಹ ಆಸೆ ಇಲ್ಲವೇ ಇಲ್ಲ ಬೇಜವಾಬ್ದಾರಿಯಿಂದ ನಿಮ್ಮ ಇಲಾಖೆಯವರ ಮೇಕೆ ಆಪಾದನೆಗಳನ್ನು ಮಾಡತಕ್ಕಂಥದ್ದು ನಮಗೆ ಖುಷಿಯಲ್ಲ ಆದರೆ ಈ ರೀತಿಯ ಹೇಳಿಕೆಯನ್ನು ತಮ್ಮಂತವರ ಕೈಯಿಂದ ಓದಿಸುವ ಪ್ರಯತ್ನವನ್ನು ಮಾಡುತ್ತಾರಲ್ಲಾ, ಇದಕ್ಕೇನೆಂದು ನಾವು ಹೇಳಬೇಕು ಹೇಳಿ ತಮ್ಮನ್ನು ಹೇಗೆ ಬೇಕಾದರೂ ಉಪಯೋಗಿಸಿ ಕೊಳ್ಳಬಹುದು ಎನ್ನತಕ್ಕಂಥ ಅಭಪ್ರಾಯವೇ ಅಥವಾ ನಮಗೆ ಇಲ್ಲಿರತಕ್ಕಂಥವರಿಗೆ ತಲೆಯೊಳಗೆ ಏನೂ ಸಾಮಾನಿಲ್ಲ ನಮಗೇನೂ ಜವಾಬ್ದಾರಿಯೇ ಇಲ್ಲ ಎಂದು ತಿಳಿದುಕೊಂಡಿದ್ದಾರೆಯೇ, ಅಥವಾ ಈ ರಾಜ್ಯದ ಜನರ ಜೊತೆಗೆ ಹೇಗೆ ಬೇಕಾದರೂ ಇವರು ಚೆಲ್ಲಾಟವಾಡಬಹುದು ಎಂದು ತಿಳಿದು ಕೊಂಡಿದ್ದಾರೆಯೇ? what is work in thier mind ಇವರು ದನವನ್ನು ಕೊಲ್ಲುತ್ತಾರಲ್ಲಾ, why don't they reveal it? Let the magistrate speak about it ಆ ಅನಿಮಲ್ ಏನು ಬಿದ್ದಿತ್ತು, ಅದಕ್ಕೆ ಬುಲಟ್

ಇಂಜೂರಿಸ್ ಆಗಿತ್ತೆ ಅಥವಾ ಇಲ್ಲವೆ, ಆ ಮನಗೆ ಅಷ್ಟೊಂದು ಬುಲೆಟ್ ಹೊಡೆಯಬೇಕಾಗಿತ್ತೆ, ಎಷ್ಟು ಬುಲೆಟ್‌ಗಳನ್ನು ಹೊಡೆದಿದ್ದಾರೆ ಎಂಬುದನ್ನು ಹೇಳಲಿ I have got hıghest respect for you ನಾನು ಇದನ್ನು aggrevate ಮಾಡುವುದಕ್ಕೆ ಇಷ್ಟಪಡುವುದಿಲ್ಲ You have been under lot of pressure sınce yestereday evenıng to hold restraın, to go slow ಏಕೆಂದರೆ ಈ ರೀತಿ ಎಲ್ಲ ಕಡೆಗೂ ಈ ಸಮಸ್ಯೆ ಇದೆ ನಾವು cheap popularıty ಗೋಸ್ಕರ ಇದರ ಬಗ್ಗೆ ಭಾಷಣವನ್ನು ಮಾಡಿ ಎಲ್ಲೋ ಹೋಗಿ ನಮ್ಮನ್ನು ನಾವೇ ಇನ್ನೊಂದು ದಿವಸ ırretrıevable posıtıon ಗೆ land ಮಾಡಿ ಕೊಳ್ಳುವುದಕ್ಕೂ ನಾವು ಇಷ್ಟಪಡುತ್ತಿಲ್ಲ ಆದರೆ ಈ ರೀತಿಯ blatant vıolatıon of human rıghts ಆದಾಗ ನಾವು ಜನಪ್ರತಿನಿಧಿಗಳಾಗಿ ಸಭೆಯೊಳಗೆ ಅದರ ಪ್ರಸ್ತಾಪವನ್ನೂ ಮಾಡದೇ ಹೋದರೆ ಎಲ್ಲೋ ಒಂದು ಕಡೆಗೆ ಅತಿರೇಕ ಎಂದು prıma facıe ನೋಡಿದರೆ ತಮಗೆ ಅನ್ನಿಸುವುದಿಲ್ಲವೇ? Leave upon all other thıngs ಪ್ರಕಾಶ್ ಸಾಹೇಬರೆ, prıma facıe ತಮಗೆ ಏನನಿಸುತ್ತದೆ ಎಂಬುದನ್ನು ಹೇಳಿ You have been able to sıeze only one weapon ıf all of them were on, ıf all of then had resorted to open fire to ındulge ın encounter what would have been the magnıtude of casualıty thıs sıde? ಕಾಮನ್‌ಸೆನ್ಸ್ ಬೇಡವೆ? sır ı don't want to aggrevate the sıtuatıon ı m not goınt to score a poınt my very humble appel to you ıs ಇವೆಲ್ಲಾ ಅತ್ಯುತ್ಸಾಹಿಗಳು ಮಾಡತಕ್ಕಂಥ ಕೆಲಸ ಆಮೇಲೆ ಪ್ರಕಾಶ್‌ರವರೆ, ನಮಗೊಂದು ಕ್ಲಾರಿಟಿ ಇರಬೇಕಾಗುತ್ತದೆ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ನಾವು ಮಾಡತಕ್ಕಂಥ ಆಪರೇಷನ್ಸ್ ಬೇರೆ, ಇವರನ್ನು ಡೀಲ್ ಮಾಡುವುದಕ್ಕೆ ನಾವು ಬಳಸಬೇಕಾದಂಥ ಮೆತಡ್‌ಗಳೇ ಬೇರೆ ತಾವು ಸೈದ್ಧಾಂತಿಕ ಹಿನ್ನೆಲೆಯಲ್ಲಿ ರಾಜಕಾರಣ ಮಡಿಕೊಂಡು ಬಂದಂಥ ಒಬ್ಬ ವ್ಯಕ್ತಿ ರಾಜಕಾರಣದಲ್ಲಿ ಎಲ್ಲಾ ರೀತಿಯ ವ್ಯಕ್ತಿಗಳೂ ಬರುತ್ತಾರೆ ನಮ್ಮಲ್ಲೇನೂ ಈ ಬಗ್ಗೆ ಸಿಲಬಸ್ ಏನೂ ಇಲ್ಲ ಅದಿದದ್ವರೇ ಬರಬೇಕು ಎಂದು ನಾವು ಇಷ್ಟನ್ನು ತಮ್ಮಿಂದ ಬಯಸುತ್ತೇವೆ ವೀರಪ್ಪನ್ ಮತ್ತು ನಕ್ಸಲೈಟ್ ಮಧ್ಯೆ ನಮಗೇನೂ ವ್ಯತ್ಯಾಸವಿಲ್ಲ Terorısts, Extremısts, Dacoıts, Naxalıtes ಇವರೆಲ್ಲರೂ ನಮಗೆ ಒಂದೇ

ಇವರೆಲ್ಲರನ್ನೂ ನಾವು anti social ಎಂದೇ ನಾವು ಟ್ರೀಟ್ ಮಾಡುವುದು annihilation is the only answer ಎಂದರೆ you please let this be then we will reveal to you as to what is our stand but I am certain that you will not say that ಪ್ರಜಾವಾಣಿ ಪೇಪರ್‌ನಲ್ಲಿ ಬರೆದಿದ್ದಾರೆ ನೋಡಿ ದನ ಕಾಯುವವರು ಅಲ್ಲೊಗೆ ಹೋಗಿ ಬಂದು ನೋಡುತ್ತಾರೆ ಏ ರಾಮೇಗೌಡ ಸತ್ತು ಹೋಗಿದ್ದಾನೆ ಕಾವೇರಕ್ಕೆ ಸತ್ತು ಹೋಗಿದ್ದಾರೆ ನಮ್ಮವರೆಲ್ಲರನ್ನೂ ಕೊಂದುಹಾಕಿಬಿಟ್ಟಿದ್ದಾರೆ ಬನ್ರೋ, ಬನ್ರೋ, ಎಂದು ದನ ಕಾಯುವವರು ಬೇರೆಯವರನ್ನು ಕರೆಯುತ್ತಾರೆ ಅವರು ನಕ್ಸಲೈಟ್ ಆಗಿದ್ದಿದ್ದರೆ ಊರು ಜನರು ದನ ಕಾಯುವವರು ಬಂದು ಆ ರಿತಿ ಗೋಳಾಡುತ್ತಿರಲಿಲ್ಲ why people become just brutal ? is it fair ನಾವು ಹೀಗೆ ಮಾಡುವುದರಿಂದ ಏನು ಮಾಡುತ್ತೇವೆಂದರೆ ಮತ್ತಷ್ಟು ಜನ ಅವರ ಪರವಾಗಿ ವಾಲುವ ಹಾಗೆ ಇನ್ನೂ ಒಂದಷ್ಟು ಜನ ಇದರೊಳಕ್ಕೆ ಪ್ರವೇಶ ಮಡುವ ಹಾಗೆ ಮಡುತ್ತೇವೆಯೇ ವಿನಃ ನಾವು by showing our mignt ಹೆದರಿಸಿ ಬಿಡುತ್ತೇವೆ, we are sending a warning, ಯಾರಾದರೂ sympathisers ಇದ್ದರೆ, ಅವರಿಗೆ ನೀರು ಕೊಟ್ಟರೆ ಜಾಗ ಕೊಟ್ಟರೆ, ರೇಶನ್ ಕೊಟ್ಟರೆ ಮುಗಿಸಿಬಿಡುತ್ತೇವೆ ಎನ್ನತಕ್ಕಂಥ ಮೆಸೇಜನ್ನು ಕಳುಹಿಸುತ್ತಿದ್ದೇವೆ whole thing will be controlled ಎನ್ನತಕ್ಕಂಥ illusion ನಲ್ಲಿದ್ದರೆ I am sorry, sir, we are marching towards a very dangerous situation We have not tried to test the patience of the chair How did this movement airse in India? After serious differences with the Marxists party it is late charu majumdar who started this ಆ ಹಿಮಾಲಯನ್ ಸ್ಟೋಕ್ಸ್‌ಗೆ ಹೋಗಿ ಸಿಲಗುರಿ ಡಿಸ್ಟ್ರಿಕ್ಟ್‌ನಲ್ಲಿ ನಕ್ಸಲ್‌ಬರಿಯಲ್ಲಿ ಇದನ್ನು ಸ್ಟಾರ್ಟ್ ಮಾಡುತ್ತಾರೆ why they have choose only malnad? ಅವರು ಶ್ರೀನಿವಾಸ ಪುರಕ್ಕೆ ಬಳ್ಳಾರಿಗೆ ಏಕೆ ಬರಲಿಲ್ಲ ? ಅವರು camflage ಮಾಡಬೇಕು, underground movement ಅನ್ನು ಅವರು ಮಾಡಬೇಕು under ground movement ಗೆ ಅವರಿಗೆ ನಾರ್ತ್ ಕೆನರಾ ಪೊಟೆನ್ಶಿಯಲ್ ಆಗಿದೆ ನಾನು ಹೇಳುತ್ತಿದ್ದೆ, ನಾಳೆ ಅವರು, they will move to chmarajnagar B R HIlls ಗೆ ಬರುತ್ತಾರೆ ಸೊಲಿಗರ

ಜೊತೆ ಅವರು ಸೇರಿಕೊಳ್ಳುತ್ತಾರೆ You are inviting them ಅವರ ಪ್ರಾಬ್ಲಮ್‌ಗಳು ಏನಿವೆ? ಏಕೆ ಅವರು ಈ ಮಟ್ಟಕ್ಕೆ ಹೋಗಿದ್ದಾರೆ ಹೇಗೆ ಅವರನ್ನು ಇದರಿಂದ ಬಿಡುಗಡೆ ಮಾಡಿಸಬಹುದು, ಅವರ ಮನ ಗೆದ್ದು ಅವರನ್ನೂ ಕೂಡ ಮುಖ್ಯ ವಾಹಿನಿಗೆ ತರಬಹುದು ಎನ್ನತಕ್ಕಂಥದ್ದರ ಬಗ್ಗೆ ಒಂದು ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡಬೇಕಾಗುತ್ತದೆ, ಇದರಲ್ಲಿ ಯಾರನ್ನೂ ಯಾರೂ ಡಿಫೆಂಡ್ ಮಾಡುವುದು, accuse ಮಾಡತಕ್ಕಂಥದ್ದು ಇಲ್ಲಿ ಪ್ರಶ್ನೆಯಲ್ಲ ಈ ತರಹದ ಆ್ಯಕ್ಷನ್‌ನಿಂದ ಸರ್ಕಾರಕ್ಕೆ ನೆಮ್ಮದಿ ಇರುವುದಿಲ್ಲ ಸಾರ್ವಜನಿಕರಲ್ಲಿ ನಮ್ಮ ಬಗ್ಗೆ ಗೌರವ ಬರುವುದಿಲ್ಲ ಈ ಪ್ರಯೋಗದಕಲ್ಲಿ ಈ ಎಳೆ ವಯಸ್ಸಿನವರು ಯಾರಿದ್ದಾರೆ ಅಂಥ ಮನಸ್ಸಿನವರು ಯಾರಿದ್ದಾರೆ, ಅವರ ಮನಸ್ಸು ತೀರ ಒಂದು ರೀತಿಯ ರೆಸ್ಟ್‌ಲೆಸ್ ಕಂಡೀಷನ್‌ನಲ್ಲಿರತಕ್ಕಂಥವರನ್ನು ಹೆಚ್ಚು ಹೆಚ್ಚು ಆ ಪ್ರವಾಹಕ್ಕೆ ನಾವಾಗಿ ನಾವೇ ತಳ್ಳಿದಂತಾಗುತ್ತದೆ sir, I want to know from you, ನೀವೇ ಒಪ್ಪಿಕೊಂಡಿರುವ ಹಾಗೆ, ಇವರ ಮೇಲೆ ಯಾವ ಛಾರ್ಜ್‌ಸ್‌ಗಳೂ ಇಲ್ಲ ಯಾರೆಂದರೆ ಸುಬ್ರಹ್ಮಣ್ಯ, ರಾಮೇಗೌಡ ಮತ್ತು ಕಾವೇರಮ್ಮನವರ ಮೇಲೆ ಯಾವ ಛಾರ್ಜ್‌ಸ್‌ಗಳೂ ಇಲ್ಲ ಅವರು ಹೇಗೆ ಬಲಿಯಾದರು? ಮೇಲುಗಡೆ ನಿಮ್ಮ ಫಸ್ಟ್ ಸೆಂಟೆನ್ಸೇ ಹೇಳಿದ ಹಾಗೆ ಇವರೂ ಐದೂಜನ ನಕ್ಸಲೈಟ್ ಆಗಿದ್ದರೆ obviously, common sense, ಐದೂ ಜನರ ಹತ್ತಿರ ವೆಪನ್ಸ್ ಇರಬೇಕಾಗಿತ್ತು ನೀವು ಸೀಸ್ ಮಾಡಿರುವುದು ಒಂದೇ ಒಂದನ್ನು ಯಾವ ಯಾವ ತರಹದ ಗುರುತರವಾದಂಥ ಅಪರಾಧಿ ಚಟುವಟಿಕೆಗಳಲ್ಲಿ ಅವರು ತೊಡಗಿದ್ದರು ಎನ್ನುವುದಕ್ಕೆ ನೀವೇ ರೆಜಿಸ್ಟರ್ಡ್ ಮಾಡಿರತಕ್ಕಂಥ ಕೇಸಸ್, ಈ ಎಲ್ಲವುಗಳ ಮಧ್ಯೆ ನೆನ್ನೆ ಇವರ್‍ಯಾರೋ ನಾವು ಭಹಳ ದೊಡ್ಡ ಸಾಧನೆ ಮಾಡಿಬಿಟ್ಟಿದ್ದೇವೆ ಎನ್ನುವಂಥ ಬ್ರಮೆಯಲ್ಲಿ ದ್ದಾರೆ ಅವರು ಆತುರ ಪಟ್ಟಿದ್ದಾರೋ ಅಥವಾ ಇಲ್ಲವೋ, ಅಗತ್ಯ ಇದ್ದು ಫೈರಿಂಗ್ ಮಾಡಿದ್ದಾರೋ ಅಥವಾ ಅಗತ್ಯಕ್ಕಿಂತ ಹೆಚ್ಚು ದೂರ ಅವರು ಹೋಗಿದ್ದಾರೆಯೇ? ಇದರಿಂದ ನಮಗೇನಾದರೂ ಒಳ್ಳೆಯದಾಗುತ್ತದೆಯೇ? ಎಂಬ ಬಗ್ಗೆ ತಾವೇ ಹೇಳಬೇಕು ಇದು ತಮ್ಮ ವಿವೇಚನೆಗೆ ಬಿಟ್ಟಿದ್ದು

ಶ್ರೀ ಆರ್ ರೋಷನ್ ಬೇಗ್ (ಜಯಮಹಲ್), ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ರಮೇಶ್‌ಕುಮಾರ್‌ರವರು ಇದರ ಬಗ್ಗೆ ವಿವರವಾಗಿ ಹೇಳಿದ್ದಾರೆ ನಾನು ಮನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಗೃಹ ಮಂತ್ರಿಗಳಿಗೆ

ಎರಡೇ ಎರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ ದಯವಿಟ್ಟು ಈ 'ನಕ್ಸಲೈಟ್ ರವರುಗಳನ್ನು ಟೆರರಿಸ್ಟ್ ಎಂದು ಟ್ರೀಟ್ ಮಾಡಬೇಡಿ ಅವರು ದೇಶದ್ರೋಹಿಗಳಲ್ಲ Naxalites are not anti- nationals ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಗೃಹ ಸಚಿವರಲ್ಲಿ ಮನವಿ ಮಾಡುವುದೇನೆಂದರೆ ಇನ್ನೊಂದು ಬಾರಿ ಅವರನ್ನು ಕರೆದು ಅವರ ಜೊತೆ ಮಾತನಾಡಿ ಸುಮ್ಮನೇ ಇದ್ದಕ್ಕಿದ್ದ ಹಾಗೆ ಅವರು ಎಲ್ಲಿ ಹೋದರು, ಅಲ್ಲಿಯೇ ಅವರನ್ನು ಹಿಡಿದು ಅರೆಸ್ಟ್ ಮಾಡುವುದು, ಶೂಟ್ ಮಾಡುವುದು ಸರಿಯಲ್ಲ ಕಳೆದ ಸಲ ಸಾಕೇತ್ ರಾಜನ್ ಮರ್ಡರ್ ಆದಾಗ ಆ ಡೆಡ್ ಬಾಡಿ ಯಾವ ತರಹ ಹ್ಯಾಂಡಲ್ ಮಾಡಿದ್ದೀರಿ ಆ ಡೆಡ್ ಬಾಡಿಯನ್ನು ಯಾರೂ ತೆಗೆದುಕೊಳ್ಳುವುದಕ್ಕೆ ಮುಂದಾಗಲಿಲ್ಲ ನಾನು ಹೋಗಿದ್ದೆ, ನಾನು ಡೆಡ್ ಬಾಡಿಯನ್ನು ಕಲೆಕ್ಟ್ ಮಾಡುತ್ತೇನೆಂದು, ಅಲ್ಲಿ ನನ್ನನ್ನು ಕೇಳಿದರು ಏಕೆ ಬಂದಿರಿ, ನೀವು ಎಂದು ನಾನು ಹೇಳಿದೆ ಇವನೇನು ವೀರಪ್ಪನ್ ಏನ್ರಿ ಎಂದು ಐಡಿಯಾಲಾಜಿಕಲ್ ಡಿಫರೆನ್ಸ್ಸ್ ಏನದರೂ ಇರಬಹುದು ದಯವಿಟ್ಟು ನಾನು ಸರ್ಕಾರಕ್ಕೆ ಏಕೆ ವಾರ್ನ್ ಮಾಡುತ್ತಿದ್ದೇನೆಂದರೆ ನೀವೇನಾದರೂ ಇದೇ ರಿತಿ ನಕ್ಸಲೈಟ್ ಮೇಲೆ ಎಲ್ಲಿ ಹೋದರೂ ಬೀದಿ ಬೀದಿಯಲ್ಲಿ ನೀವು ಅವರನ್ನು ಹೊಡೆಯುವುದಕ್ಕೆ ಹೋದರೆ, ಪೋಲೀಸ್‌ನವರು ಅವರಾಗಿ ಅವರೇ trumpet grow ಮಾಡಿಕೊಂಡು ನಾವು ಬಹಳ ಜೋರಾಗಿ ಕೆಲಸವನ್ನು ಮಾಡಿದ್ದೇವೆ ಎಂದು ಏನಾದರೂ ಹೇಳಿಕೊಂಡು ಹೋದರೆ ಇದೇ ಪಕ್ಕದ ಆಂದ್ರ ಪ್ರದೇಶದಲ್ಲಿ ಒಬ್ಬ ಎಂ ಎಲ್ ಎ ಓಪನ್ ಆಗಿ ಓಡಾಡುವುದಕ್ಕೆ ಆಗುತ್ತಿಲ್ಲ ಒಪ್ಪ ಎಕ್ಸ್ ಎಂ ಎಲ್ ಎ ಓಪನ್ ಆಗಿ ಓಡಾಡುವುದಕ್ಕೆ ಆಗುತ್ತಿಲ್ಲ ಒಬ್ಬ ಎಕ್ಸ್ ಮಿನಿಸ್ಟರ್ ಓಪನ್ ಆಗಿ ಓಡಾಡುವುದಕ್ಕೆ ಆಗುತ್ತಿಲ್ಲ ಹೈದ್ರಾಬಾದ್ ಸಿಟಿಯಿಂದ ಆಚೆ ಹೋಗಬೇಕಾದರೆ ಸಾಯಂಕಾಲದ ಹೊತ್ತು ಯಾರೋ ಒಬ್ಬ ಅಧಿಕಾರಿ ಕೂಡ ಅಲ್ಲಿ ಹೋಗುವುದಕ್ಕೆ ಆಗುವುದಿಲ್ಲ ಆ ಪರಿಸ್ಥಿತಿ ಇವೊತ್ತು ಆಂದ್ರಪ್ರದೇಶದಲ್ಲಿದೆ Even when Mr Narasimha Rao was the Prime Minister of this country, ಅವರ ಕ್ಷೇತ್ರದಲ್ಲಿ parallel Government ನಡೆಯುತ್ತಿತ್ತು ಈಗಲೂ ಕೂಡ ಕೆಲವು ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿ parallel government ನಡೆಯುತ್ತಿದೆ ಅದಕ್ಕೆ ನಾನು ಈ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ ದಯವಿಟ್ಟು handle this situation differently ಇದರ ಬಗ್ಗೆ ಸ್ವಲ್ಪ tactic ಆಗಿ handle

ಮಾಡಿ ನಕ್ಸಲೈಟ್ ನ senior leader ಅವರ ಜೊತೆಗೆ ನೀವು, some situations have to be handle with tactics ಕೆಲವು police officers ಒಳ್ಳೆಯವರಿದ್ದಾರೆ ಆದರೆ ಕೆಲವು police officers ಗೆ common sense ಇಲ್ಲ I am sutre that common sense is not very common among these burocrats ದಯವಿಟ್ಟು ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಪ್ರಕಾಶ್‌ರಾವ್‌ರವರು ಗೃಹ ಮಂತ್ರಿಗಳಿದ್ದಾರೆ please handle this issue differently ಎಂದು ನನ್ನ ಮನವಿ

ಶ್ರೀ ಸುನಿಲ್ ಕುಮಾರ್ ಮಾನ್ಯ ಅಧ್ಯಕ್ಷರೆ, ನಾವು ಆ ಬಾಗದಿಂದ ಬಂದಂತಹವರು ಮತ್ತು ಹೋರಾಟಗಳಲ್ಲಿ ಪಾಲ್ಗೊಂಡಂತಹವರು ದಯಮಾಡಿ ನಮಗೆ ಮಾತನಾಡುವುದ್ಕಕೆ ಅವಕಾಶವನ್ನು ಕೊಡಿ

ಅಧ್ಯಕ್ಷರು ನೀವು ನರಸಿಂಹರಾಜಪುರದವರಾ? ಮಾತನಾಡಿ ನಿಮಗೂ ಅವಕಾಶ ಕೊಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಇದನ್ನು ನಿಲುವಳಿ ಸೂಚನೆ ಮೂಲಕ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿದಾಗ ಬೇರೆ ರೂಪದಲ್ಲಿ ಇದು ಚರ್ಚೆಗೆ ಬಂದಿದೆ ಮಾನ್ಯ ಗೃಹಮಂತ್ರಿಗಳು ಒಂದು ಹೇಳಿಕೆಯನ್ನು ನೀಡಿದ್ದಾರೆ ಪತ್ರಿಕೆಗಳಲ್ಲಿ ಕೂಡ ನಾವು ವರದಿಗಳನ್ನು ನೋಡಿದ್ದೇವೆ ಪತ್ರಿಕೆಯಲ್ಲಿ ಬಂದಿರುವಂತಹ ವರಿದಿ ಏನೆಂದರೆ ಆ ಸ್ಥಳದಲ್ಲೇ ಪತ್ರಕರ್ತರು ಇದ್ದು ಪರಿಸ್ಥಿತಿಯನ್ನು ಅವಲೋಕಿಸಿ ಬಂದಿರತಕ್ಕಂತಹ ವಿತ್ರ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ ಒಂದು ವಿಚಾರ ನಕ್ಸಲೈಟರು ಎಂದರೆ ಯರು? ಭಯೋತ್ಪಾದಕರು ಯಾರು? ಮತ್ತು ದರೋಡೆ ಕೋರರು ಯಾರು? ಒಂದರಿಂದ ಒಂದಕ್ಕೊಂದು ಸಂಭಂಧವಾಗುತ್ತೆ ನಕ್ಸಲೈಟರದ್ದು ಅವರದ್ದೇ ಆದಂತಹ ಇತಿಹಾಸ, ಅವರದ್ದೇ ಆದಂಥಹ ಚರಿತ್ರೆ, ಅವರದ್ದೇ ಆದಂತಹ ಹೋರಾಟಗಳು ಇರುವಂಥಾದ್ದು ಕಾಡುಗಳ್ಳ ನರಹಂತಕ ವೀರಪ್ಪನ್ ವಿಚಾರವೇ ಬೇರೆ ಅದಕ್ಕೂ ಕೂಡ ಒಂದು ಸಮಗ್ರ ಇತಿಹಾಸ ಇದೆ ಅದು ಏನಾಯಿತು? ಯಾವ ರೀತಿಯಾಯಿತು? ಎಂದು ಮತ್ತೆ ಚರ್ಚೆ ಮಾಡುವುದರಿಂದ ಪ್ರಯೋಜನವಿಲ್ಲ ಅದರಲ್ಲೂ

ಕೂಡ ಅನೇಕ ಅಮಾಯಕರು ಸತ್ತಿದ್ದಾರೆ ದನ ಕಾಯುವವವರು ಸತ್ತಿದ್ದಾರೆ ರಸ್ತೆಯಲ್ಲಿ ಓಡಾಡುತ್ತಿದ್ದವರು ಸತ್ತಿದ್ದಾರೆ ಕೆರೆ ಕಾಯುತ್ತಿದ್ದವರು ಸತ್ತಿದ್ದಾರೆ ಅದನ್ನು ಈಗ ಚರ್ಚೆ ಮಾಡಿ ಪ್ರಯೋಜನವಿಲ್ಲ ಮತ್ತು ಅವನು ಯಾವ ರೀತಿ ಸತ್ತನು ಎಂದು ಚರ್ಚೆ ಮಾಡಿ ಕೂಡ ಪ್ರಯೋಜನವಿಲ್ಲ ·ಆದರೆ ಮಾನ್ಯ ಗೃಹ ಸಚಿವರಾದ ಪ್ರಕಾಶ್‌ರವರು ಒಂದು ಹೇಳಿಕೆ ಕೊಟ್ಟರು ಸಾಮಾನ್ಯವಾಗಿ ಸದನದಲ್ಲಿ ಹೇಳಿಕೆ ಕೊಡುವುದು ಹೇಗೆಂದರೆ ಅಧಿಕಾರಿಗಳು ಕೊಟ್ಟಂತಹ ವರದಿಯನ್ನು ಸದನದಲ್ಲಿ ಓದುವುದು ಮೊದಲಿನಿಂದಲೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆದು ಬಂದಿದೆ ಅಧಿಕಾರಿಗಳೇ ಇಲ್ಲಿ ಬಂದು ಹೇಳುವುದಕ್ಕಾಗುವುದಿಲ್ಲ ಈ ಒಂದು ಹೇಳಿಕೆ ಸಾಮಾನ್ಯ Police Constable ಕೊಡುವುದಕ್ಕಿಂತಲೂ ಕಡೆಯದಾಗಿದೆ ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ ನಮ್ಮ ರಾಜ್ಯದ ಅತ್ಯಂತ ಮುತ್ಸದ್ದಿ ಮತ್ತು ಈ ಬಗ್ಗೆ ತಿಳುವಳಿಕೆ ಇರುವವರು ಮೊನ್ನೆ ಪೋಲೀಸ್‌ನವರು ಕೊಟ್ಟಂತಹ ಒಂದು ನಕ್ಸಲರ ಪಟ್ಟಿಯನ್ನು ಪ್ರಕಟಣೆ ಮಾಡಿದರು ಆ ಪಟ್ಟಿಯನ್ನು ಪ್ರಕಟಣೆ ಮಾಡಿದಾಗ ಇಡೀ ರಾಜ್ಯದಲ್ಲೇ ಪ್ರಗತಿವಾದಿಗಳು, ಚಿಂತನಾಶೀಲರು, ಹೀಗೆ ಅನೇಕರು ಈ ಪಟ್ಟಿಯನ್ನು ವಿರೋದ ಮಾಡಿದರು ಏಕೆಂದರೆ ಈ ಪಟ್ಟಿಯಲ್ಲಿ ಕಡಿದಾಳ್ ಶಾಮಣ್ಣನಂತಹವರು ಹೆಸರು ಸೇರಿದೆ ಅದಕ್ಕೆ ಇದನ್ನು ಬದಲಾವಣೆ ಮಾಡಬೇಕೆಂದು ವಿರೋಧ ಮಾಡಿದರು ಅದರ ಬಗ್ಗೆ ತಮಗೆ ಮನವರಿಕೆ ಯಾಯಿತು, ಬದಲಾವಣೆ ಮಾಡಿದಿರಿ ಹಾಗೂ ಅದರ ಪಟ್ಟಿಯಲ್ಲಿ ಸೇರಿಸುವಾಗ ಯಾರಿದ್ದಾರೆ, ಅವರ ಹಿನ್ನೆಲೆ ಏನು ಎಂದು ನೋಡಿ ಮಾಡಬೇಕಾಗಿರುವಂದಾದ್ದು ಬಹಳ ಪ್ರಾಮುಖ್ಯವಾಗಿ ರುವಂಥಾದ್ದು ಆದರೆ ನಿಮಗೆ ಅರ್ಥವಾಯಿತು, ಅನೇಕರು ಈ ಒಂದು ವಿಚಾರದಲ್ಲಿ ಸೇರಿಲ್ಲ ಎಲ್ಲೋ ಒಂದು ಕಡೆ ಅದರ ಬಗ್ಗೆ ಚಚೆ ಮಾಡಬಹುದು, ಚಿಂತನೆ ಮಾಡಿರಬಹುದು, ಅವರೆಲ್ಲರನ್ನೂ ನಕ್ಸಲಿಸ್ಟ್ ಎಂದು ಹೇಳಿ ಪಟ್ಟಿಯಲ್ಲಿ ಸೇರಿಸುವುದು ಸರಿಯಲ್ಲ ಎಂದು ಪಟ್ಟಿಯಿಂದ ತೆಗೆದಿದ್ದೀರಿ ನಾವು ಅದನ್ನು ಒಪ್ಪುತ್ತೇವೆ ಇವತ್ತು ಹೇಳಿಕೆ ಪ್ರಕಾರ ಅಲ್ಲಿ ಅದೊಂದು ಸಣ್ಣ ಮನೆ ಅದೇನು ದೊಡ್ಡ ಗಡಿ ಪ್ರದೇಶವಲ್ಲ ಅಥವಾ ಬಾರೀ ಊರಲ್ಲ ಒಂದು ದೊಡ್ಡ ಭಾರಿಮನೆಯಲ್ಲಿ ನೂರಾರು ಜನ ಒಳಗಡೆ ಸೇರಿದ್ದಾರೆ, ನಾವು ಅವರನ್ನು ಕೊಲ್ಲಬೇಕಾಗಿದೆ, ಎಂದು ನಕ್ಸಲ್ ನಿಗ್ರಹ ದಳದವರು ಸುತ್ತ ಸುತ್ತುವರೆದಿದ್ದೇವೆ ಆದರೆ ಅವರಿಂದ ಪ್ರತಿರೋದ ಏನು? ನಾವು ಪ್ರಾಮಾಣಿಕವಾಗಿ ಮಾತನಾಡೋಣ ನೀವು ಹೇಳಿರು

ವಂಥಹ ವಿಚಾರದಲ್ಲಿ ಪ್ರತಿರೋಧ ಏನು? ಇದರ ಬಗ್ಗೆ ನಿಮಗೆ ಮಾಹಿತಿ ಇರಬೇಕಲ್ಲ ಇಲ್ಲಿ ಸುಸುರು ಬತ್ತಿ ಅಥವಾ ಪಟಾಕಿ ಇದ್ದ ಹಾಗೆ ಒಂದೆರಡು ಮೂರು ಗುಂಡು ಒಳಗಡೆ ಇತ್ತೆಂದು ನೀವೇ ಹೇಳುತ್ತಿದ್ದೀರಿ ಆದರೆ ಆ ಊರಿನ ಹಳ್ಳಿಯ ಜನ ಏನು ಹೇಳುತ್ತಾರೆ? ಮಾನ್ಯ ಅಧ್ಯಕ್ಷರೆಮ ಇದು ಬಹಳ ಪ್ರಾಮುಖ್ಯವಾದುದು, ತಾವು ಗಮನಿಸಬೇಕು ಯಾವುದೇ ದೇಶದ್ರೋಹಿಗಳಾಗಲಿ, ರಾಜ್ಯ ದ್ರೋಹಿಗಳಾಲಿ, ಪೋಲೀಸ್‌ನವರು ಹೊಡೆಯುವುದಕ್ಕೆ ಬಂದಾಗ ಅವರನ್ನು ಬಿಡಿಸುವುದಕ್ಕೆ ಯಾರೂ ಹೋಗುವುದಿಲ್ಲ ಇದು ಸ್ಪಷ್ಟ ಆದರೆ ಇಲ್ಲಿ ಜನ ನಮ್ಮ ಎದೆಗೆ ಹೊಡೆಯಿರಿ, ನಮ್ಮ ಎದೆಗೆ ಗುಂಡನ್ನು ಹಾರಿಸಿ ಎಂದು ಹೇಳಿದ್ದಾರೆ ಅಲ್ಲಿರುವಂತಹ ಅಮಾಯಕ ರೈತರು ಬರುವುದೊರಳೊಗಾಗಿ ಹೊಡೆದು ಅವರನ್ನು ಉರುಳಿಸಿದರು ಬೇರೆ ಮಾತಿಲ್ಲ ಪೋಲೀಸ್ ಗುಂಡು ಹೊಡಿ ಎಂದು ಯಾರೂ ಹೇಳಲಿಲ್ಲ ವಿವೇಚನೆ ಇಲ್ಲ, ಯಾರೂ ಇವರಿಗೆ ಹೊಡಿಯಿರಿ ಎಂದು ಹೇಳಿದರು? ಒಳಗಡೆಯಿಂದ ಎಷ್ಟು ಗುಂಡು ಬಂತು? ಮನೆಯನ್ನು ಪೋಲೀಸರು ಬಂದು ಸುತ್ತುವರೆದ ತಕ್ಷಣ ಮನೆಯಿಂದ ಗುಂಡು ಹೊರ ಬರಬೇಕಲ್ಲ ರಾಮೇಗೌಡ, ಸುಬ್ರಹ್ಮಣ್ಯ ಮತ್ತು ಕಾವೇರಿ ಇವರು ಎಷ್ಟು ಗುಂಡು ಇಟ್ಟುಕೊಂಡಿದ್ದರು? ಎಷ್ಟು ಬಂದೂಕುಗಳನ್ನು ಇಟ್ಟುಕೊಂಡಿದ್ದರು ಎಷ್ಟು ಬಾಂಬ್‌ಗಳನ್ನು ಇಟ್ಟುಕೊಂಡಿದ್ರು, ಏನೂ ಇಲ್ಲ ನಿರಪರಾಧಿಗಳನ್ನು ನಿರಾಯುಧರನ್ನು ಗುಂಡಿಟ್ಟು ಕೊಂದು ಹಾಕಿದಿರಿ ಪಾಪ ಅದು ಏನು ಎಂದು ಅರ್ಥವಾಗುತ್ತಿಲ್ಲ ಅಲ್ಲಿ ಹಳ್ಳಿ ಜನರು ಹೇಳುವ ಪ್ರಕಾರ ಸ್ವಾಮಿ ಮನೆಯಲ್ಲಿ ಏನೂ ಇರಲಿಲ್ಲ ಗುಂಡು ಹಾಕಿ ಕೊಂದ ಮೇಲೆ ಹೆಣ ಕೆಳಗುರುಳಿದ ಮೇಲೆ ಪೋಲೀಸ್‌ನವರೆ ಒಳಗೆ ಹೋಗಿ ಬಂದೂಕು ಹಾಗೂ ಗುಂಡುಗಳನ್ನಿಟ್ಟರು ಎಂದು ಅಲ್ಲಿರುವಂತಹ ಪ್ರತ್ಯಕ್ಷದರ್ಶಿ ಜನರು ಸ್ಪಷ್ಟವಾಗಿ ಹೇಳುವಂತಹ ಮಾತು ಇದು ಅತ್ಯಂತ ಗಂಭೀರವಾದಂಥಹ ಪರಿಸ್ಥಿತಿ ಬೇರೆ. ಯಾವುದೇ ರಾಜ್ಯ ಅಥವಾ ದೇಶದಲ್ಲಿ ಆಗಿದ್ದರೆ ಇವರು ಮಾಡಿರುವಂತಹ ಕೃತ್ಯಕ್ಕೆ ಸರ್ಕಾರಗಳು ರಾಜೀನಾಮೆಯನ್ನು ಕೊಡಬೇಕಾಗಿತ್ತು ನನಗೆ ಪೋಲೀಸರ ಬಗ್ಗೆ ಗೌರವ ಮತ್ತು ವಿಶ್ವಾಸ ಇದೆ ಆದರೆ ನಿರಾಯುಧರ ವಿಚಾರದಲ್ಲಿ ತೆಗೆದುಕೊಂಡಿರುವಂಥಹ ಪೋಲೀಸ್ ನಿರ್ಧಾರ ಏನಿದೆ, ಇದು ಅತ್ಯಂತ ಅಪಾಯಕಾರಿ ಕೃತ್ಯ ಅವರ ಮೇಲೆ ಹಾಕಿರತಕ್ಕಂಥ ಕೇಸುಗಳು ಯಾವುದು? ಮೊಕದ್ದಮೆಗಳು ಇಂತಹ ಅನೇಕ ಮೊಕದ್ದಮೆಗಳನ್ನು ನಮ್ಮ ಮೇಲೆ ಹಾಕಿದ್ದಾರೆ 60,67

ರಲ್ಲಿ ಮಾನ್ಯ ಸಿದ್ದರಾಮಯ್ಯನವರೆ ನಿಮಗೆ ಹೇಳುವುದಾದರೆ ಅ07 ನೇ ಸೆಕ್ಷನ್ ಪ್ರಕಾರ ಕೇಸ್ ಹಾಕಿದ್ದರು ಪೋಲೀಸ್ ಕಾಯಿದೆಯಲ್ಲಿ ಯಾವ್ಯಾವ ಮಿಕದ್ದಮೆಯನ್ನು ಹಾಕಬೇಕು ಎಂದು ಇದೆ ಒಂದು, ಎರಡು, ಮೂರು, ನಾಲ್ಕು ಎಂದು ಒಟ್ಟಿಗೆ ಹಾಕಿಬಿಡಿ ಆಮೇಲೆ ತಾನೇ ತೀರ್ಮಾನ ವಾಗುವುದು ನನಗೆ ಅನಿಸುತ್ತಿದೆ, ಇದು ಗುರುತರವಾದ ಅಪಾದನೆ, ಅನ್ಯಾಯವಾಗಿ ನೇರವಾಗಿ ನಿರಪರಾದಿಗಳನ್ನು ಕೊಂದು ಹಾಕಿದ್ದಾರೆ ಇದರ ಬಗ್ಗೆ ಸಮಗ್ರವಾಗಿ ನ್ಯಾಯಾಂಗ ತನಿಖೆ ಯಾಗಲೇ ಬೇಕು ಹೈಕೋರ್ಟ್‌ನ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಮಾಡಬೇಕೆಂದು ಆಜ್ಞೆಯನ್ನು ನೀವು ಮಾಡಲೇಬೇಕಾಗುತ್ತದೆ ತಮ್ಮ ಬಗ್ಗೆ ನನಗೆ ಗೌರವವಿದೆ ಇಲ್ಲಿ ನೋಡಿ ಒಂದು ಪುಟದಲ್ಲಿ ನಾಲ್ಕು ಲೈನ್ ಏನು ಕಾರಣ ಎಂದು ಬರೆದುಕೊಟ್ಟರು ಈ ರಿತಿ ಸಿಕ್ಕಸಿಕ್ಕವರೆಲ್ಲಾ ನಕ್ಸಲಿಸ್ಟ್ ನೀವು ಯಾರ್ಯಾರನ್ನು ಕೊಲ್ಲುತ್ತೀರಿ ಹೆನ ಉರುಳಿದವರೆಲ್ಲರ ಮುಂದೆ ನಕ್ಸಲೈಟ್ ಪಟ್ಟಿ ಹಾಕಿಬಿಡಿ ಮನೆ ಮಾಲೀಕ ರೈತ ರಸ್ತೆಯಲ್ಲಿ ಹೋಗುವವನು, ದನ ಕಾಯುವವನು, ಬೀದಿಯಲ್ಲಿ ಹೋಗುವವನು, ಹೋಟೆಲನಲ್ಲಿ ಕಾಫಿ ಕುಡಿಯುವವನು, ಆ ಪ್ರದೇಶದಲ್ಲಿ ಯಾರ್ಯಾರು ಕುಳಿತಿರುತ್ತಾರೆ ಅವರೆಲ್ಲರನ್ನೂ ಹೊಡೆಯಿರಿ ಪೋಲೀಸ್ ಇಲಾಖೆ ಎಲ್ಲರ ಮೇಲೂ ನಕ್ಸಲಿಸ್ಟ್ ಮುದ್ರಣ ಮಾಡಿ ರಾಜ್ಯದಲ್ಲಿ ಏನಿದು ಹುಡುಗಾಟ? ನಾನು ಇವತ್ತು ಹೇಳುತ್ತೇನೆ, ಕಾನೂನು ಸುವ್ಯಸ್ಥೆ ಸತ್ತುಹೋಗಿದೆ, ನೆನ್ನೆ ಬೆಂಗಳೂರಿನಲ್ಲಿ ಮಾತುಕತೆಗೆ ಹೋದಂತಹ ಸಂದರ್ಭದಲ್ಲಿ ಒಬ್ಬನನ್ನು ಗುಂಡಿಟ್ಟು ಕೊಂದಿದ್ದಾರೆ ನಾವು ಇದರ ಬಗ್ಗೆ ಸಹಿಸಿಕೊಂಡು ಇರುವುದಕ್ಕಾಗುವುದಿಲ್ಲ ಎಷ್ಟು ಜನ ಸಾಯುತ್ತಿದ್ದಾರೆ? ಯಾವ್ಯಾವ ರೀತಿ ಸಾಯುತ್ತಿದ್ದಾರೆ? ಬೆಂಗಳೂರಿನಲ್ಲಿ ಒಂದೇ ಸಮನೆ ಎಷ್ಟು ಜನ ಗುಂಡಿನಿಂದ ಸತ್ತು ಹೋಗಿದ್ದಾರೆ ಇದರ ಬಗ್ಗೆ ಗೃಹ ಇಲಾಖೆ ವಿಚಾರ ಬಂದಾಗ ಚರ್ಚೆಯನ್ನು ಮಾಡೋಣ, ಮಾನ್ಯ ಗೃಹ ಮಂತ್ರಿಗಳಿಗೆ ಹೇಳುತ್ತೇನೆ, ಈ ಒಂದು ಹೇಳಿಕೆ ಸತ್ಯಕ್ಕೆ ದೂರವಾದಂತಹ ಹೇಳಿಕೆ ಈ ಹೇಳಿಕೆ ಪ್ರಕಾರವೇ, ನಾವು ಪ್ರಾಮಾಣಿಕವಾಗಿ ಸಂಪೂರ್ಣ ವಿವರಣೆಯನ್ನು ನೀಡಿದರೆ, ನಿರಪರಾದಿಗಳ ಮೇಲೆ ಗುಂಡಿನ ಮಳೆ ಗರೆದಿದ್ದಾರೆ ಆದುದರಿಂದ ಇದು ಸಂಪೂರ್ಣವಾಗಿ ಸಮಗ್ರವಾಗಿ ಚರ್ಚೆಯಾಗಬೇಕು, ತಾವು ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಿ, ಸ್ಥಳಕ್ಕೆ ಕಳುಹಿಸಿಕೊಡಬೇಕು ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ ಎರಡೂ ಸದನಗಳ ಸದಸ್ಯರನ್ನೊಳಗೊಂಡ

ಸದನ ಸಮಿತಿಯನ್ನು ಆ ಊರಿನ ಜನರನ್ನು ಭೇಟಿ ಮಾಡುವುದಕ್ಕೆ ಕಳುಹಿಸಬೇಕು ಇಲ್ಲಿ ಊರಿನ ಜನರೆಲ್ಲಾ ನಕ್ಸಲೀಯರೇ ಇಲ್ಲಿ ಎದೆಗೆ ಗುಂಡು ಹೊಡೆದಿದ್ದಾರೆಂದು ಇಡೀ ಊರಿನ ಜನ, ಆ ಪ್ರದೇಶದಲ್ಲಿರುವಂಥಾ ಜನ, ಆ ಮನೆಯ ಸುತ್ತಾ ಇರುವಂಥಾ ಜನ, ಆ ರೈತರು, ರೈತರು ಯಾವಾಗ ಬರುತ್ತಾರೆ? ಎಲ್ಲಾ ಗುಂಡು ಹೊಡೆದು, ಹೆಣ ಬಿದ್ದ ಮೇಲೆ ಬರುತ್ತಾರೆ ಅವರು ಏನು ಹೇಳುತ್ತಾರೆಂದರೆ, ರಾಮೇಗೌಡ ಹೋಗಿಬಿಟ್ಟ, ಕಾವೇರಿ ಹೋಗಿಬಿಟ್ಟರು, ಇದು ಏನು? ನಮ್ಮ ಪರಿಸ್ಥಿತಿ ಏನು? ಎಂದು ಗೋಳಾಡುತ್ತಾರೆ ನೋವು ಪಡುತ್ತಾರೆ ಇದು ಕರುಣೆಯಲ್ಲ ಇದು ನಿಜಕ್ಕೂ ಕರುಳನ್ನು ಕಿತ್ತು ಹೊರಗೆ ಎಸೆದ ಹಾಗೆ ಈ ಪರಿಸ್ಥಿತಿಯಾಗಿದೆ ಈ ಸದನದಲ್ಲಿ ನಾನು ತಮಗೆ ಎರಡು ಕೈ ಜೋಡಿಸಿ ಕೇಳುತ್ತೇನೆ ಇದರ ಬಗ್ಗೆ ಸಮಗ್ರ ತನಿಖೆ ಮಾಡಿ, ಇದರ ಬಗ್ಗೆ ನಿಷ್ಪಕ್ಷ ಪಾತವಾದ ನ್ಯಾಯಾಂಗ ತನಿಖೆ ನಡೆಯಲಿ, ಹೊರಗಡೆ ಯಾರು ಬರುತ್ತಾರೆ ಅವರಿಗೆ ಶಿಕ್ಷೆಯಾಗಲಿ ಎಂಬ ಮಾತನ್ನು ಹೇಳುತ್ತೇನೆ ಇಲ್ಲಿ ನಿರಪರಾಧಿಗಳನ್ನು ಕೊಂದಿರು ವಂಥಾದ್ದು ಇಷ್ಟು ಆದಮೇಲೆ ನಕ್ಸಲರನ್ನು ಹುಡುಕುತ್ತಿದ್ದಾರಂತೆ, ಇಲ್ಲಿ ಯಾರು ನಕ್ಸಲೀಯರುಎಂಬುದನ್ನು ಹೇಳಬೇಕು ರಾಜ್ಯದಲ್ಲಿ ಎಷ್ಟು ಜನ ಇದ್ದಾರೆ? ಯಾವ ರೀತಿ ಇದ್ದಾರೆ? ಯಾವ ಪರಿಸ್ಥಿತಿ ಎನ್ನುವಂಥಾದ್ದು ಸ್ಪಷ್ಟಪಡಿಸಬೇಕು ಇಲ್ಲಿ ಸಿಕ್ಕ ಸಿಕ್ಕವರನ್ನೆಲ್ಲಾ ನಕ್ಸಲೀಯರೆನ್ನುವುದಲ್ಲ ನಕ್ಸಲೀಯರದು ಒಂದು ಇತಿಹಾಸವಿದೆ ಚರಿತ್ರೆ ಇದೆ ಅದರ ಬಗ್ಗೆ ತಾವು ಸ್ಪಷ್ಟವಾದ ನಿರ್ಧಾರವನ್ನು ಕೈಗೊಳ್ಳಬೇಕು ತಾವು ಸಮಾಜವಾದಿ ಸಿದ್ಧಾಂತದಿಂದ ಬಂದಿರುವಂದವರು ಇತಿಹಾಸವಿರುವಂಥವರು ಹೋರಾಟ ಬಗ್ಗೆ ಚಿಂತನೆ ಇರುವಂಥವರು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ ನಿಮಗೂ ಇದರಿಂದ ಕೆಟ್ಟ ಹೆಸರು ಬರುವುದು ಬೇಡ ನೀವೆಲ್ಲರೂ ಕುಳಿತು ಮಾತನಾಡಿ ತನಿಖೆಗೆ ನೆರವಾಗಿ ಸಾಮಾಜಿಕ ನ್ಯಾಯವಾದಂಥ ನ್ಯಾಯಾಂಗ ತನಿಖೆ ಇದು ಆಗಬೇಕು ಇದು ಬೇಗೆ ಆಗಬೇಕು ಇದರ ಬಗ್ಗೆ ತಾವು ಪ್ರಾಮಾಣಿಕವಾದ ಚಿಂತನೆ ಕೈಗೊಳ್ಳಬೇಕು ತಮ್ಮ ಕಾಲದಲ್ಲಿ ಈ ರೀತಿ ಗುಂಡಿನ ಮಳೆಯಾಗುವುದು ಬೇಡ ಈ ರೀತಿ ನಿರಪರಾದಿಗಳನ್ನು ಕೊಲ್ಲುವುದು ಬೇಡ ಇದು ಒಳ್ಳೆಯ ಸೂಚನೆಯಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಿ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಈಗ ಸಮಯ ಮಧ್ಯಾಹ್ನ 130 ಗಂಟೆಯಾಗಿದೆ ಇನ್ನು ಈ ವಿಷಯದ ಬಗ್ಗೆ ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ತಮಗೆ ಒಂದು ಪತ್ರವನ್ನು ಕೊಟ್ಟಿದ್ದೇನೆ

ಅಧ್ಯಕ್ಷರು ಈಗ ಆ ಭಾಗದಲ್ಲಿರುವ ಶಾಸಕರು ಮಾತನಾಡಬೇಕೆಂದು ಕೇಳುತ್ತಿದ್ದಾರೆ ಬೇರೆ ಬೇರೆ ಸದಸ್ಯರು ಕೇಳುತ್ತಾರೆ ಇದಕ್ಕೆ ಸಹಿ ಮಾಡಿರುವ ಸದಸ್ಯರು ಇದ್ದಾರೆ

ಶ್ರೀ ಡಿ ಎನ್ ಜೀವರಾಜ್ ಮಾನ್ಯ ಅಧ್ಯಕ್ಷರೆ, ಆ ಬಾಗದಿಂದ ಬಂದಿರುವ ಶಾಸಕರುಗಳಿಗೆ ಮಾತನಾಡಲು ಅವಕಾಶವನ್ನು ಕೊಡಬೇಕು

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ಆ ಬಾಗದ ಶಾಸಕರಿಗೂ ಮಾತನಾಡಲು ಅವಕಾಶ ಕೊಡಿ, ಬೇಡವೆಂದು ಹೇಳುವುದಿಲ್ಲ

ಶ್ರೀ ಡಿ ಎನ್ ಜೀವರಾಜ್ ಮಾನ್ಯ ಅಧ್ಯಕ್ಷರೆ, ನಕ್ಸಲರ ಸಮಸ್ಯೆಯಿಂದ ನೊವು ಅನುಬವಿಸುತ್ತಿರುವವರಿಗೆ ಮಾತನಾಡಲು ಅವಕಾಶ ಕೊಡಿ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ಪತ್ರವನ್ನು ಕೊಟ್ಟಿದ್ದೇನೆ, ತಾವು ಈ ರೀತಿ ಮಾಡಿಬಿಟ್ಟರೆ ಹೇಗೆ?

ಅಧ್ಯಕ್ಷರು ಆ ಬಾಗದಿಂದ ಬಂದಿರುವ ಶಾಸಕರು ಕೇಳುತ್ತಿದ್ದಾರೆ, ಸಹಿ ಮಾಡಿರುವವರು ಕೇಳಿತ್ತಿದ್ದಾರೆ ಅದಕ್ಕೆ ಈಗ 130 ಗಂಟೆಯಾಗಿದೆ ಊಟಕ್ಕೆ ಸಭೆಯನ್ನು ಮುಂದೂಡಿ ಮತ್ತೆ ಸಭೆ ಸೇರಿ ಈ ವಿಷಯವನ್ನು ಮತ್ತೆ ತೆಗೆದುಕೊಳ್ಳೋಣ

ಶ್ರೀ ಸುನಿಲ್ ಕುಮಾರ್ ಮಾನ್ಯ ಅಧ್ಯಕ್ಷರೆ, ನಕ್ಸಲ್ ಭಾಗದಿಂದ ಬಂದಿರುವವರು ನಾವು ಇದ್ದೇವೆ ನಮಗೆ ಈ ವಿಷಯದ ಬಗ್ಗೆ ಮನ್ನಣೆ

ಕೊಡಿ ಸತ್ಯಾಂಶ ಹೊರಗಡೆ ಬರಬೇಕಾಗಿದೆ ಒಂದೇ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ ವಾಸ್ತವಿಕ ಏನೆಂಬುದು ಹೊರಗೆ ಬರಬೇಕಾಗುತ್ತದೆ ನಾವು ನಕ್ಸಲ್ ಭಾಗದಿಂದ ಬಂದಿರುವವರು

ಅಧ್ಯಕ್ಷರು ಈಗ 1 30 ಗಂಟೆಯಾಗಿದೆ

(ಗೊಂದಲ)

ಶ್ರೀ ಡಿ ಎನ್ ಜೀವರಾಜ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸುನಿಲ್ ಕುಮಾರ್‌ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಈಗ ಸಭೆಯಲ್ಲಿ ಹೆಚ್ಚಿಗೆ ಸದಸ್ಯರು ಇದ್ದಾರೆ ಮದ್ಯಾಹ್ನವೆಂದರೆ ಯಾರು ಇರುವುದಿಲ್ಲ

ಅಧ್ಯಕ್ಷರು ಏಕೆ ಇರುವುದಿಲ್ಲ ? ಇಲ್ಲಿ ಮಾತನಾಡುವವರೆಲ್ಲ ಇರಲೇ ಬೇಕು ಈಗ 1 30 ಗಂಟೆಯಾಗಿದೆ ಸಬೆಯನ್ನು ಮುಂದೂಡಿ ಊಟದ ನಂತರ ಮತ್ತೆ 2 30 ಗಂಟೆಗೆ ಸೇರೋಣ

(ಗೊಂದಲ)

ಶ್ರೀ ಡಿ ಎನ್ ಜೀವರಾಜ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸುನಿಲ್ ಕುಮಾರ್‌ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ನಮಗೂ ಹೇಳುವುದಕ್ಕೆ ಅವಕಾಶ ಕೊಡಿ

ಅಧ್ಯಕ್ಷರು ಈಗ ಊಟಕ್ಕೆ ಹೋಗೋಣ, 2 30 ಗಂಟೆಗೆ ಬನ್ನಿ, ಆಗ ಮಾತನಾಡಿ ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ

ಶ್ರೀ ಡಿ ಎನ್ ಜೀವರಾಜ್ ಮಾನ್ಯ ಅಧ್ಯಕ್ಷರೆ, ಊಟ ಆದಮೇಲೆ ಯಾರೂ ಇರುವುದಿಲ್ಲ

ಅಧ್ಯಕ್ಷರು ಎಲ್ಲ ಇರುತ್ತಾರೆ ಈಗ ಆ ಬಾಗದಿಂದ ಬಂದಿರುವಂಥಾ ಶಾಸಕರು ಮುಂದಿನ ಬೆಂಚ್‌ನಲ್ಲಿರುವಂಥವರು ಏನೋ ಮಾತನಾಡಿ ಹೊರಟು ಹೋಗುತ್ತಾರೆ ನಮ್ಮ ನೋವುಗಳನ್ನು ಹೇಳುವಾಗ ಅವರು ಇರುವುದಿಲ್ಲವೆಂದು ಹೇಳುತ್ತಾರೆ ಆದುದರಿಂದ 2 30 ಗಂಟೆಗೆ ತಾವುಗಳು ಸಭೆಯಲ್ಲಿ ಇರಬೇಕು ಈಗ ಸಭೆಯನ್ನು ಮುಂದೂಡೋಣ

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ಪತ್ರವನ್ನು ಕೊಟ್ಟಿರುವವರು ನಮ್ಮ ಗತಿ ಏನು?

ಅಧ್ಯಕ್ಷರು ಈ ವಿಷಯ ಬಹಳ ಗಂಭೀರವಾಗಿ ಇರುವುದರಿಂದ ಮದ್ಯಾಹ್ನ ಚರ್ಚೆ ಮಾಡೋಣವೆಂದರೆ

ಶ್ರೀ ಸುನೀಲ್ ಕುಮಾರ್ ಮಾನ್ಯ ಅಧ್ಯಕ್ಷರೆ, ಅವರು ಆ ಕ್ಷೇತ್ರದ ಶಾಸಕರು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ

ಶ್ರೀ ಆರಗ ಜ್ಞಾನೇಂದ್ರ. ಮಾನ್ಯ ಅಧ್ಯಕ್ಷರೆ, ನಾವು ಪ್ರತಿ ದಿವಸವೂ ಬಹಳ ಗಂಭೀರವಾಗಿ ಅನುಭವಿಸುತ್ತಿದ್ದೇವೆ ಇದು ನಮ್ಮ ನೋವಿನ ಪ್ರಶ್ನೆ ಇದನ್ನು ಯಾರೂ ಕೇಳುವುದಿಲ್ಲ

ಅಧ್ಯಕ್ಷರು ಆಯಿತು, ಒಬ್ಬರು ಮಾತನಾಡಿ, ಮಾನ್ಯ ಸುನಿಲ್ ಕುಮಾರ್‌ರವರೆ ತಾವು ಮಾತನಾಡಿ

ಶ್ರೀ ಸುನಿಲ್ ಕುಮಾರ್(ಕಾರ್ಕಳ) ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಮಲೆನಾಡಿನ ಭಾಗಗಳಲ್ಲಿ ನಡೆಯುತ್ತಿರುವಂಥಾ ನಕ್ಸಲ್ ಚಟುವಟಿಕೆಗಳ ಕುರಿತಂತೆ, ಹತ್ತಾರು ರೀತಿಯಾದಂಥಹ ಅಭಿಪ್ರಾಯಗಳನ್ನು ನಾವೆಲ್ಲರೂ ಕೇಳುತ್ತಿದ್ದೇವೆ ವಾಸ್ತವಿಕವಾಗಿ ಆ ಮಲೆನಾಡಿನ ಬಾಗದ ನಮ್ಮ ನಾಲ್ಕೈದು ಶಾಸಕರುಗಳ ಕ್ಷೇತ್ರಗಳಲ್ಲಿ, ಯಾವ ರೀತಿಯ ಭಯದ ವಾತಾವರಣವಿದೆಯೆನ್ನುವಂಥಾದ್ದು ಸಾಕಷ್ಟು ಜನರಿಗೆ ಗೊತ್ತಿಲ್ಲ ಯಾವುದೋ

ಪತ್ರಿಕಾ ವರದಿಯನ್ನು, ಟಿ ವಿ ಮಾಧ್ಯಮಗಳಲ್ಲಿ ಬಂದಂಥಾ ಸುದ್ದಿಗಳನ್ನು ನಿಜವೆಂದು ನಂಬಿಕೊಂಡು ಅದರ ಪರವಾಗಿ, ವಿರೋಧವಾಗಿ ಮಾತನಾಡುವವರ ಸಂಖ್ಯೆ ಜಾಸ್ತಿ ಇದೆ ನಾನು ಇಲ್ಲಿರುವಂಥಾ ಎಲ್ಲಾ ಶಾಸಕ ಮಿತ್ರರುಗಳಲ್ಲಿ ವಿನಂತಿ ಮಾಡುತ್ತೇನೆ ಅಲ್ಲಿರುವಂಥಾ ವಾಸ್ತವಿಕ ಸಂಗತಿಗಳನ್ನು ತಿಳಿಯಬೇಕೆಂದರೆ, ನೀವು ದಯಮಾಡಿ ಒಂದೊಂದು ದಿವಸ ನಮ್ಮ ಕ್ಷೇತ್ರಗಳಿಗೆ ಬರಬೇಕು ಯಾವ ರೀತಿಯಾದಂಥಾ ಭಯದ ವಾತಾವರಣದಲ್ಲಿ ಶಾಸಕರಾಗಿ ಇದ್ದುಕೊಂಡು ಜನ ಸಾಮಾನ್ಯರು ಬದುಕುತ್ತಿದ್ದೇವೆಂದು ಗೊತ್ತಾಗಬೇಕು ಪತ್ರಿಕೆಗಳಲ್ಲಿ ಸುಮ್ಮನೆ ಯಾವುದೋ ವರದಿ ಬಂದಿದೆಯೆಂದರೆ, ಟಿ ವಿಯಲ್ಲಿ ಯಾವುದೋ ಸುದ್ದಿ ಬಂದಿದೆ ಎನ್ನು ಕಾರಣಕ್ಕೋಸ್ಕರ ಅವರೆಲ್ಲರೂ ಸಾಮಾಜಿಕ ಹೋರಾಟಗಾರರು ಎಂದು ಬಿಂಬಿಸುತ್ತಿರುವಂಥಾದ್ದು ಇದು ಬಹಳ ದುರಂತದ ಸಂಗತಿ ಏಕೆಂದರೆ ನಮ್ಮ ಪಶ್ಚಿಮ ಭಾಗದ ಏಳೆಂಟು ಪಂಚಾಯತ್‌ಗಳು ಇದ್ದು, ನಾನು ಕಾರ್ಕಳ ಕ್ಷೇತ್ರದ ಶಾಸಕನಾಗಿದ್ದೇನೆ ನನ್ನ ಕ್ಷೇತ್ರದ ಆ ಭಾಗದಲ್ಲಿ ಒಂದೆರಡು ಪಂಚಾಯತ್‌ಗಳಿಗೆ ನಾನು ಹೋಗಡೆ ಒಂದು ವರ್ಷ ವಾಯಿತು ಕಾರಣವೇನೆಂದರೆ ಅಲ್ಲಿ ಹೋಗುವ ಸ್ಥಿತಿ ಇಲ್ಲ ಪಕ್ಕದ ಕ್ಷೇತ್ರ ತೀರ್ಥಹಳ್ಳಿ ಕ್ಷೇತ್ರವಿರಬಹುದು, ಶೃಂಗೇರಿ ಕ್ಷೇತ್ರವಿರಬಹುದು, ಕುಂದಾಪುರ ಕ್ಷೇತ್ರವಿರಬಹುದು, ಆ ಬಾಗದ ಕೆಲವೊಂದು ಕ್ಷೇತ್ರಗಳಲ್ಲಿ ಶಾಸಕರಾಗಿ ಇದ್ದುಕೊಂಡು 6–7 ತಿಂಗಳುಗಳ ಕಾಲ ಕೆಲವೊಂದು ಪಂಚಾಯತ್‌ಗಳಿಗೆ ಇವತ್ತು ಹೋಗದೆ ಇರುವಂಥಾ ಪರಿಸ್ಥಿತಿ ನಿರ್ಮಾಣ ವಾಗಿದೆ ಇದಕ್ಕೆ ಕಾರಣವೆಂದರೆ, ಯಾವುದೋ ಗಿರಿಜನರ ಪರವಾದ ಹೋರಾಟವೆಂದು ಹೇಳಿಕೊಂಡು ಕರ್ನಾಟಕ, ವಿಮೋಚನರಂಗವೆನ್ನು ವಂಧ ಸಂಘಟನೆಯ ಹೆಸರನ್ನು ಹೇಳಿಕೊಂಡು ಕುದುರೆ ಮುಖ ರಾಷ್ಟ್ರೀಯ ಉದ್ಯಾನ ವಿರೋದಿ ಒಕ್ಕೂಟ ಎಂಬ ಹೆಸರನ್ನು ಹೇಳಿಕೊಂಡು ಸಾಮಾಜಿಕವಾದಂಥ ಹೋರಾಟವೆನ್ನುವ ಹೆಸರಿನಡಿಯಲ್ಲಿ ಇವತ್ತು ಹಿಂಸೆಯ ಚಟುವಟಿಕೆಗಳನ್ನು ಆ ಭಾಗಗಳಲ್ಲಿ ಕಳೆದ ಐದಾರು ವರ್ಷಗಳಿಂದ ಮಾಡುತ್ತಿದ್ದಾರೆ ನಾವು ಇದನ್ನು ಈ ಹಿಂದೆ ಐದು ವರ್ಷಗಳ ಹಿಂದೆಯೇ ಹೇಳಿದ್ದೇವೆ ಕುದುರೆ ಮುಖ ರಾಷ್ಟ್ರೀಯ ಉಧ್ಯಾನ ವಿರೋಧಿ ಒಕ್ಕೂಟ, ಅದು ನಕ್ಸಲೀಯ ಚಟುವಟಿಕೆಯನ್ನು ಬೆಂಬಲಿಸುತ್ತಿದೆ ಅದನ್ನು ಅವತ್ತೇ ಹತ್ತಿಕ್ಕಬೇಕೆನ್ನುವ ಒತ್ತಾಯವನ್ನು ಅವತ್ತಿನ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯವರಿಗೆ ಮತ್ತು ಪೋಲೀಸ್ ಮುಖ್ಯಾದಿಕಾರಿಗಳಿಗೆ ಹೇಳಿದ್ದೆವು

ಅವತ್ತು ಪೋಲೀಸ್ ಎಚ್ಚರಿಕೆಯನ್ನು ವಹಿಸಿದ್ದರೆ, ಅವತ್ತು ಸರ್ಕಾರ ಜಾಗ್ರತೆ ವಹಿಸಿದ್ದರೆ, ಬಹುಶಃ ಈ ರೀತಿಯ ಹಂತಕ್ಕೆ ಇವತ್ತು ಸರ್ಕಾರ ತಲುಪುತ್ತಾ ಇರಲಿಲ್ಲ ಇವತ್ತು ಅಲ್ಲೊರುವಂಥಾ ಜನರು ಏನು ಭಯದ ವಾತಾವರಣದಲ್ಲಿ ಕಳೆಯುತ್ತಿದ್ದಾರೆ, ಆ ಸ್ಥಿತಿಗೆ ಬರುತ್ತಾ ಇರಲಿಲ್ಲ ಇವತ್ತು ಎನ್‌ಕೌಂಟರ್ ಆಗಿರುವಂಥಾ ಹಿನ್ನಲೆಯಲ್ಲಿ ಸಾಕಷ್ಟು ಜನ ನಿರಪರಾಧಿ ಗಳನ್ನು ಎನ್ ಕೌಂಟರ್ ಆಗಿದೆಯೆನ್ನುವಂಥಾ ವಾದವನ್ನು ಮುಂದಿಡು ತ್ತಿದ್ದಾರೆ ನಾನು ಕೇಳುವುದೇನೆಂದರೆ ಕಳೆದ 2,3, ವರ್ಷಗಳಿಂದ ಅಲ್ಲಿ ಸಾಮಾನ್ಯ ಕೂಲಿಕಾರನಾದ ಚಂದ್ರಕಾಂತ ಎನ್ನುವವರನ್ನು ನಕ್ಸಲರು ಮನೆಗೆ ಹೋಗಿ, ಅವರ ತಾಯಿಯ ಮೇಲೆ ಅವರನ್ನು ಕಲ್ಲಿನ ಮೇಲೆ ಹಾಕಿ ಅವರ ಎರಡೂ ಕಾಲುಗಳನ್ನು ಪುಡಿ ಮಾಡಿದ್ದು, ಇವತ್ತು ಅವನಿಗೆ ಎರಡೂ ಕಾಲುಗಳು ಇಲ್ಲ ಅವನು ಕೂಲಿ ಮಾಡಿಕೊಂಡು ಬದುಕುತ್ತಿದ್ದವನು ಅವನ ಆ ಕಾಲುಗಳನ್ನು ಯಾವ ರೀತಿಯಾಗಿ ಪುಡಿ ಮಾಡಿದ್ದಾರೆಂದರೆ ಯಾವುದೇ ಆಪರೇಷನ್ ಅನ್ನು ಆ ಕಾಲುಗಳಿಗೆ ಮಾಡುವುದಕ್ಕೆ ಆಗುವುದಿಲ್ಲ ಕಾಲಿನ ಮೂಳೆಗಳು ಪುಡುಪುಡಿಯಾಗಿ ಇವತ್ತು ಅವನ ಎರಡೂ ಕಾಲುಗಳು ಸ್ವಾಧೀನವಿಲ್ಲದೆ, ಚಂದ್ರಕಾಂತ ಬದುಕುತ್ತಿದ್ದಾನೆ ಇವರ ಬಗ್ಗೆ ಯಾರು ಸಿಂಪತಿಯನ್ನು ವ್ಯಕ್ತಪಡಿಸಿದ್ದಾರೆ? ಪೋಲಿಸ್‌ನವರಿಗೆ ಮಾಹಿತಿಯ್ನು ಕೊಟ್ಟನೆಂಬ ಕಾರಣಕ್ಕೆ ಶೇಷಗೌಡ ಎನ್ನುವವರನ್ನು ಹತ್ಯೆ ಮಾಡಿದ್ದಾರೆ ಇವರ ಹತ್ಯೆ ಯಾವ ರೀತಿಯಾಗಿ ಮಾಡಿದರೆಂದರೆ, ರಾತ್ರಿ ಊಟ ಮಾಡುತ್ತಿರುವಂಥಾ ಸಂದರ್ಭದಲ್ಲಿ ತಟ್ಟೆಯನ್ನು ಇಟ್ಟುಕೊಂಡಿದ್ದ ಶೇಷೇಗೌಡನನ್ನು ನಕ್ಸಲೀಯರು ಆ ಊಟದ ತಟ್ಟೆಯನ್ನು ಎಲೆದುಕೊಂಡು, ಆತನ ಸಣ್ಣ ಮಗು ಮತ್ತು ಆತನ ಹೆಂಡತಿಯನ್ನು ಬೇರ್ಪಡಿಸಿ ಕರೆದುಕೊಮಡು ಬರುತ್ತಾರೆ ಅವನಿಗೆ ಯಾವ ರೀತಿಯಾಗಿ ಹಿಂಸೆಯನ್ನು ಕೊಟ್ಟಿದ್ದರೆಂಬುದು ಶಿವರಾಂರವರಿಗೆ ಗೊತ್ತಿದೆ ಅವತ್ತಿಗೆ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು ಅವರ ಎರಡೂ ಕಾಲುಗಳನ್ನು ಪುಡಿಮಾಡಿ, ಕಾಲುಗಳನ್ನು ಕಂಬಕ್ಕೆ ಸುತ್ತಿದರು ಕಾಲುಗಳನ್ನು ಕಂಬಕ್ಕೆ ಸುತ್ತುತ್ತಾರೆಂದರೆ, ಯಾವ ರೀತಿಯಾಗಿ ಕಾಲುಗಳು ಪುಡಿಯಾಗಿತ್ತವೆಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕಲ್ಲಾ? ಎರಡೂ ಕಾಲುಗಳನ್ನು ಕಂಬಕ್ಕೆ ಸುತ್ತಿ ನಂತರ, ತಲೆಗೆ ಗುಂಡಿಟ್ಟು ಶೇಷೇಗೌಡನ ಹತ್ಯೆ ಮಾಡಿ ನಕ್ಸಲಿಯರು ಹೊರಟು ಹೋದರು ಮೊನ್ನೆ ಮೊನ್ನೆ ನಡೆದಂತಹ ವೆಂಕಟೇಶನ ಹತ್ಯೆ, ಇದು ಯಾವ ರೀತಿಯಾಗಿ ಆಯಿತೆಂಬುದು

ನಮಗೆ ಗೊತ್ತು ಇಲ್ಲಿ ಸಾಕಷ್ಟು ಜನರಿಗೆ ಗೊತ್ತಿಲ್ಲ ಕಳೆದ ಒಂದು, ಒಂದೂವರೆ ತಿಂಗಳ ಕೆಳಗೆ ಮಾವೋವಾದಿ ನಕ್ಸಲಿಯರ ಕೇಂದ್ರೀಯ ಸಮಿತಿಯ ಸದಸ್ಯ ರಮೇಶ್ ಮೊಯಿಲಿಯ ಹತ್ಯೆ ಆಂದ್ರಪ್ರದೇಶದಲ್ಲಿ ಅವತ್ತು ಅಲ್ಲಿರುವ ಸರ್ಕಾರ ಹತ್ಯೆ ಮಾಡಿತು ಈ ರಮೇಶ್ ಮೊಯಿಲಿಯ ಹತ್ಯೆ ಆಂದ್ರಪ್ರಧೇಶದಲ್ಲಿ ಅವತ್ತು ಅಲ್ಲಿರುವ ಸರ್ಕಾರ ಹತ್ಯೆ ಮಾಡಿತು ಈ ರಮೇಶ್ ಮೊಯಿಲಿಯನ್ನು ಹತ್ಯೆ ಮಾಡಿದರೆಂಬ ಕಾರಣಕ್ಕೋಸ್ಕರ ಆಗುಂಬೆಯಲ್ಲಿ ಬಸ್ಸನ್ನು ಸುಟ್ಟು ಹಾಕುತ್ತಾರೆ ರಮೇಶ್ ಮೊಯಿಲಿಗೂ ಆಗುಂಬೆಗೂ ಏನು ಸಂಭಂಧ? ಅಲ್ಲಿ ಕೇಂದ್ರೀಯ ಸಮಿತಿಯ ಸದಸ್ಯನನ್ನು ಹತ್ಯೆ ಮಾಡಿದರೆಂಬ ಆಗುಂಬೆಯಲ್ಲಿರುವ ಪ್ರಯಾಣಿಕರು ಇರುವ ಬಸ್ಸನ್ನು ಸುಟ್ಟುಹಾಕುತ್ತಾರೆ ಇದರ ಬಗ್ಗೆ ಏಕೆ ಅನುಕಂಪವನ್ನು ತೋರಿಸಬೇಕು? ಅಲ್ಲಿರುವಂಧ ನಾಲ್ಕೈದು ಕ್ಷೇತ್ರಗಳು, ಅದು ತೀರ್ಥಹಳ್ಳಿ ಇರಬಹದು, ಮೂರು ತಾಲ್ಲೂಕುಗಳನ್ನೊಳಗೊಂಡಂಧ ಶೃಂಗೇರಿ ಕ್ಷೇತ್ರವಿರಬಹುದು, ಕಾರ್ಕಳ ಕ್ಷೇತ್ರವಿರಬಹುದು, ಕುಂದಾಪುರ ಕ್ಷೇತ್ರವಿರಬಹುದು ನಕ್ಸಲರ ವಿಚಾರದಲ್ಲಿ ಯಾವುದೇ ರಾಜಕಾರಣವನ್ನು ಅಲ್ಲಿರುವಂಧ ಯಾರೂ ಮಾಡುತ್ತಿಲ್ಲ ಎಲ್ಲ ರಾಜಕೀಯ ಪಕ್ಷಗಳು ಒಂದಾಗಿ, ನಕ್ಸಲರನ್ನು ಹತ್ತಿಕ್ಕಬೇಕು ಎನ್ನುವಂಧ ಹೋರಾಟವನ್ನು ಮಾಡುತ್ತಿದ್ದಾರೆ ಶೃಂಗೇರಿಯಲ್ಲಿ ವೆಂಕಟೇಶನ ಹತ್ಯೆಯಾದಾಗ ಶೃಂಗೇರಿ ಬಂದ್‌ಗೆ ಕರೆಕೊಟ್ಟರು ಬಂದ್‌ಗೆ ಕರೆಕೊಟ್ಟಿದ್ದು ಯಾವುದೇ ಒಂದು ಸಂಘಟನೆಯಲ್ಲ ಎಲ್ಲ ರಾಜಕೀಯ ಪಕ್ಷಗಳು ಶೃಂಗೇರಿಯಲ್ಲಿರಿವಂಧ ಎಲ್ಲ ಸಂಘಟನೆಗಳೂ ಸೇರಿ ಆ ಹತ್ಯೆಯನ್ನು ಖಂಡಿಸಿ, ನಕ್ಸಲರ ಬಗ್ಗೆ ಪೋಲೀಸರು ಕ್ರಮವನ್ನು ಕೈಗೊಳ್ಳಬೇಕು ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎನ್ನುವಂಧ ಹೋರಾಟವನ್ನು ಮಡಿದರು ಅದು ಯಾವುದೇ ಒಂದು ರಾಜಕೀಯ ಪಕ್ಷ ಕೊಟ್ಟಂತ ಕರೆಯಲ್ಲ ಚಂದ್ರಕಾಂತನ ಎರಡೂ ಕೈಕಾಲುಗಳನ್ನು ಮುರಿದಾಗ ಯಾರೂ ಅನುಕಂಪ ತೋರಲಿಲ್ಲ ಶೇಷೇಗೌಡನ ಹತ್ಯೆಯಾದಾಗ ಅದು ಇನ್ನೇನೋ ಸಮಸ್ಯೆಯಾಯಿತು, ಎಂದು ಹೇಳಿ ಅವನ ಬಗ್ಗೆ ಸಿಂಪತಿ ತೋರಿಸುವಂಧ ಪ್ರಯತ್ನವನ್ನು ಯಾರೂ ಮಾಡಲಿಲ್ಲ ವೆಂಕಟೇಶನ ಹತ್ಯೆ ಮಾಡಿದಾಗ ಯಾರಿಗೂ ಏನೂ ಅನ್ನಿಸಲಿಲ್ಲ ಅದನ್ನು ಸಾಮಾಜಿಕ ಹೋರಾಟ ಎಂದು ಹೇಳುತ್ತಾರೆ ಯಾವುದು ಸಾಮಾಜಿಕ ಹೋರಾಟ? ಶೇಷೇಗೌಡನ ಹತ್ಯೆ ಮಾಡಿದಂಧ ಸಂದರ್ಬದಲ್ಲಿ ಅವನ ಮನೆಯಿಂದ 50 ಸಾವಿರ ರೂಪಾಯಿಗಳನ್ನು ಹೊತ್ತುಕೊಂಡು ಹೋಗಿದ್ದಾರೆ ಹಣವನ್ನು ವಸೂಲಿ ಮಾಡುವಂಧಾದ್ದು

ಅಲ್ಲಿರುವಂಥ ಮನೆಗಳಿಗೆ ನುಗ್ಗಿ ಮನೆಯಲ್ಲಿರುವಂಥ ಎಲ್ಲ ಜನರನ್ನು ಹೆದರಿಸಿ ದರೋಡೆಯನ್ನು ಮಾಡುವಂಥಾದ್ದು ಸಾಮಾಜಿಕ ಹೋರಾಟವೆ? ನನ್ನ ಕ್ಷೇತ್ರದ ಕಬ್ಬಿನಾಲೆ ಎನ್ನುವಂಥ ಪ್ರದೇಶದಲ್ಲಿರುವ ಮನೆಗಳಿಗೆ ವಾರಕ್ಕೊಂದು ಸಾರಿ ಬಂದು, ಏದು ಸಾವಿರ, ಹತ್ತು ಸಾವಿರ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ ಮನೆಗಳಿಗೆ ಬಂದು ಹಣವನ್ನು ವಸೂಲಿ ಮಾಡುವಂಥಾದ್ದು ಸಾಮಾಜಿಕ ಹೋರಾಟ ಎಂದು ನಮ್ಮೆಲ್ಲ ಹಿರಿಯರು ಹೇಳುವುದಾದರೆ, ಈ ಸಮಾಜ ಎಲ್ಲಿಗೆ ಹೋಗಬೇಕೆನ್ನುವುದು ನನಗೆ ಗೊತ್ತಿಲ್ಲ ಮನೆಮನೆಗಳಿಗೆ ನುಗ್ಗಿ ಐದು ಸಾವಿರ, ಹತ್ತು ಸಾವಿರ ರುಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ ಹತ್ಯೆಯಾದಂಥ ಶೇಷೇಗೌಡ ದಲಿತ ಜಾತಿಗೆ ಸೇರಿದ ವ್ಯಕ್ತಿ ಚಮದ್ರಕಾಂತ ಹಿಂದುಳಿದ ವರ್ಗಕ್ಕೆ ಸೇರಿದಂಥ ವ್ಯಕ್ತಿ ಯಾವುದೋ ಒಂದು ಹೋರಾಟದ ನೆಪವನ್ನಿಟ್ಟುಕೊಂಡು ಈ ರೀತಿ ಹಿಂಸೆಯ ಮುಖಾಂತರ ನಾವು ಪರಿವರ್ತನೆಯನ್ನು ಮಾಡುತ್ತೇವೆ ಬಂದೂಕಿನ ಮುಖಾಂತರ ಪರಿವರ್ತನೆಯನ್ನು ಮಾಡುತ್ತೇವೆ ಎಂದು ಹೇಳಿ ಹೊರಟಂಥ ನಕ್ಸಲ ಚಟುವಟಿಕೆಯ ಬಗ್ಗೆ ಪೋಲೀಸರು ನೆನ್ನೆ ಮಾಡಿದಂಥ ಎನ್‌ಕೌಂಟರ್ ಅತ್ಯಂತ ಸಮರ್ಥನೀಯವಾದದ್ದು ಅದರಲ್ಲಿ ಯಾವುದೇ ರಾಜಿ ಇಲ್ಲ ಈ ರೀತಿಯ ಎನ್‌ಕೌಂಟ್‌ಗಳನ್ನು ಮಾಡಲೇಬೇಕು ಅಲ್ಲಿ ಐದು ಜನರನ್ನು ಎನ್‌ಕೌಂಟರ್ ಮಾಡಿದ್ದರಿಂದ ಅಲ್ಲಿರುವಂಥ ಜನರಿಗೆ ವಿಶ್ವಾಸ ಬಂದಿದೆ

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಧರಂಸಿಂಗ್‌ರವರು ಮಾತನಾಡಲು ಎದ್ದು ನಿಂತರು)

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ನಾವು ಇಲ್ಲಿ ನಕ್ಸಲಿಸಂ ಅನ್ನು ಡಿಫೆಂಡ್ ಮಾಡಲು ಬಂದಿಲ್ಲ Naxal Activity is an ideological battle ಅದನ್ನು ಅವರು ಸಾಮಾಜಿಕ ಹೋರಾಟ ಎಂದು ಹೇಳುತ್ತಾರೆ ಮಾನ್ಯ ಸದಸ್ಯರು youngster ಇದ್ದಾರೆ ಇಲ್ಲಿ ಮೊಟ್ಟ ಮೊದಲ ಬಾರಿಗೆ ಬಂದಿದ್ದಾರೆ ಸಾಕೇತ್ ರಾಜನ್ ಜವಹರಲಾಲ್ ನೆಹರು ಯೂನಿವರ್ಸಿಟಿಯ ಮೊದಲ ವಿದ್ಯಾರ್ಥಿ ಬೆಂಗಳೂರು ಯೂನಿವರ್ಸಿಟಿಯಲ್ಲಿ ಕೂಡ ವ್ಯಾಸಂಗ

ಮಾಡಿದ್ದಾರೆ He has written 14 books ಇದರಲ್ಲಿ ideological ಏನೋ ಇದೆ ಅದನ್ನು ನೀವು ಅಲ್ಲಗಳೆಯುವಂತಿಲ್ಲ ಇದರಲ್ಲಿ ಎರಡು ವಿಷಯಗಳಿವೆ ಆರಗ ಜ್ಞಾನೇಂದ್ರರವರೆ ತಮಗೂ ಕೂಡ ಗೊತ್ತು, ಸಾಕೇತ್ ರಾಜನ್ ಹೋದ ಹಾಗೆ ಕೆಲವು idiological battle ಇವೆ ಅದನ್ನು ಮಾಡಿದ್ದಾರೆ ಅದಕ್ಕೆ ಕೆಲವು ಸಿದ್ಧಾಂತಗಳಿವೆ ಅದರ ಬಗ್ಗೆ ನೀವೇನೂ ಹೇಳಬೇಡಿ ನಾವೇನು ಹೇಳುತ್ತಿದ್ದೇವೆಂದರೆ, ನಾವು ನಕ್ಸಲ್ ಚಟುವಟಿಕೆಗಳನ್ನು ಡಿಪೆಂಡ್ ಮಾಡುತ್ತಿಲ್ಲ

ಶ್ರೀ ಡಿ ಎನ್ ದೇವರಾಜ್ ಅವರು ವೆಂಕಟೇಶನನ್ನು ಹೊಡೆದು ಹಾಕಿದರು ಶೇಷೇಗೌಡನನ್ನು ಹೊಡೆದು ಹಾಕಿದುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿ ವೆಂಕಟೇಶನನ್ನು, ಶೇಷೇಗೌಡನನ್ನು ಹೊಡೆದು ಹಾಕಿದಾಗ ನಿಮ್ಮದೇ ಸರ್ಕಾರವಿತ್ತು ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು

ಶ್ರೀ ಧರ್ಮಸಿಂಗ್ ನಾನು ಮುಖ್ಯ ಮಂತ್ರಿಯಾಗಿದ್ದಾಗ ಎಲ್ಲ ಕಡೆಗೆ ನಿಮ್ಮನ್ನು ಕರೆದುಕೊಂಡು ಹೋಗಿದ್ದೆ ಆಗ ಭಯದ ವಾತಾವರಣ ವಿರಲಿಲ್ಲ

ಶ್ರೀ ಡಿ ಎನ್ ದೇವರಾಜ್ ಈಗ ವೆಂಕಟೇಶನ ಹೆಂಡತಿಗೆ ಗಂಡ ಇಲ್ಲವಲ್ಲ ಮಗನಿಗೆ ಅಪ್ಪ ಇಲ್ಲವಲ್ಲ ಅದನ್ನು ಕೊಡುವವರು ಯಾರು? ನೀವು ತಂದು ಕೊಡುವಿರಾ?

ಶ್ರೀ ಧರ್ಮಸಿಂಗ್ it is a socially apparent problem ನಾವು ಹೇಳತಕ್ಕಂಥದ್ದು ಇಷ್ಟೇ ಇದು ideological batle for this you can,t curb the ಬುಲೆಟ್‌ನಿಂದ ವಾಯ್‌ಲೆನ್ಸ್ ಅನ್ನು ಸೈಲೆನ್ಸ್ ಮಾಡುವುದಕ್ಕೆ ಆಗುವುದಿಲ್ಲ ಆದರೆ, ಇದಕ್ಕೆ methodically development works ಮಾಡಿ ಚಿರಂಜೀವಿ ಕಮಿಟಿ ಇದೆ ಅದರಂತೆ ಸರ್ಕಾರದಿಂದ ಅವರಿಗೆ ರಿಯಾಯಿತಿ ಕೊಡಿ ಆ ರೀತಿ ಕೊಡುವುದನ್ನು ಬಿಟ್ಟು ಡಿ ಜಿ ಶ್ರೀನಿವಾಸ್‌ನ್ ಗೆ ಹೇಳಿ, ಬಂದೂಕು ತೆಗೆದುಕೊಂಡು ಹೋಗಿ ಹೊಡೆಯಿರಿ ಎಂದರೆ ಆಗುವುದಿಲ್ಲ I was also Home Minister 17 years back I know about it

ಶ್ರೀ ಸುನಿಲ್ ಕುಮಾರ್ ಅದ್ಯಕ್ಷರೇ, ನಾನು ಕಂಪ್ಲೀಟ್ ಮಾಡುತ್ತೇನೆ

ಶ್ರೀ ಧರ್ಮಸಿಂಗ್ Our police are very efficient, ರಾಜೀವ್ ಗಾಂಧಿಯವರನ್ನು ಹತ್ಯೆ ಮಾಡಿದಂಥ ಶಿವರಸನ್ ಅನ್ನು ಕರ್ನಾಟಕ ರಾಜ್ಯದಲ್ಲಿ ನಾವು ಹಿಡಿದಿದ್ದೇವೆ ಈಗ ನಾವು ಹೇಳುತ್ತಿರುವುದೇನೆಂದರೆ ಅವರು idiological fight ಮಾಡುತ್ತಿದ್ದಾರೆ ಬಿ ಜೆ ಪಿ ಯವರು ಒಂದೇ ರೀತಿ ನೋಡುತ್ತೀರಿ

ಅಧ್ಯಕ್ಷರು you have got a different idiology sir

ಶ್ರೀ ಆರಗ ಜ್ಞಾನೇಂದ್ರ ಈ ಸದನದಲ್ಲಿ ನಿಂತುಕೊಂಡು ಏಕೆ ಈ ರೀತಿ ವೈಭವಿಕರಣ ಮಾಡುತ್ತೀರಿ

(ಗೊಂದಲ)

ಶ್ರೀ ಧರ್ಮ ಸಿಂಗ್ ಬಿ ಜೆ ಪಿ ಫಿಲಾಸಫಿ ಬೇರೆ ಛತ್ತೀಸ್ ಘಡದಲ್ಲಿ ಸಾವಿರಾರು ಅಮಾಯಕರು ಸತ್ತು ಹೋಗುತ್ತಿದ್ದಾರೆ ಅಲ್ಲಿ ರಮಣಸಿಂಗ್ ರವರು ಮುಖ್ಯಮಂತ್ರಿಯಾಗಿದ್ದು ಸಾವಿರಾರು ಮಂದಿಯ ಕೊಲೆಯಾಗುತ್ತಿದೆ

ಶ್ರೀ ಸುನಿಲ್ ಕುಮಾರ್ ಅವರು ನಕ್ಸಲ್ ಚಟುವಟಿಕೆಯನ್ನು ಸಾಮಾಜಿಕ ಹೋರಾಟ ಎಂದು ಹೇಳುತ್ತಿರುವ ಬಗ್ಗೆ ನನ್ನದೇನೂ ಆಕ್ಷೇಪವಿಲ್ಲ ಹೇಳಿಕೊಳ್ಳಲಿ, ಸಾಕೇತ್ ರಾಜನ್ ಹತ್ಯೆಯಾದಾಗ ಅದಕ್ಕೆ ಪ್ರತೀಕಕರವಾಗಿ ವೆಂಕಟಮ್ಮನ ಹಳ್ಳಿಯಲ್ಲಿ ಏಳು ಜನ ಪೋಲೀಸರ ಹತ್ಯೆಯಾಯಿತು ಅದು ಸಾಮಾಜಿಕ ಹೋರಾಟವೇ? ರಮೇಶ್ ಮೊಯ್ಲಿಯ ಹತ್ಯೆಯಾದಾಗ ಆಗುಂಬೆಯಲ್ಲಿ ಬಸ್ ಸುಟ್ಟಿದ್ದು ಸಾಮಾಜಿಕ ಹೋರಾಟವೇ? ಏಳು ಜನ ಪೋಲೀಸರು ಹತ್ಯೆಯಾದಾಗ ಅವರ ಬಗ್ಗೆ ಸಿಂಪಥಿ ಬರಲಿಲ್ಲ ಆದರೆ ಸಾಕೇತ್, ರಾಜನ್ ಭಸ್ಮವನ್ನು ಹಿಡಿದುಕೊಂಡು ಓಡಾಡಿದುರ ಬಗ್ಗೆ ಬಹಳ ಪ್ರಚಾರವಾಯಿತು ನಾವು ಯಾವುದಕ್ಕೆ ಈ ಸಮಾಜದಲ್ಲಿ ಆದ್ಯತೆಯನ್ನು ಕೊಡಬೇಕು ಎನ್ನುವ ಬಗ್ಗೆ ಯೋಚನೆಯನ್ನು ಮಾಡಬೇಕು ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೇ ಇಲ್ಲ ಅವರು ಎಲ್ಲೆಲ್ಲಿ ಹತ್ಯೆಗಳನ್ನು

ಮಾಡಿದ್ದಾರೆ ಎಲ್ಲೆಲ್ಲಿ ದಾಳಿಗಳನ್ನು ಮಾಡಿದ್ದಾರೆ, ಯಾರ್ಯಾರ ಮನೆಗಳಿಗೆ ಹೋಗಿದ್ದಾರೆ, ಅಲ್ಲೆಲ್ಲಾ ಅವರು ಬಿಟ್ಟು ಹೋಗಿರುವಂಥಾ ಪಾಂಪ್ಲೆಟ್ ಏನಿದೆ ಎಂದರೆ, ಪ್ರಜಾಪ್ರಭುತ್ವದಲ್ಲಿ ನಮಗೆ ನಂಬಿಕೆ ಇಲ್ಲ ಬಂದೂಕಿನ ಮುಖಾಂತರ ನಾವು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುತ್ತೇವೆ ಕ್ರಾಂತಿ ಚಿರಾಯುವಾಗಲಿ ಎಂದು ಇದ್ದು, ಆ ರೀತಿ ಹೇಳಿಕೊಂಡು ಹೋರಾಟವನ್ನು ಮಾಡುತ್ತಾರೆ ಪ್ರಜಾಪ್ರಭುತ್ವವನ್ನು ನಂಬಿಕೊಂಡು ಬಂದಂಥ ದೇಶ ನಮ್ಮದು ಪ್ರಜಾಪ್ರಭುತ್ವದಲ್ಲಿ ಅವರು ಯಾವುದೇ ರೀತಿಯಾದಂಥ ಹೋರಾಟಗಳನ್ನು ಮಾಡಲಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಆದರೆ, ಪ್ರಜಾಪ್ರಭುತದ ಬಗ್ಗೆ ನಂಬಿಕೆಯೇ ಇಲ್ಲದಿದ್ದವರು ಮಾಡುವುದು ಸಾಮಾಜಿಕ ಹೋರಾಟ ಎಂದು ಹೇಳುವುದಕ್ಕಾಗುತ್ತದೆಯೇ? ಇದೊಂದು ಸಾಮಾಜಿಕ ಹೋರಾಟ ಎಂದು ನಕ್ಸಲರು ಹೇಳುತ್ತಿಲ್ಲ ಸಾಮಾಜಿಕ ಹೋರಾಟ ಎಂದು ಹೇಳುತ್ತಿರುವುದು ನಾವು ಪ್ರಜಾಪ್ರಭುತ್ವದ ರೀತಿಯಲ್ಲಿ ಯಾವುದೇ ವಿಷಯವನ್ನು ಹೇಳದೇ, ನಾವು ಪರ್ಯಾಯವಾದಂಥ ಒಂದು ಸರ್ಕಾರವನ್ನು ಮಾಡುತ್ತೇವೆ ಎಂದು ಹೇಳಿ ನನ್ನ ಕ್ಷೇತ್ರದ 2–3 ಹಳ್ಳಿಗಳಲ್ಲಿ ಸಭೆಗಳನ್ನು ಮಾಡುತ್ತಾರೆ ಗ್ರಾಮ ಪಂಚಾಯತಿಯ ಗ್ರಾಮ ಸಭೆಗಳಿಗೆ ಹೋಗಬಾರದೆಂದು ಹೇಳಿ ನಕ್ಸಲರು ಅಲ್ಲಿರುವಂಥ ವ್ಯಕ್ತಿಗಳಿಗೆ ತಾಕೀತು ಮಾಡುತ್ತಾರೆ ನಾವು ಪ್ರತ್ಯೇಕವಾದಂಥ ಸರ್ಕಾರವನ್ನು ಮಾಡಬೇಕು, ನಾವು ಏನು ಹೇಳುತ್ತೇವೆಯೋ ಅದನ್ನು ಕೇಳಬೇಕು ಎಂದು ಹೇಳುತ್ತಾರೆ ಇವತ್ತು ನಕ್ಸಲರಿಗೆ ಪರೋಕ್ಷವಾಗಿ ಬೆಂಬಲ ಕೊಡುತ್ತಿರುವಂಥವರ್ಯಾರೂ ಕೂಡ ತಮ್ಮ ಮಕ್ಕಳನ್ನು ಬಂದೂಕು ಹಿಡಿದು ಕಳುಹಿಸಿಲ್ಲ ಅವರ ಮಕ್ಕಳು ಬೇರೆ ಕಡೆಗಳಲ್ಲಿ ಇಂಗ್ಲಿಷ್ ಮೀಡಿಯಮ್ ಶಾಲೆಗಳಲ್ಲಿ ಓದುತ್ತಿದ್ದಾರೆ ಅಮಾಯಕರನ್ನು ಅವರ ಜೊತೆ ತುರುಕಿ, ಅವರಿಗೆ ಬಂದೂಕಿನ ಅಥವಾ ಇನ್ಯಾವುದೋ ಹುಚ್ಚನ್ನು ಹಿಡಿಸಿ, ಅದಕ್ಕೆ ಬೆಂಬಲವನ್ನು ಕೊಡುತ್ತಿರುವಂಥ ವರು ಬುದ್ಧಿಜೀವಿಗಳು ನಾವು ಈ ಹಿಂದೆಯೇ ಹೇಳಿದ್ದೆವು ಯಾರು ಬಂದೂಕನ್ನು ಇಟ್ಟುಕೊಂಡು ನಕ್ಸಲ್ ಚಟುವಟಿಕೆಯನ್ನು ಮಾಡುತ್ತಿದ್ದಾರೆ, ಅವರ ಬಗ್ಗೆ ನೇರವಾದಂಥ ಕಾರ್ಯಾಚರಣೆಯಾಗಬೇಕು ನಕ್ಸಲರಿಗೆ ಪರೋಕ್ಷವಾಗಿ ಬೆಂಬಲ ಕೊಡುತ್ತಿರುವಂಥ ನಕ್ಸಲೀಯರ ಬಗ್ಗೆ ಕಠಿಣ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು ಅದು ಆಗದಿದ್ದರೆ ಬಹಳ ಕಷ್ಟವಿದೆ ನೆನ್ನೆ ಅಲ್ಲಿ ಪ್ರತಿಭಟನೆಗಳಾದವು ಎಂದು ಹೇಳುತ್ತಾರೆ ಕರ್ನಾಟಕ ವಿಮೋಚನಾರಂಗದ ಕಾರ್ಯಕರ್ತರು ಎನ್‌ಕೌಂಟರ್ ಆದ ನಂತರ

ವಾಹನಗಳನ್ನು ಮಾಡಿಕೊಂಡು ಬೇರೆ ಕಡೆಗಳಿಂದ 60-60 ಜನರನ್ನು ಕರೆದುಕೊಂಡು ಬಂದು ಅಲ್ಲಿ ಪ್ರತಿಭಟನೆ ಮಾಡಿದ್ದಾರೆ ಸ್ಥಳೀಯರೂ ಯಾರೂ ಕೂಡ ಪ್ರತಿಭಟನೆ ಮಾಡಲಿಲ್ಲ ನಾವು ಸ್ಥಳೀಯರಾದ್ದರಿಂದ ಏನಾಗಿದೆ ಎಂದು ನಮಗೆ ಗೊತ್ತಿದೆ

ಶ್ರೀ ಎನ್ ಜೀವರಾಜ್ ಇಲ್ಲಿರುವವರಿಗೆ ಅದರ ಬಗ್ಗೆ ಮಾಹಿತಿ ಇಲ್ಲ ಅಲ್ಲಿದ್ದವರೆಲ್ಲ ಬಹಳ ಜನರು ಬಂದು ಪ್ರತಿಭಟನೆಗೆ ಸೇರಿಕೊಂಡು ಎಂದು ಇಲ್ಲಿರುವವರು ಹೇಳುತ್ತಿದ್ದೀರಿ ವಾಟಾಳ್ ನಾಗರಾಜ್‌ರವರು ಬಂದರೆ ಆ ಊರಿಗೆ ಕರೆದುಕೊಂಡು ಹೋಗುತ್ತೇನೆ ತಾವು ಆ ಊರಿಗೆ ಬರಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ ಆ ಊರಿನಲ್ಲಿ ನೀವು ಹೇಳಿದಷ್ಟು ಜನರಿಲ್ಲ ನಿನ್ನೆಯ ದಿವಸ ಆ ಊರಿಗೆ ಬೇರೆ ಬೇರೆ ಊರುಗಳಿಂದ ಜನರನ್ನು ವೆಹಿಕಲ್‌ಗಳನ್ನು ಮಾಡಿ ಕರೆದುಕೊಂಡು ಬಂದು, ಅಲ್ಲಿ ಪ್ರತಿಭಟನೆ ಮಾಡುವಂಥ ಪ್ರಯತ್ನ ಸನ್ಮಾನ್ಯ ಕಳಕುಳಿ ವಿರಲ ಹೆಗಡೆಯವರು ಮತ್ತು ಮರಿಯಪ್ಪನವರ ನಾಯಕತ್ವದಲ್ಲಿ ನಡೆದಿದೆ ಅದು ನನ್ನ ಕ್ಷೇತ್ರ ಆ ಊರಿನಲ್ಲಿ ನೂರು ಜನ ಎಲ್ಲಿಂದ ಬಂದರು? ಆ ಮಾಹಿತಿಯನ್ನು ತಾವು ಅರ್ದ ಮಾಡಿಕೊಳ್ಳಬೇಕು ಅದನ್ನು ತಿಳಿದುಕೊಳ್ಳದೇ ಮಾತನಾಡಿಬಿಡುತ್ತೀರಿ ಆ ಊರಿನಲ್ಲಿರುವುದು 25 ಜನರು ಮಾತ್ರ ಎನ್ನುವುದು ಸುನಿಲ್‌ರವರ ಮಾಹಿತಿಗಾಗಿ ಹೇಳುತ್ತಿದ್ಧೇನೆ

ಶ್ರೀ ಸುನಿಲ್ ಕುಮಾರ್ ಕುದುರೆ ಮುಖ ನ್ಯಾಷನಲ್ ಪಾರ್ಕಿನ ಆಸುಪಾಸಿನ 8 ಕಿ ಮೀ ಒಳಗೆ ಯಾರೂ ಯಾವುದೇ ಬಂದೂಕು ಇಟ್ಟು ಕೊಳ್ಳಬಾರದು ಎಂದು ಸರ್ಕಾರದ ಕಾನೂನು ಇದೆ ಅಲ್ಲಿ ಯಾವುದೇ ವ್ಯಕ್ತಿ ಬಂದೂಕಿಗೆ ಲೈಸೆನ್ಸ್ ಕೊಡಿ ಎಂದರೆ ಪೋಲೀಸರು ಕೊಡುವುದಿಲ್ಲ ಆ ರೀತಿಯ ಕಾನೂನನ್ನು ಸಾಮಾನ್ಯರಿಗೆ ಮಾಡಿ, ನಕ್ಸಲರು ಬಂದೂಕು ಗಳನ್ನು ಯಾವ ರೀತಿ ಬೇಕಾದರೂ ಇಟ್ಟುಕೊಳ್ಳಬಹುದು, ಗ್ರೆನೇಡ್‌ಗಳನ್ನು ಯಾವ ರೀತಿ ಬೇಕಾದರೂ ಇಟುಕೊಂಡು ಅಲ್ಲಿ ತಿರುಗಬಹುದು ಎಂದರೆ ಇದು ಸಾಮಾಜಿಕ ಹೋರಾಟವೆ? ಕುದುರೆ ಮುಖ ನ್ಯಾಷನಲ್ ಪಾರ್ಕ್ ಆಗಿದೆ, ಅದಕ್ಕೋಸ್ಕರ ಲೈಸೆನ್ಸ್ ಕೊಡುವುದಿಲ್ಲ ಎಂದು ಹೇಳುತ್ತಾರೆ ಆದರೆ, 50-60 ಜನ ನಕ್ಸಲರು ಬಾಂಬುಗಳನ್ನು ಎಕೆ-47 ಬಂದೂಕು ಗಳನ್ನು, ಪಿಸ್ತೂಲುಗಳನ್ನು ಇಟ್ಟುಕೊಂಡು ಓಡಾಡುವುದು ರಾಷ್ಟ್ರದ್ರೋಹವಲ್ಲ

ಎಂದು ಇಲ್ಲಿ ವಾದ ಮಾಡುವುದಾದರೆ ಅದು ಪೋಲೀಸರ ಆತ್ಮ ಸ್ಥೈರ್ಯವನ್ನು ಕುಂದಿಸಿದ ಹಾಗೆ ಆಗುತ್ತದೆ ನೆನ್ನೆ ನಡೆದಂಥ ಕಾರ್ಯಾಚರಣೆ ಯಾವುದೇ ಕಾರಣಕ್ಕೂ ಅಪರಾಧವಾಗಲಿಕ್ಕೆ ಸಾದ್ಯವಿಲ್ಲ ಇದರ ಬಗ್ಗೆ ಯಾವುದೇ ತನಿಖೆಗಳು ಅಗತ್ಯವಿಲ್ಲ ಈ ರೀತಿಯ ಕಾರ್ಯಾಚರಣೆಗಳು ಇನ್ನಷ್ಟು ಮುಂದುವರೆಯಬೇಕು ನೆನ್ನೆ ಕಾರ್ಯಾಚರಣೆಯಾಗಿದೆ ಎನ್ನುವ ಕಾರಣಕ್ಕೋಸ್ಕರ ಸರ್ಕಾರ ಸುಮ್ಮನೆ ಕುಳಿತು ಕೊಳ್ಳುವುದು ಬೇಡ ಮೂರೂ ಜಿಲ್ಲೆಗಳ ಪೋಲೀಸ್ ಅಧಿಕಾರಿಗಳನ್ನು ಸೇರಿಸಿ, ಮೂರೂ ಜಿಲ್ಲೆಗಳಲ್ಲಿ ವಿಶೇಷವಾದಂಥ ಕಾರ್ಯಾಚರಣೆಯನ್ನು ಮಾಡಬೇಕು ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾವು ವಿನಂತಿಯನ್ನು ಮಾಡುವಂಥಾದ್ದು ಏನೆಂದರೆ, ಇದಕ್ಕೆ ಅನು ಕಂಪವನ್ನು ತೋರಿಸುವಂಥ ಕೆಲವು ಬುದ್ದಿ ಜೀವಿಗಳು ಕೆಲವು ಪತ್ರಕರ್ತರು, ಕೆಲವು ಅಧ್ಯಾಪಕರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಅವರ ಬಗ್ಗೆ ಕಠಿಣ ಕ್ರಮವನ್ನು ಕೈಗೊಂಡಾಗ ಮಾತ್ರ ಜಂಟಿ ಕಾರ್ಯಾಚರಣೆ ಗಳಾದಾಗ ಮಾತ್ರ ಇದಕ್ಕೊಂಡು ಕೊನೆಯನ್ನು ಎಳೆಯಲು ಸಾದ್ಯವಿದೆ ಆ ನಿಟ್ಟಿನಲ್ಲಿ ಸರ್ಕಾರ ತನ್ನ ಇಚ್ಛಾ ಶಕ್ತಿಯನ್ನು ಪ್ರಕಟಿಸಬೇಕು ಎನ್ನುವಂಥ ವಿನಂತಿಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ನನಗೆ 5 ನಿಮಿಷ ಮಾತನಾಡಲು ಅವಕಾಶ ಕೊಡಿ ನಾನು ಹೆಚ್ಚು ಮಾತನಾಡುವುದಿಲ್ಲ ನಾನು ಆ ಭಾಗದಿಂದ ಬಂದವನು

ಅಧ್ಯಕ್ಷರು ಲಂಚ್ ಆದಮೇಲೆ ಅವಕಾಶ ಕೊಡುತ್ತೇನೆ ಮಾತನಾಡಿ ಏಕೆ ಈ ರೀತಿ ಮಾಡುತ್ತಿದ್ದೀರೆಂದು ಅರ್ಥವಾಗುತ್ತಿಲ್ಲ

ಶ್ರೀ ಅರಗ ಜ್ಞಾನೇಂದ್ರ, ನಾನು ಬೇಗನೆ ಮುಗಿಸುತ್ತೇನೆ ನಾವು ಮಾತನಾಡುವ ಧ್ವನಿಯನ್ನೂ ಕಳೆದುಕೊಂಡಿದ್ದೇವೆ, ಮಾತನಾಡುವ ಧೈರ್ಯ ಸಹ ನಮಗೆ ಇಲ್ಲ ಮಾತನಾಡುವದು ಸಹ ಎಷ್ಟು ರಿಸ್ಕ್ ಎಂಬುದು ಬಹುಶಃ ಇಲ್ಲಿದ್ದವರೆಗೆ ಗೊತ್ತಿಲ್ಲ ಆದರೂ ಆ ರಿಸ್ಕ್‌ಅನ್ನು ತೆಗೆದುಕೊಂಡು ಮಾತನಾಡುತ್ತಿದ್ದೇವೆ ಸರ್ಕಾರದವರು ನನಗೆ ಎರಡು ಜನ ಗನ್‌ಮ್ಯಾನ್ ಗಳನ್ನು ಕಳುಹಿಸಿದ್ದರು ಅದಕ್ಕಾಗಿ ನಮ್ಮ ಎಸ್ ಪಿ ಯವರಿಗೆ ಧನ್ಯವಾದವನ್ನು

ಹೇಳಿ ಅವರು ನನಗೆ ಬೇಡ ಎಂದು ವಾಪಸ್ ಕಳುಹಿಸಿದೆ ಒಂದು ದಿವಸ ನಾನು ಅಲ್ಲಿ ನನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಬಂದಿದ್ದೇನೆ ನಾನೂ ರಿಸ್ಕ್ ತೆಗೆದುಕೊಂಡು ಆ ಏರಿಯಾದಲ್ಲಿ ತಿರುಗಾಡಬೇಕಾಗಿದೆ ಒಂದು ದಿವಸ ಬಹುಶಃ ನೀವೆಲ್ಲರೂ ಎದ್ದು ನಿಂತು ಜ್ಞಾನೇಂದ್ರ ಬಹಳ ಒಳ್ಳೆಯವನು ಈ ರೀತಿ ಆಗಬಾರದಿತ್ತು ಎಂದು ಒಂದು ನಿಮಿಷ ಮೌನವನ್ನು ಆಚರಿಸಿ ನಮ್ಮ ಬಗ್ಗೆ ಸಹಾನುಭೂತಿಯ ಮಾತನ್ನು ಆಡಬೇಕಾಗುತ್ತದೆ ನಾನು ಶಾಸಕನಾಗಿ ಪ್ರಾಣ ಕೊಡಲು ತಯಾರಿದ್ದೇವೆ ಆದರೆ, ಆ ಭಾಗದ ಜನರನ್ನು ಕೂಡ ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ ಇಲ್ಲಿ ಸಾಮಾಜಿಕ ಕಾರ್ಯಕರ್ತರೆಂದು ವೈಭವೀಕರಣದ ವ್ಯವಸ್ಥೆಯನ್ನು ತಾವು ಮಾಡಬೇಡಿ ಎಂದು ಕೈ ಜೋಡಿಸಿ ವಿನಂತಿ ಮಾಡುತ್ತೇನೆ ನಿಮ್ಮ ಪಕ್ಷದವರನ್ನು ಪಕ್ಷದ ಕಾರ್ಯಕರ್ತರನ್ನು ಅಲ್ಲಿ ಹೋಗಿ ಕೇಳಿ ನೀವು ಬಿ ಜೆ ಪಿ ಯವರ ಮೇಲೆ ಹೇಳುತ್ತೀರಲ್ಲಾ ಇನ್ನೂ ಅವರ ಮೇಲೆ ಅಲ್ಲಿ ಏನೂ ಆಗಿಲ್ಲ ಶೇಷೇಗೌಡ್ರು ಯಾರು ಸರ್? ನಿಮ್ಮದೇ ಸರ್ಕಾರವಿದ್ದಾಗ ಪಿ ಎಲ್ ಡಿ ಬ್ಯಾಂಕಿಗೆ ನೀವೇ ಸ್ವತಃ ಧರ್ಮಸಿಂಗ್ ಎಂದು ಸಹಿ ಹಾಕಿ ನಾಮ ನಿರ್ದೇಶನ ಮಾಡಿದ್ದೀರಿ ನೀವು ಅದನ್ನು ಹೋಗಿ ನೋಡಿಕೊಂಡು ಬಂದಿದ್ದೀರಾ? ನೀವು ಮುಖ್ಯಮಂತ್ರಿಯಾಗಿದ್ದಾಗ ಆ ಕಾರ್ಯಕರ್ತನನ್ನು ನೋಡಿದ್ಧೀರಾ? ಹೆಂಡತಿ ಮಕ್ಕಳ ಕೈ ಕಾಲು ಹಿಡಿದರೂ ಅವನನ್ನು ಕೊಚ್ಚಿ ಹಾಕಿದರಲ್ಲಾ ಅವನು ನಿಮ್ಮ ಕಾರ್ಯಕರ್ತ ದಲಿತ ವರ್ಗದ ಅವನನ್ನು ನೀವೇ ನಾಮಿನೇಟ್ ಮಾಡಿದ್ದಿರಿ ವೆಂಕಟೇಶ ಎಂಬುವವನು ಒಂದು ಆರ್ಡಿನರಿ ಗೂಡು ಅಂಗಡಿಯನ್ನು ಮಾಡಿಕೊಂಡಿದ್ದ ಮನುಷ್ಯ ಅವನ ಹೆಂಡತಿ ಹೋಗಿ ಕಾಲು ಹಿಡಿದುಕೊಳ್ಳುತ್ತಾಳೆ ಅವನ ಎರಡನೇ ಕ್ಲಾಸ್‌ಗೆ ಹೋಗುವ ಮಗ ಅವರ ಕಾಲನ್ನು ಹಿಡಿದುಕೊಂಡು ಏನಾದರೂ ಮಾಡಿ ಅವರನ್ನು ಬಿಡಿ ಎಂದು ಕೇಳಿಕೊಂಡರೂ ಬಿಟ್ಟರೆ? ಇದನ್ನು ಯಾವ ಕಾನೂನು ಹೇಳುತ್ತದೆ ಹೋಗಲಿ ನೀವು ಅವರಿಗೆ ಒಂದೇ ಸಾರಿ ಶೂಟ್ ಮಾಡಿ ಎಂದು ಹೇಳಿ ಅವರು ಒಂದೇ ಸಾರಿ ಸತ್ತು ಹೋಗುತ್ತಾರೆ ಆದರೆ ಅವರು ಅವನನ್ನು ಯಥೇಚ್ಛವಾಗಿ ಕೊಚ್ಚಿ ಅನಂತರ ಶೂಟ್ ಮಾಡಿದ್ದಾರೆ ನೀವು ಮಲೆನಾಡಿಗೆ ದಯವಿಟ್ಟು ಬನ್ನಿ, ನಮ್ಮ ವಾಟಾಳ್ ನಾಗರಾಜ್‌ರವರು ಅಲ್ಲಿಗೆ ಸದನ ಸಮಿತಿಯನ್ನು ಕಳುಹಿಸಿ ಎಂದು ಹೇಳಿದರು ಆ ಕೆಲಸವನ್ನು ಮಾಡಿ ಸಾಮಾಜಿಕ ಸಮಸ್ಯೆ ಇದೆಯಲ್ಲಾ? ಯಾರು ಇಷ್ಟು ವರ್ಷ ದೇಶವನ್ನು ಆಳಿದವರು? ಅವರು ಯಾರಿಂದಾಗಿ

ಬಂದರು? ಸಮಸ್ಯೆ ಇದೆಯೆಂದು ಹೇಳುವುದಾದರೆ ನೀವೇ ಅಪರಾದಿ ಸ್ಥಾನದಲ್ಲಿ ನಿಲ್ಲಬೇಕಲ್ಲಾ? ನೀವು ಏನೂ ಮಾಡಿಕೊಟ್ಟಿರಲಿಲ್ಲ ನಾವು 1994 ರಲ್ಲಿ ಬಂದಮೇಲೆ ನಿಮ್ಮನ್ನೆಲ್ಲಾ ಕೈ ಕಾಲು ಹಿಡಿದು ಅಲ್ಲಿ ರಸ್ತೆ ಮಾಡಿಸಿದ್ದೇವೆ ವಿದ್ಯುತ್‌ಚ್ಛಕ್ತಿ ಒದಗಿಸಿದ್ದೇವೆ, ಬಗರ್ ಹುಕುಂ ಸಾಗುವಳಿ ಮಂಜೂರಾತಿ ಮಾಡಿಸಿಕೊಟ್ಟಿದ್ದೇವೆ ನೀವು ಫಾರೆಸ್ಟ್ ಅನ್ನು ಮಂಜೂರು ಮಾಡಬೇಕಾಗಿತ್ತು ಅದನ್ನು ಮಾಡಲು ಬಿ ಜೆ ಪಿಯವರಾದ ನಾವು ಯಾರಾದರೂ ಅಡ್ಡ ತಡೆದೆವೇ? ನಾವೇ ಅಲ್ಲಿನ ಫಾರೆಸ್ಟ್ ಜಮೀನನ್ನು ಮಂಜೂರಾತಿಗೆ ಅವಕಾಶ ಮಾಡಿಕೊಡಿ ಎಂದು ಹೇಳಿದೆವಲ್ಲಾ? ಇದು ಸಾಮಾಜಿಕ ಸಮಸ್ಯೆ ಅಲ್ಲ ಸಾಮಾಜಿಕ ಕಾರ್ಯಕರ್ತರಾಗುವುದಾದರೆ ಆ ಹೆಣ್ಣುಮಗಳನ್ನು ಕಾಲೇಜಿನಲ್ಲಿ ಓದಿಸಲು 50 ಸಾವಿರ ಹಣವನ್ನು ಇಟ್ಟುಕೊಂಡಿದ್ದ ಮನುಷ್ಯನಿಂದ ತೆಗೆದುಕೊಂಡು ಬಂದು ಬಿಟ್ಟಿರಲ್ಲಾ, ಇದು ಯಾವ ಸಾಮಾಜಿಕ ಹೋರಾಟ? ನೆನ್ನೆ ಮಾಧ್ಯಮದವರು ಅದನ್ನು ಮತ್ತೆ ಮತ್ತೆ ತೋರಿಸುತ್ತಿದ್ದರು ನನಗೆ ಕರುಳು ಕಿತ್ತು ಬರುತ್ತಿತ್ತು ನಾವೆಲ್ಲಾ ಮನುಷ್ಯರು ನಮಗೂ ಹಾಗೇ ಅನ್ನಿಸುತ್ತದೆ ಪಾಪ ಅಮಾಯಕರಾಗಿ ಆ ರಕ್ತದ ಮಡುವಿನಲ್ಲಿ ಬಿದ್ದಿರತಕ್ಕದ್ದು ಅಲ್ಲಿ ನಮ್ಮ ಯುವಕ ಯುವತಿಯರು ನಕ್ಸಲೀಯರಾಗಿ ಕೋವಿ ಹಿಡಿದುಕೊಂಡು ತಿರುಗಾಡುತ್ತಿದ್ದಾರಲ್ಲಾ, ಅವರ ಬಗ್ಗೆ ನಾನು ಏನೂ ಹೇಳುವುದಿಲ್ಲ ಇವರನ್ನು ಕಳುಹಿಸಿದವರು ಯಾರು? ಇವತ್ತು ಸಹ ನಾಡಿನಲ್ಲಿ ಅವರ ಪರ ವಕಾಲತ್ತು ವಹಿಸುತ್ತಿದ್ದಾರಲ್ಲಾ, ಇವರು ಅವರನ್ನು recruit ಮಾಡಿ ಕಳುಹಿಸುತ್ತಿದ್ದಾರೆ ಇವರ ಮಕ್ಕಳನ್ನು ಅಣ್ಣ ತಮ್ಮಂದಿರನ್ನು ಕಳುಹಿಸಲಿ ಇವರ ರಕ್ತ ಇದ್ದಂಥವರು ಯಾರಾದರೂ ಸತ್ತರೆ, ಆಗ ಇವರಿಗೆ ಅರ್ಥವಾಗುತ್ತದೆ ಅಲ್ಲಿ ಪೋಲೀಸ್‌ನವರು ಸಹ ಭಯಬೀತರಾಗಿದ್ದಾರೆ ನಾವು ಅವರ ನೈತಿಕ ಸ್ಥೈರ್ಯವನ್ನು ಈ ಸದನದಲ್ಲಿ ಕಡಿಮೆ ಮಾಡಿದರೆ ಅವರು ಅಲ್ಲಿ ಕೆಲಸ ಮಾಡುವುದಿಲ್ಲ ಆಗುಂಬೆಯಲ್ಲಿರುವ ಪಿ ಎಸ್ ಐ ಅವನ ಹೆಂಡತಿ ಮಕ್ಕಳನ್ನು 30 ಕಿಲೋಮೀಟರ್ ದೂರದಲ್ಲಿರುವ ತೀರ್ಥ ಹಳ್ಳಿಯಲ್ಲಿ ಮನೆ ಮಾಡಿ ಇಟ್ಟಿದ್ದಾರೆ ರಾತ್ರಿ ಪಾಪ ಅಲ್ಲಿ ಮಲಗುತ್ತಿದ್ದಾನೆ ಜಯಪುರದ ಪೋಲೀಸ್ ಠಾಣೆ ಖಾಲಿಯಾಗಿದೆ ಅವರು ಪಾಪ ಅಲ್ಲಿ ಮಲಗುವುದಿಲ್ಲ ಅವರೂ ಮನುಷ್ಯರಲ್ಲವೇ? ಜಯಪುರ ಪೋಲೀಸ್ ಠಾಣೆ ಕಾಲಿಯಾಗಿದೆ ಅವರು ಹೆಂಡತಿ ಮಕ್ಕಳು ಮನುಷ್ಯರಲ್ಲವೇ? ಅವರ ಹೆಂಡತಿ ಮಕ್ಕಳು ನೀವು ಪೋಲಿಸ್ ಕೆಲಸ ಬಿಡಿ, ಈ ಕೆಲಸ ಏಕೆ ಬೇಕು? ಬಿಕ್ಷೆ ಬೇಡಿಕೊಂಡು ಜೀವನ

ಮಾಡೋಣವೆಂದು ಅವರ ಕಾಲನ್ನು ಹಿಡಿದು ಕೇಳುತ್ತಿದ್ದಾರೆ ಇವರು ನಕ್ಸಲ್ ಸ್ಕ್ವಾಡನ್ನು ಮಾಡುತ್ತಾರೆ ಅಲ್ಲಿಗೆ ಯಾರೂ ಹೋಗುವುದಿಲ್ಲ ಇದನ್ನು ಹೆಚ್ಚಿಗೆ ಬೆಳೆಸುತ್ತಿಲ್ಲ ಇದರ ಬಗ್ಗೆ ಇಲ್ಲಿ ಮಾತನಾಡುಲೂ ಆಗುವುದಿಲ್ಲ ಇಲ್ಲ ಮಾತನಾಡುವ ಪರಿಸ್ಥಿತಿಯಲ್ಲಿ ನಾವಿಲ್ಲ ಆದರೆ ದಯವಿಟ್ಟು ಬೆಂಗಳೂರಿನಲ್ಲಿ ಶಾಸಕರುಗಳು ವೈಭವೀಕರಣ ಮಾಡಬೇಡಿ ಎಂದು ಕೈ ಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಡಿ ಎನ್ ಜೀವರಾಜ್ ಧರ್ಮ ಸಿಂಗ್ ಸಾಹೇಬರು, ರೋಷನ್ ಬೇಗ್ ರವರು ಅದನ್ನು ವೈಭವೀಕರಿಸಿಬಿಟ್ಟಿರಿ

ಶ್ರೀ ಎನ್ ಧರ್ಮಸಿಂಗ್ ನಾವೇನು ಡಿಫೆಂಡ್ ಮಾಡುತ್ತಿಲ್ಲ

ಶ್ರೀ ಸಿದ್ದರಾಮಯ್ಯ ಅದನ್ನು ಇಲ್ಲಿರುವವರು ಯಾರೂ ಬೆಂಬಲಿಸುವುದಿಲ್ಲ ನಕ್ಸಲಿಗರು ಮಾಡುತ್ತಿರುವ ಕೆಲಸವನ್ನು ಅಮಾಯಕರನ್ನು ಕೊಲ್ಲುತ್ತಿರುವುದನ್ನು ಯಾರೂ ಸಮರ್ಥನೆ ಮಾಡುವುದಿಲ್ಲ ಇಲ್ಲಿ ಅದನ್ನು ಯಾರಾದರೂ ಸಮರ್ಥನೆ ಮಾಡುತ್ತಿದ್ದಾರೆಯೇ? ಇಲ್ಲ, ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾದುದು ಅತ್ಯಂತ ಅವಶ್ಯಕ ಸಮಾಜದ ಹಿತ ದೃಷ್ಟಿಯಿಂದ, ರಾಜ್ಯದ ಕಾನೂನಿನ ಸುವ್ಯಸ್ಥೆ ದೃಷ್ಟಿಯಿಂದ ಇದನ್ನು ನೋಡಬೇಕು ನಕ್ಸಲೀಯರ ಚಟುವಟಿಕೆಯನ್ನು ಮಟ್ಟ ಹಾಕಬೇಕು,ಅದನ್ನು ಹತ್ತಿಕ್ಕಬೇಕು ಅದು ಬೆಳೆಯಲು ಬಿಡಬಾರದು, ಅದನ್ನು ಯಾರೂ ಕೂಡ ಸಮರ್ಥನೆ ಮಾಡುವುದಿಲ್ಲ

ಶ್ರೀ ವಿ ಸುನಿಲ್ ಕುಮಾರ್ ವಾಸ್ತವಿಕತೆ ಗೊತ್ತಾದ ಮೇಲೆ ಸುಮ್ಮನೆ ಈಗ ವಾದ ಮಾಡಲಿಲ್ಲವೆಂದು ಹೋಗಬೇಡಿ

ಶ್ರೀ ಸಿದ್ದರಾಮಯ್ಯ ನೆನ್ನೆ ನಡೆದ ಘಟನೆ ಇದೆಯಲ್ಲಾ ಅದು ಮೇಲು ನೋಟಕ್ಕೆ 5 ಜನ ನಿರಪರಾಧಿಗಳು ಸತ್ತಿದ್ದಾರೆ ಎಂದು ಕಂಡು ಬರುತ್ತದೆ ಅವರ ವರದಿಯ ಪ್ರಕಾರ ಒಬ್ಬನೇ ಒಬ್ಬ ನಕ್ಸಲೀಯ ಇರತಕ್ಕದ್ದು ಇನ್ನು 3 ಜನರು ನಿರಪರಾಧಿಗಳಿದ್ದಾರೆ

ಶ್ರೀ ವಿ ಸುನಿಲ್ ಕುಮಾರ್ ಅಪರಾಧಿಗಳಿಗೆ ರಕ್ಷಣೆ ಕೊಟ್ಟರೂ ಅಪರಾಧವೇ? ಅಪರಾಧಿಗಳಿಗೆ ಮನೆಯಲ್ಲಿ ರಕ್ಷಣೆ ಕೊಟ್ಟರೆ ಅದೂ ಅಪರಾಧವೇ ತಾನೇ? ಅದನ್ನು ಕಾನೂನು ಹೇಳುವುದಿಲ್ಲ

ಶ್ರೀ ಸಿದ್ದ ರಾಮಯ್ಯ ಅಪರಾಧಿಗಳಿಗೆ ರಕ್ಷಣೆ ಕೊಟ್ಟರೆ ಅದೂ ಅಪರಾಧವೆ ಎವಿಡೆನ್ಸ್‌ಅನ್ನು ಸಪ್ರೆಸ್ ಮಾಡಿದರೆ ಅದೂ ಅಪರಾಧವೆ ನಕ್ಸಲೀಯರಿಗೆ ಬೆಂಬಲ ಕೊಟ್ಟರೆ ಅದೂ ಅಪರಾಧವೆ ಹಾಗೆಂದು ನಕ್ಸಲೀಯರು ಯಾರು ನಕ್ಸಲೀಯರ ಪರವಾಗಿರುವವರು ಯಾರು, ನಿರಪರಾಧಿಗಳು ಯಾರು? ನಿರಾಯುಧರು ಯಾರು, ಅಮಾಯಕರು ಯಾರು ಎಂಬ ಬಗ್ಗೆ ವಿವೇಚನೆ ನಮಗೆ ಇರಬೇಕಲ್ಲವೆ? ಅದರ ಬಗೆ ಮಾತ್ರ ಚರ್ಚೆ ಇರತಕ್ಕದ್ದು ಇವತ್ತು ರಾಜ್ಯದ ತುಂಬ ದೊಡ್ಡ ಸುದ್ದಿಯಾಗಿದೆ ಆ ಬಾಗದ ಜನರು ದೊಡ್ಡ ಪ್ರತಿರೋಧವನ್ನು ಮಾಡಿದ್ದಾರೆ ಸಂಜೆಯವರಗೂ ಪ್ರತಿಭಟನೆ ಮಾಡಿದ್ದಾರೆ ಹೊರಗಡೆಯಿಂದ ಜನರನ್ನು ಕರೆದುಕೊಂಡು ಬಂದು ಆ ರೀತಿ ಪ್ರತಿಭಟನೆ ಮಾಡಿಸಿದ್ದಾರೆಂದು ಜೀವರಾಜ್ ಮತ್ತು ಸುನಿಲ್‌ಕುಮಾರ್‌ರವರು ಹೇಳಿದ್ದಾರೆ ಅಲ್ಲಿನ ಸತ್ಯಾಸತ್ಯತೆ ನಮಗೆ ಗೊತ್ತಿಲ್ಲ ನಿಮಗೂ ಗೊತ್ತಿಲ್ಲ ಆದರೆ ಪ್ರಶ್ನೆ ಏನೆಂದರೆ ರಾಮೇಗೌಡ ಆಗಲಿ, ಕಾವೇರಮ್ಮ ಆಗಲಿ ಸುಬ್ರಹ್ಮಣ್ಯನಾಗಲಿ, ಇವರ ಮನೆಯಲ್ಲಿ ಆಯುಧಗಳು ಇದ್ದವೇ? ಅಥವಾ ನಕ್ಸಲೀಯರಾಗಿದ್ದರೆ? ಅಥವಾ ಪೋಲೀಸ್ ವರದಿಯಲ್ಲಿ ಇವರುಗಳು ನಕ್ಸಲೀಯರಿಗೆ ಬೆಂಬಲ ಕೊಡುತ್ತಿದ್ದರು ಎಂದು ಇದೆಯೇ? ಯಾವತ್ತಾದರೂ ಇವರುಗಳು ನಕ್ಸಲೀಯರ ಪರವಾಗಿ ಇದ್ದರು, ಬೆಂಬಲ ಕೊಡುತ್ತಿದ್ದರು ಎಂಬುವುದೇನಾದರೂ ಇದೆಯೇ? ಏನೂ ಇಲ್ಲ ಎಂದು ಅಷ್ಟೇ ಹೇಳಿರುವುದು

(ಗೊಂದಲ)

ಪ್ರಗತಿಪರವಾದ ವಿಚಾರ ಮಾಡುವವರೆಲ್ಲಾ ನಕ್ಸಲೀಯರಾಗಲು ಸಾದ್ಯವಿಲ್ಲ ನಕ್ಸಲರಿಗೂ ಪ್ರಗತಿಪರ ದೋರಣೆಗೂ ವ್ಯತ್ಯಾಸವಿದೆ

ಅಧ್ಯಕ್ಷರು ಅವರು ಮಾತನಾಡಲಿ ನೀವೇಕೆ ಮದ್ಯೆ ಮದ್ಯೆ ಮಾತನಾಡುತ್ತೀರಿ ರಮೇಶ್ ಕುಮಾರ್‌ರವರೆ ಅವರು ಮಾತನಾಡಲಿ

ಶ್ರೀ ಕೆ ಆರ್ ರಮೇಶ್ ಕುಮಾರ್ ಒಂದು ನಿಮಿಷ, ಮಾನ್ಯ ವಿಶ್ವೇಶ್ವರ ಹೆಗಡೆಯವರು ನನ್ನ ಬಗ್ಗೆ ಪ್ರಸ್ತಾಪ ಮಡಿದರು ನಾನು ತಮಗೆ ಇಷ್ಟೇ ಹೇಳುತ್ತೇನೆ ನನ್ನ ಮಾತೃಭಾಷೆ ತೆಲಗು ನನಗೆ ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ ನನಗೆ ಎಷ್ಟು ಕನ್ನಡ ಬರುತ್ತದೆ, ಅಷ್ಟು ಕನ್ನಡದ ಭಾಷೆಯ ಮೇಲೆ ಹಿಡಿತ ಇಟ್ಟುಕೊಂಡು ನಾನು ಏನೆಲ್ಲಾ ಮಾತನಾಡಿದ್ದೇನೆ ಪ್ರತಿಯೊಂದನ್ನು ತರಿಸಿಕೊಂಡು ನೋಡಿ ನನ್ನ ಬಾಷಣದ ಬಗ್ಗೆ ನಿಮ್ಮ ಅಬಿಪ್ರಾಯವನ್ನೇನು ವ್ಯಕ್ತಪಡಿಸಿದ್ದೀರಿ ಅದಕ್ಕೂ ನನ್ನ ಮಾತು ಏನು ರೆಕಾರ್ಡ್ ಆಗಿದೆ, ಅದಕ್ಕೂ ಸಂಭಂಧ ಇದೆಯೇ ಎಂಬುದನ್ನು ನೀವೇ ಆಮೇಲೆ ವಿವರಣೆಯನ್ನು ಕೊಡಿ ನಾನು ನೀವು ಹೇಳಿದಂಧ ರೀತಿಯಲ್ಲಿ ಏನನ್ನೂ ಮಾತನಾಡಿಲ್ಲ ಕಾನ್‌ಸ್ಟೇಬಲ್ ಜೀವನದಿಂದ ಪ್ರಾರಂಭ ಮಾಡಿ ಎಲ್ಲವನ್ನೂ ಬಹಳ ಜವಾಬ್ದಾರಿಯಿಂದ ಮಾತನಾಡಿದ್ದೇನೆ

ಶ್ರೀ ಅರಗ ಜ್ಞಾನೇಂದ್ರ. ಅವರು ನಿಜವಾಗಲೂ ಸಾಮಾಜಿಕವಾದ ಕೆಲಸ ಮಾಡುತ್ತಾರೆ, ಬಡವರ ಪರವಾಗಿ ಹೋರಾಟ ಮಾಡುತ್ತಾರೆ ನಾವೆಲ್ಲ ಆ ಮಟ್ಟದಿಂದ ಬಂದಿರತಕ್ಕವರು ನಾನು ಏಕಾ ಏಕಿ ಯಾರೋ ಟಿಕೆಟ್ ಕೊಟ್ಟರು, ಯಾರದೋ ಹೆಸರಿನಲ್ಲಿ ನಾವೆಲ್ಲಾ ಆಯ್ಕೆಯಾಗಿ ಬಂದಿರತಕ್ಕವರಲ್ಲ ನಾವು ದಲಿತರು, ಕೂಲಿ ಕಾರ್ಮಿಕರು, ಬಗರ್‌ಹುಕುಂ ಸಾಗುವಳಿದಾರರ ಪರವಾಗಿ ಮೊದಲಿನಿಂದಲೂ ಹೋರಾಟ ಮಾಡಿಕೊಂಡು ಇವತ್ತು ಈ ಸದನದಲ್ಲಿ ಕುಳಿತಿಕೊಳ್ಳಲು ಹಾದಿಯಾಗಿದೆ ನಾವು ನಮ್ಮ ಕ್ಷೇತ್ರಗಳಲ್ಲಿ ಆ ಜನರಿಗೆ ಎಲ್ಲೂ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ನನ್ನ ಕ್ಷೇತ್ರ ಸೋಷಿಯಲಿಸ್ಟಿಕ್ ಕ್ಷೇತ್ರ ಎಂಬುದು ತಮಗೆ ಗೊತ್ತಿದೆ ನಮ್ಮಲ್ಲಿ ಗೋಪಾಲಗೌಡರೆನ್ನುವಂಧವರಿದ್ದರು ಇವತ್ತು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅಲ್ಲಿ ಎಷ್ಟು ಚೆನ್ನಾಗಿ ಬಂದಿದೆ ಎಂದರೆ ಎಲ್ಲಾ ಬೂ ಮಾಲೀಕರು ಆ ಆಕ್ಟ್ ಬಂದ್ ತಕ್ಷಣ ಇಂಧವರು ನಮ್ಮ ಜಮೀನನ್ನು ಮಾಡುತ್ತಿದ್ದಾರೆ ಅವರ ಹೆಸರಿಗೆ ಖಾತೆ ಮಾಡಿಕೊಡಬಹುದು ಎಂದು ಬರೆದುಕೊಟ್ಟಿಬಿಟ್ಟರು ಅವರು ಲ್ಯಾಂಡ್ ಟ್ರಿಬ್ಯುನಲ್ ಗೆ ಬರಲೇ ಇಲ್ಲ ಕಾಡಿನಲ್ಲಿ ಯಾರು ಇದ್ದಾರೆ? ಎಂದರೆ 2–3 ಎಕರೆ ಜಮೀನು ಇದ್ದವರು ಉಳುಮೆ ಮಾಡಿಕೊಂಡು ಅಲ್ಲಿಯೇ ಇದ್ದಾರೆ ಕೂಲಿಕಾರರು ಮತ್ತು ಅವರ ಜೊತೆಗೆ ಒಂದು ಎಕರೆ ಅರ್ದ ಎಕರೆ ಜಮೀನು ಮಾಡುವವರು ಇದ್ದಾರೆ ಅವರಲ್ಲಿ ಬಡವ ಮತ್ತು ಶ್ರೀಮಂತರೆಂಬ

ವ್ಯತ್ಯಾಸಗಳು ಇರಬಹುದು ಆದರೆ ಅವರೆಲ್ಲರೂ ಬಹಳ ನೆಮ್ಮದಿಯಿಂದ ಬದುಕಿದ್ದಾರೆ ಯಾರ ಶೋಷಣೆಗಳು ಕೂಡ ಅಲ್ಲಿ ಇಲ್ಲ ಯಾವ ಶೋಷಣೆಗಳು ಅಲ್ಲಿ ಇಲ್ಲ ನಾವು ಏನೇನೋ ಒಂದು ಹಬ್ಬಿಸಿ ಪ್ರಚೋದನೆ ಕೊಟ್ಟು ಅನಾವಶ್ಯಕವಾಗಿ ಅವರು ಇರಲಿಕ್ಕೋಸ್ಕರ ತಾವು ಮಾಡಿಕೊಳ್ಳಲಿ ಕ್ಕೋಸ್ಕರ ಈ ರೀತಿ ಮಾಡಿದರೆ ಹೇಗೆ? ನೆನ್ನೆ ಟಿ ವಿ ಯಲ್ಲಿ ತಾವು ಗಮನಿಸಿದ್ದೀರಿ ಎಂದುಕೊಳ್ಳುತ್ತೇನೆ ಒಬ್ಬ ಹೆಣ್ಣು ಮಗಳು ಹೇಳುತ್ತಾಳೆ ನೋಡಿ ಅವರಿಗೆ ಊಟ ಹಾಕಿದರೆ ಪೋಲೀಸಿನವರು ಹೊಡೆಯುತ್ತಾರೆ ಊಟ ಹಾಕದೇ ಹೋದರೆ ಅವರು ನಮ್ಮನ್ನು ಹೊಡೆಯುತ್ತಾರೆ ನಾವು ಹೇಗೆ ಬದುಕಬೇಕು? ಅಲ್ಲಿ ಪರಿಸ್ಥಿತಿ ಇರುವುದು ಹೀಗೆ ಈಗ ಚರ್ಚೆ ಮಾಡಬೇಕಾಗಿರುವುದು ಅದು ಅಲ್ಲಿಯ ಜನರನ್ನು ಬಂಧ ವಿಮೋಚನೆ ಮಾಡಿ ಆ ಕಾಡಿನಲ್ಲಿರತಕ್ಕಂಥ ಸುಮಾರು 50–60 ಜನರನ್ನು ವಿಮೋಚನೆ ಮಾಡುವುದು ನಮ್ಮ ಇಡೀ ಸರ್ಕಾರಕ್ಕೆ ಸವಾಲೇ? ನೀವು ಹೇಳಿ ಯಾರಾದರೂ ನಕ್ಸಲೈಟ್ ಅವರನ್ನು ಹಾಗೆ ಹ್ಯಾಂಡಲ್ ಮಾಡಬೇಡಿ ಬೇರೆ ರೀತಿಯಲ್ಲಿ ಹ್ಯಾಂಡಲ್ ಮಾಡಿ ಎಂದರೆ ತಾವು ಸಲಹೆ ಕೊಡಿ ಅವರನ್ನು ಯಾವ ರೀತಿಯಾಗಿ ಹ್ಯಾಂಡ್ಲ್ ಮಾಡಬೇಕೆಂದು ಸಲಹೆ ಕೊಡಿ ಇಲ್ಲಾ, ಅವರು ನಿಮಗೆ ಲಿಂಕ್ ಇದ್ದರೆ ದಯವಿಟ್ಟು ಕರೆದು ಹೇಳಿ ಅಲ್ಲಿರಬೇಡಿ, ದಯವಿಟ್ಟು ಅವರನ್ನು ಕರೆದು ಹೇಳಿ ಏಕೆ ಅಲ್ಲಿ ಇರುತ್ತೀಯ? ಏಕೆ ಅನಾವಶ್ಯಕವಾಗಿ ನಮ್ಮ ಪೋಲೀಸರ ಗುಂಡಿಗೆ ಆಹುತಿಯಾಗುತ್ತೀಯಾ? ನೀನು ಯಾರದೋ ಮನೆಯಲ್ಲಿರುತ್ತೀಯ, ಆದರೆ ಪಾಪ ಅಮಾಯಕರು ಅಲ್ಲಿ ಸಾಯುತ್ತಾರೆ ಏಕೆ ಈ ರೀತಿಯಾಗುತ್ತೀಯ ಎಂದು ಅವರನ್ನು ಕರೆದು ಬುದ್ಧಿವಾದ ಹೇಳಿ, ಕರೆದುಕೊಂಡು ಬನ್ನಿ ಸಾಮಾಜಿಕವಾದ ಅವರು ನಮಗಿಂತ ಚೆನ್ನಾಗಿ ಮಾಡುತ್ತಾರೆಂದರೆ ನಾವು ರಾಜೀನಾಮೆಯನ್ನು ಕೊಡೋಣ ಅವರ ಕೈಯಲ್ಲಿ ಒಪ್ಪಿಸೋಣ ಅವರೇ ಮುಖ್ಯಮಂತ್ರಿಗಳಾಗಲಿ, ಅವರೇ ಶಾಸಕರಾಗಲಿ, ಅವರು ಐದು ವರ್ಷ ಈ ರಾಜ್ಯವನ್ನು ಆಳಲಿ ನಮಗಿಂತ ಚೆನ್ನಾಗಿ ಈ ರಾಜ್ಯವನ್ನು ಐದು ವರ್ಷದೊಳಗೆ ಚೆನ್ನಾಗಿ ಪರಿವರ್ತನೆ ಮಾಡುತ್ತಾರೆಂದರೆ ನಾವು ಕೊಡೋಣವೆಂದು ಹೇಳುವುದು ಬಂದೂಕು ಹಿಡಿದುಕೊಂಡು ಅವರು ಮಾಡಬೇಕೆ? ಆ ಬಂದೂಕಿಗೆ ಭಾಷೆ ಗೊತ್ತೆ? ಅದಕ್ಕೇನಾದರೂ ಕಾನೂನು ಗೊತ್ತಿದೆಯೇ? ಯಾರ ಕೈಯಲ್ಲಿರುತ್ತದೆಯೋ ಅದರ ಹಿಂದೆ ಇರತಕ್ಕಂಥ ಮನಸ್ಸು ಮತ್ತು ಹೃದಯ ಯಾವ ರೀತಿ ಇರುತ್ತದೆಯೋ ಆ ರೀತಿ ಅದು ಕೆಲಸ ಮಾಡುತ್ತದೆ

ವೆಂಕಟೇಶ್ ಪೋಲೀಸ್ ಇನ್‌ಫರ್‌ಮ್ಯಾಂಟ್ ಎಂದು ಅವರಿಗೆ ಅನ್ನಿಸಿತು, ಅದಕ್ಕೆ ಅವರನ್ನು ಕೊಂದರು ಶೇಷಗೌಡರು ಪೋಲೀಸ್ ಇನ್‌ಫರ್‌ಮ್ಯಾಂಟ್ ಎಂದು ಹೇಳಿದರು, ಅದಕ್ಕೆ ಏನಾದರೂ ವಿಚಾರಣೆ ಉಂಟೆ? ಅದಕ್ಕೇನಾದರೂ ವಿಟ್ನೆಸ್ ಇದೆಯೇ? ನಮ್ಮಲ್ಲಿ ಈಗ ಶುರು ಮಾಡಿದ್ದಾರೆ

ಶ್ರೀ ಡಿ ಎನ್ ದೇವರಾಜ್ ಅಲ್ಲಿ ಏನಾಗುತ್ತದೆಂದರೆ, ನಕ್ಸಲ್‌ರು ಹೊಡೆದಾಗ ಕೇಸ್ ಅಲ್ಲ ಜನ ನಕ್ಸಲರಿಗೆ ಹೊಡೆದಾಗ ಕೇಸ್ ಆಗುತ್ತದೆ ಪೋಲೀಸ್‌ನವರು ಜನರನ್ನು ಹಿಡಿದುಕೊಳ್ಳುತ್ತಾರೆ ಇವರು ಕಾಡು ಬಿಟ್ಟು ಓಡಿಹೋಗುವುದಿಲ್ಲ ಅದಕ್ಕೆ ಅಲ್ಲಿರುವ ಜನ ಅವರಿಗೆ ವಾಪಸ್ ಹೊಡೆಯುತ್ತಿಲ್ಲ ಅದನ್ನು ಏನು ತಿಳಿದುಕೊಂಡಿದ್ದಾರೆಂದರೆ ಅವರ ಪರ ಜನ ಇದ್ದಾರೆಂದು ತಿಳಿದಿದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಈಗ ಚರ್ಚೆ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ ನಾನು ಹೊರಗಡೆ ಕುಳಿತುಕೊಂಡು ಟಿ ವಿ ಯಲ್ಲಿ ಕೇಳಿದೆ ಮತ್ತು ಇಲ್ಲಿ ಬಂದು ಕೂಡ ಕೇಳಿದೆ ಇದು ಏನಾಗುತ್ತದೆಂದರೆ ಏನೋ ಕೆಲವು ಜನ ನಕ್ಸಲೈಟ್ ಪರ ಇದ್ದಾರೆ, ಕೆಲವು ಜನ ಅವರ ವಿರುದ್ಧವಾಗಿದ್ದಾರೆ ಎನ್ನುವ ಭಾವನೆಯ ಚಿತ್ರವನ್ನು ಮೂಡಿಸತಕ್ಕಂಥದ್ದು ಸರಿಯಲ್ಲ ನಾವು ಎಲ್ಲರೂ ಕೂಡ ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು, ಮತ್ತು ಅಲ್ಲಿ ತಿಳಿ ವಾತಾವರಣವನ್ನು ಚಿಕ್ಕಮಗಳೂರಾಗಲಿ, ಮಂಗಳೂರಾಗಲಿ, ಮಲೆನಾಡಿನ ಬೆಲ್ಟ್‌ನಲ್ಲಾಗಲೀ, ನಾಳೆ ಶಿವಮೊಗ್ಗದಲ್ಲಾಗಲಿ, ಬೇರೆ ಕಡೆಗೆ ಕೂರ್ಗ್‌ನಲ್ಲಾಗಲಿ, ಇದು ಎಲ್ಲಾಕಡೆ ಆಗಬಹುದು ಇದನ್ನು ತಡೆಗಟ್ಟುವ ದೃಷ್ಟಿಯಿಂದ ನಾವು ಎಲ್ಲರೂ ಏನು ಮಾಡಬಹುದು ಎಂದು ಯೋಚನೆ ಮಾಡಬೇಕೇ ಹೊರತಾಗಿ ನೀವು ಹಾಗೆ ಮಾಡಿದಿರಿ, ನೀವು ಹೀಗೆ ಮಾಡಿದಿರಿ

ಶ್ರೀ ವಿ ಸುನಿಲ್ ಕುಮಾರ್ ಸರಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಸ್ವಲ್ಪ ಇರಿ, ನೀವು ಮಾತನಾಡುವಾಗ ನಾನು ಅಡ್ಡಿ ಮಾಡಿದೆನೆ? ಅದನ್ನು ಬೆಳೆಸಿಕೊಂಡು ಹೋದರೆ ನಿಜವಾಗಲೂ ಸಮಾಜದಲ್ಲಿ ಒಂದು ಬಾವನೆ ಬರಬಹುದು ವಿಧಾನ ಸಭೆಯಲ್ಲಿ ಕೆಲವು

ಜನ ನಮ್ಮ ಪರವಾಗುದ್ದಾರೆ, ಕೆಲವು ಜನ ನಮ್ಮ ವಿರುದ್ಧವಾಗಿದ್ದಾರೆ, ಅಥವಾ ಇಲ್ಲಿ ಏನೋ ನಡೆದಿದೆ ಎನ್ನತಕ್ಕ ಭಾವನೆ ಬರುತ್ತದೆ ಅದನ್ನು ಬಿಟ್ಟು ನಾವು ಅಲ್ಲಿ ತಿಳಿ ವಾತಾವರಣ ತರುವುದಕ್ಕೆ ಕಾನೂನಿನ ವ್ಯವಸ್ಥೆಯು ಚೆನ್ನಾಗಿರುವುದಕ್ಕೆ ಏನೇನು ಮಾಡಿದಿರಿ, ಅವರು ಏನೇನು ಮಾಡಿದರು ಅದನ್ನು ಆಮೇಲೆ ನೋಡೋಣ ಯಾರು ಏನು ಮಾಡುವುದು, ಅವರವರ ಶಕ್ತಿಯನುಸಾರ ನಡೆಯಲಿ? ನಿಮಗೆ ಶಕ್ತಿಯಿತ್ತು, ಅಲ್ಲಿ ಸೋಷಿಯಲಿಸ್ಟ್ ರೆಡ್ ಫ್ಲಾಗ್ ಅನ್ನು ಸಾಫರನ್ ಮಾಡಿದಿರಿ ಆ ಶಕ್ತಿ ನಿಮಗೆ ಇತ್ತು ನೀವು ಮಾಡಿಕೊಳ್ಳಿ, ಅವರಿಗಿತ್ತು ಎಂದರೆ ಅವರು ಏನಾದರೂ ಮಡಿಕೊಳ್ಳಲಿ ಅದಕ್ಕೆ ನಾವು ಹೋಗುವುದಿಲ್ಲ ಇಲ್ಲಿ ಇರತಕ್ಕಂಥದ್ದು ಇಷ್ಟೆ, ಅಲ್ಲಿ ಕಾನೂನು ಯಾವ ರೀತಿಯಾಗಿ ಇರಬೇಕು ಬೇರೆ ನಾಗರೀಕರು ನೆಮ್ಮದಿಯಿಂದ ಹೇಗೆ ಇರಬೇಕು? ಎನ್ನತಕ್ಕಂಥದ್ದರ ಕಡೆ ಎಲ್ಲರ ಗಮನ ಇರಬೇಕೆ ಹೊರತಾಗಿ ಒಬ್ಬರ ಮೇಲೊಬ್ಬರು ಅಲಿಗೇಷನ್ ಮಾಡಿಕೊಂಡು ಇದು ಪತ್ರಿಕೆಯಲ್ಲಿ ಹೋಗಿ ಮತ್ತೆ ನಾಳೆ ಇದು ರಾದ್ಧಾಂತ ಆಗವುದು ಬೇಡ ದಯವಿಟ್ಟು ಇದನ್ನು ಇಲ್ಲಿಗೆ ನಿಲ್ಲಿಸಿ

ಶ್ರೀ ಅರಗ ಜ್ಞಾನೇಂದ್ರ ತಾವು ಹಿರಿಯರು, ತಮ್ಮ ಬುದ್ಧಿವಾದದ ಮಾತುಗಳನ್ನು ಕೇಳಿದ್ದೇವೆ ತಾವು ಬೆಂಬಲಿಸುವುದಿಲ್ಲವೆಂದು ಹೇಳಿದರೆ ನಮಗೇನೂ ತೊಂದರೆ ಇಲ್ಲ ಆದರೆ, ಇಲ್ಲಿ ಏನಾಗಿದೆ ಎಂದರೆ ಮಾನ್ಯ ಖರ್ಗೆಯವರು ಗಮನಿಸಬೇಕು ಇಲ್ಲ ಮಾತಾಡುವಂಧ ಸಂದರ್ಭದಲ್ಲಿ ಯಾರು ಈ ಕೃತ್ಯಗಳನ್ನು ಮಾಡಿ ಮಲೆನಾಡಿನ ನೆಮ್ಮದಿಯನ್ನು ಹಾಳು ಮಾಡಲಿಕ್ಕೆ ಅಲ್ಲಿ ಬಂದು ಸೇರಿಕೊಂಡಿದ್ದಾರೆ, ಅವರ ವೈಭವೀಕರಣ ಆಗಬಾರದು ಎನ್ನುವುದೇ ನಮ್ಮ ಇಷ್ಟ ಅವರು ಸಾಮಾಜಿಕವಾಗಿ ಹೋರಾಟ ಮಾಡಲಿ ಖಂಡಿತವಾಗಿ ನಮ್ಮ ಜೊತೆಗೆ ಬರಲಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಲಿ

ಅಧ್ಯಕ್ಷರು ಜ್ಞಾನೇಂದ್ರರವರೆ, ಅಲ್ಲಿ ಇರತಕ್ಕಂಥ ಪರಿಸ್ಥಿತಿ ಹೇಳಿ ನೀವು ಏನಾದರೂ ಹೇಳಿದರೆ ಅವರು ಹೇಳುತ್ತಾರೆ

ಶ್ರೀ ಅರಗ ಜ್ಞಾನೇಂದ್ರ ಆಯಿತು ಸಾರ್, ಮುಗಿಸುತ್ತೇನೆ ಅಲ್ಲಿ ಪೋಲೀಸಿನ ಬಲವರ್ಧನೆಯಾಗಬೇಕು ಅವರ ಇಂಟೆಲಿಜೆನ್ಸ್ ಅಲ್ಲಿ

ಫೇಲಾಗಿದೆ ಅದನ್ನು ಸರಿಪಡಿಸದ ಹೊರತು ಯಾವುದನ್ನು ಸರಿಮಾಡಲಿಕ್ಕೆ ಸಾಧ್ಯವಿಲ್ಲ ಇದನ್ನು ಸರಿಯಾದಂಥ ರೀತಿ ಯಾವುದೇ ಸರ್ಕಾರಗಳು ಇದುವರೆಗೆ ಮಾಡಲೇ ಇಲ್ಲ ಈಲಾದರೂ ಕೂಡ ಈಗೇನು, ನಮ್ಮ ಗೃಹ ಮಂತ್ರಿಗಳು ನೆನ್ನೆ ಹೇಳಿದ್ದಾರೆ ಬೆಂಗಳೂರಿಗೆ ಒಂದು ಸ್ಪೆಷಲ್ ಸ್ಕ್ವ್ಯಾಡ್ ಅನ್ನು ಮಾಡುತ್ತೇನೆಂದು ಹೇಳಿದ್ದಾರೆ ಬೆಂಗಳೂರಿಗೆ ಸ್ಕ್ವ್ಯಾಡ್ ರಚಿಸಿ ಅದಕ್ಕೆ ಯುವಕರನ್ನು ತುಂಬಿ ಅದಕ್ಕೆ ಏನೇನು ಪರಿವರ್ತನೆಗಳನ್ನು ಮಾಡಬೇಕೋ ಅದನ್ನು ಸರಿಮಾಡಬೇಕೋ ಅದನ್ನು ಮಾಡಿ ಅವರನ್ನು ಮಾತುಕತೆಯ ಮೂಲಕ ಹೊರಕ್ಕೆ ತರುವುದಕ್ಕೆ ಸಾಧ್ಯವಾಗುವುದಾದರರೆ ಅದನ್ನು ಕೂಡ ಯಾರನ್ನಾದರೂ ಸಮಾಜ ಕಾರ್ಯಕರ್ತರನ್ನು ಉಪಯೋಗಿಸಿ ಅದನ್ನು ಮಾಡುವುದರಲ್ಲಿ ನಮ್ಮದೇನ್ನೂ ತೊಂದರೆ ಇಲ್ಲ ಅಲ್ಲಿಗೆ ಒಂದು ಪಿಡುಗು ಮುಗಿದು ಹೋಯಿತು ಅಲ್ಲಿ ಶಾಂತಿಯ ವಾತಾವರಣ ನಿರ್ಮಾಣವಾದರೆ ಸಾಕು ಮಾನ್ಯ ಖರ್ಗೆಯವರು ಹೇಳಿದ ಹಾಗೆ, ದಲಿತರು, ಬಡವರು, ಒಂದು ರೀತಿಯಾಗಿ ಅವರ ಜೀವನ ಅವರು ಮಾಡಿಕೊಂಡು ನೆಮ್ಮದಿಯಿಂದ ಬದುಕುವಂಥವರಿಗೆ ಈ ರೀತಿಯಾಗಿ ಮಾಡಿದರೆ ಹೇಗೆ? ಇದು ಒಂದು ದಿನ ಎಂಡ್ ಆಗಬೇಕು ನಮ್ಮ ವಿನಂತಿ ಇಷ್ಟೆ ಯಾರು ಯಾರ ವಿರುದ್ಧ ಬೇಕಾದರೆ ಹೋರಾಟ ಮಾಡಲಿ, ನಾವೆಲ್ಲ ಇಲ್ಲಿಗೆ ಬರುತ್ತೇವೆಂದು ನಮಗೇನೂ ಗೊತ್ತಿರಲಿಲ್ಲ ಮಾಡಿದೆವು ಬಂದೆವು, ನಾವು ಇಲ್ಲಿ ಶಾಶ್ವತ ಎಂದೇನಿಲ್ಲ ಯಾರು ಬೇಕಾದರೂ ಇಲ್ಲಿಗೆ ಬರಬಹುದು ಅದಲ್ಲ, ಆದರೆ ಬಂದೂಕು ಹಿಡಿದುಕೊಂಡು ಬಾಂಬ್ ಹಿಡಿದುಕೊಂಡು ಮಾಡುತ್ತೇವೆಂದರೆ ಹೇಗೆ? ನೆನ್ನೆ ಪೋಲೀಸ್ ನವರು ಹೋಗಿದ್ದಾರೆ, ಯಾರನ್ನು ಹೊಡೆದಿದ್ದಾರೆ, ಯಾರನ್ನು ಬಿಟ್ಟಿದ್ದಾರೆನ್ನುವ ವಿಮರ್ಶೆಗೆ ನಾನು ಹೋಗುವುದಿಲ್ಲ ಬಂದೂಕು ಹಿಡಿದು ಕೊಂಡವರ ಎದುರುಗಡೆ ಕೋಲು ಹಿಡಿದುಕೊಂಡು ಯುದ್ಧಮಾಡಿ ಎಂದು ಇವರಿಗೆ ಹೇಳುವುದಕ್ಕೆ ಆಗುತ್ತದೆಯೇ? ಅವರು ಬಂದೂಕು ಚಲಾಯಿಸಬೇಕಾಗುತ್ತದೆ ಅದರಿಂದ ಇದನ್ನು ದಯವಿಟ್ಟು ನಾವು ಮಾತನಾಡುವಾಗ ವಿಮರ್ಶೆ ಮಾಡುವಾಗ ಆ ಭಾಗದ ಜನರ ನೆಮ್ಮದಿ ಆ ಭಾಗದ ಜನರ ಒಳ್ಳೆಯ ಬದುಕನ್ನು ಹಾರೈಸುವಂಥ ನಿಟ್ಟಿನಲ್ಲಿ ಎಚ್ಚರಿಕೆ ಯನ್ನು ಅವರಿಗೆ ಕೊಡಬೇಕೆಂದು ಸದನದ ಮೂಲಕ ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ ಬಹುಶಃ ಅದು ಬಹಳ ಸೂಕ್ಷ್ಮವಾಗಿರುವಂಥ ವಿಚಾರವಾಗಿರುವುದರಿಂದ ನಾವು ಹೆಚ್ಚಿಗೆ ಆಳಕ್ಕೆ ಹೋಗಲಿಕ್ಕೆ

ಸಾಧ್ಯವಾಗುವುದಿಲ್ಲ ಇನ್ನು ಮಾತನಾಡುವುದಾದರೆ ಸಾಕಷ್ಟು ಮಾತುಗಳು E ª É £Áª À ª ÀÄvÀÄQÀ ÀÆ®è KPÉzÀ¸ÉÃEzÀ law and order situation ಗೆ ಮತ್ತು ಬೇರೆ ಬೇರೆ ಸಂದರ್ಭಕ್ಕೆ ಸಂಭಂಧ ಪಟ್ಟಿರತಕ್ಕಂಥದ್ದು ಆಗಿರುವುದರಿಂದ ನಾವು ಮಾತನಾಡುವುದಿಲ್ಲ ಅವಕಾಶಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಾನು ಒಂದು ಸಲಹೆ ಕೊಡುವುದಕ್ಕೆ ಇಚ್ಛೇಸುತ್ತೇನೆ ಏನೆಂದರೆ ಆ ಭಾಗದಲ್ಲಿ ನಕ್ಸಲೈಟ್ ಚಟುವಟಿಕೆಗಳಿ ಬೆಳೆಯಬಾರದು ಎಂದು ಹಿಂದೆ 2002 ರಲ್ಲಿ ವಿ ಕೆ ಗೋರೆ ಅವರ ನೇತೃತ್ವದಲ್ಲಿ ಮತ್ತು ಚಿರಂಜೀವಿ ಸಿಂಗ್‌ರವರು ಮತ್ತು planning department ನ ಮೆಂಬರ್ ಒಳಗೊಂಢಂಧ 3–4 ಜನರಿರುವ ಕಮಿಟಿಯನ್ನು ಅಲ್ಲಿಗೆ ಕಳುಹಿಸಲಾಗಿತ್ತು ಬಹುಶಃ ಅದರಲ್ಲಿ ಬಳಿಗಾರ್‌ರವರು ಇದ್ದ ಹಾಗೆ ಕಾಣುತ್ತದೆ ಅಭಿವೃದ್ಧಿ ಕಾರ್ಯಕ್ಕಾಗಿ ಅಲ್ಲಿ ಏನು ಆಗಬೇಕು ಸ್ಕೂಲ್ ರಸ್ತೆ, ಕುಡಿಯುವುದಕ್ಕೆ ನೀರು, ವಿದ್ಯುತ್ ಇದರ ಬಗ್ಗೆ ಗಂಭೀರವಾದಂಥ ಆಲೋಚನೆ ಮಾಡಿ ವರದಿಯನ್ನು ಮಾಡಿ ಕೊಡಿ ಎಂದು ಆ ಕಮಿಟಿಯನ್ನು ಅಲ್ಲಿಗೆ ಕಳುಹಿಸಲಾಗಿತ್ತು ಅದರ ಆಧಾರದ ಮೇಲೆ ಗೋರೆಯವರು ಮತ್ತು ಚಿರಂಜೀವಿ ಸಿಂಗ್ ರವರು ಒಂದು ವರದಿ ಕೊಟ್ಟರು ಸುಮಾರು 67 ಕೋಟಿ ರೂಪಾಯಿ ಯೋಜನೆಯನ್ನು ತಂದಿದ್ದರು ಅದನ್ನು ಅನುಷ್ಠಾನದಲ್ಲಿ ತರಬೇಕೆಂದು ಪ್ರಾರಂಭದಲ್ಲಿ 5–10 ಕೋಟಿಯನ್ನು ಬಿಡುಗಡೆ ಮಾಡತಕ್ಕಂಥ ಕೆಲಸ ಆಯಿತು ಆದರೆ, ಅದು ಅಲ್ಲಿಗೆ ನಿಂತು ಹೋಯಿತು ಈಗ ಇನ್ನು ಸಮಸ್ಯೆ ಹೆಚ್ಚಿನ ರೀತಿಯಲ್ಲಿ ಆಗಿರುವುದರಿಂದ ನ್ಯಾಚುರಲ್ಲಿ ಆಗ 67 ಕೋಟಿ ರೂಪಾಯಿ ಅಂದರೆ ಈಗ ಅದು ಸುಮಾರು 100–200 ಕೋಟಿ ರೂಪಾಯಿಗಳಿಗೆ ಬರಬಹುದು ಅದಕ್ಕೆ ಆ ಸಮಿತಿಯು ವರದಿಯ ಆದಾರದ ಮೇಲೆ ಎಲ್ಲೆಲ್ಲಿ ಈ ಸಮಸ್ಯೆಗಳು ಇವೆ, ಆ ಸಮಸ್ಯೆಯನ್ನು ಕೂಡ ಬಗೆಹರಿಸತಕ್ಕಂಥದ್ದು ಮತ್ತು ಅವರಿಗೆ ಸಮಸ್ಯೆಗೆ ಸ್ಪಂದಿಸತಕ್ಕಂಥ ದೃಷ್ಟಿಯಿಂದ ಆ ಕಮಿಟಿಯ ರಿಪೋರ್ಟ್ ಅನ್ನು ಅನುಷ್ಠಾನಕ್ಕೆ ತರುವಂತೆ ಮಾಡಬೇಕು ಇಲ್ಲಾಂದ್ರೆ ಇನ್ನೊಮ್ಮೆ ಯಾರಿಗಾದರೂ 3–4 ಜನ experts ಕಳುಹಿಸಿ ನಿಜವಾದಂಥ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, development ದೃಷ್ಟಿಯಿಂದ ನಾವು development ಮಾಡಿದಮೇಲೂ ಕೆಲವು ಜನ ತಮಗೆ ಬೇಕಾದಂಥ

ತತ್ವಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಬೇರೆ ಬೇರೆ ಮಾರ್ಗಗಳನ್ನು ಹುಡುಕಿ ಕೊಂಡರೆ ಅದಕ್ಕೆ ಸರ್ಕಾರ ಇದೆ, ಜನರು ಇದ್ದಾರೆ, ಬೆಂಬಲವನ್ನು ಯಾವುದಕ್ಕೆ ಕೊಡಬೇಕು ಕೊಡಬಾರದು ಎನ್ನುವುದರ ಬಗ್ಗೆ ಜನರು ನಿರ್ಧರಿಸುತ್ತಾರೆ ಆದರೆ ಅಭಿವೃದ್ಧಿಯ ಕೆಲಸಕ್ಕೆ ನಾವು ಆ ಬಾಗದಲ್ಲಿ ªÀÄ£ÀÉPÉÆqÀÉ ºÉÆzÀÉ R ArvÀAV D grievances ಅನ್ನು ಯಾರು ಬೇರೆಯುವರು ಎತ್ತಿಕೊಳ್ಳುತ್ತಾರೋ ಅವರ ಜೊತೆಯಲ್ಲಿ ಹೋಗುತ್ತಾರೆ ಯಾರ್‍ಯಾರು ಅವರ ಸಮಸ್ಯೆಗಳನ್ನು ಲೀಡ್ ಮಾಡುತ್ತಾರೋ ಅವರ ಜೊತೆಯಲ್ಲಿ ಹೋಗುತ್ತಾರೆ ಅವರ ನಕ್ಸಲೈಟ್ ಅಥವಾ ಮಾವೋವಾದಿಯೇ ಇರಬಹುದು ಇನ್ನೊಂದು ವಾದಿಯೇ ಇರಬಹದು ಅಥವಾ extreme views ಇರತಕ್ಕಂಥ ಜನರೇ ಇರಬಹುದು ಇದನ್ನು ತಡೆಗಟ್ಟಬೇಕಾದರೆ ಖಂಡಿತವಾಗಿ ಇದರ ಬಗ್ಗೆಯೂ ಯೋಚಿಸಿ ತಕ್ಷಣ ಕಾರ್ಯೋನ್ಮುಖರಾಗಿ ಅಲ್ಲಿಗೆ ಕಳುಹಿಸಿ ಇದರ ಬಗ್ಗೆ ಕೂಡ ತಾವು ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕರು ಇದರ ಬಗ್ಗೆ ಮಾತನಾಡಿದ್ದಾರೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಾನು ಈ ವಿಷಯುದ ಬಗ್ಗೆ ಮಾತನಾಡುವುದಕ್ಕೋಸ್ಕರ ಬೆಳಿಗ್ಗೆ ಪತ್ರ ಕೊಟ್ಟಿದ್ದೇನೆ ಸದರಿ ಚರ್ಚೆಯನ್ನು ಈಗ ಮುಂದುವರೆಸುತ್ತೀರಾ ಅಥವಾ ಬ್ರೇಕ್ ಮಾಡಿ ಆ ನಂತರ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ ಪಿ ಪ್ರಕಾಶ್ ಈ ವಿಷಯವನ್ನು ಬೇಗನೇ ಮುಕ್ತಾಯ ಮಾಡೋಣ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಈ ವಿಷಯವನ್ನು ಪ್ರಸ್ತಾಪ ಮಡಬೇಕೆಮದು ಬೆಳಿಗ್ಗೆ ಬಂದು ನಾನು ನಿಮಗೆ ಪತ್ರ ಕೊಟಿದ್ಧೇನೆ ನಾನು ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು ನಿಮಗೂ ಸಹ ಅವಕಾಶ ಕೊಡುತ್ತೇನೆ ಮೊದಲು ಅವರು ಏನು ಹೇಳುತ್ತಾರದೆಂಬುದನ್ನು ಕೇಳೋಣ

ಶ್ರೀ ಎಂ ಪಿ ಪ್ರಕಾಶ್ ಬಹಳ ಸೂಕ್ಷ್ಮವಾದ ವಿಚಾರಗಳು ಇದಾಗಿವೆ ಆದ್ದರಿಂದ ಎರಡೂ ಕಡೆಯಿಂದಲೂ ಇದರ ಬಗ್ಗೆ ಯೋಚನೆ ಮಾಡಬೇಕಾಗಿರುವ ಕಾರಣದಿಂದ ಇದನ್ನು ಮುಕ್ತಾಯಗೊಳಿಸಿ ಎಂದು ಅನೇಕ ಹಿರಿಯರು ಈ ಬಗ್ಗೆ ಚರ್ಚೆ ಮಾಡಿದ್ದಾರೆ ಮಾನ್ಯ ಶ್ರೀ ರಾಮ ರೆಡ್ಡಿಯವರು ಮಾತನಾಡುವುದರ ಬಗ್ಗೆ ನಮ್ಮದ್ಯಾರದ್ದೂ ಆಕ್ಷೇಪಣೆ ಇಲ್ಲ ಆದರೆ, ಇಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ನಕ್ಸಲ್‌ಬರಿ ಹೋರಾಟದಲ್ಲಿ ಚಾರು ಮುಜಂದಾರ್ ಮತ್ತು ಕರಣ್‌ಸರಾಯ್‌ರವರು ಪ್ರಾರಂಭ ಮಾಡಿರತಕ್ಕಂಥದ್ದು ಅವರ ಇಡೀ ಐಡಿಯಾಲಜಿ ಬಗ್ಗೆ ಏನು ಪ್ರಸ್ತಾಪ ಆಯಿತು, ಅವರ ತಾತ್ವಿಕ ಚಿಂತನೆಗಳು ಯಾವ ರೀತಿಯದಾಗಿದ್ದವೆಂದರೆ, ಸಾಂಕೇತಿಕವಾಗಿ ಪೋಲಿಸರು ಸರ್ಕಾರದ ಪ್ರತಿನಿಧಿಗಳು, ಆ ಕಾರಣಕ್ಕಾಗಿ ವ್ಯಕ್ತಿಗತವಾಗಿ ಅವರನ್ನು ಕೊಲ್ಲುವುದರ ಮೂಲಕ ಈ ಒಂದು ಸರ್ಕಾರಕ್ಕೆ ಧಿಕ್ಕಾರ ಮಾಡುತ್ತೇವೆಂಬ ಮಾತು ಇತ್ತು ಆಗ ಇದ್ದಂಥ ಕಮ್ಯುನಿಸ್ಟ್ ಪಕ್ಷ ಇವತ್ತೂ ಕೂಡ ಅಧಿಕಾರದಲ್ಲಿದೆ ಮಾನ್ಯ ಜ್ಯೋತಿ ಬಸುರವರು ಮುಖ್ಯ ಮಂತ್ರಿಗಳಾಗಿದ್ದರು ಈಗ ಮಾನ್ಯ ಬುದ್ದದೇವ ಬಟ್ಟಾಚಾರ್ಯರು ಇದ್ದಾರೆ ಆ ಸನ್ನಿವೇಶದಲ್ಲಿ ವ್ಯಕ್ತಿಗಳನ್ನು ಹರಣ ಮಾಡುವುದರ ಮೂಲಕ ನೀವು ಏನನ್ನು ಸಾಧಿಸುವ ಸಾಧ್ಯತೆ ಇಲ್ಲ ಎನ್ನುವಂಥ ಮಾತು ಬಂದಿದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ತಾವು ತಪ್ಪು ಹೇಳುತ್ತಿದ್ದೀರಿ

ಶ್ರೀ ಎಂ ಪಿ ಪ್ರಕಾಶ್ no sir, I will come back to you

ಶ್ರೀ ಕೆ ಆರ್ ರಮೇಶ್‌ಕುಮಾರ್ ಇದು ಪ್ರಾರಂಭವಾಗಿದ್ದು 1970 ರಲ್ಲಿ

ಶ್ರೀ ಎಂ ಪಿ ಪ್ರಕಾಶ್ ಹೌದು

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ 1970 ರಲ್ಲಿ ಪ್ರಾರಂಭವಾಗಿಲ್ಲ ಇದು 1967 ರಲ್ಲಿ ಪ್ರಾರಂಭವಾಯಿತು

(ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಜ್ಯೋತಿ ಬಸುರವರು 1977 ರಲ್ಲಿ ಮುಖ್ಯಮಂತ್ರಿಗಳಾಗಿದ್ದರು

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಡುತ್ತೀರಾ?

ಅಧ್ಯಕ್ಷರು ಅವರೇನು ಹೇಳುತ್ತಾರೆಂಬುದನ್ನು ಕೇಳಿ ಅನಂತರ ತಮಗೂ ಸಹ ಅವಕಾಶ ಕೊಡುತ್ತೇನೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಈ ರೀತಿಯಾದರೆ ಹೇಗೆ? ನೀವು ಎದ್ದೇಳುತ್ತಿದ್ದರೆ ಕುಳಿತುಕೊಳ್ಳಿ ಎಂದು ಅವರು ಹೇಳುತ್ತಿದ್ದಾರೆ

ಅಧ್ಯಕ್ಷರು ಅವರು ಏನೋ ಹೇಳುತ್ತಿದ್ದಾರೆ ಅದನ್ನು ಕೇಳಿ ಆ ನಂತರ ತಮಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಈಗ ಕುಳಿತುಕೊಳ್ಳಿ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನೀವು ಸದನವನ್ನು ಮುಂದೂಡಬೇಕೆಂದು ಎದ್ದೇಳುವಾಗ ಒಂದು ನಿಮಿಷ ಕುಳಿತುಕೊಳ್ಳಿ ಎಂದು ಅವರು ಹೇಳಿದರೆ ತಾವು ಕುಳಿತುಕೊಳ್ಳುತ್ತೀರಿ ನಾವು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದರೆ ಕೊಡುತ್ತಿಲ್ಲ

ಅಧ್ಯಕ್ಷರು ಶ್ರೀರಾಮ ರೆಡ್ಡಿಯವರೆ, ನಿಮ್ಮದು ಅತಿಯಾಯಿತು ಆ ಭಾಗದ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದಕ್ಕೆ ನಾನು ಅವರುಗಳಿಗೆ ಅವಕಾಶ ಕೊಟ್ಟಿದ್ದೇನೆ ಈಗ ಮಾನ್ಯ ಕಾನೂನು ಇಲಾಖೆಯ ಸಚಿವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಅವರು ಹೇಳುವುದಕ್ಕೆ ತಾವು ಮೊದಲು ಕೇಳಿ ಆನಂತರ ತಮಗೂ ಸಹ ಅವಕಾಶ ಕೊಡುತ್ತೇನೆ are you dictating?

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಏನಿದು?

ಅಧ್ಯಕ್ಷರು ನಿಮ್ಮದು ಅತಿಯಾಯಿತು

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಿಮ್ಮದು ಜಾಸ್ತಿ

(ಗೊಂದಲ)

ಅಧ್ಯಕ್ಷರು ಸುಮ್ಮನೆ ಕುಳಿತುಕೊಳ್ಳಿರಿ ನನಗೆ ಗೊತ್ತಿದೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ. ಸದನ ಮುಂದೂಡಲಿಕ್ಕೆ ತಾವು ಎದ್ದೇಳುತ್ತಿರುವಾಗ ಅವರು ಕುಳಿತುಕೊಳ್ಳಿ ಎಂದು ಹೇಳಿದಾಗ ತಾವು ಕುಳಿತುಕೊಳ್ಳುತ್ತೀರಿ

ಅಧ್ಯಕ್ಷರು ಕುಳಿತುಕೊಳ್ಳಿ ಎಂದು ಹೇಳದ ಎದ್ದು ಓಡಾಡಿ ಎಂದು ಹೇಳುವುದಕ್ಕೆ ಆಗುತ್ತದೆಯೇ? (ಗೊಂದಲ) ಮಾತನಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ ಈಗ ಕುಳಿತುಕೊಳ್ಳಿ ಎಂದು ಹೇಳಿದರೂ ಕೂಡ ಈ ರೀತಿಯಾಗಿ ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಹಾಗಾದರೆ ಇದು ಘನತೆ ತರತಕ್ಕಂತ ವಿಚಾರವೇ?

ಅಧ್ಯಕ್ಷರು ಈಗ ಕುಳಿತುಕೊಳ್ಳಿ, ಅವರು ಮತನಾಡಿದ ನಂತರ ತಮಗೂ ಅವಕಾಶ ಕೊಡುತ್ತೇನೆ ಎಲ್ಲದಕ್ಕೂ ಒಂದು ಮಿತಿ ಇದೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಾವೂ ಕೂಡ ಈ ಸದನಕ್ಕೆ ಆಯ್ಕೆಯಾಗಿ ಬಂದಿದ್ದೇವೆ ನಿವು ಆ ರೀತಿಯಾಗಿ ಮಾತನಾಡುವುದು ಸರಿಯಲ್ಲ

ಅಧ್ಯಕ್ಷರು ನೀವು ಸದಸ್ಯರು ಮತ್ತು 224 ಜನರೂ ಸಹ ಈ ಮನೆಯ ಸದಸ್ಯರು

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಎಲ್ಲರು ಬಂದಿರುವಂತೆ ನಾನೂ ಕೂಡ ಬಂದಿದ್ದೇನೆ

(ಗೊಂದಲ)

ಅಧ್ಯಕ್ಷರು ನೀವು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ ಮತ್ತೆ ಬೆರೆಯವರು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತಾರೆಂಬುದರ ಬಗ್ಗೆ ನಿಮಗೆ ಪರಿಜ್ಞಾನ ಇದೆಯೇ? (ಗೊಂದಲ) ಸುಮ್ಮನೆ ಕುಳಿತುಕೊಳ್ಳಿ ನನಗೆ ಎಲ್ಲವೂ ಗೊತ್ತಿದೆ (ಗೊಂದಲ) ಎಲ್ಲದಕ್ಕೂ ಒಂದು ಮಿತಿ ಇಟ್ಟುಕೊಂಡು ತಾವು ಹಿರಿಯ ಸದಸ್ಯರೆಂದು ನಾವು ಗೌರವ ಕೊಡುತ್ತಾ ಬರುತ್ತಿದ್ದರೆ ತಾವು ಈ ರಿತಿ ಮಾತನಾಡುತ್ತಿದ್ದೀರಿ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಾನು ಮಾತನಾಡಬೇಕೆಂದು ನಿಮಗೆ ಪತ್ರ ಕೊಟ್ಟಿಲ್ಲವೇ?

ಅಧ್ಯಕ್ಷರು ನಿಮಗೂ ಅವಕಾಶ ಕೊಡುತ್ತೇನೆ ಆದರೆ ಅವಕಾಶ ಕೊಡತಕ್ಕಂಥದ್ದು ನನಗೆ ಬಿಟ್ಟ ವಿಷಯ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಮಾತನಾಡುವುದಕ್ಕೋಸ್ಕರ ನಿಮ್ಮ ಅನುಮತಿಗಾಗಿ ನಿಮಗೆ ಪತ್ರ ಕೊಟ್ಟಿಲ್ಲವೇ?

ಅಧ್ಯಕ್ಷರು ಕೊಟ್ಟಿದ್ದಿರಿ, ಸಮಯ ಕೊಡುತ್ತೇನೆಂದು ಹೇಳುತ್ತಿದ್ದೇನೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಪತ್ರ ಕೊಟ್ಟಿರುವುದಕ್ಕೋಸ್ಕರ ನನಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ

ಅಧ್ಯಕ್ಷರು ಕೊಟ್ಟಿದ್ದೀರಿ, ಈಗ ಕುಳಿತುಕೊಳ್ಳಿ ಆನಂತರ ಕೊಡುತ್ತೇನೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನೀವು ಎದ್ದೇಳುತ್ತಿದ್ದವರು ಕುಳಿತು ಕೊಳುತ್ತೀರಿ

ಅಧ್ಯಕ್ಷರು ಕಾನೂನು ಸಚಿವರು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ ಆದ್ದರಿಂದ ಅವರು ಏನು ಹೇಳುತ್ತಾರೆ ಕೇಳೋಣ ಆ ನಂತರ ಕೊಡುತ್ತೇನೆಂದು ಹೇಳುತ್ತಿದ್ದೇನೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅವರು ಈಗ ರಿಪ್ಲೈ ಕೊಡುತ್ತಿದ್ದಾರೆ

ಅಧ್ಯಕ್ಷರು that is not the reply

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅವರು ಈಗ ರಿಪ್ಲೈ ಕೊಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ

ಅಧ್ಯಕ್ಷರು ಅವರು ರಿಪ್ಲೈ ಕೊಡುತ್ತಿಲ್ಲ ರಿಪ್ಲೈ ಮಾಡುವುದಕ್ಕೆ ನಾನು ಅವರನ್ನು ಕರೆದಿಲ್ಲ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅವರು ರಿಪ್ಲೈ ಮಾಡುವುದಕ್ಕೆ ಎದ್ದಿದ್ದಾರೆ ಅದಕ್ಕೋಸ್ಕರ ನಾನು ಹೇಳುತ್ತಿರುವುದು ಅವರು ರಿಪ್ಲೈ ಮಾಡದಿದ್ದರೆ ನಾನು ಕೇಳುತ್ತಿರಲಿಲ್ಲ

ಶ್ರೀ ವಾಟಾಳ್ ನಾಗರಾಜ್ ಅವರು ಉತ್ತರ ಕೊಡುವುದಕ್ಕಿಂಧ ಮುಂಚೆ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡುವುದಕ್ಕೆ ಅವಕಾಶ ಕೊಡಿ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅವರು ಉತ್ತರ ಕೊಡುವುದಕ್ಕೆ ಎದ್ದಿದ್ದಾರೆ ಆದ್ದರಿಂದ ಮೊದಲು ಅವಕಾಶ ಕೊಡಿ ಎಂದು ಕೇಳುತ್ತಿದ್ದೇನಷ್ಟೆ

ಅಧ್ಯಕ್ಷರು ತಾವು ಈಗ ಉತ್ತರ ಕೊಡುತ್ತೀರಾ?

ಶ್ರೀ ಎಂ ಪಿ ಪ್ರಕಾಶ್ ಹೌದು ಈಗ ಸದನವನ್ನು ಮುಂದೂಡಿ, ಊಟವಾದ ನಂತರ ತೆಗೆದುಕೊಳ್ಳೋಣ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅವರು ಉತ್ತರ ಕೊಡುವುದಕ್ಕೆ ಎದ್ದಿದ್ದಕ್ಕೆ ನಾನು ಎದ್ದು ಕೇಳುತ್ತಿರುವುದು

ಶ್ರೀ ಎಂ ಪಿ ಪ್ರಕಾಶ್ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ ತಕ್ಷಣ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಏನೂ ಇಲ್ಲ ಏಕೆಂದರೆ ಪ್ರತಿಯೊಬ್ಬರೂ ಮಾತನಾಡುತ್ತೇವೆಂದು ಹೇಳುವಾಗ ಸಮಯವನ್ನು ನಿಗದಿ ಮಾಡಬೇಕಾಗುತ್ತದೆ ಆ ಭಾಗದಿಂದ ಬಂದಿರತಕ್ಕಂಥ ಶಾಸಕರಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿರತಕ್ಕಂಥದ್ದು ಕೂಡ ಇದೆ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡುವುದಕ್ಕೆ ಯಾರದೂ ಆಕ್ಷೇಪಣ ಇಲ್ಲ, ಆದರೆ ನಾವು ಹೇಳಿದ್ದೇವೆಂದು ವಾದ ವಿವಾದಕ್ಕೆ ಹೋಗಬಾರದು ಸ್ಪೀಕರ್ ಸ್ಥಾನಕ್ಕೂ ಒಂದು ಘನತೆ ಇದೆ ಆದ್ದರಿಂದ, ತಾವು ದಯವಿಟ್ಟು ಕುಳಿತುಕೊಳ್ಳಿ ತಾವು ಮಾತನಾಡಬೇಕಾದರೆ ಅವರ ಮನವೊಲಿಸಿ ಮಾತನಾಡುವುದಕ್ಕೆ ಅವಕಾಶ ಕೇಳಿ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಾನು ಅದನ್ನೆ ಕೇಳುತ್ತಿರುವುದು ತಾವು ಉತ್ತರ ಕೊಡುತ್ತಿದ್ದೀರಿ ನಾವು ಮಾತನಾಡಿದ ನಂತರ ತಾವು ಉತ್ತರ ಕೊಡಬೇಕು ನೀವು ಉತ್ತರ ಕೊಟ್ಟ ನಂತರ ನಾನು ಮಾತನಾಡುವುದಕ್ಕೆ ಆಗುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಪಕ್ಕದಲ್ಲಿಯೇ ಇದ್ದೀರಿ ಅವರನ್ನು ಕುಳ್ಳಿರಿಸಿ

(ಗೊಂದಲ)

ಅಧ್ಯಕ್ಷರು ಈಗ ಒಂದು ಕೆಲಸ ಮಾಡೋಣ ಈಗ ಸದನವನ್ನು ಅಡ್ಜರ್ನ್ ಮಾಡೋಣ ಅವರು ಮಾತನಾಡಿದ ನಂತರ ತಾವು ಉತ್ತರ ಕೊಡಿ ಅವರಿಗೂ ಒಂದು ಅವಕಾಶ ಕೊಡುತ್ತೇನೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅವರು ಉತ್ತರ ಕೊಟ್ಟ ನಂತರ ಮಾತನಾಡುವುದಕ್ಕೆ ಆಗುವುದಿಲ್ಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಮೊದಲು ಇವರು ಮಾತನಾಡಲಿ ಆನಂತರ ಅವರು ಉತ್ತರ ಕೊಡಲಿ

ಅಧ್ಯಕ್ಷರು ಆಯಿತು, ಅದಕ್ಕೆ ನಾನು ಒಪ್ಪಿಕೊಂಡಿದ್ಧೇನೆ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ, ನಾವೂ ಕೂಡ ಮಾತನಾಡಬೇಕಾಗಿದೆ ಈಗ ದಯವಿಟ್ಟು ಊಟಕ್ಕೆ ಬನ್ನಿ, ಮತ್ತೆ ಸೇರಿದಾಗ ಎಲ್ಲರೂ ಕೂಡ ಮಾತನಾಡೋಣ

ಶ್ರೀ ಎಂ ಪಿ ಪ್ರಕಾಶ್ ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ ಆ ರೀತಿಯಾದರೆ ಸದನ ನಡೆಸುವುದಕ್ಕೆ ಸಾದ್ಯವಿಲ್ಲ ಮಾನ್ಯ ಶ್ರೀರಾಮರೆಡ್ಡಿ ಯವರೊಬ್ಬರು ಮಾತನಾಡಲಿ ಆನಂತರ ನಾನು ಉತ್ತರ ಕೊಡುತ್ತೇನೆ

ಅಧ್ಯಕ್ಷರು ಈಗ ನಾನು ಅಡ್ಜರ್ನ್ ಮಾಡುತ್ತೇನೆ ಅವರು ಮಾತನಾಡಿದ ನಂತರ ತಾವು ಉತ್ತರ ಕೊಡಿ

ಶ್ರೀ ಎಂ ಪಿ ಪ್ರಕಾಶ್ ಆಯಿತು ತಾವು ಯಾವ ರೀತಿ ಹೇಳುತ್ತೀರೋ

ಮಾತನಾಡುವುದಕ್ಕೆ ಯಾರಿಗೆ ಅವಕಾಶ ಕೊಡುತ್ತೀರೋ ಅವರುಗಳು ಮಾತನಾಡಿದ ನಂತರ ಸರ್ಕಾರ ಉತ್ತರ ಕೊಡುತ್ತದೆ ಅದರ ಬಗ್ಗೆ ನಮ್ಮ ದೇನೂ ಅಭ್ಯಂತರವಿಲ್ಲ

ಅಧ್ಯಕ್ಷರು ಈಗ ಸದನವನ್ನು 3 15 ಕ್ಕೆ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮದ್ಯಾಹ್ನ 2 16 ಗಂಟೆಗೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 15 ಗಂಟೆಗೆ ಸೇರಲು ನಿಶ್ಚಯಿಸಿತು)

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಸದನವು ಪುನಃ ಮದ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಆರಂಭಗೊಂಡಿತು

ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು

ವಿಷಯ ತಿಪಟೂರು ಡಿವಿಜನ್ ಬೆಸ್ಕಾಂ ಟೆಂಡರ್ ಕುರಿತು

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) ಮಾನ್ಯ ಅಧ್ಯಕ್ಷರೆ, ಬೆಸ್ಕಾಂ ಸಂಸ್ಥೆಯವರು ಫೆಬ್ರುವರಿ ತಿಂಗಳಿನಲ್ಲಿ ನನ್ನ ತಿಪಟೂರು ಡಿವಿಜನ್ ಗೆ ಬೆಸ್ಕಾಂಗೆ ಒಂದು ಟೆಂಡರ್ ಕರೆದು, ಆ ಟೆಂಡರ್ ಪಾರಂ ನಲ್ಲಿ pre qualification ನಿಗದಿ ಗೊಳಿಸಬೇಕಾದರೆ, ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಕೆಲಸ ಮಾಡಿರಬೇಕು ಇದರಲ್ಲಿ ಏನಾಗಿದೆಯೆಂದರೆ ಅವರಿಗೆ ಎರಡು ವರ್ಷ ಪ್ಯಾಕೇಜ್ ಅನ್ನು ಮಾಡಿಕೊಡುತ್ತಿದ್ದಾರೆ ಅದನ್ನು 5 ವರ್ಷಗಳಿಗೆ ರಿನ್ಯೂ ಮಾಡಬಹುದೆಂದು ಅಗ್ರೀಮೆಂಟ್‌ನಲ್ಲಿ ಅದನ್ನು ಸೇರಿಸಿಕೊಂಡಿದ್ದಾರೆ ಅಗ್ರೀಮೆಂಟ್ ಪ್ರಕಾರ ಒಂದು ಕಂಬ ಮುರಿದರೂ ಕೂಡ ಅವರೇ ಸರಿ ಮಾಡಬೇಕಾಗುತ್ತದೆ ಒಂದು ತಂತಿ ಕಿತ್ತು ಹೋದರೂ

ಕೂಡ ಅವರೇ ಮಾಬೇಕಾಗುತ್ತದೆ ಡಿಫಾಲ್ಟ್ ಕ್ಲಾಸ್‌ನಲ್ಲಿ ಅವರು ಏಕೆ ಕೆಲಸ ಮಾಡಲಿಲ್ಲವೆಂದು ನಾವು ಪ್ರಶ್ನೆ ಮಾಡಬೇಕಾದರೆ, 20 ವಾರಗಳ ಕಾಲ ಕಾಯಬೇಕಾಗುತ್ತದೆ 20 ತಿಂಗಳು ಆದಮೇಲೆ he will be treated as a defaulter ಎಂದು ಇದರಲ್ಲಿ ಮಡಿದ್ದಾರೆ ಆಮೇಲೆ ಇದನ್ನು ಏನು ಮಾಡಿಬಿಟ್ಟರು ಎಂದರೆ ಕನ್ನಡಪ್ರಭ ಮತ್ತು Indiand Express ದಿನಪತ್ರಿಕೆಗಳ ಒಂದು ಮೂಲೆಯಲ್ಲಿ ಒಂದು advertisement ಹಾಕಿ website ಓದಿಕೊಳ್ಳಿರೆಂದು ಹೇಳಿದ್ದಾರೆ ಅಧ್ಯಕ್ಷರೆ, ಇದು labour contract, KPTCL, BESCOM, ನಲ್ಲಿ, 2 ಲಕ್ಷ, 3 ಲಕ್ಷ, 5 ಲಕ್ಷ ಎಂದು ಅವರೇ registered contractors ಅನ್ನು ಇಟ್ಟುಕೊಂಡಿದ್ದಾರೆ, ಅವರು C R ಕೊಡಬೇಕೆಂದು ಹೇಳುತ್ತಾರೆ ಅವರಿಗೆ ವಹಿಸಿ ಕೊಟ್ಟು ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಸಿಕೊಂಡು ಬರುತ್ತಿದ್ದುದು ವಾಡಿಕೆಯಾಗಿತ್ತು ಇವತ್ತು ಇಡೀ ರಾಜ್ಯದಲ್ಲಿ BESCOM operation ನಲ್ಲಿ ಏನಿದೆ 3 ತಾಲ್ಲೂಕುಗಳನ್ನು ಬಿಟ್ಟು ಉಳಿದ ಎಲ್ಲಾ ತಾಲ್ಲೂಕುಗಳಲ್ಲೂ ಈ ತರಹದ ಪ್ಯಾಕೇಜ್ ಕೊಡಲು ಹೋಗಿದ್ದಾರೆ ಇದರಿಂದ ನಮಗೆ ಬಹಳ ಕಷ್ಟವಾಗುತ್ತದೆ ಈಗ ಒಂದು ಕಂಬ ಮುರಿದು ಹೋದರೂ ನಾನು contract ಗೆ ಕೊಟ್ಟು ಹೋಗಬೇಕು ಈ distribution ಅನ್ನು ಈಗಾಗಲೇ contractಗೆ ಕೊಟ್ಟುಬಿಟ್ಟಿದ್ದಾರೆ stations ಎಲ್ಲವನ್ನೂ contractors ಕಡೆಯವರೇ ನೋಡಿಕೊಳ್ಳುತ್ತಿರುವುದು, ಇಲಾಖೆಯಿಂದಲ್ಲ ಇದರ ವರ್ಕ್ಸ್ ಸಹ ಅವರಿಗೇ ಕೊಡುತ್ತಿರುವುದರಿಂದ ಮುಂದೆ ನಾವೆಲ್ಲರೂ MLA ಗಳಾಗಿ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ ಅದರ ಜೊತೆಗೆ ರೇಟ್ ಈಗ ರೇವಣ್ಣನವರು ನೋಡಿದ್ದಾರೋ ಇಲ್ಲವೋ, ನನಗೆ ಗೊತ್ತಿಲ್ಲ ಅವರು ನೋಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ 9 ಮೀಟರ್ RCC Pole ನೆಡಬೇಕಾದರೆ 401 ರೂಪಾಯಿಗಳ existing S R ಇದೆ ಇವರು ಕೊಡಲು ಹೊರಟಿರುವುದು 1,000 ರೂಪಾಯಿ pole cost 3,413 ರೂಪಾಯಿ ಗಳಿರುವುದನ್ನು 4,100 ರೂಪಾಯಿಗಳಂತೆ ಅವನಿಗೆ ಕೊಡುತ್ತಿದ್ದಾರೆ! ಆಕ್ಚುಅಲ್ ಆಗಿ ಪೋಲ್ ಮಾಡುವವರಿಂದ ಕೊಂಡ ಕೊಂಡರೆ ಇವರಿಗೆ ಇನ್ನೂ 400, 500 ರೂಪಾಯಿಗಳು ಕಡಿಮೆಯಾಗುತ್ತಿತ್ತು surplus ಆದರೂ ಯಾರು manufacturers ಇದ್ದರೋ ಅವರಿಗೆ ಕೊಡುತ್ತಿದ್ದುದನ್ನೂ ತಪ್ಪಿಸಿಬಿಟ್ಟಿದ್ದಾರೆ ಏಷ್ಯನ್ ಸಂಸ್ಥೆಯ ಒಬ್ಬ ಮನುಷ್ಯನನ್ನು ಇಲ್ಲಿ ಇನಸ್ಟಾಲ್ ಮಾಡಿ, ಇಡೀ ತಿಪಟೂರು ವಿಭಾಗದ ಕೆಲಸವನ್ನು ಅವನೊಬ್ಬನೇ

ಮಾಡಬೇಕೆಂದು ಗುತ್ತಿಗೆ ಕೊಟ್ಟು, default clause ಗೆ ನೀವು KEB ಯಂತಹ ಕಡೆ ಮಳೆ ಗಾಳಿ ನಮ್ಮನ್ನು ಕೇಳಿ ಬರುವುದಿಲ್ಲ, ಕಂಬ ನಮ್ಮನ್ನ ಕೇಳಿ ಮುರಿದು ಹೋಗುವುದಿಲ್ಲ, ಯಾಕ್ರಿ ಕಂಬ ನೆಡಲಿಲ್ಲ, ನಿಮ್ಮ contractor ಟರ್ಮಿನೇಟ್ ಮಾಡಿಸುತ್ತೇವೆ" ಎಂದರೆ ನಾನು 20 ವಾರಗಳ ಕಾಲ ಕಾಯುವಂತಹ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ ಇದರ ಸಂಭಂಧವಾಗಿ ನಾನು ಅವರ ಹತ್ತಿರ ಹೋಗಿದ್ದೇನೆ ಅವರ ಆಫೀಸ್‌ಗೆ ಹೋಗಿ schedule of rates ಏನಿದೆ, ಅಷ್ಟು ಕೊಟ್ಟುಬಿಡಿ, piece work ನಲ್ಲಿ ಕೊಡಿ ಅಥವಾ ಲೈನ್ ಮೇಲೆ ಒಂದೊಂದು ಲೈನೋ ಫೀಡರೋ ಸೇರಿಸಿ ಪ್ಯಾಕೇಜ್ ಕರೆಯಿರಿ 2-2 ತಾಲ್ಲೂಕುಗಳಿಗೆ -2-2 ವರ್ಷಗಳಿಗೆ ಯಾರು ಈ ರಾಜ್ಯದಲ್ಲಿ ಟೆಂಡರ್ ಹಾಕಿಕೊಂಡು ನಿಮ್ಮ ಹತ್ತಿರ KEB ಯಲ್ಲಿ ಕೆಲಸ ಮಾಡುವಂಥಹ Contractor ಸಿಗುತ್ತಾರೆ? ಹೇಗಾದರೂ ಮಾಡಿ split ಮಾಡಿಕೊಡಿ, ಒಂದು ಸಭೆ ಮಾಡಿ ಎಂದು ನಾನು ಕೇಳಿಕೊಂಡಿದ್ದೇನೆ ಆದರೂ ಅವರು ಏಕೋ meeting ಕರೆಯಲಿಲ್ಲ ನಮ್ಮ ಮಾತುಗಳು ಅವರ ಕಿವಿಯೊಳಗೆ ಹೋಗಲಿಲ್ಲ ಈಗ ನಮಗೆ ಏನಾಗಿದೆಯೆಂದರೆ, ಈ ಹುಡುಗರಿಗೆ sub lease ಕೊಡಬೇಕೆಂದು ಆಸೆಯಿಟ್ಟುಕೊಂಡು ಟೆಂಡರ್ ತೆಗೆದುಕೊಂಡ ಇವರೆಲ್ಲರೂ Association ಮಾಡುವ ಮೂಲಕ ನಾವ್ಯಾರೂ ಮಾಡುವುದು ಬೇಡ, ನೋಡೋಣ, ಹೇಗೆ ಮಾಡುತ್ತಾರೆ ಎಂದುಕೊಂಡಿದಕ್ಕೆ since 3 months ಅವನಿಗೆ ಕೆಲಸವನ್ನೇ ಮಾಡುವುದಕ್ಕಾಗಲಿಲ್ಲ ಇವತ್ತು ಒಂದು ಕಂಬವನ್ನು ನೆಡುವುದಕ್ಕಾಗುತ್ತಿಲ್ಲ, ಒಂದು ತಂತಿ ಎಳೆಯುವುದಕ್ಕಾಗುತ್ತಿಲ್ಲ ರೇವಣ್ಣನವರು ನಮಗೆ ವ್ಯಂಗ್ಯವಾಗಿ ನಮ್ಮನ್ನು ಉದ್ದೇಶಿಸಿ, ಏನು ಎಮರ್ಜೆನ್ಸಿ ಇದ ಅವರನ್ನೇ ಕೇಳಿ ಎನ್ನುವಷ್ಟು ಇದು ಹುಡುಗಾಟದ ವಿಷಯ ಅಲ್ಲ 3 ತಿಂಗಳುಗಳಾಗಿದೆ, ಮಳೆ-ಗಾಳಿ ಬಂದು ಕಂಬ ಬಿದ್ದರೆ, ಕಂಬ ನೆಡುವುದಕ್ಕೆ ಯಾರು ದಿಕ್ಕಿಲ್ಲ ಅಲ್ಲಿರುವ labour contractor ಗೆ contract ಕೊಡುವಂತಿಲ್ಲ ಅನಂತರ ಇವತ್ತು ಅಲ್ಲಿ estimate ಮಾಡಬೇಕಾದರೆ, ಅವನು ಕೊಟ್ಟಿದ್ದಾನಲ್ಲ, ಅವನ ರೇಟನ್ನು ಇವರು ಒಪ್ಪಿಕೊಂಡಿದ್ದಾರೆ! this is a new type of agreement ಅವನು ಕಂಬ supply ಗೆ ಹಾಕಿಕೊಂಡ ಕಂಬ ನೆಡುವುದಕ್ಕೆ ಈ ಪ್ರೈಸ್ ಕೆಲವು ಕಡೆಗಳಲ್ಲಿ ಏನು ಮಾಡಿದರು ಎಂದರೆ, ಮಾಡಲಾರದ ಕೆಲಸ ಆ ಒಂದು pole ಅನ್ನು concrete ಮಾಡಬೇಕು ಇವರ S R 200 ಚಿಲ್ಲರೆ ರೂಪಾಯಿಗಳಷ್ಟಿತ್ತು

ಬರೀ ಮೂರು ರೂಪಾಯಿ ಹಾಕುತ್ತಾನೆ! ಏಕೆಂದರೆ ನಾವು per kilometer ಕೊಟ್ಟಿದ್ದೇವೆ, ಅದರಲ್ಲಿ ನಮಗೆ ಇಂತಿಷ್ಟು savings ಆಗಿದೆ ಎಂದು ಇವರು ಉತ್ತರದಲ್ಲಿ ಹೇಳುತ್ತಾರೆ ಎಲ್ಲಿ rod ಹಾಕಬೇಕೆಂದಿತ್ತು, ಎಲ್ಲಿ concrete ತುಂಬಬೇಕೆಂದು ಇತ್ತು, ಎಲ್ಲಿ 63 K V transformer ಹಾಕಬೇಕೆಂದಿತ್ತು, ಅಲ್ಲೆಲ್ಲವೂ ಅವನು ಬೇಕಂತಲೇ ರೇಟ್ ಕಡಿಮೆ ಮಾಡಿದ ಏಕೆಂದರೆ, ಅವನು ಆ ಕೆಲಸ ಮಾಡುವುದಿಲ್ಲ ಮೂರು ರೂಪಾಯಿಗೆ ಈ ರಾಜ್ಯದಲ್ಲಿ ಯಾರಾದರೂ ಒಬ್ಬರು ಕಂಬವನ್ನು ನಿಲ್ಲಿಸಿ concrete ಮಾಡುತ್ತಾನೆ ಎಂದರೆ, ನಾವು ಅವನಿಗೆ ಶರಣಾಗಿಬಿಡುತ್ತೇವೆ Cement Concreting at the rate of Rs 3 per pole ಕಂಬ ನೆಡುವುದಕ್ಕೆ 1,000 ರೂಪಾಯಿಗಳಾದರೆ, concrete ಮಾಡುವುದಕ್ಕೆ ಅವನು 3 ರೂಪಾಯಿ ಟೆಂಡರ್ ಹಾಕಿದ್ದಾನೆ! ಏಕೆಂದರೆ overall 1 kilometer ವೆಚ್ಚವನ್ನು ಕಡಿಮೆ ತೋರಿಸುವುದಕ್ಕೆ ಈ ರೀತಿಯಾಗಿದೆ ರೇವಣ್ಣನವರೇ, ಇದನ್ನು ಸರಿ ಮಾಡಿಸಿ, ಇಲ್ಲದಿದ್ದರೆ, exchequer ಹಾಳಾಗಿ ಹೋಗುತ್ತದೆ consumer ದುಬಾರಿಯಾಗುತ್ತದೆ ಒಂದು ಲಕ್ಷ ಮೀರಿ ನಾನು ಯಾವುದೇ I P Set ಗೆ ಕಂಬ ಕೊಡುವುದಿಲ್ಲವೆಂದು ತಾವು ಒಂದು ನಿರ್ಣಯ ತೆಗೆದುಕೊಂಡಿದ್ದೀರಿ transformer ಬಿಟ್ಟರೆ, ಈ estimate ಇಲ್ಲೇ 20 ಸಾವಿರ ರೂಪಾಯಿಗಳಷ್ಟು variation ಆಗುತ್ತಿದೆ, ನಮಗೇನೂ ನ್ಯಾಯ ದೊರಕಿಲ್ಲ ಸರ್ ತಾವು ನಮಗೇನಾದರೂ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು .

ಶ್ರೀ ಎಚ್ ಡಿ ರೇವಣ್ಣ ಮಾನ್ಯ ಸಭಾಧ್ಯಕ್ಷರೆ, ಮಾದುಸ್ವಾಮಿಯವರು ಕಳೆದ 8-10 ದಿವಸಗಳ ಹಿಂದೆ ರಾಷ್ಟ್ರಪತಿಯವರು ಬೆಂಗಳೂರಿಗೆ ಬರುವ ಹಿಂದಿನ ದಿವಸ ನನಗೆ ಅವರು ಈ ವಿಷಯ ತಿಳಿಸಿದರು ನಾನು ಹೇಳಿದೆ ಸರ್, ನಮಗೆ ಯಾವ contractor ಗೂ ಫೇವರ್ ಮಾಡಬೇಕೆಂಬ ಉದ್ದೇಶವಿಲ್ಲ ಸರಿಯಿಲ್ಲವೆಂದರೆ, ಕ್ಯಾನ್ಸಲ್ ಮಾಡೋಣ ಯಾವ ರೀತಿ ಮಾಡಬೇಕೆಂಬುದನ್ನು ಬೇಕಾದರೆ ಹೇಳಲಿ ಒಟ್ಟಿನಲ್ಲಿ ನಮಗೆ ರಾಜ್ಯದ ಅಭಿವೃದ್ಧಿಯಾಗಬೇಕೇ ಹೊರತು ಏಕೆಂದರೆ ಇವತ್ತು ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆಂಬುದು ತಮಗೆ ಗೊತ್ತಿದೆ ತಮ್ಮ ಜಿಲ್ಲೆಯಲ್ಲಿ ಮೂರು ಸಲ ಮೀಟಿಂಗ್ ಮಾಡಿದೆ ಮೀಟಿಂಗ್ ಮಾಡಿದಾಗ ತಮ್ಮೆಲ್ಲಾ ಅಭಿಪ್ರಾಯವನ್ನು ಅದು T C ಹಾಕುವುದಿರಬಹುದು ಅಥವಾ

ಅಧಿಕಾರಿಗಳೇನಾದರೂ ಇದರಲ್ಲಿ ಲೋಪವೆಸಗಿ ದುಡ್ಡು ಹೊಡೆದಿದ್ದರೆ, A1ÀÄ² AvÀÄÀ ÀÀ enquiry ಬೇಕಾದರೂ ಮಾಡೋಣ ನನ್ನದೇನೂ ದಾಕ್ಷಿಣ್ಯವಿಲ್ಲ ಇವತ್ತು ಅವರು ಈ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ ನಾಳೆ ಒಂದು ಸಭೆ ಕರೆಯೋಣ ಅವರು ಯಾವ ರೀತಿಯ ಸಲಹೆ ಕೊಡುತ್ತಾರೋ ಬೇಕಾದರೆ, cancel ಮಾಡುವುದಾದರೆ, cancel ಮಾಡೋಣ ಅಥವಾ ಯಾವ ರೀತಿ ಯಾವ್ಯಾವ ಐಟಂ ಗಳಲ್ಲಿ ದುಡ್ಡು ಹೊಡೆಯಲು ಕಾರ್ಯಕ್ರಮ ಹಾಕಿಕೊಂಡಿದ್ದಾರೋ, ಅದನ್ನೂ ರದ್ದು ಪಡಿಸುವುದಕ್ಕೆ ಏರ್ಪಾಟು ಮಾಡೋಣ ಅದವಾ ಯಾರಾದರೂ ತಪ್ಪಿತಸ್ಥರು ಇದ್ದರೆ, ಅವರ ಮೇಲೂ enquiry ಮಾಡುವುದಕ್ಕೆ ನಾನು ತಯಾರಿದ್ದೇನೆ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಾವೂ ಸಹಿ ಮಾಡಿದ್ದೇವೆ, ಚರ್ಚೆ ಬೇಕಾದರೆ ನಾಳೆ ಮಾಡೋಣ ಸರ್

ಶ್ರೀ ಹೆಚ್ ಡಿ ರೇವಣ್ಣ ನಾಳೆ ಬೆಳಗ್ಗೆಯೇ ಅವರನ್ನು ಕರೆಸಿ, ಕುಳಿತು

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಈಗ ನಮ್ಮ ಜಿಲ್ಲೆಯಲ್ಲೂ ಅದರ ಪ್ರಾಬ್ಲಮ್ ಇದೆ ಬರೀ ತಿಪಟೂರು ಡಿವಿಜನ್‌ನಲ್ಲಿ ಮಾತ್ರ ಈ ಸಮಸ್ಯೆ ಇಲ್ಲ

ಶ್ರೀ ಹೆಚ್ ಡಿ ರೇವಣ್ಣ ನಿಮ್ಮ ಜಿಲ್ಲೆಯನ್ನು ಒಳಗೊಂಡಂತೆ ಎರಡನ್ನೂ ಸೇರಿಸಿ, ಕರೆಸಿ, ನಾಳೆ ಮಾತನಾಡುತ್ತೇನೆಂದು ಹೇಳಿದೆನಲ್ಲ ನಾಳೆ ಬಳಿಗ್ಗೆ ಅವರಿಬ್ಬರನ್ನೂ ಕರೆಸಿ ತೀರ್ಮಾನ ಮಾಡುತ್ತೇನೆ ಅದೇನಿದೆಯೋ ಅದನ್ನು ರದ್ದುಗೊಳಿಸುತ್ತೇನೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ನಮ್ಮ ಬಾಗದಲ್ಲೂ ಈ ಪ್ರಾಬ್ಲಮ್ ಇದೆ ಇದಕ್ಕೆ ನಾವು ಸೈನ್ ಮಾಡದೇ ಇರಬಹುದು ನಮ್ಮ ಭಾಗದಲ್ಲೂ ಇದು serious problem ಆಗಿದೆ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕು

ಶ್ರೀ ಹೆಚ್ ಡಿ ರೇವಣ್ಣ ಈಗ ತುಮಕೂರು ಮತ್ತು ಕೋಲಾರ, ಈ JgಕಾÀ f¯ÉèUÉ À§A¢ü¹zÀvÉaction ತೆಗೆದುಕೊಂಡಾಗ ಇಡೀ ರಾಜ್ಯಲ್ಲೂ ಅದನ್ನೇ ಮಾಡುತ್ತೇವೆ ಒಂದಕ್ಕೇ ಮಾಡುವುದಿಲ್ಲ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಕೇವಲ ಅವರದಲ್ಲ, ನಮ್ಮ ಭಾಗದಲ್ಲೂ ಸಹ ಇದೆ

ಶ್ರೀ ಹೆಚ್ ಡಿ ರೇವಣ್ಣ ಟೆಂಡರ್ ಯಾವ ರಿತಿ ಕರೆಯಬೇಕೆಂಬ ಬಗ್ಗೆ ಅವರೇ suggession ಕೊಡಲಿ ಏಕೆಂದರೆ ಟೆಂಡರ್ ಕರೆಯದೇ exemption ಕೊಟ್ಟರೆ, ಆ ರೀತಿ ಮಾಡುವುದಕ್ಕೂ ತಯಾರು ನಾಳೇನೇ meeting ಕರೆದು, ಸಭೆಗೆ ನಮ್ಮ ಅದಿಕಾರಿಗಳನ್ನೂ ಕರೆಸುತ್ತೇನೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಯಾವ ಅಧಿಕಾರಿಗಳನ್ನು ಕರೆಸುತ್ತೀರಿ? ನಮ್ಮನ್ನೂ ಕರೆಸುತ್ತೀರಾ?

ಶ್ರೀ ಹೆಚ್ ಡಿ ರೇವಣ್ಣ ಅವರನ್ನೂ ಕರೆಸಿ, ಎದುರುಗಡೆ ಕುಳಿತು ಯಾವ ರೀತಿ ಮಾಡಬೇಕೆಂದು ತೀರ್ಮಾನ ಮಾಡುತ್ತೇನೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ನಮ್ಮನ್ನೂ ಕರೆಯುತ್ತೀರಾ? ನಮಗೂ ಗೊತ್ತಾಗಬೇಕಲ್ಲಾ ನಮ್ಮ ಬಾಗದಲ್ಲೂ ಇದರ ಸಮಸ್ಯೆ ಇದೆ

ಶ್ರೀ ಹೆಚ್ ಡಿ ರೇವಣ್ಣ ನಾಳೆ ಸಾಯಂಕಾಲ ಗುಲ್ಬರ್ಗ ಜಿಲ್ಲೆಗೆ ಸಂಬಂಧ ಪಟ್ಟ ವಿಷಯದ ಬಗ್ಗೆ ಚರ್ಚೆ ಮಾಡೋಣ ಕಡೆಯ ಭಾಗದಲ್ಲಿ ಮಳೆ ಜಾಸ್ತಿಯಾಗಿ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಬಹಳ ಹಾಳಾಗಿದೆ ಸರ್ ಈಗ ಬಹಳ ಕಷ್ಟವಿದೆ ಈಗ ನಾವು ನಮ್ಮ ಮತ ಕ್ಷೇತ್ರದಲ್ಲಿ ಓಡಾಡುವಂತಿಲ್ಲ

ಶ್ರೀ ಜೆ.ಸಿ ಮಾಧುಸ್ವಾಮಿ ಇಲ್ಲಿ ಚರ್ಚೆಯಾಗುವುದಾದರೆ, ಅಧ್ಯಕ್ಷರೆ, ನಾವು ರಾಜಿ ನಮ್ಮನ್ನೇ ಕರೆದು ಅವರು ಚರ್ಚೆ ಮಾಡುವುದಾದರೆ,

association ಅವರನ್ನೂ ಕರೆಸಲಿ ಅವರದು ಯಾವ ರೇಟು, ಯಾವ terms and conditionsನಲ್ಲಿ ಕೊಟ್ಟಿದ್ದಾರೆ, ಅವರದೊಂದು registered contractors association ಇದೆ ನಾವು S R ಪ್ರಕಾರ 400 ರೂಪಾಯಿಗೆ ಮಾಡುತ್ತೇವೆ ಎಂದು ಅವರು ಬರೆದು ಕೊಡುವಾಗ ನೀವು 1,000 ರೂಪಾಯಿಗಳಿಗೆ ಕೊಡುತ್ತಿದ್ದೀರಿ, ಅವರನ್ನೂ ನಿಮ್ಮೆದುರಿಗೆ commit ಮಾಡಿಸಿಕೊಳ್ಳಿ ಅವರು 400 ರೂಪಾಯಿಗೆ ಮಾಡುತ್ತಾರೆಯೇ? 200 ರೂಪಾಯಿಗೆ ಮಾಡುತ್ತಾರೆಯೇ?

ಅಧ್ಯಕ್ಷರು ಮಾಧುಸ್ವಾಮಿಯವರೇ, ಯಾರ್ಯಾರು ಸಂಬಂಧ ಪಟ್ಟವರು interested parties ಎಲ್ಲರನ್ನೂ ಕರೆಸಿ resolve ಮಾಡಲಿ resolve ಆಗದೇ ಇದ್ದರೆ, let it be abeyance

ಶ್ರೀ ಜೆ ಸಿ ಮಾಧುಸ್ವಾಮಿ Association ಅವರನ್ನೂ ಕರೆಸಬೇಕು, ನಾಳೆ ಆಗದಿದ್ರೆ, ನಾಡಿದ್ದು ಕರೆಸಿ

ಶ್ರೀ ಹೆಚ್ ಡಿ ರೇವಣ್ಣ ನಾಳೇನೇ ಕರೆಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಆದರೆ ಅವರು ಬರಬೇಕಲ್ಲ

ಶ್ರೀ ಹೆಚ್ ಡಿ ರೇವಣ್ಣ Contractors ಅವರನ್ನು ಶುಕ್ರವಾರ ಕರೆಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಅಧ್ಯಕ್ಷರೆ, ಅದು ಆಗದಿದ್ದರೆ, ಈ ವಿಷಯ ವನ್ನು ಇಲ್ಲಿ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ನೀವು ಅವಕಾಶ ಮಾಡಿ ಕೊಡಬೇಕು

ಅದ್ಯಕ್ಷರು ಆಯಿತು

ಶ್ರೀ ಎಸ್ ಎಸ್ ಪಾಟೀಲ್ ಅಧ್ಯಕ್ಷರೆ,ಇಲ್ಲಿ ಬೇಡಿಕೆ ಬಿಲ್‌ಗಳನ್ನು ಮಂಡಿಸಿದ್ದೀರಿ ಈ ಬೇಡಿಕೆಗಳ ಮೇಲೆ ಮಾತನಡಬೇಕಾದರೆ, ನಿರ್ವಹಣಾ

ಮುಂಗಡ ಪತ್ರಗಳು ಬರಬೇಕಾಗಿತ್ತು ಆದರೆ, ಅವು ನಮಗೆ ಬರಲಿಲ್ಲ Performance Budget ಬಂದೇ ಇಲ್ಲ ನಾವು ಆವಾಗಿನಿಂದಲೂ ಹೇಳುತ್ತಿದ್ಧೇವೆ ಅದರ ಹಿಂದೆ ನೀವು ಹೇಳಿದಿರಿ ಕೆಲವು ಇಲಾಖೆಗಳದು ಬಂದಿವೆ ಆದರೆ ಎಲ್ಲಾ ಇಲಾಖೆಗಳಿಂದ ಬಂದಿಲ್ಲ ಯಾವ್ಯಾವುದು ಬಂದಿಲ್ಲವೋ ಅವೆಲ್ಲವನ್ನೂ ದಯಮಾಡಿ ಕಳುಹಿಸಕೊಡಬೇಕು ಮಾನ್ಯ ಪ್ರಕಾಶ್‌ರವರೇ, ಒಂದು ವಾರದೊಳಗೆ ಎಲ್ಲಾ ಕಳುಹಿಸಿಕೊಡುತ್ತೇವೆಂದು ನೀವೇ ಅವತ್ತು ಹೇಳಿದ್ದಿರಿ ಈಗ ಎರಡನೇ ಅದಿವೇಶನವಾದರೂ ಬಂದಿಲ್ಲ ದಯವಿಟ್ಟು ಅವುಗಳನ್ನು ಕಳುಹಿಸುವಂಥ ವ್ಯವಸ್ಥೆ ಮಾಡಿಕೊಡಿ ಇಲ್ಲದಿದ್ದರೆ, ನಾವು ಏನೆಂದು ಮಾತನಾಡುವುದು?

ಶ್ರೀ ಬಸವರಾಜ ರಾಯರೆಡ್ಡಿ ಈಗ ನಾವು ಬೇಡಿಕೆಗಳ ಬಗ್ಗೆ ಚರ್ಚೆ ಮಾಡಬೇಕು annual reports ಇಲ್ಲ performance budget ಇಲ್ಲ ಇಲ್ಲದಿದ್ದರೆ ಮಾತನಾಡುವುದು ಹೇಗೆ? ಮಾಹಿತಿ ಬಂದಿಲ್ಲ ಬಂದಿದ್ದರೆ ನಾವೇಕೆ ಕೇಳುತ್ತಿದ್ದೇವು?

ಅಧ್ಯಕ್ಷರು Immediate ಆಗಿ ನಾಳೆ ಒದಗಿಸತಕ್ಕಂಥ ಕೆಲಸವನ್ನು ಸರ್ಕಾರದವರು ಮಾಡಬೇಕು ಏಕೆಂದರೆ ನಾಳೆಯಿಂದ ಬೇಡಿಕೆ ಮೇಲಿನ ಚರ್ಚೆ ಆರಂಭವಾಗುತ್ತದೆ

ಶ್ರೀ ಸಿದ್ದರಾಮಯ್ಯ Demand ಮೇಲೆ ಚರ್ಚೆ ಮಾಡಬೇಕಾದರೆ ಪ್ರತಿ ಇಲಾಖೆಯ annual reports ಇರುತ್ತದೆ Performance ಎಲ್ಲ ಇರುತ್ತದೆ, ಇವೆಲ್ಲವನ್ನು ಯಾರಿಗೂ ಕೊಟ್ಟಿಲ್ಲವಲ್ಲ

ಶ್ರೀ ಎಂ ಪಿ ಪ್ರಕಾಶ್ ಕೆಲವು ಇಲಾಖೆಗಳದ್ದು ಕೊಟ್ಟಿದ್ದಾರೆ ಇನ್ನು ಕೆಲವು ಇಲಾಖೆಗಳದು ಕೊಟ್ಟಿಲ್ಲ

ಶ್ರೀ ಸಿದ್ದರಾಮಯ್ಯ ಇಲ್ಲ, ಕೊಟ್ಟಿಲ್ಲ ನಮಗೆ ಒಂದೂ ಸಹ ಬಂದಿಲ್ಲ ಯಾವ್ಯಾವ ಇಲಾಖೆಯಿಂದ ಬಂದಿದೆ ಎಂಬುದನ್ನು ತೋರಿಸಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈಗ ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ

(ಗೊಂದಲ)

ಅಧ್ಯಕ್ಷರು ನೆನ್ನೆ, ಮೊನ್ನೆಯ ಅಜೆಂಡಾದಲ್ಲಿ ಕೆಲವು ಇಲಾಖೆಗಳದು ಹೋಗಿದೆಯಂತೆ ಯಾವುದು ಹೋಗಿಲ್ಲವೆನ್ನುವುದನ್ನು ಈಗ check-up ಮಾಡಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ ಮಾನ್ಯ ಅಧ್ಯಕ್ಷರೆ, ನಾವು ಏನು ಮಾತನಾಡಬೇಕೆನ್ನುವುದನ್ನು ನೀವೆ ಹೇಳಿರಿ

ಶ್ರೀ ಬಸವರಾಜರಾಯ ರೆಡ್ಡಿ ಈಗ ಬಹಳ Important ಆಗಿರುವ Agriculture, Rural Development ಇವ್ಯಾವೂ ಬಂದಿಲ್ಲ

ಅಧ್ಯಕ್ಷರು ಇದನ್ನು ಈಗ ನೋಡಿಸಿ ಯಾವ್ಯಾವುವು ಹೋಗಿಲ್ಲ, ಅದನ್ನು ಕಳುಹಿಸತಕ್ಕಂಥ ವ್ಯವಸ್ಥೆ ಮಾಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಇವತ್ತು agriculture ಬಂದಿದೆಯಂತೆ ಮುಖ್ಯ ಕಾರ್ಯದರ್ಶಿಗಳಿಗೆ ಹೇಳಿ ಎಲ್ಲಾ ಇಲಾಖೆಯದು ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ

(ಗೊಂದಲ)

ಶ್ರೀ ಸಿದ್ದರಾಮಯ್ಯ ಇದರ ಜೊತೆಯಲ್ಲೇ ಅವೆಲ್ಲ ಬರಬೇಕಿತ್ತಲ್ಲವೇ?

ಶ್ರೀ ಎಂ ಪಿ ಪ್ರಕಾಶ್ ಹೌದು ಅಲ್ಲಿ ಸ್ವಲ್ಪ ತಪ್ಪಾಗಿದೆ

ಅಧ್ಯಕ್ಷರು ಆಯಿತು, ಈಗ ಎಷ್ಟು ಬಂದಿದೆ ಎಷ್ಟು ಬಂದಿಲ್ಲ ವೆನ್ನುವುದನ್ನು ಚೆಕ್‌ಅಪ್ ಮಾಡಿಸಿ ಈ 15ರೊಳಗಡೆ ಯಾವುದು

ಬರಬೇಕೆಂದು ಹೇಳಿದೆ ಅದರ ಬಗ್ಗೆ concerned minister ಗೆ ಹೇಳಿ ಕಳುಹಿಸಿ

(ಗೊಂದಲ)

ಶ್ರೀ ಸಿದ್ದರಾಮಯ್ಯ ಮಾನ್ಯ ಯಡಿಯೂರಪ್ಪನವರೆ, ಕಳೆದ ಸಾರಿ ಯಿಂದಲೂ ಹೇಳುತ್ತಿದ್ದೇವೆ, ಆ ಪರ್‌ಫಾರ್ಮೆನ್ಸ್ ಬಜೆಟ್ ಬುಕ್ ಮಾಡಿ ಎಂದು ಹೇಳಿದರೆ ನೀವು ಮಾಡುವುದೇ ಇಲ್ಲ

(ಗೊಂದಲ)

ಅಧ್ಯಕ್ಷರು ಈಗ ಕೆಲವು ಇಲಾಖೆಗಳದು ಬಂದಿಲ್ಲ, ಇನ್ನು ಕಲವು ಇಲಾಖೆಗಳದು ಬಂದಿದೆ ಅದನ್ನು ಚೆಕ್‌ಅಪ್ ಮಾಡಿಸಿ ಕಳುಹಿಸುವ ವ್ಯವಸ್ಥೆ ಮಾಡಿಸುತ್ತೇನೆ

ಶ್ರೀ ಸಿದ್ದರಾಮಯ್ಯ ಬರಿ ಚೆಕ್ ಅಪ್ ಮಾಡಿದರೆ ಆಯಿತೇ? ನೀವು concerned minister ಗೆ ಹೇಳಬೇಕು, annual report ಅನ್ನು ನೀವು ಹೇಳಿದ ಮೇಲೆ, ನಾವು ಇಲ್ಲ ಪ್ರಸ್ತಾಪ ಮಾಡಿದ ಮೇಲೆ ಕಳುಹಿಸು ವುದಿಲ್ಲ demands discussions ಗೆ ಬರುತ್ತಿರುವಾಗಲೇ ಅವರು demands ಓದುತ್ತಾರೆ ಆಗ annual report ಇರಬೇಕೇ ಬೇಡವೇ?

ಶ್ರೀ ಬಸವರಾಜರಾಯ ರೆಡ್ಡಿ ಮಾನ್ಯ ಅಧ್ಯಕ್ಷರೆ, ಅಜೆಂಡಾದಲ್ಲಿ ಸುಮಾರು 15 demands ಅನ್ನು ಚರ್ಚೆಗೆ ಇಟ್ಟಿದ್ದೀರಿ ಇವುಗಳನ್ನು ಸಾರಾಸಗಟಾಗಿ ಸದಸ್ಯರಿಗೆ ಒಟ್ಟಿಗೆ ಸೇರಿಸಿಬಿಟ್ಟು ಕೊಡಲಿ

ಅಧ್ಯಕ್ಷರು ಆಯಿತು, ಕೊಡುತ್ತಾರೆ ಬಿಡಿ

ಶ್ರೀ ಬಸವರಾಜರಾಯ ರೆಡ್ಡಿ ಮಾನ್ಯ ಅಧ್ಯಕ್ಷರೆ, ನಿಮ್ಮ secretariat ನಿಂದ ಇದು ಮಾಡುವುದಕ್ಕಾಗುವುದಿಲ್ಲ unless ಅವರು ತಂದು ಕೊಟ್ಟು ನಿಮ್ಮ secretariatಗೆ ಮುಟ್ಟಿಸಿದರೆ, ಸಾಧ್ಯವಾಗುತ್ತದೆ ಅದಕ್ಕೆ ಅವರು ಎಲ್ಲವನ್ನೂ ಸೇರಿಸಿ ಕೊಡಲಿ

ಅಧ್ಯಕ್ಷರು ಕೆಲವು ನೆನ್ನೆ, ಮೊನ್ನೆಯ ಅಜೆಂಡಾದಲ್ಲಿ ಹೋಗಿದೆ ಎಂದು ಹೇಳುತ್ತಿದ್ದಾರೆ,

ಶ್ರೀ ಬಸವರಾಜರಾಯ ರೆಡ್ಡಿ ಕೆಲವೊಂದು ಬಂದಿಲ್ಲ ಅಧ್ಯಕ್ಷರೆ

ಶ್ರೀ ಎಸ್ ಎಸ್ ಪಾಟೀಲ್ ಅವುಗಳನ್ನೇ ಇವರು ಹೇಳಿಬಿಡುತ್ತಾರೆ ಅವು ವಾರ್ಷಿಕ ವರದಿಗಳು

ಶ್ರೀ ಬಸವರಾಜರಾಯ ರೆಡ್ಡಿ ಉದಾಹರಣೆಗೆ, Agriculture Department, Rural Development Department, Co-operation, Social Welfare Department ನದು ಬಂದಿಲ್ಲ ಹೀಗಾದರೆ ಬೇಡಿಕೆ ಮೇಲೆ ಮಾತನಾಡುವುದು ಹೇಗೆ?

ಅಧ್ಯಕ್ಷರು Check-up ಮಾಡಿಸಿ ಎಲ್ಲವನ್ನೂ ಕೊಡಿಸುತ್ತೇನೆ

4 ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿ ಮುಂದುವರಿದ ಚರ್ಚೆ

ವಿಷಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಕ್ಸಲೀಯರ ಚಟುವಟಿಕೆ ಕುರಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ(ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ನಾನು ಬೆಳಗ್ಗೆ ತಮ್ಮ ಹತ್ತಿರ ಬಂದು ಪತ್ರ ಕೊಟ್ಟು ಈ ರೀತಿ Naxalıtes ಜೊತೆ encounter ನಲ್ಲಿ ಸಾಮಾನ್ಯ ಜನರು ಸತ್ತಿದ್ದಾರೆ, ಅದನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ ಎಂದು ತಮಗೆ ಪತ್ರ ಕೊಟ್ಟಿದ್ದೆ ಅಷ್ಟೊತ್ತಿಗೆ ಕಾಂಗ್ರೆಸ್ ಪಕ್ಷದ ಸ್ನೇಹಿತರು ಆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು ಎಲ್ಲರೂ ಒಟ್ಟಿಗೆ ಚರ್ಚೆ ಮಾಡೋಣವೆಂದು ಹೇಳಿದರು ಈಗ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ ಅವರು ಹೇಳಿದ್ದನ್ನೇ ಮತ್ತೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಆ ಚರ್ಚೆಯಲ್ಲಿ ಪರ-ವಿರೋಧ ಎನ್ನುವ ಅಭಿಪ್ರಾಯ ಬಂತು ಪರ-ವಿರೋಧ ಎನ್ನತಕ್ಕಂಥದ್ದು ಬಹಳ ಅಪಾಯದ ವಿಚಾರವಾಗಿದೆ ಇಲ್ಲಿ ನಾವು Naxalıtes ಪರವಾಗಿಯೂ ಇರುವವರು ಯಾರೂ ಇಲ್ಲ, ವಿರೋಧ ಇರುವವರೂ ಇಲ್ಲ ನಾವು ಇಲ್ಲಿ ಜನರ ಪರವಾಗಿ ಇರುವವರು ಇದ್ದೇವೆ ನಾವು ನೀವು ಎಲ್ಲರೂ ಸೇರಿ ಜನರ ಪ್ರಾಣ ಉಳಿಸಬೇಕು ಜನರನ್ನು ನೋಯಿಸಬಾರದೆನ್ನುವುದು ನಮ್ಮ ಮುಖ್ಯವಾದ ಕಾಳಜಿಯಾಗಿದೆ Naxalıtes ರಾಕ್ಷಸರೇನೂ ಅಲ್ಲ ಅವರೂ ಕೂಡ ಜನರೇ ಪೊಲೀಸಿನವರೂ ಜನರೇ ಇವರೂ ಜನರೇ ಪೊಲೀಸರು ಆಗಬಹುದು, Naxalıtes ಆಗಬಹುದು, ಸಾಮಾನ್ಯ ಜನರಾಗಬಹುದು, ಹೀಗೆ ಯಾರಾದರೂ ಆಗಬಹುದು ಯಾರ ಪ್ರಾಣ ಹಾನಿಯಾಗತಕ್ಕಂಥದ್ದನ್ನು ನಾವು ಯಾರೂ ಒಪ್ಪಲಿಕ್ಕೆ ಸಾಧ್ಯವಿಲ್ಲ ಆದರೆ, ನಾವು ಪತ್ರಿಕೆಗಳ ವರದಿಗಳ ಮೇಲೆ ಆಧಾರವಾಗಿಟ್ಟುಕೊಂಡು ಇಲ್ಲಿ ಚರ್ಚೆಗಿಳಿದಿದ್ದೇವೆಂದು ಕೆಲವು ಸ್ನೇಹಿತರು ವಾದ ಮಾಡಿದ್ದುದ್ದೇನಿದೆ, ಅದು ಸರಿಯಲ್ಲ ನಿಮ್ಮ ಹೇಳಿಕೆಯಲ್ಲಿಯೇ ನೀವು ಹೇಳಿದ್ದೀರಿ ನಿಮ್ಮ ಹೇಳಿಕೆಯಲ್ಲಿ ಇಬ್ಬರು ಮಾತ್ರ ಅಪರಾಧಿಗಳು ಉಳಿದವರು ಅಪರಾಧಿಗಳಲ್ಲ ಇದು ನಿಮ್ಮ statement ಮತ್ತು polıce statement ಆಗಿದೆ ಈ ಬಗ್ಗೆ ಆಗಲೇ ಮಾನ್ಯ ರಮೇಶ್ ಕುಮಾರ್‌ರವರು ಬಹಳ ಸ್ಪಷ್ಟ ಮಾಡಿದ್ದಾರೆ ಈ

ನಿರಾಪರಾಧಿಗಳು ಸತ್ತರು ಅದಕ್ಕೆ ಯಾರನ್ನು ಹೊಣೆ ಮಾಡಬೇಕೆನ್ನುವ ಪ್ರಶ್ನೆ ಉದ್ಭವವಾಗಿದೆ ಎರಡನೆಯದಾಗಿ, ತಮ್ಮಲ್ಲಿ ಒಂದು request ಮಾಡಿಕೊಳ್ಳುತ್ತೇನೆ ಮತ್ತು ಸರ್ಕಾರದವರಿಗೆ ಹೇಳುವುದೇನೆಂದರೆ, ನೀವೇನು Naxalites ಎಂದು ಹೇಳುತ್ತಿದ್ದೀರಿ, ಅವರು ಮಾವೋವಾದಿಗಳೂ ಅಲ್ಲ, ಅವರು ಮಾರ್ಕ್ಸ್‌ವಾದಿಗಳೂ ಅಲ್ಲ ದುರಾದೃಷ್ಟವಶಾತ್ ಮಾವೋ ಏನು ಹೇಳಿದ್ದಾರೆನ್ನತಕ್ಕಂಥದ್ದನ್ನು ಒಂದು ಅಕ್ಷರವನ್ನೂ ಸಹ ಓದದಿರತಕ್ಕಂಥವರು ಮಾವೋವಾದಿಗಳೂ ಹೆಸರಿಸಿಕೊಳ್ಳುವುದು, ಅವರಿಗೆ ಮಾವೋವಾದಿಗಳೆಂದು ಇವರೂ ಸಹ ಹೇಳಿಬಿಡುವುದು ವ್ಯಕ್ತಿಗಳನ್ನು ಹತ್ಯೆ ಮಾಡತಕ್ಕಂಥದ್ದನ್ನು ಮಾರ್ಕ್ಸ್‌ವಾದ ಹೇಳಿಲ್ಲ, ಮಾವೋವಾದ ಹೇಳಿಲ್ಲ ಮಾವೋ ಚೀನಾದಲ್ಲಿ ಕ್ರಾಂತಿ ಮಾಡಿದರು ಯಾವ ವ್ಯಕ್ತಿಗಳನ್ನೂ ಸಾಯಿಸಲಿಲ್ಲ ಒಂದು ವ್ಯವಸ್ಥೆ ವಿರುದ್ಧ ಅವರು ಕ್ರಾಂತಿ ಮಾಡಿರುವುದು ಆದರೆ, ದುರಾದೃಷ್ಟವಶಾತ್ ನಕ್ಸಲೈಟ್ಸ್‌ಗಳನ್ನೆಲ್ಲಾ ಮಾವೋವಾದಿಗಳೆಂದು ಹೇಳಿ, ಆ ಮಹಾನ್ ಕ್ರಾಂತಿ ಕಾರಿಗೆ ಅಪಮಾನ ಮಾಡತಕ್ಕಂಥ ಸ್ಥಿತಿ ನಿರ್ಮಾಣವಾಗಿದೆ ಯಾವ ಕ್ರಾಂತಿಕಾರಿಯೂ ವ್ಯಕ್ತಿಗಳನ್ನು ಹತ್ಯೆ ಮಾಡತಕ್ಕಂಥದ್ದನ್ನು ಒಪ್ಪುವುದಿಲ್ಲ ಅದು ಕ್ರಾಂತಿಯಲ್ಲ ಮಾರ್ಕ್ಸ್‌ವಾದ ಅದನ್ನು ಯಾವತ್ತೂ ಹೇಳುವುದಿಲ್ಲ ಮಾರ್ಕ್ಸ್‌ವಾದ ಹೇಳತಕ್ಕಂಥದ್ದು ಒಂದು ವ್ಯವಸ್ಥೆಯ ವಿರುದ್ಧ ನಡೆಸತಕ್ಕಂಥ ಹೋರಾಟ ಒಂದು ವ್ಯವಸ್ಥೆಯನ್ನು ಬದಲು ಮಾಡಿ ಹೊಸ ವ್ಯವಸ್ಥೆಯನ್ನು ತರತಕ್ಕಂಥದ್ದೆಂದು ಅದಕ್ಕೆ ಹಿಂಸೆ ಮಾಡಿ ತರಬೇಕೆಂದು ಅವರು ಎಲ್ಲೂ ಹೇಳಲಿಲ್ಲ ಜನರನ್ನು ಕೊಂದು, ವ್ಯಕ್ತಿಗಳನ್ನು ಕೊಂದು, ಒಬ್ಬ ಜಮೀನ್ದಾರರನ್ನು ಸಾಯಿಸಿಬಿಟ್ಟರೆ ಜಮೀನ್ದಾರಿ ವ್ಯವಸ್ಥೆ ಹೋಗುವುದಿಲ್ಲ ಒಬ್ಬ ಬಂಡವಾಳಗಾರನನ್ನು ಗುಂಡಿಟ್ಟು ಸಾಯಿಸಿದರೆ ಬಂಡವಾಳಶಾಹಿ ವ್ಯವಸ್ಥೆ ಹೋಗುವುದಿಲ್ಲ ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು ದಯವಿಟ್ಟು ಅವರನ್ನು ಮಾವೋವಾದಿಗಳೆಂದೂ ಕರೆಯಬೇಡಿ, ಮಾರ್ಕ್ಸ್‌ವಾದಿಗಳೆಂದೂ ಕರೆಯಬೇಡಿ ಅವರು ಅದರ ವಿರುದ್ಧ ಇದ್ದಾರೆ ಅವರು ಅದರ ಹೆಸರಿನಲ್ಲಿ ನಿಜವಾದ ಬದಲಾವಣೆಯನ್ನು ತರತಕ್ಕಂಥ ಕ್ರಾಂತಿಯ ದಿಕ್ಕು ತಪ್ಪಿಸುವಂಥ ಕೆಲಸ ಮಾಡುತ್ತಿರತಕ್ಕಂಥವರು ಅವರನ್ನಿಟ್ಟು ಕೊಂಡು ಇಲ್ಲಿ ಮಾವೋವಾದಿಗಳು, ಮಾರ್ಕ್ಸ್‌ವಾದಿಗಳು, ಕಮ್ಯುನಿಸ್ಟರು ಎಂದು ಪ್ರಚಾರ ಮಾಡತಕ್ಕಂಥದ್ದೇನಿದೆ, ಅದು ಆ ತತ್ವಕ್ಕೆ ಮಾಡತಕ್ಕಂಥ ಅಪಚಾರ ಮೂರನೇ ಅಂಶವನ್ನು ನಾನು ಹೇಳುವುದಕ್ಕೆ ಇಷ್ಟಪಡತಕ್ಕಂಥದ್ದೇ ನೆಂದರೆ, ಯಾರೂ ಕೂಡ ವ್ಯಕ್ತಿಗಳನ್ನು ಕೊಲೆ ಮಾಡುವುದನ್ನು ಇಲ್ಲಿ

ಸಮರ್ಥನೆ ಮಾಡುವುದಕ್ಕಾಗುವುದಿಲ್ಲ ಮತ್ತು ಮಾಡ ಬಾರದು ಎಲ್ಲರ ಜೀವವೂ ಮುಖ್ಯವಾಗಿದೆ ಪ್ರತಿಯೊಬ್ಬ ಮನುಷ್ಯನ ಜೀವ ಕೂಡ ಬಹಳ ಮುಖ್ಯವಿದೆ ಮಾನವನ ಜೀವಕ್ಕೆ ನಾವು ಹೆಚ್ಚಿನ ಬೆಲೆ ಕೊಡಬೇಕಾಗಿದೆ ಆದರೆ, ಬೆಲೆ ಕೊಡಬೇಕೆನ್ನತಕ್ಕಂದ ಹೆಸರಿನಲ್ಲಿ ಕೊಲೆ 'ಮಾಡಿದವನನ್ನು, ಕೊಲೆಗೊಳಗಾದವನನ್ನು ಒಂದೇ ತಕ್ಕಡಿಗೆ ಹಾಕಿ ತೂಕ ಹಾಕಲಿಕ್ಕಾಗುವುದಿಲ್ಲ ಅದು ತಪ್ಪಾಗುತ್ತದೆ ಮಾನ್ಯ ಆರಗ ಜ್ಞಾನೇಂದ್ರರವರು ಮಾತನಾಡುತ್ತಾ ಊಟ ಕೊಡದಿದ್ದರೆ ಅವರು ಸಾಯಿಸುತ್ತೇವೆಂದು ಹೇಳುತ್ತಾರೆ, ಊಟ ಕೊಡದಿದ್ದರೆ ಪೊಲೀಸ್‌ನವರು ಸಾಯಿಸುತ್ತೇವೆಂದು ಹೇಳುತ್ತಾರೆ ಆ ಸಾಮಾನ್ಯ ಜನ ಎಲ್ಲಿಗೆ ಹೋಗಬೇಕು ಎನ್ನುವ ಅಂಶವನ್ನು ಹೇಳಿದರು ಇದು currect ಆದಂಥ point. ನಾನು ಅದನ್ನು ಒಪ್ಪುತ್ತೇನೆ ಈ ಸ್ಥಿತಿ ನಿರ್ಮಾಣ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟವರು ಯಾರು? ಈ ಸ್ಥಿತಿಯನ್ನು ನಿರ್ಮಾಣ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟವರು ಅಪರಾಧಿಗಳೋ? ಅಥವಾ ಇವರು ಅಪರಾಧಿಗಳೋ? ಎನ್ನುವುದನ್ನು ನಾವು ಇವತ್ತು ಚರ್ಚೆ ಮಾಡಬೇಕು ದರೋಡೆ ಮಾಡತಕ್ಕಂಥದ್ದು, ಹಣ ಸುಲಿಗೆ ಮಾಡತಕ್ಕಂಥದ್ದು, ವ್ಯಕ್ತಿಗಳನ್ನು ಸಾಯಿಸ ತಕ್ಕಂಥದ್ದು ಅದು ಎಂದೂ ಸಾಮಾಜಿಕ ಚಳುವಳಿಯಾಗುವುದಿಲ್ಲ ಇದರ ಬಗ್ಗೆ ನಮಗೆಲ್ಲ ಸ್ಪಷ್ಟವಾದ ತಿಳುವಳಿಕೆ ಇದೆ ಅದರ ಬಗ್ಗೆ ಯಾರ ಹತ್ತಿರವೂ ಪಾಠ ಹೇಳಿಸಿಕೊಳ್ಳತಕ್ಕಂಥ ಅವಶ್ಯಕತೆ ಮಾನ್ಯ ರಮೇಶ್‌ಕುಮಾರ್ ಗಾಗಲೀ, ನನಗಾಗಲೀ ಇಲ್ಲ ದರೋಡೆ ಮಾಡುವುದು, ಹಣ extract ಮಾಡುವುದು, ಇವೆಲ್ಲವನ್ನು ನಗರಗಳಲ್ಲಿರುವಂಥ lumped elements ಅವರು ಮಾಡತಕ್ಕಂಥ ಕೆಲಸವಾಗಿದೆ Escorts ಅನ್ನು ಹೆದರಿಸುವುದು, ದುಡ್ಡು ಕೇಳುವುದು ಇದೆಲ್ಲಾ ಈಗ mines ನಲ್ಲಿ ಸಹ start ಆಗಿದೆ ಇದು ಯಾವತ್ತೂ ಸಾಮಾಜಿಕ ಚಳುವಳಿ ಎಂದು ನಮ್ಮಂಥವರು ಸಮರ್ಥನೆ ಮಾಡಲಿಕ್ಕೆ ಸಾಧ್ಯವೇ ಇಲ್ಲ ಅದು ಸಾಮಾಜಿಕ ಚಳುವಳಿ ಅಲ್ಲ ಅದು actually anti-social elements ಮಾಡತಕ್ಕಂಥ ಕೆಲಸವಾಗಿದೆ ಆದರೆ, ಯಾವುದೇ ಸರ್ಕಾರವಾಗಲೀ, ಯಾವುದೇ ಪೊಲೀಸ್‌ನವರಾಗಲಿ, ಅವರಲ್ಲಿ ನನ್ನ ಮನವಿ ಏನೆಂದರೆ, ನೀವು ಎಲ್ಲಿಯವರೆಗೆ ಈ ಚಟುವಟಿಕೆಗಳನ್ನು ಬರೀ ಕಾನೂನು ವ್ಯವಸ್ಥೆಯ ಪ್ರಶ್ನೆ ಎಂದು ಪರಿಗಣನೆ ಮಾಡುತೀರೋ ಅಲ್ಲಿಯವರೆಗೂ ಈ ದುರಂತಗಳನ್ನು ತಪ್ಪಿಸಲಿಕ್ಕಾಗುವುದಿಲ್ಲ ಅದನ್ನು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದಷ್ಟೆ ಇದನ್ನು ಕೇವಲ ಕಾನೂನು

ಸುವ್ಯವಸ್ಥೆ ಪ್ರಶ್ನೆ ಎಂದು ಪರಿಗಣನೆ ಮಾಡಬೇಡಿ, ಕರ್ನಾಟಕದಲ್ಲಿ ಅವರ ಹೆಸರಿನಲ್ಲಿ ಇನ್ನೂ ಪ್ರಾರಂಭವಾಗಿದೆಯಷ್ಟೇ ಆಂಧ್ರಪ್ರದೇಶದಲ್ಲಿ, West Bengalನಲ್ಲಿ ಆ ಚಳುವಳಿ ಪ್ರಾರಂಭವಾಗಿ 35 ವರ್ಷಗಳಾಯಿತು

ಅಲ್ಲಿ ಆ ಚಳುವಳಿ ಪ್ರಾರಂಬವಾಗಿ 35 ವರ್ಷವಾಯಿತು ಛತ್ತೀಸ್ ಘಡ್, ಮಧ್ಯ ಪ್ರದೇಶ, ಆಂಧ್ರ ಪ್ರದೇಶ ಮತ್ತು ಒರಿಸ್ಸಾದಲ್ಲಿ ಈಗ ಅದು ನಡೆಯುತ್ತಿದೆ ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖಾಂತರ ಮಾನ್ಯ ಪ್ರಕಾಶ್‌ರವರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ ಬಂದೂಕಿನ ತುದಿಗಳಿಂದ ಅವರೂ ರಾಜ್ಯವನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ಬಂದೂಕನ್ನು ಬಳಸಿ ಆ ಚಳುವಳಿಗಳನ್ನು ದಮನ ಮಾಡುತ್ತೇವೆಂದು ಇವರೇನಾದರೂ ಅಂದುಕೊಂಡಿದ್ದರೆ, ಅದು ಮೂರ್ಖತನದ ಪರಮಾವಧಿಯಾಗುತ್ತದೆ ಈ ಜಗತ್ತಿನ ಇತಿಹಾಸ ನಮಗೆ ಭಾರೀ ಸ್ಪಷ್ಟವಾಗಿ ಹೇಳಿ ಕೊಟ್ಟಿದೆ, ಬಂದೂಕುಗಳನ್ನು ಹಿಡಿದು ಚಳುವಳಿಗಳನ್ನು ದಮನ ಮಾಡುವುದಕ್ಕಾಗು ವುದಿಲ್ಲ ಬಂದೂಕುಗಳನ್ನು ಮತ್ತು ಬಾಂಬ್‌ಗಳನ್ನು ಹಿಡಿದು ಒಂದು ವ್ಯವಸ್ಥೆಯನ್ನು 20–30 ಜನ ಸೇರಿಕೊಂಡು ಬದಲಾವಣೆ ಮಾಡುವುದಕ್ಕಾಗು ವುದಿಲ್ಲ ಅವರ ಆಲೋಚನೆಯೂ ತಪ್ಪು, ಇವರ ಆಲೋಚನೆಯೂ ತಪ್ಪು ಈ ರೀತಿ ಇಬ್ಬರೂ ಆಲೋಚನೆ ಮಾಡಿಕೊಂಡು ಹೋದರೆ, there is no end ಅದಕ್ಕೆ ಎಲ್ಲಿಯೂ ಕೊನೆ ಎಂಬುದೇ ಇರುವುದಿಲ್ಲ ಬಂದೂಕು ಮತ್ತು ಬಾಂಬ್‌ಗಳಿಂದ ಜಗತ್ತಿನಲ್ಲಿ ಸಾಧನೆ ಆಗಿರತಕ್ಕಂಥದ್ದು ಭಾರಿ ಕಡಿಮೆ ಸಾಧನೆಗಿಂತ ಅನಾಹುತಗಳಾಗಿರುವುದೇ ಜಾಸ್ತಿ ಕ್ರಾಂತಿ ಎಂದರೆ, ಅದೊಂದು ಜನ ಚಳುವಳಿ ಒಂದು ವ್ಯವಸ್ಥೆ ವಿರುದ್ಧ ಇನ್ನೊಂದು ವ್ಯವಸ್ಥೆಗೋಸ್ಕರ ಇಡೀ ಶೋಷಿತ ಜನಾಂಗ ನಡೆಸತಕ್ಕಂಥ ಒಂದು ಚಳುವಳಿ ಅಥವಾ ಹೋರಾಟವೇ ಹೊರತು ಅದು ಬಂದೂಕು ಮತ್ತು ಬಾಂಬ್‌ಗಳಿಂದ ನಡೆಸತಕ್ಕಂಥ ಹೋರಾಟವಲ್ಲ ಜನ ಚಳುವಳಿಗಳನ್ನು ಬಂದೂಕುಗಳಿಂದ ನಾವು ದಮನ ಮಾಡಬಹುದು ಎಂದು ಪೋಲೀಸ್‌ನವರೇನಾದರೂ ಅಂದುಕೊಂಡಿದ್ದರೆ, ಅದು ಮೂರ್ಖತನದ ಪರಮಾವಧಿಯಾಗುತ್ತದೆ ಮಾನ್ಯ ಅಧ್ಯಕ್ಷರೇ, ನಾನಿಷ್ಟೇ ಹೇಳಬಯಸುತ್ತೇನೆ ಬಂದೂಕುಗಳಿಂದ ನೀವು ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕಾಗುವುದಿಲ್ಲ ಬಂದೂಕುಗಳಿಂದ ಸಮಸ್ಯೆಯನ್ನು ಅವರೂ ಸಾಧನೆ ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ನೀವು ಈ ಬಂದೂಕಿನ ಸಂಸ್ಕೃತಿಯನ್ನು ಬಿಡಿ ಮಾನ್ಯ ಅಧ್ಯಕ್ಷರೇ, ಇದರಲ್ಲಿ

ಏನಾಗುತ್ತದೆ ಎಂದರೆ, ಇದರ ಬಗ್ಗೆ ನಿಮಗೆ ಗೊತ್ತಿರಬಹುದು ನಿಮಗೆ ಅನುಭವ ಇದೆ ಇಲ್ಲಿರುವ ಮಾನ್ಯ ವಾಟಾಳ್‌ರು, ನಾವು ಮತ್ತಿತರರೆಲ್ಲರೂ ಕೂಡ ಹೋರಾಟವನ್ನು ನಡೆಸಿ, ಅದರಿಂದ ಇಲ್ಲಿಗೆ ಬಂದಿರತಕ್ಕಂಥವರೇ ಆಗಿದ್ದೇವೆ ಆದರೆ ಸರ್ಕಾರಗಳು ಹಲವಾರು ಸಂದರ್ಭಗಳಲ್ಲಿ ಅಥವಾ ಹೆಚ್ಚಿನ ಸಂದರ್ಭಗಳಲ್ಲಿ ಜನ ಸಾಮಾನ್ಯರ ಚಳವಳಿಗಳನ್ನು ದಮನ ಮಾಡಲಿಕ್ಕೂ ಕೂಡ ಇದೇ ದಾರಿಯನ್ನು ಹಿಡಿಯುತ್ತಾರೆ ಇದು ದೇಶದಲ್ಲಿ ಇರತಕ್ಕಂಥ ಅಪಾಯವಾಗಿದೆ ಕಾರ್ಮಿಕರು ಹೋರಾಟದ ಹಾದಿ ಹಿಡಿದಿದ್ದಾರೆ ಕಾರ್ಮಿಕರು ತಮ್ಮ ಹಕ್ಕುಗಳಿಗೋಸ್ಕರ ಹೋರಾಟ ಮಾಡಿದರೆ, ಪೊಲೀಸ್‌ನವರನ್ನು ಅವರ ಮೇಲೆ ಛೂ ಬಿಡಲಾಗುತ್ತಿದೆ ಕೃಷಿ ಕಾರ್ಮಿಕರು 'ಕೂಲಿ ಜಾಸ್ತಿ ಬೇಕು' ಎಂದು ಹೋರಾಟ ನಡೆಸಿದರೆ, ಅವರ ಮೇಲೆ ಪೊಲೀಸ್‌ನವರನ್ನು ಬಿಡಲಾಗುತ್ತಿದೆ ಆ ಕೃಷಿ ಕಾರ್ಮಿಕರು ಶೋಷಣೆಗೆ ಒಳಗಾದ ಜನ ಅವರು ಹೋರಾಟ ಮಾಡುವಾಗಲೂ ಸಹ ಇವರು ಪೊಲೀಸ್‌ನವರನ್ನು ಉಪಯೋಗಿಸುತ್ತಾರಲ್ಲಾ! ಅದನ್ನು ನಾವು ಏನೆಂದು ಕರೆಯಬೇಕು? ಎಂದು ನೀವೇ ಹೇಳಿ ಇವತ್ತು ಬೆಂಗಳೂರಿನ ಉದಾಹರಣೆ ಕೊಡುವುದಾದರೆ, ಇಲ್ಲಿ ಕಾರ್ಮಿಕರು ಮೆರವಣಿಗೆ ಹೋಗಬೇಕೆಂದರೆ ಅದಕ್ಕೆ ಪೊಲೀಸ್‌ನವರು permission ತೆಗೆದು ಕೊಳ್ಳಬೇಕೆಂದು ಹೇಳುತ್ತಾರೆ ಯಾವುದೇ ಜನರು ಮೆರವಣಿಗೆ ತೆಗೆದುಕೊಂಡು ಬಂದು ಸರ್ಕಾರಕ್ಕೊಂದು ಮನವಿ ಕೊಡಬೇಕೆಂದರೆ, ಪೊಲೀಸ್‌ನವರು ಹೇಳಿದ ಕಡೆಯೇ ಹೋಗಬೇಕು ಪೊಲೀಸ್‌ನವರ ಹತ್ತಿರ ಅದಕ್ಕೆ permission ತೆಗೆದುಕೊಳ್ಳಬೇಕು ಸಭೆ ಮಾಡಲಿಕ್ಕಾಗುವುದಿಲ್ಲ, ಸಮಾರಂಭ ಮಾಡಲಿಕ್ಕಾಗುವುದಿಲ್ಲ ಇದು ಪ್ರಜಾಪ್ರಭುತ್ವದಲ್ಲಿ ನಡೆಯುತ್ತಿರುವಂಥದ್ದು ಇದರ ಬಗ್ಗೆ ಮಾನ್ಯ ವಾಟಾಳ್‌ರಿಗೆ ಅನುಭವವಿದೆ ಹಾಗಾಗಿ ನಕ್ಸಲೈಟ್‌ರನ್ನು ದಮನ ಮಾಡಬೇಕು ಎನ್ನತಕ್ಕಂಥದ್ದರ ಹೆಸರಿನಲ್ಲಿ, ನಾಳೆ ಇದೇ ಬಂದೂಕುಗಳು, ಇದೇ ಲಾರಿಗಳು ಜನ ಸಾಮಾನ್ಯರ ಚಳವಳಿಗಳನ್ನು ದಮನ ಮಾಡಲಿಕ್ಕೂ ಕೂಡ ಉಪಯೋಗಿಸುತ್ತಾರೆ ಇದು ಅಪಾಯ ಇರತಕ್ಕಂಥದ್ದು ಅದಕ್ಕೆ ನಮ್ಮ ವಿರೋಧವಿದೆ ನೀವು anti-social elements ಅನ್ನು ಮಟ್ಟ ಹಾಕಿ ನಿನ್ನೆ ಯಾವನೋ ಇಂದಿರಾನಗರದಲ್ಲಿ ಒಬ್ಬರಿಗೆ ಗುಂಡು ಹಾಕಿದ ಅವನನ್ನು ಕೊಲೆ ಮಾಡಿದರೆ, ನಾವೇನು ನಿಮ್ಮನ್ನು ತಕರಾರೇ ಮಾಡುತ್ತಿರಲಿಲ್ಲ, ಪ್ರಶ್ನೆಯನ್ನೇ ಮಾಡುತ್ತಿರಲಿಲ್ಲ ಆದರೆ ನೀವು ಕೊಲೆ ಮಾಡಿರುವ, ಸತ್ತಿರುವ ಈ ಮೂವರು ಜನರ್ಯಾರು? ನೀವು, ಅವರ

ಮನೆಯಲ್ಲಿ ಏಕೆ ಇವರಿಗೆ ಆಶ್ರಯ ಕೊಡಬೇಕೆನ್ನುತ್ತೀರಿ? ಅದಕ್ಕೆ ಮಾನ್ಯ ಜ್ಞಾನೇಂದ್ರರವರು ಆಗಲೇ ಹೇಳಿದರು ಆಶ್ರಯ ಕೊಡಲಿಲ್ಲವೆಂದರೆ ಅವರು ಸಾಯಿಸುತ್ತೇವೆ ಎನ್ನುತ್ತಾರೆ, ಆಶ್ರಯ ಕೊಟ್ಟರೆ ನೀವು ಸಾಯಿಸುತ್ತೀರಿ ಹಾಗಾದರೆ ಆ ಸಾಮಾನ್ಯ ಜನರ ಪಾಡು ಏನಾಗಬೇಕು? ಎಂಬುದನ್ನು ನೀವೇ ಹೇಳಿ ಅವರಿಗೆ ರಕ್ಷಣೆ ಕೊಡುವವರು ಯಾರು? ಈ ಮೂರೂ ಜನ ನಿಮ್ಮ ಪ್ರಕಾರವೇ ಯಾವ ಅಪರಾಧದಲ್ಲೂ ಭಾಗವಹಿಸಿರತಕ್ಕಂಥವರಲ್ಲ ಅವರು ಸತ್ತರು ಅವರು ಸತ್ತಿದ್ದಕ್ಕೆ ನೀವು ಕೊಡತಕ್ಕಂಥ ಕಾರಣ, ಅವರು ನಕ್ಸಲೈಟ್‌ಗಳಿಗೆ ಆಶ್ರಯ ಕೊಟ್ಟಿದ್ದರು ಆ ಕಾರಣ ಹೇಳಿ ಈ ಮೂರೂ ಜನ ಸತ್ತದ್ದನ್ನು ಸಮರ್ಥನೆ ಮಾಡಿಕೊಳ್ಳುತ್ತಿರಿ ಇದು ನ್ಯಾಯವೇ? ಇದಕ್ಕೆ ಯಾರು ಜವಾಬ್ದಾರರು? ಇವರು ಮುಗ್ಧರು, ಇವರ ಪ್ರಾಣಗಳ ರಕ್ಷಣೆಗೆ ಇವತ್ತು ಯಾರು ಜವಾಬ್ದಾರಿ ಹೊತ್ತುಕೊಳ್ಳುತ್ತಾರೆ? ಈ ರೀತಿಯಲ್ಲಿ ಈ ಮುಗ್ಧರನ್ನು ಕೊಲೆ ಮಾಡತಕ್ಕಂಥದ್ದು ಈ ರಾಜ್ಯದಲ್ಲಿ ನಡೆಯುತ್ತಿದ್ದರೆ, ಈ ಸದನ ಸುಮ್ಮನೆ ಮೌನ ಪ್ರೇಕ್ಷಕರಾಗಿ ಕುಳಿತಿರಬೇಕೆಂದು ನಿರೀಕ್ಷೆ ಮಾಡಿದರೆ ಹೇಗೆ? ಅದರ ಬಗ್ಗೆ ಮಾತನಾಡಿದರೆ, ನೀವು ನಕ್ಸಲೈಟ್ ಪರವಾಗಿ ಸಮರ್ಥನೆ ಮಾಡುತ್ತಿದ್ದೀರಿ ಎನ್ನುತ್ತೀರಿ ನಾವು ಖಂಡಿತಾ ಅದನ್ನು ಸಮರ್ಥನೆ ಮಾಡುತ್ತಿಲ್ಲ, ನಾನಂತೂ ಮಾಡುವುದಿಲ್ಲ I am a last man to support it But, ಅದರ ಹೆಸರಿನಲ್ಲಿ ಈ ಮೂರು ಮುಗ್ಧ ಜೀವಿಗಳನ್ನು ಸಾಯಿಸಿದ್ದೀರಲ್ಲ, ಇದಕ್ಕೆ ಯಾರು ಹೊಣೆ? ಇನ್ನಿಬ್ಬರು ಸತ್ತಿದ್ದಕ್ಕೆ ನಾವು ನಿಮ್ಮನ್ನು ಹೊಣೆ ಮಾಡುತ್ತಿಲ್ಲ ಈ ಮೂರು ಜನ ಸತ್ತದ್ದಕ್ಕೆ ಯಾರು ಹೊಣೆ ಹೊರಬೇಕು? ಮಾನ್ಯ ಜ್ಞಾನೇಂದ್ರರವರು ಹೇಳಬೇಕು ಅವರೇ ಹೇಳಿದ ಪ್ರಕಾರ, ಅವರು ಹೇಳಿದ್ದು ನೂರಕ್ಕೆ ನೂರರಷ್ಟು ಸತ್ಯ ಈ ಮೂರು ಜನ ಮುಗ್ಧರು ಸತ್ತರಲ್ಲಾ, ಇದಕ್ಕೆ ಯಾರ ಹೊಣೆಗಾರಿಕೆ? ಇದಕ್ಕೆ ಯಾರನ್ನು ಹೊಣೆಗಾರಿಕೆ ಮಾಡಬೇಕು ಎಂಬ ಬಗ್ಗೆ ಇವತ್ತು ನೀವು ತೀರ್ಮಾನ ಮಾಡಬೇಕು ಇದಕ್ಕೆ ಯಾರನ್ನು ಹೊಣೆ ಮಾಡಬೇಕು? ಇದಕ್ಕಾಗಿ ಯಾರಿಗೆ ಶಿಕ್ಷೆ ಕೊಡಬೇಕು? ಯಾವ ರೀತಿ ಶಿಕ್ಷೆ ಮಾಡಬೇಕು? ಕಾವೇರಿ ನಕ್ಸಲೈಟೇ? ನೀವೇ ಹೇಳಿದ್ದೀರಿ, ಪೇಪರ್‌ನಲ್ಲಿ ಬಂದಿರುವುದನ್ನು ನಂಬುವುದಿಲ್ಲ ಪೇಪರ್‌ನಲ್ಲೊಂದು ಸುದ್ದಿ ಬಂದಿದೆ ಕಾವೇರಿ ರಾಜಿ ಆಗಲಿಕ್ಕೆ, surrender ಆಗಲಿಕ್ಕೆ ತಯಾರಾಗಿ ಬಂದಳು, ಆದರೆ ಅವರು ಬಿಡಲಿಲ್ಲವೆಂದು ಸುದ್ದಿ ಪ್ರಕಟವಾಗಿದೆ ನನಗೆ ಗೊತ್ತಿಲ್ಲ, if it is a fact ಅದಕ್ಕೆ ನಿಮ್ಮanswer ಏನು? ನಿಮ್ಮಜೊತೆಗೆ surrender ಆಗಲಿಕ್ಕೆ

ಬಂದರು ಎಂದು ನೀವು ಹೇಳುತ್ತೀರಲ್ಲಾ? ಹಾಗೆಂದು ನಿಮಗೆ ಹೇಳಿದವರು ಯಾರು? ಮನೆಯಲ್ಲಿದ್ದವರು ಯಾರಾದರು ಹೇಳಿರಬೇಕಲ್ಲವೇ? ಅವರ ಮನೆಯಲ್ಲಿ ಒಳಗಡೆ ಇದ್ದವರು ಆ ರೀತಿ ಹೇಳಿರಬೇಕು ,ನಿಮ್ಮ ಪ್ರಕಾರವೇ ಹೆಣಗಳು ಇದ್ದದ್ದು ಎಲ್ಲಿ? ಅಡಿಗೆ ಮನೆಯಲ್ಲಿ ಮೂರು ಹೆಣಗಳು ಅಡಿಗೆ ಮನೆಯಲ್ಲಿದೆ, ಇನ್ನು ಉಳಿದ ಎರಡು ಹೆಣಗಳು ಆಚೆ ಕಡೆ ಇದೆ ಕಾವೇರಿ surrender ಆಗಲಿಕ್ಕೆ ತಯಾರಾಗಿದ್ದರು, ಆದರೆ ಅವರನ್ನು ನಕ್ಸಲೈಟ್‌ರು ತಡೆದರು ಎಂದು ಇದೆ ಇದು ಪೇಪರ್‌ನಲ್ಲಿ ಇರತಕ್ಕಂಥ ಸುದ್ದಿ ನಿಮ್ಮಹತ್ತಿರ ಅದು ಇಲ್ಲ ಅದು ಸತ್ಯವೋ ಸುಳ್ಳೋ ನನಗೆ ಗೊತ್ತಿಲ್ಲ ಅದು ಸತ್ಯವಾದರೆ ಇದಕ್ಕೆ ಯಾರು ಹೊಣೆ? ಅವರ ಮೇಲೆ ಯಾವುದೇ ಅಪರಾಧ ಇಲ್ಲ, ಕೇಸ್ ಇಲ್ಲ ಹಾಗಾದರೆ ಇದಕ್ಕೆ ಯಾರು ಹೊಣೆ? ಅದು ಸತ್ಯ ಆಗಿದ್ದರೆ, surrender ಆಗಲಿಕ್ಕೆ ಬಂದರೂ ಸಾಯಿಸಿದ್ದೀರಲ್ಲಾ? ಒಂದು ವೇಳೆ ಅದು ಸತ್ಯ ಆಗಿಲ್ಲವೆಂದು ಇಟ್ಟುಕೊಳ್ಳೋಣ If it is not a fact, ಮಾನ್ಯ ಪ್ರಕಾಶ್‌ರವರೆ, encounter ಮಾಡಿದಾಗ ಅಡಿಗೆ ಮನೆಯಲ್ಲಿ ಶವಗಳು ಬೀಳುತ್ತವೆಯೇ? Encounter ನಡೆಯುವುದು ಎಂದರೆ ಏನರ್ಥ? Encounter ಎಂದರೆ ಏನು? It is a ನೇರ ಸಂಘರ್ಷ between Police and Naxalites ಅವರೂ ಬಂದೂಕು ಎತ್ತಿಕೊಂಡು ಸುಡಬೇಕು, ಇವರೂ ಬಂದೂಕು ಎತ್ತಿಕೊಂಡು ಸುಡುತ್ತಿರಬೇಕು ಅದು real encounter If it is a real encounter ಅಡಿಗೆ ಮನೆಯಲ್ಲಿ ಹೇಗೆ ಮೂರು ಶವ ಇತ್ತು? ಅಡಿಗೆ ಮನೆಯಲ್ಲಿ encounter ನಡೆಯಿತೇ? ಅಲ್ಲಿಂದ ಶೂಟ್ ಮಾಡುತ್ತಿದ್ದರೆ, ಅಡಿಗೆ ಮನೆಯಲ್ಲಿ ಇದ್ದವರಿಗೆ ಹೊರಗಡೆ ಗೋಡೆ ಅಡ್ಡ ಇದೆ, ಮನೆ ಇದೆ ಮನೆಯ ಒಳಗಡೆ ಅಡಿಗೆ ಮನೆಯಲ್ಲಿ ಇದ್ದವರಿಗೆ ನೇರವಾಗಿ ಗುರಿಯಿಟ್ಟು ಹೊಡೆಯಲಿಕ್ಕೆ ಆಗುತ್ತದೆಯೇ? ಅದು ಹೇಗೆ ಸಾಧ್ಯವಾಗುತ್ತದೆ ಹೇಳಿ? ಈಗ ನಾವೆಲ್ಲಾ ಸದನದಲ್ಲಿ ಕುಳಿತಿದ್ದೇವೆ ನಾವು ಇಲ್ಲಿಂದ ಬಂದೂಕನ್ನು ಹಾರಿಸೋಣ ಹೊರಗಡೆ ಇರುವವರು ಕರೆಕ್ಟಾಗಿ ನಮ್ಮ ಮೂರು ಜನಕ್ಕೇ ಗುಂಡು ಹಾರಿಸಲಿಕ್ಕಾಗುತ್ತದೆಯೇ? ಗೋಡೆ ಅಡ್ಡವಿಲ್ಲವೇ? glass ಅಡ್ಡವಿಲ್ಲವೇ? If it is a real encounter ಅಡಿಗೆ ಮನೆಯಲ್ಲಿ ಹೇಗೆ ಶವ ಬೀಳುತ್ತದೆ ಎಂಬುದನ್ನು ನೀವೇ ಹೇಳಿ ನಿಮ್ಮ statement ಪ್ರಕಾರ ನೀವು ಒಳಗಡೆ ಹೋಗಿಲ್ಲ, ಒಳಗಡೆಯಿಂದ ಗುಂಡು ಹಾರಿಸಿದರು, ನಾವೂ ಗುಂಡು ಹಾರಿಸಿ ಪ್ರತಿ ದಾಳಿ ಮಾಡಿದೆವು, ಅದರಿಂದ ಸತ್ತಿದ್ದಾರೆ If it is a real

encounter, ಅಡಿಗೆ ಮನೆಯಲ್ಲಿ ಇದ್ದವರನ್ನು ಹೊರಗಡೆ ಯಿಂದ ಹೇಗೆ ಶೂಟ್ ಮಾಡಲಿಕ್ಕೆ ಹೇಗೆ ಸಾಧ್ಯವಿದೆ ಎಂಬುದನ್ನು ನೀವೇ ಹೇಳಿ ಆದ್ದರಿಂದ ಮಾನ್ಯ ಅಧ್ಯಕ್ಷರೆ, ಇವರಿಬ್ಬರು ಹೇಳುವುದರಲ್ಲೂ ಸತ್ಯಾಂಶವಿಲ್ಲ ಪೊಲೀಸ್‌ನವರು ಹೇಳುವುದರಲ್ಲೂ ಸತ್ಯಾಂಶವಿಲ್ಲ ಇಲ್ಲಿ ಇನ್ನೊಂದು ವಾದ ಬಂತಲ್ಲಾ, ಅದರಲ್ಲೂ ಸತ್ಯಾಂಶವಿಲ್ಲ Truth lies some where else ಅದನ್ನು find out ಮಾಡಿ ಯಾರನ್ನು ಯಾರೂ ಸಮರ್ಥನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ ಎಲ್ಲಾ ಮಾನವ ಜೀವಿಗಳ ಜೀವವೂ valuable ಆಗಿರುತ್ತದೆ ಒಬ್ಬರದು ಕಡಿಮೆ valuable, ಇನ್ನೊಬ್ಬರದು ಹೆಚ್ಚು valuable ಎಂದೇನೂ ಇಲ್ಲ ಎಲ್ಲರ ಜೀವಕ್ಕೂ ಒಂದೇ value ಇದೆ ಅದಕ್ಕೇನು ಬೆಲೆ ಕಟ್ಟುತ್ತೀರೋ, ಅದನ್ನು ನೀವು ಕೊಡಿ, ಆಮೇಲೆ ನೀವು ಮಾತನಾಡಿ ಆದ್ದರಿಂದ ಇವತ್ತು ನಕ್ಸಲೈಟ್‌ರನ್ನು ದಮನ ಮಾಡತಕ್ಕಂಥ ಹೆಸರಿನಲ್ಲಿ ಅಮಾಯಕರನ್ನು ಕೊಲ್ಲುವುದು ಸರಿಯಲ್ಲ ನಾನು ಮಾನ್ಯ ಜ್ಞಾನೇಂದ್ರರವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ನೀವೂ ಹೋರಾಟ ಮಾಡಿ ರಾಜಕೀಯಕ್ಕೆ ಬಂದವರು, ಚಳುವಳಿಗಳನ್ನು ಮಾಡಿ ಬಂದವರು ನಾವೂ ಮಾಡಿ ಬಂದವರು ನಾಳೆಯೂ ನಾವು ಹೋರಾಟ ಮಾಡಬೇಕಾಗುತ್ತದೆ ನಿಮಗೆ ಅಧಿಕಾರ ಶಾಶ್ವತವಲ್ಲ ನಮಗಂತೂ ಅದು ಬರುವುದೇ ಇಲ್ಲ ಬಿಡಿ ನಾವು ಜನರ ಜೊತೆಗೆ ಹೋರಾಟ ಮಾಡತಕ್ಕವರು ನಾಳೆ ಇನ್ನೊಂದು ಯಾವುದೇ ಸರ್ಕಾರ ಬಂದು, ಜನರ ಪರವಾಗಿ ಚಳವಳಿ ಮಾಡುವವರೆಲ್ಲಾ anti-social elements, ನಕ್ಸಲೈಟ್ಸ್ ಎಂದು brand ಮಾಡಿ, ನಮ್ಮನ್ನೆಲ್ಲಾ ಕರೆದುಕೊಂಡು ಹೋಗಿ ಜೈಲಿಗೆ ಒದ್ದು ಹಾಕಿ, ನಮ್ಮನ್ನೆಲ್ಲಾ ಶೂಟ್ ಮಾಡಿದರೆ, ಅದಕ್ಕೆ ಅವತ್ತು ನೀವೇನು ಉತ್ತರ ಕೊಡುತ್ತೀರಿ? ಇವತ್ತು ಆ ಪರಿಸ್ಥಿತಿ ಪ್ರಾರಂಭವಾಗಿದೆ

ಶ್ರೀ ಆರಗ ಜ್ಞಾನೇಂದ್ರ, ಒಂದು ನಿಮಿಷ

ಶ್ರೀ ಜಿ ವಿ ಶ್ರೀರಾಮರೆಡ್ಡಿ `ಇರಿ ನಾನು ನೀವು ಮಾತನಾಡುವಾಗ ಅಡ್ಡ ಬಂದಿಲ್ಲ

ಶ್ರೀ ಆರಗ ಜ್ಞಾನೇಂದ್ರ, ನನ್ನ ಹೆಸರು ಉಲ್ಲೇಖ ಮಾಡಿದ್ದರಿಂದ, ನಾನು ಒಂದು ನಿಮಿಷ ಮಾತನಾಡುತ್ತೇನೆ ಸಾರ್, ಜನಪರವಾದಂತಹ

ಚಳವಳಿಯನ್ನು ನಾವೂ ಮಾಡಿದ್ದೇವೆ Emergencyಯಲ್ಲಿ ನಾವೂ ಚಳವಳಿ ಮಾಡಿದೆವು, ನಮ್ಮನ್ನು ಎಳೆದುಕೊಂಡು ಹೋಗಿ 4-5 ತಿಂಗಳು ಜೈಲಿಗೆ ಹಾಕಿದರು ನಮಗೇನು ಆಗ ಕಡಿಮೆ ಹಿಂಸೆ ಕೊಡಲಿಲ್ಲ ಆದರೆ ಬಂದೂಕು ಹಿಡಿದುಕೊಂಡು ಚಳವಳಿ ಮಾಡುವವರ ವಿರುದ್ಧ ಬಡಿಗೆ ಹಿಡಿದುಕೊಂಡು control ಮಾಡಲಿಕ್ಕಾಗುತ್ತದೆಯೇ? ಅವರೂ ಬಂದೂಕು ಹಿಡಿದುಕೊಳ್ಳಬೇಕಾಗುತ್ತದೆ ಬಂದೂಕು ಹಿಡಿದುಕೊಂಡು ಜನಪರವಾದಂತಹ ಚಳವಳಿ ಮಾಡುತ್ತೇವೆಂದರೆ, ಅದನ್ನು ನಾವು ಮತ್ತು ನೀವು ಒಪ್ಪುವುದಕ್ಕಾಗುತ್ತ ದೆಯೇ? ಸಾರ್, ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸಾರ್, ನಾನು ಒಪ್ಪುವುದಿಲ್ಲವೆಂದು ಪ್ರಾರಂಭದಲ್ಲೇ ಹೇಳಿದ್ದೇನೆ ನಾನು ಒಪ್ಪುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಬಂದೂಕಿನಿಂದ ಚಳವಳಿ ಮಾಡಿ ದೇಶ ಕಟ್ಟುತ್ತೇವೆಂದರೆ ಅದು ಸಾಧ್ಯವಿಲ್ಲ, ಬಂದೂಕಿನ ಜನರನ್ನು ದಮನ ಮಾಡಿ ನಾವು ರಾಜ್ಯ ಆಳುತ್ತೇವೆಂದರೆ, ಇದೂ ಸಾಧ್ಯವಿಲ್ಲ ಈ ಎರಡು ನಾವು ಇತಿಹಾಸದಲ್ಲಿ ಕಲಿತಿರತಕ್ಕಂಥ ಪಾಠ

ಶ್ರೀ ಕೆ ಆರ್ ರಮೇಶ್‌ಕುಮಾರ್ ವಿಯಟ್ನಾಂನಲ್ಲಿ ಅಮೇರಿಕಾ ದವರು 14 ವರ್ಷಗಳ ಕಾಲ ಯುದ್ಧ ಮಾಡಿ,

ಶ್ರೀ ಜಿ ವಿ ಶ್ರೀರಾಮರೆಡ್ಡಿ Longest war ın the hıstory

ಶ್ರೀ ಕೆ ಆರ್ ರಮೇಶ್ ಕುಮಾರ್ Longest war ın the hıstory 14 ವರ್ಷ ಬಾಲ ಮಡಿಚಿಕೊಂಡು ವಾಪಾಸ್ ಬಂದರು Any suppressıon wıll always be met wıth counter suppressıon That ıs logıc, ಅವರು ಬಂದೂಕು ಹಿಡಿದುಕೊಂಡು ಹೋಗುವುದನ್ನು ನಾವು ಎಂಡಾರ್ಸ್ ಮಾಡುತ್ತಿಲ್ಲ

ಶ್ರೀ ಎಂ ಪ್ರಕಾಶ್ ಅವರು ಫ್ರೆಂಚ್ ಕಲೋನಿಸ್ ವಿರುದ್ಧ ಹೋರಾಟ ಮಾಡಿದರು, ಅದಾದ ನಂತರ ಅಮೇರಿಕಾದ ಜೊತೆ ಹೋರಾಟ

ಮಾಡಿದರು, ಅದಾದ ನಂತರ ಚೈನಾದ ವಿರುದ್ಧವಾಗಿಯೂ ಹೋರಾಟ ಮಾಡಿದರು ಅವರು ಮಾವೋವಾದಿಗಳು ಅವರಿಗೆ ಸಪೋರ್ಟ್ ಮಾಡಿದಂಥ ಚೈನಾ ಕೂಡಾ ದುರಾಕ್ರಮಣ ಮಾಡುವುದಕ್ಕೆ ಹೋಯಿತು ಅದಕ್ಕೆ ವಿಯಟ್ನಾಂಗಳು ಇವತ್ತಿಗೂ ಹುಲಿಗಳೇ?

ಶ್ರೀ ಕೆಆರ್ ರಮೇಶ್ ಕುಮಾರ್ That was the biddest irony ಪಾಲ್‌ಪಾರ್ಟ್‌ಗೆ back ಮಾಡಿದರು ಇವರು ಚೈನಾದವರು ಬ್ಯಾಕ್ ಮಾಡಿದರು ನಾನೇನು ಹೇಳುತ್ತೇನೆಂದರೆ, ನಾವು ಅವರು ಕೋವಿ ಹಿಡಿದುಕೊಂಡು ಹೋಗುವುದನ್ನು ಸಮರ್ಥನೆ ಮಾಡುತ್ತಿಲ್ಲ ಅವರು ಕೋವಿ ಹಿಡಿದುಕೊಂಡು ಹೋಗಿದ್ದಾರೆ, ಅವರು ಬಹಳ ಪರಾಕ್ರಮ ಶಾಲಿಗಳು, ಅವರನ್ನು ಬಿಡಿ ಎಂದು ನಾವು ಹೇಳುತ್ತಿಲ್ಲ ಯಾರು ಹೊಗುತ್ತಿದ್ದಾರೆ, ಏತಕ್ಕೆ ಹೋಗುತ್ತಿದ್ದಾರೆ ಎಂಬುದನ್ನು ವೈಜ್ಞಾನಿಕವಾಗಿ ಹುಡುಕಿ ಅರೆಸ್ಟ್ ಮಾಡುವುದು ನಮ್ಮ ಕರ್ತವ್ಯ ಇಲ್ಲವೆಂದರೆ ಈ ವ್ಯವಸ್ಥೆಯಲ್ಲಿ ನಾವು ಈ ಸದನದಲ್ಲೇ ಇರುವುದಕ್ಕಾಗುವುದಿಲ್ಲ, ಅವರ ಕೈಗೆ ಈ ರಾಜ್ಯವನ್ನು ಕೊಟ್ಟುಬಿಟ್ಟರೆ ಅವರೇ ಇಲ್ಲಿ ಬಂದು ಕುಳಿತುಕೊಂಡುಬಿಡುತ್ತಾರೆ ಅದಕ್ಕೆ ನಾವು ಸಮರ್ಥನೆ ಮಾಡುತ್ತಿಲ್ಲ, ಮಾಡುವಾಗ ಹುಂಬತನವಿರಬಾರದು, ಬಹಳ ಎಚ್ಚರಿಕೆ ಇರಬೇಕು, ದೂರದೃಷ್ಟಿ ಇರಬೇಕು, ವಿವೇಚನೆ ಇರಬೇಕು, ಜವಾಬ್ದಾರಿ ಇರಬೇಕು ಬಂದೂಕು ಕೊಟ್ಟಿದ್ದಾರೆ, ಗುಂಡಿದೆ, ನಾವೇನು accountable ಅಲ್ಲವೆಂದು ಬಾರಿಸುತ್ತಾ ಹೋದರೆ, that is not the way Point blank range ನಿಂದ ಹೊಡೆದಿದ್ದಾರೆ, ಹೇಗೆ ಹೊಡೆಯಬೇಕೆಂದು ನಿಯಮಾವಳಿಗಳಿಲ್ಲವೇ? ಮಣ್ಣಿನಲ್ಲಿ ಕಟ್ಟಿರುವ ಆ ಮನೆಗೆ ಅಷ್ಟೊಂದು ಬುಲೆಟ್ ಹೊಡೆಯುವ ಅಗತ್ಯವಿದೆಯೇ? ಎಲ್ಲೂ ಬುಲೆಟ್ ಹೊಡೆಯುವುದಕ್ಕೆ ಅವಕಾಶವೇ ಸಿಗಲಿಲ್ಲವೆಂದು ಪಟಾಕಿ ಹೊಡೆದಂತೆ ಹೊಡೆದು ಬಿಸಾಕಿ ಬಿಟ್ಟರು ಇದನ್ನೆಲ್ಲಾ ಮಾತನಾಡಿದರೆ ಏನಾಗುತ್ತದೆಂದರೆ, ಇಲಾಖೆಯ ಮೊರೇಲ್ ಕಡಿಮೆಯಾಗುತ್ತದೆ ನಾವು ಎಲ್ಲಿಯೂ ಎಚ್ಚರ ತಪ್ಪಿಯೂ ಕೂಡ ಇಲಾಖೆಯ ಗೌರವ ಕಡಿಮೆಯಾಗದಂತೆ ಮಾಡಬೇಕು ಅವರು ಗೌರವದಿಂದ ನಡೆದುಕೊಳ್ಳಬೇಕಲ್ಲ, ಅವರ ಗೌರವಕ್ಕೆ ಚ್ಯುತಿ ಬಾರದಂತೆ ನಾವು ನಡೆದುಕೊಳ್ಳಬೇಕು, ಗೌರವಸ್ಥರಂತೆ ನಡೆದುಕೊಳ್ಳುವ ಜವಾಬ್ದಾರಿ ಅವರಿಗೂ ಇರುತ್ತದೆ ಅವರು ಗೌರವಸ್ಥರಂತೆ ನಡೆದುಕೊಳ್ಳದೆ ಗೌರವ ಕೊಡಬೇಕೆಂದು ಅಪೇಕ್ಷೆ ಮಾಡಿದರೆ ಸ್ವಲ್ಪ ಕಷ್ಟವಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಬೆಳಿಗ್ಗೆ ತಮ್ಮ [ಗೃಹ ಸಚಿವರು] ಭಾಷಣವನ್ನು ಕೇಳಿದ್ದು ನಿಜ, ಅದಕ್ಕೆ ನಮ್ಮ ಸಹಮತವಿದೆ ಆದರೆ ನಾವು ಮಾತನಾಡುವ ವಸ್ತುಸ್ಥಿತಿ, ಇವತ್ತು ನಡೆದಿರುವ ಪರಿಸ್ಥಿತಿಯ ಬಗ್ಗೆಯೇ ಹೊರತು, ಹಿಂದೆ ಆಗಿರುವುದು ಸರಿ ಎಂದು ಯಾರೂ ಹೇಳುವುದಿಲ್ಲ ಆಮೇಲೆ ಬಂದೂಕಿನ ಮೇಲೆ ರಾಜಕಾರಣ, ರಾಜಕೀಯ ಚಳವಳಿ ನಡೆಯುತ್ತದೆಂಬುವುದನ್ನು ಯಾರು ಒಪ್ಪುವುದಿಲ್ಲ, ಯಾವತ್ತು ಒಪ್ಪುವುದಕ್ಕೆ ಸಾಧ್ಯವಿಲ್ಲ, ಯಾವತ್ತು ನಡೆದೂ ಇಲ್ಲ, ಅದು ಪ್ರಪಂಚದಲ್ಲೇ ಉಳಿದಿಲ್ಲ ಬಂದೂಕಿನ ಮೇಲೆ ನಡೆಯುವ ಯಾವುದೇ ರಾಷ್ಟ್ರಗಳು ಪ್ರಪಂಚದಲ್ಲಿ ಇದುವರೆಗೆ ಬದುಕಿಲ್ಲ ನಿನ್ನೆ ನೀವು [ಆರಗ ಜ್ಞಾನೇಂದ್ರ] ನಿಮ್ಮಭಾಗದಲ್ಲಿ ಯಾವ್ಯಾವ ರೀತಿಯ ಭಯೋತ್ಪಾದನೆ ಇದೆ, ಓಡಾಡುವುದಕ್ಕಾಗುತ್ತಿರುವ ತೊಂದರೆಗಳೆಲ್ಲಾ ಬಗ್ಗೆ ಚೆನ್ನಾಗಿ ಮಾತನಾಡಿದಿರಿ, ಈ ಸದನದಲ್ಲಿ ಅನೇಕ ಸಾರಿ ನಡೆದಿದೆ ಸಾಮಾನ್ಯವಾಗಿ ಅಷ್ಟು ಉದ್ವೇಗದಿಂದ ಮಾತನಾಡ ತಕ್ಕಂಥವರು, ಬೆಳಿಗ್ಗೆ ಮಾತನಾಡುವಾಗ, ಒಂದು ಮಾತನಾಡಿದರೆ ಏನಾಗುತ್ತದೆಯೋ ಎನ್ನುವ ಭಾವನೆಯಿಂದ ಮಾತನಾಡಿದಿರಿ, ಇದೆಲ್ಲವೂ ನಮಗೆ ಅರ್ಥವಾಗಿತ್ತದೆ ಇವತ್ತು ನಡೆದಿರುವ ಪರಿಸ್ಥಿತಿಯಲ್ಲಿ ಸತ್ತ ಈ ಮೂರು ಜನರ ಪ್ರಶ್ನೆ ಬಗ್ಗೆ ನಾವು ಮಾತನಾಡುತ್ತಿದ್ದೇವೆ, ಇಲ್ಲಿ ನಾವು ಯಾರ ಬಗ್ಗೆಯೂ ವಿನಾ ಕಾರಣ ಅಥವಾ ನಮ್ಮ ರಾಜ್ಯದ ಇಡೀ ಪೊಲೀಸ್ ಇಲಾಖೆಯೇ ಸರಿಯಿಲ್ಲವೆನ್ನುವ ಭಾವನೆಯಲ್ಲಿ ನಾವು ಮಾತನಾಡುತ್ತಿಲ್ಲ ನಾವು ಮಾತನಾಡುವುದು ಈ ಮೂವರು ಸತ್ತರಲ್ಲ ಇದು ಸರಿಯೇ, ಇದರ ಬಗ್ಗೆ ಚಿಂತನೆ ಇರಬೇಕೆಂಬುದು ಅಷ್ಟೇ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾವು ಇನ್ನೊಂದು ವಿಚಾರವನ್ನು ಕೂಡ ಅರ್ಥ ಮಾಡಿಕೊಳ್ಳಬೇಕು ಇವತ್ತು ದೇಶದಲ್ಲಿ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಇರುವ ಅಧಿಕಾರ ರಾಷ್ಟ್ರಪತಿಗಳಿಗಿಲ್ಲ ಪೊಲೀಸ್ ಕಾನ್‌ಸ್ಟೇಬಲ್ ದಾರಿಯಲ್ಲಿ ಹೋಗುತ್ತಿರುವ ಯಾರನ್ನಾದರೂ ಕೂಡ ಬಾರಯ್ಯ ಇಲ್ಲಿ ನಮ್ಮ ಸಾಹೇಬರು ಕರೆಯುತ್ತಿದ್ದಾರೆಂದು ಪೋಲಿಸ್ ಸ್ಟೇಷನ್‌ಗೆ ಕರೆಯುತ್ತಾನೆ ಹೊಗದಿದ್ದರೆ ಅವನ ಕತೆ ಮುಗಿಯಿತು ನಾವು ಶಾಸಕರಾಗಿದ್ದಾರೂ ನಮಗೆ ಆ ಅಧಿಕಾರವಿಲ್ಲ ಒಬ್ಬ ಮಂತ್ರಿಗೆ ಆ ಅಧಿಕಾರವಿಲ್ಲ, ಒಬ್ಬ ಪ್ರದಾನಮಂತ್ರಿಗೆ ಆ ಅಧಿಕಾರವಿಲ್ಲ, ಆದರೆ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್‌ಗೆ ಆ ಅಧಿಕಾರವಿದೆ, He must mind it

ಅಂಥ ಅಧಿಕಾರವನ್ನು ನಾವು ಏತಕ್ಕೆ ಕೊಟ್ಟಿದ್ದೇವೆಂದರೆ, ಅವರ ಮೇಲೆ ವಿಶ್ವಾಸವಿಟ್ಟು, ಗೌರವವಿಟ್ಟು, ಇವರು law and order ಕಾಪಾಡುತ್ತಾರೆ ಆನರ ಮಾನ, ಪ್ರಾಣ ರಕ್ಷಣೆ ಮಾಡುತ್ತಾರೆಂದು ಪ್ರಜಾಪ್ರಭುತ್ವದಲ್ಲಿ ಕೊಟ್ಟಿದ್ದೇವೆ ನಮ್ಮ ಕಳಕಳಿ ಏನೆಂದರೆ, ನಿಮ್ಮಮೇಲೇನು ವಿಶ್ವಾಸವನ್ನಿಟ್ಟು, ಅಧಿಕಾರವನ್ನು ಕೊಟ್ಟಿದ್ದೇವಲ್ಲ ಅದರ ದುರುಪಯೋಗ ಆಗಬಾರದು ಒಬ್ಬ ಕಾನ್‌ಸ್ಟೇಬಲ್‌ಗೆ ಇರುವ ಆ ಅಧಿಕಾರ ರಾಷ್ಟ್ರಪತಿಗಳಿಗಿಲ್ಲ, ಪ್ರಧಾನ ಮಂತ್ರಿಗಳಿಗಿಲ್ಲ, ಮುಖ್ಯಮಂತ್ರಿಗಳಿಗಿಲ್ಲ ನಿಮಗೆ ಏತಕ್ಕೆ ಆ ಧಿಕಾರವನ್ನು ಕೊಟ್ಟಿದ್ದೇವೆಂದರೆ, ನಿಮ್ಮವಿಶ್ವಾಸವಿಟ್ಟು, ಗೌರವವಿಟ್ಟು ನಮ್ಮ ಕೈಯಲ್ಲಿ ಲಾರಿ ಕೊಡ್ಡಿಲ್ಲ, ನಿಮ್ಮ ಕೈಯಲ್ಲಿ ಲಾರಿಯನ್ನು ಕೊಟ್ಟಿದ್ದಾರೆ, ನಮಗೆ ಬಂದೂಕು ಕೊಟ್ಟಿಲ್ಲ, ನಿಮಗೆ ಕೊಟ್ಟಿದ್ದಾರೆ ಇವತ್ತು ಗೃಹಮಂತ್ರಿಗಳಿಗೆ ಬಂದೂಕು ಹಿಡಿದುಕೊಳ್ಳುವುದಕ್ಕೆ ಅಧಿಕಾರವಿಲ್ಲ, ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ಗೆ ಆ ಅಧಿಕಾರವಿದೆ ಪ್ರಜಾಪ್ರಭುತ್ವದಲ್ಲಿ ನಿಮಗೆ ಏತಕ್ಕೆ ಆ ಅಧಿಕಾರವನ್ನು ಕೊಟ್ಟಿರುವುದೆಂದರೆ, ನಿಮ್ಮಮೇಲೆ ವಿಶ್ವಾಸವಿಟ್ಟು, ಗೌರವವಿಟ್ಟು, ನೀವು ಜನರ ಪ್ರಾಣ ಕಾಪಾಡುತ್ತೀರಿ,ಮಾನ ಕಾಪಾಡುತ್ತೀರಿ ಎಂದು ಆ ಅಧಿಕಾರವನ್ನು ಕೊಟ್ಟಿರುವುದು ಆ ಅಧಿಕಾರದ ದುರುಪಯೋಗವಾದರೆ, ಈ ದೇಶದಲ್ಲಿ ಅರಾಜಕತೆವುಂಟಾಗುತ್ತದೆ, ಅನಾಹುತಗಳುಂಟಾಗುತ್ತದೆ, ಅದನ್ನು ಯಾರೂ ತಡೆಯುವುದಕ್ಕೆ ಸಾಧ್ಯವಿಲ್ಲ ಯಾವುದೇ ಒಂದು ದಬ್ಬಾಳಿಕೆಯನ್ನು ಪ್ರತಿ ದಬ್ಬಾಳಿಕೆಯಿಂದಲೇ ಎದುರಿಸಬೇಕಾಗುತ್ತದೆ ಅದಕ್ಕೆ ಜೂನ್ 19ನೇ ತಾರೀಖಿನಂದು ಜಯಪ್ರಕಾಶ್ ನಾರಾಯಣ್ ಅವರು ರಾಮಲೀಲಾ ಪೆರೇಡ್ ಗ್ರೌಂಡ್‌ನಲ್ಲಿ ಜನತೆಗೆ ಏನೆಂದು ಕರೆ ಕೊಟ್ಟರು? ಸರ್ಕಾರ ಕಾನೂನು ಬಾಹಿರವಾದ ಆಜ್ಞೆಗಳನ್ನು ಮಾಡಿದರೆ, ನೀವು ಅವನ್ನು ಪಾಲಿಸಬೇಡಿ ಎಂದು ಕರೆ ಕೊಟ್ಟರು Is it unconstitutional?

ಶ್ರೀ ಎಂ ಪಿ ಪ್ರಕಾಶ್ ಆ ಒಂದು ಕರೆಯನ್ನು ಕೊಟ್ಟಂಥ ಜಯಪ್ರಕಾಶ್ ನಾರಾಯಣರವರಿಗೆ ಯಾವ್ಯಾವ ಪಕ್ಷಗಳು ಬೆಂಬಲವನ್ನು ಕೊಟ್ಟವು, ಯಾವ ಪಕ್ಷಗಳು ಅದನ್ನು ವಿರೋಧ ಮಾಡಿದರೆಂಬುವುದನ್ನು ಕೂಡ ತಾವು ಹೇಳಿದರೆ ,ಬಹಳ ಒಳ್ಳೆಯದಾಗುತ್ತದೆ, ಅದನ್ನು ತಾವು ಹೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ It is the CPI which supported ಆ ವಾದವನ್ನು ತಂದು ನೀವು ಚರ್ಚೆಯ ದಿಕ್ಕನ್ನು ತಪ್ಪಿಸುವುದಕ್ಕೆ ಹೋಗಬೇಡಿ, ಅದಕ್ಕೂ,ಇದಕ್ಕೂ ಸಂಬಂಧವಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಒಂದು ಸಲ ತಪ್ಪು ಮಾಡಿದವರು ತಿದ್ದಿಕೊಳ್ಳಬಾರದು, ಸುಧಾರಿಸಬಾರದೆಂದೇನು ಇಲ್ಲ Emergencyಯಲ್ಲಿ

ಶ್ರೀ 'ಎಂ ಪಿ ಪ್ರಕಾಶ್ ಜಯಪ್ರಕಾಶ್ ನಾರಾಯಣರವರು ಹೇಳಿದ ಮಾತಿಗೆ ಕೆಲವು ಪಕ್ಷಗಳು ಬೆಂಬಲವನ್ನು ಕೊಡಲಿಲ್ಲ, ಅವು ಯಾವುವು ಹೇಳಿ ಎಂದು ಹೇಳಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಮಾತನಾಡುವಾಗ, ತಾವು ಆಡಿದ ಮಾತುಗಳ ಅರ್ಥ ನಮಗೂ ಗೊತ್ತಾಗುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ In the same way,ನಾನು ತಮ್ಮಿಂದ ಒಂದು ಮಾಹಿತಿಯನ್ನು ಬಯಸುತ್ತೇನೆ, ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿ ಅನೇಕ ಜನರಿದ್ದರು, ತುರ್ತು ಪರಿಸ್ಥಿತಿ ಕಳೆದ ಮೇಲೆ ಅನೇಕ ಸಾಂದರ್ಭಿಕ ಬದಲಾವಣೆಗಳಿಂದ ಅಧಿಕಾರಕ್ಕೆ ಬಂದವರು, ಎಷ್ಟು ಜನ ಎಷ್ಟು ಪ್ರಾಮಾಣಿಕರಾಗಿ ಉಳಿದರು, ಮೂರು, ನಾಲ್ಕು ಜನರೇಷನ್ ಆಗುವಷ್ಟು ಮಾಡಿದ್ದಾರಲ್ಲ

ಶ್ರೀ ಎಂ ಪಿ ಪ್ರಕಾಶ್ ತುರ್ತು ಪರಿಸ್ಥಿತಿಯ ಸಮಯದಲ್ಲಿ ಆಗ ಗುಜರಾತಿನಲ್ಲಿ ಚಿಮನಬಾಯಿ ಪಟೇಲರು ಮುಖ್ಯಮಂತ್ರಿಗಳಾಗಿದ್ದರು, ಗುಜರಾತಿನ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು, ಅದರ ವಿರುದ್ಧ ಹೋರಾಟ ನಡೆಯಿತು ಆದರೆ ಮುಂದೆ ನಮ್ಮದೇ ಜನತಾ ಪಕ್ಷದಿಂದ ಚಿಮನಬಾಯಿ ಪಟೇಲರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದೆವು ಆದುದರಿಂದ ನಾನು ಯಾರ ಪರವಾಗಿ ಹೇಳುತ್ತಿದ್ದೇನೆಂದಲ್ಲ

ಶ್ರೀ ಸಿದ್ದರಾಮಯ್ಯ ಎಲ್ಲಾ ಸರಿ, ರೆಡ್ಡಿಯವರು ಮಾತನಾಡುವಾಗ ಏತಕ್ಕೆ ಅದನ್ನು ಜ್ಞಾಪಕ ಮಾಡಿದಿರಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಎಂ ಪಿ ಪ್ರಕಾಶ್‌ರಷ್ಟು ಅನುಭವ ನನಗಿಲ್ಲದೇ ಇರಬಹುದು, ನೀವು ಹೇಳಿದ ಮಾತಿನ ಅರ್ಥ ನಮಗೆ ಗೊತ್ತಿದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ನಾನು ಚಂದ್ರಶೇಖರ್‌ರವರ ನಿಧನಕ್ಕೆ ಸಂತಾಪ ಸೂಚಿಸಿ ಮಾತನಾಡುವಾಗ ಚಿಮನಬಾಯಿ ಪಟೇಲರವರ ಬಗ್ಗೆ ಹೇಳಿದೆ Ink is still not dry ಕೆಲವು ಸಂದರ್ಭಗಳಲ್ಲಿ ಪ್ರಾಮಾಣಿಕತೆ, ಕೆಲವು ಸಂದರ್ಭಗಳಲ್ಲಿ ನಿರ್ಧಾರ ತೆಗೆದುಕೊಳ್ಳುವುದು, it varies History has lot of material in its store

ಶ್ರೀ ಎಂ ಪಿ ಪ್ರಕಾಶ್ ಅದಕ್ಕೆ ಹೇಳುತ್ತಿದ್ದೇನೆ, ಎನ್ನುವುದು ಅಷ್ಟು ದೇಶವ್ಯಾಪಿ ಇದ್ದಾಗ, ಅಪ್ರಮಾಣಿಕರಾಗಿ ಚಂದ್ರಶೇಖರ್ ನಡೆದುಕೊಂಡಿಲ್ಲ, ಅವರು ಕಲ್ಪನಾಧರ್ರೈ ಅವರನ್ನು ಜೈಲಿಗೆ ಹಾಕಿದರು ಯಾವ ಪಕ್ಷದಲ್ಲಿದ್ದ, ಯಾವ ಪಕ್ಷಕ್ಕಗಿ ದುಡಿದ, ಅವನ ಮೇಲೆ ಭ್ರಷ್ಟಾಚಾರದ ಅಪಾದನೆ ಬಂದು ಜೈಲಿಗೆ ಹೋದರೆ, ಒಬ್ಬನೇ ಒಬ್ಬ ರಾಜಕಾರಣಿ ಆತನನ್ನು ಮಾತನಾಡಿಸುವುದಕ್ಕೆ ಹೋಗಲಿಲ್ಲ ಭ್ರಷ್ಟವಾದ ವ್ಯವಸ್ಥೆಯಲ್ಲಿ ನಾವೆಲ್ಲರೂ ಇದ್ದೇವೆ, ಕಲ್ಪನಾಧರ್ರೈ ಅವರನ್ನು ಭೇಟಿ ಮಾಡಿಯೇ ತಿರುತ್ತೇನೆಂದು ಹೇಳಿ ಜೈಲಿಗೆ ಹೋಗಿ ಅವರನ್ನು ಭೇಟಿ ಮಾಡಿದರು ಆದುದರಿಂದ ನಾವೆಲ್ಲಾ ಮಾತನಾಡುವುದು ಎಷ್ಟೆಷ್ಟು ನಾಟಕೀಯವೆಂಬುವುದು ಎಲ್ಲರಿಗೂ ಗೊತ್ತಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ತಾವು ಮಾತನಾಡಿದ ರಾಜಕೀಯವೂ ನಮಗೆ ಅರ್ಥವಾಯಿತು

ಶ್ರೀ ಸಿದ್ದರಾಮಯ್ಯ ಎಲ್ಲರನ್ನೂ ಸಾರಾಸಗಟಾಗಿ ಸೇರಿಸಿ ಹೇಳಿದರೆ ಹೇಗೆ? ನೀವು ನಮ್ಮನ್ನೆಲ್ಲಾ ಸೇರಿಸಿ ಹೇಳಿದಂತಾಗುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ Still we hold our head high

ಶ್ರೀ ವಾಟಾಳ್ ನಾಗರಾಜ್ ಈ ಸದನದಲ್ಲಿ ಇದರ ಬಗ್ಗೆ ಒಂದು ದಿವಸ ಚರ್ಚೆ ಮಾಡುವುದಾದರೆ ಒಳ್ಳೆಯದು ಸಂದರ್ಭ ಬಂದಾಗ ಹೇಳಿಬಿಟ್ಟರೆ ಆಗುವುದಿಲ್ಲ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ

ಶ್ರೀ ಎಸ್ ಸಿದ್ದರಾಮಯ್ಯ ತುರ್ತು ಪರಿಸ್ಥಿತಿ ಆದ ಮೇಲೆ ಪ್ರಾಮಾಣಿಕತೆ ಬಗ್ಗೆ ಚರ್ಚೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೇ, ದಿವಂಗತ ಹೆಗಡೆಯವರ ಮೇಲೆ ಒಂದು ಅಲಿಗೇಷನ್ ಬಂದಿತ್ತು One of the most honest politicians was holding that portfolio ಎಂಥದೋ ಫೈಲ್ it moved at the fastest velocity ಏನು ಹೇಳಬೇಕು ನಾವು, ನಾನು ಆ ಕಡೆ ಕುಳಿತಿದ್ದೆ, in fact , somebody called me and asked me to hold brief I said no I will not do it ಎಂದು ಹೇಳಿದೆ, ಅತ್ಯಂತ ಪ್ರಾಮಾಣಿಕ ರಾಜಕಾರಣಿ ಸರಳ ವ್ಯಕ್ತಿ, ಎಲ್ಲಾ ಎಂಡಾರ್ಸ್ ಮಾಡಿ ಕಳುಹಿಸಿದ್ದರು ಆತನನ್ನು dishonest ಎಂದು ಕರೆಯತ್ತೀರೊ, honest ಎಂದು ಕರೆಯುತ್ತೀರೊ? We have come across several such things ತಮಾಷೆ ಏನಪ್ಪ ಎಂದರೆ, ಪ್ರಾಮಾಣಿಕತೆ ಬಗ್ಗೆ ಮತ್ತು ಮೌಲ್ಯಗಳ ಬಗ್ಗೆ ಬಹಳ ಜೋರಾಗಿ ಮಾತನಾಡುವವರು ಬಹಳ ಆರ್ಭಟಿಸಿ ಮಾತನಾಡುವವರು ಅತ್ಯಂತ ಭ್ರಷ್ಟರಾಗಿರುತ್ತಾರೆ ಇದು ಒಂದು ನಮಗೆ ಇದುವರೆಗೆ ಗೊತ್ತಾಗಿರತಕ್ಕಂಥ ಸತ್ಯ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಹೇಳಿದ್ದನ್ನು ನಾನು ಒಪ್ಪುತ್ತೇನೆ ಮಾನ್ಯ ಜಯಪ್ರಕಾಶ್ ನಾರಾಯಣ್‌ರವರು ಕೊಟ್ಟಂತಹ ಕರೆಗೆ ಯಾರು ಬೆಂಬಲ ಕೊಟ್ಟರು, ಯಾರು ವಿರೋಧ ಮಾಡಿದರು, ಎಂದು ಅದು ಅವರಿಗೆ ಗೊತ್ತಿದೆ ಪಾಟ್ನಾದಲ್ಲಿ anti-facist ಸಮಾವೇಶ ಮಾಡಿದಾಗ ಯಾವ ಕಾಂಗ್ರೆಸ್ಸಿಗರು ಆ ಸಮಾವೇಶದಲ್ಲಿ ಭಾಗವಹಿಸಿದ್ದರು, ಯಾರು ಬೆಂಬಲ ಕೊಟ್ಟರು ಎನ್ನತಕ್ಕಂಥಾದ್ದು ಆದರೆ ಅವರು ನಾನು ಮಾತನಾಡುವಾಗಲೇ ಏಕೆ ಹೇಳಬೇಕೆಂದರೆ, ಅವರು ಏಕೆ ಹೇಳುತ್ತಾರೆಂದು ನನಗೆ ಅರ್ಥವಾಗುತ್ತದೆ 1974 ರಲ್ಲಿ ಪಾಟ್ನಾದಲ್ಲಿ anti-facist, ಸಮ್ಮೇಳನ ನಡೆಯಿತಲ್ಲ, ಅದನ್ನು ಆರ್ಗನೈಸ್ ಮಾಡಿದ್ದು ಯಾರು, ಅದರಲ್ಲಿ ಭಾಗವಹಿಸಿದ್ದು ಯಾರು? ಅದರ ರೆಸಲ್ಯೂಷನ್ ಏನು? ಅದರಲ್ಲಿ ನಾವು ಭಾಗಿಯಾಗಿಲ್ಲ we opposed that ಪಾಟ್ನಾ conferenceನ್ನು ನಾವು ವಿರೋಧ ಮಾಡಿದ್ದೇವೆ We are part of

Navanirmana Chaluvali ನಾನು ಆಗ S F I student ವಿದ್ಯಾರ್ಥಿ ಚಟುವಟಿಕೆಗಳಲ್ಲಿ ಇದ್ದವನು Emergency ಯಲ್ಲಿ ನಾವೂ ಎಲ್ಲಾ ಕಷ್ಟಗಳನ್ನು ಅನುಭವಿಸಿದ್ದೇವೆ ಮಾನ್ಯ ಜ್ಞಾನೇಂದ್ರರವರು ಏನೇನು ಪರಿಸ್ಥಿತಿಗಳನ್ನು ಅನುಭವಿಸಿದ್ದಾರೆ, ನಾವೂ ಕೂಡ ಅದನ್ನು ಅನುಭವಿಸಿದ್ದೇವೆ ಪೋಲಿಸ್‌ನವರು ಒದ್ದಂತಹ ಒದೆಗಳು - ಇನ್ನು ಜ್ಞಾಪಕ ಇವೆ ಇನ್ನು ಭುಜದ ಮೇಲೆ ಅದರ ಗುರುತು ಇದೆ ಅದು ಬಿಡಿ ನಾನು ಹೇಳುತ್ತಿರುವುದು ಏನೆಂದರೆ, ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ನಾವು ಪೋಲಿಸ್‌ನವರಿಗೆ ಅಷ್ಟು ಅಧಿಕಾರವನ್ನು ಅವರ ಮೇಲೆ ವಿಶ್ವಾಸವಿಟ್ಟು ಕೊಟ್ಟಿದ್ದೇವೆ ನಂಬಿಕೆ ಇಟ್ಟು ಕೊಟ್ಟಿದ್ದೇವೆ ನಾವು ನೀವು ಬಂದೂಕು ಹಿಡಿದುಕೊಳ್ಳುವುದಕ್ಕಾಗುವುದಿಲ್ಲ ಲಾರಿ ಹಿಡಿದುಕೊಳ್ಳುವುದಕ್ಕಾಗುವುದಿಲ್ಲ ನಾವು ಅವರ ಕೈಗೆ ಅಧಿಕಾರ ಕೊಟ್ಟಿದ್ದೇವೆ ನಮ್ಮ ದುರಂತ ಏನಾಗಿದೆ ಎಂದರೆ, ನಾವು ಅವರ ಕೈಗೆ ಲಾರಿ ಕೊಟ್ಟು ಆ ಲಾರಿಯಿಂದ ಏಟು ತಿನ್ನಬೇಕಾದ ಪರಿಸ್ಥಿತಿ ಬಂದಿದೆ ಹೌದು ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿ ನಾವು ಏಟು ತಿನ್ನಬೇಕಾಗುತ್ತದೆ ಏನೂ ಮಾಡುವುದಕ್ಕಾಗುವುದಿಲ್ಲ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಲಾರಿ ಕೊಟ್ಟವರೇ ಏಟು ತಿನ್ನಬೇಕಾಗುತ್ತದೆ ಇದು ಪ್ರಜಾತಂತ್ರ ವ್ಯವಸ್ಥೆಯ ಒಂದು ನಿಯಮ ಅದರ ಬಗ್ಗೆ ನಮಗೇನು ಬೇಸರ ಇಲ್ಲ ಅವರು ಲಾರಿ ಛಾರ್ಜ್ ಮಾಡಿ ನಮಗೆ ಎರಡು ಏಟು ಹೊಡೆದ ತಕ್ಷಣ ಅವರೇನು ವಿಲನ್‌ಗಳೆಂದು ನಾವು ಹೇಳುವುದಿಲ್ಲ ಕಾನೂನು ಮತ್ತು ಕೆಲವೊಂದು ವ್ಯವಸ್ಥೆಗಳಿರುತ್ತವೆ ಅದನ್ನು ನಾವು ಕೆಲವೊಂದು ಸಂದರ್ಭಗಳಲ್ಲಿ ಉಪಯೋಗಿಸಬೇಕಾಗುತ್ತದೆ ಯಾರೂ ಬೇಡವೆಂದು ಹೇಳುವುದಕ್ಕಾಗುವುದಿಲ್ಲ ಪೋಲಿಸ್‌ನವರು ಲಾರಿಯೇ ಮುಟ್ಟಬಾರದು, ಪೋಲಿಸ್‌ನವರು ಬಂದೂಕೇ ಮುಟ್ಟಬಾರದು ಎಂದು ಹೇಳಿದರೆ, ಮತ್ತೆ ಇದು ಅರಾಜಕತೆಯ ಸ್ಥಾನ ಆಗಿಬಿಡುತ್ತದೆ ಅದನ್ನು ಬೇಡವೆಂದು ನಾವ್ಯಾರೂ ಹೇಳುವುದಿಲ್ಲ ಆದರೆ ಅದನ್ನು ಬಳಸುವಾಗ ವಿವೇಚನೆಯಿಂದ ಬಳಸಿ ಅಷ್ಟೇ ನಾವು ಹೇಳತಕ್ಕಂಥಾದ್ದು ಬೇರೇನೂ ಹೇಳುತ್ತಿಲ್ಲ ಆ ವಿವೇಚನೆ ತಪ್ಪಿದರೆ ಅನಾಹುತಗಳು ನಡೆಯುತ್ತವೆ ಆ ಅನಾಹುತಗಳಿಂದ ಇನ್ನು ಮುಂದೆ ಅರಾಜಕತೆ ಬೆಳೆಯುತ್ತದೆ ಆಗ ಅದಕ್ಕೆ ನಾವೇ ಹೊಣೆಗಾರರಾಗಬೇಕಾಗುತ್ತದೆ ಇದಕ್ಕೆಲ್ಲಾ ನಾವೇ ಉತ್ತರ ಹೇಳಬೇಕಾಗುತ್ತದೆ ಇಲ್ಲಿ ಯಾರನ್ನೂ ಯಾರೂ accused ಮಾಡತಕ್ಕಂತಹ ಪ್ರಶ್ನೆ ಅಲ್ಲ ಇವತ್ತು ಸಾಮಾಜಿಕ ಚಳುವಳಿ ಯಾವುದು ಸಾಮಾಜಿಕ ಚಳುವಳಿ ಅಲ್ಲದೇ ಇರತಕ್ಕಂಥಾದ್ದು ಯಾವುದು,

ಅದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ ಸಾಮಾಜಿಕ ಚಳುವಳಿಗಳು ನಡೆಯುತ್ತಿರತಕ್ಕಂತಹ ಸಂದರ್ಭದಲ್ಲಿ ಎಲ್ಲಾ ನಡೆಯುತ್ತದೆ ಇಂದಾದ್ದು ನಡೆಯಬಾರದು ಎಂದು ಗೆರೆ ಎಳೆದುಕೊಂಡು ಸಾಮಾಜಿಕ ಚಳುವಳಿ ಮಾಡುವುದಕ್ಕಾಗುವುದಿಲ್ಲ ಚಳುವಳಿ ನಡೆಯುವಾಗ ಹಿಂಸೆ ನಡೆಯುತ್ತದೆ, ಗಲಾಟೆ ನಡೆಯುತ್ತದೆ, ದೊಂಬಿ ನಡೆಯುತ್ತದೆ, ಹೋರಾಟ ನಡೆಯುತ್ತದೆ, ಲಾಠಿ ಬೀಸುತ್ತಾರೆ, ಗುಂಡು ಹಾರಿಸುತ್ತಾರೆ, ನಾವು ಸಾಯುತ್ತೇವೆ, ಮತ್ತೆ ಚಳುವಳಿ ನಡೆಯುತ್ತಿರುತ್ತದೆ ಇದು ಪ್ರೊಸೆಸ್ ಆದರೆ ಇಲ್ಲಿ ಮುಗ್ಧ ಜೀವಿಗಳನ್ನು ಬಲಿ ಮಾಡಿದಿರಿ ಅದಕ್ಕೆ ಯಾರಿಗೆ ಹೊಣೆ ಮಾಡಬೇಕು ಹೇಳಿ ನಮಗೆ ಆ ಮುಗ್ಧ ಜೀವಿಗಳು ಮೂವರು ಸತ್ತಿದ್ದಾರೆ, ಅವರು ವಾಪಾಸ್ಸು ಬರುತ್ತಾರಾ? ಅವರ ಮೇಲೆ ಆಧಾರವಾಗಿದ್ದಂತಹವರು, ಅವರನ್ನೇ ಆಶ್ರಯಿಸಿದಂತಹವರ ಗತಿ ಏನು? ಅವರ ಬದುಕು ಏನು? ಅದಕ್ಕೇನು ಬೆಲೆ ಕೊಡುತ್ತೀರಿ? ಆ ಅಪರಾಧಕ್ಕೆ ಏನು ಶಿಕ್ಷೆ ಕೊಡುತ್ತೀರಿ? ಅದನ್ನು ಮಾಡಿ ಎಂದು ನಾವು ಕೇಳುತ್ತಿದ್ದೇವೆ ಆದ್ದರಿಂದ ಅಧ್ಯಕ್ಷರೆ, ನಕ್ಸಲೈಟ್ ರನ್ನು ದಮನ ಮಾಡತಕ್ಕಂತಹ ಹೆಸರಿನಲ್ಲಿ ಮುಗ್ಧರನ್ನು ಕೊಲೆ ಮಾಡಲಿಕ್ಕೆ ಈ ರಾಜ್ಯದಲ್ಲಿ ಅವಕಾಶ ಕೊಡುವುದಕ್ಕಾಗುವುದಿಲ್ಲ ಅದು ಯಾವುದೇ ಸರ್ಕಾರವಾಗಿರಲಿ ಅದನ್ನು ಬಿಡುವುದಕ್ಕಾಗುವುದಿಲ್ಲ ಆ ರೀತಿ ನಡೆದಾಗ ಇದು ನಮ್ಮ ಹಕ್ಕು ಅದನ್ನು ಪ್ರತಿಭಟನೆ ಮಾಡಲಿಕ್ಕೆ ನೀವು ಅದನ್ನು ಪ್ರತಿಭಟನೆ ಮಾಡಲೇಬಾರದು ಅದನ್ನು ಸಮರ್ಥನೆ ಮಾಡಲೇ ಬಾರದು ಅದರ ಬಗ್ಗೆ ಮಾತನಾಡಬಾರದು ಎಂದು ಹೇಳತಕ್ಕಂತಹ ಹಕ್ಕು ಯಾರಿಗೂ ಇಲ್ಲ ಮುಗ್ಧ ಜೀವಿಗಳು ಬಲಿ ಆದಾಗ ನಮಗೆ ಮುಗ್ಧ ಜನ ಓಟು ಹಾಕಿ ಇಲ್ಲಿಗೆ ಕಳುಹಿಸಿರುವುದು ಅಕ್ಷರಾಭ್ಯಾಸ ಇಲ್ಲದೇ ಇರತಕ್ಕಂತಹವರು, ಕಡು ಬಡವರು, ಓಟು ಹಾಕಿ ನಾವು ಇಲ್ಲಿಗೆ ಬಂದಿರತಕ್ಕಂಥಾದ್ದು ಆ ಮುಗ್ಧ ಜೀವಿಗಳು ಸಾಯುತ್ತಿರುವಾಗ ನಾವು ಕಣ್ಣು ಮುಚ್ಚಿಕೊಂಡು, ಕಿವಿ ಮುಚ್ಚಿಕೊಂಡು ಇಲ್ಲಿ ಇರುವುದಕ್ಕಾಗುವುದಿಲ್ಲ ಅದಕ್ಕೆ ಸರ್ಕಾರ ಇವತ್ತು ಉತ್ತರ ಕೊಡಬೇಕಾಗಿದೆ ಯಾರು ಆ ಮುಗ್ಧ ಜೀವಿಗಳನ್ನು ಸಾಯಿಸಿದ್ದಾರೆ, ಅವರಿಗೆ ಶಿಕ್ಷೆ ಕೊಡಲೇಬೇಕೆಂದು ನಾನು ನಿಮ್ಮಮುಖಾಂತರ ಒತ್ತಾಯ ಮಾಡುತ್ತೇನೆ

ಅಧ್ಯಕ್ಷರು ಮಾನ್ಯ ಡಾ ಹೆಚ್ ಸಿ ಮಹಾದೇವಪ್ಪ, ಬೇಗ ಐದು ನಿಮಿಷಗಳಲ್ಲಿ ಮುಗಿಸಬೇಕು ಮಹಾದೇವಪ್ಪನವರು ಸಂವಿಧಾನ ಹೇಳದೇ ಹೋದರೆ ಚೆನ್ನಾಗಿ ಇರುವುದಿಲ್ಲ

ಡಾ ಹೆಚ್ ಸಿ ಮಹಾದೇವಪ್ಪ (ಟಿ ನರಸೀಪುರ) ಮಾನ್ಯ ಅಧ್ಯಕ್ಷರೆ, ಸಂವಿಧಾನದ ಪ್ರಕಾರ ನಡೆದು ಬಿಟ್ಟರೆ ಇವೇನೂ ಇರುವುದೇ ಇಲ್ಲ ಸಂವಿಧಾನದ ಪ್ರಕಾರ ನಡೆದುಕೊಳ್ಳದೇ ಇರುವುದರಿಂದ ಇಷ್ಟೆಲ್ಲಾ ಚರ್ಚೆಗಳು ನಡೆಯುತ್ತಿವೆ ಯಾರ್‍ಯಾರು ಯಾವಾಗ ಏನೇನು ಕೆಲಸ ಮಾಡಬೇಕೆಂದು ನಾಲ್ಕು ಸ್ಥಂಭಗಳು ಸರಿಯಾಗಿ ಕೆಲಸ ನಿರ್ವಹಣೆ ಮಾಡಿದರೆ, ಈ ತರಹದ ಚರ್ಚೆ ಏಕೆ ಆಗುತ್ತದೆ? ಅನಿವಾರ್ಯವಾಗಿ ಅದನ್ನು ಹೇಳಲೇಬೇಕಾಗುತ್ತದೆ ಅದನ್ನು ಬಿಟ್ಟೇ ನಾವು ಕೆಟ್ಟಿರುವುದು ಇದು ತಮ್ಮೆಲ್ಲರ ಗಮನದಲ್ಲಿರಲಿ ಮಾನ್ಯ ಗೃಹಸಚಿವರಾದ ಸನ್ಮಾನ್ಯ ಎಂ ಪಿ ಪ್ರಕಾಶ್‌ರವರಿಗೆ ಇಂದು 67ನೇ ಹುಟ್ಟುಹಬ್ಬ ಎಂದು ಬೋರ್ಡ್‌ನಲ್ಲಿ ನೋಡಿದೆ ಅವರಿಗೆ ನಾನು ಜನ್ಮದಿನದ ಶುಭಾಶಯಗಳನ್ನು ಕೋರುತ್ತೇನೆ ಅದಕ್ಕಿಂತ ಹೆಚ್ಚು ಸಂತೋಷವಾಗಿರುವುದು ಅವರು ಈ ನಾಡಿನ ಗೃಹಸಚಿವರಾಗಿದ್ದಾರೆ ಈ ಸಂದರ್ಭದಲ್ಲಿ ಅವರು ಗೃಹಸಚಿವರಾಗಿರುವುದಕ್ಕೆ ಸಂತೋಷವಾಗುವುದಕ್ಕೆ ಕಾರಣವೇನೆಂದರೆ, 1974ನೇ ಇಸವಿಯಲ್ಲಿ ಮಾನ್ಯ ಜಯಪ್ರಕಾಶ್ ನಾರಾಯಣ್‌ರವರು ಈ ದೇಶಕ್ಕೆ ಸಂಪೂರ್ಣ ಕ್ರಾಂತಿ ಮಾಡಬೇಕು ಎನ್ನತಕ್ಕಂತಹ ಒಂದು ಕರೆಯನ್ನು ಕೊಟ್ಟರು ಆ ಕರೆಯ ಹಿನ್ನೆಲೆಯಲ್ಲಿಯೇ ಬಂದಂತಹವರು ಸನ್ಮಾನ್ಯ ಎಂ ಪಿ ಪ್ರಕಾಶ್‌ರವರು Total revolution ಸಂಪೂರ್ಣ ಕ್ರಾಂತಿಯ ಜೊತೆ ಜೊತೆಗೆ ಅವರು ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಇದ್ದಂತಹ ಡಕಾಯಿತರಿಗೆ ಮನವಿ ಮಾಡಿ ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ನೀವು ಸಮಾಜದ ಮುಖ್ಯವಾಹಿನಗೆ ಬರಬೇಕೆಂದು ಹೇಳಿ ಅವರಿಗೆ ಮನವಿ ಮಾಡಿದಾಗ ಸಾವಿರಾರು ಜನ ಡಕಾಯಿತರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಮುಖ್ಯವಾಹಿನಗೆ ಬಂದಂತಹ ಉದಾಹರಣೆಗಳು ಗೊತ್ತಿವೆ ಆ ಒಂದು ಶಸ್ತ್ರಾಸ್ತ್ರ ಧಾರಣೆ ಮಾಡಿದಂತಹ ಶ್ರೀಮತಿ ಪೂಲನ್ ದೇವಿಯವರು ಶಸ್ತ್ರಾಸ್ತ್ರ ತ್ಯಾಗ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲೋಕಸಭೆಯ ಸದಸ್ಯರಾದಂತಹ ಉದಾಹರಣೆ ಕೂಡ ಮಾನ್ಯ ಹಿರಿಯರಾದ ಪ್ರಕಾಶ್‌ರವರಿಗೆ ಗೊತ್ತಿದೆ ಶ್ರೀಮತಿ ಪೂಲನ್ ದೇವಿಯವರು ಒಂದು ಹಿಂದುಳಿದ ಸಮಾಜಕ್ಕೆ ಸೇರಿದಂತಹ ಮಹಿಳೆ ಆಕೆಯ ಸಾಮಾಜಿಕ ಮತ್ತು ಚಾರಿತ್ರಿಕ ಹಿನ್ನೆಲೆ ನೋಡಿದರೆ, ಯಾವ

ಹಿನ್ನೆಲೆಯಲ್ಲಿ ಆಕೆ ಡಕಾಯಿತರಾದರು ಎಂಬ ವಿಷಯ ಕೂಡ ಅವರಿಗೆ ಗೊತ್ತಿದೆ ಇಂದು ಮುಖ್ಯವಾಗಿ ಪ್ರಸ್ತಾಪವಾಗಬೇಕಾಗಿರುವುದು ರಾಜ್ಯದಲ್ಲಿರತಕ್ಕಂತಹ ನಕ್ಸಲೀಯ ಚಳಿವಳಿ ಬಗ್ಗೆ ಈ ಎರಡೂ ವಿಷಯಗಳು ತುಂಬ ಪ್ರಮುಖವಾದವು ಮನುಷ್ಯನ ಜೀವನ ಅತ್ಯಂತ ಅಮೂಲ್ಯವಾದುದು ಯಾರದೇ ಜೀವ ಇರಲಿ, ಅದು ಅಮೂಲ್ಯವಾದುದು ಎಂದು ಮಾನ್ಯ ರೆಡ್ಡಿಯವರು ಮತ್ತು ಅನೇಕ ಹಿರಿಯ ಸದಸ್ಯರುಗಳು ಹೇಳಿದ್ದಾರೆ ನಕ್ಸಲಿಸಂ ಮಾಡತಕ್ಕಂತಹ ಯುವಕರು ನಿರುದ್ಯೋಗಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಿಟ್ಟು ನೀವು ಅದಕ್ಕೆ ಸೇರಬೇಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಪತ್ರಿಕಾ ಸಂದರ್ಶನದಲ್ಲಿ ಹಾಗೂ ಟಿವಿ ಮಾಧ್ಯಮದಲ್ಲಿ ಸಂದರ್ಶನ ನೀಡುವಂತಹ ಸಂದರ್ಭದಲ್ಲಿ ಉಲ್ಲೇಖ ಮಾಡಿದ್ದಾರೆ

ಶ್ರೀ ಎಸ್ ರಾಜೇಂದ್ರನ್ ಅವರಿಗೆ 50 ವರ್ಷವೆಂದು ಕೊಟ್ಟಿದ್ದಾರೆ ಅವರೇನು ಯುವಕರಾ? ನೀವು ನಕ್ಸಲೈಟ್ಸ್ ಯುವಕರು ಎಂದು ಹೇಳಿದಿರಿ general ಆಗಿ you say naxalite is a naxalite Whether he is eight years or twenty years or thirty years ಯುವಕರು ಮಾತ್ರ ಎಂದು ಹೇಳಬಾರದು

ಡಾ ಹೆಚ್ ಸಿ ಮಹಾದೇವಪ್ಪ ನಕ್ಸಲಿಸಂಗೆ ಅವಿದ್ಯಾವಂತ ಮತ್ತು ವಿದ್ಯಾವಂತ ಯುವಕರು ಮತ್ತು ಬೇರೆಯವರು ಯಾರೂ ಕೂಡ ಸೇರ್ಪಡೆ ಆಗಬೇಡಿ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ ಮೊನ್ನೆ 2002ನೆ ಇಸವಿಯಲ್ಲಿ Planning Commission, Development Commission, Rural Commission, ಬಹಳಷ್ಟು ಇಲಾಖೆಗಳ ಒಂದು ಸಮಿತಿಯನ್ನು ಮಾಡಿ ಅಲ್ಲಿ ವಾಸ ಮಾಡುವ ಜನರಿಗೆ socio economical programme ಕೊಡಬೇಕೆಂದು economical packages ಕೂಡ ಘೋಷಣೆ ಮಾಡಿದರು ಅದರ ಜೊತೆಯಲ್ಲಿ ಭಾರತದ ಸತ್ವ ಅಡಕವಾಗಿರುವುದು ಪ್ರಜಾಪ್ರಭುತ್ವದಲ್ಲಿ ಈ ದೇಶದಲ್ಲಿರತಕ್ಕಂತಹ terrorism, naxalism, religious fundamentalism ಇವೆಲ್ಲವೂ ಕೂಡ ಪ್ರಜಾಪ್ರಭುತ್ವಕ್ಕೆ ಎದುರಾಳಿಗಳಾಗಿವೆ terrorism, naxalism, religious fundamentalism, ಇವೆಲ್ಲವೂ ಕೂಡ ಭಾರತದ ಪ್ರಜಾ ಪ್ರಭುತ್ವದ ಸತ್ವ ಏನಿದೆ, ಅದಕ್ಕೆ ಮಾರಕವಾಗಿವೆ ಈ ಮಾರಕ ಶಕ್ತಿಗಳನ್ನು

ಹತ್ತಿಕ್ಕತಕ್ಕಂಥ ಕೆಲಸ ಅಧಿಕಾರದ ಮುಖಾಂತರವೇ ಆಗಬೇಕು ಪ್ರಜಾ ಪ್ರಭುತ್ವದ ವ್ಯವಸ್ಥೆ ಮುಖಾಂತರವೇ ಇದಕ್ಕೆ ಉತ್ತರ ಕೊಡಬೇಕು ಭಾರತ ದೇಶದಲ್ಲಿ ನಡೆಯತಕ್ಕಂಥ ಅತ್ಯಾಚಾರಗಳು, ದೌರ್ಜನ್ಯ ಪ್ರಕರಣಗಳು, ಮಹಿಳೆ ಮೇಲಿನ ಬಲಾತ್ಕಾರಗಳು, ಇವೆಲ್ಲವೂ 22 1/2 ಪರ್ಸೆಂಟ್ ಉತ್ತರಪ್ರದೇಶ ಒಂದರಲ್ಲಿಯೇ ನಡೆಯುತ್ತದೆ ಅದೇ ರೀತಿ ಕರ್ನಾಟಕ ಇರಬಹುದು, ಬೇರೆ ರಾಜ್ಯಗಳಿರಬಹುದು ಮಲೆನಾಡಿನ ಸುತ್ತಮುತ್ತ ಕಾಫಿ ಬೀಜ ಪ್ರದೇಶದಲ್ಲಿ ಕೂಲಿ ಮಾಡಿ ವಾಸ ಮಾಡತಕ್ಕಂಥ ಜನಗಳಿದ್ದಾರೆ ಅಲ್ಲಿನ ಎಸ್ ಪಿ ಯವರು ನಿಮಗೆ ವರದಿಯನ್ನು ಕೊಟ್ಟಿರಬಹುದು ಪೋಲಿಸ್ ಇಲಾಖೆ ಗುಪ್ತದಳದವರು ವರದಿ ಕೊಟ್ಟಿರಬಹುದು ಅಲ್ಲಿ ಕೆಲಸ ಮಾಡತಕ್ಕಂಥ ಶೋಷಿತ ಸಮಾಜದ ಹೆಣ್ಣು ಮಕ್ಕಳು ತಮ್ಮ ಬದುಕಲ್ಲಿ ಯಾವ ರೀತಿ ಮಸುಕಾಗುತ್ತಾರೆ ಎಂಬ ಬಗ್ಗೆ ವರದಿಗಳನ್ನು ಕೊಟ್ಟಿರಬಹುದು ಇಂಟಲಿಜೆನ್ಸ್‌ನವರಿಗೆ ಗೊತ್ತಿದೆ ಹಿಂದಿನ ಎಸ್ ಪಿ ಯವರಿಗೆ ಗೊತ್ತಿದೆ ಅಲ್ಲಿ ಅಸಮಾನತೆಯ ಬದುಕು ಹೆಚ್ಚಾಗಿದೆ ದೊಡ್ಡ ದೊಡ್ಡ ಶ್ರೀಮಂತರುಗಳೇ ನೂರಾರು, ಸಾವಿರಾರು ಎಕರೆ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ 1985ನೇ ಇಸವಿಯಲ್ಲಿ ನಾನು ಶಾಸಕನಾಗಿದ್ದಾಗ ಸನ್ಮಾನ್ಯ ಪ್ರಕಾಶ್‌ರವರು ಮಂತ್ರಿಗಳಾಗಿದ್ದರು ಅಲ್ಲಿ ಭೂಮಿಯ ಒತ್ತುವರಿಯನ್ನು ಶ್ರೀಮಂತರು ಯಾರು ಮಾಡಿದ್ದಾರೆ ಅವರುಗಳಿಗೇ ಆ ಭೂಮಿಯನ್ನು ಕೊಡಬೇಕು ಎಂದಾಗ ಶಾಸಕಾಂಗ ಸಭೆಯಲ್ಲಿ ಇದನ್ನು ಪ್ರಬಲವಾಗಿ ವಿರೋಧ ಮಾಡಿ ಆ ಭೂಮಿಯನ್ನು ಬಡವರಿಗೇ ಹಂಚಬೇಕೆನ್ನುವ ಒತ್ತಾಯವನ್ನು ನಾನು ಆಗ ಮಾಡಿದ್ದೆ ಆ ವಿಷಯ ಸನ್ಮಾನ್ಯ ಪ್ರಕಾಶ್‌ರವರಿಗೆ ಚೆನ್ನಾಗಿ ಗೊತ್ತಿದೆ ಅಂದು ಮುಖ್ಯಮಂತ್ರಿಗಳಾಗಿದ್ದಂಥ ರಾಮಕೃಷ್ಣ ಹೆಗಡೆಯವರು ಸದನ ಸಮಿತಿಯನ್ನು ಮಾಡಿದರು ಆ ಭೂಮಿಯನ್ನು ಬಡ ಜನರಿಗೆ ವಿತರಣೆ ಮಾಡಬೇಕೆನ್ನುವ ನಮ್ಮ ಹೋರಾಟವನ್ನು ಅಂದು ಸುಪ್ರೀಂ ಕೋರ್ಟ್ ಎತ್ತಿ ಹಿಡಿಯಿತು ಅಂದಿನ ಶಾಸಕಾಂಗ ಸಭೆಯಲ್ಲಿ ನಾನು ಪ್ರಮುಖವಾಗಿ ಮಾತನಾಡಿದ್ದೇನೆ ಬಡವರಿಗೆ ಭೂಮಿಯನ್ನು ವಿತರಣೆ ಮಾಡಬೇಕು, ಅವರ ಬದುಕನ್ನು ಮೇಲೆತ್ತಬೇಕು ಎನ್ನತಕ್ಕಂಥ ಹೋರಾಟಕ್ಕೆ ರಾಮಕೃಷ್ಣ ಹೆಗಡೆಯವರು ಅಂದು ಸ್ಪಂದಿಸಿದರು ಅದು ಇನ್ನೂ ಹಾಗೆಯೇ ಇದೆ ಶಾಲೆ ಇಲ್ಲ, ರಸ್ತೆ ಇಲ್ಲ, ದೌರ್ಜನ್ಯ ಪ್ರಕರಣಗಳು, ಅಸಮಾನತೆಯ ಬದುಕು, ಶೋಷಣೆ, ಇವೆಲ್ಲ ರೀತಿಯ ಅಸಹಾಯಕತೆಯನ್ನು, ಮೂಢನಂಬಿಕೆಗಳನ್ನು ಯಾರೋ ಜನರು ದುರ್ಬಳಕೆ ಮಾಡಿ ಇವರನ್ನು ಅವರ ಜೊತೆಯಲ್ಲಿ

ಸೇರಿಸಿ ಇಡೀ ಸಮಾಜದಲ್ಲಿ ಅಶಾಂತಿಯಿಂದ ಕೂಡಿದ ವಾತಾವರಣವನ್ನು ಉಂಟು ಮಾಡುವುದಕ್ಕೆ ಪ್ರಯತ್ನವನ್ನು ಮಾಡಿತ್ತಿದ್ದಾರೆ ಕಾನೂನಿನಲ್ಲಿಯೂ ಇದೆ, "ನೂರು ಜನ ಅಪರಾಧಿಗಳಿಗೆ ಶಿಕ್ಷೆ ಆಗದಿದ್ದರೂ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಕೂಡದು" ಎಂದು ಕಾನೂನಿನಲ್ಲಿಯೇ ಇದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಪ್ರಕಾಶ್‌ರವರೆ, ಈಗ ಹಳ್ಳಿಯಲ್ಲಿ ಶ್ರೀಮಂತರಿದ್ದಾರೆ, ಅವರ ಮೇಲೆ ಮಾತ್ರ ಹೋರಾಟ ಮಾಡಬೇಕೆನ್ನುವ ಅವರನ್ನೆಲ್ಲಾ ಒಂದು ಸಾರಿ ಬೆಂಗಳೂರಿಗೆ ತಂದು ಬಿಟ್ಟುಬಿಟ್ಟರೆ ಇಲ್ಲಿದ್ದವರ ಶ್ರೀಮಂತಿಕೆ ಎಷ್ಟು ಮತ್ತು ಹಳ್ಳಿಯಲ್ಲಿದ್ದವರ ಶ್ರೀಮಂತಿಕೆ ಎಷ್ಟು ಎಂದು ಅವರಿಗೆ ಸ್ವಲ್ಪ ಗೊತ್ತಾಗುತ್ತದೆ

ಡಾ ಹೆಚ್ ಸಿ ಮಹಾದೇವಪ್ಪ ನಾನು ಸರ್ಕಾರಕ್ಕೆ ಮತ್ತು ಮಾನ್ಯ ಗೃಹ ಸಚಿವರಲ್ಲಿ ಬೇಡಿಕೊಳ್ಳುವುದೇನೆಂದರೆ, ಭಾರತ ದೇಶ ಸಾಮಾಜಿಕ ವ್ಯವಸ್ಥೆ ಬಂಧನಕ್ಕೆ ಒಳಗಾಗಿದೆ, ಇಡೀ ದೇಶದಲ್ಲಿ ಸಾಮಾಜಿಕ ವ್ಯವಸ್ಥೆ ಬಂಧನದಲ್ಲಿದೆ ಬಂಧನದಲ್ಲಿರತಕ್ಕಂಥ ಸಾಮಾಜಿಕ ವ್ಯವಸ್ಥೆಯನ್ನು ಸಡಿಲಗೊಳಿಸುವುದಕ್ಕಾಗಿ, ಬಿಡುಗಡೆಗೊಳಿಸಲಿಕ್ಕೆ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ, ಒತ್ತಾಯಪೂರ್ವಕವಾಗಿ ಕೊಡಲೇಬೇಕಾಗುತ್ತದೆ ಯಾರಿಗೂ ಕೂಡ ಪ್ರಜಾಪ್ರಭುತ್ವದ ಮಾರ್ಗಗಳಿಗೆ ವಿರುದ್ಧವಾಗಿ ಕಾನೂನನ್ನು ನೇರವಾಗಿ ಬಳಕೆ ಮಾಡುವುದಕ್ಕೆ ನಮ್ಮ ದೇಶದ ಕಾನೂನಿನ ವ್ಯವಸ್ಥೆಯಲ್ಲಿ ಅವಕಾಶವಿಲ್ಲ ಎರಡನೇ ಮಹಾಯುದ್ಧ ನಡೆದಾಗ ಅಲೈಡ್ ಕಂಟ್ರೀಸ್, ಸಾವು ನೋವುಗಳು, ಆಸ್ತಿ ಪಾಸ್ತಿ ನಷ್ಟವಾದ ಮೇಲೆ ವಿಶ್ವ ವಾಣಿಜ್ಯ ಒಕ್ಕೂಟಗಳ ಮುಖಾಂತರ ಒಂದು ಒಡಂಬಡಿಕೆಗೆ ಬಂದರು soonafter the second world war ಅದೂ ಕೂಡ ಸನ್ಮಾನ್ಯ ಗೃಹ ಸಚಿವರಿಗೆ ಗೊತ್ತಿದೆ ಇಂಥ ಒಂದು ಮಾನವ ಬದುಕು ಅತ್ಯಂತ ಪ್ರಮುಖವಾಗಿರುವುದರಿಂದ ಇವತ್ತು ಚಳುವಳಿಯ ಮುಖಾಂತರ ಯಾವ ಜನರು ತೊಂದರೆಗೆ ಒಳಗಾಗಿದ್ದಾರೆ, ಯಾವ ಜನರ ಮೇಲೆ ದೌರ್ಜನ್ಯ ನಡೆಯುತ್ತಿದೆ, ಅಸಮಾನತೆಯ ಬದುಕಿದೆ, ಅಸ್ಪೃಶ್ಯತೆ, ಅಮಾನವೀಯ ಬದುಕು, ಇವೆಲ್ಲವನ್ನೂ ದುರ್ಬಳಕೆ ಮಾಡಿ ಇಂಥ ಒಂದು ವ್ಯವಸ್ಥೆ ಇಡೀ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡತಕ್ಕಂಥ ಕೃತ್ಯಕ್ಕೆ ಕೈ ಹಾಕಿ ಅದನ್ನು ಯಶಸ್ವಿಯಾಗುವುದಕ್ಕೆ ಅವಕಾಶ ಕೊಡದೇ

ರಾಜಕೀಯವಾಗಿ ಮತ್ತು ನಮಗಿರತಕ್ಕಂಥ ಅಧಿಕಾರವನ್ನು ಬಳಸಿ ಈ ಸಾಮಾಜಿಕ ಅಸಮಾನತೆಯನ್ನು ತೆಗೆದು ಹಾಕಿ ಆರ್ಥಿಕ ಸಮಾನತೆಯನ್ನು ಕೊಡತಕ್ಕಂಥದ್ದು ಅತ್ಯಂತ ಪ್ರಮುಖವಾದಂಥ ಸಂಗತಿಯಾಗಿದೆ ಇವತ್ತು ಅಮೂಲ್ಯವಾದಂಥ ಜೀವಿಗಳನ್ನು ಕೊಂದು ಹಾಕಿರುವುದಕ್ಕೆ ಸರ್ಕಾರ ಹೊಣೆಗಾರಿಕೆಯಾಗಬೇಕಾಗುತ್ತದೆ ಅದಕ್ಕೆ ಸೂಕ್ತವಾದಂಥ ತನಿಖೆ ಮುಖಾಂತರ ಈ ಪ್ರಕರಣದಲ್ಲಿ ಯಾರೂ ತಪ್ಪಿತಸ್ಥರಿದ್ದಾರೆ, ಅವರಿಗೆ ಕಠಿಣ ಶಿಕ್ಷೆಯನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ

ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್) ಮಾನ್ಯ ಅಧ್ಯಕ್ಷರೆ, ಈಗ ನಕ್ಸಲೈಟ್ಸ್‌ಗೆ ಆಪೋಸಿಶನ್ ಕಡೆ ಇರತಕ್ಕಂಥವರಿಗೆ ನಾವು ನಕ್ಸಲೈಟ್ಸ್ ಪರ ಮಾತನಾಡುವವರು ಎಂದು ಸರ್ಕಾರಕ್ಕೆ ಬಾವನೆ ಬರಬಾರದು ನಕ್ಸಲೈಟ್ಸ್ ಬಗ್ಗೆ ಎಲ್ಲರೂ ಮಾತನಾಡಿರುವವರು, ಈ ತರಹ ಆಗಿದೆ, ಹಳ್ಳಿ ಕಡೆ ಹೋಗಿ ಸಾಹುಕಾರರುಗಳನ್ನೆಲ್ಲಾ ನಕ್ಸಲೈಟ್ಸ್ ಹೊಡೆದರು ಆ ಮನೆಗೆ ಪೋಲಿಸರು ನುಗ್ಗಿ ಹೊಡೆಯುವ ಟೈಂನಲ್ಲಿ ಮೂರು ಜನ ಇದ್ದರು ಎಂದು ಹೇಳುವ ಎಲ್ಲಾ ಕಥೆಗಳು ಪೇಪರ್‌ನಲ್ಲಿ ಬಂದಿದೆ ನಕ್ಸಲೈಟ್ಸ್‌ಗಳನ್ನು ಏನು ಮಾಡಬೇಕು? ಎಲ್ಲರೂ ಹೇಳುತ್ತಾರೆ, ಅವರನ್ನು punish ಮಾಡಬೇಕೆಂದು ಯಾವ ತರಹ punish ಮಾಡಬೇಕು? ಯಾವ ತರಹ punishment? ನಕ್ಸಲೈಟ್ಸ್‌ಗಳು ಯಾರು? ಈಗ ಕೆಲವರು ಮಾತನಾಡುವಾಗ ಪಾಪ ಅವರು ಇರುವ ಸ್ಥಳಗಳಲ್ಲಿ ರೋಡ್‌ಗಳಿಲ್ಲ ಎಂದರು ಅಲ್ಲಿ ರೋಡ್‌ಗಳನ್ನು ಮಾಡಿಬಿಟ್ಟರೆ ಆ ನಕ್ಸಲೈಟ್ಸ್‌ಗಳು ನಮ್ಮ ಕಡೆ ರೋಡ್ ಆಗಿ ಚೈನಾ ತರಹ ಆಗಿದೆ ಎಂದು ಸಂತೋಷವಾಗಿ ಇದ್ದುಬಿಡುತ್ತಾರೆಯೇ? ಅವರಿಗೆ ಮನೆ ಕಟ್ಟಿಕೊಟ್ಟರೆ ಅವರು ಸಂತೋಷವಾಗಿಬಿಡುತ್ತಾರೆಯೇ? ನಾವು ಒಂದು ಪ್ಲಾನ್ ಮಾಡಬೇಕು ಎಲ್ಲೆಲ್ಲಿ ನಕ್ಸಲೈಟ್ಸ್‌ಗಳು ಇದ್ದಾರೋ ಅವರಿಗೆಲ್ಲರಿಗೂ ಕೆಲಸಗಳನ್ನು ನೀವು ಕೊಡಿ ಕ್ಲರ್ಕ್ ಪೋಸ್ಟ್ ಕೊಡಿ, ಕ್ಲಾಸ್-4 ಹುದ್ದೆ ಕೊಡಿ, ಇದನ್ನು ಮಾಡುವುದಕ್ಕೆ ನಿಮ್ಮ ಸರ್ಕಾರದ ಕಡೆಯಿಂದ ಆಗುತ್ತದೆಯೇ? ಸಾಮಾನ್ಯವಾದ ಕ್ಲಾಸ್-4 ನ ಒಬ್ಬ ನೌಕರನನ್ನು ಸರ್ಕಾರದ ಕಡೆಯಿಂದ ಟ್ರಾನ್ಸ್‌ಫರ್ ಮಾಡುವುದಕ್ಕೆ ಆಗುವುದಿಲ್ಲ ಇದು ನಿಜ ನಾನೇ ಒಂದು ಉದಾಹರಣೆಯನ್ನು ಹೇಳುತ್ತೇನೆ ನಮ್ಮ ಊರು ಕಡೆ ಇರುವ ಕ್ಲಾಸ್-4 ನೌಕರನೊಬ್ಬ ಚೆನ್ನಪಟ್ಟಣಕ್ಕೆ ಕೆಲಸಕ್ಕೆ ಹೋಗಿ

ಮೂರು ವರ್ಷವಾಗಿದೆ ಅವನಿಗೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದರೆ ಅದಕ್ಕೆ ಮುಖ್ಯಮಂತ್ರಿಗಳು ಸಹಿ ಮಾಡಬೇಕು ಎನ್ನುತ್ತಾರೆ ಪಾಪ ಆ ನೌಕರ ಕ್ಲಾಸ್-4 ಗ್ರೇಡ್ನವನು ಸ್ವಲ್ಪ ನೀವೇ ಯೋಚನೆ ಮಾಡಿ ನಾನು ಏಕೆ ಹೇಳುತ್ತೇನೆಂದರೆ ಸರ್ಕಾರದವರಾದ ನಿಮಗೆ ಎಲ್ಲವೂ ಗೊತ್ತಿದೆ ಈ ನಕ್ಸಲೈಟ್ಸ್‌ಗಳನ್ನು ಪೋಲಿಸರು ಹೊಡೆಯುವ ಟೈಂನಲ್ಲಿ ಬೇರೆಯವರು ತೀರಿಹೋಗಿಬಿಟ್ಟರು ಎನ್ನುತ್ತಾರೆ ಅರ್ಥಶಾಸ್ತ್ರಜ್ಞನಾದ ಚಾಣಕ್ಯ ತಮಗೆಲ್ಲರಿಗೂ ಗೊತ್ತಿರಬಹುದು ಅವನು ಬರೆದಿರುವ ಪುಸ್ತಕದಲ್ಲಿ ಏನು ಹೇಳಿದ್ದಾನೆಂದರೆ ಒಂದು ವಾರ್ ಆದರೆ, ಒಂದು ಫೈಟಿಂಗ್‌ಗೆ ಬಂದರೆ ಅಲ್ಲಿ ಕೆಲವರು ತೀರಿಹೋಗಲೇಬೇಕು ಅಯ್ಯೋ ಸ್ವಾಮಿ, ನೂರು ವಯಸ್ಸಿನ ಹೆಂಗಸೊಬ್ಬಳು ತೀರಿ ಹೋದರು, ಐದು ವರ್ಷದ ಮಗ ತೀರಿ ಹೋದ ಎಂದು ಈ ರೀತಿಯೆಲ್ಲಾ ಹೇಳುವುದಕ್ಕಾಗುವುದಿಲ್ಲ ಈಗ ಒಂದು ಬಾಂಬ್ ಹಾಕುತ್ತಾರೆ ಆಗ ಬಾಂಬ್ ದೊಡ್ಡವರ ಮೇಲೆಯೇ ಹೋಗಿ ಬೀಳುವುದಕ್ಕಾಗುತ್ತದೆಯೇ? ಅದೆಲ್ಲಾ ಆಗುವುದಿಲ್ಲ ಇವರು ನಕ್ಸಲೈಟ್ಸ್ ಮನೆಯಲ್ಲಿ ಹೋಗಿ ಕುಳಿತುಕೊಂಡಿರುವವರು ಒಳ್ಳೆಯವರೇ ಅಥವಾ ಕೆಟ್ಟವರೇ ಎಂಬುದು ನಮಗೆ ಗೊತ್ತಿಲ್ಲ ಈಗ ಪ್ಯಾಡಿಗೆ ನೀರು ಹಾಕುತ್ತೀರಿ, ಅದರ ಪಕ್ಕದಲ್ಲಿಯೇ ಹುಲ್ಲು ಬೆಳೆಯಬಾರದು ಎಂದು ಹೇಳುವುದಕ್ಕಾಗುತ್ತದೆಯೇ? ಹುಲ್ಲು ಬರಲೇಬೇಕು ಆ ರೀತಿ ಹುಲ್ಲು ಬಂದೇ ಬರುತ್ತದೆ ಆದುದರಿಂದ ನಾವು ಯೋಚನೆ ಮಾಡುವ ಟೈಂನಲ್ಲಿ ಸ್ವಲ್ಪ ಚಿಂತನೆ ಮಾಡಬೇಕು, ನಕ್ಸಲೈಟ್ಸ್‌ಗಳು ಯಾವ ತರಹದವರು? ನಿಜವಾಗಿಯೂ ಅವನು ಥ್ರೆಟನ್ ಮಾಡಿ ದುಡ್ಡು ತೆಗೆದುಕೊಳ್ಳುವವನೇ? ಅಥವಾ ಡಿಪ್ರೆಸ್ ಆಗಿರುವವನೆ? ಅಥವಾ ಸಪ್ರೆಸ್ ಆಗಿರುವವನೆ? ಅಥವಾ ಸೊಸೈಟಿಯಲ್ಲಿ ಅಪ್ರೆಸ್ ಆಗಿರುವವನೆ? ಎಂಬ ಬಗ್ಗೆ ನಾವು ವಿವೇಚನೆ ಮಾಡಬೇಕು ಚಿಕ್ಕಮಗಳೂರು ಕಡೆ ಇರುವ ಎಂ ಎಲ್ ಅ ಗಳಿಗೆ ಚೆನ್ನಾಗಿ ಗೊತ್ತಿರುತ್ತದೆ ಏಕೆಂದರೆ ಅವರು ನಿಜವಾಗಿಯೂ ನೋಡುವವರು ಯಾವ ಯಾವ ರೀತಿಯ ನಕ್ಸಲೈಟ್ಸ್‌ಗಳು ಏನೇನು ತೊಂದರೆಗಳನ್ನು ಕೊಡುತ್ತಾರೆ ಎಂಬುದು ಅವರಿಗೆ ಗೊತ್ತಿರುತ್ತದೆ ಅವರು ಯಾವ ರೂಪದಲ್ಲಿ ಬಂದು ತೊಂದರೆ ಕೊಡುತ್ತಾರೆ ಸಾಹುಕಾರರ ಮನೆಗಳಿಗೆ ಹೋಗಿ ನುಗ್ಗುತ್ತಾರೆ ವಿಲೇಜ್‌ನಲ್ಲಿ ಒಬ್ಬ ರೈತ ನೂರು ಎಕರೆ ಭೂಮಿಯನ್ನು ಇಟ್ಟುಕೊಂಡಿದ್ದರೆ ಅವನು ಸಾಹುಕಾರ ಅಲ್ಲ ಬೆಂಗಳೂರು ಸಿಟಿಯಲ್ಲಿ ಒಂದು ಮೆಡಿಕಲ್ ಸೀಟ್‌ಗೆ 50ಲಕ್ಷದಿಂದ 1ಕೋಟಿಯವರೆಗೆ ತೆಗೆದುಕೊಳ್ಳುವವರು ಇದ್ದಾರೆ ನಿಜವಾಗಿಯೂ ಇಂಥವರು ಸಾಹುಕಾರರು

ಆದರೆ ಆ ನಕ್ಸಲೈಟ್ಸ್ ಹತ್ತಿರ ಹೋಗಿ ಇದನ್ನು ಹೇಳಿ ಕೊಡುವುದಕ್ಕಾಗುತ್ತದೆಯೇ? ಬನ್ನಿ, ಬನ್ನಿಯಪ್ಪಾ, ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಸಾಹುಕಾರರುಗಳಿದ್ದಾರೆ, ನೀವು ಅಲ್ಲೆಲ್ಲಾ ಬಿಟ್ಟುಬಂದು ಬೆಂಗಳೂರಿನಲ್ಲಿ ಕ್ಯಾಂಪ್ ಮಾಡಿಕೊಳ್ಳಿ, ವಿಧಾನಸೌಧದಲ್ಲಿ, ವಿಕಾಸಸೌಧದಲ್ಲಿ ಒದಗಿಸಿ ಕೊಡುತ್ತೇವೆ ಎಂದು ಹೇಳಿ ಒದಗಿಸಿ ಕೊಡುವುದಕ್ಕಾಗುತ್ತದೆಯೇ? ಇಲ್ಲ we cannot Why a naxalite is created? You take the example of my place, KGF It is a border area ಸ್ಪೀಕರ್ ಆಗಿದ್ದ ರಮೇಶ್ ಕುಮಾರ್‌ರವರಿಗೂ ಗೊತ್ತಿದೆ Kuppam is a ನಕ್ಸಲೈಟ್ಸ್ ಏರಿಯಾ Next to Kuppam is KGF ನೀವೇನು ಕೆ ಜಿ ಎಫ್ ನಲ್ಲಿ ಮಾಡಿದಿರಿ? ಅಲ್ಲಿ ಚಿನ್ನದಗಣಿ ಮುಚ್ಚಿ ಸುಮಾರು ಆರು ವರ್ಷವಾಗಿದೆ ನೀವು ಏನು ಚಿಂತನೆಯನ್ನು ಮಾಡಿದಿರಿ? ಬಹಳ ಸ್ಟೈಲ್ ಆಗಿ ನಿಮ್ಮಅಧಿಕಾರಿಗಳು "we cannot do anything, it is a Central Government company" ಎಂದು ಹೇಳುತ್ತಾರೆ ಸಿಂಪಲ್ ಉತ್ತರ ಕೆ ಜಿ ಎಫ್ ಗೋಲ್ ಮೈನ್ಸ್ ಕೇಂದ್ರ ಸರ್ಕಾರಕ್ಕೆ ಸೇರಿದ್ದು ಎಂಬುದು ನಮಗೆ ಗೊತ್ತಿಲ್ಲವೇ ಹೇಳಿ ನಾವೇನು ಅಮೇರಿಕಾ ಗೌರ್ನಮೆಂಟ್‌ನಲ್ಲಿದ್ದೇವೆಯೇ? What action you have taken? ಕಳೆದ ವರ್ಷ ಶ್ರೀಮಾನ್ ಧರ್ಮಸಿಂಗ್ ಸಾಹೇಬರು ಮುಖ್ಯಮಂತ್ರಿಯಾಗಿದ್ದಾಗ ಅವರು ಭಾಷಣ ಮಾಡುವ ಕಾಲದಲ್ಲಿ ಎನ್‌ಕೌಂಟರ್‌ನಲ್ಲಿ ಒಂದೇ ಕುಟುಂಬದ ಮೂವರು ಸತ್ತಿದ್ದನ್ನು ಹೇಳಿದ್ದರು ಒಂದೇ ಕುಟುಂಬದ ಮೂರು ಜನರನ್ನು ಎನ್‌ಕೌಂಟರ್‌ನಲ್ಲಿ ಸಾಯಿಸಿಬಿಟ್ಟರು ಅವರು ಏನಾಗಿದ್ದರು, ಅವರೇನು ನಕ್ಸಲೈಟ್ಸ್ ಆಗಿದ್ದರೇ ಎಂದು ಕೇಳಿದರೆ ಇಲ್ಲವೆಂದು ಹೇಳಿ ಅವರುಗಳು ದೊಡ್ಡ ರಾಬರಿಗಳು ಸಾರ್ ಎಂದರು ಅವನು ಎಲ್ಲಿ ರಾಬರಿ ಮಾಡಿದ್ದಾನೆ? ಎಂದರೆ ಅಂಡರ್‌ವರ್ಲ್ಡ್‌ನಲ್ಲಿ, ಹಾಗಾದರೆ ನಿಮಗೇನು ಸಂಬಂಧವಿದೆ? ಚಿನ್ನದಗಣಿ ಕೇಂದ್ರ ಸರ್ಕಾರದ್ದು ಎಂದು ಹೇಳುವ ನೀವು ಅವನು ಸೆಂಟ್ರಲ್ ಗೌರ್ನಮೆಂಟ್ ಜಾಗದಲ್ಲಿ ರಾಬರಿ ಮಾಡಿದರೆ ರಾಜು ಪೋಲಿಸ್‌ರವರಾದ ನೀವು ಏಕೆ ಎನ್‌ಕೌಂಟರ್‌ನಲ್ಲಿ ಒಂದೇ ಕುಟುಂಬದ ಮೂವರನ್ನು ಸಾಯಿಸಿದಿರಿ? ಹೇಗಿದೆ ನೋಡಿ Where are you standing? I am not blaming all the police officers ಪೋಲಿಸ್ ಆಫಿಸರ್‌ಗಳವರಲ್ಲಿಯೂ ಕೆಲವರು ಒಳ್ಳೆಯವರು ಇದ್ದಾರೆ, ಕೆಲವರು ಕೆಟ್ಟವರೂ ಇದ್ದಾರೆ, ದೊಡ್ಡ ದೊಡ್ಡ ಆಫಿಸರ್‌ಗಳಾಗಿದ್ದಾರೆ ಎನ್ನುವುದು

it is an immaterial question Police is a police ಈಗ ಶ್ರೀರಾಮರೆಡ್ಡಿಯವರು ಹೇಳಿದರು, ಲಾರಿ ಅವರ ಕೈಗೆ ನಾವೇ ಕೊಟ್ಟಿದ್ದರೂ ನಾವು ತಪ್ಪು ಮಾಡಿದರೂ ಕೂಡ ನಮಗೂ ಲಾರಿ ಏಟು ಬೀಳುತ್ತದೆ ಎಂದು ಹೇಳಿದರು ಇದು ನಿಜ ಈಗ ಅಡಿಗೆ ಮಾಡುವವನು ಅವನು ಮಾಡಿದ ಅಡಿಗೆಯನ್ನು ತಿನ್ನಬಾರದೇನು? ಅಡಿಗೆ ಮಾಡಿದವನೂ ಕೂಡ ತಿನ್ನಲೇಬೇಕು "ಏ, ನೀನು ಅಡಿಗೆ ಮಾಡಿದವನು, ನೀನು ಮಾಡಿದ ಅಡಿಗೆಯನ್ನು ನೀನು ತಿನ್ನಬಾರದು, ನಾವು ಮಾತ್ರ ತಿನ್ನಬೇಕು" ಎಂದು ಹೇಳುವುದಕ್ಕಾಗುವುದಿಲ್ಲ ಕಾನೂನನ್ನು ಯಾರು ಮಾಡುತ್ತಾರೋ ಅವರೂ ಕೂಡ ಆ ಕಾನೂನು ಚೌಕಟ್ಟನ್ನು ಬಿಟ್ಟು ಹೋದರೆ ಏಟು ತಿನ್ನಲೇ ಬೇಕಾಗುತ್ತದೆ No doubt ಅವರು ಯಾರಾಗಿದ್ದರೂ ಸರಿ ಈ ನಕ್ಸಲೈಟ್ಸ್‌ಗಳು ಎಲ್ಲಿ ಹೇಗೆ ಬೆಳೆಯತ್ತಾರೆಂದರೆ you are not giving employment opportunities to them. ಈಗ ನಿಮ್ಮಲ್ಲಿ ಫಾರೆಸ್ಟ್ ಗಾರ್ಡ್ಸ್‌ಗಳು ಒಂದು ಸಾವಿರ ಜನರಿದ್ದಾರೆ, ಚಿಕ್ಕಮಗಳೂರಿನಲ್ಲಿಯೇ ಇರುವವರನ್ನು ಒಂದು ನೂರು ಜನಕ್ಕೆ ನೀವು ಅಪಾಯಿಂಟ್‌ಮೆಂಟ್ ಮಾಡಿ ಈ ರೀತಿ ಮಾಡಿದಾಗ ಅಯ್ಯೋ ನಮ್ಮ ಕುಟುಂಬದವನೊಬ್ಬನೂ ಕೂಡ ಅಲ್ಲಿ ಕೆಲಸ ಮಾಡುತಿದ್ದಾನೆ ಎನ್ನುವುದು ಮನಸ್ಸಿಗೆ ಬರುತ್ತದೆ ಈ ರೀತಿ ಮಾಡಿದರೆ ನಮ್ಮ ಕುಟುಂಬದಲ್ಲಿ ಯಾರೂ ಕೆಲಸ ಮಾಡುತ್ತಿಲ್ಲ ಎನ್ನುವ depression ಅವರಿಗೆ ಬರುವುದಿಲ್ಲ

ನೀವು ಅವರಿಗೆ ಕೆಲಸ ಕೊಡುವುದಿಲ್ಲ, ಅವನು ದೊಡ್ಡ ರೌಡಿಯಾದ ಮೇಲೆ, ಅವನಿಗೆ ಕೇವಲ ಒಂದು class-4 ನೌಕರಿ ಕೊಡಿ ಎಂದರೆ ನೀವು ಕೊಡುವುದಿಲ್ಲ ಅವನು ಬೆಳೆದ ಮೇಲೆ ನೀವು ನಾವು ರಾಜಿ ಮಾಡಿಕೊಳ್ಳುತ್ತೇವೆ ಬನ್ನಿಎಂದು ಅವನ ಹತ್ತಿರ ಹೋಗುತ್ತೀರಿ Whose mistake it is ? Your Government or administration mistake ಅವರು ಯಾವ machine gunನಲ್ಲಿ ಏಟು ಕೊಟ್ಟರು? Chinaನಲ್ಲಿ ಹೀಗೆ ಆಗಿದೆ, ವಿಯೆಟ್ನಾಂನಲ್ಲಿ ಹೀಗೆ ಆಗಿದೆ ಎಂದರೆ ಆ ಕಾಲ ಬೇರೆ ನಾನು ಚಿಕ್ಕ ಹುಡುಗನಾಗಿದ್ದಾಗ ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮ ಊರಿಗೆ open jeepನಲ್ಲಿ ಬಂದಿದ್ದರು ಈಗ open jeepನಲ್ಲಿ ಹೋಗುವುದಕ್ಕಾಗುತ್ತದೆಯೇ? ಅದೆಲ್ಲಾ ಹೇಳಿಕೊಂಡು ಹೋದರೆ ಆಗುವುದಿಲ್ಲ At present what ia the situation? Why

the naxalite has turned bad? What is the reason? Who is a naxalite? ಅವನನ್ನು ಇನ್ನು trace out ಮಾಡಿಲ್ಲ ಒಬ್ಬ ಬೇಡ hunting ಮಾಡುವುದಕ್ಕೆ ಒಂದು gun ತೆಗೆದುಕೊಂಡು ಹೋದರೆ ಅವನನ್ನು naxalite ಎಂದು shoot ಮಾಡುವುದಕ್ಕೆ ಆಗುತ್ತದೆಯೇ? We are cheating ourselves ನಾವು Direct ಆಗಿ cheat ಮಾಡಬಹುದು ಅಥವಾ indirect ಆಗಿ cheat ಮಾಡಬಹುದು ಈಗ ಒಂದು ಉದಾಹರಣೆಯನ್ನು ಹೇಳುತ್ತೇನೆ, ನೀವು ಒಂದು ಅಂಗಡಿಗೆ ಹೋಗುತ್ತೀರಿ ಅಲ್ಲಿ ಹತ್ತು socks ಬೇಕೆಂದು ಕೇಳುತ್ತೀರಿ ಅಂಗಡಿಯವನು socks ಕೊಡುತ್ತಾನೆ By over sight ಅವನು 10 socks ಬದಲು 9 socksಗೆ bill ಹಾಕಿದ್ದಾನೆ ಆಗ ನೀವೇನು ಮಾಡಬೇಕು? ಇನ್ನೊಂದು socksಗೆ ದುಡ್ಡು ಕಟ್ಟಬೇಕು ಅಥವಾ ಆ ಒಂದು socksಅನ್ನು return ಕೊಡಬೇಕು ಆದರೆ ನೀವು ಹಾಗೆ ಹೊರಗಡೆ style ಆಗಿ ಬರುತ್ತೀರಿ ನಿಮಗೆ ಏನು ಧೈರ್ಯ ಎಂದರೆ, ಅವನೇ ತಪ್ಪು ಮಾಡಿದ್ದಾನೆ, ನಾನಲ್ಲ ತಪ್ಪು ಮಾಡಿರುವುದು ಎಂದು is it not a cheating? ಒಂದು socks ಅನ್ನು bill ಇಲ್ಲದೇ ತೆಗೆದುಕೊಂಡು ಬರುವುದು cheating ಅಲ್ಲವೇ? ಯಾವಾಗಲೂ ತಪ್ಪು ಮಾಡಿದರೂ ಉದಾಹರಣೆಯನ್ನು ಇಟ್ಟುಕೊಳ್ಳುತ್ತಾರೆ ಹತ್ತು socksಗೆ bill ಕಟ್ಟಬೇಕು, ಆದರೆ ಅಂಗಡಿಯವನು 9 socksಗೆ bill ಹಾಕಿದ್ದಾನೆ ನಿಮಗೆ ತಪ್ಪು ಎಂದು ಗೊತ್ತಿದ್ದರೂ ತೆಗೆದುಕೊಂಡು ಬರುತ್ತೀರಿ ನಿಮಗೆ ಏನು ಧೈರ್ಯ? ಅವನು ಕಡಿಮೆ ಹಾಕಿದ್ದಾನೆ, ಅದಕ್ಕೆ ನಾನೇನು ಮಾಡಲಿ This is cheating This kind of indirect cheating in administration should go ಒಂದು ಕಡೆ our Karnataka Policeನವರು ಬಹಳ intelligent, ಬಹಳ ಗೌರವವಾಗಿ ಕೆಲಸ ಮಾಡುತ್ತಾರೆಂದು ಹೇಳುತ್ತೇವೆ

ಇನ್ನೊಂದು ಕಡೆ ನಮ್ಮ police ಸರಿಯಿಲ್ಲವೆಂದು ಹೇಳುತ್ತೇವೆ ನಾವು ಯಾವುದನ್ನು ನಂಬುವುದು? ಈ message ಹೊರಗಡೆ ಹೋದರೆ ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ? ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಮೂರು ಜನ innocent have been shot If he is a true innocent, what is the protection you will give? ಇನ್ನೊಂದು question raise ಆಗುತ್ತದೆ If they are innocent,

ಅವರಿಗೆ ಏನೂ ಗೊತ್ತಿಲ್ಲ ಅವರು intelligent ಆಗಿದ್ದಾರಾ? ಎನ್ರಿ ಈ ಕಡೆ controversial ಮಾತನಾಡುತ್ತೀರಿ ಎಂದು ಹೇಳುತ್ತಾರೆ It is not a controversy ನೀವು ಒಂದು police vanನಲ್ಲಿ ಹೋಗಿ ಸುತ್ತಲೂ ನಿಂತುಕೊಂಡು shoot ಮಾಡುತ್ತೀರೆಂದರೆ, ಅಲ್ಲಿರುವಂತಹ ಗುಡಿಸಲು ಚಿಕ್ಕದು, ಅಲ್ಲಿ ಹೊಡೆದಾಗ ಅದರೊಳಗಿರುವ ಜನ ಸಾಯಲೇಬೇಕು ಅದನ್ನು ನೀವು trace up ಮಾಡಬೇಕು Innocent should not be punished Who is the real naxalite? Tell me Where are they? What they have done? ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುವಾಗ, ಅವರು ದೊಡ್ಡ ಅಪರಾಧಿಗಳೇನು ಅಲ್ಲ ಎಂದು ಹೇಳಿದರು Section 302 ನಲ್ಲಿ, 307 ನಲ್ಲಿ ಯಾರೂ ಬರುವುದಿಲ್ಲ 506 B ನಲ್ಲಿ ಯಾರೂ ಇಲ್ಲ ಕೇವಲ section 506, bailable section ಇಲ್ಲಿ ತಾವು encounter ಮಾಡಿ shoot ಮಾಡುತ್ತೀರಿ, ಆದರೆ ಕೊಲೆ ಮಾಡಿ ಬೆಂಗಳೂರಿನಲ್ಲಿ ತಿರುಗಾಡಿಕೊಂಡಿದ್ದಾರೆ, ಅವರಿಗೆ ಏಕೆ encounter ಮಾಡಿಲ್ಲ ದಿನಾ murder ಮಾಡುತ್ತಿದ್ದಾರೆ, ಅವರನ್ನು ಏಕೆ encounter ಮಾಡಿಲ್ಲ Where is the efficiency from your side? ಆದುದರಿಂದ ತಾವು ಯೋಚನೆ ಮಾಡಿ ತಾವು encounter ಮಾಡಿರುವುದು ತಪ್ಪು ಎಂದು ಹೇಳಲಿಲ್ಲ naxalites ಆಗಿರಲಿ, notorious ರೌಡಿಗಳಾಗಿರಲಿ, ಹೇಡಿಗಳಾಗಿರಲಿ, ಜನರಿಗೆ threaten ಮಾಡಿ ದುಡ್ಡು ತೆಗೆದುಕೊಳ್ಳುವವನಾಗಿರಲಿ, ಯಾರಾದರೂ ಆಗಿರಲಿ, you take a challenge and encounter them But innocent ಜನರ ಮೇಲೆ encounter ಮಾಡಿದರೆ, ಅದಕ್ಕೆ ತಾವು ಉತ್ತರ ಏನು ಕೊಡುತ್ತೀರಿ? How you are going to reply At 4'o clock in the market area they fired Suppose ಆ bullet miss ಆಗಿದ್ದರೆ ಏನಾಗುತ್ತಿತ್ತು? ಅಂತಹ ಅಧಿಕಾರಿಗಳು ಇನ್ನು ಕೆಲಸ ಮಾಡಿಕೊಂಡು ಇದ್ದಾರೆ ಇದು ಹೇಗಾಗುತ್ತದೆ ಎಂದರೆ license ಸಿಕ್ಕಿದೆ ಎಂದು ಈ ರೀತಿ ಮಾಡುತ್ತಾರೆ ಈಗ ನಮಗೆ license ಇದ್ದರೂ ಕೂಡ shoot ಮಾಡಿದರೆ ತಪ್ಪಾಗುತ್ತದೆ? Police ಕಾನೂನು ಹೇಗಿದೆ? Law ಹೇಗಿದೆ? ಯಾರಾದರೂ speed ಆಗಿ ಹೋಗುತ್ತಿದ್ದರೆ ಅವನನ್ನು ಬೇಗ ಹೋಗಿ ಹಿಡಿಯಬೇಕು ಎಂದು ಹೋಗುತ್ತಾರೆ ಏಕೆ ಹಿಡಿಯುತ್ತೀರಿ ಎಂದರೆ ನಾವು speed brake ಹಾಕಿದ್ದೇವೆ, 40 ಕಿಮೀ speed ಮೇಲೆ

ಹೋಗಬಾರದು, ಆದುದರಿಂದ ಇವನನ್ನು ಹಿಡಿಯುತ್ತೇವೆಂದು ಹೇಳುತ್ತೀರಿ 40ಕಿಮೀ speed ಮೇಲೆ ಹೋಗಿರುವವನನ್ನು ಹಿಡಿಯಬೇಕೆಂದರೆ ನೀವು 50ಕಿಮೀ speedನಲ್ಲಿ ಹೋಗಬೇಕು ತಾವು ಯೋಚನೆ ಮಾಡಿ ನಾವು 40ಕಿಮೀ speed ಮೇಲೆ ಹೋಗಬಾರದು ಎಂದು ಕಾನೂನು ಮಾಡುತ್ತೇವೆ ಹಾಗೆ ಹೋದರೆ ಅಪರಾಧ ನೀವು 40ಕಿಮೀ ಮೇಲೆ ಹೋಗುವವನನ್ನು ಹಿಡಿಯುವುದಕ್ಕೆ ಹೋಗುತ್ತೀರಿ ನೀವು ಎಷ್ಟು ಕಿಮೀ speedನಲ್ಲಿ ಹೋಗುತ್ತೀರಿ? 60 ಕಿಮೀ speedನಲ್ಲಿ ಹೋಗುತ್ತೀರಿ ಹಾಗಾದರೆ ನೀವು ಮಾಡುವುದು ನ್ಯಾಯವೇ? ನೀವು 60ಕಿಮೀ speedನಲ್ಲಿ ಹೋಗುವುದಕ್ಕೆ ಕಾನೂನು ಇದೆಯಾ? ಇದನ್ನು ಕೇಳಿದರೆ ಲಾರಿ ತೆಗೆದುಕೊಳ್ಳುವುದು, ನಮ್ಮನ್ನು ಹೊಡೆಯುವುದು ನಿಮ್ಮ pistolನಲ್ಲಿ shoot ಮಾಡಿದಾಗ ಅದನ್ನು encounter ಎಂದು ಹೇಳುವುದು ನಿಮಗೆ ಅಧಿಕಾರ ಇದೆ ಆದರೆ ನಮಗೆ ಆ ಅಧಿಕಾರ ಇಲ್ಲ ಇದನ್ನು ಸರಿಪಡಿಸಬೇಕು ಈ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಾರದು ನಾವು ಏನು ಕೇಳುತ್ತೇವೆಂದರೆ, naxalite support ಮಾಡಬೇಕು, naxalite ನಮ್ಮ ಜೊತೆಯಲ್ಲಿ ಇರುವವರು, naxalite ನಮ್ಮ leader ಗಳು, naxalite ನಮ್ಮನ್ನು ಗೆಲ್ಲಿಸುವವರು ಎಂದು ಈ ಕಡೆ ಇರುವವರು ಯಾರೂ ಮಾತನಾಡಲಿಲ್ಲ ನೀವು ಮಾಡಿರುವುದು ಸರಿ ಎಂದೇ ಇಟ್ಟುಕೊಳ್ಳಿ ಮೂರು ಜನ ನಿರಪರಾಧಿಗಳು, ಅವರು innocents ಆ innocents ಏನು ತಪ್ಪು ಮಾಡಿದ್ದಾರೆಂದು ಹೇಳಿದ್ದೀರಿ, ಅವರು ಏನೂ ತಪ್ಪು ಮಾಡಿಲ್ಲವೆಂದು ನಮ್ಮ ವಾದ ಅವರು ತಪ್ಪು ಮಾಡದಿದ್ದರೂ ಹೊಡೆದು, ಅವರನ್ನು ನಕ್ಸಲೈಟ್ ಎಂದು ಸೇರಿಸಿದರೆ ನಮ್ಮ ಮನಸ್ಸಿಗೆ ನೋವಾಗುತ್ತದೆ ಅದಕ್ಕೆ ಸರ್ಕಾರ ನಮಗೆ satisfactory reply ಕೊಡಿ ಎಂದು ಕೇಳಿದ್ದೇವೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಇವತ್ತು ನಿಜವಾಗಿಯೂ ಕೂಡ ನಮ್ಮ ಸದನ ಬಹಳ ಜವಾಬ್ದಾರಿಯುತವಾಗಿ ಈ ವಿಷಯವನ್ನು ಚರ್ಚೆ ಮಾಡಿದೆ ನೇರವಾಗಿ ಈ ಘಟನೆಗೆ ಸಂಬಂದಿಸಿದ ವಿಷಯವನ್ನು ಸನ್ಮಾನ್ಯ ಪ್ರತಿಪಕ್ಷದ ನಾಯಕರು ಪ್ರಸ್ತಾಪ ಮಾಡಿದರೂ ಕೂಡ ಅದನ್ನು ಸ್ವಲ್ಪ ಹೊತ್ತಿಗೆ ಮುಗಿಸಬಹುದಾಗಿತ್ತು ಆದರೆ ಇಂತಹ ವಿಚಾರಗಳ ಬಗ್ಗೆ

ವಿವಿಧ ಮುಖಗಳನ್ನು ಎಲ್ಲಾ ಸದಸ್ಯರು ಕೂಡ ತಮ್ಮ ತಮ್ಮದೇ ಆದಂತಹ ದೃಷ್ಟಿಕೋನಗಳಿಂದ ವಿಶ್ಲೇಷಿಸಿದ್ದಾರೆ ಇಂತಹ ವಿಚಾರಗಳು ಬಂದಾಗ ಜಗತ್ತಿನ ಇತಿಹಾಸದಲ್ಲಿ ಬಂದೂಕಿನಿಂದ ಏನೂ ಪರಿವರ್ತನೆಯಾಗಿಲ್ಲ ಬಂದೂಕಿನಿಂದ ಯಾವುದನ್ನು ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ ವೆನ್ನುವುದು ಸರಿಯ್ಯಾದುದಲ್ಲ ಎಲ್ಲಾ ಇತಿಹಾಸವನ್ನು ಅನೇಕ ಸಂದರ್ಭದಲ್ಲಿ ನೋಡಿದಾಗ ಬಂದೂಕಿನಿಂದ ಕೂಡ ಕ್ರಾಂತಿಯಾಗಿರುವುದು ಇದೆ ಆ ಕ್ರಾಂತಿಯನ್ನು ಮಾಡುವುದರಲ್ಲಿ ಅಲ್ಪಸಂಖ್ಯಾತರೂ ಕೂಡ, ಅಂದರೆ ಅಭಿಪ್ರಾಯದ ಅಲ್ಪಸಂಖ್ಯಾತರು ಸೇರಿದ್ದಾರೆ Tyranny of the minority ಎಂದು ಕರೆಯುತ್ತಾರೆ Minority ಎಂದರೆ ಯಾವುದೋ ಒಂದು ಜಾತಿಗೆ ಅಥವಾ ಧರ್ಮಕ್ಕೆ ಸಂಬಂಧಪಟ್ಟಿದ್ದಲ್ಲ ನಾವು ಯಾರಾದರೂ ನಮ್ಮದೇ ಆದಂತಹ ಅಭಿಪ್ರಾಯವನ್ನು ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಆದರೆ ಆ ದೊಡ್ಡ ಕನಸನ್ನು ಒಬ್ಬ ಗೊರ್ಬಚೇವ್ ನುಚ್ಚು ನೂರು ಮಾಡಿರುವಂಥದ್ದೂ ಆಯಿತು ಆದರೆ ಅದೇ ರೀತಿಯಾಗಿ ಪ್ರಜಾಪ್ರಭುತ್ವದ ಬಹುಮತದ ಮೂಲಕ ಆಯ್ಕೆಯಾಗಿ ಬಂದಂತಹ ಒಬ್ಬ ಅಡಾಲ್ಫ್ ಹಿಟ್ಲರ್ ಫ್ಯಾಸಿಸ್ಟ್ ಸಿದ್ಧಾಂತಗಳನ್ನು ತರುವುದರ ಮೂಲಕ, ನಾಜಿ ಸಿದ್ಧಾಂತಗಳನ್ನು ತರುವುದರ ಮೂಲಕವಾಗಿ ಜನತೆಯನ್ನು gas chamberಗೆ ಕಳುಹಿಸಿರುವಂತಹ ಉದಾಹರಣೆಯನ್ನು ಕೂಡ ನಾವು ಕಂಡಿದ್ದೇವೆ ಆದ್ದರಿಂದ ನಮ್ಮ ಈ ವ್ಯವಸ್ಥೆಗಳನ್ನು ಅಥವಾ ಈ ತಿಳುವಳಿಕೆಗಳನ್ನು ನಾವು ಬಹಳ ಸರಳವಾಗಿ ಅರ್ಥೈಸುವುದಕ್ಕೆ ಸಾಧ್ಯವಿಲ್ಲ ಏಕೆಂದರೆ ಬದುಕು ಮತ್ತು ತತ್ವಗಳು ಬಹಳ ಸಂಕೀರ್ಣ ಹಾಗೂ ಸೂಕ್ಷ್ಮ ತರುಮಿನ ನಾಗೀರೆಡ್ಡಿಯವರು ಸದಾಕಾಲ ನಮ್ಮ ಹತ್ತಿರ ಬಂದು ಯಾವ ರೀತಿ ನಮ್ಮನ್ನು ಪ್ರಚೋದನೆ ಮಾಡುತ್ತಿದ್ದರು ಎಂದು ಗೊತ್ತಾಗುತ್ತದೆ ಆಗ ಅವರು ಎಂ ಪಿ ಆಗಿದ್ದರು ಅವರು ಸಂಜೀವ ರೆಡ್ಡಿಯವರ ಸ್ವತಃ brother-in-law, ಅವರ ತಂಗಿಯನ್ನೇ ಮದುವೆಯಾಗಿದ್ದರು ಮಾನ್ಯ ಶ್ರೀರಾಮರೆಡ್ಡಿಯವರಿಗೆ ಗೊತ್ತಿದೆ, ಆದರೆ ಅಂತಹ ಒಬ್ಬ ದೊಡ್ಡ ಕ್ರಾಂತಿಕಾರಿ ಹೈದಾರಾಬಾದ್‌ನಲ್ಲಿ ಸತ್ತಂತಹ ಸಂದರ್ಭದಲ್ಲಿ ಆತನ ಹೆಣವನ್ನು ಯಾರೂ ಗುರುತಿಸುವುದಕ್ಕೆ ಸಾಧ್ಯವಿಲ್ಲದಿದ್ದಾಗ ಅದನ್ನು ಅವರ ಬಂಧುಗಳ ಮನೆಯ ಕಟ್ಟೆಯ ಮೇಲೆ ತೆಗೆದುಕೊಂಡು ಹೋಗಿ ಮಲಗಿಸಿರುವಂಥದ್ದು ಇದೆ ಆಗ ಅವರು ಹೇಳುತ್ತಿದ್ದರು, ಕ್ರೈಪೋಟ್ಕಿನ್ theory of anarchyಯಿಂದ ಹಿಡಿದ ಹೆಗಲ್ ಮತ್ತು ಮಾರ್ಕ್ಸ್‌ರವರ dialectical theoryವರೆಗೆ

ಇರತಕ್ಕಂಥಾದ್ದರಲ್ಲಿ ಎಷ್ಟು contradiction ಇವೆ ನಾವು ಅವುಗಳನ್ನು ಸರಿಯಾಗಿ ಅನುಸರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಇವತ್ತು Anarchist Movement ಅನ್ನು ಬೇಕು, ವೈಯಕ್ತಿಕವಾಗಿ ನಾನು ಇರುತ್ತೇನೆಂದು ಹೇಳುವುದಾದರೆ, it is a pluralistic society ಆದುದರಿಂದ ತಾವು ಬಹಳ ಎತ್ತರಕ್ಕೆ ಈ ವಿವಾದವನ್ನು ತೆಗೆದುಕೊಂಡು ಹೋಗಿದ್ದರಿಂದ, ನಾನು ಅನಿವಾರ್ಯವಾಗಿ ಈ ಮಾತನ್ನು ಹೇಳಬೇಕಾಗುತ್ತದೆ ಆದರೆ ತಾವು ಒಂದು ಸತ್ಯದ ಸಂಗತಿಯನ್ನು ಹೇಳಿದ್ದೀರಿ ನಾವು ಯಾರು ನಕ್ಸಲರಿಗೆ ಬೆಂಬಲವನ್ನು ಕೊಡುವುದಿಲ್ಲವೆಂದು ಹೇಳಿದ್ದೀರಿ ನಾವು ಹಿಂಸೆಯ ಮಾರ್ಗದ ಮೂಲಕವಾಗಿ ನಾವು ಏನಾದರೂ ಬದಲಾವಣೆ ಯನ್ನು ತರುತ್ತೇವೆ ಎಂಬ ವಿಚಾರಗಳು ಆತನಗೆ ಇರಬಹುದು ಆತ ನಂಬಿರಬಹುದಾದಂಥ ಸತ್ಯವೂ ಆತನಗೆ ಆಗಿರಬಹುದು ಆದರೆ ನಂಬಿದ ಸತ್ಯವನ್ನು ಮತ್ತೊಬ್ಬರ ಮೇಲೆ ಬಂದೂಕಿನ ಮೂಲಕ ಹೇರುತ್ತೇನೆನ್ನು ವಂಥಾದ್ದು ಏನು ಇದೆ, ಅದು ನಿಜವಾಗಿಯೂ ಖಂಡನಾರ್ಹವಾಗಿರು ವಂಥಹ ಕ್ರಮ ಆತ ಸಂವಿಧಾನಕ್ಕೆ ಬದ್ಧನಲ್ಲ ಆತ ಪ್ರಜಾಪ್ರಭುತ್ವದ ತತ್ವಕ್ಕೆ ಒಳಗಾಗುವುದಿಲ್ಲ ಆತ ಹಿಂಸೆಯ ಮಾರ್ಗದಿಂದ ನಾನು ಬದಲಾವಣೆಯನ್ನು ಮಾಡುತ್ತೇನೆಂದು ಹೇಳಿದಾಗ, ಮಾನ್ಯ ಜ್ಞಾನೇಂದ್ರರವರು ಹೇಳಿರುವಂಥಾ ಮಾತು ಇಷ್ಟೇ, ಬಂದೂಕಿಗೆ ಕಾನೂನು ಗೊತ್ತಿಲ್ಲ ಬಂದೂಕಿಗೆ ಭಾಷೆ ಗೊತ್ತಿಲ್ಲ ಅದಕ್ಕೆ ಕಾನೂನು ಮತ್ತು ಭಾಷೆ ಗೊತ್ತಿಲ್ಲವೆಂದಾಗ, ಅದರ ವಿರುದ್ಧವಾಗಿ ಹೋರಾಟ ಮಾಡುವಂಥವರು ಬಹಳ ಕಡಿಮೆ ಇರುವಂಥ ಅಸಹಾಯಕರು ಇರುತ್ತಾರೆ ಎಲ್ಲೋ ಒಬ್ಬ ಹೋಚ್‌ಮನ್‌ನಂಥವರು, ಎಲ್ಲೋ ಒಬ್ಬ ಲೆನಿನ್‌ನಂಥವರು, ಎಲ್ಲೋ ಒಬ್ಬ ಅಲಡೇನಂಥವರು, ಬಂದಂಥ ಸಂದರ್ಭಗಳಲ್ಲಿ ಜನತೆಯನ್ನು ಎತ್ತಿ ಕಟ್ಟಲಿಕ್ಕೆ ಸಾಧ್ಯವಾಗುತ್ತದೆ ಆದರೆ ಸಾಮಾನ್ಯ ಜನರು, ಅವರು ಹೇಳಿದಂತೆ ಬಹಳ ಅಸಹಾಯಕ ಸ್ಥಿತಿಯಲ್ಲಿ ಇದ್ದಾರೆ ಆದುದರಿಂದ ನಾವು ಹಿಂಸಾಮಾರ್ಗವನ್ನು ವಿರೋಧ ಮಾಡುತ್ತೇವೆಂದಾಗ, ಅದು ಯಾವುದೇ ಹಿಂಸಾ ಮಾರ್ಗವಾಗಿರಲಿ, ನಾವು ಇಲ್ಲಿ ಅನುಮಾನ ಪಡುವಂಥಾದ್ದು ಏನೆಂದರೆ, ಮಾನ್ಯ ಸುನೀಲ್ ಕುಮಾರ್‌ರವರು, ಮಾನ್ಯ ಆರಗ ಜ್ಞಾನೇಂದ್ರರವರು, ಮಾನ್ಯ ಜೀವರಾಜ್‌ರವರು ಪ್ರಸ್ತಾಪ ಮಾಡಿರುವಂಥಾದ್ದು, ಶೇಷೇಗೌಡರನ್ನು ಹೊಡೆದಾಗ, ಈ ಕನಿಕರ ಏಕೆ ತಪ್ಪಾಗಿತ್ತು? ಅಥವಾ, 50,000 ರೂಪಾಯಿಗಳನ್ನು ತೆಗೆದುಕೊಂಡು ಹೋಗಿ, ಅವರಿಗೆ

ತೊಂದರೆಯನ್ನು ಕೊಟ್ಟಿರುವಂಥಾದ್ದು ಆದಾಗ ಏನಾಯಿತು? ಆದರೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ, ನಕ್ಸಲರು ಎಂಬ ಹೆಸರಿನ ಮೂಲಕ, ಅನೇಕರು ಈ ರೀತಿಯ ಕುಕೃತ್ಯಗಳನ್ನು ಮಾಡುತ್ತಿರುತ್ತಾರೆ ಅವರ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ ಎಲ್ಲರನ್ನು ನಾವು ಆ ರೀತಿಯಲ್ಲಿ ಹೇಳುವುದಕ್ಕಾಗುವಿದಿಲ್ಲ ಈಗ ಸಾಕೇತ್ ರಾಜನ್‌ರವರ ಕೊಲೆಯಾದ ಸಂದರ್ಭದಲ್ಲೂ ಕೂಡ ಎನ್‌ಕೌಂಟರ್ ಎಂದೇ ಹೇಳಿದರು ಆದರೆ ಅವರು ಒಂದು ತತ್ವದ ಮೂಲಕ ಪ್ರೇರೇಪಿತರಾಗಿರುವಂಥಾದ್ದು ಆದರೆ ಅವರ ಸಾವಿನಲ್ಲಿ ಆದರ್ಶದ ಗುಣಗಳು ಇರುತ್ತವೆ ಆ ಸಾವಿನಲ್ಲಿ ನಾವು ಒಪ್ಪಿದ್ದೇವೆಂದರೂ ಕೂಡ ನಾವು ತತ್ವವನ್ನು ಒಪ್ಪುತ್ತೇವೆಂದು ಅಲ್ಲ ಭಗತ್ ಸಿಂಗ್‌ರವರನ್ನು ಮರಣದಂಡನೆಗೆ ಒಳಪಡಿಸುವಂಥಾ ಸಂದರ್ಬದಲ್ಲಿ ಮಹಾತ್ಮ ಗಾಂಧೀಜಿಯವರು, "ಅವರು ನಿಮ್ಮನ್ನು ಶೂಟ್ ಮಾಡಿರುವಂಥಾದ್ದು, ಹಿಂಸೆ ಮಾಡಿರುವಂಥಾದ್ದನ್ನು ನಾನು ಒಪ್ಪುವುದಿಲ್ಲ" ಎಂದು ಹೇಳಿದರು ಆದರೆ ಅದರಲ್ಲಿರುವಂಥಾ ಕ್ಷಾತ್ರ ತೇಜಸ್ಸು, ಅದರಲ್ಲಿರುವಂಥಾ ದೇಶಪ್ರೇಮ, ಅದೇ ರೀತಿಯಾಗಿ ನೆಹರುರವರು INA ವಿಚಾರದಲ್ಲಿ ಸುಭಾಷ್‌ಚಂದ್ರರವರ ಪರವಾಗಿ ವಕಾಲತ್ತು ಮಾಡುವಂಥಾ ಸಂದರ್ಭದಲ್ಲೂ ಕೂಡ ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಇವು ಒಂದೊಂದು ಮಾರ್ಗಗಳು, ಆ ಮಾರ್ಗಗಳು ಮತ್ತೊಬ್ಬರಿಗೆ. ಪರಪೀಡನೆಯಾಗಬಾರದು, ಹಿಂಸೆಯಾಗಬಾರದು ಇವತ್ತು ನಮ್ಮ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸೂಕ್ಷ್ಮವಾಗಿ, ಚೆನ್ನಾಗಿ ಹೇಳಿದರು ನಿಮ್ಮ ಶಕ್ತಿಯನ್ನು ಮೆಚ್ಚುತ್ತೇವೆ, ಜ್ಞಾನೇಂದ್ರರವರೇ, ಅಲ್ಲಿರುವಂಥಾ ಕೆಂಪು ಬಾವುಟಗಳನ್ನು ಕೆಳಗಿಳಿಸಿ ನೀವು ಕೇಸರಿ ಬಾವುಟವನ್ನು ತಂದಿರತಕ್ಕಂಥಾ ಶಕ್ತಿಯನ್ನು ನಾನು ಒಪ್ಪುತ್ತೇನೆನ್ನುವಂಥ ಮಾತನ್ನು ಹೇಳಿದರು ಜನತೆ ಯಾವುದನ್ನು ಒಪ್ಪುತ್ತದೆ ಅದನ್ನು ನಾವು ಸ್ವೀಕಾರ ಮಾಡಬೇಕಾಗಿರುವಂಥಾದ್ದು ನಮ್ಮ ಧರ್ಮ, ಅದು ಪ್ರಜಾಪ್ರಭುತ್ವದ ವ್ಯವಸ್ಥೆಯಾಗಿದೆ ಇವತ್ತು ಅಲ್ಲಿ ಗೆದ್ದು ಬಂದಿರುವಂಥವರು ಸ್ವಾತಂತ್ರ್ಯವಾಗಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲವೆಂದಾಗ, ಅದನ್ನು ನಾವು ವಿರೋಧ ಮಾಡಲೇ ಬೇಕಾಗುತ್ತದೆ ಅದಕ್ಕೆ ನಾವು ಕ್ರಮ ಕೈಗೊಳ್ಳಲೇಬೇಕಾಗುತ್ತದೆ, ಕ್ರಮ ಕೈಗೊಳ್ಳುವಂಥಾ ಸಂದರ್ಭದಲ್ಲಿ ಯಾರು ನಕ್ಸಲರು, ಯಾರು ನಕ್ಸಲರಲ್ಲವೆಂದು ವಿಭಜನೆ ಮಾಡುವಂಥಾದ್ದು ಒಂದೊಂದು ಸಂದರ್ಭದಲ್ಲಿ ಆಗುವುದಿಲ್ಲ

ಜಲಿಯನ್ ವಾಲಾಬಾಗ್ ಪ್ರಶ್ನೆಯನ್ನು ಹೇಳಿದರು ಅಡಿಗೆ ಮನೆಯಲ್ಲಿರುವ ವರಿಗೆ ಹೊರಗಿನಿಂದ ಗುಂಡಿಟ್ಟು ಹೇಗೆ ಕೊಲ್ಲುವುದಕ್ಕೆ ಆಗುತ್ತದೆ ಎಂದು ಹೇಳಿದರು ಯಾರಿಗಾದರೂ ಏಟು ಬಿದ್ದರೆ, ಅವರು ದೂರ ಕ್ರಮಿಸುತ್ತಾರೆ ಜಲಿಯನ್ ವಾಲಾಬಾಗ್‌ನಲ್ಲಿ ಡಯರ್‌ರವರು ಮಾಡಿರುವಂಥ ಗುಂಡಿನ ಹಾರಾಟದಲ್ಲಿ ಅನೇಕರು ಬಾವಿಯಲ್ಲಿ ಬಿದ್ದು ಸತ್ತರು ಆಗ ಗುಂಡಿನ ಏಟು ಬಿದ್ದಿತ್ತು, ಅಂದರೆ ಬಾವಿಯಲ್ಲಿ ಬಿದ್ದಂಥವರಿಗೆ ಡಯರ್ ಗುಂಡು ಇಟ್ಟು ಹೊಡೆದನೆಂಬ ಮಾತು ಅಲ್ಲ ಒಂದು ಆನೆಗೆ, ಒಂದು ಮೃಗಕ್ಕೆ ಹೊಡೆದರೆ, ಅವು ಅಷ್ಟು ದೂರಕ್ಕೆ ಹೋಗಿರುತ್ತವೆ ಇವರು ಪಡಸಾಲೆಗೆ ಬಂದಿರಬಹುದು, ಅಥವಾ ಇನ್ನೊಂದು ಕಡೆಗೆ ಬಂದಿರಬಹುದು ಅದು ತನಿಖೆಯಿಂದ ಗೊತ್ತಾಗುತ್ತದೆ ಅವರು ಅಡಿಗೆ ಮನೆ ಹೆಚ್ಚು ಸುರಕ್ಷಿತ ಸ್ಥಳವೆಂದು ಅಲ್ಲಿಗೆ ಹೋಗಿರಬಹುದು ಇದು ಎಲ್ಲಾ ಊಹೆ ಮಾತು, ಆದುದರಿಂದ ಅಲ್ಲಿ ಯಾರು ಹೊಡೆದರು, ಎನ್ನುವಂಥಾದ್ದಕ್ಕಿಂತ ಅವರು ಸುರಕ್ಷಿತ ಸ್ಥಳಕ್ಕೆ ನಿರ್ಗಮಿಸಿರಬಹುದು ಆ ದೃಷ್ಟಿಕೋನದಿಂದಲೂ ಕೂಡ ತಾವು ನೋಡಲೇಬೇಕಾಗುತ್ತದೆ ಇಲ್ಲಿ ಮೂಲಭೂತವಾಗಿ ಪ್ರಶ್ನೆಯನ್ನು ಹೇಳಬೇಕಾದರೆ, ಇವರು ಮೂರು ಜನರು ಯಾವಾಗಲೂ ಕೂಡ ತಪ್ಪಿತಸ್ಥರಲ್ಲವೆನ್ನುವಂಥ ಮಾತು ಹೇಳುತ್ತಾರೆ ಸುಬ್ರಹ್ಮಣ್ಯಂರವರ ವಿಚಾರದಲ್ಲಿ ಅನೇಕ ದಾವೆಗಳು, ಕೇಸುಗಳು ಹಾಕಿರುವಂಥ ಪ್ರಕರಣಗಳು ಇವೆ ಬೇರೆಯವರ ವಿಚಾರದಲ್ಲೂ ಕೂಡ ಮಾಹಿತಿಯನ್ನು ತತ್‌ಕ್ಷಣದಲ್ಲಿ ಸಂಗ್ರಹ ಮಾಡಿಕೊಳ್ಳುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗಲಿಲ್ಲ ಅದನ್ನು ಮುಂದಿನ ದಿವಸಗಳಲ್ಲಿ, ಈ ಅಧಿವೇಶನ ಮುಗಿಯುವುದರೊಳಗೆ ತಮಗೆ ಕೊಡುತ್ತೇವೆ

ಶ್ರೀ ಸಿದ್ಧರಾಮಯ್ಯ. ಮಾನ್ಯ ಅಧ್ಯಕ್ಷರೆ, ನೀವು ಹೇಳಿರುವಂಥ ಹೇಳಿಕೆಯಲ್ಲೂ ಕೂಡ, ಪೊಲೀಸ್‌ನವರು ಖಚಿತ ಮಾಹಿತಿಯ ಮೇಲೆ ಎಂದು ಇದೆ ಅಂದ ಮೇಲೆ ಇವರ ಬಗ್ಗೆಯೂ ಕೂಡ ಮಾಹಿತಿ ಇತ್ತಲ್ಲ? ನಿಮಗೆ ಈ ಮೂರು ಜನರ ಮಾಹಿತಿ ಕೂಡ ಇತ್ತಲ್ಲ? ಇವರು ನಕ್ಸಲರೇ ಅಥವಾ ನಕ್ಸಲರಿಗೆ ಸಪೋರ್ಟ್ ಮಾಡುತ್ತಿದ್ದರೇ ಅಥವಾ ಅವರಿಗೆ ಆಸರೆಯನ್ನು ಕೊಡುತ್ತಿದ್ದರೇ? ಇನ್ನು ಯಾವುದಾದರೂ ರೀತಿಯಲ್ಲಿ ಬೆಂಬಲವನ್ನು ಕೊಡುತ್ತಿದ್ದರೇ? ಇದಾದರೂ ಇವರಿಗೆ ಮಾಹಿತಿ ಇರಬೇಕಲ್ಲಾ? ಇವರು ಬೆಳಗಿನ ಜಾವ ಇವರ ಮನೆಯ ಮೇಲೆ ದಾಳಿ ಮಾಡುವುದಕ್ಕೆ ಹೋದಾಗ, ಪೊಲೀಸ್‌ನವರು ಖಚಿತ ಮಾಹಿತಿಯ ಮೇಲೆ

ಹೋಗಿದ್ದೇವೆಂದು ಹೇಳಿದ್ದಾರೆ ಆ ಖಚಿತ ಮಾಹಿತಿ ಇದ್ದ ಮೇಲೆ, ಇವರು ಯಾರು? ರಾಮೇಗೌಡ ಯಾರು? ಸುಬ್ರಹ್ಮಣ್ಯ ಯಾರು? ರಾಮೇಗೌಡನ ಹೆಂಡತಿ ಕಾವೇರಿ ಯಾರು? ಇವರಿಗೆ ಏನು ಸಂಬಂಧಗಳು? ಇವರ ಪಾತ್ರವೇನು? ಎಂಬುದು ಇರಬೇಕಲ್ಲಾ ನೀವು ಕೊಟ್ಟಿರುವ ಮಾಹಿತಿಯಲ್ಲಿ ಅಲ್ಲಿ ಬುಲೆಟ್ಸ್ ಮತ್ತು ಒಂದು ಗನ್, ಒಂದು ರಿವಾಲ್ವರ್, ಸಿಕ್ಕಿರುವಂಥಾದ್ದು ಎಂದು ಹೇಳಿದ್ದೀರಿ ನಿಮ್ಮಪ್ರಕಾರವೇ ಗೌತಮ್ ಮತ್ತು ಪರಮೇಶ್ ಎನ್ನುವವರು ನಕ್ಸಲೈಟ್ಸ್ ಎಂದು ಹೇಳಿದ್ದಾರೆ ಇವರು ಮೂರು ಜನರ ಬಗ್ಗೆ ಏನೂ ಮಾಹಿತಿ ಇಲ್ಲದೇ, ಹೇಗೆ ಅವರ ಮನೆಯ ಮೇಲೆ ದಾಳಿ ಮಾಡಿದರು? ಅವರನ್ನು ಹೇಗೆ ಕೊಂದು ಹಾಕಿದರು? ನಿಮ್ಮ ಪ್ರಕಾರವೇ ಇವರು ನಿರಪರಾಧಿಗಳು, ನಿರಾಯುಧರಲ್ಲವೇ? ನಾವು ಏನು ಹೇಳುವಂಥಾದ್ದು ಎಂದರೆ,ಇವರು ಮೂರು ಜನರ ಜೀವವನ್ನಾದರೂ ಉಳಿಸುವುದಕ್ಕೆ ಸಾಧ್ಯವಾಗುತ್ತಿತ್ತು ನಕ್ಸಲೈಟ್ಸ್ ಕೊಂದುದಕ್ಕೆ ಎನ್‌ಕೌಂಟರ್ DVzÉ C ª ±ÀÅ ±ÀÆ ª ÉÃz±À. C ª ±ÀÅ fire ಮಾಡಿದರು, ಇವರು ಕೂಡ fire ಮಾಡಿದರು ಸರಿ, ಈ ಮೂರು ಜನರ ಮೇಲೆ ಏನು ಕೋಪ? ಇವರು ಮೂರು ಜನರು ಪ್ರಾಣ ಕಳೆದುಕೊಂಡಿರುವವರು ನಿಮ್ಮಪ್ರಕಾರ ನಿರಪರಾಧಿಗಳು ಇವರ ಜೀವ ಬಹಳ ಅಮೂಲ್ಯ ಅಲ್ಲವಾ? ಇದಕ್ಕೆ ಯಾರು ಕಾರಣಕರ್ತರೆಂದು ನಿಗದಿ ಮಾಡುವುದು? ಇದು ಬಹಳ ಮುಖ್ಯ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ ಪಿ ಪ್ರಕಾಶ್ ರವರು ಮಾತನಾಡುವಾಗ, ಜಲಿಯನ್ ವಾಲಾಬಾಗ್ ಉದಾಹರಣೆಯನ್ನು ಕೊಟ್ಟರು ಜಲಿಯನ್ ವಾಲಾಬಾಗ್‌ನಲ್ಲಿ ಡೈಯರ್ ಫೈಯರ್ ಮಾಡುವಾಗ, ಗಾಬರಿಯಿಂದ ಓಡಿ ಹೋಗಿ ಬಾವಿಯಲ್ಲಿ ಬಿದ್ದು ಸತ್ತದ್ದು ನಿಜ ಆ ಬಾವಿ ಈಗಲೂ ಅಲ್ಲಿ ಇದೆ ಆದರೆ ಬಾವಿಯಲ್ಲಿ ಬಿದ್ದವರ ಮೇಲೆ ಗುಂಡು ಹಾರಿಸಿರಲಿಲ್ಲ ಇಲ್ಲಿ ಅಡಿಗೆ ಮನೆಯಲ್ಲಿ ಇದ್ದಂಥವರು ಗುಂಡು ತಗುಲಿ ಸತ್ತಿರುವಂಥಾದ್ದು

ಶ್ರೀ ಎಂ ಪಿ ಪ್ರಕಾಶ್ ಗುಂಡು ತಗುಲಿದ್ದವರು ಕೂಡ ಬಾವಿಯಲ್ಲಿ ಬಿದ್ದಿದ್ದರು, ಅಂದರೆ ಆ ಸ್ಥಳದಲ್ಲಿ ಹೋಗಿ ಗುಂಡು ಹೊಡೆದರೆಂದಲ್ಲ ಮನುಷ್ಯ ಗುಂಡು ಹೊಡೆದಾಗಲೂ ಕೂಡ ಓಡುತ್ತಾನೆ ಅವನು ತಪ್ಪಿಸಿ ಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹೌದು, ನಾನು ಅದನ್ನೇ ಹೇಳಿದ್ದು ಗುಂಡು ಹೊಡೆಯುವುದಕ್ಕೆ ಮೊದಲು ಇವರು ಮೂರು ಜನರು ಒಳಗಡೆ ಇದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಒಳಗಡೆ ಇದ್ದಂಥವರು ಪಡಸಾಲೆಗೆ ಬಂದಿರಬಹುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ತಾವು ಒಳಗಡೆ ಇದ್ದಾಗ ಗುಂಡು ಹೊಡೆದಿರುವಂಥಾದ್ದು ಎಂದು ಹೇಳುತ್ತಿದ್ದೀರಿ ಅವರು ಹೊರಗಡೆ ಬಂದಿಲ್ಲ, ಅವರ ಬಳಿ ಬಂದೂಕು ಇರಲಿಲ್ಲ ಈ ಮೂರು ಜನರ ಕೈಯಲ್ಲಿ ಬಂದೂಕು ಇರಲಿಲ್ಲ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಜಿ ವಿ ಶ್ರೀರಾಮರೆಡ್ಡಿಯವರೆ, ತಮ್ಮ ವಾದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ ಇಲ್ಲಿ ಒಂದು ಅರ್ಥದಲ್ಲಿ ನಿಮ್ಮವಾದವೂ ನಿಜವೆ, ಏನೆಂದರೆ ಅಡಿಗೆ ಮನೆಯಲ್ಲಿ ಏಕೆ ಆಯಿತು ಎಂದು ಆದರೆ ನಮ್ಮ ವಾದದಲ್ಲೂ ಕೂಡ ಸತ್ಯಾಂಶವಿದೆ ಅಲ್ಲಿ ಹೊಡೆತ ಬಿದ್ದ ಮೇಲೆ ಅಡಿಗೆ ಮನೆ ಸುರಕ್ಷಿತ ಸ್ಥಳವೆಂದು ಹೋಗಿರಬೇಕು

ಶ್ರೀ ಬಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೆ, ಈಗ ಖಚಿತವಾಗಿ ವರ್ತಮಾನ ಬಂದಾಗ, ನಕ್ಸಲರು ಇಲ್ಲಿ ಅಡಗಿದ್ದಾರೆಂದು ಸುದ್ದಿ ಬರಬಹುದು ಆದರೆ ಇಷ್ಟೇ ಜನರಿದ್ದಾರೆಂದು ಬರುವುದಿಲ್ಲ ಇಲ್ಲಿ ನಕ್ಸಲರು ಒಳಗಡೆ ಅಡಗಿದ್ದಾರೆ, ಎಷ್ಟು ಜನರು ಇದ್ದಾರೆಂಬುದು ಗೊತ್ತಿಲ್ಲ ಇಲ್ಲಿ ಅಮಾಯಕರು ಯಾರು, ಮತ್ತೆ ದುಷ್ಕೃತ್ಯವನ್ನು ಎಸೆಗಿದವರು ಯಾರೆಂಬುದು ಗೊತ್ತಿಲ್ಲ ಒಳಗಡೆ ಇರುವಂಥ ನಕ್ಸಲರಿಗೆ ಹೊರಗಡೆ ಇರುವಂಥ ಪೊಲೀಸರು ಕಾಣಿಸುತ್ತಾರೆ ಆದರೆ ಹೊರಗಡೆ ಇರುವಂಥ ಪೊಲೀಸರಿಗೆ ಒಳಗಡೆ ಇರುವವರ ಬಗ್ಗೆ ಗೊತ್ತಿಲ್ಲ ಆದುದರಿಂದ ಪೊಲೀಸ್‌ನವರು ಸಾರ್ವಜನಿಕ ಹಿತದೃಷ್ಟಿಯಿಂದ ಒಳಗಡೆ ಗುಂಡು ಹಾರಿಸಿದಾಗ, ಅದು ತಗುಲಿರಬಹುದು ಕೆಲವು ವಿಷಯಗಳಲ್ಲಿ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕಾದರೆ, ಕೆಲವು ಕಡೆ ತಪ್ಪು ಆಗುತ್ತದೆ ತಪ್ಪು ಒಪ್ಪು ಎನ್ನುವ ಬಗ್ಗೆ ಆಮೇಲೆ ಅದು ನಿರ್ಧಾರವಾಗುತ್ತದೆ ಆದರೆ ಅದೇ ಸಂದರ್ಭದಲ್ಲಿ

ಒಂದೇ ಗನ್‌ನಿಂದ ನೂರು ಜನರನ್ನು ಸಾಯಿಸಬಹುದಾಗಿತ್ತು ಹೊರಗಡೆಯ ಪೊಲೀಸರನ್ನು ಸಾಯಿಸಬಹುದಾಗಿತ್ತು, ಮುಂದೆ ಆಗುವಂಥ ಅನಾಹುತವನ್ನು ತಪ್ಪಿಸಿದ್ದಕ್ಕೆ ಪೊಲೀಸರಿಗೆ ಧನ್ಯವಾದವನ್ನು ಅರ್ಪಿಸಬೇಕೇ ಹೊರತು, ಇವತ್ತು ನಕ್ಸಲೈಟ್ಸ್ ಚಟುವಟಿಕೆಯನ್ನು ಅಥವಾ ಮೂವರು ಅಮಾಯಕರು ಸತ್ತರು ಎಂದು ಹೇಳುವಂಥಾದ್ದು ತಪ್ಪೆಂದು ನಾನು ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ ಸಿ ಪಾಟೀಲ್‌ರವರು ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡಿದ್ದಾರೆ ಅವರು ಏನು ಹೇಳುತ್ತಾರೆಂದರೆ, ಅವರು ಎಷ್ಟು ಜನರು ಇದ್ದರು? ಇದು ಪೊಲೀಸ್‌ನವರಿಗೆ ಗೊತ್ತಿರಲೇಬೇಕು ನಕ್ಸಲೈಟ್ಸ್ ನಿಗ್ರಹ ದಳದವರಿಗೂ ಕೂಡ ಮಾಹಿತಿ ಇದೆಯೆಂದ ಮೇಲೆ, ರಾಮೇಗೌಡರ ಮನೆಯೆಂಬುದು ಇವರಿಗೆ ಗೊತ್ತಿದೆಯಲ್ಲಾ, ಇವರ ಮನೆಯಲ್ಲಿ ಯಾರ‍್ಯಾರು ಇದ್ದಾರೆಂಬುದು ಗೊತ್ತಿದೆಯಲ್ಲಾ, ರಾಮೇಗೌಡನ ಹೆಂಡತಿ ಕಾವೇರಮ್ಮ, ಇವರು ನಿರಪರಾಧಿಗಳೋ, ಅಲ್ಲವೋ ಎಂಬುದು ಗೊತ್ತಿದೆಯಲ್ಲವೇ? ಈ ಮಾಹಿತಿ ಇರಲೇಬೇಕಲ್ಲಾ ಅಷ್ಟರ ಮಟ್ಟಿಗೆ intelligenceಗೆ ವರದಿ ಇರುತ್ತದೆಯಲ್ಲಾ ನಮ್ಮಲ್ಲಿ ಬಹಳ ಮುಖ್ಯವಾಗಿ intelligence ಇದೆಯಲ್ಲಾ, ಇದು ಬಹಳ ವೀಕ್ ಆಗಿದೆ ಕರ್ನಾಟಕ ರಾಜ್ಯದಲ್ಲಿ intelligence ಅನ್ನು ಬಲಪಡಿಸದೇ ಹೋದರೆ, ಇಂಥ ಅನಾಹುತಗಳು ಆಗಿಯೇ ಆಗುತ್ತವೆ ಆದುದರಿಂದ intelligence ಅನ್ನು ಭದ್ರಪಡಿಸಬೇಕು ಇವರಿಗೆ ಮಾಹಿತಿ ಸರಿಯಾಗಿ ಇತ್ತೆಂದ ಮೇಲೆ, ಈ ರೀತಿಯಾಗುವಂಥಾದ್ದಕ್ಕೆ ಸಾಧ್ಯ ವಾಗುತ್ತಿರಲಿಲ್ಲ

ಶ್ರೀ ಎಂ ಪಿ ಪ್ರಕಾಶ್ ಈಗ ತಾವು ಹೇಳಿದಂಥ ಮಾತು ನಿಜ ಅಲ್ಲಿ ಬಂದಿರತಕ್ಕಂಥ ಖಚಿತವಾದ ಮಾಹಿತಿಯೆಂದರೆ, ರಾಮೇಗೌಡರ ಮನೆಯಲ್ಲಿ ನಕ್ಸಲರ ಸಭೆ ನಡೆದಿದೆ ಅಲ್ಲಿ ಎಷ್ಟು ಜನರಿದ್ದಾರೆ ಎನ್ನುವುದಕ್ಕಿಂತಲೂ ಹೆಚ್ಚಾಗಿ, ಅಲ್ಲಿ ಸಭೆ ನಡೆದಿರತಕ್ಕಂಥಾದ್ದು, ಅವರಿಗೆ ಆಶ್ರಯ ಕೊಟ್ಟಿರತಕ್ಕಂಥಾದ್ದು, ಅಲ್ಲಿ ಎಲ್ಲರೂ ಸೇರಿದ್ದಾರೆ ಎಂದು ಗೊತ್ತಾಗುತ್ತದೆ ಹಿಂದೆ "Operation Blue Star" ಆಯಿತು ಆಗ ಬಿಂದ್ರನ್‌ವಾಲೆ ಜೊತೆ ಎಷ್ಟು ಜನರಿದ್ದಾರೆ ಎನ್ನುವ ನಿಖರವಾದ ಮಾಹಿತಿ ಯಿತ್ತು ಆದರೆ ಅಲ್ಲಿ ಯಾತ್ರಾರ್ಥಿಗಳು ಎಷ್ಟು ಮಂದಿ ಇದ್ದರು, ಅಲ್ಲಿ

ಪ್ರಾರ್ಥನೆಗೆ ಹೋದಂಥವರು ಎಷ್ಟು ಮಂದಿ ಇದ್ದರು ಎನ್ನುವ ಬಗ್ಗೆ ನಿಖರವಾದ ಮಾಹಿತಿಯೇನೂ ಸಿಗಲಿಲ್ಲ ಬಿಂದ್ರನ್‌ವಾಲೆ ಎನ್ನುವ ಒಬ್ಬ ಮನುಷ್ಯನನ್ನು ಹಿಡಿಯಬೇಕಾದರೆ, ಎಷ್ಟು ಜನಗಳ ಕಗ್ಗೊಲೆಯಾಯಿತು ಎನ್ನುವುದು ಎಲ್ಲರಿಗೂ ತಿಳಿದೇ ಇದೆ ಕೆಲವು ಸಂದರ್ಭಗಳಲ್ಲಿ ಅದು ಅನಿವಾರ್ಯ ನೀವು ಒಪ್ಪದೇ ಇರಬಹುದು ಆ ಮಾತು ಬೇರೆ

ಶ್ರೀ ಕೆ ಆರ್ ರಮೇಶ್ ಕುಮಾರ್ ನಾನು ಕೈಜೋಡಿಸಿ ಕೇಳಿ ಕೊಳ್ಳುತ್ತೇನೆ, ದಯಮಾಡಿ instancesಅನ್ನು refer ಮಾಡುವಾಗ, ಸರಿಯಾಗಿ ಮಾಡಬೇಕು ಬಿಂದ್ರನ್‌ವಾಲೆ he was sphere heading that movement ಆತ the most wanted person Any price had to be paid to secure him ಆದ್ದರಿಂದ ಮೈನರ್ ಆಗತಕ್ಕಂಥದ್ದನ್ನು we had to put on ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, cash prize announce ಮಾಡುತ್ತಾರೆ, such and such a noted Naxalite, ಇವರನ್ನು ಹಿಡಿದುಕೊಟ್ಟರೆ ಇಷ್ಟು ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಾರೆ ಏಕೆಂದರೆ, ಅವನನ್ನು secure ಮಾಡಿದರೆ, they have their own methods in the Police Department to extract further information from him ಇವರು ಇನ್ನು ಏನೇನು ಮಾಡುತ್ತಿದ್ದಾರೆ, ಅದನ್ನೆಲ್ಲಾ ಹೇಗೆ ತಡೆಯಬಹುದು ಎಂದು ತಿಳಿದುಕೊಳ್ಳಲು ಆದರೆ, the best course for these people should have been ಅಲ್ಲಿ ಎಷ್ಟು ಜನರಿದ್ದಾರೆ ಎಂದು ನೋಡಿ, ಅವರನ್ನು ಜೀವಂತ ಹಿಡಿದು, ಅವರ ಹತ್ತಿರ ಮಾಹಿತಿಯನ್ನು ತೆಗೆದುಕೊಂಡು sources ಅನ್ನು ಕಟ್ ಮಾಡಬಹುದಾಗಿತ್ತು

ಶ್ರೀ ಎಂ ಪಿ ಪ್ರಕಾಶ್ ನಿಮಗೆ "ಇಷ್ಟು ಬಹುಮಾನವನ್ನು ಕೊಡುತ್ತೇವೆ", "ಮಾತನಾಡುತ್ತೇವೆ" ಎಂದು ಹೇಳುವುದು hostages ಅನ್ನು ಇಟ್ಟುಕೊಂಡಿರತಕ್ಕಂಥವರು ಯಾರ್‍ಯಾರು ಇರುತ್ತಾರೆ ಅಂಥ ಸಂದರ್ಭದಲ್ಲಿ ಹೆಚ್ಚು ಉಪಯೋಗಿಸುತ್ತಾರೆ ಇಲ್ಲಿಯೂ ಕೂಡ ಅವರಿಗೆ, "ದಯವಿಟ್ಟು ನೀವೆಲ್ಲರೂ ಶರಣಾಗತರಾಗಿರಿ, ನಾವು ನಿಮ್ಮಮನೆಯನ್ನು ಸುತ್ತುವರೆದಿದ್ದೇವೆ" ಎಂದು ಹೇಳಿದ್ದಾರೆ ಬಿಂದ್ರನ್‌ವಾಲೆಯ ವಿಚಾರವನ್ನು ನಾನು ಏಕೆ ಹೇಳಿದೆ ಎಂದರೆ, ಬಿಂದ್ರನ್‌ವಾಲೆ ಸಮಾಜಘಾತುಕ ಶಕ್ತಿಯಾಗಿದ್ದ ಎನ್ನುವುದನ್ನು

ನಾವು ಒಪ್ಪಿಕೊಳ್ಳುತ್ತೇವೆ ಆ ಒಬ್ಬ ದೈತ್ಯನನ್ನು ಸೃಷ್ಟಿ ಮಾಡಿದ್ದು ಯಾರು, ಯಾಕಾಗಿ, ಎನ್ನುವುದೂ ಕೂಡ ನಮಗೆ ಗೊತ್ತಿದೆ ಆ ಕಾರಣಕ್ಕಾಗಿಯೇ, ಆ ಒಬ್ಬ ದೈತ್ಯನನ್ನು ಹಿಡಿಯುವಾಗ, ಆ ಸಂದರ್ಭದಲ್ಲಿ ಪ್ರಾರ್ಥನೆಗಾಗಿ ಹೋಗಿದ್ದಂಥ ಅನೇಕರು ಮೃತಪಟ್ಟರು ಇದು ತಮಗೂ ಗೊತ್ತಿದೆ ಒಬ್ಬ ಬಿಂದ್ರನ್‌ವಾಲೆ ಮತ್ತು ಆತನ ಜೊತೆಗಿರತಕ್ಕಂಥವರು ಮಾತ್ರ ಸತ್ತಿಲ್ಲ Golden Templeಗೆ ಹೋಗಿದ್ದಂಥವರು, ಲಾಂಗುರದಲ್ಲಿ ಊಟ ಮಾಡಿತ್ತಿದ್ದಂಥವವರೂ ಕೂಡ ಸತ್ತರು ಇದನ್ನು ನಾನು ಯಾವುದೋ ಒಂದು justification ಗಾಗಿ ಹೇಳುತ್ತೇನೆ ಎನ್ನುವುದಕ್ಕಿಂತಲೂ ಹೆಚ್ಚಾಗಿ, ಈ ರೀತಿಯಾಗಿ ಹಿಂಸಾಮಾರ್ಗದ ಮೂಲಕವಾಗಿ ಬದಲಾವಣೆಯನ್ನು ತರುತ್ತೇವೆ ಎನ್ನುವ ತತ್ವದ ಹಿನ್ನೆಲೆಯಲ್ಲಿ ಬಂದಿರತಕ್ಕಂಥವರ ಬಗ್ಗೆ ನಮಗೆ ದೊಡ್ಡ ಗೌರವವಿದೆ, ಅವರು ತ್ಯಾಗ ಮಾಡುತ್ತಾರೆ ಎನ್ನುವುದರ ಬಗ್ಗೆಯೂ ಗೌರವವಿದೆ ಆದರೆ, ಅವರು ಸಾಮಾಜಿಕ ಮತ್ತು ಕಾನೂನಿನ ರೀತಿಯಲ್ಲಿ ವಿರೋಧಿಗಳಾಗಿರುವುದರಿಂದ ಅವರನ್ನು, ಪ್ರಥಮವಾಗಿ ನೀವು ಹೇಳಿದಂತೆ, ಯಾವ ವಿಚಾರದಿಂದ ಅವರು ಪ್ರೇರೇಪಿತರಾಗಿದ್ದಾರೋ, ಆ ವಿಚಾರಧಾರೆಗೆ ಮತ್ತೊಂದು ವಿಚಾರಧಾರೆಯನ್ನು ನಾವು ಹೇರಿ ಅವರನ್ನು ಮುಖ್ಯವಾಹಿನಿಗೆ ತರತಕ್ಕಂಥಾದ್ದು ಮಾಡಬೇಕಾಗಿದ್ದರೆ, ಆ ಮನೆಯೊಳಗಿರತಕ್ಕಂಥವರು ಕೂಡಲೇ ಶರಣಾಗತರಾಗಬಹುದಾಗಿತ್ತು ಇನ್ನೂ ಅನೇಕ ಮಾಹಿತಿಗಳು ತಕ್ಷಣದಲ್ಲಿ ನಮಗೆ ಸಿಕ್ಕಿಲ್ಲ ನಂತರ ಮಾಹಿತಿಯನ್ನೂ ಕೂಡ ತಮಗೆ ಒದಗಿಸಿ ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ ಸುಬ್ರಹ್ಮಣ್ಯ ಅವರ ಮೇಲೆ ಖಚಿತವಾದಂಥಾದ್ದು ಇದೆ ಕೆಲವರು ಮಾತನಾಡುವಾಗ ಹೇಳುತ್ತಿದ್ದರು, ಅವರ ಮೇಲೆ ಬಹಳ ಲಘುವಾಗಿರತಕ್ಕಂಥ ಆಪಾದನೆಗಳಿವೆ, Section 307 ಇದೆಯೇ? 302 ಇದೆಯೇ? ಅವರ ಮೇಲೆ ಇರತಕ್ಕಂಥವುಗಳೆಲ್ಲಾ bailable offences, ಈ ರೀತಿಯಾಗಿ ಮಾತನಾಡಿರತಕ್ಕಂಥಾದ್ದೂ ಇದೆ ಆದರೆ ಇಲ್ಲಿ, on fact ಅನ್ನು violation ಮಾಡಿದರೆ ಅಥವಾ ಇನ್ನೊಬ್ಬರ ಮೇಲೆದಬ್ಬಾಳಿಕೆ ಮಾಡುತ್ತೇವೆ, ಒತ್ತಾಯ ಮಾಡುತ್ತೇವೆ ಎನ್ನುವುದೂ ಕೂಡ ಬಹಳ heinous crimes ಅವುಗಳಿಗೆ ಜೀವಾವಧಿ ಶಿಕ್ಷೆ ಕೊಡತಕ್ಕಂಥಾದ್ದು ಇರಲಿಕ್ಕಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ನಾನು ಹೇಳಿದ್ದೇನೆಂದರೆ, ಎಲ್ಲ ಅಪರಾಧಗಳಿಗೂ trial ಆಗಿ ಅವರಿಗೆ ಶಿಕ್ಷೆ ಆಗಿದ್ದರೂ ಕೂಡ life

sentence ಆಗುತ್ತಿರಲಿಲ್ಲ ಇಲ್ಲಿ carital punishment ಕೊಟ್ಟುಬಿಟ್ಟಿದ್ದೀವಲ್ಲಾ ನಾನು ಹೇಳುವುದು ಏನೆಂದರೆ, ಅಂಥ ಸನ್ನಿವೇಶದಲ್ಲಿ ಅವರಿಗೆ trial ಅವಕಾಶ ಕೊಡಲಿಲ್ಲ, surrender ಆಗುವುದಕ್ಕೆ ಅವಕಾಶ ಕೊಟ್ಟಿದ್ದೀರೋ, ಇಲ್ಲವೋ ಗೊತ್ತಿಲ್ಲ ತಲೆಗೆ ಏಟು ಬಿದ್ದಿರತಕ್ಕಂಥಾದ್ದು, point blank range ನಿಂದ ಹೊಡೆದಿರತಕ್ಕಂಥಾದ್ದು ಇದೆ ಇದು ನಮ್ಮ ಅಭಿಪ್ರಾಯ It is not an allegation ಬೆಳಿಗ್ಗೆಯೇ ತಮಗೆ ನಾನು ಹೇಳಿದ್ದೇನೆ What is the punishment awarded? It is capital punishment Gallowsಗೆ ಕಳುಹಿಸತಕ್ಕಂಥ ಕೆಲಸ ಇಲ್ಲಿ ಆಗಿಹೋಯಿತು

ಶ್ರೀ ಎಂ ಪಿ ಪ್ರಕಾಶ್ No, that does not necessarily mean that these offences are not heinous offences ಡಕಾಯಿತಿ ಅಪರಾಧಕ್ಕೆ life sentence ಕೊಡುವುದಿಲ್ಲ, ಮರಣದಂಡನ ಕೊಡುವುದಿಲ್ಲ, ಆದರೆ it is considered as a heinous offence ಆ ಕಾರಣಕ್ಕಾಗಿಯೇ, ಇಲ್ಲಿ ಇವರು ಭಾಗಿಯಾಗಿರುವ ಚಟುವಟಿಕೆಗಳೆಲ್ಲವೂ ಕೂಡ ಕುಕೃತ್ಯಗಳು ಅವುಗಳಿಗೆ ನಾವು ಜೀವಾವಧಿ ಶಿಕ್ಷೆ ಕೊಡತಕ್ಕಂಥದ್ದು ಇರಲಿಕ್ಕಿಲ್ಲ ಏಕೆಂದರೆ, ಅವರು ಮಾಡಿದಂಥ ತಪ್ಪಿಗೆ ಅನುಗುಣವಾದಂಥ ಪ್ರಮಾಣದಲ್ಲಿ ಶಿಕ್ಷೆ ಇರಬೇಕು ಎನ್ನುವುದು, ನೀವೇ ಹೇಳಿದಂತೆ ಅದು jurisprudence ಅದರ ತಾತ್ವಿಕ ಹಿನ್ನೆಲೆ ಆ ತಾತ್ವಿಕ ಹಿನ್ನೆಲೆಯಲ್ಲಿ,

ಶ್ರೀ ಕೆ ಆರ್ ರಮೇಶ್ ಕುಮಾರ್ ಆ ಹಿನ್ನೆಲೆಯಲ್ಲಿ it is the proportionate punishment given to them

ಶ್ರೀ ಎಂ ಪಿ ಪ್ರಕಾಶ್ ನಾವು capital punishment ಕೊಟ್ಟಿಲ್ಲ ಅದಕ್ಕಾಗಿ ಹೇಳುತ್ತಿರುವುದು

ಶ್ರೀ ಸಿದ್ಧರಾಮಯ್ಯ Under the Arms Act ಬಿಟ್ಟರೆ ಇಲ್ಲಿರುವಂಥವುಗಳೆಲ್ಲಾ, section 143,147,149,506 I P C ಇವುಗಳ ಕೆಳಗೆ ಬರತಕ್ಕಂಥ ಪ್ರಕರಣಗಳು ಇವೆಲ್ಲವೂ ಕೂಡ ಪೋಲೀಸರು ಸಾಮಾನ್ಯವಾಗಿ ಕೇಸು ಹಾಕುವಂಥ offenceಗಳು

ಶ್ರೀ ಕೆ ಆರ್ ರಮೇಶ್ ಕುಮಾರ್ The entire debate is on very high flame ತಾವು ಹಾಗೆಲ್ಲ ಅವರನ್ನು defend ಮಾಡುವುದಕ್ಕೆ ಬಂದರೆ ನಾವು helpless ಆಗುತ್ತೇವೆ ನಾವು aggravate ಮಾಡುವುದಕ್ಕೆ ಇಷ್ಟಪಡುವುದಿಲ್ಲ ನಾವು helpless ಎಂದು ಕುಳಿತುಕೊಳ್ಳುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ತಾವು ಬಹಳ ಜಾಣರಾಗಿರುವುದರಿಂದ

ಶ್ರೀ ಕೆ ಆರ್ ರಮೇಶ್ ಕುಮಾರ್ ಜಾಣತನದ ಪ್ರಶ್ನೆಯಲ್ಲ ನಮ್ಮ ನಮ್ಮ ಕ್ಷೇತ್ರಗಳಲ್ಲಿ, ನಮ್ಮ ದಿನನಿತ್ಯದ ಜೀವನದಲ್ಲಿ ಎಷ್ಟು atrocious ಆಗಿ ಇವರು behave ಮಾಡುತ್ತಾರೆ, ಎಷ್ಟು shameless ಆಗಿ behave ಮಾಡುತ್ತಾರೆ, ಎಷ್ಟು merciless ಆಗಿ behave ಮಾಡುತ್ತಾರೆ ಎನ್ನುವುದಕ್ಕೆ we are witness, we are the recipients ಆದರೆ, ಅದೆಲ್ಲವನ್ನೂ ಕೂಡ ಬದಿಗೊತ್ತಿ, ಈ ವಿಷಯದಲ್ಲಿ ಅನ್ಯಾಯ ಆಗಬಾರದು ಎನ್ನುವ ದೃಷ್ಟಿಯಿಂದ, ಎಲ್ಲೋ ಒಂದು ಕಡೆ ನೋವನ್ನೆಲ್ಲಾ ಬದಿಗಿಟ್ಟುಕೊಂಡು ನಾವು ಮಾತನಾಡುತ್ತಿದ್ದೇವೆ If you want to defend them at all costs, we remain helpless

ಶ್ರೀ ಎಂ ಪಿ ಪ್ರಕಾಶ್ ನಕ್ಸಲರಲ್ಲಿ ಇರತಕ್ಕಂಥವರನ್ನು ನಾವು defend ಮಾಡುವುದಿಲ್ಲ ಎಂದು ನೀವು ಹೇಳಿದಂಥಾದ್ದಕ್ಕೂ, ಆ ಸಂದರ್ಭದಲ್ಲಿ ನಮ್ಮ ಪ್ರತಿಕ್ರಿಯೆಗಳು ಏನಿರುತ್ತವೆ ಎನ್ನುವುದರ ಮೇಲೆಯೂ ಬಹಳ ಜಾಣತನದ ಉತ್ತರಗಳು ಇರುತ್ತವೆ ನಾವು ಇದಕ್ಕೆ ಒಪ್ಪುವುದಿಲ್ಲ, ಆದರೆ ನೀವು ಮಾಡಿದ್ದು ಸರಿಯಲ್ಲ ಎನ್ನುವಂಥ ರೀತಿಯಲ್ಲಿ ನೀವು ಹೇಳಿದಾಗ, ಕೆಲವು ವಿಷಯಗಳನ್ನು ನಾವು ಸರ್ಕಾರದ ಪರವಾಗಿ ಉತ್ತರ ಕೊಡಬೇಕಾಗುತ್ತದೆ ಬಹಳ ಮಧ್ಯದಲ್ಲಿ ಒಂದು ಸುವರ್ಣ ಗೆರೆಯನ್ನು ಹಾಕಲಿಕ್ಕಾಗುವುದಿಲ್ಲ ನಿಮ್ಮಕ್ಷೇತ್ರದಲ್ಲಿ ಬಂದೂಕು ಇಟ್ಟುಕೊಂಡು ಅಡ್ಡಾಡತಕ್ಕಂಥ ಜನಗಳಿದ್ದಾರೆ ರಿವಾಲ್ವರ್ ಹಿಡಿದುಕೊಂಡು ಮಾವಿನ ತೋಟದಲ್ಲಿ ಓಡಾಡಿಸಿರತಕ್ಕಂಥ ಜನಗಳಿದ್ದಾರೆ ಅದನ್ನು ನಾವು ಅನುಭವಿಸಿದ್ದೇವೆ ನಮ್ಮ ಬಚ್ಚೇಗೌಡರ ಕ್ಷೇತ್ರದಲ್ಲಿ ಕೂಡ ಈ ರೀತಿಯ ಕೇಸುಗಳು ಅನೇಕ ಸಂದರ್ಭಗಳಲ್ಲಿ ಆಗಿವೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಯಾರೋ ಎಂದೇಕೆ ಹೇಳುತ್ತಿದ್ದೀರಿ Let it come on record Your colleague, minorities ತೋಟವನ್ನು ಹೊಡೆಯುತ್ತಿರಬೇಕಾದರೆ, when police become helpless Yes,I told my people, ಯಾರ್‍ಯಾರ ಹತ್ತಿರ ಲೈಸೆನ್ಸ್ ಇದೆ, ಅವರು ಬಂದೂಕು ತೆಗೆದುಕೊಂಡು ಬನ್ನಿ, minorities ಅನ್ನು ಕಾಪಾಡೋಣ ಎಂದು ಹೇಳಿದವನು ನಾನೇ ತೋಟದಲ್ಲಿ ಹೋದವನು ನಾನೇ Yes, I own it

ಶ್ರೀ ಎಂ ಪಿ ಪ್ರಕಾಶ್ Sir, why are you not allowing me to reply?

ಶ್ರೀ ಕೆ ಆರ್ ರಮೇಶ್ ಕುಮಾರ್ Why are you trying to take up things which are irrelevant?

ಶ್ರೀ ಎಂ ಪಿ ಪ್ರಕಾಶ್ Suppose if you say that your argument is irrelevant, and fallacious That's why I am trying to say, ಬಯಲು ಸೀಮೆಯವರಾದ ನಾವು ಇದ್ದುದರಲ್ಲಿಯೇ ಒಂದು ಸ್ವಲ್ಪ ಸುಖ ಪುರುಷರು ನಕ್ಸಲರು ಆಗಬೇಕಾದಂದವರು, ಬಯಲು ಸೀಮೆಯಲ್ಲಿ ಇರತಕ್ಕಂಥ ಜನ ನಾವು ಕಿತ್ತು ತಿನ್ನತಕ್ಕಂಥ ಬಡತನವಿರುವುದು ಬಳ್ಳಾರಿಯಲ್ಲಿ, ಬೀದರ್‌ನಲ್ಲಿ

ಶ್ರೀ ಸಿದ್ಧರಾಮಯ್ಯ ನಕ್ಸಲೈಟ್ ಆಗಿರುವವರಲ್ಲಿ ಬಹಳ ಜನರು ರಾಯಚೂರು ಮತ್ತು ಆ ಕಡೆಯವರೇ ನಕ್ಸಲ್ ಚಟುವಟಿಕೆಗೆ ಹೆಚ್ಚಾಗಿ ಹೋಗಿರುವುದು ಆ ಭಾಗದಿಂದಲೇ ನಿನ್ನೆಯ ಘಟನೆಯಲ್ಲಿ ಹೆಸರಿಸಿರುವ ಚನ್ನಪ್ಪ ಅಥವಾ ಗೌತಮ್ ಎನ್ನುವವರು ರಾಯಚೂರಿನ ಕಡೆಯಿಂದಲೇ ಹೋಗಿರುವನು

ಶ್ರೀ ಎಂ ಪಿ ಪ್ರಕಾಶ್ ನಿಮ್ಮಲ್ಲಿ ಕಷ್ಟ ಇದೆ ಎನ್ನತಕ್ಕಂಥಾದ್ದನ್ನೂ ಒಪ್ಪುತ್ತೇವೆ ನೀವು ನಮ್ಮನ್ನು ತಪ್ಪು ತಿಳಿದುಕೊಳ್ಳಲು ಹೋಗಬೇಡಿ ಬಯಲು ಸೀಮೆಯವರಾದ ನಮ್ಮಲ್ಲಿ ಯಾರೂ ಬಂದೂಕು ಹಿಡಿದುಕೊಂಡು ಬಂದು

ಚುನಾವಣೆ ಮಾಡುವುದಿಲ್ಲ ಅಷ್ಟರಮಟ್ಟಿಗೆ ನಾವು ಸುರಕ್ಷಿತರು ಆದರೆ, ಮುಂದೊಂದು ದಿನ ಅದು ನಮ್ಮಲ್ಲಿಯೂ ಬರಬಹುದು ಏಕೆಂದರೆ, ಆಂಧ್ರಪ್ರದೇಶದಿಂದ ಬಂದಿದೆ, ಈಗಾಗಲೇ ಅದು ಬಳ್ಳಾರಿಗೆ ಬಂದಿದೆ, ಸಿರಗುಪ್ಪಕ್ಕೆ ಬಂದಿದೆ ಇನ್ನು ಹಡಗಲಿ, ಹರಪ್ಪನಹಳ್ಳಿಗೆ ಬರುವುದರಲ್ಲೇನೂ ತಡವಿಲ್ಲ ನೀವು ಮದನಪಲ್ಲಿಯಲ್ಲಿರತಕ್ಕಂಥ ಜನ ನಿಮ್ಮಪಕ್ಕದಲ್ಲಿ ಏನು ನಡೆಯುತ್ತಿದೆ ಎನ್ನುವುದು ನಿಮಗೆ ಗೊತ್ತಿದೆ ಕುಪ್ಪಂ ಬಗ್ಗೆ ಅವರು ಹೇಳಿದರು ಗುಂತಕಲ್‌ನಿಂದ ಬರತಕ್ಕಂಥ ಸುಪಾರಿ ಜನ ಯಾರು ಎಂದು ಗೊತ್ತು ಮಹಾರಾಷ್ಟ್ರದಿಂದ ಬರತಕ್ಕಂಥ ಜನ ಯಾರು ಎಂದು ಗೊತ್ತು ಆದರೆ ಇದನ್ನು ನಾವು ವಿಸ್ತಾರ ಮಾಡತಕ್ಕಂಥದಲ್ಲ ನಿಮ್ಮ ಕಷ್ಟ ನಮಗೆ ಗೊತ್ತಿದೆ ಇದೇ ರೀತಿಯ ಕಷ್ಟವನ್ನು ಮಾನ್ಯ ಸುನಿಲ್‌ರವರು, ಮಾನ್ಯ ಜ್ಞಾನೇಂದ್ರರವರು ಹೇಳಿದರು ನಾವು ಗೆದ್ದು ಬಂದರೂ ಕೂಡ, ನಾವು ಸ್ವಾತಂತ್ರ್ಯವಾಗಿ, ಜನಗಳ ಪರವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗಲಾರದಂಥ ಭಯದ ವಾತಾವರಣವನ್ನು ಸೃಷ್ಟಿ ಮಾಡುತ್ತಾರೆ ತಾವು ಒಪ್ಪದೇ ಇರಬಹುದು, Sir, you have your say ಇದರ ಬಗ್ಗೆ ನಮ್ಮದೇನೂ ಆಕ್ಷೇಪವಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಅವರಿಗೆ gold medal ಕೊಡಲೂ ಹೋಗಬೇಡಿ

ಶ್ರೀ ಎಂ ಪಿ ಪ್ರಕಾಶ್ ನೀವು ಬೇರೆ ವಿಷಯವನ್ನು ಹೇಳಿದ್ದರಿಂದ ನಾನು ಇಲ್ಲಿಗೇ ಮುಗಿಸಿಬಿಡುತ್ತೇನೆ ಮೊದಲಿಗೆ, ನೀವು ಅವರ ಪರವಾಗಿ ನಿಲ್ಲುವುದಿಲ್ಲ ಎಂದು ಹೇಳಿದ್ದಕ್ಕಾಗಿ ನಿಮಗೆ ಇಡೀ ಸದನವೇ ಕೃತಜ್ಞತೆಯನ್ನು ಅರ್ಪಿಸುವಂಥ ಗೊತ್ತುವಳಿಯನ್ನೂ ಪಾಸ್ ಮಾಡುತ್ತೇವೆ ಅವರಿಗೆ gold medal ಕೊಡಲು ತಯಾರಾಗುವುದಾದರೆ, ನಿಮಗೆ ಕೃತಜ್ಞತೆ ಅರ್ಪಿಸಲಿಕ್ಕೆ ನಾವೂ ತಯಾರಾಗಿದ್ದೇವೆ ಒಂದು ಗೊತ್ತುವಳಿ ಪಾಸ್ ಆಗಲಿ ಈ ರೀತಿಯ ವ್ಯಂಗ್ಯಗಳಿಗೆಲ್ಲ ನಾವು ತಯಾರಾಗುವುದಿಲ್ಲ ನಮಗೂ ಕೂಡ ನಿಮ್ಮಬಗ್ಗೆ ಅಪಾರವಾದಂಥ ಗೌರವವಿದೆ ನಾನು ಹೇಳಿರತಕ್ಕಂಥಾದ್ದು ಏನೆಂದರೆ, ನಿಮ್ಮ ಕ್ಷೇತ್ರದಲ್ಲಿ ಆದಂಥ ರೀತಿಯಲ್ಲಿ ನಮ್ಮ ಕ್ಷೇತ್ರದಲ್ಲಿ ಆಗಿಲ್ಲ, ನಾವು ಇನ್ನೂ ಸುರಕ್ಷಿತವಾಗಿದ್ದೇವೆ ಎಂದು ಹೇಳಿದೆ ಆದರೆ, ಬಡತನ ಇರತಕ್ಕಂಥದ್ದು ನಮ್ಮ ಕ್ಷೇತ್ರಗಳಲ್ಲಿ ಉಳ್ಳವರು ಇಲ್ಲದವರ ಪರವಾಗಿ ಹೋರಾಟ ಮಾಡಬೇಕು ಎನ್ನುವ ತತ್ವಕ್ಕೆ ಹೋಗಿ ಮಲೆನಾಡಿನ

ಪ್ರದೇಶದಲ್ಲಿರತಕ್ಕಂಥ ಜನತೆಯ ವಾತಾವರಣವನ್ನು ಕದಡತಕ್ಕಂಥ ಪ್ರಯತ್ನವಾಗಿದ್ದು, ಅಂಥ ವಿಚಾರಗಳ ಬಗ್ಗೆ ತಾವೂ ಕೂಡ ಸಹಮತವನ್ನು ವ್ಯಕ್ತ ಮಾಡಿದ್ದೀರಿ ಆದ್ದರಿಂದ ನಿಮಗೆಲ್ಲರಿಗೂ ಕೂಡ ನಾನು ಅಭಿನಂದನೆ ಯನ್ನು ಸಲ್ಲಿಸುತ್ತೇನೆ ಪೊಲೀಸರು ಯಾವುದೇ ತಪ್ಪನ್ನು ಮಾಡಿಲ್ಲ, ಆಗಿರತಕ್ಕಂಥದ್ದಾದರೆ ಅದಕ್ಕೆ SDM Magisterial enquiry ಕೂಡ ನಡೆದಿದೆ, inquest ಕೂಡ ನಡೆಯುತ್ತಿದೆ, ಅನೇಕ ಮಾಹಿತಿಗಳು ಹೊರಗಡೆಗೆ ಬರಬೇಕಾಗಿರತಕ್ಕಂಥದ್ದು ಇದೆ ಇವತ್ತು inquest ಆಗಿರತಕ್ಕಂಥದ್ದು ಮಾನವ ಹಕ್ಕುಗಳ ಆಯೋಗದ ನಿಯಮಾವಳಿಗಳ ಪ್ರಕಾರ video graph ಮಾಡತಕ್ಕಂಥದ್ದು ಕೂಡ ಇದೆ ಅದೇ ರೀತಿಯಾಗಿ ಅಲ್ಲಿರತಕ್ಕಂಥ Magistrate ಮುಂದೆ ಮಾಡತಕ್ಕಂಥದ್ದು ಇದೆ ಅವೆಲ್ಲ ಮಾಹಿತಿಗಳು ಬಂದಾಗ ಯಾವುದನ್ನೂ ಮುಚ್ಚಿಡದೇ ಸದನದ ಮುಂದೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ ಅನಂತರವೂ ಕೂಡ ತಾವೇನು ಅಬಿಪ್ರಾಯವನ್ನು ವ್ಯಕ್ತ ಮಾಡುತ್ತೀರಿ, ಅದನ್ನು ಸರಿಪಡಿಸಲಿಕ್ಕೆ ನಾವು ತಯಾರಿದ್ದೇವೆ ತಪ್ಪಾಗಿದ್ದರೆ ತಪ್ಪಾಗಿರುವಂಥವರನ್ನು ಶಿಕ್ಷೆಗೆ ಗುರಿಪಡಿಸುವುದಕ್ಕೂ ತಯಾರಿದ್ದೇವೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಆ ಮೂರು ಜನರ ಮಾಹಿತಿ ಹೇಳುತ್ತೇವೆಂದು ಹೇಳಿದ್ದೀರಿ ಅದನ್ನು ಹೇಳಿ

ಶ್ರೀ ಎಂ ಪಿ ಪ್ರಕಾಶ್ ಅದರ ಬಗ್ಗೆ ಹೇಳುತ್ತೇವೆ ನನ್ನ ಹತ್ತಿರ ಈಗ ಆ ಮಾಹಿತಿ ಇಲ್ಲ ಈ ನಿಮಿಷದಲ್ಲಿ ನನ್ನ ಹತ್ತಿರ ಮಾಹಿತಿ ಇಲ್ಲ ಬಹುಶಃ ನಾಳೆ ನಾಡಿದ್ದರಲ್ಲಿ ಹೇಳುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಇವತ್ತು, ನಾಳೆ ತಯಾರು ಮಾಡಿಸಿ ನಾಡಿದ್ದು ಹೇಳಿದರೆ ಆಗಬಹುದು

ಶ್ರೀ ಎಂ ಪಿ ಪ್ರಕಾಶ್ ಅದನ್ನು ಸೃಷ್ಟಿ ಮಾಡುವುದಕ್ಕಾದರೆ capable ಆಗಿ ಇರಬೇಕಾಗುತ್ತದೆ ಸತ್ಯ ಹೇಳಬೇಕಾದರೆ capability ಬೇಕಾಗಿರು ವುದಿಲ್ಲ

ಶ್ರೀ ಸಿದ್ಧರಾಮಯ್ಯ ಈಗ ಎರಡು ದಿವಸಗಳಾಗಿದೆ

MR M.P PRAKASH Sir, he taunts me, "you are capable of creating it" ಎಂದು ಹೇಳುತ್ತಿದ್ದಾರೆ

SRI K R RAMESH KUMAR If they have information, why did they not place it?

SRI M P PRAKASH So far it has not been gathered

SRI K.R.RAMESH KUMAR That is why I said you are capable of preparing

SRI M.P.PRAKASH. That is why we said we are not capable of creating these things

SRI K.R.RAMESH KUMAR: That is the reason That is why I said they are capable of creating things tomorrow

SRI M P.PRAKASH Sir, these people are misguided people I have got great respect for them ಆದರೆ, ನನಗೂ ಕೂಡ ಇರತಕ್ಕಂಥದ್ದು ಇಷ್ಟೇ, ಯಾವುದೋ ಸೃಷ್ಟಿ ಮಾಡಿರತಕ್ಕಂಥ ಮಾಹಿತಿಯನ್ನು ತಂದು ಇಲ್ಲಿ ನಾವು ಪುರುಷಾರ್ಥ ಸಾಧಿಸಬೇಕಾದದು ಏನೂ ಇಲ್ಲ ಸುಳ್ಳನ್ನು ಹೇಳಬೇಕಾದದ್ದು ಏನೂ ಇಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಕೇಸುಗಳಲ್ಲಿ ಸಿಕ್ಕಿಸುವುದರಲ್ಲಿ ಇವರು ಎಷ್ಟು ನಿಷ್ಣಾತರು ಎಂಬುದು ನನಗೆ ಅನುಭವವಿದೆ

ಶ್ರೀ ಎಂ ಪಿ ಪ್ರಕಾಶ್ ಇರಬಹುದು ಇಲ್ಲಿ ನಾವು ಅದನ್ನು ತೆಗೆದುಕೊಂಡು ಬಂದು ಹೇಳಿ ನಾವು ಅದನ್ನು ಮಾತನಾಡತಕ್ಕಂಥ

ಶ್ರೀ ಸಿದ್ಧರಾಮಯ್ಯ ಈಗ ನಿಮ್ಮ ಹತ್ತಿರ ಮಾಹಿತಿ ಇಲ್ಲವೇ?

ಶ್ರೀ ಎಂ ಪಿ ಪ್ರಕಾಶ್ ಈಗ ಸದ್ಯಕ್ಕೆ ಮಾಹಿತಿ ಇಲ್ಲ

ಶ್ರೀ ಸಿದ್ಧರಾಮಯ್ಯ ಮತ್ತೆ ಪೊಲೀಸ್‌ನವರ ಹತ್ತಿರ ಯಾವ ಮಾಹಿತಿ ಇತ್ತು?

ಶ್ರೀ ಎಂ ಪಿ ಪ್ರಕಾಶ್ ಈಗ ಅನೇಕರು ಅಲ್ಲಿರತಕ್ಕಂಥವರಿಂದ ಆ ಮಾಹಿತಿಯನ್ನು ತಂದು ಬೇಕಾದರೆ ನಾಳೆ ನಾಡಿದ್ದರಲ್ಲಿ ತಮಗೆ ಒದಗಿಸಿಕೊಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇಲ್ಲದಿರತಕ್ಕಂಥ ಮಾಹಿತಿಯನ್ನು ಕೊಡುತ್ತೇವೆಂದು ಹೇಳಿದರೆ, ಸೃಷ್ಟಿ ಎಂದೇ ಅದರಅರ್ಥ

ಶ್ರೀ ಸಿದ್ಧರಾಮಯ್ಯ ಆ ಮಾಹಿತಿ ಪೊಲೀಸರ ಹತ್ತಿರ ಇಷ್ಟೊತ್ತಿಗೆ ಇರಬೇಕಾಗಿತ್ತು

ಶ್ರೀ ಎಂ ಪಿ ಪ್ರಕಾಶ್ ಅವರೆಲ್ಲರೂ ಕಾರ್ಯನಿರತರಾಗಿದ್ದಾರೆ

ಶ್ರೀ ಆರ್ ವಿ ದೇಶಪಾಂಡೆ Development ಬಗ್ಗೆ ಸ್ವಲ್ಪ ಹೇಳಿ

ಶ್ರೀ ಎಂ ಪಿ ಪ್ರಕಾಶ್ ಹಿಂದೆ ಗೋರೆಯವರು ಕೊಟ್ಟಿರತಕ್ಕಂಥದ್ದು, ಮಾನ್ಯ ಚಿರಂಜೀವಿ ಸಿಂಗ್‌ರವರ ವರದಿ ಏನಿತ್ತು, ಚಿರಂಜೀವಿ ಸಿಂಗ್‌ರವರ ವರದಿ ಪ್ರಕಾರ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅದೂ ಕೂಡ ಅವರು ಕೊಟ್ಟ ವರದಿ ಕೇವಲ ನಕ್ಸಲೈಟ್ಸ್‌ಗೆ ಸಂಬಂಧಪಟ್ಟಿದ್ದು ಮಾತ್ರವಲ್ಲ, ಜಕ್ಕಡಿಯಲ್ಲಿರುವಂಥ ಅರಣ್ಯವನ್ನು ಒಕ್ಕಲೆಬ್ಬಿಸಿರುವಂಥ ಪ್ರಸಂಗದಲ್ಲಿ

ಶ್ರೀ ಸಿದ್ಧರಾಮಯ್ಯ ನಿಮ್ಮ ಇಲಾಖೆಯಲ್ಲಿ ಅದನ್ನು ಏಕೆ ಮಾಹಿತಿ ಇವರ ಹತ್ತಿರ ಹೀಗಿದೆ, ನಕ್ಸಲೈಟ್ಸ್ ಇಂಥವರ ಹತ್ತಿರ ಸಂಬಂಧವಿದೆ, ಎಂದು ಏಕೆ ಪ್ರಕಟ ಮಾಡುತ್ತಿರುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ ಈಗ ಒಂದು ಸಂದರ್ಭದಲ್ಲಿ ಕೆಲವು

ಶ್ರೀ ಸಿದ್ಧರಾಮಯ್ಯ ನೀವು ಮಾಡುವುದಾದರೆ ನಕ್ಸಲಿಸಂ ಅನ್ನು ಹತ್ತಿಕ್ಕಬೇಕು, ಈ ತರಹದ್ದು ಸಾಧ್ಯವಿಲ್ಲ, ಇದರಿಂದ ಪರಿವರ್ತನೆ ಮಾಡುವುದಕ್ಕಾಗುವುದಿಲ್ಲ, ಬದಲಾವಣೆ ಮಾಡುವುದಕ್ಕಾಗುವುದಿಲ್ಲ ವೆನ್ನುವುದಾದರೆ serious ಆಗಿ ಅದನ್ನು ಬಿಟ್ಟು ಯಾರ್‍ಯಾರೋ ಹೆಸರುಗಳನ್ನು announce ಮಾಡುವುದು, ಅದನ್ನೆಲ್ಲ public ಮಾಡುವುದು, ಇಂಥದ್ದೆಲ್ಲ ಏಕೆ ಮಾಡುತ್ತಾರೆ?

ಶ್ರೀ ವಾಟಾಳ್ ನಾಗರಾಜ್ ಅಲ್ಲಿ ಅಭಿವೃದ್ಧಿ ಕಾರ್ಯದ ಬಗ್ಗೆ ಹಿಂದೆ ಚಿರಂಜೀವಿ ಸಿಂಗ್ ಮುಂತಾದವರೆಲ್ಲ ವರದಿ ಕೊಟ್ಟರು ಅದರಲ್ಲಿ ನೀವು ಎಷ್ಟು ಭಾಗ ಅಭಿವೃದ್ಧಿ ಕಾರ್ಯ ಮಾಡಿದ್ದೀರಿ? ನೀವು ಅಭಿವೃದ್ಧಿ ಕಾರ್ಯ ಮಾಡದಿರುವುದೇ ಈ ದುರಂತಗಳಿಗೆಲ್ಲ ಕಾರಣವಾಗಿದೆ ಅದಕ್ಕೆ ಪರಿಣಾಮಕಾರಿಯಾಗಿ ನೀವು ಯಾರೋ ಪಂಚತಾರ ಹೋಟೆಲ್‌ನಲ್ಲಿ ಕುಳಿತುಕೊಳ್ಳತಕ್ಕಂಥ ಪಂಚತಾರ ಅಧಿಕಾರಿಗಳನ್ನು ಕಳುಹಿಸುವುದು ಬೇಡ ಅಲ್ಲಿಯ ಜನಸಾಮಾನ್ಯರಿಗೆ ಹತ್ತಿರವಾಗಿರುವ ಅಧಿಕಾರಿಗಳನ್ನು ತಾವು ಕಳುಹಿಸಿ ಆ ಹಳ್ಳಿಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿ ಆ ಗ್ರಾಮೀಣ ಪ್ರದೇಶದಲ್ಲಿ ಅಬಿವೃದ್ಧಿ ಕಾರ್ಯ ಸಂಪೂರ್ಣವಾಗಿ ಅಲ್ಲಿ ಆಗಿಲ್ಲ ಯಾವ ಜನ ಅಭಿವೃದ್ಧಿ ಕಾರ್ಯ ಬಯಸುತ್ತಿದ್ದಾರೆ, ಅದು ಖಂಡಿತಾ ಆಗಿಲ್ಲ ಅದರ ಬಗ್ಗೆ ನೀವು ಹೇಳಿ

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್‌ರವರು ಹೇಳಿದ್ದು ಸರಿ ಇದೆ ಚಿರಂಜೀವಿ ಸಿಂಗ್‌ರವರು ನಮ್ಮ ಭಾಗದಲ್ಲಿ ಓಡಾಟ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ ಒಂದಷ್ಟು ಹಣ ಸಹ ಬಂದಿದೆ ನಾವು ಅಲ್ಲಿ ಖರ್ಚು ಮಾಡಿಸಿದ್ದೇವೆ ಆದರೆ ಮುಖ್ಯವಾಗಿ ಇರತಕ್ಕಂಥದ್ದೇನೆಂದರೆ, ಅಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಜನ revert ಆಗಲಿಲ್ಲ ಅದು

ನಮ್ಮಲ್ಲಿಗೂ ಬೇರೆ ಕಡೆಗೂ ಇರುವ ವ್ಯತ್ಯಾಸವಾಗಿದೆ ಇಲ್ಲಿ ಏನಾಗಿದೆ ಎಂದರೆ 'ಈ ಕುದುರೆ ಮುಖದಲ್ಲಿ ನಿಮ್ಮನ್ನೆಲ್ಲ ಸುಡುತ್ತಾರೆ' ಎನ್ನುವ ತಪ್ಪು ಮಾಹಿತಿಗಳನ್ನು ಕೊಡುವುದರ ಮೂಲಕ ಪ್ರಚೋದನೆ ಮಾಡುವುದು ನಡೆಯುತ್ತಿದೆ ಯಾರೂ ಕೂಡ ಹಿಂದೆ ಧರ್ಮಸಿಂಗ್‌ರವರ ಸರ್ಕಾರ ಇದ್ದಾಗಲೂ ಕೂಡ ಅಲ್ಲಿ ಒಕ್ಕಲೆಬ್ಬಿಸುವುದಕ್ಕೆ ಹೋಗಿರಲಿಲ್ಲ ಸುಮ್ಮ ಸುಮ್ಮನೆ ಹೋಗಿ ಪ್ರಚೋದನೆ ಕೊಟ್ಟರು ಈ ಸಾಗುವಳಿ ಚೀಟಿ ಕೊಡುವಂಥದ್ದು ಇದೆ ಆದರೆ, ಇತ್ತೀಚಿನ Supreme Courtನ ಆದೇಶದ ಪ್ರಕಾರ ಸಾಗುವಳಿ ಚೀಟಿ ಕೊಡಲಿಕ್ಕೆ ಬರುವುದಿಲ್ಲ ಮಾನ್ಯ ಧರ್ಮಸಿಂಗ್‌ರವರು ಆವಾಗ ಪ್ರಸ್ತಾಪ ಮಾಡಿದರು ಏನೆಂದರೆ, ಕೇಂದ್ರಸರ್ಕಾರದ ಹತ್ತಿರ ಹೋಗಿ ಅಲ್ಲಿ ಕುಳಿತು ಮಾತನಾಡಿ ಅದಕ್ಕೆ exemption ತಂದರೆ ಮಾತ್ರ ಆಗುವಂಥದ್ದು ಇಲ್ಲದಿದ್ದರೆ Forest National Sanctuary ಒಳಗಡೆ ಜಮೀನು ಮಂಜೂರಾತಿಗೆ ಅವಕಾಶಗಳೇ ಇಲ್ಲ ಇದು ನಮ್ಮಲ್ಲಿ ದೊಡ್ಡ ತಲೆನೋವಾಗಿ ಬಿಟ್ಟಿದೆ ಆದರೂ ಕೂಡ ಯಾರೋ forestನವರು ಹೋಗಿ

ಶ್ರೀ ಬಿ ಶಿವರಾಮು Particulary tribal areaಗಳಲ್ಲಿ ಆ ಭೂಮಿಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ

ಶ್ರೀ ಡಿ ಎನ್ ಜೀವರಾಜ್ ನೀವು ಉಸ್ತುವಾರಿ ಸಚಿವರಾಗಿದ್ದಾಗಲೇ ನಾನು ನೀವು ಸಾಗುವಳಿ ಚೀಟಿಯನ್ನು ಕೊಟ್ಟೆವಲ್ಲಾ ಸರ್

ಶ್ರೀ ಬಿ ಶಿವರಾಮು ಅದನ್ನೇ ಹೇಳಲಿಕ್ಕೆ ನಾನು ಎದ್ದೆ ಅದರ ಜೊತೆಗೆ ಗೋಮಾಳವನ್ನು ಸಹ ಮಂಜೂರಾತಿ ಮಾಡಬೇಕೆಂದು ಬಹಳ ಜನ ಒತ್ತಾಯ ತಂದು ಆ ಸಮಿತಿಗಳಾಗಿ ಅದನ್ನು ಕೊಡಲಿಕ್ಕಾಗಲಿಲ್ಲ ಆಮೇಲೆ ಅಭಿವೃದ್ಧಿಗೆ ಸ್ವಲ್ಪ ಹಣ ಬಿಡುಗಡೆಯಾಗಿ ಅಭಿವೃದ್ಧಿಗೆ ತೆಗೆದುಕೊಂಡ ಮೇಲೆ ಅದು ಯಾವ ರೀತಿ adverse ಆಯಿತು ಎಂದರೆ 'ನೋಡಿ ನಾವು ಬಂದ ಮೇಲೆ ನಿಮಗೆ ಅಭಿವೃದ್ಧಿ ಆಯಿತು' ಎಂದು ಹೇಳುವಂಥದ್ದು, ಹೀಗೆ ಬಹಳ ತರಹದ ವಿಚಾರಗಳಿವೆ ಆದರೆ, ವರದಿ ಕೊಟ್ಟದ್ದನ್ನು ಅನುಷ್ಠಾನಗೊಳಿಸತಕ್ಕಂಥ ಕೆಲಸವಾಗಿದೆ ಆದರೆ, ಕೆಲವನ್ನಂತೂ ಮಾಡಲಿಕ್ಕೆ ಸಾಧ್ಯವೇ ಇಲ್ಲ ಈ tribal area ದಲ್ಲಿ regularization ಆಮೇಲೆ

unauthorized cultivation of land, forest ಒಳಗಡೆ ಇದ್ದಾರೆ ಮಾಡಿ ಎನ್ನತಕ್ಕಂಥದ್ದು, ಈ ವಿಚಾರಗಳನ್ನು ಅವರು ಏನೇ ವರದಿ ಕೊಟ್ಟರೂ there are many constraints No Government can implement it ಇದನ್ನು ಕೂಡ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಮಾನ್ಯ ದರ್ಮಸಿಂಗ್ ಸರ್ಕಾರ ಇದ್ದಾಗ ಹಣ ಕೂಡ ಬಿಡುಗಡೆ ಕೂಡ ಆಯಿತು ನಾವೇ meeting ಗಳನ್ನು ಮಾಡಿ ಸಾಕಷ್ಟು ಯೋಜನೆಗಳನ್ನು ಅನುಷ್ಠಾನ ಮಾಡಿ, ಅದು ಆದ ಮೇಲೆ ಏನೇನಾಯಿತು ಎನ್ನುವ repercussion ಕೂಡ ಗೊತ್ತಿದೆ ಆದ್ದರಿಂದ, ಅದು ಒಂದೇ remedy ಎನ್ನತಕ್ಕಂಥದ್ದು ಅಲ್ಲ Socio-economic problem ಎನ್ನತಕ್ಕಂಥ ಒಂದೇ ದೃಷ್ಟಿಯಲ್ಲಿ ಯೋಚನೆ ಮಾಡತಕ್ಕಂಥದ್ದಲ್ಲ ಇದು ಬಹಳ ಆಳವಾದಂಥ ವಿಚಾರ ಸರ್ಕಾರ ಗಂಭೀರವಾಗಿ ಇದನ್ನು ಗಮನಿಸಿದರೆ ಮಾತ್ರ ಇದಕ್ಕೆ ಪರಿಹಾರ ಸಾಧ್ಯವೇ ಹೊರತು, encounter alone is not the remedy ಬಹಳ ವಿಚಾರಗಳಿವೆ ಸ್ವಲ್ಪ ಅಧ್ಯಯನ ಮಾಡಿ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಒಟ್ಟಾರೆ ಒಂದು ಅಭಿಪ್ರಾಯ ಹೇಳಬಹುದು, ಅಲ್ಲಿ ಸಮಸ್ಯೆ ಅಂತೂ ಇದೆ ನನ್ನ ಒಂದು ವರ್ಷದ ಅನುಭವದಲ್ಲಿ ತಿರುಗಾಡಬೇಕಾದರೆ ಪರಿಸ್ಥಿತಿ ಹೇಗಿತ್ತು ಎನ್ನತಕ್ಕಂಥದ್ದು, ಆ ಸಂದರ್ಭದಲ್ಲಿ ನಾನು ಮೆಣಸಿನ ಹಾಡ್ಯಕ್ಕೆ ಹೋಗಬೇಕಾದರೆ ಎಷ್ಟು protection ನಲ್ಲಿ ಹೋಗಿದ್ದೆ ಎನ್ನತಕ್ಕಂಥದ್ದು, ಹೋಗಲೇಬೇಡ ಎನ್ನತಕ್ಕಂಥ ಒತ್ತಡ ಇದ್ದರೂ ಕೂಡ ನಾನು ಹೇಳಿದೆ,'ನಾನೇ ಹೋಗಲ್ಲ ಎಂದು ಹೆದರಿದರೆ ಬೇರೆಯವರು ಯಾರು ಹೋಗುತ್ತಾರೆ?" ಅಷ್ಟು protectionನಲ್ಲಿ ಕೂಡ ಹೋದೆ ಅದಾದ ಮೇಲೆ ಎರಡು incidents ಆದಾಗ ಕುದುರೆಮುಖಕ್ಕೆ ಹೋಗುವಂಥ ಸಂದರ್ಭದಲ್ಲಿ ನಾನು evening, night ಎಲ್ಲ ಹೋಗಿದ್ದೇನೆ ಒಟ್ಟಿನಲ್ಲಿ ಪರಿಸ್ಥಿತಿಯಂತೂ ಬಹಳ ವಿಕೋಪದಲ್ಲಿದೆ ಅದನ್ನು ಬಹಳ ರೀತಿ ನಾವು ಗಮನಕ್ಕೆ ತೆಗೆದುಕೊಳ್ಳ ಬೇಕಾಗುತ್ತದೆ

ಶ್ರೀ ಆರಗ ಜ್ಞಾನೇಂದ್ರ, ಅಲ್ಲಿ ಏನಾಗಿದೆ ಎಂದರೆ ಅರ್ಧ ಎಕರೆ ಜಮೀನು ಮಾರುವವರಿದ್ದಾರೆ ಮಾರಾಟ ಮಾಡಿ ಹೊರಗಡೆ ಹೋಗುತ್ತೇವೆಂದು ಹೇಳುತ್ತಾರೆ ಅಲ್ಲಿ ಯಾರೂ ಕೊಂಡುಕೊಳ್ಳುವವರಿಲ್ಲ ಏಕೆಂದರೆ, ಅಲ್ಲಿಗೆ ಮತ್ತೊಬ್ಬರು ಯಾರೂ ಹೋಗುತ್ತಾರೆ? ಇಂಥ ಒಂದು

ಅಸಹಾಯಕ ಸ್ಥಿತಿಯಲ್ಲಿ ಅಲ್ಲಿ ಜನ ಒದ್ದಾಡುತ್ತಿದ್ದಾರೆ ಏಕೆಂದರೆ, 60-65 ಜನರು ಈ gun ಹೊತ್ತುಕೊಂಡು ಇಲ್ಲಿ ಓಡಾಡುವವರು ಅಷ್ಟೇ ಅವರನ್ನು ಕರೆದು ಮಾತನಾಡಬೇಕು ಅವರನ್ನು ಎಲ್ಲ ಸರ್ಕಾರಗಳು ಕರೆದು ಮಾತನಾಡಿವೆ ಅದರಿಂದ ಪ್ರಯೋಜನ ಏನಾಗಿದೆ? ಮಾನ್ಯ ಧರ್ಮಸಿಂಗ್‌ರವರು ಅವರನ್ನೇ ಕರೆಸಿ ಸಭೆ ಮಾಡಿದರು ಗೌರಿ ಲಂಕೇಶ್, ಅವರನ್ನೆಲ್ಲ ಕರೆದು ಮಾತನಾಡಿದರು ಇದು ಮಾನ್ಯ ಶಿವರಾಮುರವರಿಗೆ ಗೊತ್ತಿದೆ ಇದರಿಂದ ಪ್ರಯೋಜನವೇನಾಯಿತು? ಅವರು ಯಾರ ಮಾತೂ ಕೇಳುವ ಹಾಗಿಲ್ಲ ಅವರ ಉದ್ದೇಶಗಳೇ ಬೇರೆ ಇದ್ದಾಗ ನೀವು ಅದನ್ನು ಏನೂ ಮಾಡುವುದಕ್ಕಾಗುವುದಿಲ್ಲ ಹಾಗಾಗಿ, ಸರ್ಕಾರ ಸತ್ತಂತೆ ಇರಬಾರದು ಅಸಹಾಕ ಜನರ ನೆರವಿಗೆ ಹೋಗಬೇಕಾಗುತ್ತದೆ ಅವರಿಗೆ ನೆಮ್ಮದಿಯ ಬದುಕನ್ನು ಕೊಡಬೇಕಾಗುತ್ತದೆ

ಶ್ರೀ ಡಿ ಎನ್ ಜೀವರಾಜ್(ಶೃಂಗೇರಿ) ಮಾನ್ಯ ಅಧ್ಯಕ್ಷರೆ, ಈಗ actual position ಏನಿದೆ, ನಾವು ಸಾಗುವಳಿ ಚೀಟಿ ಕೊಡಬೇಕೆನ್ನುವುದು ಏನಿದೆ ಸತ್ಯ ಇದನ್ನು ಮಾನ್ಯ ಶಿವರಾಮುರವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಬಹಳ ಕಾಳಜಿ ಇಟ್ಟು ಅವರು ನಾವೂ ಒಟ್ಟಿಗೆ ಸೇರಿ ಸಾಗುವಳಿ ಚೀಟಿ ಕೊಟ್ಟೆವು. ಆ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯ ಮಂತ್ರಿಯಾಗಿದ್ದರು ನಾನು 1994ರಲ್ಲಿ ಮೊದಲ ಬಾರಿಗೆ ಚುನಾವಣೆಗೆ ನಿಂತಾಗ ನಾನು ಆ ಕೆರೆಕಟ್ಟೆ, ಮೆಣಸಿನಹಾಡ್ಯಕ್ಕೆ ಓಟು ಕೇಳುವುದಕ್ಕೆ ಹೋದಾಗ ಜನ ನಮ್ಮನ್ನು ಕೇಳುತ್ತಿದ್ದದ್ದು, ಇಲ್ಲಿಂದ ಬಿಡಿಸಿತ್ತೀರಾ ಎಂದು ಕೇಳುತ್ತಿದ್ದರು ನಾವು, ಇಲ್ಲ ಸರ್, ಬಿಡಿಸಿವುದಿಲ್ಲ ಎಂದು ಹೇಳುವಂಥದ್ದನ್ನೇ ಹೇಳುವುದಕ್ಕೆ ನಮ್ಮ ಧ್ವನಿ ಗಟ್ಟಿಯಾಗಿತ್ತು 1999ರಲ್ಲಿ ಅರ್ಧ ಜನರಿಗೆ ಹೋಗುವ ಮನಸ್ಥಿತಿ ಇತ್ತು, ಅರ್ಧ ಜನರಿಗೆ ಇರುವ ಮನಸ್ಥಿತಿ ಇತ್ತು ನಾನು 2004ರ ಚುನಾವಣೆ ಅಭ್ಯರ್ಥಿಯಾಗಿ ಹೋದಾಗ ಕೇಳುತ್ತಿದ್ದುದು, ನೀವು ಸರ್ಕಾರದಿಂದ ನಮಗೆ ಎಷ್ಟು ಹಣ ಕಳುಹಿಸಿಕೊಡುತ್ತೀರಿ ಎನ್ನುವುದನ್ನು ಹೇಳಿ, ನೀವು ಕಳುಹಿಸುತ್ತೀರಾ? ನಾವು ನಿಮಗೆ ಓಟು ಕೊಡುತ್ತೇವೆಂದು, 1994ರಲ್ಲಿ ಇರುತ್ತೇವೆ, ಕಳುಹಿಸಿದರೆ ಓಟು ಕೊಡುವುದಿಲ್ಲವೆಂದು ಹೇಳಿದರು ನನಗಿನ್ನೂ ನೆನಪಿದೆ ನಾವು ಭಾಷಣ ಮಾಡುತ್ತಿದ್ದೆವು ಇಲ್ಲಿರುವ ಜನ ಈ ಹಳ್ಳದಲ್ಲಿ ಮುರುಗೋಡು ಮೀನು ಹಿಡಿದುಕೊಂಡು ತಿಂದಿರುವವರು, ಈ ಸೂರ್ಯ ಹುಟ್ಟಿದ್ದನ್ನು ನೋಡಿರುವವರು, ಈ ಕಾಡಿನ ಮಧ್ಯೆ

ಬದುಕಿದವರು, ಈ ಹಿಂಬಳ ಕಚ್ಚಿಸಿಕೊಳ್ಳದಿದ್ದರೆ ಅವರು ಬಧುಕುವುದಿಲ್ಲ ಎಂದು ನಾನೇ ಭಾಷಣ ಮಾಡಿದ್ದೇನೆ ಆದರೆ, ಇವತ್ತು ಅಲ್ಲಿ ಪರಿಸ್ಥಿತಿ ಏನಿದೆ ಎಂದರೆ, ಜನ ಅಲ್ಲಿ ಕರೆದು ಕೇಳುತ್ತಾರೆ, "ದಯಮಾಡಿ ಸರ್ಕಾರದಿಂದ ಹಣ ಕೊಡಿಸಿಬಿಡಿ, ಎಷ್ಟು ಕೊಟ್ಟರೂ ಸಾಕು, ನಾವು ಇಲ್ಲಿಂದ ಬಿಟ್ಟು ಹೋಗುತ್ತೇವೆ" ಎಂದರು ಇದನ್ನು ಸನ್ಮಾನ್ಯ ಧರ್ಮಸಿಂಗ್‌ರವರು ಮುಖ್ಯ ಮಂತ್ರಿಯಾಗಿದ್ದಾಗಲೂ ಅವರ ಹತ್ತಿರ ಬಂದು– ಅವರು ಹೋಗುತ್ತಾರಂತೆ, ಎಷ್ಟು ದುಡ್ಡು ಕೊಡುತ್ತೀರೋ ಕೊಟ್ಟು ಕಳುಹಿಸಿ ಎಂದು ಹೋಗುತೇನೆಂದು ಧೈರ್ಯವಾಗಿ ಯಾರಾದರೂ ಹೇಳಿದರೆ ಆ ಹೇಳಿದವರ ಮನೆ ಮುಂದೆ ಬೆಳಗ್ಗೆ ಹೋಗಿ ನಿಂತು, ನೀವ್ಯಾಕೆ ಹೋಗುತ್ತೇನೆಂದು ಹೇಳುತ್ತಿದ್ದೀರಿ, ನೀವು ಹೋಗಕೂಡದು ಎಂದು ಹೇಳುತ್ತಾರೆ ಹೋಗುತ್ತೇನೆಂದು ಹೇಳುವುದಕ್ಕೂ ಧ್ವನಿ ಇಲ್ಲದಿರುವಂಧ, ನಾಲಗೆ ಸತ್ತಂಥ, ಎಲ್ಲಾ ಶಕ್ತಿಗಳನ್ನು ಕಳೆದುಕೊಂಡಂಧ ಜನ ನಾವು ಅಲ್ಲಿ ಬದುಕುತ್ತಿದ್ದೇವೆ ನಮ್ಮ ಪರವಾಗಿ ಅಯ್ಯಾ ಎಂದು ಹೇಳುವುದಕ್ಕಾದರೂ ತಮಗೆ ಯಾರಿಗಾದರೂ ಒಂದೆರಡು ಮನಸ್ಸು ಬರಲಿ ಎಂದು ನಾನು ಕೈಮುಗಿದು ನಿಮ್ಮಹತ್ತಿರ ಕೇಳುತ್ತೇನೆ ಇಲ್ಲದಿದ್ದರೆ ಇದು ಬಹಳ ಕೆಟ್ಟ ಸ್ಥಿತಿ ಇದೆ ನೀವ್ಯಾರೋ ಹೇಳಿದಂತೆ ಅವರಿಗೆ ಜಮೀನು ಕೊಟ್ಟರೆ, ಅಥವಾ ಅವರಿಗೆ ಅಭಿವೃದ್ಧಿಗೆ ಹಣ ಕೊಟ್ಟರೆ ಅವರು ನಮ್ಮನ್ನು ಬಿಡುತ್ತಾರೆಂದು ತಿಳಿದುಕೊಳ್ಳಬೇಡಿ ತೆಗೆದುಕೊಂಡು ಬಂದು ಇಡೀ ಬೆಂಗಳೂರು ವಿಧಾನಸೌಧವನ್ನು ತೆಗೆದುಕೊಂಡು ಬಂದು ಕೆರೆಕಟ್ಟೆಯಲ್ಲಿ ಪ್ರತಿಷ್ಠಾಪನೆ ಮಾಡಿದರೆ ಈ ವಿಧಾನಸೌಧ ತಂದಿದ್ದು ತಪ್ಪು, ಜಾಗ ಹೋಯಿತು ಎನ್ನುವುದಕ್ಕಾಗಿ ಮತ್ತೊಂದು ಚಳುವಳಿ ಮಾಡುತ್ತಾರೆ ಇದು ಸದ್ಯದಲ್ಲಿ ನಡೆಯಲಿಕ್ಕೆ ಹೊರಟಿರುವ ವಿಷಯ

ಶ್ರೀ ಆರಗ ಜ್ಞಾನೇಂದ್ರ. ಅವರು ಸರ್ಕಾರ ರಚನೆ ಮಾಡಲಿಕ್ಕೆ ಹೊಟಿದ್ದಾರೆ, ಹೀಗಾಗಿ ಯಾವುದೋ ಒಂದು ಸಮಸ್ಯೆ ಅಲ್ಲ ಬಂದೂಕಿನಿಂದ ಸರ್ಕಾರ ರಚನೆ ಮಾಡುತ್ತೇವೆಂದು ಹೇಳುತ್ತಾರೆ ಏನು ಮಾಡುವುದು?

ಶ್ರೀ ಎಂ ಪಿ ಪ್ರಕಾಶ್ ನಕ್ಸಲೀಯ ವಿಚಾರಗಳ ಬಗ್ಗೆ ಬಹಳಷ್ಟು ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದೀರಿ ಅದು ನಿಜವಾಗಿಯೂ ಕೂಡ ಬಹಳ ಒಳ್ಳೆಯ ಸಲಹೆ ಮಾನ್ಯ ಧರ್ಮಸಿಗ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಆದ ಘಟನೆ, ಸಾಕೇತ್‌ರಾಜ್‌ರವರ ಘಟನೆ ಆದಮೇಲೆ

ಅಲ್ಲಿ ಎಲ್ಲಾ ಉಗ್ರಗಾಮಿಗಳಾಗಿರತಕ್ಕಂಥವರು ಅಥವಾ ಬೇರೆ ಬೇರೆ ವಿಚಾರಗಳ ಸಂಘಟನೆ ಇರತಕ್ಕಂಥ ಜನಗಳು ಅವರೆಲ್ಲರನ್ನೂ ಕೂಡ ಅವರು ಕರೆಸಿ ಮಾತನಾಡಿ ಇದಕ್ಕೆ ಏನಾದರೊಂದು ಪರಿಹಾರ ಕಂಡುಹಿಡಿಯಿರಿ ಎಂದು ಹೇಳಿದರು ಅದರ ಜೊತೆಗೆ ಈ ಬಗ್ಗೆ ಸ್ವಲ್ಪಮಟ್ಟಿಗಾದರೂ ಕೂಡ ದಾರಿ ತಪ್ಪಿರುವುದು ಹಿಂಸೆಗೆ ನಾವು ಒಳಗಾಗುವುದಿಲ್ಲ ಆದರೆ ಇದು ತಪ್ಪಾದಂಥ ಅಭಿಪ್ರಾಯವೆಂದು ಗದ್ದರ್ ಅವರೆಲ್ಲಾ ಬಂದಿರತಕ್ಕಂಥ ಸಂದರ್ಭದಲ್ಲಿ ಅವರು ಯಾರು ಮುಖಂಡರು ಇದ್ದಾರೆ, ದಯವಿಟ್ಟು ಅವರನ್ನು ಕರೆಸಿ, ನಾನು ಮಾತನಾಡಲಿಕ್ಕೆ ತಯಾರಿದ್ದೇನೆಂದು ಮಾನ್ಯ ಧರ್ಮಸಿಂಗ್ ರವರು ಹೇಳಿದ್ದರು ಆದರೆ ಮುಂದೆ ಅವರು ಯಾರನ್ನೂ ಕೂಡ ಕರೆದು ಮಾತನಾಡಲಿಕ್ಕೆ ತಯಾರಾಗಲಿಲ್ಲ ನಕ್ಸಲರ ಗುಂಪಿನವರು ಹೇಳಿದರು, ಇವರ ಜೊತೆಗೆ ಏನು ಮಾತನಾಡತಕ್ಕಂಥ ಅವಶ್ಯಕತೆ ನಮಗಿಲ್ಲವೆಂದರು ಯಾರೊಬ್ಬರೂ ಕೂಡ ಬಂದು ಮಾತನಾಡುವಂಥ ಪ್ರಕ್ರಿಯೆಗಳು ಆಗಲಿಲ್ಲ ಈಗಲೂ ಕೂಡ ನಾನು ಎಲ್ಲರಲ್ಲೂ ಬಿನ್ನವಿಸಿಕೊಳ್ಳುತ್ತೇನೆ, ಆ ವಿಚಾರಗಳ ಬಗ್ಗೆ ಯಾರಾದರೂ ಇದ್ದರೆ, ಹೊರಗಡೆಯವರು ಇರಬಹುದು, ಸದನದಲ್ಲಿದ್ದವರಿರ ಬಹುದು, ಅವರು ಮಾತನಾಡಲಿಕ್ಕೆ ಬಂದರೆ ಹಿಂಸಾ ಮಾರ್ಗವನ್ನು ತ್ಯಜಿಸಿ ಆಗಬೇಕಾಗಿತಕ್ಕಂಥ ಕರ್ತವ್ಯದ ಕೆಲಸಗಳು ಸರ್ಕಾರದಿಂದ ಏನೇನು ಆಗಬೇಕಾಗಿದೆ, ಅದನ್ನು ಮಾಡುತ್ತೇವೆ ಎನ್ನುವುದರ ಬಗ್ಗೆ ಈ ಸರ್ಕಾರ ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆ, ಮುಖ್ಯಮಂತ್ರಿಗಳು ಈಗಲೂ ಕೂಡ ಅವರಿಗೆ ಆಹ್ವಾನ ಕೊಡಲಿಕ್ಕೆ ನಾವು ತಯಾರಿದ್ದೇವೆ ಯಾರಾದರೂ ಬರುವುದಾದರೆ ಹಿಂಸಾ ಮಾರ್ಗವನ್ನು ಮಾತ್ರ ಅವರು ತೊರೆಯಬೇಕು ಹಿಂಸಾ ಮಾರ್ಗ ವನ್ನು ಅವರು ತೊರೆದು ಅವರು ಮಾತನಾಡಲಿಕ್ಕೆ ಬಂದರೆ ಅವರ ಸಲಹೆಗಳನ್ನು ಸಂಪೂರ್ಣವಾಗಿ ಯಾವುದನ್ನು ಕಾರ್ಯರೂಪದಲ್ಲಿ ತರಲಿಕ್ಕೆ ಸಾಧ್ಯವಿದೆಯೋ ಅದನ್ನು ಮಾಡುವುದಕ್ಕೆ ನಾವು ತಯಾರಿದ್ದೇವೆ ಚಿರಂಜೀವಿ ಸಿಂಗ್ ರವರು ಕೊಟ್ಟಿರತಕ್ಕಂಥ ವರದಿಯ ಪ್ರಕಾರ, ಚಿಕ್ಕಮಗಳೂರು ಜಿಲ್ಲೆಗೆ ಅವತ್ತಿನ ದಿವಸ ಮೂರು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಲಾಗಿದೆ ಆ ಮೂರು ಕೋಟಿ ರೂಪಾಯಿಗಳಲ್ಲದೇ ಬೇರೆ ಜಿಲ್ಲೆಗಳಿಗೆ ಒಂದು ಕೋಟಿ ರೂಪಾಯಿಯಂತೆ ನಾವು ಆ ಸಂದರ್ಭದಲ್ಲಿ ಕೊಟ್ಟೆವು ಅದೇ ರೀತಿಯಾಗಿ ಒಂದು ಕೋಟಿ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಿಗೆ ಈ ಅಭಿವೃದ್ಧಿ ಕೆಲಸ ಕಾರ್ಯಗಳನ್ನು

ಮಾಡುವುದಕ್ಕೆ ಕೊಟ್ಟೆವು ಅದಾದ ನಂತರ ಸುಮಾರು 152 ತಾಲ್ಲೂಕುಗಳು, ಯಾವ್ಯಾವ ಗಡಿಬಾಗದಲ್ಲಿ ಇರುತ್ತವೆಯೋ ಅಂಥ 152 ತಾಲ್ಲೂಕುಗಳಿಗೆ 10–10 ಲಕ್ಷ ರೂಪಾಯಿಗಳಂತೆ ಜಿಲ್ಲಾ ಪಂಚಾಯಿತಿ ಮೂಲಕ ಮಾನ್ಯ ಉದಾಸಿಯವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಹಣ ಬಿಡುಗಡೆ ಮಾಡಿದರು ಅಲ್ಲಿ ಅಬಿವೃದ್ಧಿ ಸಂದರ್ಭ ಬಂದಾಗ, ಗ್ರಾಮ ಪಂಚಾಯಿತಿಯ ಆಯಾಯ ಸದಸ್ಯರು ತಮಗೆ ಬೇಕಾದಂಥ ರೀತಿಯಲ್ಲಿ ಬಳಸಿಕೊಂಡರು, ಆದರೆ ಮುಂದೆ ಕೊಡತಕ್ಕಂಥ ದುಡ್ಡನ್ನು ಜಿಲ್ಲಾಧಿಕಾರಿಗಳ ಮುಖಾಂತರ ಕೊಟ್ಟರೆ ನಿಜವಾದಂಥ ಅಭಿವೃದ್ಧಿ ಕೆಲಸಗಳು ಆಗುತ್ತವೆ ಇಲ್ಲದಿದ್ದರೆ, 50 ಸಾವಿರ ರೂಪಾಯಿಯ ಚರಂಡಿ, 25 ಸಾವಿರ ರೂಪಾಯಿಯ ಬೇರೆ ಒಂದು ಕಟ್ಟಡ, ಈ ತರಹದಲ್ಲಿ ಆಗುವುದನ್ನು ನಿಲ್ಲಿಸಬೇಕು ಎನ್ನುವುದೂ ಕೂಡ ನಿರ್ಧಾರವಾಯಿತು ಇದು ಬರೀ ನಕ್ಸಲರಿಗೆ ಸಂಬಂಧಪಟ್ಟಂಥ ಎರಡು ಭಾಗಗಳಿಗೆ ಅಲ್ಲದೇ ತತ್ಕೊಳ ಮೊದಲಾಗಿರತಕ್ಕಂಥ ಪ್ರದೇಶದಲ್ಲಿ ಒತ್ತುವರಿ ಮಾಡಿರುವಂಥ ಅರಣ್ಯವಾಸಿಗಳನ್ನು ಸುಪ್ರೀಂ ಕೋರ್ಟ್‌ನ ನಿರ್ಣಯದ ಮೂಲಕ ಒಕ್ಕಲೆಬ್ಬಿಸುವ ಕೆಲಸವಾಯಿತು ಆ ಸಂದರ್ಭದಲ್ಲಿ ಬೇರೆ ಬೇರೆ ಬಾಗದಲ್ಲಿ ಸರ್ವೆ ಮಾಡಬೇಕಾದ ಕೆಲಸವನ್ನು ಮಾಡಿಸಿದೆವು ಜಾಯಿಂಟ್ ಸರ್ವೆ ಮಾಡಿಸುವ ವ್ಯವಸ್ಥೆಯನ್ನು ಮಾಡಿ ಭಾರತ ಸರ್ಕಾರ ನಮ್ಮವರು ಸೇರಿ ಒಂದು ಸರ್ವೆಯನ್ನು ಮಾಡಿ, ಎಲ್ಲೆಲ್ಲಿ ರೆವುನ್ಯೂ ಪ್ಯಾಕೆಟ್ಸ್ ಇವೆ, ಅವುಗಳನ್ನು ಬಿಡುಗಡೆ ಮಾಡಬೇಕು ಎನ್ನುವುದರ ಬಗ್ಗೆಯೂ ಕೂಡ ನಾವು ಪ್ರಸ್ತಾಪಿಸಿದ್ದೇವೆ ಅದೇ ರೀತಿಯಾಗಿ ಮಾನ್ಯ ಜಾಮದಾರ್ ಮೊದಲಾದವರನ್ನು ನೀವು ಅಲ್ಲಿಯೇ ಕುಳಿತುಕೊಂಡು ಆ ಸಮಸ್ಯೆಯನ್ನು ಬಗೆಹರಿಸಿ ಎಂದು ಕಳುಹಿಸಿ ಕೊಟ್ಟಾಗ, ಅವರು ಆ ಭಾಗದಲ್ಲಿ ಹೋಗಿ 7–8 ದಿವಸಗಳ ಕಾಲ ಅಲ್ಲಿಯೇ ಕ್ಯಾಂಪ್ ಹಾಕಿ ಅವರ ಮೂಲಕ ಅಲ್ಲಿ ಯಾವ್ಯಾವುದನ್ನು ಸರ್ವೆ ಮಾಡಿಸಬೇಕು, ಯಾರಿಗೆ ಪಟ್ಟಾ ಕೊಡಬೇಕು, ಎಂಬುದನ್ನು ಮಾಡಿದರು ಈಗಾಗಲೇ ಜೀವರಾಜ್‌ರವರು ಮತ್ತು ಜ್ಞಾನೇಂದ್ರರವರು ಮತ್ತು ಇನ್ನು ಅನೇಕ ಹಿರಿಯರು ಹೇಳಿದಂತೆ, ಅರಣ್ಯದ ಒಳಗಡೆ ಇರತಕ್ಕಂಥವರು ಹೊರಗಡೆ ಬರುವುದಕ್ಕೆ ತಯಾರಿಲ್ಲ ಹೊರಗಡೆ ಬರುವುದಕ್ಕೆ ತಯಾರಿರುವ ಗಡಿ ಪ್ರದೇಶಗಳಲ್ಲಿರುವ ಜನಗಳಿಗೆ ನಾವು 2–3–5 ಎಕರೆ ಜಮೀನುಗಳನ್ನು ಕೊಟ್ಟಿದ್ದೇವೆ ಆದರೆ ಅವರು ಅದನ್ನು ಕಡಿದು, ಸವರಿಸಿ, ಬೇಸಾಯಕ್ಕೆ ಯೋಗ್ಯವಾದ ರೀತಿಯಲ್ಲಿ ಮಾಡಿದರೂ

ಕೂಡ ಆ ಕೃಷಿ ಮಾಡುವಂಥದ್ದರ ಬಗ್ಗೆ ಹೆಚ್ಚು ತಿಳುವಳಿಕೆ ಅವರಿಗೆ ಇರುವುದಿಲ್ಲ ನಾಡಿನ ಜನ ಮುಗ್ಧರಾಗಿರುವ ಜನಗಳನ್ನು ಉಪಯೋಗಿಸಿ ಕೊಂಡಿರತಕ್ಕಂಥದ್ದು ಇದೆ ನಾವು ಕೊನೆಗೆ ಏನು ಹೇಳಿದೆವು, ನೀವು ಕಾಡನ್ನು ಬಿಟ್ಟು ಹೊರಗಡೆ ಬರುವುದಿಲ್ಲ, ಕಾಡಿನ ಉತ್ಪನ್ನಗಳನ್ನು ತೆಗೆದುಕೊಂಡು ಬದುಕುತ್ತೇವೆ ಎನ್ನುವುದಾಗಿದ್ದರೆ ನೀವು ಅಲ್ಲಿಯೇ ಇರಬಹುದು ಎಂದು ಹೇಳಿದ್ದೇವೆ ಈಗ ಕಾಡಿನ ಹೊರಗಡೆಯಿರ ತಕ್ಕಂಥವರು ಇದ್ದಾರೆ, ಅವರಿಗೆ ಗಡಿಪ್ರದೇಶದ ಕಾಡಿನ ಅಂಚಿನ ಆಚೆ ನಾವು ಅವರಿಗೆ ಜಮೀನನ್ನು ಕೊಟ್ಟಿದ್ದೇವೆ ಇನ್ನು ಕೆಲವು ಕಡೆಗೆ ಉರುವಲುಗಳನ್ನು ಹಾಳು ಮಾಡಬಾರದು, ಅರಣ್ಯವನ್ನು ಹಾಳು ಮಾಡಬಾರದು ಎನ್ನುವುದಕ್ಕೆ ಬಹಳ ರಿಯಾಯಿತಿ ದರದಲ್ಲಿ ಗ್ಯಾಸ್ ಅನ್ನುಕೊಡುವ ವ್ಯವಸ್ಥೆ ಮಾಡಿಕೊಟ್ಟಿದ್ದೇವೆ ಇಂಥಹ ಅನೇಕ ಪ್ರಯತ್ನಗಳೂ ಕೂಡ ಆಗಿವೆ ನೀವು ಹೇಳಿದಂತೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಡುವುದರಲ್ಲಿ, ನಕ್ಸಲರ ಅಭಿಪ್ರಾಯ ಏನೇ ಇರಲಿ ತಾವು ಹೇಳಿದ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುವುದಿಲ್ಲ ಏಕೆಂದರೆ, ನಕ್ಸಲರ ಅಭಿಪ್ರಾಯ ಬಂದೂಕಿನಿಂದ ಸರ್ಕಾರ ಬದಲಾವಣೆ ಮಾಡುತ್ತೇವೆಂದು ಅವರ ನಂಬಿಕೆಯಾಗಿರಬಹುದು ಆದರೆ, ಆ ನಂಬಿಕೆಗೆ ಪ್ರೋತ್ಸಾಹ ಕೊಡುವ ಜನ ತಮ್ಮ ಕಷ್ಟ ಕಾರಣಗಳಿಗಾಗಿ ಆ ರೀತಿಯ ಪ್ರೋತ್ಸಾಹ ಕೊಡುತ್ತಿರುತ್ತಾರೆ ಜನಪ್ರತಿನಿಧಿಗಳಾಗಿರತಕ್ಕಂಥವರು, ಮತ್ತು ಜನರ ಆ ಅಭಿಪ್ರಾಯ ಇಲ್ಲದೇ ನಕ್ಸಲರು ಅಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಅಭಿವೃದ್ಧಿ ಮೂಲಕವಾಗಿ ಅವರ ಬದುಕು ಹಸನಾಗುವ ರೀತಿಯಲ್ಲಿ ಮಾಡಿದಾಗ, ಅವರಿಗೆ ಶಿಕ್ಷಣ, ಆರೋಗ್ಯ, ಅವರ ಬದುಕನ್ನು ಗುಣಾತ್ಮಕವಾಗಿ ನಡೆಸಿಕೊಂಡು ಹೋಗಲಿಕ್ಕೆ ಬೇಕಾದಂಥ ಅವಕಾಶಗಳು ಇಷ್ಟನ್ನು ನಾವು ಅವರಿಗೆ ಕಲ್ಪಿಸಿಕೊಟ್ಟರೆ ಅವರು ಈ ತರಹದ ಯಾವುದೇ ಬದಲಾವಣೆಗಳನ್ನು ಇಚ್ಛೆಪಡುವುದಿಲ್ಲ ಅವರು ಮತ್ತೆ ನಮ್ಮ ಮತದಾರರ ಪೆಟ್ಟಿಗೆಯ ಮೂಲಕವಾಗಿ ಸರ್ಕಾರಗಳನ್ನು ಬದಲಿ ಮಾಡಬೇಕೆನ್ನುವ ಚಿಂತನೆಗೆ ಒಳಗಾಗುತ್ತಾರಯೇ ವಿನಃ ಬಂದೂಕಿನ ಮೂಲಕ ಹಿಂಸಾ ಮಾರ್ಗವಾಗಿ ಬದಲಾವಣೆ ಮಾಡುತ್ತೇವೆ ಎನ್ನುವುದನ್ನು ಒಪ್ಪುವುದಿಲ್ಲ ಭಾರತೀಯ ಮನಸ್ಸು ಎಂದೂ ಕೂಡ ಹಿಂಸೆಗೆ ಒಳಪಟ್ಟಿದ್ದಲ್ಲ ಆ ದೃಷ್ಟಿಕೋನದಿಂದ ನಾವು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಎಷ್ಟು ಮಾಡಿದರೂ ಕಡಿಮೆ ಆ ಭಾಗದಲ್ಲಿ ಮಾಡಲೇಬೇಕಾಗಿದೆ ನೂರಾರು

ಸಮಸ್ಯೆಗಳಿವೆ ತಾವು ಏನಾದರೂ ಸಲಹೆಗಳನ್ನು ಕೊಡುವುದಾದರೆ, ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು ಇಲ್ಲಿ ಅಭಿವೃದ್ಧಿ ಕೆಲಸಗಳಿಗೆ ಸಂಬಂಧಪಟ್ಟಂತೆ ಏನಾದರೂ ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಸಾಧ್ಯತೆ ಇದೆ ಎನ್ನುವುದಾಗಿದ್ದರೆ, ನೀವು ಸದನ ಸಮಿತಿ ಮಾಡಿ ಎಂದು ಹೇಳಿದಿರಿ ಇದರ ವಿಚಾರದಲ್ಲಿ ಸದನ ಸಮಿತಿಯಿಲ್ಲ, ಸಲಹೆ ಸೂಚನೆ ಕೊಟ್ಟು ಅಭಿವೃದ್ಧಿಯನ್ನು ಏನು ಮಾಡಬಹುದು ಎಂದು, ಅಧಿಕಾರಿಗಳು ಕೊಟ್ಟಿರುವ ವರದಿಯ ಮೇಲೆ ಮತ್ತೆ ಒಂದು ಸದನ ಸಮಿತಿಯನ್ನು ಮಾಡುವುದಾಗಿದ್ದರೆ ನಾನು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅಂಥದ್ದಕ್ಕೂ ಕೂಡ ಒಪ್ಪಿಗೆ ಕೊಡಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ತಾವು ಆ ಜವಾಬ್ದಾರಿ ಆಗಬಹುದು ಎನ್ನುವುದಾಗಿದ್ದರೆ ಅದು ಅವರು ಸಲಹೆ ಕೊಟ್ಟಿದ್ದಕ್ಕೆ ನಾನು ಹೇಳಿದೆ ಇವತ್ತು ಎಲ್ಲರ ಬಯಕೆಯಂತೆ ಕೆಲಸ ಮಾಡಿದ್ದೇವೆ ಇದರಲ್ಲಿ inquest report ಬರಬೇಕಾಗಿದೆ ಇನ್ನು ಮಾಹಿತಿಗಳು ಅಲಭ್ಯವಿವೆ ಅವುಗಳ ಬಗ್ಗೆಯೂ ಮಾಡುತ್ತಿದ್ದೇವೆ ನಾವು ಯಾವುದೇ ತರಹದ ನೆರವನ್ನು, ಅವರ ಪ್ರಾಣರಕ್ಷಣೆ, ಆಸ್ತಿ ರಕ್ಷಣೆ, ಮಾನ ರಕ್ಷಣೆ, ಮಾಡಬೇಕಾಗಿರುವ ಕರ್ತವ್ಯಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವ ಮಾತನ್ನು ಹೇಳಿ ಪ್ರಾಯಶಃ ಸದನ ಇದಕ್ಕೆ ಒಪ್ಪುತ್ತದೆ ಎಂದು ನಾನು ನಂಬಿದ್ದೇನೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಪ್ರಕಾಶ್‌ರವರು ತಾತ್ವಿಕವಾಗಿ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ 1017ರಲ್ಲಿ ಲೆನಿನ್‌ನವರ ನೇತೃತ್ವದಲ್ಲಿ ರಷ್ಯಾ ದೇಶದಲ್ಲಿ ಕ್ರಾಂತಿಯಾಯಿತು ಮತ್ತೆ ಬಿಂದ್ರನ್‌ವಾಲೆವರೆಗೆ ಹೋಗಿ ಮುಟ್ಟಿದಿರಿ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪಿಸಿದಿರಿ ನಾವು ನೇರವಾಗಿ ಕೇಳುವುದು ಇಷ್ಟೇ ಇದು ideological battle ಅವರು ಮಾಡುತ್ತಾರೆ ಇದು ideological ಏಕೆಂದರೆ, ಸಾಕೇತ್ ರಾಜನ್ ನವರು ಮತ್ತು ಅವರ ಪತ್ನಿ ನಕ್ಸಲೈಟ್ ಆಗಿಬಿಟ್ಟರು, ಅವರ ತಂದೆ, ತಂಗಿ ಸತ್ತರೂ ಹೋಗಲಿಲ್ಲ ಒಂದು ರೀತಿಯ ಸಮರ್ಪಣಾ ಭಾವದಿಂದ ಮಾಡತಕ್ಕಂಥದ್ದು ಅವರ ತಲೆಯಲ್ಲಿತ್ತು ಶಿವಲಿಂಗು ರಾಯಚೂರಿನಿಂದ ಬಂದವನು ಶಿವಲಿಂಗು ಸಾಕೇತ್ ರಾಜನ್ ನವರ ಆಪರೇಷನ್‌ನಲ್ಲಿ ಸತ್ತರು ಇವತ್ತು ಏನಾಗುತ್ತಿದೆ, ನಾವು ಇದನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಟಿ ನಾಗೀರೆಡ್ಡಿಯವರ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು

ಪ್ರಸ್ತಾಪಿಸಿದರು He was a greate economist Oxfordನಲ್ಲಿ ಓದಿದವರು ಅವರು ಕೂಡ ಕ್ರಾಂತಿಕಾರಕ ವಿಚಾರಧಾರೆಗಳನ್ನು ಪ್ರಾರಂಭಿಸಿದರು ಪಂಡಿತ್ ಜವಹರಲಾಲ್ ನೆಹರೂರವರು ಲೋಕಸಭೆಯಲ್ಲಿ ಮೊಟ್ಟಮೊದಲಿಗೆ ಪ್ರಧಾನಮಂತ್ರಿಗಳಾಗಿದ್ದಾಗ, ಶ್ರೀಮಾನ್ ಶ್ರೀಪಾದ್ ಅಮೃತ ಡಾಗೆಯವರು ವಿರೋಧ ಪಕ್ಷದ ನಾಯಕರಾಗಿದ್ದರು ಕೊನೆಯಲ್ಲಿ ಅವರೊಂದು ಭಾಷಣ ಮಾಡುತ್ತಾರೆ 1950ರಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕರಾಗಿ ಅಹಿಂಸಾ ಪರಮೋಧರ್ಮ ಎನ್ನುವ ಮಹಾತ್ಮ ಗಾಂಧೀಜಿಯವರ ಮಾತು ಇದೆ, ಅದಕ್ಕೆ ನಾವು ಪೂಜೆ ಮಾಡುತ್ತೇವೆ ಈ ದೇಶದ ಸಮಸ್ಯೆಗಳು ಕೆಲವು ಹಿಂಸೆಯಿಂದ ಬಗೆಹರಿಸಬಹುದು ಎಂದರು ಇವೆಲ್ಲಾ ವಾದಗಳಿವೆ ಅದಕ್ಕೆ ನಾವು ತಾತ್ವಿಕವಾಗಿ ಹೇಳತಕ್ಕಂಥ ರೀತಿಯಲ್ಲಿ ಹೇಳಿದ್ದೇವೆ ನಕ್ಸಲೈಟ್ ಚಟುವಟಿಕೆ ಏನು ನಡೆಯುತ್ತಿದೆ, ಅದನ್ನು ಹಗುರವಾಗಿ ತೆಗೆದುಕೊಳ್ಳುವುದು ಆಗುವುದಿಲ್ಲ ಅಭಿವೃದ್ಧಿ ಕೆಲಸಗಳು ಮಾಡಬೇಕಾಗಿವೆ ಯಾವ್ಯಾವ ರಿಪೋರ್ಟ್ ಕೊಟ್ಟಿದ್ದಾರೆ, ಅವುಗಳನ್ನು ಅನುಷ್ಠಾನಕ್ಕೆ ತರಬೇಕು ಬುಡಕಟ್ಟಿನ ಜನಾಂಗದವರು they have developed sentimental attachment ನಾನೂ ಕೂಡ try ಮಾಡಿದ್ದೆ ಬಿಟ್ಟು ಹೋಗಲಿಕ್ಕೆ ತಯಾರಿಲ್ಲ ಎಲ್ಲೆಲ್ಲಿ ಸೀರಿಯಸ್ ಪ್ರಾಬ್ಲಂ ಇರುತ್ತದೆ, ಅವರೆಲ್ಲರೂ ಕೂಡ ಅಲ್ಲಿಗೆ ಹೋಗುತ್ತಾರೆ ಪ್ರಚಾರ ಮಾಡುತ್ತಾರೆ ಪ್ರಚಾರ ಮಾಡಿ neglect ಮಾಡುತ್ತಾರೆ 1950 ರಲ್ಲಿ ತೆಲಂಗಾಣ ಮೂವ್‌ಮೆಂಟ್ ಏನಾಯಿತು? ಎಷ್ಟು ಎಲ್ಲಾ ಕಡೆಗೆ ಬಂತು? ಮೊಹಿನುದ್ದೀನ್, ರಾಜ ಬಹುದ್ದೂರ ಗೌಡ, ನಲಗುಂಡದ ರವಿರಾಜ ರೆಡ್ಡಿ, ಮೊಟ್ಟಮೊದಲ ಚುನಾವಣೆಯಲ್ಲಿ ಈ ದೇಶದಲ್ಲಿ ಬಹಳ ಅತ್ಯಧಿಕ ಮತಗಳಿಂದ ಚುನಾಯಿತರಾಗಿದ್ದಾರೆ ಇವೆಲ್ಲವೂ ಕೂಡ ತೆಲಂಗಾಣ ಮೂವ್‌ಮೆಂಟ್, ಅಲ್ಲಿ ವಿನೋಬಾ ಭಾವೆ ಬಂದು ಪೂಚಂಪಡದಲ್ಲಿ ಭೂದಾನ ಮೂವ್‌ಮೆಂಟ್ ಶುರು ಮಾಡಿದರು ಇದು ideological battle ಹಾಗಾಗಿ ಇದನ್ನು ಹಗುರವಾಗಿ ತೆಗೆದುಕೊಳ್ಳಬಾರದು ಇವತ್ತು ಏಕೆ ಆಗುತ್ತಿದೆ? ನೀವು ಮಾಡುವ ಕೆಲಸಕಾರ್ಯಗಳ ಬಗ್ಗೆ, ಸಮಸ್ಯೆಗಳ ಬಗ್ಗೆ, ಸರ್ಕಾರ ಗಮನ ಕೊಡುತ್ತಿಲ್ಲ ಎನ್ನುವ ರೀತಿಯಲ್ಲಿ frustration, ನಿರಾಶೆ ಆಗುತ್ತದೆ ನಿರಾಶೆಯಾಗುತ್ತದೆ ಅವರೆಲ್ಲರೂ ಕೂಡ ಈ ರೀತಿಯ ಚಟುವಟಿಕೆಯನ್ನು ಮಾಡುತ್ತಾರೆ ಅದು ನನ್ನ ಕಾಲದಲ್ಲಿ ಆಯಿತು, ನಿಮ್ಮಕಾಲದಲ್ಲಿ ಆಯಿತು, ಎಂದು ಆಪಾದನೆ ಮಾಡುವುದಿಲ್ಲ ಇವತ್ತು ನಾವು ನಲುವಳಿ ಸೂಚನೆ ಏಕೆ

ತಂದಿದ್ದು ಎಂದರೆ, ಇಂಥ ಘಟನೆ ಚಿಕ್ಕಮಗಳೂರಿನಲ್ಲಿ ನಡೆದಿದೆ ಈಗಾಗಲೇ ಸಿದ್ದರಾಮಯ್ಯನವರು, ರಮೇಶ್ ಕುಮಾರ್‌ರವರು ಎಲ್ಲರೂ ಕೂಡ ಪ್ರಸ್ತಾಪಿಸಿದ್ದಾರೆ ಅಮಾಯಕರ ಹತ್ಯೆಯಾಗಿದೆ ಅಮಾಯಕರ ಹತ್ಯೆ ಆಗತಕ್ಕಂಥದ್ದರ ಬಗ್ಗೆ ಸುಳಿವು ಸಿಗಲಿಲ್ಲ ಮತ್ತೆ ನಕ್ಸಲೈಟ್ ಆಕ್ಟಿವಿಟೀಸ್ ನಡೆಯತಕ್ಕಂಥ ಕಾಲದಲ್ಲಿ They have taken this step, what is going to happen ಸರ್ಕಾರ ಸೂಕ್ಷ್ಮತೆಯಿಂದ ಅದರ ಬಗ್ಗೆ ತಿಳಿದುಕೊಂಡು ಈ ರೀತಿಯಾದ ಘಟನೆಗಳು ಆಗದಂತೆ ನೋಡಿಕೊಳ್ಳಬೇಕಾಗುತ್ತದೆ ಅಲ್ಲಿ ಸತ್ತಿರುವ ಅಮಾಯಕರ ಬಗ್ಗೆ ಸ್ಪಷ್ಟವಾದ ಉತ್ತರ ನಿಮ್ಮಿಂದ ಬಂದಿಲ್ಲ ಮತ್ತೆ ಅಲ್ಲಿ ಏನಾಗಿದೆ ಎಂಬುದರ ವರದಿ ಕೂಡ ನಿಮ್ಮಲಿಲ್ಲ ಇದನ್ನು ಏತಕ್ಕೆ ಕೇಳಿದ್ದೇವೆಂದರೆ, ಇಂಥ ಒಂದು ಘಟನೆ ನಡೆದಂಥ ಕಾಲದಲ್ಲಿ ನಾವಿ ವಿರೋಧಪಕ್ಷದಲ್ಲಿ ಕುಳಿತಿರುವಾಗ ಕೇಳತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ ಇದು ಏತಕ್ಕೆ ಆಯಿತು, ಇದಕ್ಕೆ ಸರ್ಕಾರ ಏನು ಉತ್ತರ ಕೊಟ್ಟಿದೆ ಎನ್ನತಕ್ಕಂಥದ್ದರ ಬಗ್ಗೆ ಸಾಮಾನ್ಯ ಜನರು ನಾಳೆ ದಿವಸ ಪತ್ರಿಕೆಗಳಲ್ಲಿ ಓದುತ್ತಾರೆ ಇವತ್ತು ತಮ್ಮ 67ನೇ ಹುಟ್ಟು ಹಬ್ಬದ ದಿವಸ ಆದ್ದರಿಂದ, ನಿಮ್ಮ ಮನಸ್ಸನ್ನು ಕೆಡಿಸುವುದಕ್ಕೆ ನಾವು ಬಯಸುವುದಿಲ್ಲ You are a very good Parliamentarian ಆದರೆ, ಇವತ್ತು ಕೊಂದು ಹಾಕಿರುವ ಅಮಾಯಕರ ಬಗ್ಗೆ ನ್ಯಾಯ ಕೊಡತಕ್ಕಂಥದ್ದರಲ್ಲಿ ಈ ರಾಜ್ಯದ ಗೃಹ ಸಚಿವರಾಗಿರುವ ತಮ್ಮಿಂದ ಸ್ಪಷ್ಟವಾದ ಉತ್ತರ ಸಿಗುತ್ತಿಲ್ಲ ಆದ್ದರಿಂದ, ನಾವು ಸಭಾತ್ಯಾಗ ಮಾಡುತ್ತೇವೆ

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಆರಗ ಜ್ಞಾನೇಂದರ ಶೇಷೇಗೌಡರು ಮತ್ತು ವೆಂಕಟೇಶ್ ಬಗ್ಗೆ ನಿಮ್ಮದು ಸಬಾತ್ಯಾಗ ಆಗಿರಲಿಲ್ಲ ಅವರ ಜೀವಕ್ಕೆ ಬೆಲೆಯೇ ಇಲ್ಲ

(ಗೊಂದಲ)

ಪ್ರಕಟಣೆ

ಉಪಾಧ್ಯಕ್ಷರು ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್ ಪಾಟೀಲ್‌ರವರು ಚೈನಾ ದೇಶದಲ್ಲಿ ಶೈಕ್ಷಣಿಕ ಪ್ರವಾಸದಲ್ಲಿ ಪಾಲ್ಗೊಳ್ಳುತ್ತಿರುವ ಕಾರಣ ದಿನಾಂಕ 5 07 2007 ರಿಂದ 17 07 2007 ರವರೆಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ ಮಾನ್ಯ ಸದಸ್ಯರು ಗೈರುಹಾಜರಾಗಲು ಸದನದ ಸಹಮತ ಇದೆ ಎಂದು ಭಾವಿಸಲಾಗಿದೆ

ಶ್ರೀ ಶಿವಾನಂದ ಎಸ್ ಪಾಟೀಲ್‌ರವರಿಗೆ ಸದನಕ್ಕೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ

ಹೈದರಾಬಾದ್ ಕರ್ನಾಟಕ ಭಾಗದ ಶಾಸಕರ ಸಬೆಯನ್ನು ಇವತ್ತು ಸಂಜೆ 5 30 ಗಂಟೆಗೆ ಕರೆಯಲಾಗಿದೆ ಎಂದು ಮಾನ್ಯ ಬಿ ಆರ್ ಪಾಟೀಲ್ ರವರು ಹೇಳಿದ್ದಾರೆ ಆದ್ದರಿಂದ, ಈ ದಿವಸದ ಸಭೆಯನ್ನು ಮುಕ್ತಾಯಗೊಳಿಸಿ ನಾಳೆ ಬೆಳಿಗ್ಗೆ 11 00 ಗಂಟೆಗೆ ಸದನವು ಸೇರುವಂತೆ ಮುಂದೂಡಲಾಗಿದೆ

(ಸದನವು ಸಂಜೆ 5 32 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 12 07 2007ರ ಗುರುವಾರ ಬೆಳಿಗ್ಗೆ 11 00 ಗಂಟೆಗೆ ಸೇರಲು ನಿಶ್ಚಯಿಸಿತು)

ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)91-(357)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ)ಕೊಳಚೆ ನಿರ್ಮೂಲನ ಮಂಡಳಿಯಿಂದ ಐ ಹೆಚ್ ಡಿ ಎಫ್ ಯೋಜನೆಯಲ್ಲಿ ರಾಜ್ಯಾದ್ಯಾಂತ ಕೈಗೆತ್ತಿಕೊಂಡಿರುವ ಯೋಜನೆಗಳಾವುವು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಯೋಜನೆಗೆ ರಾಜ್ಯ ಸರ್ಕಾರ ಆಯುವ್ಯಯುದಲ್ಲಿ ನಿಗದಿಪಡಿಸಿದ ಮೊತ್ತವೆಷ್ಟು? ಹಾಗೂ ಇಲ್ಲಿಯವರೆಗೂ ಖರ್ಚಾದ ಮೊತ್ತವೆಷ್ಟು?

ಇ)ಕೇಂದ್ರ ಸರ್ಕಾರದ ಈ ಯೋಜನೆಗೆ ರಾಜ್ಯ ಸರ್ಕಾರದಿಂದ ಈ ವರ್ಷ ಆಯವ್ಯಯದಲ್ಲಿ ಹೆಚ್ಚಿಗೆ ಅನುದಾನ ನಿಗದಿಪಡಿಸಿ ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿ ಅನುದಾನವನ್ನು ಪಡೆಯಲು ಉದ್ದೇಶ ಸರ್ಕಾರಕ್ಕೆ ಇದೆಯಾ?

ಶ್ರೀ ಡಿ ಟಿ ಜಯಕುಮಾರ್

ಅ) ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ IHSDP ಯೋಜನೆಯಡಿ ರಾಜ್ಯಾದ್ಯಾಂತ ಕೈಗೆತ್ತಿಕೊಂಡಿರುವ ಯೋಜನೆಗಳ ವಿವರ ಕೆಳಗಿನಂತಿದೆ

ಜಿಲ್ಲೆ	ತಾಲ್ಲೂಕು	ಮನೆಗಳ ಸಂಖ್ಯೆ	ಮನೆಗಳ ಮತ್ತು ಮೂಲಭೂತ ಸೌಲಭ್ಯಗಳ ಅಂದಾಜು ಮೊತ್ತ (ರೂ ಕೋಟಿಗಳಲ್ಲಿ)
ಕೋಲಾರ	ಮುಳಬಾಗಿಲು	600	10 42
ಬೆಂಗಳೂರು	ರಾಮನಗರ	1800	27 16
	ದೊಡ್ಡಬಳ್ಳಾಪುರ	648	8 99

ಮೈಸೂರು	ನಂಜನಗೂಡು	540	6 91
ಮಂಡ್ಯ	ನಾಗಮಂಗಲ	420	5 89
ಹಾಸನ	ಹಾಸನ	1000	12 90
	ಹೋಳೆನರಸೀಪುರ	1000	12 90
ಬಳ್ಳಾರಿ	ಬಳ್ಳಾರಿ	520	8 66
ರಾಯಚೂರು	ಸಿಂಧನೂರು	1005	19 66
ಬೀದರ್	ಬಸವಕಲ್ಯಾಣ	170	2 46
ಗದಗ್	ಗಜೇಂದ್ರಘಡ	500	6 42
ಬೆಳಗಾವಿ	ಸವದತ್ತಿ	145	2 56
	ಒಟ್ಟು	**8348**	**124 3**

ಆ) ಈ ಯೋಜನೆಗೆ ರಾಜ್ಯ ಆಯವ್ಯಯದಲ್ಲಿ ರೂ 20 80 ಕೋಟಿಗಳನ್ನು 2007–08ನೇ ಸಾಲಿನಲ್ಲಿ ಒದಗಿಸಲಾಗಿದೆ ಮಂಜೂರಾದ ಪಟ್ಟಣಗಳಿಗೆ ಟೆಂಡರ್ ಕರೆದಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು

ಇ) ಹೆಚ್ಚಿನ ಯೋಜನೆಗಳನ್ನು ಯೋಜನೆಯಡಿಯಲ್ಲಿ ತಯಾರು ಮಾಡಿ, ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಮಂಜೂರಾತಿ ದೊರೆತ ನಂತರ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಅನುದಾನ ದೊರೆತಂತಾಗುತ್ತದೆ

ಶ್ರೀ ಬಾಲರಾಜ್ ಎಸ್ (ಕೊಳ್ಳೆಗಾಲ)92(321)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಪದವಿ ಪೂರ್ವ ಕಾಲೇಜು ಹಾಗೂ ಕೊಳ್ಳೇಗಾಲದ ಎಸ್ ವಿ ಕೆ ಮಹಿಳಾ ಕಾಲೇಜ್ ಮತ್ತು ಎಂ ಜಿ ಎಸ್ ವಿ ಕಾಲೇಜುಗಳಿಗೆ ಕೊರಡಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಹಿಂದೆ ಅನೇಕ ಬಾರಿ ಕೋರಿದ್ದಾಗ್ಯೂ, ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದಿರುವುದರಿಂದ, ಈ ಸೌಲಭ್ಯವನ್ನು ನೀಗಿಸಲಾಗುವುದೇ?

ಶ್ರೀ ಎಸ್ ಬಸವರಾಜಹೊರಟ್ಟಿ

ಅ) ಬಂದಿದೆ

ಆ) ಯಳಂದೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಆರ್ ಐ ಡಿ ಎಫ್-11 ರಡಿ 3 ತರಗತಿ ಕೊಠಡಿ, ಆರ್ ಐ ಡಿ ಎಫ್-12 ರಡಿ 4 ತರಗತಿ ಕೊಠಡಿ, ಹೀಗೆ 7 ತರಗತಿ ಕೊಠಡಿಗಳನ್ನು ಮಂಜೂರು ಮಾಡಲಾಗಿದೆ

ಎಂ ಜಿ ಎಸ್ ವಿ ಕಾಲೇಜಿಗೆ ಕೊಠಡಿಗಳ ನಿರ್ಮಾಣಕ್ಕೆ ಅಪೆಂಡಿಕ್ಸ್-ಇ ನಡಿ 2006-07ನೇ ಸಾಲಿಗೆ ರೂ 2000ಲಕ್ಷಗಳನ್ನು ಒದಗಿಸಲಾಗಿದೆ

ಕೊಳ್ಳೇಗಾಲದ ಎಸ್ ವಿ ಕೆ ಮಹಿಳಾ ಕಾಲೇಜಿಗೆ ಆರ್ ಐ ಡಿ ಎಫ್-12 ರಡಿ 1 ತರಗತಿ ಕೊಠಡಿ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ

ಶ್ರೀ ಬಾಲರಾಜ್ ಎಸ್ (ಕೊಳ್ಳೆಗಾಲ)93(322)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕೊಳ್ಳೇಗಾಲ ಮತಕ್ಷೇತ್ರದ ಕೊಳ್ಳೇಗಾಲದ ಶ್ರೀ ಮಹದೇಶ್ವರ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಂಬಂದ ಆಗಿಂದಾಗ್ಗೆ ಪ್ರತಿಭಟನೆಗಳು ನಡೆಯುತ್ತಿದ್ದು, ಕಳೆದ ಸಾಲಿನಲ್ಲಿ ಉಪನ್ಯಾಸಕರನ್ನು ತುಂಬಿಕೊಡಲು ಒಪ್ಪಿಗೆ ನೀಡಿರುವುದು ಸರ್ಕಾರದ ಗಮನದಲ್ಲಿದೆಯೇ?

ಇ) ಈ ಶೈಕ್ಷಣಿಕ ವರ್ಷಕ್ಕಾದರೂ ಉಪನ್ಯಾಸಕರನ್ನು ನೇಮಕ ಮಾಡಲಾಗುವುದೇ?

ಈ) ಇಲ್ಲವಾದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುವುದೇ?

ಉ) ಕಾಲೇಜಿನಲ್ಲಿ ಯಾವ ಯಾವ ವಿಷಯಗಳಿಗೆ ಉಪನ್ಯಾಸಕರ ಕೊರತೆ ಇದೆ? (ಮಾಹಿತಿ ನೀಡುವುದು)

ಶ್ರೀ ಡಿ ಹೆಚ್ ಶಂಕರಮೂರ್ತಿ

ಅ)ಹೌದು

ಆ)ಹೌದು

ಇ)ಇಲಾಖೆಯಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದ್ಯಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತಿದೆ

ಈ)ಆ ಸಂಬಂಧದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಕೊಳ್ಳೇಗಾಲ ಸರ್ಕಾರಿ ಪ್ರದಮದರ್ಜೆ ಕಾಲೇಜಿನಲ್ಲಿ ವಿವಿಧ ವಿಷಯಗಳಲ್ಲಿ ಕೊರತೆ ಇರುವ ಬೋಧಕ ಹುದ್ದೆಯ ವಿವರ ಈ ಕೆಳಗಿನಂತೆ ಇದೆ (2006–07)

ಕ್ರ.ಸಂ	ವಿಷಯ	ಒಟ್ಟು ಕಾರ್ಯ ಭಾರ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿ ಸುತ್ತಿರುವ ಉಪನ್ಯಾಸ ಕರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ಉಳಿಕೆ ಕಾರ್ಯ ಭಾರ	ಅಗತ್ಯವಿರುವ ಉಪನ್ಯಾಸಕರ
1	ಕನ್ನಡ	45	02	02	–	13	1
2	ಇಂಗ್ಲಿಷ್	32	1	1	–	16	1
3	ಇತಿಹಾಸ	43	2	2	–	11	0
4	ಅರ್ಥಶಾಸ್ತ್ರ	43	2	1	1	27	1
5	ರಾಜ್ಯಶಾಸ್ತ್ರ	41	1	1	–	25	1
6	ಸಮಾಜಶಾಸ್ತ್ರ	6	0	0	–	6	–
7	ವಾಣಿಜ್ಯಶಾಸ್ತ್ರ	12	0	0	–	12	1
8	ಭೂಗೋಳಶಾಸ್ತ್ರ	72	3	3	–	12	0
9	ಭೌತಶಾಸ್ತ್ರ	38	3	1	2	18	1
10	ರಸಾಯನಶಾಸ್ತ್ರ	38	1	0	2	38	2
11	ಗಣಿತಶಾಸ್ತ್ರ	21	1	1	–	5	–
12	ಗಣಕವಿಜ್ಞಾನ	18	0	0	–	18	1
13	ಸಸ್ಯಶಾಸ್ತ್ರ	16	1	1	–	–	–
14	ಪ್ರಾಣಿಶಾಸ್ತ್ರ	16	2	0	2	16	1

ಶ್ರೀ ಬಾಲರಾಜ್ ಎಸ್ (ಕೊಳ್ಳೆಗಾಲ)94(323)

ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ)ರಾಜ್ಯದಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ಅತೀ ಹೆಚ್ಚು ನೀರಾವರಿಯ ದೊಡ್ಡ ಕೆರೆಗಳಿದ್ದು, ಹೂಳು ತುಂಬಿ ನೀರು ಶೇಖರಣೆಗೆ ತೊಂದರೆ ಯಾಗಿರುವುದು ಗಮನಕ್ಕೆ ಬಂದಿದೆಯೇ?

ಆ) ಕೊಳ್ಳೇಗಾಲದ ಕ್ಷೇತ್ರಕ್ಕೆ ಸೇರಿರುವ ಕೆರೆಗಳೆಷ್ಟು?

ಇ) ಈ ಬಗ್ಗೆ ಈ ಹಿಂದೆ ಕೋರಿಕೆ ಸಲ್ಲಿಸಿದ್ದಾಗ್ಯೂ ಈವರೆಗೆ ಕೈಗೊಂಡ ಕ್ರಮಗಳೇನು?

ಈ)ಎಷ್ಟು ಕೆರೆಗಳನ್ನು ಈ ಸಾಲಿನಲ್ಲಿ ಅಭಿವೃದ್ದಿಪಡಿಸಲು ಉದ್ದೇಶಿಸಲಾಗಿದೆ?

ಉ) ಎಷ್ಟು ವರ್ಷಗಳಲ್ಲಿ ಈ ಎಲ್ಲಾ ಕೆರೆಗಳನ್ನು ಅಭಿವೃದ್ಧಿ ಗೊಳಿಸಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ

ಅ) ಬಂದಿದೆ

ಆ) 24 ಕೆರೆಗಳು

ಇ) 2006-07ನೇ ಸಾಲಿನಲ್ಲಿ 15 ಕೆರೆಗಳಲ್ಲಿ ಸಣ್ಣ ಮಟ್ಟ ದುರಸ್ತಿ, ಬೌಂಡರಿ ಟ್ರೆಂಚ್ ನಿರ್ಮಿಸಿ ಬೌಂಡರಿ ಕಲ್ಲುಗಳನ್ನು ನೆಡುವ ಕಾರ್ಯವನ್ನು ರೂ 61 94 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ

ಈ) 12 ಕೆರೆಗಳು

ಉ) ಉಳಿದ ಕೆರೆಗಳನ್ನು ಪುನರುಜ್ಜೀವನ ಕಾಮಗಾರಿಗಳನ್ನು ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಹಂತಹಂತವಾಗಿ ಕೈಗೆತ್ತಿ ಕೊಳ್ಳಲಾಗುವುದು

ಶ್ರೀ ಬಸವರಾಜು ಎ ಎಸ್ 96(355)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರ,

ಅ) ಅರಸೀಕೆರೆ ಪುರಸಭೆಯಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯ ವರೆಗೂ ಕೊಟ್ಟಿರುವ ಆಶ್ರಯ ಮನೆಗಳ ಸಂಖ್ಯೆ ಎಷ್ಟು?

ಆ) ಈ ಆಶ್ರಯ ಮನೆಗಳನ್ನು ಯಾವ ಆಧಾರದ ಮೇಲ ನಿರ್ಮಿಸಲಾಗಿದೆ

ಇ) ಆಶ್ರಯ ಮನೆಗಳನ್ನು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ, ಸಾಲವನ್ನು ಯಾವ ಯೋಜನೆಗಳಲ್ಲಿ ಕೊಡಲಾಗಿದೆ,

ಈ) ಅಸಲು ಮೊತ್ತ ಮರುಪಾವತಿ ಆಗಿದೆಯೇ ವಸೂಲಾತಿಗೆ ಏನು ಕ್ರಮ ಕೈಗೊಳ್ಳಲಾಗಿದೆ,

ಉ) ಫಲಾನುಭವಿಗಳು ಸಾಲವನ್ನು ಮರುಪಾವತಿಸಲು ಶಕ್ತರಾಗಿದ್ದಾರೆಯೇ, ಸಾಲದ ಮೊತ್ತದ ಹಾಗೂ ಬಡ್ಡಿ ಮರುಪಾವತಿಸಲು ಅಶಕ್ತರಾದವರಿಗೆ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರದ ಚಿಂತನೆ ನಡೆಸಿದೆಯೇ?

ಶ್ರೀ ಡಿ ಟಿ ಜಯಕುಮಾರ್

ಅ)ಅರಸೀಕೆರೆ ಪುರಸಭೆ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಒಟ್ಟು 490 ಆಶ್ರಯ ಮನೆಗಳನ್ನು ನೀಡಲಾಗಿದೆ ವಿವರ ಇಂತಿದೆ

ಕ್ರ.ಸಂ	ಶ್ರೇಣಿ	ಗುರಿ
1	2004-2005	ಗುರಿ ನಿಗದಿಪಡಿಸಿರುವುದಿಲ್ಲ
2	2005-2006	490
3	2006-2007	ಗುರಿ ನಿಗದಿಪಡಿಸಿರುವುದಿಲ್ಲ

ಆ) ಸರ್ಕಾರದಿಂದ ನಿಗದಿಪಡಿಸಲಾದ ಗುರಿಗೆ ತಕ್ಕಂತೆ ಫಲಾನುಭವಿಗಳನ್ನು ಆಶ್ರಯ ಸಮಿತಿಯು ಆಯ್ಕೆ ಮಾಡಿದ ತರುವಾಯ ಮನೆಗಳನ್ನು ನಿರ್ಮಿಸಲಾಗುತ್ತದೆ

ಇ) ನಗರ ಪ್ರದೇಶದಲ್ಲಿ ಪ್ರತಿ ಮನೆಗೆ ರೂ 25000/- ಸಾಲದ ರೂಪದಲ್ಲಿ ಕೊಡಲಾಗಿದೆ ಮಾಡಿದ ತರುವಾಯ ಯೋಜನೆಯಡಿಯಲ್ಲಿ ಮನೆಗಳನ್ನು ನೀಡಲಾಗಿದೆ

ಈ) ಇಲ್ಲಿಯವರೆಗೆ ಅರಸೀಕೆರೆ ಪುರಸಭೆಯಿಂದ ರೂ 2,55,657 ವಸೂಲಾಗಿರುತ್ತದೆ

ಪ್ರತಿ ತಿಂಗಳು ಪ್ರತಿ ಫಲಾನುಭವಿಗಳು ರೂ 290/-ಸಾಲ ಮರುಪಾವತಿ ಮಾಡಬೇಕಿರುತ್ತದೆ ಇದನ್ನು ಒಂದೇ ಬಾರಿ ಪಾವತಿಸ ಬೇಕಾಗಿಲ್ಲ ಪ್ರತಿ ದಿನ ರೂ 5 ರಿಂದ 10 ರಷ್ಟು ಮರುಪಾವತಿ ಮಾಡಬೇಕೆಂದು ಸಾಲ ಪಡೆದ ಎಲ್ಲಾ ಫಲಾನುಭವಿಗಳಿಗೆ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗಿದೆ

ಉ) ಹೌದು ಈಗಾಗಲೇ ಫಲಾನುಭವಿಗಳು ಸಾಲದ ಮೊತ್ತ ಹಾಗೂ ಬಡ್ಡಿ ಮರುಪಾವತಿಸುತ್ತಿದ್ದು, ಸಾಲ ಮನ್ನಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) 97(352),

ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ವಜಲಧಾರಾ ಕುಡಿಯುವ ನೀರಿನ ಯೋಜನೆ ಇನ್ನೂ ಅನುಷ್ಠಾನದಲ್ಲಿದೆಯೇ, ಹಾಗಿದ್ದಲ್ಲಿ 2006-07ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಎಷ್ಟು ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ (ಜಿಲ್ಲೆಯ ಎಲ್ಲಾ ತಾಲ್ಲೂಕಿನ ಪಂಚಾಯತಿವಾರು ವಿವರಗಳನ್ನು ನೀಡುವುದು)

ಆ) ಈ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ಪೂರ್ಣ ಗೊಂಡಿವೆ, ಇದಕ್ಕಾಗಿ ತಗಲಿದ ವೆಚ್ಚವೆಷ್ಟು (ಪಂಚಾಯತಿವಾರು ಮಾಹಿತಿ ನೀಡುವುದು),

ಇ) ಸ್ವಜಲಧಾರಾ ಯೋಲನೆಯಡಿ ಎಷ್ಟು ಪ್ರಸ್ತಾವನೆಗಳು ಜಿಲ್ಲಾ ಪಂಚಾಯತಿಗೆ ಬಂದಿವೆ, ಮಂಜೂರಾತಿ ನೀಡಲಾದ ಪ್ರಸ್ತಾವನೆಗಳೆಷ್ಟು, ಈ ನಿಟ್ಟಿನಲ್ಲಿ ಇನ್ನೂ ಬಾಕಿ ಇರುವ ಪ್ರಸ್ತಾವನೆಗಳೆಷ್ಟು, ಇದುವರೆಗೂ ಮಂಜೂರಾತಿ ನೀಡದೇ ಇರಲು ಕಾರಣಗಳೇನು (ಪಂಚಾಯತಿವಾರು ವಿವರ ನೀಡುವುದು)?

ಶ್ರೀ ಎಸ್ ಎ ರವೀಂದ್ರನಾಥ್

ಅ) ಸ್ವಜಲಧಾರಾ ಯೋಜನೆಯನ್ನು 2006-07 ರವರೆವಿಗೂ ಅನುಷ್ಠಾನ ದಲ್ಲಿರುತ್ತದೆ ಮತ್ತು ಮುಂದೆ ಯೋಜನೆಯನ್ನು ಮುಂದುವರೆಸುವ ಸಾಧ್ಯತೆ ಇರುವುದಿಲ್ಲ ಕೊಡಗು ಜಿಲ್ಲೆಯಲ್ಲಿ ಸ್ವಜಲಧಾರಾ ಯೋಜನೆಯ ಅನುಷ್ಠಾನವನ್ನು 2003-04 ರಿಂದ ಕೈಗೊಳ್ಳಲಾಗಿರುತ್ತದೆ

2006-07 ನೇ ಸಾಲಿಗೆ ಕೊಡಗು ಜಿಲ್ಲೆಗೆ ಒಟ್ಟು 8 ಯೋಜನೆಗಳನ್ನು ಭಾರತ ಸರ್ಕಾರವು ಮಂಜೂರು ಮಾಡಿರುತ್ತದೆ ಇವುಗಳ ವಿವರಗಳು ಈ ಕೆಳಗಿನಂತಿರುತ್ತದೆ

ಕ್ರಸಂ	ತಾಲ್ಲೂಕು	ಗ್ರಾಮ ಪಂಚಾಯತಿ	ಗ್ರಾಮದ ಹೆಸರು
1	ಮಡಿಕೇರಿ	ಕಾಂತೂರು ಮುರ್ನಾಡು	 ಮುರ್ನಾಡು
2	ಸೋಮ ವಾರಪೇಟೆ	 ಕಿರಂದೂರು	 ತಾಕೇರಿ
3	ವಿರಾಜಪೇಟೆ	ನಿಟ್ಟೂರು	ನಿಟ್ಟೂರು
4	ವಿರಾಜಪೇಟೆ	ಪೊನ್ನಪ್ಪಸಂತೆ	ನಲ್ಲೂರು
5	ವಿರಾಜಪೇಟೆ	ಬಾಳೆಲೆ	ದೇವನೂರು-ಬಿ
6	ವಿರಾಜಪೇಟೆ	ಗೋಣಿಕೊಪ್ಪ	ಗೋಣಿಕೊಪ್ಪ
7	ವಿರಾಜಪೇಟೆ	ಗೋಣಿಕೊಪ್ಪ	ಗೋಣಿಕೊಪ್ಪ
8	ವಿರಾಜಪೇಟೆ	ಕದನೂರು	ಕದನೂರು

ಆ) ಕೊಡಗು ಜಿಲ್ಲೆಯಲ್ಲಿ ಸ್ವಜಲಧಾರ ಯೋಜನೆಯಡಿ ಪೂರ್ಣಗೊಂಡ ವರ್ಷಾವಾರು ಯೋಜನೆಗಳನ್ನು ಮತ್ತು ವೆಚ್ಚಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ

ಕ್ರಸಂ	ವರ್ಷ	ಮಂಜೂರಾದ ಯೋಜನೆಗಳು	ಪೂರ್ಣಗೊಂಡ ಯೋಜನೆಗಳು	ತಗುಲಿದ ವೆಚ್ಚ (ರೂ ಲಕ್ಷಗಳಲ್ಲಿ)
1	2003-04	11	11	30 10
2	2004-05	05	05	24 86
3	2005-06	05	01	20 13
4	2005-06	07	ಪ್ರಗತಿಯಲ್ಲಿರುತ್ತದೆ	06 00
5	2006-07	08	ಪ್ರಗತಿಯಲ್ಲಿರುತ್ತದೆ	10 16
	Total	**36**	**17**	**91 25**

ಸ್ವಜಲಧಾರ ಯೋಜನೆಯಡಿ 2002–03 ರಿಂದ 2006–07ರವರೆಗೆ ಒಟ್ಟು 40 ಪ್ರಸ್ತಾವನೆಗಳು ಗ್ರಾಮ ಪಂಚಾಯತಿಗಳಿಂದ ಕೊಡಗು ಜಿಲ್ಲಾ ಪಂಚಾಯತಿಗೆ ಬಂದಿರುತ್ತವೆ ಅವುಗಳ ಪೈಕಿ 36 ಪ್ರಸ್ತಾವನೆಗಳಿಗೆ ಭಾರತ ಸರ್ಕಾರವು ಮಂಜೂರಾತಿ ನೀಡಿರುತ್ತದೆ ಉಳಿದ 4 ಪ್ರಸ್ತಾವನೆಗಳು ಕ್ರಮಬದ್ಧವಾಗಿಲ್ಲದ ಕಾರಣ ಮತ್ತು ನಿಗದಿತ ಸಮುದಾಯ ವಂತಿಗೆ ಸಂಗ್ರಹಣೆಯಾಗದೆ ಇರುವುದರಿಂದ ಈ ಯೋಜನೆಗಳನ್ನು ಕೈಗೊಳ್ಳ ಲಾಗಿರುವುದಿಲ್ಲ

ಗ್ರಾಮ ಪಂಚಾಯತಿವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ANNEXURE-1

Swajaladhara- Grama Panchayat-wise schemes of Kodagu District Year 2003-04

Sl No	Taluk	Gram Panchayat Year 2003-04	Village
1	Madikeri	Chembu	Dabbadka
2	Madikeri	Chembu	Malechembu
3	Somavarpet	Valnoor Thyagathur	Abyathmangala
4	Somavarpet	TholurShettalli	Koothi
5	Somavarpet	Beloor	Nagaroor
6	Somavarpet	Igoor	Yadaware
7	Virajpet	Kakotuparambu	Kakotuparambu
8	Virajpet	Kakotuparambu	Kakotuparambu
9	Virajpet	Balyamandoor	Thuchamakeri

10	Virajpet	Ponnampet	Ponnampet
11	Virajpet	Kakotuparambu	Nalkeri

Year 2004-05

12	Madikeri	Napoklu	Bethu
13	Somavarpet	Shirangala	Shirangala
14	Virajpet	Hathur	Hathur
15	Virajpet	Ammathi	Puliyeri
16	Virajpet	Chembebellur	Imangala

Year 2005-06

17	Madikeri	Sampaje	Sampaje
18	Madikeri	Galibeedu	Mutlu
19	Madikeri	Chembu	Chembu
20	Somavarpet	Kiraganduru	Thakeri
21	Somavarpet	Kiraganduru	Thakeri

Year 2005-06(Addl)

22	Somavarpet	Beluru	Karekoppa
23	Virajpet	Nitturu	Kottgeri
24	Virajpet	Nalkeri	Nalkeri
25	Virajpet	Gonikoppa	Gonikoppa

26	Virajpet	Gonikoppa	Gonikoppa
27	Virajpet	T Shettageri	T Shettegeri
28	Virajpet	Devarapura	Hebbale

Year 2006-07

29	Madikeri	Kanthurmurnadu	Murnadu
30	Somavarpet	Kiraganduru	Thakeri
31	Virajpet	Nitturu	Nitturu
32	Virajpet	Ponnappasanthe	Nallur
33	Virajpet	Balele	Devanuru-B
34	Virajpet	Gonikoppa	Gonikoppa
35	Virajpet	Gonikoppa	Gonikoppa
36	Virajpet	Kadanuru	Kadanuru

Proposals not considered

37	Virajpet	Nalkeri	K Badaga
38	Virajpet	Siddapura	Siddapura
39	Virajpet	Gonokoppa	Gonikoppa
40	Virajpet	Palibetta	Palibetta

ಶ್ರೀ ಧ್ರುವ ನಾರಾಯಣ ಆರ್(ಸಂತೇಮರಳ್ಳಿ) 98 (319)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ

ಅ)ಕರ್ನಾಟಕ ಗೃಹ ಮಂಡಳಿಯ ವಸತಿ ಗೃಹ ಮತ್ತು ನಿವೇಶನ ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನೀಡಲಾಗುತ್ತಿರುವ ಮೀಸಲಾತಿ ಪ್ರಮಾಣ ಎಷ್ಟು?

ಆ) ಈ ವರ್ಗಗಳಿಗೆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಯೋಜನೆ ಗೃಹ ಮಂಡಳಿಯ ಮುಂದಿದೆಯೇ?

ಶ್ರೀ ಡಿ ಟಿ ಜಯಕುಮಾರ್

ಅ) ಕರ್ನಾಟಕ ಗೃಹ ಮಂಡಳಿಯ ಯೋಜನಾ ನಿಯಮಾವಳಿ 1983 ರಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಪಂಗಡಗಳಿಗಾಗಿ ಮಂಡಳಿಯು ಅಭಿವೃದ್ಧಿಪಡಿಸುವ ನಿವೇಶನ ಹಾಗೂ ಮನೆಗಳಲ್ಲಿ ಶೇಕಡವಾರು 18% ರಂತೆ ಕಾಯ್ದಿರಿಸಲಾಗುತ್ತದೆ

ಆ) ಪ್ರಸ್ತುತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ ಮಂಡಳಿಯ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ(ಶಿರಹಟ್ಟಿ)99(331)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ)ಶಿರಹಟ್ಟಿ ಮತಕ್ಷೇತ್ರದಲ್ಲಿ ಕೇವಲ ಒಂದು ಸರ್ಕಾರಿ ಪದವಿ ಕಾಲೇಜು ಇದ್ದು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪದವಿ ಕಾಲೇಜು ವ್ಯಾಸಂಗಕ್ಕಾಗಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪದವಿ ಕಾಲೇಜು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ,

ಇ) ಹಾಗಿದ್ದಲ್ಲಿ, ಶಿರಹಟ್ಟಿ ಮತಕ್ಷೇತ್ರದ ಕೊನೆಯ ಹದ್ದಿನ ದೊಡ್ಡ ಗ್ರಾಮವಾದ ಸುಮಾರು 15,000/- ಜನಸಂಖ್ಯೆ ಹೊಂದಿರುವ ಬೆಳ್ಳಟ್ಟಿ ಗ್ರಾಮಕ್ಕೆ ಪದವಿ ಕಾಲೇಜು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ ಹೆಚ್ ಶಂಕರಮೂರ್ತಿ

ಅ) ಹೌದು

ಆ) ಹೌದು

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) 100(332)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿರಹಟ್ಟಿ ಮತಕ್ಷೇತ್ರದ ಯಾವ ಯಾವ ಗ್ರಾಮ ಪಂಚಾಯತ್ ಗಳಿಗೆ ಕಂಪ್ಯೂಟರ್ ಪೂರೈಸಲಾಗಿದೆ(ಗ್ರಾಮಗಳ ವಿವರ ನೀಡುವುದು)

ಆ) ಯಾವ ಏಜೆನ್ಸಿ ಮೂಲಕ ಕಂಪ್ಯೂಟರ್ ಖರೀದಿಸಲಾಗುವುದು,

ಇ) ಕಂಪ್ಯೂಟರ್ ಏಜೆನ್ಸಿಯವರಿಗೆ ಈವರೆಗೆ ಪಾವತಿಸಿದ ಹಣದ ವಿವರ ನೀಡುವುದು?

ಈ) ಕಂಪ್ಯೂಟರ್ ಖರೀದಿಸುವ ಕುರಿತು ಅನುಸರಿಸಿದ ನಿಯಮಾವಳಿಗಳೇನು,

ಉ)ಇನ್ನೂ ಕಂಪ್ಯೂಟರ್ ಬಳಕೆ ಇಲ್ಲದ ಗ್ರಾಮ ಪಂಚಾಯತ್‌ಗಳು ಯಾವುವು (ಪಂಚಾಯತ್ ವಿವರ ನೀಡುವುದು),

ಊ) ಕಂಪ್ಯೂಟರ್ ಏಜೆನ್ಸಿಯವರಿಗೆ ಇನ್ನೂ ಹಣ ಪಾವತಿಸುವುದು ಇದೆಯೇ, ಇದ್ದರೆ ಇನ್ನೂ ಎಷ್ಟು ಹಣ ಪಾವತಿಸಬೇಕು?

ಶ್ರೀ ಸಿ ಎಂ ಉದಾಸಿ

ಆ) ಹಾಗಿದ್ದಲ್ಲಿ, ಕರ್ನಾಟಕ ಯೂನಿವರ್ಸಿಟಿ ಧಾರವಾಡ ಇದನ್ನು ಸೆಂಟ್ರಲ್ ಯೂನಿವರ್ಸಿಟಿಯೆಂದು ಮಾಡಲಾಗುವುದೇ?

ಶ್ರೀ ಡಿ ಹೆಚ್ ಶಂಕರಮೂರ್ತಿ

ಅ) ಈ ಬಗ್ಗೆ ಕೇಂದ್ರ ಸರ್ಕಾರದಿಂದ ಮಾಹಿತಿ ಸ್ವೀಕೃತವಾಗಿಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)127(110)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಹಲವಾರು ಗ್ರಾಮ ಪಂಚಾಯತ್ಗಳಿಗೆ ಖಾಯಂ ಕಾರ್ಯದರ್ಶಿಗಳ ನೇಮಕವಾಗಿಲ್ಲವಾದ ಕಾರಣ ಗ್ರಾಮ ಪಂಚಾಯತ್ ಕಾರ್ಯನಿರ್ವಹಣೆಗೆ ಅನಾನುಕೂಲವಾಗಿರುವ ಬಗ್ಗೆ ಸರ್ಕಾರದ ಕ್ರಮಗಳೇನು,

ಆ) ಖಾಯಂ ಕಾರ್ಯದರ್ಶಿಗಳ ಕೊರತೆಯಿಂದಾಗಿ ಇರುವ ಒಬ್ಬ ಕಾರ್ಯದರ್ಶಿ ಹಲವಾರು ಗ್ರಾಮ ಪಂಚಾಯತ್‌ಗಳಲ್ಲಿ ಕರ್ತವ್ಯ

ನಿರ್ವಹಿಸುತ್ತಿರುವ ಕಾರಣದಿಂದಾಗಿ ಜನರು ತುಂಬಾ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದನ್ನು ಗಮನಿಸಿ ಕೂಡಲೇ ಖಾಯಂ ಕಾರ್ಯದರ್ಶಿಗಳ ನೇಮಕಕ್ಕೆ ಸರ್ಕಾರ ಕ್ರಮ ಜರುಗಿಸುವುದೇ,

ಇ) ಪ್ರತಿಯೊಂದು ಗ್ರಾಮ ಪಂಚಾಯತ್‌ಗೆ ಒಬ್ಬ ಗ್ರಾಮ ಕರಣೀಕರವರನ್ನು ನೇಮಕ ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಶ್ರೀ ಸಿ ಎಂ ಉದಾಸಿ

ಅ) ಒಟ್ಟು 3 ಹುದ್ದೆಗಳು ಖಾಲಿ ಇರುತ್ತವೆ

ಖಾಲಿ ಹುದ್ದೆಗಳಿಗೆ ಪ್ರಭಾರಿ ವ್ಯವಸ್ಥೆ ಮಾಡಲಾಗಿದೆ

ಆ) ಪ್ರಸ್ತುತ ಖಾಲಿ ಇರುವ 3 ಹುದ್ದೆಗಳಿಗೆ ಈಗ ಪ್ರಭಾರಿ ವ್ಯವಸ್ಥೆ ಮಾಡಲಾಗಿದ್ದು, ಈ ಹುದ್ದೆಗಳನ್ನು ನಿಯಮಾನುಸಾರ ಶೀಘ್ರವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ

ಇ) ಇಲ್ಲಾ

ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)128(325)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಪ್ರೌಢ ಶಾಲೆಗಳಲ್ಲಿ ಅಕ್ಷರ ದಾಸೋಹ ವಿಸ್ತರಣೆ ಕುರಿತು ವಿವರಗಳೇನು?

ಆ) ಈ ಯೋಜನೆಯ ಜಾರಿಯ ವ್ಯವಸ್ಥೆಯನ್ನು ಯಾವ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ

ಇ) ಅಕ್ಷರ ದಾಸೋಹ ವ್ಯವಸ್ಥೆಯನ್ನು ಸ್ವತಂತ್ರ ನಿರ್ವಹಣೆಗೆ ಒಳಪಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ, ಇದ್ದಲ್ಲಿ, ಆ ಕುರಿತು ವಿವರಗಳೇನು?

ಶ್ರೀ ಎಸ್ ಬಸವರಾಜ ಹೊರಟ್ಟಿ

ಅ) 2007–08ನೇ ಸಾಲಿನಲ್ಲಿ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ 8ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿನ 8ರಿಂದ 10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸರ್ಕಾರಿ ಆದೇಶದ ಸಂಖ್ಯೆ ಇಡಿ 27 ಎಂಎಂಎಸ್ 2007 ದಿನಾಂಕ, 19–05–2007 ರಂತೆ ಅಕ್ಷರ ದಾಸೋಹ ಕಾರ್ಯಕ್ರಮವನ್ನು ವಿಸ್ತರಿಸಲಾಗಿದೆ

ಕಾರ್ಯಕ್ರಮದಡಿ ಮಧ್ಯಾಹ್ನ ಉಪಹಾರ ನೀಡಲು ಪ್ರತಿ ವಿದಾರ್ಧಿಗೆ ಪ್ರತಿ ದಿನಕ್ಕೆ ರೂ 3 49ಗಳನ್ನು ಖರ್ಚು ಮಾಡಲಾಗುತ್ತಿದೆ

ಪ್ರತಿ ದಿನಕ್ಕೆ ಪ್ರತಿ ವಿದಾರ್ಥಿಗೆ ಈ ಕೆಳಕಂಡಂತೆ ಆಹಾರ ಧಾನ್ಯ ನೀಡಲಾಗುತ್ತದೆ

ಅಕ್ಕಿ	150ಗ್ರಾಂ
ಬೇಳೆ	25ಗ್ರಾಂ
ಎಣ್ಣೆ	06ಗ್ರಾಂ
ಉಪ್ಪು	04ಗ್ರಾಂ
ತರಕಾರಿ	70ಗ್ರಾಂ

300ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ಪ್ರತ್ಯೇಕ ಅಡುಗೆ ಕೇಂದ್ರ ಪ್ರಾರಂಭಿಸುವ ಬದಲಿಗೆ ಹತ್ತಿರದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಂಯೋಜಿಸಿ ಒಂದು ಹೆಚ್ಚುವರಿ ಅಡುಗೆ ಸಿಬ್ಬಂದಿಯನ್ನು ಒದಗಿಸಲಾಗಿದೆ

ಹಾಗೂ 500/- ರೂ ಗಳನ್ನು ಸಿದ್ಧಪಡಿಸಿದ ಆಹಾರವನ್ನು ಸಾಗಿಸಲು ಸಾಗಾಣಿಕಾ ವೆಚ್ಚವನ್ನು ನಿಗದಿಪಡಿಸಲಾಗಿದೆ

300ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತ್ಯೇಕವಾದ ಅಡುಗೆ ಕೇಂದ್ರ ಪ್ರಾರಂಭಿಸಲಾಗಿದೆ ವಿವರ ಕೆಳಗಿನಂತಿದೆ

ವಿದ್ಯಾರ್ಥಿಗಳ ಸಂಖ್ಯೆ	ಪಾತ್ರೆ ಪರಿಕರ ಖರೀದಿಗಾಗಿ	ಅಡುಗೆ ಸಿಬ್ಬಂದಿ ಸಂಖ್ಯೆ
301-500	ರೂ 7500-00	4
501-1000	ರೂ 8500-00	5
1001-ಹೆಚ್ಚು	ರೂ 10000-00	6

ಆ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಅಡುಗೆ ಸಿಬ್ಬಂದಿಯನ್ನು ನೇಮಕ ಮಾಡಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಅನುದಾನಿತ ಶಾಲೆಗಳಲ್ಲಿ ಆಡಳಿತ ಮಂಡಳಿಯವರು ಅಡುಗೆ ಸಿಬ್ಬಂದಿಯನ್ನು ನೇಮಿಸಿಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುತ್ತಾರೆ

ಸ್ತ್ರೀ ಶಕ್ತಿ ಸಂಘಗಳು ಮುಂದೆ ಬಂದಲ್ಲಿ ಅಂತಹ ಸಂಘಗಳಿಗೆ ಈ ಯೋಜನೆಯನ್ನು ನೀಡಲಾಗುತ್ತಿದೆ

ಖಾಸಗಿ ಸಂಸ್ಥೆಗಳು ಮುಂದೆ ಬಂದಲ್ಲಿ ಈ ಯೋಜನೆಯನ್ನು ಅವರಿಗೆ ವಹಿಸಲಾಗುತ್ತದೆ, ಸಂಸ್ಥೆಗಳ ವಿವರಗಳು ಹಾಗೂ ವಹಿಸಿ ಕೊಂಡಿರುವ ಪ್ರೌಢಶಾಲೆಗಳ ಸಂಖ್ಯೆಗಳ ಸಂಖ್ಯೆಯನ್ನು ಅನುಬಂಧ-ಅ ನಲ್ಲಿ ಒದಗಿಸಲಾಗಿದೆ

ಇ) ರಾಜ್ಯ ಸರ್ಕಾರದ ನೀತಿಯಂತೆ ಆಸಕ್ತಿ ವಹಿಸಿ ಮುಂದೆ ಬರುವಂತಹ ಸ್ವಯಂ ಸೇವಾ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ

ಅನುಬಂಧ-ಅ

ಕ್ರಸಂ	ಜಿಲ್ಲೆಯ ಹೆಸರು	ಸಂಘ ಸಂಸ್ಥೆಯ ಹೆಸರು	ಸಂಸ್ಥೆಗಳಿಗೆ ವಹಿಸಿರುವ ಪ್ರೌಢಶಾಲೆಗಳ ಸಂಖ್ಯೆ
1	ಬೆಂಗಳೂರು ನಗರ	ಅಕ್ಷಯ ಪಾತ್ರೆ	127
2		ಅದಮ್ಯ ಚೇತನ	124
3		ಅಖಿಲ ಕರ್ನಾಟಕ ಕಸ್ತೂರಿ ಕಲಾ ಸಂಘ	33
4		ಮೊಹಿಸಿನ್ ಷರೀಫ್ ಚಾರಿಟಬಲ್ ಟ್ರಸ್ಟ್	23
5		ಸಮರ್ಥನಂ ಟ್ರಸ್ಟ್	20
6		ಆಶಾಕಿರಣ ಚಾರಿಟಬಲ್ ಟ್ರಸ್ಟ್	10
7		ಕರುಣಾ ಸೇವಾ ಸಮಿತಿ ಟ್ರಸ್ಟ್	3
8		ಸಾಯಿ ಮಂಡಳಿ	3
9		ಅನ್ನಪೂರ್ಣ ಟ್ರಸ್ಟ್	2
10		ಸಮಗ್ರ ಜನಾಭಿವೃದ್ಧಿ ಸಂಸ್ಥೆ	14
11		ಗಿಲ್ ಗಾಲ್ ಚಾರಿಟಬಲ್ ಟ್ರಸ್ಟ್	2
12		ಎಸ್ ಎನ್ ಚಾರಿಟಬಲ್ ಟ್ರಸ್ಟ್	32
13		ತಾಜ್ ಚಾರಿಟಬಲ್ ಟ್ರಸ್ಟ್	5
14		ಓಂ ಶಕ್ತಿ ದೇವಸ್ಥಾನ ಸಮಿತಿ	13
15		ಸತ್ಯಸಾಯಿ ಸುಬ್ಬರಾಮಶಾಸ್ತ್ರಿ ಮೆಮೊರಿಯಲ್ ಟ್ರಸ್ಟ್	1
16		ಪ್ರಿಯಾ ಚಾರಿಟಬಲ್ ಟ್ರಸ್ಟ್	6
17	ಬೆಂಗಳೂರು ಗ್ರಾಮಾಂತರ	ಅಕ್ಷಯ ಪಾತ್ರೆ	4
18	ಬೆಳಗಾಂ	ಸಮೃದ್ಧಿ ಸೇವಾ ಸಂಸ್ಥೆ	12
19	ಚಾಮರಾಜನಗರ	ಜೆ ಎಸ್ ಎಸ್ ಸಂಸ್ಥೆ	9
20	ಚಿತ್ರದುರ್ಗ	ಒಪ್ಪತ್ತಿನ ಮಠ, ಹೊಸದುರ್ಗ	59
21	ದಕ್ಷಿಣ ಕನ್ನಡ	ಇಸ್ಕಾನ್	9
22	ಧಾರವಾಡ	ಇಸ್ಕಾನ್	96
23		ಅದಮ್ಯ ಚೇತನ	83
24	ಹಾಸನ	ಸಂಗಮೇಶ್ವರ ಸ್ವಾಮಿ ಜವೇನಹಳ್ಳಿ ಮಠ, ಹಾಸನ	14
25		ಜಯದೇವ ಸ್ವಾಮಿಗಳು ಸುಕ್ಷೇತ್ರ	3
26		ಕಾಲಾದ್ರಿ ರುದ್ರಮುನೀಶ್ವರ ಟ್ರಸ್ಟ್	3
27	ಕೋಲಾರ	ಗಣಪತಿ ವಿದ್ಯಾ ಸಂಸ್ಥೆ	20
28		ತಾಜ್ ಚಾರಿಟಬಲ್ ಟ್ರಸ್ಟ್	29
29		ಅನ್ನಪೂರ್ಣೇಶ್ವರಿ ಕ್ಷೇಮಾಭಿವೃದ್ಧಿ ಸಂಘ	22
30		ನಾರಾಯಣ ಶೆಟ್ಟಿ ಮೆಮೊರಿಯಲ್ ಟ್ರಸ್ಟ್	23

31		ಮಾರುತಿ ಗ್ರಾಮೀಣ ವಿದ್ಯಾ ಕೇಂದ್ರ	27
32		ಯೂನಿಟಿ ವಿದ್ಯಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ	7
33		ಆದರ್ಶ ಮಹಿಳಾ ಒಕ್ಕೂಟ	1
34	ಮೈಸೂರು	ಇಸ್ಕಾನ್	1
35	ಬಾಗಲಕೋಟೆ	ಜಮಖಂಡಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ	3
36		ಪೂರ್ಣಿಮಾ ಗ್ರಾಮೀಣಾಭಿವೃದ್ಧಿ ಸಂಸ್ಥೆ	7
37	ಬಳ್ಳಾರಿ	ಇಸ್ಕಾನ್	17
	ಒಟ್ಟು		**867**

ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)130(327)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬೆಳ್ತಂಗಡಿ ತಾಲ್ಲೂಕು ಪ್ರದೇಶದ ಎಷ್ಟು ಪ್ರೌಢ ಶಾಲೆಗಳಿಗೆ ಇನ್ನೂ ಖಾಯಂ ಮುಖ್ಯೋಪಾಧ್ಯಾಯರನ್ನು ನೇಮಕಗೊಳಿಸಲಾಗಿಲ್ಲ

ಆ) ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ಬೋಧಕ ವರ್ಗ ಮತ್ತು ಮುಖ್ಯೋಪಾಧ್ಯಾಯರುಗಳ ನೇಮಕಾತಿಯು ಅತ್ಯಾವಶ್ಯಕ ವಾಗಿದ್ದು, ಆ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್ ಬಸವರಾಜ ಹೊರಟ್ಟಿ

ಅ) ಬೆಳ್ತಂಗಡಿ ತಾಲ್ಲೂಕಿನ 17 ಪ್ರೌಢ ಶಾಲೆಗಳಿಗೆ ಖಾಯಂ ಮುಖ್ಯೋಪಾಧ್ಯಾಯರನ್ನು ನೇಮಕಗೊಳಿಸಲಾಗಿಲ್ಲ

ಆ) 2006-07 ನೇ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇದ್ದ 5984 ಸಹ ಶಿಕ್ಷಕರ ಗ್ರೇಡ್-2 ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್-1 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 181 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಆಯ್ಕೆಯಾದ ಅಭ್ಯರ್ಥಿಗಳಿಗೆ

ಗ್ರಾಮೀಣ ಪ್ರದೇಶಗಳಲ್ಲಿನ ಪ್ರೌಢ ಶಾಲೆಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿದೆ

ನೇರ ನೇಮಕಾತಿಗಾಗಿ ಮೀಸಲಿರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಮೊದಲನೆ ಹಂತವಾಗಿ 558 ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ

ಇನ್ನೂ ನೇರ ನೇಮಕಾತಿಗಾಗಿ ಬಾಕಿ ಇರುವ ಹುದ್ದೆಗಳಲ್ಲಿ 2ನೇ ಹಂತದಲ್ಲಿ 530 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ

ಮೇಲಿನಂತೆ ಮೊದಲನೇ ಮತ್ತು 2ನೇ ಹಂತದಲ್ಲಿ ಒಟ್ಟು 1088 ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಲಾಗುತ್ತಿದ್ದು, ಆದ್ಯತೆಯ ಮೇಲೆ ಗ್ರಾಮೀಣ ಪ್ರದೇಶಕ್ಕೆ ನೇಮಕ ಮಾಡಲಾಗುವುದು

ಶ್ರೀ ರಘುಪತಿ ಭಟ್ ಕೆ (ಉಡುಪಿ)131(333)

ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಉಡುಪಿ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಬಿಡುಗಡೆಯಾದ ಅನುದಾನ ಎಷ್ಟು, ಇದರಲ್ಲಿ ಪೂರ್ಣಗೊಂಡ ಕಾಮಗಾರಿ ಎಷ್ಟು, ಬಾಕಿ ಎಷ್ಟು,

ಆ) ಟಾಸ್ಕ್‌ಫೋರ್ಸ್ ಯೋಜನೆಯಡಿ ಈ ಸಾಲಿಗೆ ರೂಪಿಸಲಾದ ಕಾಮಗಾರಿ ಕ್ರಿಯಾ ಯೋಜನೆ ಮೊತ್ತ ಎಷ್ಟು, ಅದರಲ್ಲಿ ಪೂರ್ಣಗೊಂಡ ಮತ್ತು ಬಾಕಿಯಿರುವ ಕಾಮಗಾರಿಗಳ ಸಂಪೂರ್ಣ ವಿವರ ನೀಡುವುದು?

ಎಸ್ ಎ ರವೀಂದ್ರನಾಥ್

ಅ) 2006–07ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಉಡುಪಿ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು ರೂ 111 62 ಲಕ್ಷ ಅನುದಾನ ಬಿಡುಗಡೆಯಾಗಿದೆ ಪೂರ್ಣಗೊಂಡ ಕಾಮಗಾರಿಗಳು–34 ಹಾಗೂ 16–ಕಾಮಗಾರಿಗಳು ಅಪೂರ್ಣವಾಗಿವೆ

ಆ) ಟಾಸ್ಕ್‌ಫೋರ್ಸ್‌ಯಡಿ 2006–07ನೇ ಸಾಲಿಗೆ ಉಡುಪಿ ಕ್ಷೇತ್ರದ ಕ್ರಿಯಾ ಯೋಜನೆ ಮೊತ್ತ ರೂ 111 22 ಲಕ್ಷ ಪೂರ್ಣಗೊಂಡಿರುವ ಕಾಮಗಾರಿಗಳು–20 ಬಾಕಿಯಿರುವ ಕಾಮಗಾರಿಗಳ ಬೇಡಿಕೆ ರೂ 80 00 ಲಕ್ಷ

ಶ್ರೀ ರಘುಪತಿ ಭಟ್ ಕೆ (ಉಡುಪಿ)132(334)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮೂಲಭೂತ ಸೌಕರ್ಯದ ಬಗ್ಗೆ ಒದಗಿಸಲಾದ ಅನುದಾನ ಎಷ್ಟು, ಮತ್ತು ಯಾವಾಗ ಬಿಡುಗಡೆ ಮಾಡಲಾಗುವುದು,

ಇ) ಹೊಸ ಸಿಬ್ಬಂದಿಗಳ ತುರ್ತು ನೇಮಕಕ್ಕೆ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಡಿ ಹೆಚ್ ಶಂಕರಮೂರ್ತಿ

ಅ) ಬಂದಿದೆ

ಆ) ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಇ) ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ, ಇಲಾಖೆಯಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ 610 ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ

ಪ್ರಸ್ತುತ ಆಯಾ ವಿಷಯಗಳಿಗೆ ಕಾರ್ಯಭಾರಕ್ಕನುಗುಣವಾಗಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಕಾರ್ಯಭಾರದ ಕೊರತೆಯಿಂದಾಗಿ, ಹೆಚ್ಚುವರಿ ಎಂದು ಗುರುತಿಸಲ್ಪಟ್ಟ ಉಪನ್ಯಾಸಕರುಗಳನ್ನು ತಾತ್ಕಾಲಿಕವಾಗಿ ನಿಯೋಜಿಸುವ ಮೂಲಕ ಮತ್ತು ಅತಿಥಿ ಉಪನ್ಯಾಸಕರುಗಳನ್ನು ನೇಮಿಸಿ ಕೊಳ್ಳಲಾಗುತ್ತಿದೆ

ಬೋಧಕೇತರ ಸಿಬ್ಬಂದಿಗಳನ್ನು ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸುವ ಮೂಲಕ ಹಾಗೂ ಕೆ ಪಿ ಎಸ್ ಸಿ ಮೂಲಕ ಆಯ್ಕೆಗೊಂಡ ನಂತರ ನೇಮಕಾತಿ ನೀಡಲು ಮತ್ತು ಗ್ರೂಪ್ ಡಿ ಹುದ್ದೆಗೆ ಸಂಬಂಧಿಸಿದಂತೆ, ಬೇರೆ ಇಲಾಖೆಗಳು ಹೆಚ್ಚುವರಿ ಎಂದು ಗುರುತಿಸಿರುವ ನೌಕರರನ್ನು ಮರು ವಿನ್ಯಾಸಗೊಳಿಸುವ ಮೂಲಕ ತುಂಬಲಾಗುತ್ತಿದೆ

ಶ್ರೀ ರಾಜೇಂದ್ರ ವರ್ಮಾ (ಹುಲಸೂರು)133(328)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು ಹಾಗೂ ಈ ಶಾಲೆಗಳಿಗೆ ಮಂಜೂರಾಗಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು,

ಆ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ, ಎಷ್ಟು ಹುದ್ದೆಗಳು ಖಾಲಿ ಇವೆ, ಎಷ್ಟು ದಿನದಿಂದ ಖಾಲಿ ಇವೆ,

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್ ಬಸವರಾಜ ಹೊರಟ್ಟಿ

ಅ) ಸರ್ಕಾರಿ ಪ್ರಾಥಮಿಕ ಶಾಲೆ

ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ 142 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ ಸದರಿ ಶಾಲೆಗಳಿಗೆ ಒಟ್ಟು 983 ಶಿಕ್ಷಕರ ಹುದ್ದೆಗಳು ಮಂಜೂರಾಗಿದೆ

ಸರ್ಕಾರಿ ಪ್ರೌಢ ಶಾಲೆ

ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ 15 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ

ಸದರಿ ಶಾಲೆಗಳಿಗೆ ಒಟ್ಟು 141 ಶಿಕ್ಷಕರ ಹುದ್ದೆಗಳು ಮಂಜೂರಾಗಿದೆ

ಆ) ಈ ಪೈಕಿ ಪ್ರಾಥಮಿಕ ಶಾಲೆಗಳಲ್ಲಿ 927 ಹುದ್ದೆಗಳು ಭರ್ತಿಯಾಗಿವೆ 56 ಹುದ್ದೆಗಳಿಗೆ ಸುಮಾರು ಒಂದು ವರ್ಷದಿಂದ ಖಾಲಿ ಇವೆ ಈ ಪೈಕಿ ಪ್ರೌಢಶಾಲೆಗಳಲ್ಲಿ 127 ಹುದ್ದೆಗಳು ಭರ್ತಿಯಾಗಿವೆ 14 ಹುದ್ದೆಗಳು ಸುಮಾರು 2-3 ವರ್ಷಗಳಿಂದ ಖಾಲಿ ಇವೆ

ಇ) ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ಮ್ಯಾಟ್ರಿಕ್ಸ್ ಸಿದ್ಧಪಡಿಸುತ್ತಿದ್ದು, ಇದರಲ್ಲಿ ಈ ಹುದ್ದೆಗಳು ಒಳಗೊಂಡಿದ್ದು ಇನ್ನೊಂದು ವಾರದಲ್ಲಿ ಅಧಿಸೂಚನೆ ಹೊರಡಿಸಲಾಗುವುದು

ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 14 ಹುದ್ದೆಗಳನ್ನು 2006-07ನೇ ಸಾಲಿನ ನೇಮಕಾತಿಯಲ್ಲಿ ಆಯ್ಕೆ ಹೊಂದಿದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುತ್ತಿದೆ

ಶ್ರೀ ರಾಮಲಿಂಗರೆಡ್ಡಿ (ಜಯನಗರ)136(231)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ರಾಜ್ಯದಲ್ಲಿನ ಶಾಲೆಗಳಲ್ಲಿ ಈ ಶೈಕ್ಷಣಿಕ ವರ್ಷದಿಂದ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೊಳಿಸಲಾಗಿದೆಯೇ?

2) ಹಾಗಿದ್ದಲ್ಲಿ ಟ್ರೈಮಿಸ್ಟರ್ ಪದ್ಧತಿಯಿಂದ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಲು ಕಾರಣಗಳೇನು?

ಶ್ರೀ ಎಸ್ ಬಸವರಾಜ ಹೊರಟ್ಟಿ

ಅ) ಸರ್ಕಾರಿ ಆದೇಶ ಸಂಖ್ಯೆ, ಇಡಿ 8 ಡಿಜಿಒ 2007 ದಿನಾಂಕ, 30-06-2007ರ ಪ್ರಕಾರ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೊಳಿಸಲಾಗಿದೆ

ಆ) ಎ)ವೇಳಾಪಟ್ಟಿಯಂತೆ ಪಾಠಗಳು/ ಪರೀಕ್ಷೆಗಳು ಮಾಡುವ ಆತುರದಲ್ಲಿ ಕಲಿಕೆಯಲ್ಲಿ ಹಿಂದೆ ಬೀಳುವ ವಿದ್ಯಾರ್ಥಿಗಳಿಗೆ ಗಮನ ನೀಡಲು ಸಾಧ್ಯವಾಗದೇ ಇರುವುದು

ಬಿ) ಘಟಕ ಪರೀಕ್ಷೆ ಮತ್ತು ಪರಿಹಾರ ಬೋಧನೆ ಮಾಡುವಲ್ಲಿ ಶಿಕ್ಷಕರ ಸಮಸ್ಯೆಗಳು

ಸಿ) ನೀಲಿ ನಕ್ಷೆ ರಚನೆ ಕುರಿತು ಸ್ಪಷ್ಟ ಮಾಹಿತಿ ಇಲ್ಲದಿರುವುದು

ಡಿ) ಮೇಲ್ವಿಚಾರಣೆ ಕೊರತೆ

ಇ) ಪಾರ್ಟ್ ಬಿ ವಿಷಯಗಳ ಬೋಧನೆ ಹಾಗೂ ಮೌಲ್ಯ ಮಾಪನ ಮಾಡುವಲ್ಲಿ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಿರುವುದಿಲ್ಲ

ಎಫ್) ಮೌಖಿಕ ಪರೀಕ್ಷೆ ಮಾಡುವಲ್ಲಿ ಎದುರಾದ ಸಮಸ್ಯೆಗಳು

ಈ ಮೇಲ್ಕಂಡ ತ್ರೈಮಾಸಿಕ ಪದ್ಧತಿಯಲ್ಲಿನ ಅನಾನುಕೂಲತೆಗಳನ್ನು ಪರಿಹರಿಸಲು ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಲಾಗಿದೆ

ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)137(95)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ಮೈಸೂರು ನಗರದ ವಿನಾಯಕನಗರ(ಪಡುವರಹಳ್ಳಿ)ಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಬೇಕೆಂಬ ಮನವಿ ಬಗ್ಗೆ ಮೈಸೂರಿನ ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಈವರೆಗೆ ಎಷ್ಟೆಷ್ಟು ಬಾರಿ ಕಳೆದ ಎಷ್ಟು ವರ್ಷಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ,

2) ಇಲ್ಲಿಗೆ ಹಲವಾರು ವರ್ಷಗಳಿಂದ ಮನವಿ ಮಾಡಿದರೂ ಪ್ರೌಢಶಾಲೆ ಮಂಜೂರು ಮಾಡದಿರಲು ಕಾರಣಗಳೇನು,

3) ಇನ್ನಾದರೂ ಇಲ್ಲಿಗೆ ಸರ್ಕಾರಿ ಪ್ರೌಢಶಾಲೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು, ತಿಳಿಸುವುದು?

ಶ್ರೀ ಎಸ್ ಬಸವರಾಜ ಹೊರಟ್ಟಿ

1) 2007–08ನೇ ಸಾಲಿಗೆ, ಮೈಸೂರು ನಗರದ ವಿನಾಯಕನಗರ (ಪಡುವರಹಳ್ಳಿ)ಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುತ್ತದೆ 2) ಆಯವ್ಯಯದಲ್ಲಿ ಲಭ್ಯವಿರುವ ಅವಕಾಶದಂತೆ ಹಾಗೂ ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ ಹಂತ ಹಂತವಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ ಇದೊಂದು ಸತತವಾದ ಪ್ರಕ್ರಿಯೆಯಾಗಿದೆ

ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ ನಗರ)138(96)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಮೈಸೂರು ನಗರದ ಚಾಮರಾಜ ಕ್ಷೇತ್ರದಲ್ಲಿ ಎಲ್ಲೆಲ್ಲಿ ಘೋಷಿತ ಪ್ರದೇಶಗಳಿವೆ, ಎಲ್ಲೆಲ್ಲಿ ಅಘೋಷಿತ ಕೊಳಚೆ ಪ್ರದೇಶಗಳಿವೆ ತಿಳಿಸುವುದು,

ಆ) ಕೊಳಚೆ ಪ್ರದೇಶಗಳಲ್ಲಿ ಗುಡಿಸಲು ವಾಸಿಗಳ ವಿವರಗಳನ್ನು ಪ್ರತಿ ಕುಟುಂಬವಾರು ಪಟ್ಟಿ ಮಾಡಲಾಗಿದೆಯೇ, ಮಾಡಿದ್ದಲ್ಲಿ ಎಷ್ಟು ಗುಡಿಸಲುಗಳಿವೆ, ಎಷ್ಟು ಮಂದಿ ಗುಡಿಸಲು ವಾಸಿಗಳು ಎಂಬುದನ್ನು ತಿಳಿಸುವುದು,

ಇ) ಗುಡಿಸಲು ವಾಸಿಗಳ ಪಟ್ಟಿ ಒದಗಿಸುವುದರ ಜೊತೆಗೆ, ಈ ಗುಡಿಸಲು ವಾಸಿಗಳಿಗೆ ಶಾಶ್ವತ ಸೂರು ಕಲ್ಪಿಸಲು ಸರ್ಕಾರ ಯಾವ ಯಾವ ಕ್ರಮ ವಹಿಸಿದೆ ತಿಳಿಸುವುದು,

ಶ್ರೀ ಡಿ ಟಿ ಜಯಕುಮಾರ್

ಅ) ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಘೋಷಿತ ಕೊಳಚೆ ಪ್ರದೇಶಗಳು

1) ಮೇದರ್ ಬ್ಲಾಕ್
2) ಮಂಜುನಾಧ ಪುರ
3) RMC Yard, abod Block
4) ಬಂಬೂ ಬಜಾರ್
5) ಗೋವಿಂದರಾವ್ ಮೆಮೊರಿಯಲ್ ಹಾಲ್
6) ರೀಜನಲ್ ಕಾಲೇಜ್ ಹಿಂಭಾಗ
7) ಜನತಾ ಸಾ ಮಿಲ್ ಹಿಂಭಾಗ
8) ಯಶವಂತ ನಗರ
9) ಸ್ಪೀಚ್ ಅಂಡ್ ಹಿಯರಿಂಗ್ ಎದುರು, ಬೋಗಾದಿ ರಸ್ತೆ

10) ಯಾದವಗಿರಿ ಪರಮಹಂಸ ರಸ್ತೆ
11) ಯಾದವಗಿರಿ ಅರಸಿಕೆರೆ ರೈಲ್ವೆ ಹಳಿ ಪಕ್ಕದ ಪ್ರದೇಶ
12) ಪಿ ಕೆ ಸ್ಯಾನಿಟೋರಿಯಂ ಹಿಂಭಾಗ
13) ಮೈಸೂರು ಸಾ ಮಿಲ್ ಮುಂಭಾಗ
14) ವಾಣಿ ವಿಲಾಸ ಮೊಹಲ್ಲಾ 16ನೇ ರಸ್ತೆ
15) ರಾಜರಾಜೇಶ್ವರಿ ರೈಸ್ ಮಿಲ್ ಹಿಂಭಾಗ
16) ಜೋಗನ ಕೆರೆ
17) ಸೌತ್ ಆಫ್ ಕುಂಬಾರ ಕೊಪ್ಪಲು ಪಿ ಕೆ ಸ್ಯಾನಿಟೋರಿಯಂ ಹಿಂಭಾಗ, 2ನೇ ಹಂತ
18) ಗೋಕುಲಂ 3ನೇ ಹಂತ
19) ಮಹೇಶ್ವರಿ ಬಡಾವಣೆ ಡೋಂಗ್ರಿ ಕಾಲೋನಿ
20) ಕಾಫಿ ಬೋರ್ಡ್ ಹಿಂಭಾಗ

ಅಘೋಷಿತ ಕೊಳಚೆ ಪ್ರದೇಶಗಳು

1) ಕೆ ಆರ್ ಎಸ್ ರಸ್ತೆ, Nursing Quarters Back sideನಲ್ಲಿ ಪೌರಕಾರ್ಮಿಕರ ಕಾಲೋನಿ

ಆ) ಘೋಷಿತ ಕೊಳಚೆ ಪ್ರದೇಶಗಳ ಕುಟುಂಬವಾರು ಪಟ್ಟಿ ಮಾಡಲಾಗಿರುತ್ತದೆ ಪಟ್ಟಿಯ ಪ್ರಕಾರ ಒಟ್ಟು 1904 (ಸಮೀಕ್ಷೆ ಸಮಯದಲ್ಲಿ ಗುಡಿಸಲುಗಳಿದ್ದವು) ಕುಟುಂಬಗಳಿರುತ್ತವೆ

ಇ) ಗುಡಿಸಲುವಾಸಿಗಳ ಪಟ್ಟಿ ಲಗತ್ತಿಸಿದೆ

(ಮಾಹಿತಿಯು ಹೆಚ್ಚಿನ ಪುಟಗಳಿಂದ ಕೂಡಿರುವುದರಿಂದ ಸಂಬಂಧಿಸಿದ ಮಾನ್ಯ ಸದಸ್ಯರಿಗೆ ಮಾತ್ರ ಒದಗಿಸಲಾಗಿದೆ)

ಗುಡಿಸಲುವಾಸಿಗಳಿಗೆ ಶಾಶ್ವತ ಸೂರು ಕಲ್ಪಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ

ಮೇದರ್ಸ್ ಬ್ಲಾಕ್ ಕೊಳಚೆ ಪ್ರದೇಶ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ಕೆಸರೆ, ಗಾಯತ್ರಿ ಪುರಂ, ಗೋಕುಲಂ, ಕುಂಬಾರ ಕೊಪ್ಪಲು ಹಾಗೂ ಕ್ಯಾತಮಾರನಹಳ್ಳಿಗಳಲ್ಲಿ 616 ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸಿ ಸ್ಥಳಾಂತರಿಸಲಾಗಿದೆ ಹಾಗೂ ಉಳಿದ ಕುಟುಂಬಗಳಿಗೆ JNNURM ಯೋಜನೆಯಡಿಯಲ್ಲಿ ವಸತಿ ಸೌಕರ್ಯ ಒದಗಿಸಿ ಪುನರ್ವಸತಿ ಕಲ್ಪಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ

ಮಂಜುನಾಥ ಪುರ ಕೊಳಚೆ ಪ್ರದೇಶದ ನಿವಾಸಿಗಳ ಪೈಕಿ 15 ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ಅದೇ ಸ್ಥಳದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ

ಬಂಬೂ ಬಜಾರ್ ಕೊಳಚೆ ಪ್ರದೇಶದ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿ ಸಾತಗಳ್ಳಿ ಪ್ರದೇಶದಲ್ಲಿ 60 ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸಿ ಸ್ಥಳಾಂತರಿಸಲಾಗಿದೆ

ಗೋವಿಂದರಾವ್ ಮೆಮೊರಿಯಲ್ ಹಾಲ್ ಮತ್ತು Regional college ಹಿಂಭಾಗದ ಕೊಳಚೆ ಪ್ರದೇಶಗಳ ಬೋಗಾದಿ ಸರ್ವೆ ನಂ 186ರಲ್ಲಿ ಹುಡ್ಕೋ ಯೋಜನೆಯಡಿ 176 ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸಿ ಸ್ಥಳಾಂತರಿಸಿ ಮೂಲಭೂತ ಸೌಲಭ್ಯ ಒದಗಿಸಲಾಗಿದೆ

ಜನತಾ ಸಾ ಮಿಲ್ ಹಿಂಭಾಗದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಅದೇ ಸ್ಥಳದಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ 36 ಮನೆ ಹಾಗೂ ವಾಂಬೆ ಯೋಜನೆಯಡಿ 32 ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸಿ ಮೂಲಭೂತ ಸೌಲಭ್ಯ ಒದಗಿಸಲಾಗಿದೆ

ಯಶವಂತ ನಗರ ಕೊಳಚೆ ಪ್ರದೇಶದ ನಿವಾಸಿಗಳಿಗೆ ಅದೇ ಸ್ಥಳದಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ 60 ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸಿ ಮೂಲಭೂತ ಸೌಲಭ್ಯ ಒದಗಿಸಲಾಗಿದೆ

ಸ್ಪೀಚ್ ಅಂಡ್ ಹಿಯರಿಂಗ್ ಎದುರು, ಬೋಗಾದಿ ರಸ್ತೆ ಕೊಳಚೆ ಪ್ರದೇಶದ ನಿವಾಸಿಗಳಿಗೆ ಬೋಗಾದಿ ಸರ್ವೆ ನಂ 280ರಲ್ಲಿ ವಾಂಬೆ ಯೋಜನೆಯಡಿ 80 ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸಿ ಸ್ಥಳಾಂತರಿಸಲಾಗಿದೆ

ಯಾದವಗಿರಿ ಪರಮಹಂಸ ರಸ್ತೆ ಕೊಳಚೆ ಪ್ರದೇಶದ ನಿವಾಸಿಗಳಿಗೆ ಸೌತ್ ಆಫ್ ಕುಂಬಾರ ಕೊಪ್ಪಲಿನಲ್ಲಿ ನಿವೇಶನ ಮತ್ತು ಸೇವೆಗಳಡಿ 64 ನಿವೇಶನಗಳನ್ನು ವಿತರಿಸಿ ಪುನರ್ವಸತಿ ಕಲ್ಪಿಸಲಾಗಿದೆ

ಯಾದವಗಿರಿ ಅರಸೀಕೆರೆ ರೈಲ್ವೆ ಹಳಿ ಪಕ್ಕದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಎಂ ಸಿ ಸಿ ನೆರವಿನೊಂದಿಗೆ ಫಲಾನುಭವಿಗಳೇ ಸ್ವತಃ ಮನೆಗಳನ್ನು ನಿರ್ಮಿಸಿಕೊಂಡಿರುತ್ತಾರೆ

ಪಿ ಕೆ ಸ್ಯಾನಿಟೋರಿಯಂ ಹಿಂಭಾಗದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಎಂ ಸಿ ಸಿ ನೆರವಿನೊಂದಿಗೆ ಫಲಾನುಭವಿಗಳೇ ಸ್ವತಃ ಮನೆಗಳನ್ನು ನಿರ್ಮಿಸಿ ಕೊಂಡಿರುತ್ತಾರೆ

ಮೈಸೂರು ಸಾ ಮಿಲ್ ಮುಂಭಾಗದ ಕೊಳಚೆ ಪ್ರದೇಶದ ನಿವಾಸಿಗಳಿಗೆ JNNURM ಯೋಜನೆಯಡಿಯಲ್ಲಿ ಮುಂದಿನ ಸಾಲಿನಲ್ಲಿ ಪುನರ್ ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗಿದೆ

ವಾಣಿ ವಿಲಾಸ ಮೊಹಲ್ಲಾ 16ನೇ ಕ್ರಾಸ್ ಕೊಳಚೆ ಪ್ರದೇಶದ ನಿವಾಸಿಗಳಿಗೆ JNNURM ಯೋಜನೆಯಡಿಯಲ್ಲಿ ಮುಂದಿನ ಸಾಲಿನಲ್ಲಿ ಪುನರ್ ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗಿದೆ JNNURM ಯೋಜನೆಯಡಿಯಲ್ಲಿ ವಸತಿ ಸೌಕರ್ಯ ಒದಗಿಸಿ ಪುನರ್ ವಸತಿ ಕಲ್ಪಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಹಾಗೂ ಡಿ ಬ್ಲಾಕ್‌ನ ನಿವಾಸಿಗಳಿಗೆ 32 ವಾಂಬೆ ಮನೆಗಳ ನಿರ್ಮಾಣ ಪ್ರಗತಿಯಲ್ಲಿರುತ್ತದೆ

ರಾಜರಾಜೇಶ್ವರಿ ರೈಸ್ ಮಿಲ್ ಹಿಂಭಾಗದ ಕೊಳಚೆ ಪ್ರದೇಶದ ನಿವಾಸಿಗಳಿಗೆ JNNURM ಯೋಜನೆಯಡಿಯಲ್ಲಿ ವಸತಿ ಸೌಕರ್ಯ ಒದಗಿಸಿ ಪುನರ್ ವಸತಿ ಕಲ್ಪಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ

ಜೋಗನ ಕೆರೆ ಕೊಳಚೆ ಪ್ರದೇಶದ ನಿವಾಸಿಗಳಿಗೆ JNNURM ಯೋಜನೆಯಡಿಯಲ್ಲಿ ಮುಂದಿನ ಸಾಲಿನಲ್ಲಿ ಪುನರ್ ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗಿದೆ

ಸೌತ್ ಆಫ್ ಕುಂಬಾರ್ ಕೊಪ್ಪಲು ಪಿ ಕೆ ಸ್ಯಾನಿಟೋರಿಯಂ ಹಿಂಭಾಗದ 2ನೇ ಹಂತದ ಕೊಳಚೆ ಪ್ರದೇಶದ ನಿವಾಸಿಗಳಿಗೆ JNNURM ಯೋಜನೆಯಡಿಯಲ್ಲಿ ಮುಂದಿನ ಸಾಲಿನಲ್ಲಿ ಪುನರ್ ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗಿದೆ

ಗೋಕುಲಂ 3ನೇ ಹಂತ ಕೊಳಚೆ ಪ್ರದೇಶದ ನಿವಾಸಿಗಳಿಗೆ JNNURM ಯೋಜನೆಯಡಿಯಲ್ಲಿ ಮುಂದಿನ ಸಾಲಿನಲ್ಲಿ ಪುನರ್ ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗಿದೆ

ಮಹೇಶ್ವರಿ ಬಡಾವಣೆ ಡೋಂಗ್ರಿ ಕಾಲೋನಿ ಕೊಳಚೆ ಪ್ರದೇಶದ ನಿವಾಸಿಗಳಿಗೆ JNNURM ಯೋಜನೆಯಡಿಯಲ್ಲಿ ಮುಂದಿನ ಸಾಲಿನಲ್ಲಿ ಪುನರ್ ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗಿದೆ

ಕಾಫಿ ಬೋರ್ಡ್ ಹಿಂಬಾಗ ಕೊಳಚೆ ಪ್ರದೇಶದ ನಿವಾಸಿಗಳಿಗೆ RLHP ಸಂಸ್ಥೆಯೊಂದಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಿ ಮೂಲಭೂತ ಸೌಕರ್ಯ ಒದಗಿಸಲಾಗಿದೆ

ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)139(97)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಮೈಸೂರಿನ (ಸರ್ಕಾರಿ) ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ, ಎಷ್ಟು ವಿಭಾಗಗಳಿವೆ ತಿಳಿಸುವುದು

ಆ) ಇಲ್ಲಿ ಕಂಪ್ಯೂಟರ್ ಸೈನ್ಸ್ ಅಧ್ಯಾಪಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದಲ್ಲಿ, ಕಂಪ್ಯೂಟರ್ ಸೈನ್ಸ್ ಅಧ್ಯಾಪಕರಿಲ್ಲದೆ ಇಲ್ಲಿನ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಸೈನ್ಸ್ ಪಾರಪ್ರವಚನೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಇಲ್ಲಿಗೆ ಅಗತ್ಯವಿರುವಷ್ಟು ಕಂಪ್ಯೂಟರ್ ಸೈನ್ಸ್ ಅಧ್ಯಾಪಕರನ್ನು ಕೂಡಲೇ ನೇಮಿಸಲು ಎಷ್ಟು ಸಮಯ ಬೇಕಾಗುವುದು

ಶ್ರೀ ಬಸವರಾಜ ಎಸ್ ಹೊರಟ್ಟಿ

ಅ) ಈ ಕಾಲೇಜಿನಲ್ಲಿ ಪ್ರಥಮ ಪಿಯುಸಿಯ ಪಿ ಸಿ ಎಂ ಬಿ (ವಿಜ್ಞಾನ) ಮತ್ತು ಇ ಸಿ ಬಿ ಎ(ವಾಣಿಜ್ಯ) ಸಂಯೋಜನೆಯಲ್ಲಿ 75 ವಿದ್ಯಾರ್ಥಿಗಳಿದ್ದು ಹಾಗೂ ದ್ವಿತೀಯ ಪಿಯುಸಿಯಲ್ಲಿ 70 ವಿದ್ಯಾರ್ಥಿಗಳಿದ್ದು, 02 ವಿಭಾಗಗಳಲ್ಲಿ 145 ವಿದ್ಯಾರ್ಥಿಗಳಿರುತ್ತಾರೆ

ಆ) ಬಂದಿದೆ

ಇ) ಬಂದಿದೆ

ಈ) 10 ಕಂಪ್ಯೂಟರ್ ಸೈನ್ಸ್ ಉಪನ್ಯಾಸಕರನ್ನು ನೇಮಕ ಮಾಡುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ದಿನಾಂಕ 5-7-2007ರಂದು ಅಧಿಸೂಚನೆ ಹೊರಡಿಸಲಾಗಿದೆ ಲೋಕ ಸೇವಾ ಆಯೋಗವು ಆಯ್ಕೆ ಪಟ್ಟಿಯನ್ನು ನೀಡಿದ ಕೂಡಲೇ ನೇಮಕಾತಿ ಮಾಡಲಾಗುವುದು

ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)140(98)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಮೈಸೂರು ನಗರದಲ್ಲಿನ ಒಂಟಿ ಕೊಪ್ಪಲಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಯಾವ ಯಾವ ತರಗತಿಯ ಯಾವ ಯಾವ ಕಾಂಬಿನೇಷನ್‌ನ ಎಷ್ಟೆಷ್ಟು ವಿದ್ಯಾರ್ಥಿಗಳಿದ್ದಾರೆ, ಎಷ್ಟೆಷ್ಟು ವಿಭಾಗಗಳಿವೆ, ವಿವರ ನೀಡುವುದು

ಆ) ಅವರುಗಳ ಪೈಕಿ ವಿದ್ಯಾರ್ಥಿನಿಯರ/ವಿದ್ಯಾರ್ದಿಗಳ ಸಂಖ್ಯೆ ಎಷ್ಟು,

ಇ) ಇಲ್ಲಿರುವ ಕೊರಡಿಗಳ ಸಂಖ್ಯೆ ಎಷ್ಟು, ಎಷ್ಟು ಕೊರಡಿಗಳ ಅವಶ್ಯಕತೆ ಇದೆ

ಈ) ಈ ಕೊರತೆಯಾಗಿರುವ ಕೊರಡಿಗಳ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ವಹಿಸಿದೆ, ಮಾಹಿತಿ ನೀಡುವುದು,

ಶ್ರೀ ಬಸವರಾಜ ಎಸ್ ಹೊರಟ್ಟಿ

ಅ) ಮೈಸೂರು ನಗರದಲ್ಲಿನ ಒಂಟಿ ಕೊಪ್ಪಲಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿಯ ತರಗತಿಗಳಿದ್ದು, ಕಲಾ ಮತ್ತು ವಾಣಿಜ್ಯ ಸಂಯೋಜನೆಗಳು ಇವೆ

ಕಲಾ ವಿಭಾಗದಲ್ಲಿ ಒಟ್ಟು 140 ವಿದ್ಯಾರ್ಥಿಗಳಿರುತ್ತಾರೆ

ವಾಣಿಜ್ಯ ವಿಭಾಗದಲ್ಲಿ ಒಟ್ಟು 109 ವಿದ್ಯಾರ್ಥಿಗಳಿರುತ್ತಾರೆ

ಕಲಾ (ಹೆಚ್ ಇ ಪಿ ಎಸ್) ಮತ್ತು ವಾಣಿಜ್ಯ(ಜಿ ಇ ಬಿ ಎ) ಸಂಯೋಜನೆ ಗಳಲ್ಲಿ ತಲಾ ಒಂದೊಂದು ವಿಭಾಗಗಳಿವೆ

ಆ) ಸಂಯೋಜನೆ

ಸಂಯೋಜನೆ	ವಿದ್ಯಾರ್ಥಿಗಳು		ವಿದ್ಯಾರ್ಥಿನಿಯರು	
	ಪ್ರಥಮ ಪಿಯುಸಿ	ದ್ವಿತೀಯ ಪಿಯುಸಿ	ಪ್ರಥಮ ಪಿಯುಸಿ	ದ್ವಿತೀಯ ಪಿಯುಸಿ
ಕಲಾ(ಹೆಚ್ ಇ ಪಿ ಎಸ್)	32	32	34	42
ವಾಣಿಜ್ಯ(ಜಿ ಇ ಬಿ ಎ)	41	39	09	20

ಇ) ಒಟ್ಟು 04 ಕೊಠಡಿಗಳಿದ್ದು, ಇನ್ನೂ 06 ಕೊಠಡಿಗಳ ಅವಶ್ಯಕತೆಯಿರುತ್ತದೆ

ಈ) 2007-08ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಒಂಟಿಕೊಪ್ಪಲು, ಮೈಸೂರು ಇಲ್ಲಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಆಯವ್ಯಯದಲ್ಲಿನ ಸಂಪನ್ಮೂಲದ ಲಭ್ಯತೆಗೆ ಅನುಸಾರವಾಗಿ ಹಂತ ಹಂತವಾಗಿ ಕೊಠಡಿಗಳನ್ನು ನಿರ್ಮಿಸಲು ಕ್ರಮವಹಿಸಲಾಗುವುದು

ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)142(106)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ಹಳ್ಳಿಗಳಲ್ಲಿ 3 ಲಕ್ಷ ಆಶ್ರಯ ಮನೆಗಳ ನಿರ್ಮಾಣ ಘೋಷಣೆ ಆಗಿರುವುದು ನಿಜವೇ,

ಆ) ಹಾಗಿದ್ದಲ್ಲಿ ರಾಜ್ಯಾದ್ಯಂತ ಜಿಲ್ಲಾವಾರು ಎಷ್ಟು ಮನೆಗಳು ನಿರ್ಮಾಣವಾಗಿವೆ, ಮಾಹಿತಿ ನೀಡುವುದು?

ಶ್ರೀ ಡಿ ಟಿ ಜಯಕುಮಾರ್

ಅ) ಹೌದು

ಆ) 2006–07ನೇ ಆರ್ಥಿಕ ವರ್ಷದಲ್ಲಿ 3 ಲಕ್ಷ ಮನೆಗಳ ಗುರಿಗೆ ಎದುರಾಗಿ 1,73,861 ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲಾಗಿರುತ್ತದೆ (ಜಿಲ್ಲಾವಾರು ಹಾಗೂ ಯೋಜನಾವಾರು ಮಾಹಿತಿಯನ್ನು ಅನುಬಂಧ 'ಅ' ದಲ್ಲಿ ನೀಡಲಾಗಿದೆ)

2006-07ನೇ ಆರ್ಥಿಕ ವರ್ಷದಲ್ಲಿ ಜಿಲ್ಲಾವಾರು ಹಾಗೂ ಯೋಜನಾವಾರು ಮನೆಗಳ ಪೂರ್ಣಗೊಂಡ ವಿವರ

2006-07ನೇ ಸಾಲಿನಲ್ಲಿ ಪೂರ್ಣಗೊಂಡ ಮನೆಗಳ ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಗ್ರಾಮೀಣ ಆಶ್ರಯ	ನಗರ ಆಶ್ರಯ	ಗ್ರಾಮೀಣ ಅಂಬೇಡ್ಕರ್	ನಗರ ಅಂಬೇಡ್ಕರ್	ಇಂದಿರಾ ಆವಾಸ್ ಯೋಜನೆ	ಪಿ ಎಂ ಜಿ ವೈ	ಒಟ್ಟು
1	ಬಾಗಲಕೋಟೆ	2964	123	94	5	1386	0	4572
2	ಬೆಂಗಳೂರು(ಗ್ರಾ)	4787	8	373	0	1652	48	6868
3	ಬೆಂಗಳೂರು(ನ)	1411	369	182	0	459	0	2421
4	ಬೆಳಗಾವಿ	9437	195	162	0	3770	0	13564
5	ಬಳ್ಳಾರಿ	7224	523	395	0	4513	177	12832
6	ಬೀದರ್	4039	48	378	0	1396	0	5861
7	ಬಿಜಾಪುರ	4133	6	259	0	1084	0	5482
8	ಚಾಮರಾಜನಗರ	2033	191	642	0	722	94	3682
9	ಚಿಕ್ಕಮಗಳೂರು	2979	51	60	0	898	0	3988
10	ಚಿತ್ರದುರ್ಗ	5347	223	832	0	2385	0	8787
11	ದಕ್ಷಿಣ ಕನ್ನಡ	1954	65	29	0	890	0	2938
12	ದಾವಣಗೆರೆ	5823	105	448	0	1843	0	8219
13	ಧಾರವಾಡ	2769	1288	19	0	863	0	4939
14	ಗದಗ	2715	151	57	0	589	0	3513
15	ಗುಲ್ಬರ್ಗಾ	5014	240	522	0	2776	6	8558
16	ಹಾಸನ	4530	0	164	0	1270	47	6011
17	ಹಾವೇರಿ	3852	315	46	0	1232	8	5454
18	ಕೊಡಗು	1104	0	7	0	450	0	1561

19	ಕೋಲಾರ	8182	7	493	0	2202	136	11020
20	ಕೊಪ್ಪಳ	5069	236	63	165	1269	0	6802
21	ಮಂಡ್ಯ	3820	6	129	0	1173	2	5130
22	ಮೈಸೂರು	3740	814	431	12	2255	2	7254
23	ರಾಯಚೂರು	5424	0	429	0	6285	0	12138
24	ಶಿವಮೊಗ್ಗ	3414	50	146	0	963	32	4605
25	ತುಮಕೂರು	6673	341	325	0	3577	0	10916
26	ಉಡುಪಿ	2769	0	43	0	408	0	3220
27	ಉತ್ತರ ಕನ್ನಡ	2469	133	8	0	916	0	3526
	ಒಟ್ಟು	**113676**	**5488**	**6736**	**182**	**47226**	**553**	**173861**

ಶ್ರೀ ಸಿದ್ದುಸಾವದಿ(ಜಮಖಂಡಿ)143(21)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006-07ರಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ಸೈಕಲ್‌ಗಳನ್ನು ವಿತರಿಸಲಾಗದೇ ಇರುವ ಶಾಲೆಗಳ ಸಂಖ್ಯೆ ಎಷ್ಟು, ಹಾಗೂ ಸೈಕಲ್ ಪಡೆಯದೇ ಇರುವ ಮಕ್ಕಳ ಸಂಖ್ಯೆ ಎಷ್ಟು,

ಆ) ಈ ಶಾಲೆಗಳಲ್ಲಿ ಹಿಂದಿನ ವರ್ಷ ಸೈಕಲ್ ಪಡೆಯದ ಮಕ್ಕಳಿಗೆ ಈ ವರ್ಷವಾದರೂ ಸೈಕಲ್‌ಗಳನ್ನು ಕೊಡಲಾಗುವುದೇ, ಇಲ್ಲವಾದಲ್ಲಿ ಕಾರಣಗಳನ್ನು ತಿಳಿಸುವುದು,

ಇ) ಈ ವರ್ಷ ಅಂದರೆ 2007-08ರಲ್ಲಿ ಸೈಕಲ್ ವಿತರಿಸಲು ಅನುಸರಿಸುವ ಮಾನ ದಂಡಗಳೇನು,

ಈ) ಅಂಗವಿಕಲ ಮಕ್ಕಳಿಗೆ ಮೂರು ಚಕ್ರದ ಸೈಕಲ್ ವಿತರಿಸುವ ಯೋಜನೆ ಹಾಕಿಕೊಳ್ಳಲಾಗಿದೆಯೇ, ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ

ಅ) 2006-07ನೇ ಸಾಲಿನಲ್ಲಿ ಯೋಜನೆಯ ಪ್ರಾರಂಭದಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ 904 ವಿದ್ಯಾರ್ಥಿಗಳನ್ನು ಫಲಾನುಭವಿಗಳೆಂದು ಗುರುತಿಸಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ವಿತರಿಸಲಾಗಿದೆ

ಆದರೆ ದಿನಾಂಕ 21-02-2007ರಲ್ಲಿ 229 ವಿದ್ಯಾರ್ಥಿಗಳನ್ನು ಹಾಗೂ ಈ ದಿನಾಂಕಕ್ಕೆ [4-7-2007] ಇನ್ನೂ 452 ವಿದ್ಯಾರ್ಥಿಗಳನ್ನು ಫಲಾನುಭವಿಗಳೆಂದು ತಡವಾಗಿ ಗುರ್ತಿಸಿದ್ದರ ಹಿನ್ನೆಲೆಯಲ್ಲಿ ಒಟ್ಟು 681 ವಿದ್ಯಾರ್ಥಿಗಳಿಗೆ 2006-07ನೇ ಸಾಲಿಗೆ ಬೈಸಿಕಲ್‌ಗಳನ್ನು ವಿತರಿಸಿರುವುದಿಲ್ಲ

ಆ) ಇದರ ಬಗ್ಗೆ ಪರಿಶೀಲಿಸಲಾಗುವುದು

ಇ) 2006–07ನೇ ಸಾಲಿಗೆ ಬಿ ಪಿ ಎಲ್ ಕಾರ್ಡ್ ಹೊಂದಿರುವ ಕುಟುಂಬಗಳ ಮಕ್ಕಳನ್ನು ಫಲಾನುಭವಿಗಳೆಂದು ಗುರುತಿಸಲಾಗಿತ್ತು

ಕಳೆದ ಸಾಲಿನಲ್ಲಿನ ತೀರ್ಮಾನದ ಬಗ್ಗೆ 2007–08ನೇ ಸಾಲಿಗೆ ಪರಿಶೀಲಿಸಲಾಗುತ್ತಿದೆ

ಈ) ಇಲ್ಲ

ಶ್ರೀ ಸಿದ್ದುಸಾವದಿ(ಜಮಖಂಡಿ)144(35)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಇಂಜಿನಿಯರಿಂಗ್, ಡಿಪ್ಲೋಮಾದಂತಹ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ನಿಯಮಾವಳಿಗಳೇನು?

ಆ) ಈಗಾಗಲೇ ರಾಜ್ಯದಲ್ಲಿ ಇದ್ದ ಇಂಜಿನಿಯರಿಂಗ್, ಡಿಪ್ಲೋಮಾ ಮತ್ತು ಇನ್ನಿತರ ವೃತ್ತಿಪರ ಕಾಲೇಜುಗಳ ಸಂಖ್ಯೆ ಎಷ್ಟು, ಜಿಲ್ಲಾವಾರಿ ಮಾಹಿತಿ ಒದಗಿಸುವುದು,

ಇ) ಜಮಖಂಡಿ ತಾಲ್ಲೂಕಿನಲ್ಲಿಯೂ ಈ ಕಾಲೇಜುಗಳ ಬೇಡಿಕೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ, ಬಂದಿದ್ದರೆ, ಯಾವಾಗ ಪ್ರಾರಂಭಿಸಲಾಗುವುದು?

ಈ) ಅನೇಕ ಕಾಲೇಜುಗಳನ್ನು ಇದ್ದ ಊರುಗಳಲ್ಲೇ ಮತ್ತೊಂದು ಪ್ರಾರಂಭಿಸುವುದರ ಮೂಲಕ ಇದ್ದದ್ದಕ್ಕೂ ತೊಂದರೆ ಮತ್ತು ಬೇರೆಯವರಿಗೂ ಅವಕಾಶ ಇಲ್ಲದಂತಾಗಿ ಹಿಂದುಳಿದ ಪ್ರದೇಶದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ, ಹೇಗೆ ಸರಿಪಡಿಸಲಾಗುವುದು?

ಶ್ರೀ ಡಿ ಹೆಚ್ ಶಂಕರಮೂರ್ತಿ

ಅ) ಎಐಸಿಟಿಇ, ನವದೆಹಲಿ, ಇವರು ರೂಪಿಸಿರುವ ನಿಯಮಾವಳಿಗಳಲ್ಲಿನ ಮಾನದಂಡ ಹಾಗೂ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುತ್ತದೆ

ಆ) ರಾಜ್ಯದಲ್ಲಿ 125 ಇಂಜಿನಿಯರಿಂಗ್ ಕಾಲೇಜುಗಳು ಹಾಗೂ 183 ಪಾಲಿಟೆಕ್ನಿಕ್‌ಗಳು ಇರುತ್ತವೆ ಈ ಜಿಲ್ಲಾವಾರು ವಿವರಗಳನ್ನು ಕ್ರಮವಾಗಿ ಅನುಬಂಧ –1 ಹಾಗೂ ಅನುಬಂದ–2 ರಲ್ಲಿ ನೀಡಲಾಗಿದೆ

ಇ) ಜಮಖಂಡಿ ತಾಲ್ಲೂಕಿನಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಸದ್ಯ ಇರುವುದಿಲ್ಲ

ಈ) ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಏರುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು 2007–08ನೇ ಸಾಲಿಗೆ 08 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ತೀರ್ಮಾನಿಸಿದೆ ಮುಂದಿನ ವರ್ಷಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಆಯವ್ಯಯದ ಅವಕಾಶವನ್ನು ಗಮನದಲ್ಲಿಟ್ಟುಕೊಂಡು ಆದ್ಯತೆ ಮೇಲೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು

ವಿಧಾನಸಭಾ ಸದಸ್ಯರಾದ ಶ್ರೀ ಸಿದ್ದು ಸಾವದಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 315ಕ್ಕೆ ಅನುಬಂಧ–1

1	ಬೆಂಗಳೂರು ನಗರ
2	ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು [ಸರ್ಕಾರಿ]
3	ಎಸ್ ಕೆ ಎಸ್ ಜೆ ಟಿ ಇನ್‌ಸ್ಟಿಟ್ಯೂಟ್ ಬೆಂಗಳೂರು [ಸರ್ಕಾರಿ]
4	ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ [ಸಂಜೆ] ಬೆಂಗಳೂರು [ಸರ್ಕಾರಿ]
5	ಎಸ್ ಕೆ ಎಸ್ ಜೆ ಟಿ ಇನ್‌ಸ್ಟಿಟ್ಯೂಟ್ [ಸಂಜೆ] ಬೆಂಗಳೂರು [ಸರ್ಕಾರಿ]
6	ಡಾ ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
7	ಬಿ ಎಂ ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
8	ಬಿ ಎಂ ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ [ಸಂಜೆ] ಬೆಂಗಳೂರು
9	ಎಂ ಎಸ್ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
10	ಆರ್ ವಿ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
11	ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
12	ದಯಾನಂದ ಸಾಗರ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
13	ಸರ್ ಎಂ ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
14	ಪಿ ಇ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
15	ಎಂ ವಿ ಜೆ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
16	ಜೆ ಎಸ್ ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್, ಬೆಂಗಳೂರು
17	ಹೆಚ್ ಕೆ ಬಿ ಕೆ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
18	ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆಂಗೇರಿ, ಬೆಂಗಳೂರು

19	ಬಿ ಟಿ ಎಲ್ ಐ ಟಿ ಅಂಡ್ ಮೇನೆಜ್‌ಮೆಂಟ್, ಬೊಮ್ಮಸಂದ್ರ, ಬೆಂಗಳೂರು
20	ರೇವಣ ಸಿದ್ದೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
21	ಜೆ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರಘುವನಹಳ್ಳಿ
22	ಸಿ ಎಂ ಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕುಂಡಲ ಹಳ್ಳಿ ವಿಲೇಜ್,
23	ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಇಂಜಿನಿಯರಿಂಗ್,ಆಂಡ್ ಟೆಕ್ನಾಲಜಿ, ಬೆಂಗಳೂರು
24	ಎ ಎಂ ಸಿ ಇಂಜಿನಿಯರಿಂಗ್ ಕಾಲೇಜ್, ಬನ್ನೇರುಘಟ್ಟ ರೋಡ್,
25	ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಆನಂದ ನಗರ್, ಹೆಬ್ಬಾಳ್
26	ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಜಿಂದಾಲ್ ನಗರ್, ಬೆಂಗಳೂರು
27	ನ್ಯೂ ಹಾರಿಜಾನ್ ಕಾಲೇಜ್ ಆಫ್ ಇಂಜಿನಿಯರಿಂಗ್,ವರ್ತೂರು, ಬೆಂಗಳೂರು
28	ಕೆ ಎನ್ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ನಾರ್ತ್
29	ಡಾನ್ ಬಾಸ್ಕೋ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಸೌತ್
30	ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ, ಬೆಂಗಳೂರು
31	ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ನಾರ್ತ್ ಡಿಸ್ಟ್ರಿಕ್ಟ್
32	ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ನಾರ್ತ್
33	ಬಿ ಎನ್ ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
34	ಸಪ್ತಗಿರಿ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು ನಾರ್ತ್
35	ಸಿಟಿ ಇಂಜಿನಿಯರಿಂಗ್ ಕಾಲೇಜ್, ಬೆಂಗಳೂರು ಸೌತ್
36	ಯಲ್ಲಮ್ಮ ದಾಸಪ್ಪ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
37	ಶ್ರೀ ವೆಂಕಟೇಶ್ವರ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು

38 ಶ್ರೀ ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
39 ಸಂಭ್ರಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
40 ಶ್ರೀ ಜಗದ್ಗುರು ಬಾಲಗಂಗಾಧರನಾಥ ಸ್ವಾಮೀಜಿ ಇನ್‌ಸ್ಟಿಟ್ಯೂಟ್, ಬೆಂಗಳೂರು
41 ಆಲ್ಫಾ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು ನಗರ
42 ಆರ್ ಎನ್ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
43 ಎಸ್ ಸಿ ಟಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
44 ಬಿ ಎಂ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಆಂಡ್ ಮೇನೇಜ್‌ಮೆಂಟ್, ಬೆಂಗಳೂರು
45 ಎಂ ಎಸ್ ಇಂಜಿನಿಯರಿಂಗ್ ಕಾಲೇಜ್, ಬೆಂಗಳೂರು
46 ಆಕ್ಸ್‌ಫರ್ಡ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
47 ಪಿ ಇ ಎಸ್ ಸ್ಕೂಲ್ ಆಫ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರೋಡ್, ಬೆಂಗಳೂರು
48 ರಾಜೀವ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
49 ರೇವ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
50 ಜಿ ಎಸ್ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
51 ಟಿ ಜಾನ್ ಇಂಜಿನಿಯರಿಂಗ್ ಕಾಲೇಜ್, ಬೆಂಗಳೂರು
52 ರಾಜರಾಜೇಶ್ವರಿ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
53 ಇಂಪ್ಯಾಕ್ಟ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಿಕಲ್, ಬೆಂಗಳೂರು
54 ಇಸ್ಲಾಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
55 ನಾಡಗೀರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು

02 ಬೆಂಗಳೂರು ಗ್ರಾಮಾಂತರ

56 ಗೌಸಿಯಾ ಇಂಜಿನಿಯರಿಂಗ್ ಕಾಲೇಜ್, ರಾಮನಗರ
57 ಆಚಾರ್ಯ ಪಾಠಶಾಲಾ ರೂರಲ್ ಕಾಲೇಜ್ ಆಫ್ ಇಂಜಿನಿಯರಿಂಗ್, ಸೋಮನಹಳ್ಳಿ
58 ಶಿರಡಿ ಸಾಯಿ ಇಂಜಿನಿಯರಿಂಗ್ ಕಾಲೇಜ್, ಬೆಂಗಳೂರು
59 ವೇಮನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮರಸೂರ್, ಆನೇಕಲ್ ತಾಲ್ಲೂಕು

60 ನಾಗಾರ್ಜುನ ಕಾಲೇಜ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್
61 ಆರ್ ಎಲ್ ಜಯಪ್ಪ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ದೊಡ್ಡಬಳ್ಳಾಪುರ
62 ಜ್ಞಾನವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಿಡದಿ, ಬೆಂಗಳೂರು ರೂರಲ್
63 ಭಗವಾನ್ ಮಹಾವೀರ್ ಜೈನ್ ಕಾಲೇಜ್, ಬೆಂಗಳೂರು ರೂರಲ್ [ಕನಕಪುರ]
64 ಬೆಂಗಳೂರು ಕಾಲೇಜ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಚಂದಾಪುರ, ಬೆಂಗಳೂರು

03 ಬಾಗಲಕೋಟೆ

65 ಬಸವೇಶ್ವರ ಇಂಜಿನಿಯರಿಂಗ್ ಕಾಲೇಜ್, ಬಾಗಲಕೋಟೆ

04 ಬೆಳಗಾಂ

66 ಕೆ ಎಲ್ ಇ ಸೊಸೈಟಿ ಇಂಜಿನಿಯರಿಂಗ್ ಕಾಲೇಜ್, ಬೆಳಗಾಂ
67 ಕೆ ಎಲ್ ಎಸ್ ಗೋಗಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಗಾಂ
68 ಎಸ್ ಎನ್ ಜೆ ಪಿ ಎಸ್ ಎನ್ ಎಂ ರೂರಲ್ ಇಂಜಿನಿಯರಿಂಗ್ ಕಾಲೇಜ್, ನಿಡಸೊಸಿ
69 ಮರಾಠ ಮಂಡಲ್ ಇಂಜಿನಿಯರಿಂಗ್ ಕಾಲೇಜ್, ಬೆಳಗಾಂ
70 ಕೆ ಎಲ್ ಎಸ್ ಇಂಜಿನಿಯರಿಂಗ್ ಕಾಲೇಜ್, ಹಾಲಿಯಾಲ್

05 ಬಳ್ಳಾರಿ

71 ವಿಜಯನಗರ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬಳ್ಳಾರಿ
72 ಬಳ್ಳಾರಿ ಇಂಜಿನಿಯರಿಂಗ್ ಕಾಲೇಜ್, ಬಳ್ಳಾರಿ
73 ವೀರಶೈವ ವಿದ್ಯಾವರ್ಧಕ ಸಂಘ ಇಂಜಿನಿಯರಿಂಗ್, ಹೊಸಪೇಟೆ [ಪ್ರೌಢದೇವರಾಯ ಇಂಜಿನಿಯರಿಂಗ್ ಕಾಲೇಜ್, ಹೊಸಪೇಟೆ]

06 ಬೀದರ್
74 ರೂರಲ್ ಇಂಜಿನಿಯರಿಂಗ್ ಕಾಲೇಜ್, ಭಾಲ್ಕಿ
75 ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜ್, ಬೀದರ್
76 ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜ್, ಬಸವಕಲ್ಯಾಣ

07 ಬಿಜಾಪುರ
77 ಬಿ ಎಲ್ ಡಿ ಇ ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಬಿಜಾಪುರ
78 ಸೆಕಾಬ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಬಿಜಾಪುರ
79 ಮಲ್ಲಿಕ್ ಸ್ಯಾಂಡಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಿಜಾಪುರ

08 ಚಿಕ್ಕಮಗಳೂರು

80 ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿಕ್ಕಮಗಳೂರು

09 ಚಿತ್ರದುರ್ಗ

81 ಎಸ್ ಜೆ ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿತ್ರದುರ್ಗ

10 ದಕ್ಷಿಣ ಕನ್ನಡ

82 ಕೆ ವಿ ಜಿ ಕಾಲೇಜ್ ಆಫ್ ಇಂಜಿನಿಯರಿಂಗ್, ಸುಳ್ಯ
83 ಪಿ ಎ ಕಾಲೇಜ್ ಆಫ್ ಇಂಜಿನಿಯರಿಂಗ್,ಕೈರಂಗಲ್, ಬಂಟ್ವಾಲ್ ತಾಲ್ಲೂಕು
84 ಕೆನರ ಇಂಜಿನಿಯರಿಂಗ್ ಕಾಲೇಜ್, ಬಂಜರ, ಬಂಟ್ವಾಲ್
85 ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಪುತ್ತೂರು
86 ಸೆಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜ್, ಮಂಗಳೂರು

87 ಶ್ರೀನಿವಾಸ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಂಗಳೂರು
88 ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಂಗಳೂರು

11 ಧಾರವಾಡ

89 ಬಿ ವಿ ಬಿ ಕಾಲೇಜ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಹುಬ್ಬಳ್ಳಿ
90 ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇಂಜಿನಿಯರಿಂಗ್ ಕಾಲೇಜ್, ಧಾರವಾಡ

12 ದಾವಣಗೆರೆ

91 ಯೂನಿವರ್ಸಿಟಿ ಬಿ ಡಿ ಟಿ ಕಾಲೇಜ್ ಆಫ್ ಇಂಜಿನಿಯರಿಂಗ್, ದಾವಣಗೆರೆ
92 ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ದಾವಣಗೆರೆ
93 ಜಿ ಎಂ ಇನ್‌ಸ್ಟಿಟ್ಯೂಟ್ ಆಪ್ ಟೆಕ್ನಾಲಜಿ, ದಾವಣಗೆರೆ

13 ಗದಗ್

94 ರೂರಲ್ ಇಂಜಿನಿಯರಿಂಗ್ ಕಾಲೇಜ್, ಹುಲಿಕೋಟೆ
95 ತೋಂಟದಾರ್ಯ ಕಾಲೇಜ್ ಆಫ್ ಇಂಜಿನಿಯರಿಂಗ್, ಗದಗ್
96 ಎಸ್ ಕೆ ಎಸ್ ವಿ ಅಗಡಿ ಕಾಲೇಜ್ ಆಫ್ ಇಂಜಿನಿಯರಿಂಗ್, ಗದಗ್

14 ಗುಲ್ಬರ್ಗಾ

97 ಪಿ ಡಿ ಎ ಕಾಲೇಜ್ ಆಫ್ ಇಂಜಿನಿಯರಿಂಗ್, ಗುಲ್ಬರ್ಗಾ
98 ಖಾಜಾ ಬಂಡೆ ನವಾಜ್ ಕಾಲೇಜ್ ಆಫ್ ಇಂಜಿನಿಯರಿಂಗ್, ಗುಲ್ಬರ್ಗಾ

99 ಅಪ್ಪ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಗುಲ್ಬರ್ಗಾ
100 ಕೆ ಸಿ ಟಿ ಇಂಜಿನಿಯರಿಂಗ್ ಕಾಲೇಜ್, ಗುಲ್ಬರ್ಗಾ

15 ಹಾಸನ
101 ಮಲೆನಾಡ್ ಕಾಲೇಜ್ ಆಫ್ ಇಂಜಿನಿಯರಿಂಗ್, ಹಾಸನ
102 ಬಾಹುಬಲಿ ಕಾಲೇಜ್ ಆಫ್ ಇಂಜಿನಿಯರಿಂಗ್, ಶ್ರವಣಬೆಳಗೊಳ

16 ಹಾವೇರಿ

103 ಎಸ್ ಟಿ ಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಣಿಬೆನ್ನೂರು

17 ಕೊಡಗು

104 ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕುಂದ, ಪೊನ್ನಾಮ್‌ಪೇಟೆ

18 ಕೋಲಾರ್

105 ಗೋಲ್ಡನ್ ವ್ಯಾಲಿ ಎಜುಕೇಷನ್ ಸೊಸೈಟಿ ಆಫ್ ಟೆಕ್ನಾಲಜಿ, ಕೆ ಜಿ ಎಫ್
106 ಎಸ್ ಜೆ ಸಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿಕ್ಕಬಳ್ಳಾಪುರ

19 ಮಂಡ್ಯ

107 ಪಿ ಇ ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್, ಮಂಡ್ಯ
108 ಬಿ ಜಿ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಾಗಮಂಗಲ

20 ಮೈಸೂರು
109 ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು

110 ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು

111 ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಸಂಜೆ), ಮೈಸೂರು

112 ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ (ಸಂಜೆ), ಮೈಸೂರು

113 ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು

114 ವಿದ್ಯಾ ವಿಕಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ಮೈಸೂರು

115 ಜಿ ಎಸ್ ಎಸ್ (ವಿಮೆನ್) ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು

21 ರಾಯಚೂರು

116 ಎಸ್ ಎಲ್ ಎನ್ ಕಾಲೇಜ್ ಆಫ್ ಇಂಜಿನಿಯರಿಂಗ್, ರಾಯಚೂರು

22 ಶಿವಮೊಗ್ಗ

117 ಜವಹಾರ್‌ಲಾಲ್ ನೆಹರು ನ್ಯಾಷನಲ್ ಕಾಲೇಜ್ ಆಫ್ ಇಂಜಿನಿಯರಿಂಗ್, ಶಿವಮೊಗ್ಗ

23 ತುಮಕೂರು

118 ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು

119 ಸಸ್ರೀ ಸಿದ್ದಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು

120 ಕಲ್ಪತರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತಿಪಟೂರು

121 ಹೆಚ್ ಎಂ ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು

122 ಚನ್ನಬಸವೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗುಬ್ಬಿ, ತುಮಕೂರು ಡಿಸ್ಟ್ರಿಕ್ಟ್

123 ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಆಂಡ್ ಟೆಕ್ನಾಲಜಿ, ತುಮಕೂರು

24 ಉಡುಪಿ

124 ಶ್ರೀ ಎನ್ ಎಂ ಎ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಟ್ಟೆ

125 ಮೂಡಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಿಕಲ್ ಕುಂದಾಪುರ, ಉಡುಪಿ

25 ಉತ್ತರ ಕನ್ನಡ

126 ಅಂಜುಮಾನ್ ಇಂಜಿನಿಯರಿಂಗ್ ಕಾಲೇಜ್, ಭಟ್ಕಳ

26 ಚಾಮರಾಜನಗರ ಜಿಲ್ಲೆ ಇಂಜಿನಿಯರಿಂಗ್ ಕಾಲೇಜು ಇಲ್ಲ

27 ಕೊಪ್ಪಳ ಜಿಲ್ಲೆ ಇಂಜಿನಿಯರಿಂಗ್ ಕಾಲೇಜು ಇಲ್ಲ

ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸಾವದಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 315ಕ್ಕೆ ಅನುಬಂಧ-2

ರಾಜ್ಯದಲ್ಲಿರುವ ಪಾಲಿಟೆಕ್ನಿಕ್‌ಗಳ ವಿವರ

ಕ್ರ.ಸಂ	ಪಾಲಿಟೆಕ್ನಿಕ್‌ಗಳ ವಿವರ
	ಬೆಂಗಳೂರು ನಗರ ಜಿಲ್ಲೆ
1	ಸರ್ಕಾರಿ ಎಸ್ ಜೆ ಪಾಲಿಟೆಕ್ನಿಕ್, ಬೆಂಗಳೂರು
2	ಸರ್ಕಾರಿ ಎಸ್ ಜೆ ಪಾಲಿಟೆಕ್ನಿಕ್,(ಸಂಜೆ) ಬೆಂಗಳೂರು
3	ಸರ್ಕಾರಿ ಇನ್‌ಸ್ಟಿಟ್ಯೂಟ್ ಆಫ್ ಪ್ರಿಂಟಿಂಗ್ ಟೆಕ್ನಾಲಜಿ, ಬೆಂಗಳೂರು
4	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು
5	ಸರ್ಕಾರಿ ಜಿ ಆರ್ ಇನ್‌ಸ್ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್, ಬೆಂಗಳೂರು
6	ಸರ್ಕಾರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ಸ್‌ಟೈಲ್ಸ್ ಟೆಕ್ನಾಲಜಿ, ಬೆಂಗಳೂರು
7	ಸರ್ಕಾರಿ ಆರ್ ಸಿ ಇನ್ ಸ್ಟಟ್ಯೂಟ್ ಆಫ್ ಬಿಸಿನೆಸ್ಸ್ ಮ್ಯಾನೆಜ್‌ಮೆಂಟ್, ಬೆಂಗಳೂರು
8	ಸರ್ಕಾರಿ ಫಿಲಂ ಅಂಡ್ ಟಿ ವಿ ಸಂಸ್ಥೆ, ಬೆಂಗಳೂರು
9	ದಯಾನಂದ ಸಾಗರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು .
10	ರೆಡ್ಡಿ ಜನಸಂಘ ಪಾಲಿಟೆಕ್ನಿಕ್, ಕನಕಪುರ
11	ವಿ ಇ ಟಿ ಟಿ ವಿ ಎಲ್ ಬೆಂಗಳೂರು
12	ಆದರ್ಶ ಪಾಲಿಟೆಕ್ನಿಕ್,ಆರ್ ಟಿ ನಗರ
13	ಎಂ ವಿ ಜೆ ಪಾಲಿಟೆಕ್ನಿಕ್, ಚನ್ನಸಂದ್ರ
14	ಪಿಇಎಸ್ ಪಾಲಿಟೆಕ್ನಿಕ್, ಹನುಮಂತನಗರ
15	ಶ್ರೀ ಜಯಚಾಮರಾಜೇಂದ್ರ ಎಜುಕೇಷನ್ ಸೊಸೈಟಿಯ ಪಾಲಿಟೆಕ್ನಿಕ್, ಮೇಡಹಳ್ಳಿ
16	ಕೆಐಇಟಿ ಪಾಲಿಟೆಕ್ನಿಕ್,

17 ದಿ ಆಕ್ಸ್ ಫರ್ಡ್ ಪಾಲಿಟೆಕ್ನಿಕ್, ಜೆ ಪಿ ನಗರ
18 ದಿ ಆಕ್ಸ್ ಫರ್ಡ್ (ಸಂಜೆ) ಪಾಲಿಟೆಕ್ನಿಕ್, ಜೆ ಪಿ ನಗರ
19 ಗೌಸಿಯಾ ಮಹಿಳಾ ಪಾಲಿಟೆಕ್ನಿಕ್, ಹೊಸೂರು ರಸ್ತೆ
20 ಮೆಹಮೂದ್ ಶರೀಫ್ ಪಾಲಿಟೆಕ್ನಿಕ್, ಬೆಂಗಳೂರು
21 ಎಂ ಎನ್ ಟಿ ಇನ್‌ಸ್ಟಿಟ್ಯೂಟ್, ಕಮ್ಮಗೊಂಡನಹಳ್ಳಿ
22 ಎಸ್ ಜೆ ರೆಡ್ಡಿ ಪಾಲಿಟೆಕ್ನಿಕ್, ಮುನ್ನೆಕೊಳಾಲ
23 ಬಿ ಟಿ ಎಲ್ ಪಾಲಿಟೆಕ್ನಿಕ್, ಬೊಮ್ಮಸಂದ್ರ
24 ಸಹಕಾರಿ ವಿದ್ಯಾಕೇಂದ್ರ ಪಾಲಿಟೆಕ್ನಿಕ್, ಜಯನಗರ
25 ವಾಸವಿ ಜ್ಞಾನಪೀಠ ಪಾಲಿಟೆಕ್ನಿಕ್, ವಿಜಯನಗರ
26 ಕಮ್ಮವಾರಿ ಸಂಘ ಪಾಲಿಟೆಕ್ನಿಕ್, ಕನಕಪುರ ರಸ್ತೆ
27 ರಾಜೀವ್ ಗಾಂಧಿ ಮೆಮೊರಿಯಲ್ ಪಾಲಿಟೆಕ್ನಿಕ್, ಬೆಂಗಳೂರು
28 ಆಚಾರ್ಯ ಪಾಲಿಟೆಕ್ನಿಕ್, ಪೀಣ್ಯಾ ಇಂಡಸ್ಟ್ರಿಯಲ್ ಎಸ್ಟೇಟ್
29 ಬಿ ಎಸ್ ಎಫ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಯಲಹಂಕ
30 ಕಾಲ ಭೈರವೇಶ್ವರ ಪಾಲಿಟೆಕ್ನಿಕ್, ಕನಕಪುರ
31 ವಿದ್ಯಾವಿಕಾಸ್ ಪಾಲಿಟೆಕ್ನಿಕ್, ವಿಜಯನಗರ
32 ಎಂ ಎಸ್ ರಾಮಯ್ಯ ಪಾಲಿಟೆಕ್ನಿಕ್, ಮತ್ತಿಕೆರೆ
33 ಭುವನ ಪಾಲಿಟೆಕ್ನಿಕ್, ಯಲಹಂಕ
34 ಐ ಆರ್ ಪಾಲಿಟೆಕ್ನಿಕ್, ಪೀಣ್ಯ 3ನೇ ಹಂತ
35 ರಾಮನ್ ಪಾಲಿಟೆಕ್ನಿಕ್, ಕಾಮಾಕ್ಷಿಪಾಳ್ಯ, ಮಾಗಡಿ ರಸ್ತೆ
36 ಶ್ರೀಮತಿ ಕಮಲಾ ಬಾಯಿ(ಮಹಿಳಾ) ಪಾಲಿಟೆಕ್ನಿಕ್, ಕ್ವೀನ್ಸ್ ರಸ್ತೆ, ಕ್ರಾಸ್ ಕನ್ನಾಟ್ ರಸ್ತೆ
37 ವೆಂಕಟರಾಜು ಪಾಲಿಟೆಕ್ನಿಕ್, ಜೆ ಪಿ ನಗರ
38 ಸಿ ಎಸ್ ಐ ಗುಡ್ವಿಲ್ ಮಹಿಳಾ ಪಾಲಿಟೆಕ್ನಿಕ್, ಫ್ರೇಜರ್ ಟೌನ್
39 ಮಹಾತ್ಮ ಗಾಂಧಿ ಪಾಲಿಟೆಕ್ನಿಕ್, ಬೆಂಗಳೂರು
40 ಟಿ ಇ ಎಸ್ ಪಾಲಿಟೆಕ್ನಿಕ್,ದೊಡ್ಡ ಬಾಣಸವಾಡಿ
41 ಎಸ್ ಸಿ ಟಿ ಪಾಲಿಟೆಕ್ನಿಕ್, ವಿಜ್ಞಾನನಗರ
42 ನಾಡಗೀರ್ ಪಾಲಿಟೆಕ್ನಿಕ್, ರಾಜಾಜಿನಗರ
43 ನಾಡಗೀರ್ ಪಾಲಿಟೆಕ್ನಿಕ್,(ಸಂಜೆ) ರಾಜಾಜಿನಗರ
44 ಆರ್ ಇ ಎನ್ ಪಾಲಿಟಕ್ನಿಕ್, ಸುಂಕದಕಟ್ಟೆ
45 ಬಾಲ್ಡ್ ವಿನ್ ಪಾಲಿಟೆಕ್ನಿಕ್, ಟಿಟಿಹೆಚ್‌ಎಸ್ ಕ್ಯಾಂಪಸ್

46 ಬಿ ಇ ಎಸ್ ಇನ್‌ಸ್ಟಿಟ್ಯೂಟ್ ಆಪ್ ಟೆಕ್ನಾಲಜಿ, ಜಯನಗರ
47 ಸ್ಕೂಲ್ ಆಫ್ ಇಂಜಿನಿಯರಿಂಗ್ (ಎಲ್ ಆರ್ ಡಿ ಇ) ಸಿ ವಿ ರಾಮನ್ ನಗರ
48 ಹೆಚ್ ಇ ಎ ಪಾಲಿಟೆಕ್ನಿಕ್, ಬೆಂಗಳೂರು
49 ಶ್ರೀ ಕೃಷ್ಣ ಪಾಲಿಟೆಕ್ನಿಕ್, ಚಿಕ್ಕ ಬಾಣಾವರ
50 ಜಿ ಟಿ ಟಿ ಸಿ ರಾಜಾಜಿನಗರ ಬೆಂಗಳೂರು
51 ಆಚಾರ್ಯ ಪಾಠಶಾಲಾ ಪಾಲಿಟೆಕ್ನಿಕ್, ಸೋಮನಹಳ್ಳಿ
52 ಎಂ ಇ ಐ ಪಾಲಿಟೆಕ್ನಿಕ್, ರಾಜಾಜಿನಗರ
53 ಎಂ ಇ ಐ ಪಾಲಿಟೆಕ್ನಿಕ್(ಸಂಜೆ), ರಾಜಾಜಿನಗರ
54 ಪಿವಿಪಿ ಪಾಲಿಟೆಕ್ನಿಕ್, ಮಲ್ಲತ್ತಹಳ್ಳಿ
55 ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಕೊಡಿಗೇಹಳ್ಳಿ
56 ಆಲ್ ಖತೀಬ್ ಪಾಲಿಟೆಕ್ನಿಕ್, ಭೂಪಸಂದ್ರ
57 ವೆಂಕಟೇಶ್ವರ ಪಾಲಿಟೆಕ್ನಿಕ್, ಬನ್ನೇರುಘಟ್ಟ
58 ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ ಟೆಕ್ನಾಲಜಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ

59 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ
60 ಎಸ್ ಜೆ ಎಂ ಪಾಲಿಟೆಕ್ನಿಕ್, ನೆಲಮಂಗಲ
61 ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ

ಕೊಪ್ಪಳ ಜಿಲ್ಲೆ
62 ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ
63 ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ
64 ಶ್ರೀ ವಿದ್ಯಾನಂದ ಗುರುಕುಲ ರೂರಲ್ ಪಾಲಿಟೆಕ್ನಿಕ್, ಕುಕ್ಕನೂರು

ಬೆಳಗಾವಿ ಜಿಲ್ಲೆ
65 ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ
66 ರಾಯಬಾಗ್ ಪಾಲಿಟೆಕ್ನಿಕ್, ರಾಯಬಾಗ್
67 ಕೆ ಎಲ್ ಇ ಸೊಸೈಟಿ, ಸಿ ಬಿ ಕೋರ್ ಪಾಲಿಟೆಕ್ನಿಕ್, ಚಿಕ್ಕೋಡಿ

68 ಶ್ರೀ ಆರ್ ಎನ್ ಶೆಟ್ಟಿ ಪಾಲಿಟೆಕ್ನಿಕ್, ಬೆಳಗಾವಿ
69 ಎಸ್ ಎನ್ ಜೆ ಪಿ ಎಸ್ ಎನ್ ಎಂ ಟ್ರಸ್ಟ್, ಪಾಲಿಟೆಕ್ನಿಕ್, ನಿಡಸೋಸಿ
70 ಶ್ರೀ ಲಕ್ಷ್ಮಣರಾವ್ ಜಾರಕಿ ಹೊಳಿ ಪಾಲಿಟೆಕ್ನಿಕ್, ಗೋಕಾಕ್
71 ಕೆ ಎಲ್ ಎಸ್ ವಸಂತರಾವ್ ಪೋತ್ದಾರ್ ಪಾಲಿಟೆಕ್ನಿಕ್, ತಿಲಕವಾಡಿ
72 ಮರಾಠ ಮಂಡಲ್ ಪಾಲಿಟೆಕ್ನಿಕ್, ಬೆಳಗಾವಿ
73 ಗೋಮಟೇಶ್ ಪಾಲಿಟೆಕ್ನಿಕ್, ಹಿಂದವಾಡಿ
74 ಮೋತಿಚಂದ್ ಲಿಂಗಾಡೇ ಭರತೇಶ್ ಪಾಲಿಟೆಕ್ನಿಕ್

ಬಳ್ಳಾರಿ ಜಿಲ್ಲೆ

75 ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ
76 ಸಂಡೂರು ಎಜುಕೇಷನ್ ಸೊಸೈಟಿಯ ಪಾಲಿಟೆಕ್ನಿಕ್, ಯಶವಂತನಗರ
77 ಸಂಜಯಗಾಂಧಿ ಪಾಲಿಟೆಕ್ನಿಕ್, ಬಳ್ಳಾರಿ
78 ವಿ ವಿ ಸಂಘದ ಪಾಲಿಟೆಕ್ನಿಕ್, ಬಳ್ಳಾರಿ
79 ಶ್ರೀ ರೇಣುಕ ಇಂಟಿಗ್ರೇಟೆಡ್ ಪಾಲಿಟೆಕ್ನಿಕ್, ಹಗರಿ ಬೊಮ್ಮನ ಹಳ್ಳಿ
80 ಟಿ ಎಂ ಎ ಇ ಸೊಸೈಟಿಯ ಪಾಲಿಟೆಕ್ನಿಕ್, ಹೊಸಪೇಟೆ
81 ಎಸ್ ಇ ಎಸ್ ಪಾಲಿಟೆಕ್ನಿಕ್, ಸಿರಗುಪ್ಪ

ಬೀದರ್ ಜಿಲ್ಲೆ

82 ಸರ್ಕಾರಿ ಪಾಲಿಟೆಕ್ನಿಕ್, ಬೀದರ್
83 ನಿಟ್ಟೂರು ಪಾಲಿಟೆಕ್ನಿಕ್, ನಿಟ್ಟೂರು
84 ಹರಳಯ್ಯ ಪಾಲಿಟೆಕ್ನಿಕ್, ಬಾಲ್ಕಿ
85 ಜವಹರ್‌ಲಾಲ್ ನೆಹರು ಪಾಲಿಟೆಕ್ನಿಕ್, ಧಾಣಾಕುಶನೂರು

ಬಿಜಾಪುರ ಜಿಲ್ಲೆ

86 ಸರ್ಕಾರಿ ಪಾಲಿಟೆಕ್ನಿಕ್, ಬಿಜಾಪುರ

87 ಬಿ ಎಲ್ ಡಿ ಇ ಅಸೋಸಿಯೇಷನ್ಸ್, ಬಿಜಾಪುರ
88 ಮಲ್ಲಿಕ್ ಸಂಡಲ್ ಪಾಲಿಟೆಕ್ನಿಕ್, ಬಿಜಾಪುರ

ಚಿಕ್ಕಮಗಳೂರು ಜಿಲ್ಲೆ
89 ಡಿ ಎ ಸಿ ಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು ಜಿಲ್ಲೆ
90 ಎಸ್ ಜೆ ಎಂ ವಿದ್ಯಾಪೀಠ ಪಾಲಿಟೆಕ್ನಿಕ್, ಬೀರೂರು
91 ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ ಪಾಲಿಟೆಕ್ನಿಕ್, ಚಿಕ್ಕಮಗಳೂರು ಜಿಲ್ಲೆ

ಚಿತ್ರದುರ್ಗ ಜಿಲ್ಲೆ
92 ಜ್ಞಾನ ವಿಕಾಸ ಪಾಲಿಟೆಕ್ನಿಕ್, ಕಬೀರ್ ಮೌಲಾ ಆಶ್ರಮ ರಸ್ತೆ
93 ಎಸ್ ಜೆ ಎಂ ಪಾಲಿಟೆಕ್ನಿಕ್, ಚಳ್ಳಕೆರೆ
94 ಜಗದ್ಗುರು ಮುರುಘರಾಜೇಂದ್ರ ಪಾಲಿಟೆಕ್ನಿಕ್, ಚಿತ್ರದುರ್ಗ

ದಕ್ಷಿಣ ಕನ್ನಡ ಜಿಲ್ಲೆ
95 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು
96 ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು
97 ವಿವೇಕಾನಂದ ಪಾಲಿಟೆಕ್ನಿಕ್, ಪುತ್ತೂರು
98 ಕೆ ವಿ ಜಿ ಪಾಲಿಟೆಕ್ನಿಕ್, ಸುಳ್ಯ
99 ಎಸ್ ಎನ್ ಮೂಡಬಿದಿರೆ ಪಾಲಿಟೆಕ್ನಿಕ್, ಮೂಡಬಿದಿರೆ

ದಾರವಾಡ ಜಿಲ್ಲೆ
100 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ
101 ಕೆ ಎಲ್ ಇ ಸೊಸೈಟಿಯ ಪಾಲಿಟೆಕ್ನಿಕ್, ಹುಬ್ಬಳ್ಳಿ
102 ಸೆಂಟ್ ಜಾನ್ಸ್ ಪಾಲಿಟೆಕ್ನಿಕ್, ಕೇಶವಪುರ, ಹುಬ್ಬಳ್ಳಿ
103 ನಳಂದ ಫೌಂಡೇಷನ್ ಪಾಲಿಟೆಕ್ನಿಕ್, ಹುಬ್ಬಳ್ಳಿ
104 ಕೆ ಹೆಚ್ ಕೆ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಪಾಲಿಟೆಕ್ನಿಕ್, ವಿದ್ಯಾಗಿರಿ
105 ಕೆ ಹೆಚ್ ಕೆ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಪಾಲಿಟೆಕ್ನಿಕ್(ಸಂಜೆ), ವಿದ್ಯಾಗಿರಿ

106 ಟಿಪ್ಪು ಶಹೀದ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಹುಬ್ಬಳ್ಳಿ
107 ಎಸ್ ಜೆ ಇ ಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ

ಗುಲ್ಬರ್ಗಾ ಜಿಲ್ಲೆ

108 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ
109 ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗಾ
110 ವಿ ಇ ಎಸ್ ಯಾದಗೀರ್ ಪಾಲಿಟೆಕ್ನಿಕ್, ಯಾದಗೀರ್
111 ಶ್ರೀ ಷಣ್ಮುಖ ಶಿವಯೋಗಿ ರೂರಲ್ ಪಾಲಿಟೆಕ್ನಿಕ್, ಜೇವರ್ಗಿ
112 ಹೆಚ್ ಕೆ ಇ ಸೊಸೈಟಿಯ ಬಾಯ್ಸ್ ಪಾಲಿಟೆಕ್ನಿಕ್, ಗುಲ್ಬರ್ಗಾ
113 ಹೆಚ್ ಕೆ ಇ ಸೊಸೈಟಿಯ ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ
114 ಎನ್ ಇ ಎಸ್ ಪಾಲಿಟೆಕ್ನಿಕ್, ಚಿತ್ತಾಪುರ
115 ಎನ್ ವಿ ಎಸ್ ಪಾಲಿಟೆಕ್ನಿಕ್, ಗುಲ್ಬರ್ಗಾ
116 ಕೆ ಎಸ್ ಟಿ ಪಾಲಿಟೆಕ್ನಿಕ್, ಗುಲ್ಬರ್ಗಾ

ಗದಗ ಜಿಲ್ಲೆ

117 ಎಸ್ ಟಿ ಎಸ್ ಕೆ ಕೆ ಪಾಲಿಟೆಕ್ನಿಕ್, ಗಧಗ್
118 ಅಂಜುಮಾನ್ – ಎ – ಇಸ್ಲಾಮ್ ಪಾಲಿಟೆಕ್ನಿಕ್, ಗದಗ
119 ಆರ್ ಟಿ ಇ ಸೊಸೈಟಿಯ ರೂರಲ್ ಪಾಲಿಟೆಕ್ನಿಕ್, ಹುಲಿಕೋಟೆ

ಹಾಸನ ಜಿಲ್ಲೆ

120 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ
121 ಶ್ರೀಮತಿ ಎಲ್ ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ
122 ಶ್ರೀ ಬಾಹುಬಲಿ ಪಾಲಿಟೆಕ್ನಿಕ್, ಶ್ರವಣ ಬೆಳಗೊಳ

ಹಾವೇರಿ ಜಿಲ್ಲೆ

123 ಕೆ ಎಲ್ ಇ ಸೊಸೈಟೀಸ್ ಸಿ ಬಿ ಕೊಲ್ಲಿ ಪಾಲಿಟೆಕ್ನಿಕ್, ಹಾವೇರಿ
124 ಎಂ ವಿ ಪಿ ರೂರಲ್ ಪಾಲಿಟೆಕ್ನಿಕ್, ಹಂಸಬಾವಿ.

ಕೊಡಗು ಜಿಲ್ಲೆ

125 ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ
126 ಕಾವೇರಿ ಪಾಲಿಟೆಕ್ನಿಕ್, ಗೋಣಿಕೊಪ್ಪಲ್

ಕೋಲಾರ ಜಿಲ್ಲೆ

127 ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ
128 ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ
139 ಸರ್ಕಾರಿ ಸ್ಕೂಲ್ ಆಫ್ ಮೈನ್ಸ್, ಕೆ ಜಿ ಎಫ್
130 ಪವನ್ ಪಾಲಿಟೆಕ್ನಿಕ್, ಕೋಲಾರ
131 ಆನಂದಮಾರ್ಗ ಪಾಲಿಟೆಕ್ನಿಕ್, ಮಾಲೂರು ತಾಲ್ಲೂಕು
132 ಕೆ ಜೆ ಟಿ ಇ ಟಿ ಪಾಲಿಟೆಕ್ನಿಕ್, ಮುಳಬಾಗಿಲು
133 ಬಾರತ್ ಪಾಲಿಟೆಕ್ನಿಕ್, ಬಂಗಾರುಪೇಟೆ
134 ರಾಮಕೃಷ್ಣ ಪಾಲಿಟೆಕ್ನಿಕ್, ಶ್ರೀನಿವಾಸಪುರ
135 ಕೆ ವಿ ಟಿ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ

ಮಂಡ್ಯ ಜಿಲ್ಲೆ

136 ಸರ್ಕಾರಿ ಪಾಲಿಟೆಕ್ನಿಕ್, ಕೆ ಆರ್ ಪೇಟೆ
137 ಬಿ ಇ ಟಿ ಪಾಲಿಟೆಕ್ನಿಕ್, ಕೆ ಎಂ ದೊಡ್ಡಿ, ಮದ್ದೂರು ತಾಲ್ಲೂಕು
138 ಎಸ್ ಇ ಟಿ ಪಾಲಿಟೆಕ್ನಿಕ್, ಮೇಲುಕೋಟೆ

ಮೈಸೂರು ಜಿಲ್ಲೆ

139 ಸಿ ಪಿ ಸಿ (ಸರ್ಕಾರಿ) ಪಾಲಿಟೆಕ್ನಿಕ್, ಮೈಸೂರು
140 ಜೆ ಎಸ್ ಎಸ್ ಮಹಾವಿದ್ಯಾಪೀಠ ಪಾಲಿಟೆಕ್ನಿಕ್, ಮೈಸೂರು
141 ಶ್ರೀಮತ್ ಪಾಲಿಟೆಕ್ನಿಕ್, ಮೈಸೂರು
142 ಶ್ರೀ ಗುರುಮಲ್ಲೇಶ್ವರ ಪಾಲಿಟೆಕ್ನಿಕ್, ದೇವನೂರು
143 ವಿದ್ಯಾವಿಕಾಸ್ ಪಾಲಿಟೆಕ್ನಿಕ್,ಇಂದಿರಾನಗರ, ಮೈಸೂರು
144 ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್, ಮೈಸೂರು
145 ಫರೂಕಿಯಾ ಪಾಲಿಟೆಕ್ನಿಕ್, ಮೈಸೂರು
146 ಜೆ ಎಸ್ ಎಸ್ ಅಂಗವಿಕಲರ ಪಾಲಿಟೆಕ್ನಿಕ್, ಮೈಸೂರು
147 ಜೆ ಎಸ್ ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು
148 ಜೆ ಎಸ್ ಎಸ್ ಪಾಲಿಟೆಕ್ನಿಕ್, ನಂಜನಗೂಡು
149 ಡಿ ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು

ರಾಯಚೂರು ಜಿಲ್ಲೆ

150 ಹೈದರಾಬಾದ್ ಕರ್ನಾಟಕ ಎಜುಕೇಷನ್ ಸೊಸೈಟಿಯ ಪಾಲಿಟೆಕ್ನಿಕ್,

151 ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು

ತುಮಕೂರು ಜಿಲ್ಲೆ

152 ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು

153 ಸಿದ್ದಗಂಗಾ ಪಾಲಿಟೆಕ್ನಿಕ್, ತುಮಕೂರು

154 ಎಂ ಇ ಎಸ್ ಪಾಲಿಟೆಕ್ನಿಕ್, ಮಧುಗಿರಿ

155 ಆರ್ಯಭಾರತಿ ಪಾಲಿಟೆಕ್ನಿಕ್, ತುಮಕೂರು

156 ಶ್ರೀ ಸಿದ್ದರಾಮೇಶ್ವರ ಪಾಲಿಟೆಕ್ನಿಕ್, ತಿಪಟೂರು

157 ಹೆಚ್ ಎಂ ಎಸ್ ಪಾಲಿಟೆಕ್ನಿಕ್, ತುಮಕೂರು

ಉಡುಪಿ ಜಿಲ್ಲೆ

158 ಟಿ ಎಂ ಎ ಪೈ ಪಾಲಿಟೆಕ್ನಿಕ್, ಮಣಿಪಾಲ

159 ಶ್ರೀ ನರಂಜನ ಸ್ವಾಮಿ ಪಾಲಿಟೆಕ್ನಿಕ್, ಸುಂಕದಕಟ್ಟೆ

160 ಇಂದಿರಾ ಶಿವರಾವ್ ಪಾಲಿಟೆಕ್ನಿಕ್, ಉಡುಪಿ

161 ಎನ್ ಎ ಆರ್ ಎಂ ಪಾಲಿಟೆಕ್ನಿಕ್, ನಟ್ಟೆ

ಉತ್ತರ ಕನ್ನಡ ಜಿಲ್ಲೆ

162 ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ

163 ಶ್ರೀ ಉಳ್ವಿ ಚನ್ನಬಸವೇಶ್ವರ ಪಾಲಿಟೆಕ್ನಿಕ್, ದಾಂಡೇಲಿ

164 ಆರ್ ಎನ್ ಶೆಟ್ಟಿ ರೂರಲ್ ಪಾಲಿಟೆಕ್ನಿಕ್, ಮುರುಡೇಶ್ವರ

165 ಆರ್ ಎನ್ ಶೆಟ್ಟಿ ಪಾಲಿಟೆಕ್ನಿಕ್,ಶಿರಸಿ

166 ವಿದ್ಯಾಧಿರಾಜ ಪಾಲಿಟೆಕ್ನಿಕ್, ಕುಮಟ

ಶಿವಮೊಗ್ಗ ಜಿಲ್ಲೆ

167 ಸರ್ಕಾರಿ ಪಾಲಿಟೆಕ್ನಿಕ್, ಸೊರಬ

168 ಸರ್ಕಾರಿ ವಿಐಎಸ್ಎಸ್‌ಜೆ ಪಾಲಿಟೆಕ್ನಿಕ್, ಭದ್ರಾವತಿ

169 ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ

170 ಟಿ ಎಂ ಎ ಇ ಸೊಸೈಟಿಯ ಪಾಲಿಟೆಕ್ನಿಕ್, ಭದ್ರಾವತಿ
171 ಸಂಜಯ್ ಮೆಮೊರಿಯಲ್ ಪಾಲಿಟೆಕ್ನಿಕ್, ಸಾಗರ
172 ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ
173 ಡಿ ವಿ ಎಸ್ ಪಾಲಿಟೆಕ್ನಿಕ್, ಶಿವಮೊಗ್ಗ

ಬಾಗಲಕೋಟೆ

174 ಟಿ ಎಂ ಇ ಅಸೋಸಿಯೇಷನ್‌ನ ಸಿವಿಸಿ ರೂರಲ್ ಪಾಲಿಟೆಕ್ನಿಕ್, ಹುನಗುಂದ
175 ಬಿ ವಿ ವಿ ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ
176 ವಸ್ತ್ರದ ರೂರಲ್ ಪಾಲಿಟೆಕ್ನಿಕ್, ಗುಳೇದಗುಡ್ಡ

ದಾವಣಗೆರೆ ಜಿಲ್ಲೆ

177 ಡಿ ಆರ್ ಆರ್ ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ
178 ಎಸ್ ಟಿ ಜೆ ಪಾಲಿಟೆಕ್ನಿಕ್, ಹರಪ್ಪನಹಳ್ಳಿ
179 ಬಾಪೂಜಿ ಪಾಲಿಟೆಕ್ನಿಕ್, ಶಾಬನೂರು

ಚಾಮರಾಜನಗರ ಜಿಲ್ಲೆ

180 ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ

ಶ್ರೀ ಸಿದ್ದು ಸಾವದಿ (ಜಮಖಂಡಿ)146(317)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಹನ್ನೆರಡನೆಯ ಹಣಕಾಸು ಯೋಜನೆಯ ಮತ್ತು ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆಗಳಲ್ಲಿ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು,

ಆ) ಈ ರಸ್ತೆಗಳನ್ನು ಯಾವ ರೀತಿ ಅಭಿವೃದ್ಧಿಪಡಿಸಲಾಗುವುದು,

ಇ) ಜಮಖಂಡಿ ತಾಲ್ಲೂಕಿನಲ್ಲಿ ಎರಡೂ ಯೋಜನೆಗಳ ಹಣವನ್ನು ತಾಲ್ಲೂಕಿನಲ್ಲಿ ಇದ್ದ ಬಹುತೇಕ ರಸ್ತೆಗಳಲ್ಲಿ ಅರ್ಧ ಕಿಲೋ ಮೀಟರ್ ಅಥವಾ ಒಂದು ಕಿಲೋ ಮೀಟರ್ ರಸ್ತೆಗಳನ್ನು ಆಯ್ಕೆ ಮಾಡಿದ್ದರಿಂದ ಯಾವ ಒಂದೂ ರಸ್ತೆಗಳು ಪೂರ್ತಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ನಿಯಮ ಬಾಹಿರವಾಗಿ ತಯಾರಿಸಿದ ಕ್ರಿಯಾ ಯೋಜನೆಯ ಮೇಲೆ ಏನು ಕ್ರಮ ಜರುಗಿಸಲಾಗುವುದು?

ಶ್ರೀ ಸಿ ಎಂ ಉದಾಸಿ

ಅ) 2007-08ನೇ ಸಾಲಿನಲ್ಲಿ 12ನೇ ಹಣಕಾಸು ಆಯೋಗ ಯೋಜನೆ ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (ಲೆಕ್ಕಶೀರ್ಷಿಕೆ-3054) ಯಡಿ ಒದಗಿಸಲಾದ ಅನುದಾನದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಲ್ಲಿ ಮೇಲ್ಮೈ ಹೊಂದಿರುವ ಹಾಗೂ ಡಾಂಬರು ಗ್ರಾಮೀಣ ರಸ್ತೆಗಳ ನಿರ್ವಹಣೆಯನ್ನು ಕೈಗೊಳ್ಳಲಾಗುವುದುಆ) ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (ಲೆಕ್ಕಶೀರ್ಷಿಕೆ-3054) ಮತ್ತು 12ನೇ ಹಣಕಾಸು ಆಯೋಗದ ಶಿಫಾರಸ್ಸಿನಡಿ ಒದಗಿಸಲಾದ ಅನುದಾನದಲ್ಲಿ ಶೇಕಡಾ10ರಷ್ಟು ಡಾಂಬರೀಕರಣಗೊಂಡ ರಸ್ತೆಗಳನ್ನು ಮತ್ತು ಶೇಕಡ 20ರಷ್ಟು ಜಲ್ಲಿ ರಸ್ತೆಗಳನ್ನು ನಿರ್ವಹಣೆ ಮಾಡಲಾಗುವುದು

ಇ) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಜಿಲ್ಲಾ ಪಂಚಾಯತಿಗೆ ಒದಗಿಸಲಾದ ಅನುದಾನಕ್ಕನುಗುಣವಾಗಿ ತುರ್ತು ಮತ್ತು ಅಗತ್ಯವಿರುವ ರಸ್ತೆ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತಿಗಳು ತಯಾರಿಸಿ ಸಾಮಾನ್ಯ ಸ್ಥಾಯಿ ಸಮಿತಿ ಅನುಮೋದನೆ ಪಡೆಯಲಾಗುತ್ತಿದ್ದು, ನಿಯಮಾನುಸಾರ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ

ಶ್ರೀ ಸಿದ್ದು ಸಾವದಿ (ಜಮಖಂಡಿ)147(318)

ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ವೈಯಕ್ತಿಕವಾಗಿ ಕಟ್ಟಿಸಿಕೊಂಡ ಶೌಚಾಲಯಗಳ ಸಂಖ್ಯೆ ಎಷ್ಟು ಮತ್ತು ಅವುಗಳಿಗೆ ಒದಗಿಸುವ ಸಹಾಯಧನ ಎಷ್ಟು,

ಆ) ಸಹಾಯದನ ಪಡೆದ ಎಲ್ಲಾ ಶೌಚಾಲಯಗಳನ್ನು ಉಪಯೋಗಿ ಸುತ್ತಾರೆಯೇ ಇಲ್ಲವಾದಲ್ಲಿ ಕಾರಣಗಳೇನು,

ಇ) ಕೇವಲ ರೂ 1200/- ಹಣದ ಸಹಾಯಧನದಲ್ಲಿ ಅಷ್ಟೊಂದು ಜನಾಕರ್ಷಣೆ ಇಲ್ಲದಿರುವುದರಿಂದ ಪೂರ್ಣವಾಗಿ ಸರ್ಕಾರವೇ ಮನೆ ಗೊಂದು ಶೌಚಾಲಯವನ್ನು ಏಕೆ ಕಟ್ಟಿಸಿಕೊಡಬಾರದು

ಈ) ಕನಿಷ್ಟ ಪಕ್ಷ ಬಡತನ ರೇಖೆಗಿಂತ ಕೆಳಗಿರುವ ಬಡವರಿಗಾದರೂ ಉಚಿತವಾಗಿ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಿಸಿಕೊಡುವ ಯೋಚನೆ ಇದೆಯೇ ಇಲ್ಲವಾದಲ್ಲಿ ಕಾರಣಗಳನ್ನು ತಿಳಿಸುವುದು

ಶ್ರೀ ಎಸ್ ಎ ರವೀಂದ್ರನಾಥ್

ಅ) ರಾಜ್ಯದಲ್ಲಿ ಈವರೆಗೆ ಸಂಪೂರ್ಣ ಸ್ವಚ್ಛತಾ ಆಂದೋಲನ ದಡಿಯಲ್ಲಿ 752228 ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಂಡು

ಬಳಕೆ ಮಾಡತೊಡಗಿದರೆ ಮಾತ್ರ ರೂ 1200/- (ಸಾವಿರದ ಎರಡು ನೂರು ರೂಪಾಯಿಗಳು) ಗಳನ್ನು ಸಹಾಯಧನವಾಗಿ ನೀಡಲಾಗುತ್ತಿದೆ

ಆ) ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ ನಿರ್ಮಾಣಗೊಂಡು ಸಹಾಯಧನ ಪಡೆದ ಕುಟುಂಬಗಳಲ್ಲಿನ ಎಲ್ಲಾ ಶೌಚಾಲಯಗಳು ಬಳಕೆಯಲ್ಲಿವೆ

ಇ) ಜನರ ಬೇಡಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಸಮುದಾಯದ ನೇತೃತ್ವದೊಂದಿಗೆ ಶೌಚಾಲಯ ನಿರ್ಮಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವುದು ಹಾಗೂ ಸಮುದಾಯವು ಪೂರ್ಣವಾಗಿ ಭಾಗವಹಿಸುವಂತೆ ಉತ್ತೇಜಿಸುವುದು ಸಂಪೂರ್ಣ ಸ್ವಚ್ಛತಾ ಆಂದೋಲನದ ಮುಖ್ಯ ಉದ್ದೇಶ ವಾಗಿರುತ್ತದೆ

ಈ ಹಿನ್ನೆಲೆಯಲ್ಲಿ ಗ್ರಾಮೀಣ ಜನರಿಗೆ ಅವಶ್ಯವಿರುವ ಶೌಚಾಲಯಗಳನ್ನು ತಾವೇ ಸ್ವತಃ ನಿರ್ಮಿಸಿಕೊಳ್ಳುವಂತೆ ಮಾಡಲು ಮಾಹಿತಿ, ಶಿಕ್ಷಣ, ಸಂವಹನ ಕಾರ್ಯಕ್ರಮಗಳ ಮೂಲಕ ಉತ್ತೇಜಿಸಲಾಗುತ್ತಿದೆ

ಈ) ಇಲ್ಲ

ಸಂಪೂರ್ಣ ಸ್ವಚ್ಛತಾ ಆಂದೋಲನವು ಬೇಡಿಕೆಯಾದಾರಿತ ಕಾರ್ಯಕ್ರಮ ವಾಗಿದ್ದು, ಸಮುದಾಯದ ನೇತೃತ್ವ ಹಾಗೂ ಭಾಗವಹಿ ಸುವಿಕೆಗಳ ಮೂಲಕ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಮುಖ್ಯ ಉದ್ದೇಶವಾಗಿರುತ್ತದೆ

ಶ್ರೀ ಸೋಮಲಿಂಗಪ್ಪ ಎಂ ಎಸ್ (ಸಿರಗುಪ್ಪ)148(226)

ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿರಗುಪ್ಪ ತಾಲ್ಲೂಕಿನಲ್ಲಿ ಹರಿಯುವ ತುಂಗಭದ್ರಾ ನದಿಗೆ ಹೆರಕಲ್ಲು, ದಡೇಸೂಗೂರು, ಹಚ್ಚೋಳ್ಳಿ, ಬ್ಯಾರೇಜ್ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ ಎಸ್ ಈಶ್ವರಪ್ಪ

ಅ) ಸದ್ಯಕ್ಕೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

ಶ್ರೀ ಸೋಮಣ್ಣ (ಬಿನ್ನಿಪೇಟೆ)149(349)

ಮಾನ್ಯ ಉನ್ನತ ಶಿಕ್ಷಣ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಹಂಪಿ ಕನ್ನಡ ವಿಶ್ವವಿದ್ಯಾಲಯವು ಹೊರತಂದಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯು ಅನುಮೋದಿಸಿರುವ ಕರ್ನಾಟಕ ದ್ವಿತೀಯ ಸಮಾಜಶಾಸ್ತ್ರ ಪರ್ಯದ 6ನೇ ಅಧ್ಯಾಯದಲ್ಲಿ ವಿಶ್ವಕರ್ಮ ಜನಾಂಗದ ವಿರುದ್ಧ ವಿವಾದಾತ್ಮಕ ಬರಹವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಸಮುದಾಯವನ್ನು ಎಡಜಾತಿ ಎಂದು ಗುರ್ತಿಸಿರುವುದರ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು,

ಇ) ಈ ಪುಸ್ತಕವನ್ನು ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಡಿ ಹೆಚ್ ಶಂಕರಮೂರ್ತಿ

ಅ) ಬಂದಿದೆ

ಆ) ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು ಈಗಾಗಲೇ ಈ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ, ಈ ಪುಸ್ತಕದ ಮಾರಾಟವನ್ನು ದಿ 14-06-2007ರಿಂದ ಸ್ಥಗಿಗೊಳಿಸಲಾಗಿದೆ ಆಕ್ಷೇಪಿತ ವಿಷಯವನ್ನು ಪಠ್ಯಪುಸ್ತಕ ದಿಂದ ತೆಗೆದುಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)150(342)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ 2005-06ರಿಂದ ಇಲ್ಲಿಯವರೆಗೆ ಕೊಟ್ಟಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಎಷ್ಟು ಶಾಲೆಗಳನ್ನು ನೀಡಲಾಗಿದೆ,

ಇ) ಇದುವರೆಗೂ ಎಷ್ಟು ಬೇಡಿಕೆಗಳು ಬಂದಿವೆ,

ಈ) ಹಂಚಿಕೆ ಮಾಡಲು ಅನುಸರಿಸುವ ಕ್ರಮಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ

ಅ) ಸರ್ವ ಶಿಕ್ಷಣ ಅಭಿಯಾನದಡಿ ಮಂಜೂರಾದ ಸರ್ಕಾರಿ ಪ್ರಾಥಮಿಕ ಶಾಲೆಗಳು

2005–06 –ಮಂಜೂರಾತಿ ಇಲ್ಲ

2006–07–716

2007–08–655

ಒಟ್ಟು –1371

ಸರ್ಕಾರಿ ಪ್ರೌಢ ಶಾಲೆಗಳು

2005–06–126

2006–07–485

2007–08–199

ಒಟ್ಟು –810

ಆ) ಮಂಜೂರು ಮಾಡಿರುವ ಸರ್ಕಾರಿ ಪ್ರೌಢ ಶಾಲೆಗಳ ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ

ಇ) ಸರ್ಕಾರಕ್ಕೆ 707 ಬೇಡಿಕೆಗಳು/ಪ್ರಸ್ತಾವನೆಗಳು ಬಂದಿರುತ್ತವೆ

ಈ) ಸ್ಥಳೀಯ ಅಗತ್ಯತೆ ಹಾಗೂ ಆಯವ್ಯಯದ ಲಭ್ಯತೆಗನುಸಾರ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗುವುದು

ಡಾ ನಂಜುಂಡಪ್ಪ ವರದಿಯಂತೆ ಅತಿ ಹಿಂದುಳಿದ, ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ

ಜನರ ಪ್ರತಿನಿಧಿಗಳ ಶಾಸಕರುಗಳ ಮನವಿ

5 ಕಿಮೀ ಅಂತರದಲ್ಲಿ ಸರ್ಕಾರಿ ಅಥವಾ ಖಾಸಗಿ ಪ್ರೌಢ ಶಾಲೆಗಳು ಇಲ್ಲದೇ ಇರುವ ಸ್ಥಳ [ನಗರ ಪ್ರದೇಶಗಳನ್ನು ಹೊರತುಪಡಿಸಿ]

ಕನಿಷ್ಠ 50 ಮಕ್ಕಳ ದಾಖಲಾಗುವಂತಿರಬೇಕು

2ರಿಂದ 5 ಎಕರೆ ನಿವೇಶನ ದೊರಕುವಂತಿರಬೇಕು [ನಗರ ಪ್ರದೇಶಗಳನ್ನು ಹೊರತುಪಡಿಸಿ]

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)151(344)

ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ಕುಡಿಯುವ ನೀರಿನ ಕೊಳವೆ ಬಾವಿಗಳೆಷ್ಟು,

ಆ) ಎಷ್ಟು ಕೊಳವೆ ಬಾವಿಗಳು ದುರಸ್ಥಿಗೊಳಗಾಗಿವೆ,

ಇ) ರಾಜ್ಯದಲ್ಲಿ ಕುಡಿಯುವ ನೀರಿನ ಹಾಹಾಕಾರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಬಂದಿದ್ದಲ್ಲಿ, ಕುಡಿಯುವ ನೀರಿನ ಹಾಹಾಕಾರ ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್ ಎ ರವೀಂದ್ರನಾಥ್

ಅ) ಮಾರ್ಚ್ 2007ರ ಅಂತ್ಯಕ್ಕೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಕುಡಿಯುವ ನೀರಿನ ವ್ಯವಸ್ಥೆಗಾಗಿ ವಿವಿಧ ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಸುಮಾರು 2 42 ಲಕ್ಷ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ

ಆ) ಈ ಪೈಕಿ ಸುಮಾರು 54,426 ಕೊಳವೆ ಬಾವಿಗಳು ದುರಸ್ಥಿಗೊಳಗಾಗಿವೆ

ಇ) ಹಲವು ಗ್ರಾಮಗಳಲ್ಲಿ ನೀರು ಪೂರೈಕೆ ಪ್ರಮಾಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಈ) 40 LPCDಗಿಂತ ಕಡಿಮೆ ನೀರು ಪೂರೈಕೆಯಾಗುತ್ತಿರುವ ಗ್ರಾಮಗಳಲ್ಲಿ ನೀರು ಸರಬರಾಜು ಪ್ರಮಾಣ ಉತ್ತಮಪಡಿಸಲು ಅಗತ್ಯ ಕ್ರಿಯಾ ಯೋಜನೆಗಳನ್ನು ರೂಪಿಸಲು ಜಿಲ್ಲಾ ಪಂಚಾಯತ್‌ಗಳಿಗೆ ಈಗಾಗಲೇ ಸೂಚಿಸಲಾಗಿದೆ ತುರ್ತು ಸಂದರ್ಭಗಳಲ್ಲಿ ಸ್ಥಳೀಯ ಅವಶ್ಯಕತೆಯನುಸಾರ ಆದ್ಯತೆ ಮೇಲೆ ಪರಿಹಾರ ಒದಗಿಸಲು ತಾಲ್ಲೂಕುವಾರು ನಿಯಂತ್ರಣಾ ಕೊಠಡಿಗಳನ್ನು ತೆರೆಯಲಾಗಿದೆ ಜೊತೆಗೆ ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್‌ಫೋರ್ಸ್ ಸಮಿತಿಗಳು ಸಹ ತುರ್ತು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸ್ಪಂದಿಸುತ್ತಿವೆ

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ
ಐದನೇ ಅಧಿವೇಶನದ ಮುಂದುವರೆದ ಉಪವೇಶನ
ಗುರುವಾರ 12 ನೇ ಜುಲೈ 2007 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಗಳಿಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರಾದ ಶ್ರೀ ಕೃಷ್ಣ ರವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರು ನೆ ಲ ನರೇಂದ್ರಬಾಬು

(ಮಾನ್ಯ ಸದಸ್ಯರಾದ ನೆ ಲ ನರೇಂದ್ರಬಾಬುರವರು ಸದನಕ್ಕೆ ಗೈರು ಹಾಜರಾಗಿದ್ದರು)

ಅಧ್ಯಕ್ಷರು ಜೆ ನರಸಿಂಹ ಸ್ವಾಮಿಯವರೆ, ಪ್ರಶ್ನೆ ಕೇಳಿ

ಗ್ರಾಮೀಣ ಪ್ರದೇಶದಲ್ಲಿ ವೈಧ್ಯಾಧಿಕಾರಿಗಳು

47 (236) ಶ್ರೀ ನರಸಿಂಹ ಜೆ (ದೊಡ್ಡಬಳ್ಳಾಪುರ)

ಮಾನ್ಯ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಗ್ರಾಮಾಂತರ ಪ್ರದೇಶಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗರೆ ನೇಮಕಗೊಂಡಿರುವ ವೈಧ್ಯಾದಿಕಾರಿಗಳು ಸರಿಯಾಗಿ ಕರ್ತವ್ಯಕ್ಕೆ ಹಾಜರಾಗದೇ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ವಸತಿ ಸಮಸ್ಯೆ ಇರುವುದರಿಂದ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು ವೈದ್ಯರು ತಿಳಿಸುತ್ತಿದ್ದು ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಇ) ತಾಲ್ಲೂಕುಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರನ್ನು ಅಂತ ತಾಲ್ಲೂಕಿಗೆ ನಿಯೋಜನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ವೈಧ್ಯಾಧಿಕಾರಿಯಾಗಿ ನಿಯೋಜಿಸಿದ ಸ್ಥಳಕ್ಕೆ ಹೋಗದೆ ಹಾಗೂ ಈ ಹುದ್ದೆಯನ್ನು ಬೇರೆ ವೈಧ್ಯಾದಿಕಾರಿಗಳಿಂದ ತುಂಬಲು ಆಗದೆ ಉಂಟಾಗಿರುವ ತಾಂತ್ರಿಕ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಆರ್ ಅಶೋಕ್

ಅ) ಬಂದಿದೆ

ಆ) ರಾಜ್ಯದಲ್ಲಿ 1679 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು 932 ಕೇಂದ್ರಗಳಲ್ಲಿ ವಸತಿ ಗೃಹಗಳು ಇರುತ್ತದೆ 747 ಕೇಂದ್ರಗಳಲ್ಲಿ ವಸತಿ

ಗೃಹ ಕಟ್ಟಬೇಕಾಗಿದೆ 38 ಕೇಂದ್ರಗಳಲ್ಲಿ ಹೊಸ ವಸತಿ ಗೃಹ ನಿರ್ಮಾಣ ಮಾಡಲು ಕೆ ಹೆಚ್ ಎಸ್ ಡಿ ಆರ್ ಪಿ ವತಿಯಿಂದ ಯೋಜಿಸಲಾಗಿದೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ವಸತಿ ಗೃಹ ಇಲ್ಲದ ಕಡೆ ವಸತಿ ಸೌಕರ್ಯಕ್ಕಾಗಿ ರೂ 1000/- ವಸತಿ ಭತ್ಯೆ ನೀಡಲಾಗುತ್ತಿದೆ

ಇ) ಬಂದಿದೆ

ಈ) ವರ್ಗಾವಣೆಯಿಂದ ನೇಮಕಾತಿಯಿಂದ ನೇಮಿಸಿದ ಸ್ಥಳಕ್ಕೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದರೆ ಅಂತಹವರ ಇವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ ಆ ಸ್ಥಳ ಖಾಲಿ ಇದ್ದಲ್ಲಿ ಅಂತಹ ಸ್ಥಳಕ್ಕೆ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಎಂಬಿಬಿಎಸ್ ವೈದ್ಯರು ದೊರಕದೆ ಇದ್ದ ಪಕ್ಷದಲ್ಲಿ ಆಯುಷ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸುವಂತೆ ಸಹ ಜಿಲ್ಲಾದಿಕಾರಿಗಳಿಗೆ ಸೂಚನೆ ನೀಡಲಾಗಿದೆ

ಶ್ರೀ ಜೆ ನರಸಿಂಹಸ್ವಾಮಿ (ದೊಡ್ಡಬಳ್ಳಾಪುರ) ಮಾನ್ಯ ಅದ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ ಮೊಟ್ಟಮೊದಲನೆಯದಾಗಿ ನಮ್ಮ ಆರೋಗ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಸುತ್ತಿದ್ದೇನೆ ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಈಗಾಗಲೇ ಏನು 50ಬೆಡ್‌ಗಳ ಆಸ್ಪತ್ರೆ ಇತ್ತೋ ಅದನ್ನು 100 ಬೆಡ್‌ಗಳ ಆಸ್ಪತ್ರೆಯನ್ನಾಗಿ ಮಾಡಿದ್ದಾರೆ ಆದಕಾರಣ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯರುಗಳಿಗೆ ಅಲ್ಲಿ ವಸತಿ ಸಮಸ್ಯೆ ಇದೆ ಈ ವಸತಿ ಸಮಸ್ಯೆಯಿಂದಾಗಿಯೇ ಯಾವ ವೈದ್ಯರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಸಂಜೆ ಹೊತ್ತು ಇರುವುದಿಲ್ಲ ಇದಕ್ಕಾಗಿ ತಾವೇನು ಕ್ರಮ ಕೈಗೊಂಡಿದ್ದೀರಿ? ಕಳೆ ಸಾರಿ ಇದೇ ಪ್ರಶ್ನೆ ಬಂದಾಗ "ಯಾರೂ ಇರುವುದಿಲ್ಲ ಆ ಬಗ್ಗೆ ನನಗೆ ಹೇಳಿ ನಾನು ಕ್ರಮ ತೆಗೆದು ಕೊಳ್ಳುತ್ತೇನೆ ಎಂದು ನನಗೆ ನೀವು ಹೇಳಿದ್ದೀರಿ ಇದುವರೆಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಸಂಜೆ ನಾಲ್ಕು ಗಂಟೆಯಾದ ತಕ್ಷಣ ಯಾವೊಬ್ಬ ಡಾಕ್ಟರ್‌ಗಳೂ ಕೂಡ ನಮ್ಮ ತಾಲ್ಲೂಕಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳಲ್ಲಿ ಇರುವುದಿಲ್ಲ ತಾವು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನನಗೆ ಹೇಳಬೇಕು

ಶ್ರೀ ಆರ್ ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬರುವ

ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಬರುವ ಪಿ ಹೆ ಸಿ,ಗಳಿಗೆ ನಾವು ಈಗಾಗಲೇ ಡಾಕ್ಟರ್‌ಗಳನ್ನು ನೇಮಕ ಮಾಡುವುದರಲ್ಲಿ ಹೆಚ್ಚಿನ ಕ್ರಮಗಳನ್ನು ತೆಗೆದು ಕೊಂಡಿದ್ದೇವೆ ನಮ್ಮ ಶಾಸಕರ ಅಭಿಪ್ರಾಯವೇನೆಂದರೆ, ಆ ಆಸ್ಪತ್ರೆಗಳಿದ್ದ ಜಾಗದಲ್ಲಿ ವಸತಿ ಸೌಕರ್ಯದ ಅವಶ್ಯಕತೆ ಇರಬೇಕು ಆಗ ಮಾತ್ರ ಡಾಕ್ಟರ್‌ಗಳು ಗ್ರಾಮಾಂತರ ಪ್ರದೇಶದಲ್ಲಿರಲು ಸಾಧ್ಯವಾಗುತ್ತದೆ ಎಂದು ಅವರ ಭಾವನೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ ಈಗಾಗಲೇ ರಾಜ್ಯದಲ್ಲಿ 1679 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಅದರಲ್ಲಿ 932 ಕೇಂದ್ರಗಳಿಗೆ ಮಾತ್ರ ವಸತಿ ಗೃಹದ ಸೌಕರ್ಯ ಡಾಕ್ಟರ್‌ಗಳಿಗಿದೆ ಉಳಿದ ಕಡೆಗಳಲ್ಲಿ ವಸತಿ ಗೃಹವಿಲ್ಲ ಆ ದೃಷ್ಟಿಯಿಂದ ಈಗ ನಾವು ವಿಶ್ವಬ್ಯಾಂಕ್ ಅಸಿಸ್ಟೆನ್ಸ್ ತೆಗೆದುಕೊಂಡು ಅವರ ಸಹಯೋಗದೊಂದಿಗೆ ನಾವು ಈ ವರ್ಷ ಚಾಲನೆ ಮಾಡುವುದಕ್ಕೆ ಈಗಾಗಲೇ ವಿಶ್ವಬ್ಯಾಂಕ್ ನಮಗೆ ಅನುಮತಿಯನ್ನು ಕೊಟ್ಟಿದೆ ಎಲ್ಲೆಲ್ಲಿ ವಸತಿ ಗೃಹವಿಲ್ಲವೋ ಅಲ್ಲೆಲ್ಲಾ ವಸತಿ ಗೃಹಗಳನ್ನು ಕಟ್ಟಲು ನಾವು ಈಗಾಗಲೇ ಟೆಂಡರ್‌ನ್ನೂ ಕೂಡ ಕರೆದು ಈ ಟೆಂಡರ್ ಮೂಲಕ ಅಲ್ಲಿ ವಸತಿ ಗೃಹಗಳನ್ನು ಕಟ್ಟಿಸಲು ನಾಶಬವು ಕ್ರಮಗಳನ್ನು ತೆಗೆದುಕೊಳ್ಳುತ್ತಿದಗ್ಗೇವೆ ಇನ್ನು ಎರಡನೆಯದಾಗಿ ಎಲ್ಲಿ ಸರ್ಕಾರದ ಕಡೆಯಿಂದ ವಸತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿ ಯಾರು ಸಿಬ್ಬಂದಿ ಇರುತ್ತಾರೋ ಅವರಿಗೆ ಸಾವಿರ ರೂಪಾಯಿಗಳ ಭತ್ಯೆಯನ್ನು ಹಿಂದಿನಿಂದಲೂ ಏನು ಕೊಟ್ಟುಕೊಂಡು ಬರಲಾಗಿದೆಯೋ ಅದೇ ರೀತಿ ನಾವೂ ಕೂಡ ಸಾವಿರ ರೂಪಾಯಿಗಳ ಭತ್ಯೆಯನ್ನು ಕೊಡುತ್ತಿದ್ದೇವೆ ಇನ್ನು ನಮ್ಮ ರಾಜ್ಯದಲ್ಲಿ ಮಾತ್ರ ಪ್ರಾಥಮಿಕ ಆರೋಗ್ಯ ಘಟಕ ಎಂದು ಇತ್ತು ಈಗ ಮೊನ್ನೆ ನಾವು ಇಡೀ ರಾಜ್ಯದಲ್ಲಿರತಕ್ಕಂಥ 516 ಪಿ ಹೆಚ್ ಯುಗಳನ್ನು ಪಿ ಹೆಚ್ ಸಿ ಗಳಾಗಿ ಮೇಲ್ದರ್ಜೆಗೇರಿಸಿದ್ದೇವೆ ಆದುದರಿಂದ ಇನ್ನು ಮುಂದೆ ರಾಜ್ಯದಲ್ಲಿ ಎಲ್ಲಿಯೂ ಕೂಡ ಪಿ ಹೆಚ್ ಯು ಎನ್ನುವ ಘಟಕವಿರುವುದಿಲ್ಲ ಅದನ್ನು ನಾವು ಅಪ್‌ಗ್ರೇಡ್ ಮಾಡಿ ಪಿ ಹೆಚ್ ಸಿಗಳನ್ನಾಗಿ ಮಾಡಿದ್ದೇವೆ ಇದರಿಂದ ಎರಡು ಸ್ಟಾಫ್ ನಮಗೆ ಎಕ್ಸ್‌ಟ್ರಾ ಬೇಕಾಗುತ್ತದೆ ಒಂದು ಸ್ಟಾಫ್ ನರ್ಸ್, ಇನ್ನೊಂದು ಎಫ್ ಡಿ ಸಿ ಅದನ್ನು ಕೊಟ್ಟರೆ ಆ ಅಪ್‌ಗ್ರೇಡ್‌ಗೆ ಈ ಎರಡು ಪೋಸ್ಟ್‌ಗಳು ಬೇಕಾಗುತ್ತದೆ ಮತ್ತೆ ಇದರಿಂದ ಏನು ಉಪಯೋಗ ಆಗುತ್ತದೆಂದರೆ ನಮಗೆ ಕೇಂದ್ರ ಸರ್ಕಾರದಿಂದ ಸುಮಾರು 1,75,000 00 ರೂಪಾಯಿ ಪ್ರತಿವರ್ಷ ಎಕ್ಸ್‌ಟ್ರಾ

ಹಣ ಬರುವುದಕ್ಕೆ ಇದರಿಂದ ಸಹಾಯವಾಗುತ್ತದೆ ಆರೋಗ್ಯ ರಕ್ಷಾ ಸಮಿತಿ ಎನ್ನುವ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ನಮಗೆ ಪ್ರತಿ ಪಿ ಹೆಚ್ ಸಿ ಗೆ 1 ಲಕ್ಷ ರೂಪಾಯಿಗಳನ್ನು ಕೊಡುತ್ತದೆ ಅನ್‌ಟೈಡ್ ಫಂಡ್ ಸುಮಾರು 75 ಸಾವಿರ ರೂಪಾಯಿ ಬರುತ್ತದೆ ಇವೆರಡು ನಮಗೆ ಎನ್ ಆರ್ ಹೆಚ್ ಎಂ ಪ್ರಕಾರ ಬರುವುದಕ್ಕೆ ಸಾಧ್ಯವಾಗುತ್ತದೆ ಇನ್ನು ತಾವು ಮಾತನಾಡುವಾಗ ಯಾವ ವೈದ್ಯರುಗಳನ್ನು ನಿಯೋಜನೆ ಮೇಲೆ ಕಳುಹಿಸಿದ್ದೀರಿ ಈ ಬಗ್ಗೆ ಏನು ಮಾಡುತ್ತೀರಿ ಎಂದು ಕೇಳಿದ್ದೀರಿ ನಿಯೋಜನೆಗಳನ್ನು ರದ್ದು ಮಾಡಬೇಕೆಂದು ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಈಗ ಹೊಸ ನೇಮಕಾತಿ ಏನು ನಡೆಯುತ್ತಿದೆ ಅದು ತಮಗೆ ಗೊತ್ತಿದೆ ಈ ನೇಮಕಾತಿಗಳನ್ನೆಲ್ಲಾ ಆದಷ್ಟು ಶೀಘ್ರವಾಗಿ ಮಾಡಲು ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆಯೆಂದು ತಮಗೆ ತಿಳಿಯಬಯಸುತ್ತೇನೆ

ಶ್ರೀ ಜೆ ನರಸಿಂಹ ಸ್ವಾಮಿ ಮಾನ್ಯ ಸಚಿವರೇ, ಈ ವಸತಿ ಗೃಹಗಳು ಇಲ್ಲದ ಕಡೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆಂದು ತಾವು ಹೇಳಿದಿರಿ ಆದರೆ ಅದನ್ನು ಎಲ್ಲೆಲ್ಲಿ ಕೊಡುತ್ತಿದ್ದೀರಿ ಎಂದು ನನಗೆ ಗೊತ್ತಿಲ್ಲ ನನಗೆ ಗೊತ್ತಿರುವ ಪ್ರಕಾರ ನನ್ನ ತಾಲ್ಲೂಕಿನಲ್ಲಿ ಬರುವ ಯಾವುದೇ ಗ್ರಾ,ದ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ ಆದುದರಿಂದ ನನ್ನ ತಾಲ್ಲೂಕಿನಲ್ಲಿ ವಸತಿಗೋಸ್ಕರ ಎಷ್ಟುಜನ ಒಂದು ಸಾವಿರ ರೂಪಾಯಿಗಳನ್ನು ತೆಗೆದು ಕೊಳ್ಳುತ್ತಿದ್ದಾರೆಂಬ ಬಗ್ಗೆ ನನಗೆ ಮಾಹಿತಿ ಕೊಡಬೇಕೆಂದು ಮನವಿ ಮಾಡುತ್ತೇನೆ ಏಕೆಂದರೆ ಬಹುಶಃ ಯಾರೂ ಕೂಡ ಗ್ರಾಮದಲ್ಲಿ ಉಳಿದು ಕೊಳ್ಳುವುದಿಲ್ಲ ಬೆಂಗಳೂರಿನಿಂದ ಹಾಗೂ ಬೇರೆ ಬೇರೆ ಕಡೆಯಿಂದ ಬಂದು ಕೆಲಸ ಮಾಡುವವರೇ ಇದ್ದಾರೆ ಇನ್ನು ತಾವು ನಿಯೋಜನೆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರಲ್ಲ ಅದು ತುಂಬಾ ಒಳ್ಳೆಯ ಕ್ರಮ ಏಕೆಂದರೆ ನಿಯೋಜನೆ ಮಾಡುವುದು ಒಳ್ಳೆಯದಲ್ಲ ಹೊಸದಾಗಿ ವೈದ್ಯರನ್ನು ನೇಮಕ ಮಾಡಿಕೊಡುವುದನ್ನು ಬಹಳ ಬೇಗ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಅಧ್ಯಕ್ಷರ ಮುಖಾಂತರ ಮನವಿ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಸಚಿವರೆ, ತಾವು ನಿಯೋಜನೆಯನ್ನು ರದ್ದು ಮಾಡಿದ್ದೀವೆಂದು ಹೇಳಿದಿರಿ ಹೈಯರ್ ಎಜುಕೇಶನ್‌ಗೆ ರದ್ದು ಮಾಡಿದ್ದೀರ? ಅವರನ್ನೇನಾದರೂ ಕಾಲೇಜಿಗೆ ಹೋಗುವುದನ್ನು

ತಡೆದಿದ್ದೀರ? ಅಕಸ್ಮಾತ್ ಯಾರಾದರೂ ಪ್ರೊಫೆಸರ್ ಆಗುತ್ತೇವೆ, ಅಸಿಸ್ಟೆಂಟ್ ಪ್ರೊಫೆಸರ್ ಆಗುತ್ತೇವೆಂದರೆ ಅವರಿಗೆ ನಿಯೋಜನೆಗೆ ಅವಕಾಶವಿದೆಯೇ ಅಥವ ಇಲ್ಲವೋ ಹೇಳಬೇಕು ಯಾರಾದರೂ ಇನ್-ಸರ್ವಿಸ್‌ನಲ್ಲಿರುವವರು ಎಂ ಡಿ ಮಾಡುವುದಕರೆ ಹೋಗುತತ್ತೇವೆ, ಎಂ ಎಸ್ ಮಾಡುವುದಕ್ಕೆ ಹೋಗುತ್ತೇವೆಂದರೆ ಅವರಿಗೆ ನಿಯೋಜನೆಗೆ ಅವಕಾಶವಿದೆಯೇ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಹೇಳಬೇಕು

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ವಸತಿ ವಿಚಾರದಲ್ಲಿ ಎಲ್ಲಿ ವಸತಿ ಸೌಕರ್ಯ ಇಲ್ಲವೋ ಅಲ್ಲಿ ಕಾರ್ಯ ಮಾಡುವ ಸಿಬ್ಬಂದಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ ಇದಕ್ಕೆ ಯಾವ ತೊಂದರೆಯೂ ಇಲ್ಲವಾದ್ದರಿಂದ ಕೊಡುತ್ತಿದ್ದೇವೆ ವಸತಿ ಇರಬೇಕು ಎನ್ನುವುದು ನಮ್ಮ ಉದ್ದೇಶವೂ ಕೂಡ ಆಗಿದೆ ಆದರೆ ರಾಜ್ಯದ ಎಲ್ಲಾ ಇಲಾಖೆಗಳಲ್ಲಿಯೂ ಎಲ್ಲರಿಗೂ ವಸತಿ ಸೌಕರ್ಯ ಒದಗಿಸಲು ಆಗದೇ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ ನಮ್ಮ ವಿಲೇಜ್ ಅಕೌಂಟೆಂಟ್ ಹಾಗೂ ಡಾಕ್ಟರ್‌ಗಳಿಗೂ ಕೂಡ ಗ್ರಾಮದಲ್ಲಿಯೇ ಇರಬೇಕೆಂದೂ ಕೂಡ ನಾವು ಹೇಳಿರುತ್ತೇವೆ ಆದರೂ ನಾವು ಎಷ್ಟೇ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಂಡರೂ ಕೂಡ ಹಲವಾರು ವರ್ಷಗಳಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ ಆದರೆ ನಾವು ಬಂದ ಮೇಲೆ ಇದನ್ನು ಇನ್ನೂ ಕಟ್ಟುನಿಟ್ಟಾಗಿ ಜಾರಿಗೆ ತರಲು ಹೆಚ್ಚು ಒತ್ತನ್ನು ನಾನು ಕೊಡುತ್ತಿದ್ದೇನೆ ಇನ್ನು ಮುಂದಿನ ದಿನಗಳಲ್ಲಿ ಅದನ್ನು ಇನ್ನೂ ಬಿಗಿಯಾಗಿ ಮಾಡುವುದಕ್ಕೆ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ ಇದರ ಜೊತೆಗೆ ಮಿಸ್‌ಮ್ಯಾಚ್ ಎನ್ನುವ ಪದ್ದತಿ ಏನಿತ್ತು ಅದನ್ನು ನಾವು ತೆಗೆದುಹಾಕುತ್ತಿದ್ದೇವೆ, ಯಾವ ಯಾವ ಡಾಕ್ಟರ್‌ಗಳು ಯಾವ ಯಾವ ಪೋಸ್ಟ್‌ಗಳಿಗೆ ಇರಬೇಕೋ ಅವರು ಮಾತ್ರ ಹೋಗಬೇಕು ಎನ್ನುವುದಕ್ಕೂ ಕೂಡ ನಾವು ಒಂದು ದಿಕ್ಕಿನಲ್ಲಿ ಸರಿ ಮಾಡುತ್ತಿದ್ದೇವೆ ಮೊದಲೆಲ್ಲಾ ಗೈನಕಾಲಜಿಸ್ಟ್ ಏನು ಇರುತ್ತಿದ್ದರು ಆರ್ಥೋಪೆಡಿಕ್ ಸರ್ಜನ್ ಆಗಿ ಹೋಗಿ ಅಲ್ಲಿ ಕೆಲಸ ಮಾಡುತ್ತಿದ್ದರು ಏಕೆ ಅವರು ಈ ರೀತಿ ಕೆಲಸ ಮಾಡುತ್ತಿದ್ದರೆಂದರೆ, ಅವರು ಬೆಂಗಳೂರಿ ನಲ್ಲಿಯೇ ಇರಬೇಕೆನ್ನುತ್ತಿದ್ದರು ಅವರು, ಬೆಂಗಳೂರು, ಮೈಸೂರು, ಮಂಡ್ಯ, ಬಳ್ಳಾರಿ ಹೀಗೆ ಇಂಥ ಕಡೆಗಳಲ್ಲಿಯೇ ಇರಬೇಕು ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಅವರು ಎಗೆನೆಸ್ಟ್ ದಿ ಪೋಸ್ಟ್ ಕೆಲಸ ಮಾಡುತ್ತಿದ್ದರು

ಅದರಿಂದ ಸಾರ್ವಜನಿಕರಿಗೆ ಏನೂ ಉಪಯೋಗವಾಗುತ್ತಿರಲಿಲ್ಲ ಅವರ ಸ್ವಂತಕ್ಕೋಸ್ಕರ ಅವರು ಅಲ್ಲಿ ಉಳಿಯಬೇಕು ಎನ್ನುವ ಒಂದೇ ಕಾರಣಕ್ಕೋಸ್ಕರ ಅವರು ಆ ಒಂದು ಪೋಸ್ಟ್‌ನಲ್ಲಿ ಹೋಗಿ ಇರಲು ವ್ಯವಸ್ಥೆ ಮಾಡುತ್ತಿದ್ದರು ಇದನ್ನು ಸ್ವಲ್ಪ ಬದಲಾವಣೆ ಮಾಡಿ ಈಗ ಎಲ್ಲಾ ಕಡೆ ಬದಲಾವಣೆಯನ್ನು ನಾವು ಮಾಡುತ್ತಿದ್ದೇವೆ ನಾವು ಸರ್ಕ್ಯುಲರ್‌ನ್ನೇ ಈ ಬಗ್ಗೆ ಹೊರಡಿಸಿದ್ದೇವೆ ಯಾರು ಯಾರು ಈ ತರಹ ಡೆಪ್ಯುಟೇಷನ್ ಮೇಲೆ ಇದ್ದಾರೆ ಅದನ್ನು ರದ್ದು ಮಾಡಬೇಕೆಂದು ಸರ್ಕ್ಯುಲರ್ ಹೊರಡಿಸಿ ಇಡೀ ರಾಜ್ಯದಲ್ಲಿ ಅದನ್ನು ರದ್ದು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಇದಲ್ಲದೇ ಬೇರೆ ಬೇರೆ ಇಲಾಖೆಗಳಲ್ಲೆಲ್ಲಾ ಕೆಲಸ ಮಾಡುತ್ತಿರುವವರನ್ನು ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುತ್ತಿರುವವರನ್ನು ಪುನಃ ವಾಪಸ್ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಮೆಡಿಕಲ್ ಕಾಲೇಜಿಗೆ ಸಂಬಂದ ಪಟ್ಟಂತೆ ಹೇಳಬೇಕೆಂದರೆ ಸರ್ಕಾರ 5 ಮೆಡಿಕಲ್ ಕಾಲೇಜ್‌ಗಳನ್ನು ಹೊಸದಾಗಿ ಪ್ರಾರಂಭ ಮಾಡುತ್ತಿದೆ ನನಗೇನು ಸದನದಲ್ಲಿ ಹೇಳಬೇಕೋ, ಬೇಡವೋ ನಮ್ಮ ಸರ್ಕಾರದಲ್ಲಿ ನಾವಂತೂ ನಮ್ಮ ಆಸ್ಪತ್ರೆಗಳಲ್ಲಿರುವವರನ್ನು ಹೆಚ್ಚು ಅವರನ್ನು ಕಳುಹಿಸುವುದಕ್ಕೆ ನಾವು ಇಷ್ಟ ಪಡುವುದಿಲ್ಲ ನಮ್ಮ ಆಸ್ಪತ್ರೆಗಳು ಸರಿಯಾಗಿರಬೇಕು, ಬಡವರು ನಮ್ಮ ಆಸ್ಪತ್ರೆಗೆ ಬರತಕ್ಕಂಥದ್ದು, ಅಲ್ಲಿ ವ್ಯವಸ್ಥೆ ಸರಿ ಇರಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ನಾವು ಕೆಲಸವನ್ನು ಮಾಡುತ್ತಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಸಚಿವರೆ, ಒಳ್ಳೆಯ ಅನುಭವಸ್ಥರು, ಪೋಸ್ಟ್ ಗ್ರಾಜ್ಯುಯೇಟ್ ಮಾಡಿರುವವರು ನಾನು ಅಕಾಡೆಮಿಕ್ ಲೈನ್‌ಗೆ ಹೋಗುತ್ತೇನೆಂದರೆ ಅವರನ್ನು ಕಳುಹಿಸುವುದರ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು ನಾವು ಕಳುಹಿಸುವುದೇ ಇಲ್ಲವೆಂದರೆ ಅವರಿಗೆ ಎಕ್ಸ್ಪೋಶರ್ ಇಲ್ಲದ ಹಾಗೆ ಆಗುತ್ತದೆ ಮೂರು ವರ್ಷವೋ, ಐದು ವರ್ಷವೋ ಮೆಡಿಕಲ್‌ಕಾಲೇಜಿಗೆ ಹೋಗಿ ವಾಪಸ್ ಬರುವಂಥದ್ದರಲ್ಲಿ ತಪ್ಪೇನೂ ಇರುವುದಿಲ್ಲ ಆದ ಕಾರಣ ಸನ್ಮಾನ್ಯ ಸಚಿವರು ಈ ಬಗ್ಗೆ ಇನ್ನೊಂದು ಸಲ ಯೋಚನೆಯನ್ನು ಮಾಡಬೇಕು ಸಾರ್ ಎಲ್ಲೋ ಹಳ್ಳಿಯಲ್ಲಿ ಇರುತ್ತಾನೆ, ಅವನು ಎಂ ಡಿ ಮಾಡಿರುತ್ತಾನೆ ಮತ್ತೊಂದು ವಿದ್ಯಾರ್ಹತೆಯನ್ನೂ ಗಳಿಸಿರುತ್ತಾನೆ, ಆದ ಕಾರಣ ಅದರ ಬಗ್ಗೆ ಪರಿಶೀಲನೆಯನ್ನು ತಾವು ಮಾಡುತ್ತೀರ?

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, ಪಿ ಹೆಚ್ ಯುಗಳನ್ನು ಪಿ ಹೆಚ್ ಸಿಗಳನ್ನಾಗಿ upgrade ಮಾಡತಕ್ಕಂಥಾದ್ದು it is a good decision ಆದರೆ ಪಿ ಹೆಚ್ ಸಿಗಳಲ್ಲಿ ಗೈನಕಾಲಜಿಸ್ಟ್‌ಗಳಿರವುದಿಲ್ಲ ರೂರಲ್ ಏರಿಯಾದಲ್ಲಿ ಪ್ರಾಬ್ಲಂ ಏನಾಗಿದೆಯೆಂದರೆ, ನೀವು ಡಾಕ್ಟರ್‌ಗಳನ್ನು ರಿಕ್ರುಟ್ ಮಾಡಿ ಮೇಲೆ ಪಿ ಹೆಚ್ ಸಿಗಳಿಗೆ ಡಾಕ್ಟರ್‌ಗಳು ಬಂದ ಮೇಲೆ ಸಾಕಷ್ಟು ವೇಕೆನ್ಸಿಗಳು ಫಿಲಪ್ ಆಗಿದೆ ಆದರೂ ಕೆಲವು ಕಡೆ ಹಾರ್ಟ್‌ಗೆ ಸಂಬಂಧಪಟ್ಟ ಡಾಕ್ಟರ್ ಇರುತ್ತಾರೆ ಕೆಲವು ಕಡೆ ಇರುವುದಿಲ್ಲ ಆಗ ಅಲ್ಲಿಯೇ ಅಕ್ಕಪಕ್ಕದಲ್ಲಿ ಇದ್ದವರೇ ಬಂದು ನೋಡುತ್ತಾರೆ ಆದರೆ ಗೈನಕಾಲಜಿಸ್ಟ್ ಎಂದು ನಾವು ಏನು ಹೇಳುತ್ತೇವೆ ನಾವು ಲೋಕಲ್ ಕಾಂಟ್ರಿಬ್ಯೂಷನ್ ಏನಾದರೂ ಮಾಡಿ maternity ward building ಕಟ್ಟಿಕೊಟ್ಟರೆ, ಸರ್ಕಾರಕ್ಕೆ ಏನೂ ಹೊರೆ ಬೀಳುವುದಿಲ್ಲ Gynaecology unit is very important in rural areas ಇತ್ತೀಚೆಗಂತೂ ಅದು ಬಹಳ ಮುಖ್ಯವಾಗಿದೆ Post of a medical Officer ಈ ಬಗ್ಗೆ ಯೋಚನೆ ಮಾಡುತ್ತೀರ?

ಶ್ರೀ ಕೆ ಗೋಪಾಲ ಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ಆರೋಗ್ಯ ಸಚಿವರಲ್ಲಿ ಕೇಳುವುದೇನೆಂದರೆ, ರಾತ್ರಿ ಡ್ಯೂಟಿ ಮಾಡುವಂತಹ ಡಾಕ್ಟರ್ಸ್‌ಗೆ ತಾವು 300 ರೂಪಾಯಿ ಕೊಡುತ್ತೇನೆಂದು ಹೇಳುತ್ತಿದ್ದೀರಿ ಅದು ಯಾವಾಗಿನಿಂದ ಪ್ರಾರಂಭವಾಗಿದೆ ಪ್ರೈವೇಟ್ ಡಾಕ್ಟರ್ಸ್‌ನ್ನು ತೆಗೆದುಕೊಳ್ಳುವ ವಿಚಾರದಲ್ಲಿ ತಾವು ಸಜೆಷನ್ ಕೊಡಬೇಕು

ಶ್ರೀ ಬಸವರಾಜ್ ಭೀಮಪ್ಪ ಹಿಟ್ನಾಳ್ ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಹತ್ತು ಜನ ತಜ್ಞವೈದ್ಯರ ಪೋಸ್ಟ್ ಇದ್ದರೂ ಸಹ ಇವತ್ತಿಗೂ ಕೂಡ ಅಲ್ಲಿಗೆ ಯಾರನ್ನೂ ಹಾಕಿಲ್ಲ ಅಲ್ಲಿ ಕೇವಲ ನಾಲ್ಕು ಮಂದಿ ಡಾಕ್ಟರ್ಸ್ ಇದ್ದಾರೆ ಸಂಪೂರ್ಣವಾಗಿ ಇವತ್ತು ಆ ಆಸ್ಪತ್ರೆಗೆ ತಕ್ಷಣ ತಜ್ಞ ವೈದ್ಯರನ್ನು ಹಾಕುವಂತಹ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಸಾಯಂಕಾಲದ ಸಮಯದಲ್ಲಿ OPD ಪ್ರಾರಂಭ ಮಾಡಿ ಇಡೀ ರಾಜ್ಯದಲ್ಲಿ evening clininc ಗಳನ್ನು ಮಾಡಬೇಕೆಂದು ಜಾರಿ ಮಾಡಿದೆ ಸರ್ಕಾರ ಇವತ್ತು ಇದಕ್ಕೋಸ್ಕರ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ ಸಾಮಾನ್ಯವಾಗಿ

ಕೂಲಿ ಮಾಡುವ ಜನ ಬೆಳಿಗ್ಗೆ 8 00 ಗಂಟೆಗೆ ಹೋದರೆ ಸಾಯಂಕಾಲ 5 00 ಅಥವಾ 6 00 ಗಂಟೆಗೆ ಬರುತ್ತಾರೆ ಅಷ್ಟೊತ್ತಿಗೆ ನಮ್ಮ ಎಲ್ಲಾ ಆಸ್ಪತ್ರೆಗಳು ಮುಚ್ಚಿ ಹೋಗಿರುತ್ತದೆ ಕೂಲಿ ಮಾಡುವ ಜನರಿಗೆ ಆಸ್ಪತ್ರೆಯ ಸೌಲಭ್ಯಗಳು ಸಿಗಬೇಕು ಎನ್ನುವ ಒಂದೇ ಒಂದು ದೃಷ್ಟಿಯಿಂದ ನಾವು ಜುಲೈ 2 ನೇ ತಾರೀಖಿನಿಂದ evening clininc ಪ್ರಾರಂಬವಾಗಿದೆ ಇಡೀ ರಾಜ್ಯದಲ್ಲಿ ನಮ್ಮ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆ ಇರಬಹುದು, ಅಲ್ಲಿ regular hospital ಯಾವ ರೀತಿ ನಡೆಯುತ್ತದೆ ಅದೇ ರೀತಿ 5 30 ಯಿಂದ ರಾತ್ರಿ 8 30 ರವರೆಗೆ ನಡೆಯಬೇಕು ಆ ಸಂದರ್ಭದಲ್ಲಿ ನಮ್ಮ ಎಲ್ಲಾ specialist, staff, nurse ಏನಿದ್ದಾರೆ, ಅವರೆಲ್ಲರೂ ಹಾಜರಿರಬೇಕು Medicine counter ಕೂಡ Open ಇರಬೇಕು ಲ್ಯಾಬ್ ಏನಿದೆ ಎಲ್ಲಾ ಕೂಡ ಇರಬೇಕೆಂದು ನಾವು ಆದೇಶ- ಮಾಡಿದ್ದೇವೆ ಅದರ ಜೊತೆಗೆ ಡಾಕ್ಟರುಗಳಿಗೆ extra duty ಮಾಡುವವರಿಗೆ 300 ರೂಪಾಯಿ ಹಾಗೂ staff nurse ಗೆ 100 ರೂಪಾಯಿ ಕೊಡಬೇಕು ಎಂದು ನಾವು ಕ್ರಮ ತೆಗೆದುಕೊಂಡಿದ್ದೇವೆ ಈ ರೀತಿ ಮಾಡುವುದರಿಂದ ವಿಶೇಷವಾಗಿ ಬಡವರಿಗೆ ಉಪಯೋಗವಾಗುತ್ತದೆ ಎಂದು ಹೇಳಿದ್ದಾರೆ ಇದನ್ನು ಡಾಕ್ಟರ್ಸ್ ಸ್ವಾಗತ ಮಾಡಿದ್ದಾರೆ ಈ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಕ್ರ ತೆಗೆದುಕೊಳ್ಳುತ್ತೇವೆ ಎಂದು ನಾನು ಸ್ಪಷ್ಟ ಪಡಿಸುತ್ತೇನೆ ಅದರ ಜೊತೆಗೆ ಮಾನ್ಯ ರಮೇಶ್ ಕುಮಾರ್‌ರವರು ಒಬ್ಬರು ಗೈನೆಕಾಲಜಿಸ್ಟ್ ಪಿಹೆಚ್‌ಸಿಗಳಲ್ಲಿ ಇದ್ದರೆ ಹೆರಿಗೆ ಮಾಡಿಸುವುದಕ್ಕೆ ತುಂಬಾ ಉಪಯೋಗ ಎಂದು ಏನು ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ಕೇಂದ್ರ ಸರ್ಕಾರ ಕೂಡ 6 ತಿಂಗಳು ಟ್ರೈನಿಂಗ್ ಕೊಟ್ಟು ಅವರನ್ನು ಗೈನೆಕಾಲಜಿಸ್ಟ್ ಎಂದು ನೇಮಕ ಮಾಡ ಬಹುದೆಂದು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಈ ಸಂದರ್ಭದಲ್ಲಿ ನಾವು ಹೊಸದಾಗಿ ಏನು ರೆಕ್ರ್ಯೂಟ್ ಮಾಡುತ್ತಿದ್ದೇವೆ, ಅದರಲ್ಲಿ 160 ಜನ ಲೇಡಿ ಡಾಕ್ಟರ್‌ಗಳನ್ನು ರೆಕ್ರ್ಯೂಟ್ ಮಾಡುತ್ತಿದ್ದೇವೆ ಇಷ್ಟೊಂದು ಜನ ಬಂದಿರುವುದು ನಮಗೂ ಆಶ್ಚರ್ಯ ಇಷ್ಟೊಂದು ಜನ ನಮ್ಮ ನೇಮಕಾತಿಯಲ್ಲಿ ಸೇರಿದ್ದಾರೆ ಇನ್ನು ಕೆಲವೇ ದಿನಗಳಲ್ಲಿ Police report & cast certificatef ತೆಗೆದುಕೊಂಡ ತಕ್ಷಣ 250 ಜನರನ್ನು ನೇಮಕ ಮಾಡುತ್ತಿದ್ದೇವೆ ಅದರಲ್ಲಿ 162 ಜನ ಮೇಲ್ಪಟ್ಟು ಮಹಿಳಾ ವೈದ್ಯರು ಬರುತ್ತಿದ್ದಾರೆ ತಾವು ಹೆರಿಗೆಗೆ ಸಂಬಂಧ ಪಟ್ಟ ಹಾಗೆ ಮಹಿಳಾ

ವೈದ್ಯರು ಬೇಕೆಂದು ಹೇಳಿರುವುದರಿಂದ ಅವರಿಗೆ ಟ್ರೈನಿಂಗ್ ಕೊಡುವುದು ಸೂಕ್ತ ಎನಿಸಿದೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ

ಅಧ್ಯಕ್ಷರು ಈಗ ಸಿದ್ದು ಸವದಿ ಪ್ರಶ್ನೆ ಕೇಳಿ ಶ್ರೀ ಪಿ ಸಿ ಮೋಹನ್ ರವರ ಪ್ರಶ್ನೆಗೆ ಒಂದು ತಿಂಗಳು ಕಾಲಾವಕಾಶವನ್ನು ಕೋರಿದ್ದಾರೆ

ಶ್ರೀ ಪಿ ಸಿ ಮೋಹನ್ ಮಾನ್ಯ ಅಧ್ಯಕ್ಷರೆ, ಒಂದು ತಿಂಗಳು ಎಂದರೆ ಅಸೆಂಬ್ಲಿ ಮುಗಿದು ಹೋಗುತ್ತದೆ ಅಸೆಂಬ್ಲಿ ಮುಗಿಯುವುದರೊಳಗಾಗಿ ಉತ್ತರ ಕೊಡಲಿ ಎಂದು ಕೇಳುತ್ತೇನೆ

ಶ್ರೀ ವಾಟಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಇದೇನು ತಮಾಷೆಯಾ? ಇದೇನು ಸಂತೇನಾ? ಏನು ಹುಡುಗಾಟ ಇದು? ಈ ಪ್ರಶ್ನೆಗೆ ಯಾವ ಮಂತ್ರಿಗಳು ಇದಕ್ಕೆ ಕಾಲಾವಕಾಶ ಕೇಳಿರುವುದು? ಅವರಿಗೆ ಏನಾಗಿದೆ

ಶ್ರೀ ಆರ್ ಅಶೋಕ್ ಆ ಪ್ರಶ್ನೆ ನಮ್ಮ ಇಲಾಖೆಗೆ ಸೇರಿದೆ

ಅಧ್ಯಕ್ಷರು ಈ ಪ್ರಶ್ನೆಗೆ ಕಾಲಾವಕಾಶ ಕೇಳಿದರೂ ಕೂಡ ಅಧಿವೇಶನದ 31 ನೇ ತಾರೀಖಿಗೆ ಮುಗಿದುಹೋಗುತ್ತದೆ ಆದುದರಿಂದ ಒಂದು ತಿಂಗಳು ಕಾಲಾವಕಾಶ ಕೇಳಿದರೆ ಹೇಗೆ? ಇನ್ನೊಂದು ವಾರದೊಳಗೆ ಪಿ ಸಿ ಮೋಹನ್‌ರವರ ಪ್ರಶ್ನೆಗೆ ನೀವು ಉತ್ತರವನ್ನು ಕೊಡಬೇಕಾಗುತ್ತದೆ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ನಮಗೆ ಕೆಲವು ಪ್ರಶ್ನೆಗಳು ಬಂದಿವೆ ಅದರಲ್ಲಿ ಯಾವ ಜಾತಿವಾರು ಇದ್ದಾರೆ? ಯಾವಾಗ ನೇಮಕವಾಯಿತು? ಪಂಗಡ ಮತ್ತು ಒಳ ಪಂಗಡಗಳು ಯಾವುದೆಂದು ಇಡೀ ರಾಜ್ಯದ ಮಾಹಿತಿಯನ್ನು ಕೇಳಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಅವರು clear ಆಗಿ number of vacancies ಎಷ್ಟು ಎಂದು ಹೇಳಿದ್ದಾರೆ ಯಾವ್ಯಾವ cadre ನಲ್ಲಿದ್ದಾರೆ? incharge ನಲ್ಲಿ ಎಷ್ಟು ಜನ ಇದ್ದಾರೆಂದು ಮಾಹಿತಿ ಕೊಡಿ ಎಂದು ಕೇಳಿದ್ದಾರೆ ಈ ಮಾಹಿತಿಯನ್ನು ಕೊಡುವುದಕ್ಕೆ ಒಂದು ತಿಂಗಳು ಏಕೆ ಬೇಕು? ಮಾನ್ಯ ಪಿ ಸಿ ಮೋಹನ್‌ರವರು ಸ್ಪಷ್ಟವಾಗಿ ಎಷ್ಟು ಉನ್ನತ ಹುದ್ದೆಗಳು ಖಾಲಿ ಇದೆಯೆಂದು ಕೇಳಿದ್ದಾರೆ

ಅಧ್ಯಕ್ಷರು ಈ ಪ್ರಶ್ನೆಗೆ ಉತ್ತರ ಕೊಡಿ ಆರೋಗ್ಯ ಮಂತ್ರಿಗಳು ಈ ಪ್ರಶ್ನೆಗೆ ಒಂದು ವಾರದೊಳಗೆ ಉತ್ತರ ಕೊಡಬೇಕು

ಶ್ರೀ ಆರ್ ಅಶೋಕ್ ಆಯಿತು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅದ್ಯಕ್ಷರೆ, ಇದಕ್ಕೆ ಮಾಹಿತಿಯನ್ನು ಒಂದು ದಿನದಲ್ಲಿ ಅವರು ತಂದು ಕೊಡಬಹುದಾಗಿತ್ತು ಇವರು ಏಕೆ ಒಂದು ತಿಂಗಳೂ ಸಮಯ ಕೇಳಿರುವುದು?

ಅಧ್ಯಕ್ಷರು ಒಂದು ವಾರದಲ್ಲಿ ಕೊಡಬೇಕು ಎಂದು ಹೇಳಿದ್ದೇನೆಲ್ಲ

ಶ್ರೀ ವಾಟಾಳ್ ನಾಗರಾಜ್ ಒಂದು ವಾರ ಕೂಡ ಸರಿಯಲ್ಲ ನೀವು ಏನು ಸಾರ್ ಇದು

ಅಧ್ಯಕ್ಷರು ಇರಲಿ

ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು

50(384) ಶ್ರೀ ಮಲ್ಲಿಖಾರ್ಜುನ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು? ಇವು ಎಲ್ಲೆಲ್ಲಿ ಇವೆ?

ಆ) ಈ ಆಸ್ಪತ್ರೆಗಳಿಗೆ ಮಂಜೂರಾಗಿರುವ ಎಲ್ ಎಂ ಓ ಹುದ್ದೆಗಳ ಸಂಖ್ಯೆ ಎಷ್ಟು? (ಆಸ್ಪತ್ರೆವಾರು ವಿವರಗಳನ್ನು ಒದಗಿಸುವುದು)

ಇ) ಈ ಪೈಕಿ ಎಷ್ಟು ಹುದ್ದೆಗಳು ಬರ್ತಿಯಾಗಿವೆ? ಎಷ್ಟು ಹುದ್ದೆಗಳು ಎಷ್ಟು ಅವಧಿಯಿಂದ ಖಾಲಿ ಇವೆ?

ಈ) ಖಾಲಿ ಇರುವ ಹುದ್ದರಗಳನ್ನು ಭರ್ತಿ ಮಾಡಲು ಸರಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್ ಅಶೋಕ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಬಸವಕಲ್ಯಾಣ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ ಬಸವಕಲ್ಯಾಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ರಾಜೇಶ್ವರದಲ್ಲಿ ಒಂದು ಸಮುದಾಯ ಆರೋಗ್ಯ ಕೇಂದ್ರ ಇದ್ದು, 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುತ್ತದೆ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ಕೆಳಕಂಡ ಸ್ಥಳಗಳಲ್ಲಿವೆ

1 ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣ

2 ಮಂಠಾಳ

3 ಕೊಹಿನೂರು

4 ಮುಚಳಂಬ

5 ರಾಜೇಶ್ವರ

6 ಮುಡುಬಿ

7 ಬೇಲೂರಾ

8 ಕಿಟ್ಟಾ

9 ಧನ್ನೂರ ಕೆ

10 ಘೋಟಾಳ

11 ಹಾರಕೊಡ

ಆ) ಈ ಕೆಳಕಂಡ ಆಸ್ಪತ್ರೆಗಳಿಗೆ ತಲಾ ಒಂದರಂತೆ ಒಟ್ಟು 3 ಮಹಿಳಾ ವೈದ್ಯಾದಿಕಾರಿ ಹುದ್ದೆಗಳು ಮಂಜೂರಾಗಿರುತ್ತದೆ

1 ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣ

2 ಸಮುದಾಯ ಆರೋಗ್ಯ ಕೇಂದ್ರ ರಾಜೇಶ್ವರ

3 ಪ್ರಾಥಮಿಕ ಆರೋಗ್ಯ ಕೇಂದ್ರ ಮಂಠಾಳ

ಇ) ಈ ಪೈಕಿ ಸಮುದಾಯ ಆರೋಗ್ಯ ಕೇಮದ್ರ ರಾಜೇಶ್ವರದಲ್ಲಿ ಒಬ್ಬರು ಕರ್ತವ್ಯ ನಿರ್ವಹಿಸುತ್ತಿದ್ದು ಮಂಠಾಳಾದಲ್ಲಿ ಮಹಿಳಾ ವೈದ್ಯರ ಎದುರು ಹುದ್ದೆಯಲ್ಲಿ ಪುರುಷ ವೈದ್ಯಾದಿಕಾರಿಗಳು ಕರ್ತವ್ಯ ನಿರ್ವಹಿಸು ತ್ತಿದ್ದಾರೆ ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣದಲ್ಲಿ ದಿನಾಂಕ 28–07–06 ರಿಂದ ಮಹಿಳಾ ವೈದ್ಯರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಾರೆ

ಈ) ಇಲಾಖೆಯಲ್ಲಿ ಮಹಿಳಾ ವೈದ್ಯರ ಕೊರತೆ ಇರುವುದಿರಿಂದ ಕೆಲವು ಕಡೆ ಪುರುಷ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತಧಲ್ಲಿದ್ದು ನೇಮಕಾತಿ ಆದೇಶ ಹೊರಡಿಸುವಾಗ ಆದ್ಯತೆ ಮೇರೆಗೆ ಮಹಿಳಾ ವೈಧ್ಯಾದಿಕಾರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು

ಶ್ರೀ ಮಲ್ಲಿಖಾರ್ಜುನ ಸಿದ್ರಾಮಪ್ಪ ಖೂಬಾ ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಈಗಾಗಲೇ ನಮ್ಮ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಮಂಠಾಳ, ರಾಜೇಶ್ವರ ಮತ್ತು ಬಸವಕಲ್ಯಾಣದಲ್ಲಿ LMO ಹುದ್ದೆಗಳು ಸುಮಾರು ಎರಡು ವರ್ಷದಿಂದ ಖಾಲಿಯಿದ್ದರೂ ಕೂಡ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಸರಿಯಾಗಿ ಹೇಳಬೇಕು ಏಕೆಂದರೆ ನಮ್ಮಲ್ಲಿ 3,00,000 ಜನಸಂಖ್ಯೆ ಇದ್ದು ಸುಮಾರು ಎರಡು ವರ್ಷವಾದರೂ ಕೂಡ LMO doctors ಇಲ್ಲ ಅಲ್ಲಿಗೆ ಯಾವತ್ತು ಆ ವೈದ್ಯರನ್ನು ಹಾಕುತ್ತೀರಿ ಎಂದು ದಿನಾಂಕವನ್ನು ಕೊಡಬೇಕು

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಬಸವ ಕಲ್ಯಾಣದಲ್ಲಿ ಮಹಿಳಾ ವೈದ್ಯರ ಕೊರತೆ ಇದೆಯೆಂದು ಕೇಳಿದ್ದಾರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ಕಡೆ ಮಾತ್ರ ಮಹಿಳಾ ವೈದ್ಯರು ಇದ್ದಾರೆ ಇನ್ನು

ಎರಡು ಕಡೆ ಮಹಿಳಾ ವೈದ್ಯರು ಇಲ್ಲ ಒಂದು ಕಡೆ ಬಹಳ ದಿನಗಳಿಂದ ಒಬ್ಬರು ಗೈರು ಹಾಜರಾಗಿದ್ದಾರೆ, ಅವರ ಮೇಲೆ ಶಿಸ್ತು ಕ್ರಮ ತೆಗೆದು ಕೊಳ್ಳಬೇಕೆಂದು ನಾನು ಆದೇಶ ಮಾಡಿದ್ದೇನೆ ಈಗಾಗಲೇ ನಾನು ಮೊದಲನೆ ಪ್ರಶ್ನೆಗೆ ಉತ್ತರ ಹೇಳಿದಂತೆ ಮಹಿಳಾ ವೈದ್ಯರ ನೇಮಕಾರಿಗೆ ಸಂಬಂದಪಟ್ಟಂತೆ 250 ಜನ ವೈದ್ರನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ 33% ಮೇಲ್ಪಟ್ಟು ಮಹಿಳಾ ವೈದ್ಯರು ಬಂದಿದ್ದಾರೆ ಆ ಸಂದರ್ಭದಲ್ಲಿ ಅಲ್ಲಿಗೆ ಅವರನ್ನು ನೇಮಕ ಮಾಡುವಂಥಹ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ ಗುತ್ತಿಗೆ ಆಧಾರದ ಮೇಲೆ 432 ವೈದ್ಯರು ನಮ್ಮ ಇಲಾಖೆಯಲ್ಲಿ ಏನು ಕೆಲಸ ಮಾಡುತ್ತಿದ್ದರು, ಆದೇಶ ಹೊರಡಿಸಿದ್ದೇವೆ ಆ ಗುತ್ತಿಗೆ ವೈದ್ಯರು ರೆಗ್ಯುಲರ್ ಆಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಮಾನ್ಯ ಶಾಸಕರೆಲ್ಲರದು ಒಂದೇ ಅಭಿಪ್ರಾಯ ಏನೆಂದರೆ ಖಾಲಿ ಇರುವಂಥಹ ಹುದ್ದೆಗಳನ್ನು ತುಂಬಬೇಕು ಎಂದು ಇದೆ ಅದರ ಬಗ್ಗೆ ಬಹಳ ವರ್ಷಗಳಿಂದ ನಿರಂತರ ಪ್ರಯತ್ನ ಮಾಡುತ್ತಿದ್ದು, ಆದರೆ ಸಾಧ್ಯವಾಗತ್ತಿಲ್ಲ ಇನ್ನು ಮುಂದೆ ಎನ್‌ಕರೇಜ್ ಮಾಡಬೇಕು ಎನ್ನುವ ದೃಷ್ಟಿಯಿಂದ ಗುತ್ತಿಗೆ ವೈದ್ಯರು ಯಾರು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಹಿಂದೆ 11,000 ರೂಪಾಯಿ ಸಂಬಳ ಕೊಡುತ್ತಿದ್ದು, ಇನ್ನು ಮುಂದೆ ಅವರಿಗೆ 16,217 ರೂಪಾಯಿ ಸಂಬಳವನ್ನು ಹೆಚ್ಚವರಿ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡು ಆದೇಶವನ್ನು ಹೊರಡಿಸಿದ್ದೇವೆ ಅದೇ ರೀತಿ ಯಾರಾದರೂ ತಜ್ಞರು ನಮ್ಮ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವುದಕ್ಕೆ ಬಂದರೆ ಅವರಿಗೆ 17,554 ರೂಪಾಯಿಯನ್ನು ಕೊಡುವುದರ ಮೂಲಕ ಎನ್‌ಕರೇಜ್ ಕೊಡಬೇಕೆಂದು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ

ವಸತಿ ನಿಲಯದಲ್ಲಿ ಸ್ಥಳಾವಕಾಶದ ಕೊರತೆ

51(396) ಶ್ರೀ ರಘುಪತಿಭಟ್ ಕೆ (ಉಡುಪಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕಿನಲ್ಲಿ ಹಿಂದುಳಿದ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಸ್ಥಳಾವಕಾಶದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ವರ್ಷ ಮಂಜೂರು ಮಾಡಿದ ಮತ್ತು ಮಂಜೂರು ಮಾಡಲು ಉದ್ದೇಶಿಸಿದ ಹೊಸ ಹಾಸ್ಟೆಲ್ ಗಳ ಸಂಖ್ಯೆ ಹಾಗೂ ಅದರಲ್ಲಿಯ ಸ್ಥಳಾವಕಾಶವೆಷ್ಟು, (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಬಾಲಚಂದ್ರ ಜಾರಕಿಹೊಳಿ

ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂದಿಸಿದಂತೆ ಉಡುಪಿ ತಾಲ್ಲೂಕಿನಲ್ಲಿರುವ 2 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಯಾವುದೇ ಸ್ಥಳಾವಕಾಶದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

2007–08 ನೇ ಸಾಲಿನಲ್ಲಿ ಹೊಸದಾಗಿ ಹಿಂದುಳಿದ ವರ್ಗಗಳ ಒಂದು ಮರೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ಉಡುಪಿ ಪಟ್ಟಣದಲ್ಲಿ ಪ್ರಾರಂಭಿಸಲು ಮಂಜೂರು ಮಾಡಲಾಗಿದೆ ಇದರಲ್ಲಿ 50 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಕಲ್ಪಿಸಲಾಗುವುದು ರಾಜ್ಯಾದ್ಯಂತ ಒಟ್ಟು 75 ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದ್ದು ಇದರಿಂದ 3750 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ವಾಗುತ್ತದೆ ತಾಲ್ಲೂಕವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ಉಪ ಮುಖ್ಯಮಂತ್ರಿಗಳು ದಿನಾಂಕ 16 03 2007 ರಂದು ನಡೆದ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಆದೇಶ ಸಂಖ್ಯೆ ಸಕ 140 ವವಯೋ 2007 (ಭಾಗ–2) ದಿನಾಂಕ 14 6 2007 ರಲ್ಲಿ 2007

08 ನೇ ಸಾಲಿನಲ್ಲಿ 10 ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ ಈ ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 500 ವಿದ್ಯಾರ್ತಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ

ಕ್ರಸಂ	ತಾಲ್ಲೂಕು	ಮಂಜೂರಾದ ಸ್ಥಳದ ವಿವರ	ಮಂಜೂರಾತಿ ಸಂಖ್ಯಾಬಲ
1	ದೇವನಹಳ್ಳಿ	ಮೆಟ್ರಿಕ್ ಪೂರ್ವಬಾಲಕಿಯರ ವಿದ್ಯಾರ್ದಿನಿಲಯ ದೇವನ ಹಳ್ಳಿ	50
2	ಹೆಚ್ ಡಿ ಕೋಟೆ	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ದಿನಿಲಯ ಹೆಚ್ ಡಿ ಕೋಟೆ	50
3	ಹೊಳೆನರಸಿಪುರ	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ಥಿನಿಲಯ ಆನೆಕನ್ನಂಬಾಡಿ	50
4	ಅರಸೀಕೆರೆ	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ದಿನಿಲಯ ಕಳಸಾದರ ಹಳ್ಳಿ	50
5	ದೇವದುರ್ಗ	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ಥಿನಿಲಯ ಬಿ ಗಣೇಕಲ್	50
6	ಸಂಡೂರು	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ಥಿನಿಲಯ ತೋರಣಗಲ್ಲು	50
7	ಶಿರಗುಪ್ಪ	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಸಿರಗುಪ್ಪ ಟೌನ್	50
8	ದಾವಣಗೆರೆ	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ದಿನಿಲಯ, ಮಾಯಗೊಂಡ	50
9	ಮಾಲೂರು	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ದಿನಿಲಯ ಮಾಲೂರು ಟೌನ್	50
9	ಅಥಣಿ	ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ದಿನಿಲಯ ಹಾಗವಾಡ	50

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ವಿದಾನಸಬಾ ಸದಸ್ಯರಾದ ರಘುಪತಿ ಭಟ್ ಕೆ ಇವರ ಚುಕ್ಕೆ ಗುರುತಿನ ಪ್ರಶ್ನೆಗೆ ಸಂ 389ರ (ಅ) ಅನುಬಂಧ
2007–08 ನೇ ಸಾಲಿಗೆ ಮಂಜೂರಾಗಿರುವ ಮೆಟ್ರಿಕ್ ಪೂರ್ವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ

ಜಿಲ್ಲೆಯ ಹೆಸರು	ಕ್ರಸಂ	ವಿದ್ಯಾರ್ಥಿನಿಲಯದ ಹೆಸರು ಮತ್ತು ಸ್ಥಳ	ತಾಲ್ಲೂಕು	ವಿದ್ಯಾರ್ಥಿಗಳ ಮಂಜೂರಾತಿ ಸಂ
ಬೆಂ ಗ್ರಾಮಾಂತರ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಲಕ್ಷ್ಮೀಪುರ	ರಾಮನಗರ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ತರಚಗೆರೆ	ಚೆನ್ನಪಟ್ಟಣ	50
ಬಳ್ಳಾರಿ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಬೂದನೂರು	ಹಡಗಲಿ	50
ಬೆಳಗಾಂ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಸುಣದೋಳಿ	ಗೋಕಾಕ್	50
	2	ಮೆ ನಂ ಬಾಲಕರ ವಿದ್ಯಾರ್ಥಿನಿಲಯ ಬೆಳಗಾವಿ ಟೌನ್	ಬಳಗಾವಿ	50
	3	ಮೆ ನಂ ಬಾಲಕರ ವಿದ್ಯಾರ್ಥಿನಿಲಯ ಗೋಕಾಟೌನ್	ಗೋಕಾಕ್	50
ಬೀದರ್	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಬೀದರ್ ಪಟ್ಟಣ	ಬೀದರ್	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮೈಸಲರ	ಬಸವಕಲ್ಯಾಣ	50
	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹುಮನಾಬಾದ್ ಟೌನ್	ಹುಮನಾಬಾದ್	50

	4	ಮೆ ನಂ ಬಾಲಕರ ವಿದ್ಯಾರ್ಥಿನಿಲಯ ಬಾಲ್ಕಿ	ಬಾಲ್ಕಿ	50
ಬಿಜಾಪುರ	1	ಮೆ ಪೂ ಬಾಲಕಿಯರವಿದ್ಯಾರ್ಥಿನಿಲಯ ಹೊರ್ತಿ	ಇಂಡಿ	50
ಬಾಗಲಕೋಟೆ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹೆಬ್ಬಳ್ಳ	ಬಾದಾಮಿ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹುನಗುಂದ ಟೌನ್	ಹುನಗುಂದ	50
	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಎಡಳ್ಳಿ,	ಮುಧೋಳ	50
ಚಿಕ್ಕಮಗಳೂರು	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮಳಲೂರು	ಚಿಕ್ಕಮಗಳೂರು	50
	2	ಮೆ ಪೂ ಬಾಲಕಿಯರ ವಿದ್ಯಾರ್ಥಿನಿಲಯ ಬೇಗಾರಿ	ಶೃಂಗೇರಿ	50
	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ದೇವನೂರು	ಕಡೂರು	50
ಚಾಮರಾಜನಗರ	1	ಮೆ ನಂ ಬಾಲಕರ ವಿದ್ಯಾರ್ಥಿನಿಲಯ ಗುಂಡ್ಲುಪೇಟೆ	ಗುಂಡ್ಲುಪೇಟೆ	50
ದಕ್ಷಿಣ ಕನ್ನಡ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಗೇರುತಟ್ಟೆ	ಬೆಳ್ತಂಗಡಿ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಪುತ್ತೂರು	ಪುತ್ತೂರು	50
	3	ಮೆ ನಂ ಬಾಲಕಿಯ ವಿದ್ಯಾರ್ಥಿನಿಲಯ ಬೆಂಜನಪದವು	ಬಂಟ್ವಾಳ	50
ಧಾರವಾಢ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಬ್ಯಾಹಟ್ಟಿ	ಹುಬ್ಬಳ್ಳಿ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ತಾವರೆಕೆರೆ	ಕಲಘಟಗಿ	50

	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ನವಲಗುಂದ ಟೌನ್	ನವಲಗುಂದ	50
ದಾವಣಗೆರೆ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹೆಚ್ ಬಸವಾಪುರ	ದಾವಣಗೆರೆ	50
	2	ಮೆ ನಂ ಬಾಲಕಿಯವಿದ್ಯಾರ್ಥಿನಿಲಯ ಚೆನ್ನಗಿರಿಟೌನ್	ಚೆನ್ನಗಿರಿ	50
ಗುಲ್ಬರ್ಗಾ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಕೊಡಗೇರ	ಯಾದಗಿರಿ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹಾವನೂರು	ಅಫಜಲ್‌ಪುರ	50
	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ನಾಗವಟರಿ	ಶಹಾಪುರ	50
	4	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಕಮಲಾಪುರ	ಗುಲ್ಬರ್ಗಾ	50
ಗದಗ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಜಂತಿಶಿರೂರು	ಮುಂಡರಗಿ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ರೋಣ ಟೌನ್	ರೋಣ	50
ಹಾಸನ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ನಾತೇನಹಳ್ಳಿ ಗೇಟ್	ಚೆನ್ನರಾಯಪಟ್ಟಣ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಕುಂಬೇನ ಹಳ್ಳಿ ಗೇಟ್	ಚೆ ರಾ ಪಟ್ಟಣ	50
	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಅತ್ತಿಚೌಡೇನ ಹಳ್ಳಿ	ಚೆ ರಾ ಪಟ್ಟಣ	50
	4	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮಳಲಿ	ಹೊ ನ ಪುರ	50
	5	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಚರತಕೆರೆ	ಅರಸೀಕೆರೆ	50

	6	ಮ ಪೂ ಬಾಲಕರ ವಿದ್ಯಾರ್ಥಿನಿಲಯ ಹೊಂಗಡಹಳ್ಳಿ	ಸಕಲೇಶಪುರ	50
	7	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹುರಡಿ	ಸಕಲೇಶಪುರ	50
	8	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ದೊಡ್ಡಗೇಣಿಗೆರೆ	ಹಾಸನ	50
	9	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹಿರಿಸಾವೆ	ಚೆ ರಾ ಪಟ್ಟಣ	50
	10	ಮೆ ನಂ ಬಾಲಕಿಯರ ವಿ ನಿಲಯ ಅರಕಲಗೂಡು ಟೌನ್	ಅರಕಲಗೂಡು	50
	11	ಮೆ ನಂ ಬಾಲಕಿಯರ ವಿ ನಿಲಯ ಮೊಸಳೆ ಹೊಸಹಳ್ಳಿ	ಹಾಸನ	50
ಹಾವೇರಿ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಗೊಂದಿಗ್ರಾಮ	ಹಾನಗಲ್	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಚಿಕ್ಕೆರೂರು	ಹಿರೇಕೆರೂರು	50
ಕೊಡಗು	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮಡಿಕೇರಿಟೌನ್	ಮಡಿಕೇರಿ	50
ಕೋಲಾರ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ವೇಮಗಲ್	ಕೋಲಾರ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮುಳಬಾಗಿಲು	ಮುಳಬಾಗಿಲು	50
ಕೊಪ್ಪಳ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಗಂಗಾವತಿ ಟೌನ್	ಗಂಗಾವತಿ	50
ಮಂಡ್ಯ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಬೋಗಾರು	ನಾಗಮಂಗಲ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮಳವಳ್ಳಿಟೌನ್	ಮಳವಳ್ಳಿ	50

	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮಲ್ಲನಕುಪ್ಪೆ	ಮದ್ದೂರು	50
	4	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮಂಡ್ಯ ಟೌನ್ •	ಮಂಡ್ಯ	50
	5	ಮೆ ಪೂ ಬಾಲಕಿಯರ ವಿ ನಿಲಯ ಪಾಂಡವಪುರ ಟೌನ್	ಪಾಂಡವಪುರ ತಾ	50
	6	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಮಾದಾಪುರ	ಕೆ ಆರ್‌ಪೇಟೆ /	50
	7	ಮೆ ನಂ ಬಾಲಕರ ವಿದ್ಯಾರ್ಥಿನಿಲಯ ಕೆ ಆರ್ ಪೇಟೆ ಟೌನ್	ಕೆ ಆರ್‌ಪೇಟೆ	50
ಮೈಸೂರು	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಹುಣಸೂರು	ಹುಣಸೂರು	50
	2	ಮೆ ನಂ ಬಾಲಕರ ವಿದ್ಯಾರ್ಥಿನಿಲಯ ಸಾಲಿಗ್ರಾಮ	ಕೆ ಆರ್,ನಗರ	50
ರಾಚೂರು	1	ಮೆ ಪೂ ಬಾಲಕರ ವಿದ್ಯಾರ್ದಿನಿಲಯ ರಾಯಚೂರು ಟೌನ್	ರಾಯಚುರು	50
	2	ಮೆ ನಂ ಬಾಲಕರ ವಿದ್ಯಾರ್ಥಿನಿಲಯ ಲಿಂಗಸಗೂರು ಟೌನ್	ಚಿ ರಾ ಪಟ್ಟಣ	50
ಶಿವಮೊಗ್ಗ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಎಡೂರು	ಹೊಸನಗರ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಶಿಕಾರಿಪುರ ಟೌನ್	ಶಿಕಾರಿಪುರ	50
ತುಮಕೂರು	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಶಿರ ಟೌನ್	ಶಿರಾ	50
	2	ಮೆ ಪೂ ಬಾಲಕರ ವಿದ್ಯಾರ್ದಿನಿಲಯ ಕೊರಟಗೆರೆ ಟೌನ್	ಕೊರಟಗೆರೆ	50
	3	ಮೆ ಪೂ ಬಾಲಕರ ವಿದ್ಯಾರ್ದಿನಿಲಯ ಕುಣಿಗಲ್ ಟೌನ್	ಕುಣಿಗಲ್	50

	4	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಬಾಣಸಂದ್ರ	ತುರುವೇಕೆರೆ	50
	5	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ನಿಡಶಾಲೆ	ಕುಣಿಗಲ್	50
	6	ಮೆ ಪೂ ಬಾಲಕರ ವಿದ್ಯಾರ್ದಿನಿಲಯ ಕಂದಿಕೆರೆ	ಚಿಕ್ಕನಾಯಕನಹಳ್ಳಿ	50
	7	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಗಂಗಣಪಟ್ಟ	ತಿಪಟೂರು	50
ಉತ್ತರಕನ್ನಡ	1	ಮೆ ಪೂ ಬಾಲಕರ ವಿದ್ಯಾರ್ದಿನಿಲಯ ಕೋಲಸಿರ್ಸಿ	ಸಿದ್ದಾಪುರ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಭಟ್ಕಳಟೌನ್	ಭಟ್ಕಳ	50
	3	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಪಾಣಿಕಟ್ಟೆ	ಕುಮಟಾ	50
	4	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಕಾರವಾರ ಟೌನ್	ಕಾರವಾರ	50
ಉಡುಪಿ	1	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಅಮಾನೆಬೈಲು	ಕುಂದಾಪುರ	50
	2	ಮೆ ಪೂ ಬಾಲಕರ ವಿದ್ಯಾರ್ಥಿನಿಲಯ ಉಡುಪಿಟೌನ್	ಉಡುಪಿ	50

ಶ್ರೀ ಕೆ ರಘುಪತಿಭಟ್' ಮಾನ್ಯ ಅಧ್ಯಕ್ಷರೆ, 2007-08 ರಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ಮಂಜೂರು ಮಾಡಿದ್ದಾರೆ ಅದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಆದರೆ ಅದರಲ್ಲಿ ಒಂದು ಬದಲಾವಣೆ ಆಗಬೇಕಾಗಿದೆ ಮಾನ್ಯ ಉಪ ಮುಖ್ಯ

ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಕೊಡಿಬೆಟ್ಟನ ಪ್ರದೇಶದ ಕುಡಿಯಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು ತೆರೆಯುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು ಆದುದರಿಂದ ಅದನ್ನು ಅಲ್ಲಿಗೆ ಬದಲಾವಣೆ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಇನ್ನೊಂದು ಬಹಳ ಬೇಡಿಕೆ ಇರುವುದೇನೆಂದರೆ, ನೆನ್ನೆ ಬಹಳಷ್ಟು ನಕ್ಸಲೈಟ್ ಸಮಸ್ಯೆ ಬಗ್ಗೆ ಚರ್ಚೆಯಾಗಿದೆ ನಮ್ಮ ಉಡುಪಿ ನಗರಕ್ಕೆ ಬಹಳಷ್ಟು SSLC ಆದ ನಂತರ ಹುಡುಗಿಯರು, PUC ಗೆ ಅಥವಾ degree college, D, ED college ಗೆ ಬರುತ್ತಾರೆ ಅಲ್ಲಿ ಅವರಿಗೆ ವಾಸ್ತವ್ಯದ ವ್ಯವಸ್ಥೆ ಇಲ್ಲದೆ ತೊಂದರೆಯಾಗಿದೆ ಚಿಕ್ಕಮಗಳೂರು ಜಿಲ್ಲೆಯಿಂದ ಕೂಡ ಉಡುಪಿಗೆ ಶಿಕ್ಷಣಕ್ಕೆಂದು ಬರುತ್ತಾರೆ ಆದರೆ ಅವರಿಗೆ ಹಾಸ್ಟೆಲ್ ವ್ಯವಸ್ಥೆ ಇಲ್ಲದೆ ಬಹಳ ತೊಂದರೆಯಾಗಿದೆ ನಮಗೆ ವಿಶೇಷ ಆದ್ಯತೆ ಮೇಲೆ ಮೆಟ್ರಿಕ್ ನಂತರದ ಬಾಲಕಿಯರ ಹಾಸ್ಟೆಲ್ ಅನ್ನು ಮಂಜೂರು ಮಾಡಬೇಕು ಏಕೆಂದರೆ ನಕ್ಸಲ್ ಪೀಡಿತ ಪ್ರದೇಶದಿಂದ ಬಂದಂತಹ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡಬೇಕಾದರೆ ಒಂದು ಹಾಸ್ಟೆಲ್ ಅನ್ನು ಮಾಡಿಕೊಡಬೇಕಾಗುತ್ತದೆ ಅದನ್ನು ತಾವು ಮಾಡಬೇಕು ಇನ್ನು ತಮ್ಮ ಉತ್ತರದಲ್ಲಿ SC Hostel ಗೆ ಯಾವುದೇ ಕೊರತೆ ಇಲ್ಲವೆಂದು ಬಂದಿದೆ ಆದರೆ ಅದು ತಪ್ಪು ಮಾಹಿತಿಯಾಗಿದೆ ಮೆಟ್ರಿಕ್ ನಂತರದ SC ಹೆಣ್ಣು ಮಕ್ಕಳಿಗೆ ಸಾಕಷ್ಟು ತೊಂದರೆಯಿದೆ ಬುಡಕಟ್ಟು ಜನಾಂಗದವರು ನಕ್ಸಲ್ ಪ್ರದೇಶದಿಂದ ಉಡುಪಿ ನಗರಕ್ಕೆ ವಿದ್ಯಾಭ್ಯಾಸಕ್ಕೆ ಬರುತ್ತಾರೆ ನಮ್ಮ ಉಡುಪಿ ನಗರಕ್ಕೆ ವಿದ್ಯಾಭ್ಯಾಸಕ್ಕೆ ಬರುತ್ತಾರೆ ಆದುದರಿಂದ ಒಂದು ಪರಿಶಿಷ್ಟ ಜಾತಿಯವರಿಗೆ ಮೆಟ್ರಿಕ್ ನಂತರದವರಿಗೆ ಒಂದು ಹಾಸ್ಟೆಲ್ ಮತ್ತು ಬಾಲಕಿಯರಿಗೆ ಮೆಟ್ರಿಕ್ ನಂತರದ ಹಾಸ್ಟೆಲ್ ಇದು ಬಹಳ ಬೇಡಿಕೆ ಇರುವಂಥಾದ್ದು ಇದನ್ನು ಈ ಸಾಲಿನಲ್ಲೇ ತಕ್ಷಣ ಮಾಡಿಕೊಡುವಂಥಾದ್ದು, ಆಗಬೇಕೆಂಬ ಮಾತನ್ನು ಹೇಳುತ್ತೇನೆ

ಶ್ರೀ ಬಾಲಚಂದ್ರ ಎಲ್ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಕೆ ರಘುಪತಿಭಟ್‌ರವರು ಹೇಳಿದರು ಈಗಾಗಲೇ ಅವರ ಕ್ಷೇತ್ರಕ್ಕೆ ಒಂದು ಹಾಸ್ಟೆಲ್ ಅನ್ನು ಸಮಾಜ ಕಲ್ಯಾಣ ಇಲಾಖೆಯಿಂದ

ಮಂಜೂರು ಮಾಡಿಕೊಟ್ಟಿದ್ದೇವೆ ಅವರು ಅದನ್ನು ಬದಲಾವಣೆಗೆ ಕೇಳಿದ್ದಾರೆ ಅದನ್ನು ಅವರು ಯಾವ ಹಳ್ಳಿಗೆ ಕೇಳುತ್ತಾರೋ ಅಲ್ಲಿಗೆ ಬದಲಾವಣೆ ಮಾಡಿಕೊಡುತ್ತೇವೆ ಇದರ ಜೊತೆಗೆ ಇನ್ನೊಂದು ಹಾಸ್ಟೆಲ್‌ನ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ ಅದಕ್ಕೆ ಅವರು ಒಂದು ಪತ್ರವನ್ನು ಕೊಟ್ಟರೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು, ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ

ಶ್ರೀ ಆರ್ ಧೃವ ನಾರಾಯಣ್ ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಗೆ ಸೇರಿದಂಥಾ ಮಾಗಡಿ ರಸ್ತೆಯಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಖಾಲಿ ಜಮೀನು ಇದೆ ಅದನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡು ವಂದಾ ಅವಕಾಶಗಳು ಬಹಳಷ್ಟು ಇದೆ ನಾನು ಸಮಾಜ ಕಲ್ಯಾಣ ಸಚಿವರಲ್ಲಿ ವಿನಂತಿ ಮಾಡುತ್ತೇನೆ ಆ ನಿರಾಶ್ರಿತರ ಪರಿಹಾರ ಕೇಂದ್ರದ ಏನು ಖಾಲಿ ಜಮೀನು ಇದೆ ಆ ಜಮೀನನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡದ ಹಾಗೆ ತಾವು ಕ್ರಮ ತೆಗೆದುಕೊಳ್ಳಬೇಕು ಅಲ್ಲಿ ಒಂದು ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ಆಗಲಿ, ಭವನಗಳನ್ನಾಗಲೀ ಕಟ್ಟವಂಥಾದ್ದನ್ನು ಮಾಡಬೇಕೆಂಬ ವಿನಂತಿಯನ್ನು ಮಾನ್ಯ ಸಚಿವರಲ್ಲಿ ಹೇಳಲಿಚ್ಚಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಹಾಸ್ಟೆಲ್‌ಗಳಿಗೆ ಮಕ್ಕಳನ್ನು ಆಯ್ಕೆ ಮಾಡುವಂಥಾ ಸಮಿತಿಗೆ ಇ ಓ ಸಿ ಇ ಓ ಗಳ ಎದುರಿಗೆ ನಮ್ಮನ್ನು ಹೋಗಿ ಕುಳಿತುಕೊಳ್ಳಿ ಎಂದು ತಾವು ಹೇಳುತ್ತಿದ್ದೀರಿ ಇದನ್ನು ಏನಾದರೂ ಮಾಡಿ ಚೇಂಚ್ ಮಾಡಬೇಕು ಇಲ್ಲಿ ಯಾರಾದರೂ ನಾನ್-ಅಫಿಷಿಯಲ್ ಅಧ್ಯಕ್ಷತೆ ವಹಿಸಿ, ನಾವು ಸದಸ್ಯರಾಗಿ ಹೋಗುವುದು ಗೌರವ ಬಿಟ್ಟರೆ, ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿ, ನಮ್ಮನ್ನು ಸದಸ್ಯರನ್ನಾಗಿ ಮಾಡಿದ್ದೀರಿ ಇದನ್ನು ಮೊದಲೇ ಏನಾದರೂ ಮಾಡಿ ಚೇಂಜ್ ಮಾಡಬೇಕು ನೀವು ಎಂಎಲ್‌ಎಗಳನ್ನು ಅಥವಾ ಜಿಲ್ಲಾಉಸ್ತುವಾರಿ ಸಚಿವರನ್ನು ಜಿಲ್ಲಾ ಮಟ್ಟದಲ್ಲಿ ಅಧ್ಯಕ್ಷರನ್ನಾಗಿ ಮಾಡುತ್ತೀರಾ ಎಂದು ಕೇಳುತ್ತೇನೆ

ಅಧ್ಯಕ್ಷರು ಈಗ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ಅಧ್ಯಕ್ಷ ರಾಗಿದ್ದಾರಂತೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಇ ಒ ಗಳು ಒಂದಕ್ಕೆ ಅಧ್ಯಕ್ಷರಾಗಿದ್ದಾರೆ, ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ಒಂದಕ್ಕೆ ಇದ್ದಾರೆ

ಒಬ್ಬ ಸದಸ್ಯರು ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ಹಾಲಿ ಇರುವಂಥಾದ್ದು

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ತೀರ್ಮಾನ ಮಾಡಿ ನಾವು ಏಕೆ ಅಲ್ಲಿ ಹೋಗಿ ಕುಳಿತು ಕೊಳ್ಳಬೇಕು?

ಅಧ್ಯಕ್ಷರು ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ಸಹ ಅಧ್ಯಕ್ಷರೆ, ತಾನೇ

ಒಬ್ಬ ಸದಸ್ಯರು ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಕೆಳಗಡೆ ನಾವು ಒಬ್ಬ ಸದಸ್ಯರಾಗಿ ಕುಳಿತುಕೊಳ್ಳುವಂತೆ ಆಗಿದೆ ಆದುದರಿಂದ ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು

ಅಧ್ಯಕ್ಷರು ಆಯಿತು, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ

ಶ್ರೀ ಬಾಲಚಂದ್ರ ಎಲ್ ಜಾರಕಿಹೊಳಿ ಮಾನ್ಯ ಅಧ್ಯಕ್ಷರೆ, ಸದಸ್ಯರಾದ ಮಾನ್ಯ ಆರ್ ಧೃವನಾರಾಯಣ್‌ರವರು ಸಮಾಜ ಕಲ್ಯಾಣ ಇಲಾಖೆಗೆ ಸಂಭಂಧ ಪಟ್ಟಿರುವ ಜಮೀನಿನ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಮಾಗಡಿ ರಸ್ತೆಯಲ್ಲಿರುವಂಥ ಜಮೀನನ್ನು ಖಾಸಗಿ ವ್ಯಕ್ತಿಗಳು ತೆಗೆದುಕೊಳ್ಳ ಬಹುದೆಂದು ಹೇಳಿದರು ಈಗಾಗಲೇ ಇದರ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಹಾಗೂ ಸಂಯುಕ್ತ ಕರ್ನಾಟಕದಲ್ಲಿ ಒಂದು ಆರ್ಟಿಕಲ್ ಬಂದಿತ್ತು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತ 166 ಎಕರೆ ಜಮೀನಿನಲ್ಲಿ, ಕೆಲವು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡುತ್ತಿದ್ದಾರೆಂಬ ಆರ್ಟಿಕಲ್ ಬಂದ ನಂತರ ನಮ್ಮ ಸಮಾಜ ಕಲ್ಯಾಣ ಇಲಾಖೆಯ ಅದಿಕಾರಿಗಳೊಡನೆ ಚರ್ಚೆಮಾಡಿ, ನಾವು ಆ ಜಾಗದಲ್ಲಿ ಏನು ಮಾಡ ಬಹುದೆಂಬ ಬಗ್ಗೆ ಒಂದು ಆಕ್ಷನ್ ಪ್ಲಾನ್ ಮಾಡುತ್ತಿದ್ದೇವೆ ಈ 166 ಎಕರೆ ಜಮೀನಿನಲ್ಲಿ ನಾವು ಸಮಾಜ ಕಲ್ಯಾಣ ಇಲಾಖೆ ಸಂಬಂಧ ಪಟ್ಟಂತೆ ಸುಮಾರು 6,000 ಮಕ್ಕಳಿಗೆ ಬೆಂಗಳೂರು ನಗರದಲ್ಲಿ ಒಂದು ದೊಡ್ಡ ಹಾಸ್ಟೆಲ್ ಅನ್ನು ನಿರ್ಮಾಣ ಮಾಡಬೇಕೆಂದು ಮಾಡಿದ್ದೇವೆ

ಅದರಲ್ಲಿ 5,000 ಮಕ್ಕಳಿಗೆ 1,000 working women hostel ಮಾಡಬೇಕೆಂದು ಇದ್ದೇವೆ ಬೆಂಗಳೂರಿನಲ್ಲಿ ಅನೇಕ ಕಾಲ್ ಸೆಂಟರ್‌ಗಳಲ್ಲಿ, ಮತ್ತೆ ಬೇರೆ ಬೇರೆ ಗ್ರಾಮೀಣ ಪ್ರದೇಶಗಳಿಂದ ಬರುವಂಥಾ ಎಸ್ ಸಿ ಎಸ್‌ಟಿ backword class ಮಕ್ಕಳಿಗೆ ಬೆಂಗಳೂರಿನಲ್ಲಿ ಹಾಸ್ಟೆಲ್ ಫೆಸಿಲಿಟಿ ಸಿಗುವಂಥಾದ್ದು ಕಷ್ಟವಾಗುತ್ತದೆ ಅದಕ್ಕೋಸ್ಕರ 5,000 ಮಕ್ಕಳಿಗೆ ಮತ್ತು 1,000 working women ಗೆ ಇದರ ಜೊತೆಗೆ ಅಲ್ಲಿ ಬೆಗ್ಗರ್ಸ್ ಇರುವುದ ರಿಂದ, ಅಲ್ಲಿ ಒಂದೆರಡು ಹಾಲ್ ಬಿಟ್ಟರೆ ಏನು ಇಲ್ಲ ಅದನ್ನು ಇನ್ನು ಒಳ್ಳೆಯ ರೀತಿಯಲ್ಲಿ ಡೆವಲಪ್ ಮಾಡಬೇಕು ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಮೊರಾರ್ಜಿ ವಸತಿ ಶಾಲೆಗಳು ಎಲ್ಲಿ ಕಡಿಮೆ ಇದೆ, ಅದೇ ಜಾಗದಲ್ಲಿ ಮೂರು ಎಸ್ ಸಿ ಎಸ್‌ಟಿ backword class ಗಳಿಗೆ ಮೊರಾರ್ಜಿ ವಸತಿ ಶಾಲೆಗಳನ್ನು ಮಾಡಬೇಕು ಇದನ್ನು ಯಾವುದಾದರೂ ಸರಕಾರಿ ಸಂಸ್ಥೆಗೆ ಕೊಟ್ಟು ಮಾಡಬೇಕೋ ಅಥವಾ ಯಾವ ರೀತಿಯಲ್ಲಿ ಅದನ್ನು ಮಾಡಬೇಕೆಂಬ ಬಗ್ಗೆ ಪರಿಶೀಲನೆಯನ್ನು ಮಾಡು ತ್ತಿದ್ದೇವೆ

ಶ್ರೀ ಆರ್ ಧೃವ ನಾರಾಯಣ್ ತಾವು ಆ ಜಾಗವನ್ನು ಮೊದಲು ಪ್ರೊಟೆಕ್ಟ್ ಮಾಡಿ, ಇಲ್ಲಿ 166 ಎಕರೆ ಜಮೀನು ಏನು ಇದೆ, ಇದಕ್ಕೆ ಸುತ್ತಲೂ ಕಾಂಪೌಂಡ್ ನಿರ್ಮಾಣ ಮಾಡಿ, ಏಕೆಂದರೆ ಈ ಮಾಗಡಿ ರಸ್ತೆಯಲ್ಲಿ ಒಂದೊಂದು ಇಂಚು ಲ್ಯಾಂಡ್ ಕೂಡ ಬಹಳಷ್ಟು ವ್ಯಾಲ್ಯೂ ಇರುವುದರಿಂದ ತಾವು ಮೊದಲು ಅಲ್ಲಿ ಕಾಂಪೌಂಡ್ ನಿರ್ಮಾಣ ಮಾಡಿ, ಆ ಲ್ಯಾಂಡ್ ಪ್ರೊಟೆಕ್ಟ್ ಮಾಡಬೇಕು

ಶ್ರೀ ಬಾಲಚಂದ್ರ ಎಲ್ ಜಾರಕಿಹೊಳಿ ಮಾನ್ಯ ಅಧ್ಯಕ್ಷರೆ, ನಾವು ಅಲ್ಲಿ ಕಾಂಪೌಂಡ್ ಹಾಕುವುದಕ್ಕೆ ಈಗಾಗಲೇ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ನಮ್ಮ ಅಧಿಕಾರಿಗಳು ಅಲ್ಲಿ ಒಂದು ಸೈಡ್ ಕಾಂಪೌಂಡ್ ಇಲ್ಲವೆಂದು ಹೇಳಿದರು ಅಲ್ಲಿ ಕಾಂಪೌಂಡ್ ಹಾಕುತ್ತಿದ್ದೇವೆ ಅಲ್ಲಿ ಒತ್ತುವರಿಯಾಗುವಂಥಾದ್ದನ್ನು ತಡೆಯುತ್ತೇವೆ ಇನ್ನು ಮುಂದಿನ ದಿವಸಗಳಲ್ಲಿ ಬೆಂಗಳೂರು ನಗರದಲ್ಲಿ ನಮ್ಮ ಇಲಾಖೆಗೆ

ಶ್ರೀ ಸಿದ್ದರಾಮಯ್ಯ. ಮಾನ್ಯ ಅಧ್ಯಕ್ಷರೆ, ಈ ಜಮೀನನ್ನು ಸರ್ವೆ ಮಾಡಿಸಬೇಕು ಏಕೆಂದರೆ ಒತ್ತುವರಿಯಾಗಿದೆಯೆಂಬ ಮಾಹಿತಿಗಳು ಇದೆ

ಬೇರೆಯವರು, ಖಾಸಗಿಯವರು ಬಿಲ್ಡರ್ಸ್, ಆ ಜಮೀನನ್ನು ಹೊಡೆದುಕೊಳ್ಳುವ ಪ್ರಯತ್ನಗಳು ಕೂಡ ನಡೆದಿವೆ ಇವೆಲ್ಲಾ ನಿಮಗೆ ಗೊತ್ತಾಗಿದೆ ನಿಮ್ಮ ಇಲಾಖೆಯಲ್ಲಿ ಇದನ್ನು ಹೊಡೆದುಕೊಳ್ಳುವ ಪ್ರಯತ್ನ ನಡೆದಿತ್ತು ಅದನ್ನು ನೀವು ಉಳಿಸುವುದಕ್ಕೆ ಪ್ರಯತ್ನವನ್ನು ಮಾಡಿದ್ದೀರಿ, ಪುಣ್ಯ ಆ ಜಮೀನು ಉಳಿದಿದೆ ನೀವು ಇರುವುದರಿಂದ ಅದು ಉಳಿದು ಕೊಂಡಿದೆಯೆಂದು ಕಾಣುತ್ತದೆ, ಇಲ್ಲವೆಂದರೆ ಬಿಲ್ಡರ್‌ಗೆ ಹೊರಟು ಹೋಗುತ್ತಿತ್ತು ನೀವು ಉಳಿಸುವ ಪ್ರಯತ್ನವನ್ನು ಮಾಡಿದ್ದೀರಿ, ಈ ಜಮೀನು ಹೋಗುವುದಕ್ಕೆ ಬಿಡಬಾರದು ಅದನ್ನು ಸರ್ವೆ ಮಾಡಿಸಿ, ಒತ್ತುವರಿ ಮಾಡಿಕೊಂಡಿದ್ದರೆ, ಅದನ್ನು ಬಿಡಿಸಿ ಕಾಂಪೌಂಡ್ ಹಾಕಿ ಆ ಜಾಗವನ್ನು ರಕ್ಷಣೆ ಮಾಡಬೇಕು

ಶ್ರೀ ಬಾಲಚಂದ್ರ ಎಲ್ ಜಾರಕಿಹೊಳಿ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಸಿದ್ದರಾಮಯ್ಯನವರು, ಏನು ಸಜೆಷನ್ ಕೊಟ್ಟಿದ್ದಾರೆ, ಅದರಂತೆ ನಾನು ಈಗಾಗಲೇ ಅಲ್ಲಿ ಕಾಂಪೌಂಡ್ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ ನಮ್ಮ ಇಲಾಖೆಗೆ ಸಂಬಂದ ಪಟ್ಟಂತೆ 303 ಎಕರೆ ಜಾಗವಿತ್ತು ಈ ಜಮೀನು 1944 ನೇ ಇಸವಿಯಲ್ಲಿ ಬ್ರಿಟೀಷರ ಕಾಲದಲ್ಲಿ ಅಕ್ವೈರ್ ಮಾಡಿಕೊಂಡಿರುವಂಥಾದ್ದು ಇಲ್ಲಿಯವರೆಗೂ ಬೇರೆ ಬೇರೆ ಸಂಸ್ಥೆಯವರು ಆ ಜಾಗವನ್ನು ಲೀಜ್ ಮಾಡಿಕೊಂಡು, land transfer ಮಾಡಿಕೊಂಡು ಹೋಗಿದ್ದಾರೆ ಆ ಜಮೀನಿಂದ ನಮ್ಮ ಸಮಾಜ ಕಲ್ಯಾಣ ಇಲಾಖೆಗೆ ಒಂದು ರೂಪಾಯಿಯ ಲಾಭವಾಗಿಲ್ಲ ಈಗ ಅಲ್ಲಿ ನಾವು ಏನು ಮಾಡಿದರೂ ಅದರಿಂದ ನಮ್ಮ ಇಲಾಖೆಗೆ ಅನುಕೂವಾಗಬೇಕು ಅದಕ್ಕೋಸ್ಕರ ಅಲ್ಲಿ ಒಂದು ದೊಡ್ಡ ಪ್ರಮಾಣದ ಹಾಸ್ಟೆಲ್ ಮತ್ತು ಮೂರು ಮೊರಾರ್ಜಿ ವಸತಿ ಶಾಲೆಗಳನ್ನು ಹಾಗೂ ಬೆಗ್ಗರ್ಸ್‌ಗೆ ಡೆವಲಪ್ ಮಾಡುವುದಕ್ಕೆ ಒತ್ತುವರಿ ಮಾಡುವುದಕ್ಕೆ ನಮ್ಮ ಇಲಾಖೆಗೆ ಖಂಡಿತ ಬಿಡುವುದಿಲ್ಲ ಅಲ್ಲಿ ಒಂದು ಹಾಸ್ಟೆಲ್ ಅತೀ ಶೀಘ್ರದಲ್ಲಿ ಪ್ರಾರಂಭ ಮಾಡುತ್ತೇವೆಂಬ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ ಇದರ ಜೊತೆಗೆ ಸದಸ್ಯರಾದ ಶ್ರೀ ಜೆ ಸಿ ಮಾಧುಸ್ವಾಮಿಯವರ ಹಾಸ್ಟೆಲ್ ಸಲೆಕ್ಷನ್ ಕಮಿಟಿಗೆ ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಇದ್ದಾರೆ ಅದನ್ನು ತೆಗೆದು ಶಾಸಕರ ನೇತೃತ್ವದಲ್ಲಿ ಕಮಿಟಿಯನ್ನು ಮಾಡಿ ಅಥವಾ ಬೇರೆ ಯಾರಾದರೂ ಅಧಿಕಾರಿಗಳನ್ನು ಮಾಡಿಯೆಂದು ಹೇಳಿದ್ದಾರೆ ಈ ಸಲಹೆ ಯೋಗ್ಯವಾಗಿದೆ ಎಲ್ಲಾ ಕಡೆಗಳಿಂದಲೂ ಶಾಸಕರುಗಳಿಂದ ಒತ್ತಡ ಬರುತ್ತಿದೆ ಇದರ ಬಗ್ಗೆ ನಮ್ಮ

ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆಮಾಡಿ ಇದರ ಬಗ್ಗೆ ಈ ಸದನ ಮುಗಿಯುವುದರೊಳಗೆ ಒಂದು ನಿರ್ಣಯವನ್ನು ತೆಗೆದುಕೊಂಡು ನಾನು ಸದನದಲ್ಲಿ ತಿಳಿಸುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು, ಅದನ್ನು ಬದಲಾಯಿಸುವುದಕ್ಕೆ ಹೋಗಬಾರದು ತಾಲ್ಲೂಕು ಪಂಚಾಯತ್ ಅಧ್ಯಕ್ಷರನ್ನು ತೆಗೆದು ಶಾಸಕರನ್ನು ಮಾಡಿದರೆ, ಸರಿಯಾಗಿರುವುದಿಲ್ಲ ಅದನ್ನು ಮಾಡುವುದಕ್ಕೆ ಹೋಗಬೇಡಿ

ದಾದಿಯರುಗಳಿಗೆ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ

53(135) ಐವಾನ್ ನಿಗ್ಲಿ (ನಾಮಾಂಕಿತ)

ಮಾನ್ಯ ವೈದ್ಯಕೀಯ ಶೀಕ್ಷಣ ಸವಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕದ 3 ಶುಶ್ರೂಷಕರನ್ನು ರಾಷ್ಟ್ರಪತಿ ಭವನದಿಂದ ಪ್ರಧಾನ ಮಾಡುವ ಪ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಗೆ ನಾಮನಿರ್ದೇಶನಕ್ಕೆ ಶಿಪಾರಸ್ಸು ಮಾಡಲು ಭಾರತೀಯ ಶುಶ್ರೂಷ ಪರಿಷತ್ತು ಅಥವಾ ಕೇಂದ್ರ ಆರೋಗ್ಯ ಸಚಿವಾಲಯದಿಂದ ಸರ್ಕಾರಕ್ಕೆ ಅರ್ಜಿ ಬಂದಿರುವುದೇ?

ಆ) ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಪ್ರತಿಕ್ರಿಯಿಸದಿರುವುದರ ಬಗ್ಗೆ ಕಾರಣಗಳೇನು?

ವೈದ್ಯಕೀಯ ಶಿಕ್ಷಣ ಸಚಿವರು

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ನಾನು ಮೊಟ್ಟಮೊದಲಿಗೆ ಸರ್ಕಾರ ಕೊಟ್ಟಿರುವಂಥಾ ಉತ್ತರದಲ್ಲಿ ತಪ್ಪು ಮಾಹಿತಿಯುನ್ನು

ಕೊಟ್ಟಿದ್ದಾರೆಂದು ಹೇಳುತ್ತೇನೆ ಪ್ರತಿಯೊಂದು ಸ್ಟೇಟ್‌ಗೆ ಮೂರು ಜನರನ್ನು ನಾಮಿನೇಟ್ ಮಾಡಬೇಕೆಂದು ಪತ್ರವನ್ನು ಕೇಂದ್ರದಿಂದ ಕಳುಹಿಸಿದ್ದಾರೆ A circular has been sent to each and every state in India to recommend 3 nurses for each state for this award which is given by HIS EXCELLECNY PRESIDENT OF INDIA Nursing profession is the most sacred profession, let it be in India or let it be in any other country also

ಶ್ರೀ ಬಿ ಕೆ ಗೋಪಾಲ ಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕನ್ನಡ ಬಾಷೆಯನ್ನು ಚೆನ್ನಾಗಿ ಮಾತನಾಡುತ್ತಾರೆ

ಶ್ರೀ ಐವಾನ್ ನಿಗ್ಲಿ ನಾನು ಕನ್ನಡ ಮಾತನಾಡುತ್ತೇನೆ, ಆದರೆ ಏನಾದರೂ ತಪ್ಪು ಆದರೆ ನೀವೆಲ್ಲಾ ಸೇರಿ ನನಗೆ ತಮಾಷೆ ಮಾಡುತ್ತೀರಿ

ಶ್ರೀ ಬಿ ಕೆ ಗೋಪಾಲ ಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ಮಾನ್ಯ ಐವಾನ್ ನಿಗ್ಲಿಯವರುಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಹೇಳಿ, ಅವರು ನಮ್ಮ ಹತ್ತಿರ ತುಂಬಾ ಚೆನ್ನಾಗಿ ಕನ್ನಡ ಮಾತನಾಡುತ್ತಾರೆ ಅವರಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಹೇಳಿ

ಅಧ್ಯಕ್ಷರು ಅವರು ಆಂಗ್ಲೋ ಇಂಡಿಯನ್ ಅಲ್ಲವಾ, ಅವರು ಮಾತನಾಡಲಿ ಬಿಡಿ

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ನನ್ನ ಮಾತೃ ಭಾಷೆ ಇಂಗ್ಲಿಷ್ I am nominated as an MLA from the Anglo Indian community under Article 333

ಅಧ್ಯಕ್ಷರು ನೀವು ಪ್ರಶ್ನೆಯನ್ನು ಕೇಳಿ ನೀವು ನಿಮ್ಮ ಹಿನ್ನೆಲೆಯನ್ನು ಹೇಳುತ್ತಾ ಇದ್ದೀರಿ

ಶ್ರೀ ಐವಾನ್ ನಿಗ್ಲಿ ಆದುದರಿಂದ ನಾನು ಇಂಗ್ಲಿಷ್‌ನಲ್ಲಿ ಮಾತನಾಡಿದರೆ ತಪ್ಪಿಲ್ಲ ಅರ್ಥವಾಯಿತಾ? ನಾನು ಕನ್ನಡದಲ್ಲೂ ಮಾತನಾಡುತ್ತೇನೆ ಇಂಗ್ಲಿಷ್ ನಲ್ಲೂ ಮಾತನಾಡುತ್ತೇನೆ

ಅಧ್ಯಕ್ಷರು ಮಾನ್ಯ ಐವಾನ್ ನಿಗ್ಲಿಯವರೆ, ಪ್ರಶ್ನೆ ಕೇಳಿ, ಸಮಯ

ಹೋಗುತ್ತದೆ ಎಲ್ಲರೂ ಕುಳಿತುಕೊಳ್ಳಿ, ಅವರು ಪ್ರಶ್ನೆಯನ್ನು ಕೇಳಲಿ

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ಇವರು ನನಗೆ ಮಾತನಾಡುವುದಕ್ಕೆ ಬಿಡುವುದಿಲ್ಲ

ಅಧ್ಯಕ್ಷರು ಆಯಿತು ನೀವು ಪ್ರಶ್ನೆ ಕೇಳಿ

ಶ್ರೀ ಐವಾನ್ ನಿಗ್ಲಿ ನಾನು ಈಗ ಕನ್ನಡದಲ್ಲಿ ಮಾತನಾಡುತ್ತಿದ್ದೇನೆ, ಕೆಲವೊಂದು ಪದಗಳು ಕನ್ನಡದಲ್ಲಿ ಬರುವುದಿಲ್ಲ ಆಗ ನಾನು ಇಂಗ್ಲೀಷ್‌ನಲ್ಲಿ ಮಾತನಾಡುತ್ತೇನೆ

ಅಧ್ಯಕ್ಷರು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದಿಲ್ಲ, ಅವರ ಹಿನ್ನೆಲೆ, ಮುನ್ನೆಲೆ ಎಲ್ಲವನ್ನು ಹೇಳುತ್ತಾರೆ, ಏನು ಮಾಡುವುದು?

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ಎಲ್ಲಾ ಸ್ಟೇಟ್‌ಗಳಿಗೂ Indian Nursing Council ನಿಂದ letter ಅನ್ನು ಕಳುಹಿಸಿದ್ದಾರೆ ಮೂರು ಜನರನ್ನು ನಾಮಿನೇಟ್ ಮಾಡಬೇಕೆಂದು ಕೇಳಿದ್ದಾರೆ ಇಲ್ಲವೆಂದರೆ ಈ 20 ಜನ ಇತರೆ ರಾಜ್ಯದ ಶುಶ್ರೂಕಷರಿಗೆ ಹೇಗೆ ಅವಾರ್ಡ್ ಕೊಟ್ಟಿದ್ದಾರೆ? ಹೇಗೆ ಹುಡುಕಿ ಕೊಟ್ಟಿದ್ದಾರೆ? How did they come to know that these nurses are the deserving nurses to be awarded? ತಮಿಳು ನಾಡಿಗೆ ಕೊಟ್ಟಿದ್ದಾರೆ 20 ಅವಾರ್ಡ್ ಅನ್ನು ಕೊಟ್ಟಿದ್ದಾರೆ, ಕರ್ನಾಟಕ ರಾಜ್ಯಕ್ಕೆ ಏಕೆ ಕೊಟ್ಟಿಲ್ಲ ಕರ್ನಾಟಕಕ್ಕೆ ಏಕೆ ಕೊಡಲಿಲ್ಲ ನರ್ಸಿಂಗ್ ಅವಾರ್ಡ್ ಏಕೆಂದರೆ, ಸುತ್ತೋಲೆ ಸಿಕ್ಕಿದ ಮೇಲೂ ನಮ್ಮ ರಾಜ್ಯದಿಂದ ಬರೆದು ಕಳುಹಿಸಲಿಲ್ಲ I think, it has not come to the notice of Hon'ble Minister ಸುತ್ತೋಲೆ ಬಂದಿರಬಹುದು ಅದರ ಬಗ್ಗೆ ಸೆಂಟ್ರಲ್ ಗೌರ್ನ್‌ಮೆಂಟ್ ಮಾಹಿತಿಯೊಂದಿಗೆ ಒಂದು ಲೆಟರ್ ಕಳುಹಿಸಬೇಕು

ಶ್ರೀ ವಿ ಎಸ್ ಆಚಾರ್ಯ ಭಾರತೀಯ ಶುಶ್ರೂಷಾ ಪರಿಷತ್ತಿನಿಂದ ಅಥವಾ ಕೇಂದ್ರ ಸರ್ಕಾರದ ಆರೋಗ್ಯ ಸಚಿವಾಲಯದಿಂದ ನನ್ನ ವೈದ್ಯಕೀಯ ಶಿಕ್ಷಣದ ಇಲಾಖೆಗೆ, ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಗೆ ನಿಮ್ಮ ರಾಜ್ಯದಿಂದ ಮೂವರನ್ನು ಆಯ್ಕೆ ಮಾಡಿ ಕಳುಹಿಸಬೇಕೆಂದು ಯಾವ ಪತ್ರವೂ ಬಂದಿಲ್ಲ ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆ ಇದು ನಮ್ಮ ವೈದ್ಯಕೀಯ ಶಿಕ್ಷಣ ಇಲಾಖೆಗೆ ಯಾವುದೇ ಎನ್‌ಕ್ವೈರಿ ಬಂದಿಲ್ಲ ರಾಷ್ಟ್ರಪತಿ

ಭವನದಲ್ಲಿ ಪ್ರತಿವರ್ಷ ಮೇ 12 ರಂದು ಕೊಡುವಂಥ ಈ ಪ್ರಶಸ್ತಿಗಾಗಿ ಅರ್ಜಿ ಕಳುಹಿಸಿ ಎಂದು ಯಾವ ಲೆಟರ್ ಬಂದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ Let us put it this way ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಎನ್ನತಕ್ಕಂಥ ಯಾವುದಾದರೂ ಪ್ರಶಸ್ತಿ ಅಸ್ತಿತ್ವದಲ್ಲಿದೆಯೇ? ಇದ್ದರೆ, ಆ ಪ್ರಶಸ್ತಿಯನ್ನು ಕೊಡುವುದಕ್ಕೆ ವಿಧಿ ವಿಧಾನಗಳೇನು? Let us try to know

ಶ್ರೀ ವಿ ಎಸ್ ಆಚಾರ್ಯ ನಾನು ಆಗಲೇ ಹೇಳಿದ್ದನ್ನೇ ಮತ್ತೊಮ್ಮೆ ರಿಪೀಟ್ ಮಾಡಬೇಕಾಗುತ್ತದೆ ಭಾರತ ಸರ್ಕಾರದ ಯಾವುದೇ ಆರೋಗ್ಯ ಸಚಿವಾಲಯದಿಂದ ಅಥವಾ ನರ್ಸಿಂಗ್ ಕೌನ್ಸಿಲ್‌ನಿಂದ ನಮಗೆ ಯಾವುದೇ ಎನ್‌ಕ್ವೈರಿ ಬರಲಿಲ್ಲ ಹಾಗಾಗಿ ಅದಕ್ಕೆ ಹೆಸರನ್ನು ಕೊಡುವ ಅಥವಾ ಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ ನಮ್ಮ ರಾಜ್ಯದಲ್ಲಿ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಬೇರೆ ಬೇರೆ ಸಂಘಟನೆಗಳು, ಸಂಬಂಧ ಪಟ್ಟಂಥ ನರ್ಸಿಂಗ್ ಕೌನ್ಸಿಲ್‌ನವರು ಪ್ರಶಸ್ತಿಯನ್ನು ನೈಟಿಂಗೇಲರ ಬರ್ತ್‌ಡೇ ದಿವಸ ಮೇ 12 ರಂದು ಬರ್ತ್‌ಡೇ ಆಚರಣೆ ಮಾಡಿ ಕೊಡುತ್ತಿದ್ದಾರೆ ನಮಗೆ ಕೇಂದ್ರ ಸರ್ಕಾರದಿಂದೇನಾದರೂ ಅಂಥ ಎನ್‌ಕ್ವೈರಿ ಬಂದರೆ, ನಾವು ಒಳ್ಳೆ ಅರ್ಹರನ್ನು ಆಯ್ಕೆ ಮಾಡಿ ಕಳುಹಿಸುತ್ತೇವೆ

ಶ್ರೀ ಐವಾನ್ ನಿಗ್ಲಿ 2000ದ ಇಸವಿಯಲ್ಲಿ Anglo Indian Unity Centre ವತಿಯಿಂದ state level award ಅನ್ನು 12 ಜನ ಅರ್ಹ ನರ್ಸ್‌ಗಳಿಗೆ ವರ್ಷಂಪ್ರತಿ ಆಯ್ಕೆ ಮೂಲಕ ನಾವು Florence Nightingale Nurses Award Committee ಯನ್ನು ರಚನೆ ಮಾಡಿ ಕರ್ನಾಟಕ ರಾಜ್ಯದಲ್ಲಿ 12 ಜನ ನರ್ಸ್‌ಗಳಿಗೆ ಈ ಅವಾರ್ಡನ್ನು ಕೊಡಲಾಗುತ್ತಿದೆ ಕಳೆದ 8 ವರ್ಷಗಳಿಂದ ಈ ಅವಾರ್ಡನ್ನು ಕೊಡಲಾಗುತ್ತಿದೆ ಕೇಂದ್ರ ಸರ್ಕಾರದವರು ಕೊಟ್ಟಿರುವ 20 ಅವಾರ್ಡಿನ ಬಗ್ಗೆ ನಮ್ಮ ಕರ್ನಾಟಕ ಸರ್ಕಾರಕ್ಕೆ ಹೇಗೆ ಗೊತ್ತಾಗಲಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ಬಾಕಿ ಎಲ್ಲ ಕಡೆಗಳಲ್ಲಿ ಅವರು ಈ ಅವಾರ್ಡನ್ನು ಹೇಗೆ ಕೊಟ್ಟರು? ಎಲ್ಲಾ ರಾಜ್ಯಗಳನ್ನೊಳಗೊಂಡು 20 ಅವಾರ್ಡ್‌ನ್ನು ಕೊಟ್ಟಿದ್ದಾರೆ ಕೇಂದ್ರ ಸರ್ಕಾರದಿಂದ ಈ ತರಹದ ಒಂದು ಅವಾರ್ಡ್‌ನ್ನು ಕೊಡುತ್ತಿರುವಾಗ ನಮ್ಮ ಸ್ಟೇಟ್‌ನಿಂದ ಅದಕ್ಕೆ ಏಕೆ ಅಪ್ಲೈ ಮಾಡಲಿಲ್ಲ ಈ ರೀತಿಯ ಅವಾರ್ಡ್‌ನ್ನು ಕೊಟ್ಟು 10 ವರ್ಷಗಳಾಗುತ್ತು ಅದಕ್ಕೂ ಮುಂಚೆ,

ನರ್ಸ್‌ಗಳಿಗೆ ರಾಷ್ಟ್ರಪತಿ ಅವಾರ್ಡ್‌ನ್ನು ಕೊಡುತ್ತಿದ್ದರು ಅದರ ಜೊತೆಗೆ, ನಾವು Anglo Indian Unity Centre ನಿಂದ Florence Nightingale Nurses Award ಕೊಡುವಾಗ ಪ್ರತಿಯೊಂದು ಸಾರಿಯೂ ಸಂಬಂಧ ಪಟ್ಟ ಮಂತ್ರಿಗಳನ್ನು ಕರೆದು ಚರ್ಚೆ ಮಾಡುತ್ತಿದ್ದೆವೆ ಕನಿಷ್ಟ ಕನ್ನಡ ರಾಜ್ಯೋತ್ಸವದ ಒಂದು ಅವಾರ್ಡ್‌ನ್ನು ನರ್ಸಿಂಗ್ ಕ್ಷೇತ್ರಕ್ಕೆ ಕೊಡಬೇಕೆಂದು ನಾವು ಸುಮಾರು ಸಾರಿ ಹೇಳಿದ್ದೇವೆ ಪ್ರತಿಯೊಂದು ಸಾರಿ ಹೇಳಿದಾಗಲೂ ಕೊಡುತ್ತೇವೆ ಕೊಡುತ್ತೇವೆ ಎಂದು ಹೇಳಿರುವುದು ಬಿಟ್ಟರೆ ಅದನ್ನು ಕಾರ್ಯರೂಪಕ್ಕೆ ತಂದಿರುವುದಿಲ್ಲ ಎಲ್ಲ ಕ್ಷೇತ್ರಗಳಲ್ಲಿರುವವರಿಗೂ ಕೊಡುತ್ತಿದ್ದಾರೆ ಟೀಚರ್ಸ್‌ಗೆ ಕೊಡುತ್ತಿದ್ದಾರೆ, ಪೋಲೀಸರಿಗೆ ಕೊಡುತ್ತಿದ್ದಾರೆ ಆದರೆ ನರ್ಸ್‌ಗಳಿಗೆ ಕೊಡುತ್ತಿಲ್ಲ More than one lakh nurses are working in Karnataka state and this is the Most sacred profession in this world ಅದಕ್ಕೆ I would like to recommend the Hno'ble Minister and the Government that Legislative council ನಲ್ಲಿ ಒಂದು ನರ್ಸ್‌ಗೆ MLC ಸ್ಥಾನವನ್ನಾದರೂ ನರ್ಸಿಂಗ್ ವೃತ್ತಿಯಲ್ಲಿರುವವರಿಗೆ ಮೀಸಲಿಟ್ಟು ಅವಕಾಶ ಮಾಡಲು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ವಿ ಎಸ್ ಆಚಾರ್ಯ ರಾಜ್ಯಮಟ್ಟದಲ್ಲಿ ನರ್ಸ್‌ಗಳಿಗೆ, ಶುಶ್ರೂಕರುಗಳಿಗೆ ಪ್ರಶಸ್ತಿಯನ್ನು ಕೊಡುವಂಥಾದ್ದರ ಬಗ್ಗೆ ಯೋಚನೆ ಮಾಡುತ್ತದೆ ಸದನಕ್ಕೆ ನೇಮಕ ಮಾಡುವ ವಿಚಾರ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಎಲ್ಲರಿಗೂ ಸೇರಿದಂಥಾದ್ದು, ಯೋಚನೆ ಮಾಡುತ್ತೇವೆ

ಪ್ರಶ್ನೆ ಸಂಖ್ಯೆ 214------- ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 380------- ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 395------- ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 381-------

ಅಧ್ಯಕ್ಷರು ರಾಜೇಂದ್ರ ವರ್ಮಾರವರು ಈ ಪ್ರಶ್ನೆಗೆ 15 ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ

ವಿಟ್ಲ ಐಟಿಐ ಸಮಸ್ಯೆಗಳು

58(386) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ)

ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ವಿಟ್ಲಾ ಐಟಿಐ ಗೆ ಮಂಜೂರಾದ ಉಪನ್ಯಾಸಕರ ಮತ್ತು ಇತರ ಸಿಬ್ಬಂದಿ ವರ್ಗದವರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಮಂಜೂರಾಗದಿದ್ದರೆ ಕಾರಣಗಳೇನು?

ಇ) ಕಳೆದ 8 ವರ್ಷಗಳಿಂದ ನಡೆಯುತ್ತಿರುವ ವಿಟ್ಲ ಐಟಿಐನಲ್ಲಿ ಉಪನ್ಯಾಸಕರ ಕೊರತೆ, ಮೂಲಭೂತ ಸೌಕರ್ಯದ ಕೊರತೆ ಹಾಗೂ ಕಟ್ಟಡದ ಕೊರತೆಗಳನ್ನು ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಇವುಗಳನ್ನು ಪೂರೈಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ಇಕ್ಬಾಲ್ ಅನ್ಸಾರಿ

ಅ) ಪ್ರಾರಂಭಿಕ ಹಂತದಲ್ಲಿ ಯಾವುದೇ ಹುದ್ದೆಗಳು ಸೃಜಸಿ ಮಂಜೂರಾಗುವುದಿಲ್ಲ ನಂತರ 2003 ನೇ ಸಾಲಿನಲ್ಲಿ ಬೇರೆ ಸಂಸ್ಥೆಗಳಿಂದ ವರ್ಗಾವಣೆ ಮೂಲಕ ಅಥವಾ ಬಡ್ತಿ ಮೂಲಕ ಈ ಕೆಳಕಂಡ 07 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು

1	ಪ್ರಾಂಶುಪಾಲರು	–1
2	ತರಬೇತಿ ಅಧಿಕಾರಿ	–1
3)	ಕಿರಿಯ ತರಬೇತಿ ಅಧಿಕಾರಿ	–5

ಆ) ಆರ್ಥಿಕ ಮಿತವ್ಯಯದಿಂದ ನೇರ ನೇಮಕಾತಿ ಸಾಧ್ಯವಾಗಿರುವುದಿಲ್ಲ

ಇ) ಬೇರೆ ಸಂಸ್ಥೆಗಳಿಂದ ನಿಯೋಜನೆಯಿಂದ ಹಾಗೂ ಅತಿಥಿ

ಬೋಧಕರ ಸೇವೆಯನ್ನು ಉಪಯೋಗಿಸಿ ಕೊಂಡು ತರಬೇತಿಯನ್ನು ನೀಡಲಾಗುತ್ತಿದೆ ಸಂಸ್ಥೆಯನ್ನು ಪ್ರಸ್ಥುತ ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸ ಲಾಗುತ್ತಿದೆ ಸ್ವಂಥ ಕಟ್ಟಡ ನಿರ್ಮಾಣಕ್ಕಾಗಿ ಈಗಾಗಲೇ ನಿವೇಶನ ಗುರುತಿಸ ಲಾಗಿದ್ದು ಈ ಸಂಭಂಧ ಮಂಜುರಾತಿ ನೀಡುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಮಂಜೂರಾತಿ ದೊರೆತ ತಕ್ಷಣ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಇನ್ನಿತರ ಮೂಲಭೂತ ಸೌಕರ್ಯವಾದ ಯಂತ್ರೋಪಕರಣ ಮತ್ತು ಪೀಠೋಪಕರಣ ಒದಗಿಸಲಾಗಿದೆ

ಈ) ಮೇಲೆ ತಿಳಿಸಿದಂತ ಆದಷ್ಟು ತ್ವರಿತವಾಗಿ ಕ್ರಮ ವಹಿಸಲಾಗು ವುದು

ಶ್ರೀ ಕೆ ಪದ್ಮನಾಭ ಕೊಟ್ಟಾರಿ ವಿಟ್ಲಾ ಐಟಿಐಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ 2004 ನೇ ಸಾಲಿನಿಂದ ಪ್ರಾಂಶುಪಾಲರೊಬ್ಬರು, ತರಬೇತಿ ಅಧಿಕಾರಿಯೊಬ್ಬರು ಮತ್ತು ಕಿರಿಯ ತರಬೇತಿ ಅಧಿಕಾರಿಗಳು 5 ಜನ, ಒಟ್ಟು 7 ಜನರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎನ್ನುವ ಉತ್ತರವನ್ನು ಕೊಟಟಿದ್ದಾರೆ ನಾನು ತಿಳಿದುಕೊಂಡ ಹಾಗೆ ಒಟ್ಟು 27 ಜನ ಈ ಐಟಿಐ ನಲ್ಲಿರಬೇಕಾಗಿತ್ತು 10 ಜನ ತರಬೇತುದಾರರು ಇರಬೇಕಾಗಿತ್ತು ಅದರಲ್ಲಿ 5 ಜನ ತರಬೇತುದಾರರು ಮಾತ್ರ ನೇಮಕವಾಗಿದ್ದಾರೆ ಎಂದು ಹೇಳಿದ್ದಾರೆ ಉಳಿದವರನ್ನು ಯಾವಾಗ ನೇಮಕ ಮಾಡಲಾಗುತ್ತದೆ? ಇಲ್ಲಿ ಮೂಲಭೂತ ಸೌಕರ್ಯವಿಲ್ಲ, ಸ್ವಂತ ಕಟ್ಟಡವಿಲ್ಲದೇ ಬಾಡಿಗೆ ಕಟ್ಟಡದಲ್ಲಿ ಈ ಐ ಟಿ ಐ ನಡೆಯುತ್ತಿದೆ ಇದಕ್ಕೆ ಯಾವಾಗ ಕಟ್ಟಡವನ್ನು ನಿರ್ಮಿಸಲಾಗುತ್ತದೆ ಕಟ್ಟಡಕ್ಕಾಗಿ ಈಗಾಗಲೇ ಒಂದೂಕಾಲು ಎಕರೆ ಜಮೀನು ಮಂಜೂರಾಗಿದೆ ಆದರೆ ಇದುವರೆಗೆ ಕಟ್ಟಡ ನಿರ್ಮಾಣವಾಗಲಿಲ್ಲ ಅದು ಯಾವಾಗ ಆಗುತ್ತದೆ ಎಂದು ಸನ್ಮಾನ್ಯ ಸಚಿವರಿಗೆ ತಮ್ಮ ಮೂಲಕ ಕೇಳುತ್ತಿದ್ದೇನೆ

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಸಚಿವರು) ಮಾನ್ಯ ಸ್ನೇಹಿತರಾದಂಥ ಪದ್ಮನಾಭ ಕೊಟ್ಟಾರಿಯವರ ಕಳಕಳಿ ಏನಿದೆ ಅದರ ಬಗ್ಗೆ ಸರ್ಕಾರಕ್ಕೆ ಸಂಪೂರ್ಣವಾದಂಥ ಕಾಳಜಿಯಿದೆ 2002 ರಲ್ಲಿ ಬಂಟ್ವಾಳ ತಾಲ್ಲೂಕಿನಲ್ಲಿ ವಿಟ್ಲದಲ್ಲಿ ಐಟಿಐ ಕಾಲೇಜನ್ನು ಸ್ಥಾಪಿಸಲಾಗಿತ್ತು ಆಗ

ಹಣಕಾಸು ಇಲಾಖೆಯಿಂದ ಕೇವಲ ಮಂಜೂರಾತಿಯಾಗಿತ್ತು ಆದರೆ ಪೋಸ್ಟ್‌ಗಳಿಗೆ ಸ್ಯಾಂಕ್ಷನ್ ಕೊಟ್ಟಿರಲಿಲ್ಲ ತದನಂತರ 27 ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡಬೇಕು ಎಂದು ನಾವು ಕೋರಿದಾಗ ಅದರಲ್ಲಿ 9 ಪೋಸ್ಟನ್ನು ಕೊಟ್ಟಿದ್ದಾರೆ ಅದರ ಜೊತೆಗೆ re-employment ಮಾಡಬೇಕು ಎಂದು ಆರ್ದಿಕ ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೆ ಇದುವರೆಗೂ ಅದು ಪ್ರೊಸೆಸ್‌ನಲ್ಲಿದೆ ಆರ್ಥಿಕ ಇಲಾಕೆಯಿಂದ ಮಂಜೂರಾಗಿರುವ 9 ಪೋಸ್ಟ್‌ಗಳ ಜೊತೆಗೆ 5 ಜನ ಜೆ ಟಿ ಒಗಳನ್ನು ನಾವು re-employment ಮೇಲೆ ಅಂದರೆ ಬೇರೆ ಸ್ಥಳಗಳಿಂದ ಡೆಪ್ಯುಟೇಷನ್ ಮೇಲೆ ಮಾಡಿ ಕೆಲಸ ನಡೆಸುತ್ತಿದ್ದೇವೆ ಒಟ್ಟು 14 ಜನರು ಅಲ್ಲಿ ಇದ್ದಾರೆ ಅತಿ ಶೀಘ್ರದಲ್ಲಿ ಇನ್ನುಳಿದಂಥ ಸ್ಟಾಫ್‌ಗೆ ನಾವು ಆರ್ಥಿಕ ಇಲಾಕೆಯಿಂದ ಮಂಜೂರಾತಿಯನ್ನು ಕೋರಿದ್ದೇವೆ ಅವರು, ಮಂಜೂರಾತಿ ಕೊಟ್ಟ ತಕ್ಷಣ ಆ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎರಡನೆಯದಾಗಿ, ತಾವು ಕಟ್ಟಡದ ಬಗ್ಗೆ ಕೇಳಿದ್ದೀರಿ ಈಗಾಗಲೇ ಐಟಿಐ ಗ್ರಾಮಪಂಚಾಯತಿ ಬೇರೊಂದು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ 5 ಎಕರೆ ಭೂಮಿಯನ್ನು ಅದಕ್ಕಾಗಿ ಗುರುತು ಪಡಿಸಲಾಗಿದೆ ಇಡಿ ಸಿ ಯವರು ಆ ಕಮಿಟಿಯ ಛೇರ್‌ಮನ್ ಆಗಿರುತ್ತಾರೆ ಅವರು ಅದನ್ನು ಅಪ್ರೂವ್ ಮಾಡಿ ಅಲ್ಲಿಂದ ಕಳುಹಿಸಿದ ತಕ್ಷಣವೇ ಸರ್ಕಾರದಿಂದ ಅದಕ್ಕೆ ಹಣ ಹೋದ ಮೇಲೆ, ಸರ್ಕಾರದ architecture ಅವರಿಂದ plan ಅನ್ನು ತಯಾರಿಸಿ Finance Department ನ ಆರ್ಥಿಕ ನೆರವನ್ನು ಕೋರಿ ಅತಿ ಶೀಘ್ರದಲ್ಲಿ ಕಟ್ಟಡದ ಕಾಮಗಾರಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಕೆ ಪ್ರಭಾಕರ ಬಂಗೇರ ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಮಾಲಾಡಿಯಲ್ಲಿ ಐಟಿಐ ಗೆ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿಯಿತ್ತು ಆದರೆ ಅಪೆಂಡಿಕ್ಸ್ 'ಇ' ನಲ್ಲಿ ಸೇರಲಿಲ್ಲ ಎನ್ನುವ ಕಾರಣಕ್ಕಾಗಿ ಈ ವರ್ಷವೂ ಅದು ಬಿಟ್ಟು ಹೋಗಿದೆ ಹಾಗಾಗಿ ಈ ವರ್ಷದ ಅನುದಾನದಲ್ಲಿ ಅದನ್ನು ಸೇರಿಸಿ ಆ ಕಟ್ಟಡವನ್ನು ಮಾಡಬೇಕು ಎಂದು ತಮ್ಮ ಮೂಲಕ ಮಂತ್ರಿವರ್ಯರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಕೆ ಪದ್ಮನಾಭ ಕೊಟ್ಟಾರಿ ವಿಟ್ಲಾ ನಮ್ಮಲ್ಲಿ ಐಟಿಐ ಹೆಸರಿಗೆ ಆರ್ ಟಿಸಿ ಈಗಾಗಲೇ ಒಂದೂಕಾಲು ಎಕರೆ ಜಮೀನು ಮಂಜೂರಾಗಿದೆ ಐಟಿಐ ಹೆಸರಿಗೆ ಆರ್‌ಟಿಸಿಯಾಗಿದೆ ಉಳಿದಂಥಾದ್ದು ಶೀಘ್ರದಲ್ಲೇ ಆಗುತ್ತದೆ

ಹಾಗಾಗಿ ಈ ವರ್ಷದಲ್ಲೇ ಕಟ್ಟಡಕ್ಕೆ ಅನುದಾನವನ್ನು ಸನ್ಮಾನ್ಯ ಸಚಿವರು ಒದಗಿಸಬೇಕೆಂದು ತಮ್ಮ ಮೂಲಕ ನಾನು ಅವರನ್ನು ವಿನಂತಿ ಮಾಡುತ್ತೇನೆ

ಶ್ರೀ ಹೆಚ್ ಆಂಜನೇಯ ಮಾನ್ಯ ಅಧ್ಯಕ್ಷರೆ, ಭರಮಸಾಗರದ ಕ್ಷೇತ್ರದಲ್ಲಿ ಒಂದು ಐಟಿಐ ಕಾಲೇಜು ಇದೆ ಅದಕ್ಕೆ ಬೇಕಾಗಿರುವಂಥ 3 ಎಕರೆ ಜಮೀನನ್ನು ಕೂಡ ನಾವು ಕೊಟ್ಟಿದ್ದೇವೆ ಕಳೆದ 10–12 ವರ್ಷಗಳಿಂದ ಅದು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತದೆ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರತಕ್ಕಂಥ ಎಲ್ಲ ಐಟಿಐ ಕಾಲೇಜುಗಳಿಗೆ ಸ್ವಂತ ಕಟ್ಟಡ ಮಾಡಲಿಕ್ಕೆ ಸರ್ಕಾರಕ್ಕೆ ಏನು ತೊಂದರೆಯಿದೆ? ಅವುಗಳಿಗೆ ಅನುದಾನ ಬೇಕಿದ್ದರೆ, ಮಾನ್ಯ ಹಣಕಾಸಿನ ಸಚಿವರು ಶಾಲಾ ಕಾಲೇಜುಗಳಿಗೆ ಬೇಕಾದಷ್ಟು ಹಣವನ್ನು ಕೊಡಲಿಕ್ಕೆ ತಯಾರಿದ್ದಾರೆ ತಾವು ದಯವಿಟ್ಟು ಅದನ್ನು ಬಳಸಿಕೊಂಡು, ಎಲ್ಲೆಲ್ಲಿ ಐಟಿಐ ಕಾಲೇಜುಗಳು ಬಾಡಿಗೆ ಕಟ್ಟಗಳಲ್ಲಿ ನಡೆಯುತ್ತಿವೆಯೋ ಅವುಗಳಿಗೆ ಸ್ವಂತ ಕಟ್ಟಗಳನ್ನು ಒದಗಿಸಬೇಕು ಕೆಲವು ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ ಯಾವುದೋ ಸಣ್ಣ ಸಣ್ಣ ಬಾಡಿಗೆ ಕೊರಡಿಗಳಲ್ಲಿ ಅವುಗಳನ್ನು ನಡೆಸುತ್ತಿರುವುದರಿಂದ ಅಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ತರಬೇತಿ ಸಿಗುತ್ತಿಲ್ಲ ಅದಕ್ಕೆ ಬೇಕಾದಂಥ ಮೂಲಭೂತ ಸೌಲಭ್ಯಗಳನ್ನು ಖಾಸಗಿಯವರು ಕೊಡಲಿಕ್ಕಾಗುವುದಿಲ್ಲ ಕೆಲವು ಪ್ರಾಂಶುಪಾಲರುಗಳು ಖಾಸಗಿಯವರ ಜೊತೆ ಒಳ ಒಪ್ಪಂದ ಮಾಡಿಕೊಂಡು ಇಲ್ಲೇ ಇದ್ದರೆ ಒಳ್ಳೆಯದು ಎನ್ನುವ ರೀತುಯಲ್ಲಿ ಇದ್ದಹಾಗೆ ಕಾಣುತ್ತದೆಂದು ನನಗನ್ನಿಸುತ್ತಿದೆ ಅಂಥ ಕಾಲೇಜುಗಳು ಯಾವ್ಯಾವು ಇದೆ ಎನ್ನುವುದನ್ನು ಪತ್ತೆ ಮಾಡಿ ಸ್ವಂತ ಕಟ್ಟಡವನ್ನು ಮಾಡಲಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುತ್ತೇನೆ

ಶ್ರೀ ಇಕ್ಬಾಲ್ ಅನ್ಸಾರಿ ಮಾನ್ಯ ಅಧ್ಯಕ್ಷರೆ, ಈ ವರ್ಷ ಐಟಿಐ ಕಾಲೇಜು ಕಟ್ಟಡದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಪದ್ಮನಾಭ ಕೊಟ್ಟಾರಿಯವರು ಹೇಳಿದ್ದಾರೆ ನಾನು ಅವರಿಗೆ ತಿಳಿಸುವುದೇನೆಂದರೆ ಅಲ್ಲಿ ಏನು 5 ಎಕರೆ ಜಮೀನನ್ನು ಗುರುತಿಸಲಾಗಿದೆ, ಜಿಲ್ಲಾಧಿಕಾರಿಯವರ ಹತ್ತಿರ ಆ ಪ್ರೊಸೀಜರ್ ಏನಿದೆ, ಅದರಂತೆ ತಾವು ಇದಕ್ಕೆ ಕಳುಹಿಸಿದರೆ, ಹಣಕಾಸು ಇಲಾಖೆಯಿಂದ ನೆರವು ಕೋರಿಕೊಂಡು ಆದಷ್ಟು ಬೇಗನೆ ಈ ಕೆಲಸ ಪ್ರಾರಂಭಿಸುತ್ತೇವೆ ಎರಡನೆಯದಾಗಿ, ಆಂಜನೇಯರವರು

ಕೇಳಿದ ಪ್ರಕಾರ, ರಾಜ್ಯದಲ್ಲಿ 111 ಸಕಾರಿ ತರಬೇತಿ ಕೇಂದ್ರಗಳು ಅಸ್ತಿತ್ವದಲ್ಲಿವೆ ಅವುಗಳಲ್ಲಿ ಸಾಕಷ್ಟು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ ನಮಗೆ ಹಣದ ಕೊರತೆಯಿದೆ ಪ್ರಸ್ತಾವನೆ ಕೊಟ್ಟಿದ್ದೇವೆ ತಾವು ಹಣವನ್ನು ಬಳಸಿಕೊಳ್ಳಿ ಎಂದು ಹೇಳಿದ್ದೀರಿ ಆ ಹಣದಲ್ಲಿ ಒಂದೊಂದು ಪೈಸೆ ಸಹಿತ ನಾವು ಬಳಸಿಕೊಳ್ಳುವುದಕ್ಕೆ ರೆಡಿಯಾಗಿದ್ದೇವೆ -ಆದರೆ ನಮಗೆ ಐಟಿಐಗೋಸ್ಕರ ಸಾಕಷ್ಟು ಹಣ ಬರುತ್ತಿಲ್ಲ ಆದರೂ ಸಹ ತಾವೇನು ಪ್ರಶ್ನೆಯನ್ನು ಕೇಳಿದಿರಿ, ಅದರ ಬಗ್ಗೆ ನಾಳೆ ಬೆಳಿಗ್ಗೆಯೇ ಹಣಕಾಸು ಸಚಿವರು ಆರ್ಥಿಕ ಇಲಾಖೆಗೆ, ಉಳಿದಂಥ ಎಲ್ಲ ಬಿಲ್ಡಿಂಗ್‌ಗಳ ಎಸ್ಟಿಮೇಟ್ ಮಾಡಿ ಕಳುಹಿಸುತ್ತೇವೆ ಅಲ್ಲಿಂದ ಬಂದ ತಕ್ಷಣ ಇದೇ ವರ್ಷಕ್ಕೆ ನಾವು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇವೆ ಮಾನ್ಯ ಪ್ರಭಾಕರ್‌ರವರು ಹೇಳಿದ ಪ್ರಕಾರ ಅಪೆಂಡಿಕ್ಸ್-ಇನಲ್ಲಿ ನಾವು ಈ ವರ್ಷ ಸೇರಿಸಬೇಕೆಂದು ಬರೆದಿದ್ದೇವೆ ಆದರೆ ಅದು ಸೇರಿಲ್ಲ ಮಾನ್ಯ ಲೋಕೋಪಯೋಗಿ ಸಚಿವರಿಗೆ ಮನವಿ ಮಾಡಿಕೊಂಡು ಅದನ್ನು ಸೇರಿಸುವ ಹಾಗೆ ಮಾಡುತ್ತೇವೆಂದು ಹೇಳಲಿಕ್ಕೆ ಇಷ್ಟಪಡುತ್ತೇವೆ

ಶ್ರೀ ಆರ್‌ವಿ ದೇಶಪಾಂಡೆ ಈಗ ಐಟಿಐ ನಿಂದ ಮಾನವ ಸಂಪನ್ಮೂಲಗಳು ನಿರ್ಮಾಣವಾಗುತ್ತಿವೆ ಅವು Fitters, Electricians, Machinist, ಇರಬಹುದು ಇವತ್ತು ಅವುಗಳ ಅವಶ್ಯಕತೆ ಬಹಳವಿದೆ ಬಹಳಷ್ಟು ಕೈಗಾರಿಕೆಗಳು ಮುಖ್ಯವಾಗಿ manufacturing industries ಇವರ ಕಡೆ ನೋಡುತ್ತಿದ್ದಾರೆ ನಿಮಗೆ ನಾನು ಸಲಹೆ ಕೊಡುತ್ತಿದ್ದೇನೆಂದರೆ, ಕೇವಲ ITI ಗಳನ್ನು ಮಂಜೂರು ಮಾಡಬೇಡಿ ITI ಮಂಜೂರು ಮಾಡಿದ ನಂತರ ಅಲ್ಲಿ ಗುಣಮಟ್ಟದ human resources ನಿರ್ಮಾಣ ಮಾಡಲಿಕ್ಕೆ ಒಳ್ಳೆಯ faculty ಇರಬೇಕು ಎರಡನೆಯದಾಗಿ ಸರಿಯಾದ ಮೂಲಭೂತ ಸೌಕರ್ಯಗಳಿರಬೇಕು ಕೇವಲ ನಿಮ್ಮ ಕಾಲದಲ್ಲಿ ಆಗಿದೆ ಎಂದು ನಾನು ಹೇಳುವುದಿಲ್ಲ ಇವತ್ತು ನಮ್ಮ ಸರ್ಕಾರಿ ITI ನಲ್ಲಿ ಸರಿಯಾದ ಮೂಲಭೂತ ಸೌಕರ್ಯಗಳಿಲ್ಲ ಈಗ ನಾವು ಸಾಕಷ್ಟು ಒಳ್ಳೆಯ human resources develop ಮಾಡಲಿಕ್ಕೆ ಸಾಧ್ಯ ನಾವು develop ಮಾಡಿದ್ದೇವೆ ತಮಗೆ ಸಾಧ್ಯವಿದ್ದರೆ ಬಂದು ನೋಡಿ ನಾನೇನು ನಿಮಗೆ ಸಲಹೆ ಮಾಡುತ್ತಿದ್ದೇನೆಂದರೆ ಇವತ್ತು ಕೈಗಾರಿಕೆಗಳಿಗೆ ಏನು ಬೇಕು ಆ ತರಹದ courses ಅನ್ನು ನೀವು ಪ್ರಾರಂಭ ಮಾಡಬೇಕು Syllabus ಮಾಡಬೇಕು ಹಾಗಾಗಿ ಒಂದು ಕೈಗಾರಿಕೆ ಬಗ್ಗೆ ಒಂದು meeting

ಮಾಡಿ ತಿಳಿದುಕೊಂಡು ಯಾವ ತರಹದ courses ಅನ್ನು ನಾವು ಪ್ರಾರಂಭ ಮಾಡಬೇಕು? ಯಾವ ರೀತಿಯಿಂದ ಅದಕ್ಕೆ syllabus ಇರಬೇಕು? ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ software industry ಮಾಡಿದ್ದೆ Triple ITI ಏನು ಬಂತು theres was only advice of the It industry ಆ ಪ್ರಕಾರ ಆ ರೀತಿ ತಾವು ಮಾಡಿದರೆ ಒಳ್ಳೆಯ ಗುಣಮಟ್ಟದ ಸಂಪನ್ಮೂಲಗಳು ನಿರ್ಮಾಣವಾಗಬಹುದು ಗುಣ ಮಟ್ಟದ human resources develop ಆಗಬಹುದು ಆ ಮಕ್ಕಳಿಗೆ ವಿದ್ಯಾಭ್ಯಾಸ ಸಿಗಬಹುದು ನಾವೂ ಒಂದು ITI ಮಾಡಿದ್ದೇವೆ, ಅವರು they are selected in campus ಆ ತರಹದ ವಾತಾವರಣವನ್ನು Government ITI ನಲ್ಲಿ ಮಾಡಬೇಕಾದರೆ ಆ ತರಹ ಮಾಡಬಹುದು ಎಂದು ನಾನು ಸಲಹೆ ಕೊಡುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಮಂತ್ರಿಗಳು ಈಗ ಉತ್ತರವನ್ನು ಕೊಟ್ಟರು ಅವರಿಗೆ ಹಣ ಕೊಡುವುದು ಹಣಕಾಸು ಇಲಾಖೆಯೋ ಅಥವಾ ಲೋಕೋಪಯೋಗಿ ಇಲಾಖೆಯವರೋ? ಎಂದು ನನಗೆ ಗೊತ್ತಾಗಲಿಲ್ಲ ನಮ್ಮ ಪೆರಡೂರಿನಲ್ಲಿ ಜಾಗವನ್ನು ಖರೀದಿ ಮಾಡಿದ್ದಾರೆ ತಾವು ಹೇಳಿದಿರಿ, ಲೋಕೋಪಯೋಗಿ ಸಚಿವರನ್ನು ಕೇಳಿ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದಿರಿ ಯಾವ ಇಲಾಖೆಯಿಂದ ಹಣ ಬರುತ್ತದೆ ಎಂಬುದು ಬೇಕು ಹಣಕಾಸು ಇಲಾಖೆಯಿಂದಾದರೆ ಹಣಕಾಸು ಸಚಿವರು ಇಲ್ಲೇ ಇದ್ದಾರೆ ಲೋಕೋಪಯೋಗಿ ಇಲಾಖೆಯಿಂದ ಎಂದು ಏಕೆ ಹೇಳಿದರೋ ಗೊತ್ತಿಲ್ಲ ಅವರಿಂದ ನೀವೇನು ಕೇಳುತ್ತೀರಿ?

ಶ್ರೀ ಇಕ್ಬಾಲ್ ಅನ್ಸಾರಿ ಹಿರಿಯ ಸದಸ್ಯರಾದ ದೇಶಪಾಂಡೆಯವರು ಬಹಳ ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ ಖಾಸಗಿ ಕೈಗಾರಿಕಾ ತರಬೇತಿಗಳಲ್ಲಿ ನೂತನವಾದಂಥ upgrade sectors, trades ಒಂದಾಗಿದೆ ಅದೇ ರೀತಿಯಲ್ಲಿ ಸರ್ಕಾರದಲ್ಲಿಯೂ ಮಾಡಬೇಕು ಹೊಸ ಹೊಸ ಟ್ರೇಡ್ಸ್, ನೂತನ ಇಂಡಸ್ಟ್ರೀಸ್ ಏನು ಬರುತ್ತಿವೆ, ಅದರ ಆಧಾರದ ಮೇಲೆ ರಾಜ್ಯದಲ್ಲಿ ನಾವು Computer hardware, mechanic, tool and dye makers, Medical electronics, ಏಕೆಂದರೆ ಹಿಂದೆ ಏನಾಗುತ್ತಿತ್ತೆಂದರೆ ಕೇವಲ fitter, welder, Electricin ಈ 2–3 ಮಾತ್ರ ಇತ್ತು ಈಗ ನಾವು upgrade ಬಹಳಷ್ಟು trades ತೆಗೆದು

ಕೊಂಡಿದ್ದೇವೆ ಅದಕ್ಕೆ ತಕ್ಕಂಥೆ ತಾವು ಹೇಳಿದ ಪ್ರಕಾರ, infrastructure ಕೊಡಬೇಕೆಂದು ಕೇಳಿದ್ದೇವೆ ಇವೆಲ್ಲವನ್ನೂ ನಮ್ಮ ಹಣಕಾಸಿನ ಆಧಾರದ ಮೇಲೆ ಇದು ಅವಲಂಬಿತವಾಗಿದೆ ಅದಕ್ಕೆ ಪ್ರತ್ನ ಮಾಡಿ ಸರಿಪಡಿಸಲಿಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ ನಮ್ಮ ಹೆಗ್ಡೆಯವರು ಕೇಳಿದ ಪ್ರಕಾರ, ಹಣಕಾಸು ಇಲಾಖೆಯವರೇನು ಹಣ ಕೊಡುತ್ತಾರೆ ಅದರಲ್ಲಿ ಕಟ್ಟಡಗಳಿಗೆ Appendix-E ನಲ್ಲಿ ತೆಗೆದುಕೊಳ್ಳಲಾಗುತ್ತದೆ Appendix-E ನಲ್ಲಿ ತೆಗೆದುಕೊಂಡಾಗ ಲೋಕೋಪಯೋಗಿ ಇಲಾಖೆಯಿಂದ ಅದನ್ನು ಸೇರ್ಪಡೆ ಮಾಡಲಾಗುತ್ತದೆ ಅದಕ್ಕೆ ನಾವು ಆ ಮಾತು ಹೇಳಿದೆ ಹಣಕಾಸು ಇಲಾಖೆಯವರು ನಮ್ಮ ITI ಮೇಲೆ ಕೊಡುತ್ತಾರೆ Appendix-E ನಲ್ಲಿ ಅದು ಕಟ್ಟಡಕ್ಕೋಸ್ಕರ ಲೋಕೋಪಯೋಗಿ ಇಲಾಖೆಯವರಿಂದ ಮಾತ್ರ ತೆಗೆದುಕೊಳ್ಳಲಾಗುತ್ತದೆ ಜಾಗವಿದ್ದ ಕಟ್ಟಡಕ್ಕೆ ಅದನ್ನು ಕೊಡಲಾಗುತ್ತದೆ

ಶ್ರೀ ಎನ್ ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) ಅವರು ಹೊಸದಾಗಿ ಮಂತ್ರಿಗಳಾಗಿದ್ದು ಕೆಲಸವನ್ನು ಕೂಡಮಾಡುತ್ತಿದ್ದಾರೆ ಇದು ತಾಲ್ಲೂಕು ಮಟ್ಟದಲ್ಲಿ ಹಳ್ಳಿಯ ಪ್ರದೇಶದಲ್ಲಿರುವ ನಿರುದ್ಯೋಗಿಗಳಿಗೆ ಕೆಲಸ ಸಿಗುವಂತೆ ಮಾಡಿ ನಿರುದ್ಯೋಗವನ್ನು ನಿರ್ಮೂಲ ಮಾಡತಕ್ಕಂಥ ಶಕ್ತಿ ಐಟಿಐ ಗೆ ಇದೆ ಆ ಕೆಲಸ ನಡೆಯುತ್ತಿದೆ ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನ ತಾಲ್ಲೂಕಿನಲ್ಲಿ ಐಟಿಐ ಕಟ್ಟಡಕ್ಕೆ ಮಂಜೂರಾತಿ ಆಗಿದ್ದು ಆ ಕಟ್ಟಡ ಕೆಲಸ ಇನ್ನೂ ಪ್ರಾರಂಭವಾಗಿಲ್ಲ ಹಣವೂ ಬಿಡುಗಡೆಯಾಗಿಲ್ಲ ತಾವು ಹೆಚ್ಚು ರಾಜಕಾರಣದಲ್ಲಿ ವ್ಯಸ್ತರಾಗಿದ್ದೀರಿ ತಮಗೆ ಕಾಲಾವಕಾಶ ಇರುವುದು ಎರಡೇ ತಿಂಗಳು ಮುಂದೆ ಅವರು ಮುಖ್ಯಮಂತ್ರಿಯಾದಮೇಲೆ ಅವರ ಮಂತ್ರಿಮಂಡಲದಲ್ಲಿ ತಾವು ಮಂತ್ರಿ ಆಗುವುದಿಲ್ಲ ಅದಕ್ಕೆ ಇವತ್ತು ತಮಗೆ ಏನು ಖಾತೆ ಸಿಕ್ಕಿದೆ ಅದನ್ನು ಸರಿಯಾಗಿ ನಿರ್ವಹಿಸಬೇಕು ಕುಮಾರಸ್ವಾಮಿ ಎದುರುಗಡೆ ನಾವು ಕುಮಾರಸ್ವಾಮಿಯವರನ್ನು ಬೆಂಬಲಿಸುತ್ತೇವೆಂದು ಹೇಳುತ್ತಾರೆ ನಿಮ್ಮ ಪ್ರೊಪೋಸಲ್‌ಗೆ ಹೇಗೆ ಅವರು ಹಣ ಕೊಡುತ್ತಾರೆ? ಯಡಿಯೂರಪ್ಪನವರು ಹೆಂಗೂ ಕೊಡುವುದಿಲ್ಲ ಅದಕ್ಕೇ ಇನ್ನು 2 ತಿಂಗಳು ಅವಧಿಯಲ್ಲಿ ಯಾವ್ಯಾವ ಐಟಿಐ ಕೆಲಸ ಮಾಡಬೇಕಾದ ಕಾರ್ಯ ಕ್ರಮವಿದೆ ಅದನ್ನು ತೀವ್ರವಾಗಿ ತಾವು ಮುಗಿಸಿರಿ ಕೆಲಸ ಮಾಡಿ ಸಮಕ್ಷಮ ಯಡಿಯೂರಪ್ಪನವರ ಹತ್ತಿರ ಹೋಗಿ ತಾವು ಹಣ ತೆಗೆದುಕೊಂಡು ಕಟ್ಟಡ ಪ್ರಾರಂಭ ಮಾಡತಕ್ಕಂಥ ಕೆಲಸ ಮಾಡಿ

ಶ್ರೀ ಆರ್ ವಿ ದೇಶಪಾಂಡೆ ಯಡಿಯೂರಪ್ಪನವರು ಮುಂದೆ ಮುಖ್ಯ ಮಂತ್ರಿಯಾಗುತ್ತಿದ್ದಾರೆ ನಾವು ಅವರನ್ನು ಬೆಂಬಲಿಸುತ್ತೇವೆಂದು ಹೇಳಿ

ಅಧ್ಯಕ್ಷರು ಎಲ್ಲ ಆಯಿತು ರಾಜಕೀಯ ಪ್ರಶ್ನೆ ಎಂದು ಹೇಳುವುದು ಬೇಡ

ಶ್ರೀ ಇಕ್ಬಾಲ್ ಅನ್ಸಾರಿ ವಿರೋಧ ಪಕ್ಷದ ನಾಯಕರು ಇಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ತಾವೇ ಮುಂದೆ ಹೇಳಿಬಿಟ್ಟರೆ ಹಣ ಎಲ್ಲಿ ಕೊಡುತ್ತಾರೆ? ಹಣ ತೆಗೆದುಕೊಳ್ಳಲಿಕ್ಕೆ ನಾವು ಈಗ ಬಹಳಷ್ಟು ಪ್ರಯತ್ನ ಮಾಡುತ್ತಿದ್ದೇವೆ ಆಮೇಲೆ ಎಲ್ಲೆಲ್ಲಿ ಕಟ್ಟಡಗಳು ಆಗಲಿಲ್ಲ ಆ ಕಟ್ಟಡಕ್ಕೋಸ್ಕರ ಈಗಾಗಲೇ ಹಣಕಾಸು ಇಲಾಖೆಯವರನ್ನು ಭೇಟಿ ಮಾಡಿ ಇದ್ದೇವೆ ಯಡಿಯೂರಪ್ಪನವರು ಬಹಳ ಸಾಫ್ಟ್ ಆಗಿದ್ದಾರೆ

ಶ್ರೀ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಕೊಡುವುದಿಲ್ಲವೆಂದು ಸಾಫ್ಟ್ ಆಗಿದ್ದಾರೆಯೇ? ಅನ್ಸಾರಿಯವರೇ, ನೀವು 2–3 ಸಾರಿ ಹೇಳಿದ್ದೀರಿ, ನಾವು ಯಾವ ಕಾರಣಕ್ಕೂ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡುವುದಕ್ಕೆ ಬಿಡುವುದಿಲ್ಲ, ನಮ್ಮ ತೀರ್ಮಾನವಾಗಿಬಿಟ್ಟಿದೆ ಎಂದು ಹೇಳಿದ್ದೀರಿ ಆದ್ದರಿಂದ ಈಗವರು ಇಷ್ಟೆಲ್ಲ ಹೇಳಿದ ಮೇಲೆ ನಿಮಗೆ ಹೇಗೆ ಹಣ ಕೊಡುತ್ತಾರೆ ಹಾಗೆ ಹೇಳಿದರೂ ಕೊಡುತ್ತಾರೆಯೇ?

ಶ್ರೀ ಇಕ್ಬಾಲ್ ಅನ್ಸಾರಿ ನಮ್ಮದು ಅಭಿವೃದ್ಧಿ ಮತ್ತು ಪ್ರಗತಿಪರ ವಾದಂಥ ಸರ್ಕಾರವಿರುವುದರಿಂದ ನಮ್ಮ ರಾಜಕೀಯ ವಿಚಾರಗಳು ಬೇರೆ, ಅಭಿವೃದ್ಧಿ ವಿಚಾರಗಳು ಬೇರೆ ಎಂದು ಹೇಳಿ ಅವರು ಕೊಡುತ್ತಾರೆ ಈಗ ಅವರು ಸದನದಲ್ಲಿಯೇ ಇದ್ದಾರೆ ಅವರು ಬಹುಶಃ ಕೊಡುತ್ತೇನೆಂದು ಹೇಳುತ್ತಾರೆ ಆಮೇಲೆ ತಪ್ಪದೇ ಕೊಡುತ್ತಾರೆ

ಶ್ರೀ ಸಿದ್ದರಾಮಯ್ಯ ಯಡಿಯೂರಪ್ಪನವರನ್ನು ನಾವು ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಮಾಡುವುದಿಲ್ಲವೆಂದು ಹೇಳುತ್ತೀರಿ

ಶ್ರೀ ಇಕ್ಬಾಲ್ ಅನ್ಸಾರಿ ಇಲ್ಲ ತಪ್ಪದೇ ಕೊಡುತ್ತಾರೆ

ಶ್ರೀ ವಾಟಾಳ್ ನಾಗರಾಜ್ ಈಗ ಅವರು ಇವರು ಒಟ್ಟಿಗೆ ಸೇರಿದ್ದಾರೆ ಸಮಸ್ಯೆ ಬಗೆಹರಿದಿದೆ

ಶ್ರೀ ಸಿದ್ದರಾಮಯ್ಯ ಅವರಿಬ್ಬರೂ ಒಟ್ಟಿಗೆ ಸೇರುವುದಕ್ಕೆ ಸಾಧ್ಯವೇ ಇಲ್ಲ, ನೀವು ಬಿಜೆಪಿಯವರ ಜೊತೆ ಸೇರುತ್ತೀರಾ?

ಅಧ್ಯಕ್ಷರು ಅನ್ಸಾರಿಯವರೇ ರಾಜಕೀಯ ಬೇರೆ ಬೇರೆ ವಿಚಾರಗಳನ್ನು 'ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ದಯಮಾಡಿ ಕುಳಿತುಕೊಳ್ಳಿ ಪ್ರಶ್ನೋತ್ತರಗಳನ್ನು ಒಂದು ಗಂಟೆಯ ಅವಧಿಯಲ್ಲಿ ಮುಗಿಸಬೇಕಾಗಿದೆ (ಗೊಂದಲ) ಬೇರೆ ಸಮಯದಲ್ಲಿ ನೀವು ಹೀಗೆ ಪರಸ್ಪರ ಮಾತುಕತೆ ನಡೆಸಿ ಇದು question hour ನಿಗದಿಯ ಸಮಯದಲ್ಲಿ ಮುಗಸಬೇಕು ಇನ್ನೂ 4 ಜನರಿದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಸರ್ಕಾರ ಅಸ್ಥಿರವಾಗಿದ್ದರೆ, ಕಾರ್ಯಕ್ರಮಗಳೂ ಸಹ ಅಸ್ಥಿರವಾಗಿರುತ್ತದೆ ಅದಕ್ಕಾಗಿ ಇವತ್ತು ಅವರು competition ಇಲ್ಲಿಯೇ ಕುಳಿತಿದ್ದಾರೆ ಇವತ್ತು ಮದ್ಯಾಹ್ನದ ಮೇಲೆ ವಿಶೇಷವಾದಂಥ chartered flight ಮಾಡಿಕೊಂಡು ಸುಮಾರು 43 ಶಾಸಕರನ್ನು ಅನಿಲ್ ಲಾಡ್‌ರವರು ಕರೆದುಕೊಂಡು ಹೋಗುತ್ತಿದ್ದಾರೆ ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಾರೆ ಅವರು ಗೋಮಾಳ, ಇನ್ನಾವುದೋ ಒಂದು ತೋಟ ತೋರಿಸುವುದಕ್ಕೇನೋ ಕರೆದುಕೊಂಡು ಹೋಗುತ್ತಿದ್ದಾರೆ ಅಂದರೆ sudden ಆಗಿ ಇಷ್ಟೊಂದು ಜನರನ್ನು ಕರೆದುಕೊಂಡು ಹೋಗಿ ಅವರಿಗೆ ಮನವರಿಕೆ ಮಾಡಿಕೊಡುವ ಪ್ರೀತಿ ಏನು ಹುಟ್ಟಿದೆಯಲ್ಲ, ಈ 2 ತಿಂಗಳಲ್ಲೇ ವ್ಯತ್ಯಾಸಗಳಾಗುತ್ತದೆ ಬದಲಾವಣೆ ರಾಜಕೀಯಗಳು, ಅದಕ್ಕೆ ಈಗಾಗಲೇ ನಮ್ಮ Labour Minister ಅವರು ಪಾಪ 2 ತಿಂಗಳ ಹಿಂದೆಯೇ ಇಂಡಿಕೇಶನ್ ಕೊಟ್ಟು, ಇದು ಸಾಧ್ಯವೇ ಇಲ್ಲ, ಕುಮಾರಣ್ಣ ಮುಂದುವರೆಯುತ್ತಾರೆಂದು ಹೇಳಿ ತಿಳಿದುಕೊಂಡೇ ಬಿಜೆಪಿ ಮುಖಂಡರನ್ನೇ ಮುಂದೆ ಮಾಡಿಕೊಂಡು ಇವತ್ತು 43 ಜನ ಹೋಗುತ್ತಿದ್ದಾರೆ ಅದಕ್ಕೇ ವಿಶೇಷವಾದಂಥ ವ್ಯವಸ್ಥೆ ಮಾಡಿದ್ದಾರೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಮುಖ್ಯಮಂತ್ರಿಗಳು it was a political strategy ಎಂದು ಹೇಳಿದರು Whether it is a political strategy?

(ಗೊಂದಲ)

ಶ್ರೀ ಆರ್ ಅಶೋಕ್ ನಮ್ಮ ಪಾರ್ಟಿಯವರು ಆ ತರಹ ಯಾರೂ ಹೋಗುವುದಿಲ್ಲ ಚುನಾವಣೆಗೆ ಏನು ಕೊಡಬೇಕಾಗಿತ್ತು, ಅನ್ಸಾರಿಯವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಯಡಿಯೂರಪ್ಪನವರಿಗೆ ಗಂಡಾಂತರ ಇದೆ ಅದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ

ಅಧ್ಯಕ್ಷರು ಅದು ಏನು ಮಾತನಾಡಿದಿರಿ

ಶ್ರೀ ಅರಗ ಜ್ಞಾನೇಂದ್ರ ಇವರು ದೆಹಲಿಗೆ ಕರೆದುಕೊಂಡು ಹೋದ ಹಾಗೆ ಎಂದು ತಿಳಿದುಕೊಂಡಿದ್ದಾರೆ ಹಾಗೇನಿಲ್ಲ

(ಗೊಂದಲ)

ಅಧ್ಯಕ್ಷರು ನೀವು ಹೀಗೆ ಮಾಡಿದರೆ ಹೇಗೆ? ಪ್ರಶ್ನೋತ್ತರದ ಅವಧಿ ಮುಗಿಯುತ್ತಿದೆ ಬಾಲರಾಜ್‌ರವರೆ ತಾವು ಈಗ ಪ್ರಶ್ನೆ ಕೇಳಿ

ಶ್ರೀ ಬಿ ಕೆ ಗೋಪಾಲಕೃಷ್ಣ ಬೇಳೂರು ಅನಿಲ್ ಲಾಡ್‌ರವರು ಎಲ್ಲಾ ಪಕ್ಷದ ಶಾಸಕರನ್ನೂ ಕರೆದಿದ್ದಾರೆ

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಎಲ್ಲದಕ್ಕೂ ಒಂದು ಮಿತಿ ಇದೆ ಪ್ರಶ್ನೋತ್ತರ ಅವದಿ ಮುಗಿಯುತ್ತಿದೆ ದಯಮಾಡಿ ಕುಳಿತುಕೊಳ್ಳಿ

ಕೈಗಾರಿಕಾ ತರಬೇತಿ ಕೇಂದ್ರಗಳ ಮಂಜೂರು

59(372) ಶ್ರೀ ಬಾಲರಾಜ್ ಎಸ್(ಕೊಳ್ಳೇಗಾಲ)

ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಿಗೆ ಐ ಟಿ ಐ (ಕೈಗಾರಿಕಾ ತರಬೇತಿ ಕೇಂದ್ರ) ಕಾಲೇಜುಗಳನ್ನು ಮಂಜೂರು ಮಾಡಲು ಕೋರಿರುವುದು ಮತ್ತು ಅವಶ್ಯಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಇಕ್ಬಾಲ್ ಅನ್ಸಾರಿ

ಅ) ಯಳಂದೂರು ತಾಲ್ಲೂಕಿನಲ್ಲಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಮಂಜೂರು ಮಾಡಲು ಕೋರಿಕೆ ಬಂದಿಲ್ಲ

ಕೊಳ್ಳೇಗಾಲ ತಾಲ್ಲೂಕಿನ ಹನ್ನೂರು ಕ್ಷೇತ್ರದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಮಂಜೂರು ಮಾಡಲು ಪ್ರಸ್ತಾವನೆ ಬಂದಿರುತ್ತದೆ ಕೊಳ್ಳೇಗಾಲದಲ್ಲಿ ಒಂದು ಸರ್ಕಾರಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ

ಆ) ಕೊಳ್ಳೇಗಾಲ ತಾಲ್ಲೂಕು, ಹನ್ನೂರು ಕ್ಷೇತ್ರದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಪರಿಶೀಲನೆಯಲ್ಲಿದೆ

ಇ) ಆಯವ್ಯಯದ ಲಭ್ಯತೆಯನ್ನು ಆಧರಿಸಿ ಮಂಜೂರು ಮಾಡಲ್ಪಡುತ್ತದೆ

ಶ್ರೀ ಎಸ್ ಬಾಲರಾಜ್ ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ (ಅ) ಪ್ರಶ್ನೆಗೆ ಮಾನ್ಯ ಸಚಿವರು ಕೋರಿಕೆ ಬಂದಿಲ್ಲವೆಂದು ಉತ್ತರ ನೀಡಿದ್ದಾರೆ ನಾನು ಎರಡು ಪತ್ರಗಳನ್ನು ಬರೆದಿದ್ದು ಮತ್ತು ಮಾನ್ಯ ಸಚಿವರಲ್ಲಿ ಮೌಖಿಕವಾಗಿ ಕೋರಿಕೆ ಸಲ್ಲಿಸಿದ್ದೇನೆ ಅವರು ಕೋರಿಕೆ ಬಂದಿಲ್ಲವೆಂದು ಹೇಳುತ್ತಿರುವುದು ನನಗೆ ನೋವಾಗುತ್ತಿದೆ ಅವಶ್ಯಕತೆ ಇರುವುದು ಸರ್ಕಾರದ

ಗಮನಕ್ಕೆ ಬಂದಿದೆಯೇ ಎಂದ ಮೇಲೆ ತಾಲ್ಲೂಕು ಕೇಂದ್ರಗಳಲ್ಲೊಂದು ITI college ಇಲ್ಲವೆಂದರೆ ಬಹಳ ನೋವಾಗುತ್ತದೆ ಆ ದೃಷ್ಟಿಯಿಂದ ಅದು ಅವಶ್ಯಕತೆ ಇದೆಯೆಂದು ತಮಗೆ ಅನಿಸಿದೆಯೇ? ಈ ಸಾಲಿನಲ್ಲಿ ಮಂಜೂರು ಮಾಡುತ್ತೀರಾ ಎಂದು ಕೇಳುತ್ತೇನೆ

ಶ್ರೀ ಇಕ್ಬಾಲ್ ಅನಸಾರಿ ಮಾನ್ಯ ಅದ್ಯಕ್ಷರೆ, ಸ್ನೇಹಿತರಾದ ಬಾಲರಜ್ ರವರು ಪತ್ರ ಬರೆದು ಕೊಟ್ಟಿದ್ದಾರೆ ಆದರೆ, ಕೊಳ್ಳೇಗಾಲ ತಾಲ್ಲೂಕು ಮತ್ತು ಯಳಂದೂರು ತಾಲ್ಲೂಕುಗಳಿಗೆ ITI college ಕೇಳಿದ್ದಾರೆ ಈಗಾಗಲೇ ಕೊಳ್ಳೇಗ್ಲಾಲ ತಾಲ್ಲೂಕಿನಲ್ಲಿ ITI government college ನಡೆಯುತ್ತಿದೆ ಯಳಂದೂರಿನಲ್ಲಿ ಖಾಸಗಿ ITI college ಇದೆ ವಿವೇಕಾ ನಂದ ಗಿರಿಜನ ಕಲ್ಯಾಣ ಕೇಂದ್ರ ಬಿ ಆರ್ ಹಿಲ್ಸ್ ಯಳಂದೂರು ಇಲ್ಲಿ ಕಾಲೇಜಿದೆ ಹೀಗಾಗಿ ನಾವು ಈ ವರ್ಷ ಹಿಂದುಳಿದ ತಾಲ್ಲೂಕುಗಳು ಮತ್ತು ಬೇರೆ ಬೇರೆ ಅವಶ್ಯಕತೆ ಇರುವ ಕಡೆ ಅಳವಡಿಸಿದ್ದೇವೆ ನಾನು ಯಳಂದೂರಿನಲ್ಲಿ 2008–09 ರಲ್ಲಿ ಅಳವಡಿಸಿ ಮಾಡಿಕೊಡುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ವಾಟಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, 363 ನೇ ಪ್ರಶ್ನೆಯನ್ನು ಮಾನ್ಯ ಆರೋಗ್ಯ ಸಚಿವರಿಗೆ ಕೇಳಲಿಕ್ಕೆ ಬಯಸುತ್ತೇನೆ

ಶ್ರೀ ಜೆ ಸಿ ಮಾದುಸ್ವಾಮಿ 365 ನೇ ಪ್ರಶ್ನೆ ಎಂದು ಇದೆ

ಅಧ್ಯಕ್ಷರು ವಾಟಾಳ್ ನಾಗರಾಜ್‌ರವರು ಆರೋಗ್ಯ ಸಚಿವರಿಗೆ ಎಂದು ಕೇಳುತ್ತಿದ್ದಾರೆ

ಶ್ರೀ ಜೆ ಸಿ ಮಾದುಸ್ವಾಮಿ ಇದೇನು ನಮಗೆ ಅರ್ಥವಾಗುತ್ತಿಲ್ಲ ಅವರೇ ಹೇಳಬೇಕು 365 ನೇ ಪ್ರಶ್ನೆಗೆ ಸಮಾಜಕಲ್ಯಾಣ ಸಚಿವರು ಉತ್ತರ ನೀಡಬೇಕೆಂದು ಪ್ರಿಂಟ್ ಆಗಿದೆ ಅವರೇಕೋ ಆರೋಗ್ಯ ಸಚಿವರನ್ನೇ ಕೇಳುತ್ತಿದ್ದಾರೆ

ಶ್ರೀ ವಾಟಳ್ ನಾಗರಾಜ್ 363 ನೇ ಪ್ರಶ್ನೆ ಕೇಳುವುದಕ್ಕೆ ಒಂದು ವಿಶೇಷವಿದೆ, ನಾನು ಚುಕ್ಕೆ ಗುರುತಿನ ಪ್ರಶ್ನೆ ಎಂದು ಹೇಳಿ ನೇರವಾಗಿ ಬರೆದು ಸ್ಪಷ್ಟವಾಗಿ ಕನ್ನಡ ಅಕ್ಷರದಲ್ಲಿ ಬರೆದು ಬೆಂಗಳೂರು ನಗರವೂ ಸೇರಿಇದಂತೆ ರಾಜ್ಯದಲ್ಲಿ ನಾಯಿಗಳ ಕಡಿತದಿಂದಾಗಿ ಇಲ್ಲಿಯವರೆಗೆ ಸತ್ತವರ ಸಂಖ್ಯೆ ಎಷ್ಟು ಮತ್ತು ಇತರ ಅನೇಕ ವಿಚಾರಗಳನ್ನು ಕೇಳದ್ದೇನೆ ಇದನ್ನು

ತಮ್ಮ ಗಮನಕ್ಕೆ ತರುತ್ತಿದ್ದೇನೆ ಏನಾಗಿದೆ ಎಂದು ಸ್ಪಷ್ಟ ಪಡಿಸಬೇಕಿಲ್ಲ ಆದ್ದರಿಂದ ಚುಕ್ಕೆ ಗುರುತಿನ ಪ್ರಶ್ನೆ ಎಂದು ಬರೆದಿದ್ದು, ಅದು ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರಲಿಲ್ಲ ನಾನು ವಸತಿ ಶಾಲೆಗಳ ಬಗ್ಗೆ ಚುಕ್ಕೆ ಗುರುತಿನ ಪ್ರಶ್ನೆ ಹಾಕಿರಲಿಲ್ಲ ನಾನು ಕೇಳಿದ ಪ್ರಾಮುಖ್ಯವಾದ ಪ್ರಶ್ನೆ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರಲಿಲ್ಲ ನಾಯಿಗಳು ಸಾರ್ವಜನಿಕರಿಗೆ ಕಡಿದಿವೆ ಎಷ್ಟು ನಾಯಿಗಳಿಂದ ಎಷ್ಟು ಜನ ಸತ್ತಿದ್ದಾರೆ? ಪರಿಸ್ಥಿತಿ ಏನು ಎಂದು ಕೇಳಿದ್ದೆ

ಅಧ್ಯಕ್ಷರು ಈಗ ಬಂದಿರುವುದರ ಬಗ್ಗೆ ಪ್ರಶ್ನೆ ಕೇಳಿ ಬಹುಶಃ ಅದು unstarred ಆಗಿರಬೇಕು ಅದಕ್ಕೆ ಅದು ಬಾಲೆಟ್‌ನಲ್ಲಿ ಬಂದಿಲ್ಲವೆಂದು ಕಾಣುತ್ತದೆ

ಶ್ರೀ ವಾಟಳ್ ನಾಗರಾಜ್ ಅದು ಹೇಗೆ ಸಾರ್ ತಾವು ಮಾಡಿ ನಿಮಗೆ ಸಂಪೂರ್ಣವಾದ ಅಧಿಕಾರವಿದೆ ಪ್ರಾಮುಖ್ಯವಾದ ಪ್ರಶ್ನೆ ಬಿಟ್ಟು ಇನ್ನ್ಯಾವುದೋ ಪ್ರಶ್ನೆ ಕೇಳುವುದಲ್ಲ ಇದೇಕೆ ಈ ತರಹ ಆಯಿತು

ಅಧ್ಯಕ್ಷರು ಬ್ಯಾಲೆಟ್ ನಲ್ಲಿ ಬಂದಿಲ್ಲವೆಂದು ಕಾಣಿಸುತ್ತದೆ ಈ ಪ್ರಶಗನೆ ಬಗ್ಗೆ ಏನಾದರೂ ಕೇಳುವುದಿದ್ದರೆ ಕೇಳಿ 365 ನೇ ಪ್ರಶ್ನೆ ಬಗ್ಗೆ ಏನೂ ಕೇಳುವುದಿಲ್ಲವೇ?

ಶ್ರೀ ವಾಟಳ್ ನಾಗರಾಜ್ 365 ನೇ ಪ್ರಶ್ನನೆಯನ್ನು ಅಂಥ ಶಕ್ತಿಯುತವಾಗಿ ಕೇಳುವಂಥಾದ್ದೇನೂ ಇಲ್ಲ ನಾನು 365 ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ

ಅಧ್ಯಕ್ಷರು ಬ್ಯಾಲೆಟ್ ಆಗಿಲ್ಲ ತಾವು ಕೇಳಿದ್ದೀರಿ ಬ್ಯಾಲೆಟ್‌ನಲ್ಲಿ ಆಗಲೇ ಬಂದಿದೆ

ವಸತಿ ಶಾಲೆಗಳು

(365) ಶ್ರೀ ವಾಟಾಳ್ ನಾಗರಾಜ್

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಸತಿ ಶಾಲೆಗಳೆಷ್ಟು?

ಆ) ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ವಸತಿ ಶಾಲೆಗಳಿವೆ?

ಇ) ಹೊಸದಾಗಿ ಎಷ್ಟು ವಸತಿ ಶಾಲೆಗಳನ್ನು ನಿರ್ಮಾಣ ಮಾಡಲಿ ತೀರ್ಮಾನಿಸಲಾಗಿದೆ?

ಶ್ರೀ ಬಾಲಚಂದ್ರ ಜಾರಕಿಹೊಳಿ

ಅ) ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯದಲ್ಲಿ ಒಟ್ಟು 90 ವಸತಿ ಶಾಲಿಗಳನ್ನು ಪರಿಶಿಷ್ಟ ಜಾತಿಯ ಮಕ್ಕಳಿಗಾಗಿ ನಿರ್ವಹಿಸ ಲಾಗುತ್ತಿದೆ ಅಲ್ಲದೇ ರಾಜ್ಯದಲ್ಲಿ ಒಟ್ಟು 327 ನವೋದಯ/ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿದೆ

ಆ) ರಾಜ್ಯದಲ್ಲಿರುವ 90 ವಸತಿ ಶಾಲೆಗಳ ಜಿಲ್ಲಾವಾರು ವಿವರ ಕೆಳಕಂಡಂತಿದೆ

ಜಿಲ್ಲೆಯ ಹೆಸರು	ವಸತಿ ಶಾಲೆಗಳ ಸಂ	ಜಿಲ್ಲೆಯ ಹೆಸರು	ವಸತಿಶಾಲೆಗಳ ಸಂ
ಬೆಂಗಳೂರು ನಗರ	2	ಬೆಳಗಾಂ	4
ಬೆಂಗಳೂರು ಗ್ರಾ	2	ಬಿಜಾಪುರ	7
ಶಿವಮೊಗ್ಗ	2	ಬಾಗಕೋಟೆ	3
ದಾವಣಗೆರೆ	1	ಧಾರವಢ	1
ಕೋಲಾರ	3	ಗದಗ್	2
ತುಮಕೂರು	2	ಹಾವೇರಿ	7
ಚಿತ್ರದುರ್ಗ	3	ಉತ್ತರ ಕನ್ನಡ	3
ಮೈಸೂರು	3	ಗುಲ್ಬರ್ಗಾ	16
ಮಂಡ್ಯ	1	ರಾಯಚೂರು	7

ದಕ್ಷಿಣ ಕನ್ನಡ	1	ಕೊಪ್ಪಳ	1
ಹಾಸನ	5	ಬಳ್ಳಾರಿ	3
ಚಿಕ್ಕಮಗಳೂರು	2	ಬೀದರ್	8
ಕೊಡಗು	1	ಒಟ್ಟು	90

ಜಿಲ್ಲಾವಾರು ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲಗಳ ವಿವರ ಈ ಕೆಳಕಂಡಂತಿದೆ

ಜಿಲ್ಲೆಯ ಹೆಸರು	ವಸತಿ ಶಾಲೆಗಳ ಸಂ	ಜಿಲ್ಲೆಯ ಹೆಸರು	ವಸತಿಶಾಲೆಗಳ ಸಂ
ಬೆಂಗಳೂರು ನಗರ	4	ಬೆಳಗಾಂ	22
ಬೆಂಗಳೂರು ಗ್ರಾ	17	ಬಿಜಾಪುರ	10
ಶಿವಮೊಗ್ಗ	11	ಬಾಗಲಕೋಟೆ	12
ದಾವಣಗೆರೆ	12	ಧಾರವಾಡ	4
ಕೋಲಾರ	12	ಗದಗ್	7
ತುಮಕೂರು	14	ಹಾವೇರಿ	12
ಚಿತ್ರದುರ್ಗ	9	ಉತ್ತರ ಕನ್ನಡ	8
ಮೈಸೂರು	15	ಗುಲ್ಬರ್ಗಾ	26
ಮಂಡ್ಯ	19	ರಾಯಚೂರು	16
ದಕ್ಷಿಣ ಕನ್ನಡ	8	ಕೊಪ್ಪಳ	12
ಹಾಸನ	18	ಬಳ್ಳಾರಿ	17
ಚಿಕ್ಕಮಗಳೂರು	15	ಬೀದರ್	9
ಕೊಡಗು	4	ಉಡುಪಿ	4
ಚಾಮರಾಜನಗರ	10	ಒಟ್ಟು	327

ಇ) ಪ್ರಸಕ್ತ ಸಾಲಿನಲ್ಲಿ 6 ಹೊಸ ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೈಗೊಳ್ಳಲಾಗುವುದು

ಒಟ್ಟು 72 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಕಟ್ಟಡ ನಿರ್ಮಾಣ ಮಾಡಲು ಕ್ರಮ ವಹಿಸಲಾಗಿದೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಗುಲ್ಬರ್ಗಾಕ್ಕೆ '16 ಎಂದು ಕೊಟ್ಟಿದ್ದೀರಿ ಮತ್ತೆ ಎಲ್ಲ ಕಡೆಗೆ 4,2,3 ಎಂದು ಕೊಟ್ಟಿದ್ದೀರಿ ನಾನೇನು ವೈಯಕ್ತಿಕವಾಗಿ ನಿಮ್ಮನ್ನು ನೆನ್ನೆ ತರಹ ಎಲ್ಲ ಮಾಡಿದ್ದಿರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ ಆದರೆ ಚಾಮರಾಜನಗರಕ್ಕೆ ಎಷ್ಟು ಕೊಟ್ಟಿದ್ದೀರಿ? ಈ ರೀತಿ ಕಡಿಮೆ ಮಂಜೂರು ಮಾಡಿರುವ ಉದ್ದೇಶವೇನೆಂದು ತಿಳಿಸಬೇಕು

ಶ್ರೀ ಬಾಲಚಂದ್ರ ಜಾರಕಿಹೊಳಿ ತಾವು ರಾಜ್ಯದಲ್ಲಿ ವಸತಿ ಶಾಲೆಗಳೆಷ್ಟು ಎಂದು ಪ್ರಶ್ನೆ ಕೇಳಿದ್ದೀರಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ವಸತಿ ಶಾಲೆಗಳಂದರೆ ಪರಿಶಿಷ್ಟ ವರ್ಗಕ್ಕೆ ಸೇರಿದಂಥ ಆಶ್ರಮ ಶಾಲೆಗಳಿವೆ ನಾನು ಆಶ್ರಮ ಶಾಲೆಗಳ ಪಟ್ಟಿಯನ್ನು ಕೊಟ್ಟಿದ್ದೇನೆ ಚಾಮರಾಜನಗರ ಜಿಲ್ಲೆಯಲ್ಲಿ ಟ್ರೈಬಲ್ಸ್‌ಗೆ ಸಂಬಂಧ ಪಟ್ಟಂಥ 18 ವಸತಿ ಶಾಲೆಗಳಿವೆ ಮತ್ತು ಬಿಳಿಗಿರಿರಂಗನ ಬೆಟ್ಟ ಹಾಗೂ ಬೇರೆ ಬೇರೆ ಕಡೆಗಳಲ್ಲಿಇವೆ ಇದನ್ನು ಬಿಟ್ಟು ರಾಜ್ಯದಲ್ಲಿ ಮೊರಾರ್ಜಿ ವಸತಿ ಶಾಲೆ ಎನ್ನುವುದು ಬೇರೆ ಬರುತ್ತದೆ ತಾವು ವಸತಿ ಶಾಲೆ ಎಂದು ಕೇಳೀದ್ದರಿಂದ ನಾವು ಉತ್ತರ ಆ ರೀತಿ ಕೊಟ್ಟಿದ್ದೇವೆ ಚಾಮರಾಜನಗರ ಜಿಲ್ಲೆಯಲ್ಲಿ ಎಸ್‌ಟಿ ಗೆ ಸಂಬಂಧಪಟ್ಟಂತೆ 18 ಆಶ್ರಮ ಶಾಲೆಗಳು ನಡೆಯುತ್ತಿವೆ ಚಾಮರಾಜ ನಗರ ಜಿಲ್ಲೆಯಲ್ಲಿ ಟ್ರೈಬಲ್ಸ್ ಜನಾಂಗ ಜಾಸ್ತಿ ಇರುವುದರಿಂದ ಅಲ್ಲಿ ಜಾಸ್ತಿ ಇದೆ ಅದಕ್ಕೋಸ್ಕರ ಬೆಳಗಾಂಗೆ 4, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ ಹೀಗೆ ಎಲ್ಲೆಲ್ಲಿ ಫಾರೆಸ್ಟ್ ಏರಿಯಾ ಬರುತ್ತದೆ ಅಲ್ಲಿಗೆ ಮಂಜೂರು ಮಾಡಿದ್ದೇವೆ ಚಾಮರಾಜನಗರ ಜಿಲ್ಲೆಯಲ್ಲಿ ಈಗಾಗಲೇ 18 ಆಶ್ರಮ ಶಾಲೆಗಳು ನಡೆಯುತ್ತಿವೆ ಅದು 1 ರಿಂದ 5 ನೇ ತರಗತಿವರೆಗೆ ಇರುತ್ತದೆ ಮೊರಾರ್ಜಿ ವಸತಿ ಶಾಲೆ 5 ರಿಂದ 10 ನೇ ತರಗತಿವರೆಗೆ ಇರುತ್ತದೆ ಅದಕ್ಕೋಸ್ಕರ ನಮ್ಮ ಜಿಲ್ಲೆಯಲ್ಲಿ ಅದು ನಡೆಯುತ್ತದೆ

ಶ್ರೀ ವಾಟಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಗೆ ಇನ್ನೂ ಹೆಚ್ಚಿನ ಶಾಲೆಗಳು ಬೇಕಾಗಿವೆ ತಮ್ಮ ಗಮನಕ್ಕೆ ಅದು ಬಂದಿರಬೇಕು ನಾವು ಈಗಾಗಲೇ ಮನವಿ ಸಲ್ಲಿಸಿದ್ದೇವೆ ಅದರ ಬಗ್ಗೆ ತಾವು ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಹೆಚ್ ಆಂಜನೇಯ ಮಾನ್ಯ ಅಧ್ಯಕ್ಷರೆ, ವಸತಿ ಶಾಲೆಗಳನ್ನು ಕೊಟ್ಟಿದ್ದಾರೆ

ಶ್ರೀ ವಾಟಳ್ ನಾಗರಾಜ್ ಚಾಮರಾಜ ನಗರ ಜಿಲ್ಲೆಗೆ ಇನ್ನೂ ಬೇಕಾಗಿದೆ ಏಕೆಂದರೆ, ಅದು ಅತ್ಯಂತ ಹಿಂದುಳಿದ ಪ್ರದೇಶ ಮತ್ತು ಕಾಡು ಇದೆ ಅದನ್ನು ತಾವು ನೋಡಿದ್ದಿರಿ ನಂಜುಂಡಪ್ಪ ವರದಿಯ ಆಧಾರದ ಮೇಲೆ ಆ ತಾಲ್ಲೂಕು ಸೇರಿದೆ ಈ ದೃಷ್ಟಿಯಿಂದ ತಾವು ಮುಂದೆ ಹೆಚ್ಚಿನ ಶಾಲೆಗಳನ್ನು ಕೊಡುತ್ತೀರಾ?

ಶ್ರೀ ಬಾಲಚಂದ್ರ ಜಾರಕಿಹೊಳಿ ಈಗಾಗಲೇ 2007–08 ನೇ ಸಾಲಿಗೆ 3 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ ತಮಗೆ ಆಶ್ರಮ ಶಾಲೆ 1 ರಿಂದ 5 ನೇ ತರಗತಿಯವರೆಗೆ ಬೇಕೆಂದಾಗ ನಾವು ಬೇಕಾದರೆ ಎಷ್ಟು ಅವಶ್ಯಕತೆ ಇದೆಯೆನ್ನುವ ಬಗ್ಗೆ ವರದಿಯನ್ನು ತರಿಸಿಕೊಳ್ಳುತ್ತೇವೆ

ಶ್ರೀ ಸಿದ್ದರಾಮಯ್ಯ 39 ತಾಲ್ಲೂಕುಗಳಲ್ಲಿ ಚಾಮರಾಜನ ನಗರ ತಾಲ್ಲೂಕು most backward list ನಲ್ಲಿ ಬರುತ್ತದೆ Most backward ಆದ್ದರಿಂದ ಅಲ್ಲಿ ಅವಶ್ಯಕತೆ ಇದೆ ಅದನ್ನು ಈಗ ಕನ್ಸಿಡರ್ ಮಾಡುತ್ತೀರಾ?

ಶ್ರೀ ಬಾಲಚಂದ್ರ ಜಾರಕಿಹೊಳಿ ಈಗ ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ ಈಗಾಗಲೇ ಚಾಮರಾಜನಗರ ಜಿಲ್ಲೆಗೆ 18 ಆಶ್ರಮ ವಸತಿಶಾಲೆಗಳನ್ನು ಕೊಟ್ಟಿದ್ದೇವೆ

ಶ್ರೀ ವಾಟಳ್ ನಾಗರಾಜ್ ಚಾಮರಾಜ ನಗರ ತಾಲ್ಲೂಕು ಬಗ್ಗೆ ಹೇಳುತ್ತಿದ್ದೇವೆ ಜಿಲ್ಲೆ ಅಲ್ಲ ನಂಜುಂಡಪ್ಪ ವರದಿ ಆಧಾರದ ಮೇಲೆ ಚಾಮರಾಜನಗರ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಬಂದಿದೆ

ಶ್ರೀ ಆರ್ ವಿ ದೇಶಪಾಂಡೆ ನೀವು ಆ ಕ್ಷೇತ್ರವನ್ನು ಪ್ರತಿನಿಧಿಸುವಾಗ ಅದು ಹೇಗೆ ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕು ಆಗಿ ಉಳಿಯಿತು?

ಶ್ರೀವಾಟಾಳ್ ನಾಗರಾಜ್ ಏನೂ ಮಾಡುವುದಕ್ಕಾಗುವುದಿಲ್ಲ ಪರಿಸ್ಥಿತಿ ಹಾಗಿದೆ ಆ ದೃಷ್ಟಿಯಿಂದ ಮಾನ್ಯ ಸಚಿವರಿಗೆ ಏನು ಹೇಳುತ್ತಿದ್ದೇನೆಂದರೆ ಈಗ ಬಹಳ ಬೇಡಿಕೆ ಇರುವುದು ಗೊತ್ತಿದೆ ದಯಮಾಡಿ, ನಮ್ಮ ಬೇಡಿಕೆ ಈಡೇರಿಸುವುದಕ್ಕೆ ಮತ್ತೆ ವಸತಿ ಶಾಲೆಗಳನ್ನು ತಾಲ್ಲೂಕಿಗೆ ಕೊಡುತ್ತೀರಾ?

ಶ್ರೀ ಬಾಲಚಂದ್ರ ಜಾರಕಿಹೊಳಿ ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಚಾಮರಾಜನಗರ ತಾಲ್ಲೂಕಿಗೆ ಆಶ್ರಮ ಶಾಲೆ ಇರಬಹುದು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಎಷ್ಟು ಮಂಜೂರು ಮಾಡುತ್ತೀರಿ ಎಂದು ಕೇಳಿದರು ಏಕೆಂದರೆ, ಈಗಾಗಲೇ ಬಜೆಟ್‌ನಲ್ಲಿ ನಾವು ಘೋಷಣೆ ಮಾಡಿದಂಥ ಶಾಲೆಗಳನ್ನು ಮಂಜೂರು ಮಾಡಿದ್ದೇವೆ ಸೇವಿಂಗ್ಸ್‌ನಲ್ಲಿ ಹಣ ಉಳಿಸಿಕೊಂಡು ನಾವು ಸಾಧ್ಯವಾದಷ್ಟು ಚಾಮರಾಜನಗರ ತಾಲ್ಲೂಕಿಗೆ ಪ್ರಿಫರೆನ್ಸ್ ಕೊಟ್ಟು ಮುಂದೆ ಅಲಾಟ್ ಮಾಡುತ್ತೇವೆಂದು ತಮಗೆ ಈ ಮೂಲಕ ಭರವಸೆ ಕೊಡುತ್ತೇನೆ

ಶ್ರೀ ಆಂಜನೇಯ 90 ವಸತಿ ಶಾಲೆಗಳನ್ನು ಆಶ್ರಮ ಶಾಲೆಗಳನ್ನು ನಡೆಸುತ್ತಿದ್ದಾರೆ ಇಲ್ಲಿ ಏನಾಗಿದೆಯೆಂದರೆ 90 ಆಶ್ರಮ ಶಾಲೆಗಳಲ್ಲಿ ಕೇವಲ ಪರಿಶಿಷ್ಟ ಜಾತಿಯ ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ ಲಂಬಾಣಿ ಹಟ್ಟಿ ಮತ್ತು ಈ ರೀತಿಯಾಗಿರತಕ್ಕಂಥ ಹಟ್ಟಿಗಳಲ್ಲಿ ಈ ಶಾಲೆಗಳನ್ನು ನಡೆಸುತ್ತಿದ್ದಾರೆ ಈ ಶಾಲೆಗಳಲ್ಲಿ ಸರಿಯಾದ ರೀತಿಯಲ್ಲಿ ಪಾಠಪ್ರವಚನ ಆಗುತ್ತಿಲ್ಲ ಕಾರಣವೇನೆಂದರೆ ಸಮಾಜ ಕಲ್ಯಾಣ ಇಲಾಖೆಯಿಂದ ಉಪಾಧ್ಯಾಯರೇ ನೇಮಕವಾಗುತ್ತಿಲ್ಲ

ಅಧ್ಯಕ್ಷರು ಸಂಕ್ಷಿಪ್ತವಾಗಿ ಪ್ರಶ್ನೆ ಕೇಳಿ

ಶ್ರೀ ಹೆಚ್ ಆಂಜನೇಯ ಇದನ್ನು ಬೇರ್ಪಡಿಸಬೇಕು ಕೇವಲ ಹರಿಜನ ಮಕ್ಕಳನ್ನೇ ತೆಗೆದುಕೊಂಡು ಹೋಗಿ ಪಾಠ ಹೇಳುವುದು ಸರಿಯಲ್ಲ ಎಲ್ಲರ ಮಕ್ಕಳಂತೆ ಓದುವಂಥ ವಾತಾವರಣವನ್ನು ನಿರ್ಮಾಣ ಮಾಡಬೇಕು ಅದರಿಂದ ಬೇರ್ಪಡಿಸಬೇಕು ವಸತಿ ನಿಯಲ ಬೇರೆ ಮಾಡಿ ಶಾಲೆ ಬೇರೆ ಮಾಡಬೇಕು ಹೀಗೆ ಮಾಡುವುದರಿಂದ ಹರಿಜನರ ಮಕ್ಕಳು ವಿದ್ಯಾವಂತ

ರಾಗುತ್ತಾರೆ ನೀವು ಇವರನ್ನೇ ಕೂಡಿ ಹಾಕಿ ವಿದ್ಯಾಬ್ಯಾಸ ಮಾಡಿಸುತ್ತಿದ್ದೀರಿ ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರುಗಳೂ ಕೂಡ ಇಲ್ಲ ನಾನು ನೋಡಿಕೊಂಡು ಬಂದಿದ್ದೇನೆ ಆದ್ದರಿಂದ ಎಲ್ಲೆಲ್ಲಿ ಉಪಾಧ್ಯಾಯರ ಕೊರತೆ ಇದೆ ಅಲ್ಲಿ ಅವರನ್ನು ತುಂಬತಕ್ಕಂಥದ್ದಕ್ಕೆ ವ್ಯವಸ್ಥೆ ಮಾಡಬೇಕು ಇಲ್ಲಾ ಶಾಲೆಯನ್ನು ಬೇರ್ಪಡಿಸಿ ಸರಕಾರಿ ಶಾಲಗೆಆದರೂ ವರ್ಗಾಯಿಸಬೇಕು ಬೇರೆಯವರ ಮಕ್ಕಳ ಜೊತೆಗೆ ಬೆರೆತು ಅವರ ಜೊತೆಗೆ ವಿದ್ಯಾಭ್ಯಾಸ ಮಾಡತಕ್ಕಂಥ ಅವಕಾಶವನ್ನು ಈ ವರ್ಗದ ಮಕ್ಕಳಿಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಸಮಾಜ ಕಲ್ಯಾಣ ಸಚಿವರೆ, ಕೋಲಾರ ಜಿಲ್ಲೆಯಲ್ಲಿ ಎಸ್‌ಸಿ ಎಸ್‌ಟಿ ಪಾಪ್ಯೂಲೇಷನ್ 27% ಇದೆ ಇಡೀ ರಾಜ್ಯದಲ್ಲಿ ಎಸ್‌ಸಿ ಎಸ್‌ಟಿ ಪಾಪ್ಯೂಲೇಷನ್ ಯಾವುದಾದರೂ ಜಿಲ್ಲೆಗಳಿಗೆ ಹೆಚ್ಚಿಗೆ ಎಂದರೆ ಅದು ಕೋಲಾರ ಜಿಲ್ಲೆಯಲ್ಲಿ ಮಾತ್ರ. ಆ ಜಿಲ್ಲೆಗೆ ನೀವು ಮಂತ್ರಿಯಾಗಿ ಬಂದಮೇಲೆ ಮೂರು ಕೊಟ್ಟಿದ್ದೀರಿ ಅದು ಶಿಡ್ಲ ಘಟ್ಟ, ಮುಳಬಾಗಿಲು, ಇಲ್ಲಿಗೆ ಮಾತ್ರ ಸೀಮಿತವೆ? ಅಥವಾ ಬಂಗಾರು ಪೇಟೆಯಲ್ಲಿ ಎಸ್‌ಸಿ ಎಸ್‌ಟಿ ಪಾಪ್ಯೂಲೇಷನ್ 29% ಇದೆ ಅಲ್ಲಿಗೆ ಒಂದು ಕೊಡುವ ಅವಶ್ಯಕತೆಯಿಲ್ಲವೆ? ನಿಮಗೆ ಮುಳಬಾಗಿಲು ಮತ್ತು ಶಿಡ್ಲಘಟ್ಟ ಮಾತ್ರ ಕಣ್ಣಿಗೆ ಕಾಣುತ್ತದೆಯೇ? ನೀವು ಏಕೆ ತಾರತಮ್ಯವನ್ನು ಮಾಡಿದ್ದೀರಿ? ಅದಕ್ಕೆ ನೀವು ಕೊಟ್ಟ ಮಾಹಿತಿ ಇಷ್ಟು ಇದೆ? ಇದು ಯಾವ ಮಾನದಂಡದ ಮೇಲೆ ಮಾಡಿದಿರಿ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು? ರೇವಣ್ಣನವರೇ ಮಾಡಿದ್ದಾರೆಂದು ಹೇಳಲಿ

ಅಧ್ಯಕ್ಷರು ಶ್ರೀನಿವಾಸ ಗೌಡರೇ ಸಮಯವಾಗಿದೆ ಕುಳಿತುಕೊಳ್ಳಿ ನೀವು ಹಿರಿಯ ಸದಸ್ಯರಾಗಿ ಈ ರೀತಿ ಮಾಡಿದರೆ ಹೇಗೆ?

ಶ್ರೀ ಕೆ ಶ್ರೀನಿವಾಸ ಗೌಡ ರೇವಣ್ಣನವರು ಮಾಡಿದ್ದಾರೆಂದು ಹೇಳಲಿ ನನಗೆ ಶಕ್ತಿಯಿಲ್ಲ ಮಂತ್ರಿಗಳದ್ದೆಲ್ಲಾ ರೇವಣ್ಣನವರು ಮಾಡುವುದು ಎಂದು ಹೇಳಿ ಅದಕ್ಕೇನೆಂತೆ?

ಶ್ರೀ ಕೃಷ್ಣಭೈರೇಗೌಡ ಒಂದು ನಿಮಿಷ ಅವಕಾಶ ಕೊಡಿ

ಅಧ್ಯಕ್ಷರು ಗೌಡರೇ ಬಿಡಿ ಅವರು ಉತ್ತರ ಹೇಳುತ್ತಾರೆ

-

ಶ್ರೀ ಕೃಷ್ಣಭೈರೇಗೌಡ ಇದು ನಮ್ಮೆಲ್ಲರ ಸಮಸ್ಯೆಯಾಗಿದೆ

ಅಧ್ಯಕ್ಷರು ಎಲ್ಲರದೂ ಸಮಸ್ಯೆ ಎಂದರೆ ಪ್ರಶ್ನೋತ್ತರ ಕಾಲದಲ್ಲಿ ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಈಗಾಗಲೇ ಒಂದು ಗಂಟೆಯಾಯಿತು ದಯಮಾಡಿ ಕುಳಿತುಕೊಳ್ಳಿ

ಶ್ರೀ ಕೃಷ್ಣಭೈರೇಗೌಡ ಇಷ್ಟು ಹೊತ್ತಿಗೆ ನನ್ನ ಪ್ರಶ್ನೆ ಮುಗಿದು ಹೋಗುತ್ತಿತ್ತು ಗೌರ್ನಮೆಂಟ್ ಆರ್ಡರ್ ಆದರೂ ಮಧ್ಯೆ ಮಾಯವಾಗುತ್ತದೆ ಇದೇನು ಮಾಯ ಎಂಬುದು ನಮಗೆ ಅರ್ಥವಾಗುತ್ತಿಲ್ಲ ಅಷ್ಟನ್ನು ಕೇಳುವುದಕ್ಕೆ ಮಾತ್ರ ನಾವು ನಿಂತುಕೊಂಡಿದ್ದು ಇನ್ನೇನು ಭಾಷಣ ಮಾಡಲಿಕ್ಕೆ ನಿಂತಿಲ್ಲ

ಅಧ್ಯಕ್ಷರು ಸ್ವಾಮಿ ನೀವು ಭಾಷಣ ಮಾಡುವುದಕ್ಕೆ ನಿಂತಿದ್ದೀರಿ ಎಂದು ನಾನು ಹೇಳಲಿಲ್ಲ ಒಂದು ಗಂಟೆಯಾಯಿತು ಅವಕಾಶವಿಲ್ಲ ಎಂದು ಹೇಳಿದೆ

ಶ್ರೀ ಕೃಷ್ಣಭೈರೇಗೌಡ ಇಷ್ಟು ಹೊತ್ತಿಗೆ ನನ್ನ ಪ್ರಶ್ನೆ ಮುಗಿದು ಹೋಗುತ್ತಿತ್ತು

ಅಧ್ಯಕ್ಷರು ಒಂದು ನಿಮಿಷದಲ್ಲಿ ಹೇಳಿ

ಶ್ರೀ ಕೃಷ್ಣಭೈರೇಗೌಡ ಹಾಸ್ಟೆಲ್ ಆಗಲಿ, ಮೊರಾರ್ಜಿ ಶಾಲೆಯಾಗಲಿ ಹಿಂದುಳಿದಿರತಕ್ಕಂಥ ಹಾಗೂ ಎಸ್‌ಸಿ ಎಸ್‌ಟಿ ಜನಾಂಗದವರು ಜಾಸ್ತಿ ಯಿರುವ ನಮ್ಮ ಜಿಲ್ಲೆಗೆ ಬಂದಿದ್ದು ಕೊನೆಗೆ ಅದು ಕಾರ್ಯಗತ ವಾಗುವುದಿಲ್ಲ ಏಕೆ ಹೀಗೆ ಆಗುತ್ತದೆ ಎಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ನಿಂತಿದ್ದು ಅಷ್ಟೆ, ಬೇರೇನೂ ಇಲ್ಲ

ಅಧ್ಯಕ್ಷರು ಆಯಿತು ಉತ್ತರ ಹೇಳಿ ಸ್ವಾಮಿ

ಶ್ರೀ ಬಾಲಚಂದ್ರ ಜಾರಕಿಹೊಳಿ ಸದಸ್ಯರಾದ ಆಂಜನೇಯರವರು, ಶ್ರೀನಿವಾಸಸ ಗೌಡರು, ಕೃಷ್ಣಭೈರೇಗೌಡರವರು, ತಮ್ಮ ತಮ್ಮ ಅನಿಸಿಕೆಗಳನ್ನು ಹೇಳಿದರು ಕೋಲಾರ ಜಿಲ್ಲೆ 27% ಎಸ್‌ಸಿ ಎಸ್‌ಟಿ ಹೈಯೆಸ್ಟ್ ಪಾಪ್ಯು ಲೇಷನ್ ಕರ್ನಾಟಕದಲ್ಲಿದೆ ಆದರೆ ಅವರು ಮುಳಬಾಗಿಲು, ಶಿಡ್ಲಘಟ್ಟ ಕ್ಕೆ ಮಾತ್ರ ಮೊರಾರ್ಜಿ ದೇಸಾಯಿ ಸ್ಕೂಲುಗಳನ್ನು ಕೊಟ್ಟಿದ್ದೀರಿ ಬಂಗಾರು

ಪೇಟೆಯಲ್ಲಿ ಎಸ್‌ಸಿ ಎಸ್‌ಟಿ ಹೈಯೆಸ್ಟ್ ಪಾಪ್ಯೂಲೇಷನ್ ಇದೆ ನಾವು ಹೋದ ವರ್ಷ ಮೊರಾರ್ಜಿ ದೇಸಾಯಿ ಸ್ಕೂಲನ್ನು ಬಂಗಾರು ಪೇಟೆಗೆ ಕೊಟ್ಟಿದ್ದೇನೆ ತಾವು ದಯಮಾಡಿ ನೋಡಿ ಏಕೆಂದರೆ ನಾನೇ ಅಲಾಟ್ ಮಾಡಿದ್ದೇನೆ ಅಲ್ಲಿ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ಕೊಟ್ಟಿದ್ದು, ನಾನು ಬಂದ ನಂತರ ಮೂರು ಕೊಟ್ಟಿದ್ದು, ಇದರ ಜೊತೆಗೆ ಮಾನ್ಯ ಆಂಜನೇಯರವರು ಹೇಳಿದರು ಆಶ್ರಮ ಶಾಲೆಯಲ್ಲಿ ಬರೀ ಪರಿಶಿಷ್ಟ ವರ್ಗದ ಮಕ್ಕಳಿಗೆ ಮಾತ್ರ ಸೀಮಿತವಾಗಿದೆ ಎಂದರು ಅದಕ್ಕೆ ನಾವು ಪರಿಶೀಲನೆ ಮಾಡಬೇಕಾಗಿದೆ ಏಕೆಂದರೆ, ಯಾವ ತರಹದ ಟೀಚರ್ಸ್ ನೇಮಕ ಮಾಡಬೇಕು ಏನು ಮಾಡಬೇಕು ಎಂಬುದರ ಬಗ್ಗೆ ಖಂಡಿತವಾಗಿ ನಾವು ಪರಿಶೀಲನೆ ಮಾಡುತ್ತೇವೆ ಮಾನ್ಯ ಕೃಷ್ಣಭೈರೇಗೌಡರವರು,ತಾವು ಏನು ಆರ್ಡರ್ ಆಗಿದೆ ಎಂದು ಹೇಳಿದಿರಿ, ನಾನು ತಮಗೆ ಪ್ರಾಮಿಸ್ ಮಾಡಿದ್ದೇನೆ ಏಕೆಂದರೆ ಕಳೆದ ಸಾರಿ ಸದನದಲ್ಲಿ ನಿಮ್ಮಗೂ ಮತ್ತು ಕುಮಾರ್ ಬಂಗಾರಪ್ಪರವರಿಗೆ ಕೊಡುತ್ತೇನೆಂದು ಪ್ರಾಮಿಸ್ ಮಾಡಿದ್ದೇನೆ ಹೀಗಾಗಿ ನಿಮ್ಮಿಬ್ಬರಿಗೂ ಖಂಡಿತವಾಗಿ ಕೊಡುತ್ತೇನೆ ಇದರ ಜೊತೆಗೆ ಶ್ರೀನಿವಾಸ ಗೌಡರು ಹೇಳಿದರು ತಮ್ಮ ಇಲಾಖೆಯಲ್ಲಿ ಬೇರೆಯವರು ಮಾಡಿದ್ದಾರೆಂದು ಹೇಳಿದರು ಇಲ್ಲಿಯವರೆಗೆ ಬೇರೆಯವರಿಗೆ ನಮ್ಮ ಇಲಾಖೆಯಲ್ಲಿ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ಮುಂದೆಯೂ ಕೊಡುವುದಿಲ್ಲ ಏಕೆಂದರೆ ನಾನೇ ಮಾಡುತ್ತೇನೆ ನನಗೆ ಆ ಶಕ್ತಿಯಿದೆ ಅದಕ್ಕೆ ಬೇರೆ ಇಂಟ್ರಫಿಯರ್ ಮಾಡುವುದಕ್ಕೆ ಬಿಡುವುದಿಲ್ಲ ದಯಮಾಡಿ ತಾವು ಟೀಜ್ ಮಡಬೇಡಿ ಇಲ್ಲಿಯವರೆಗೆ ನಾನು ಯಾರಿಗೂ ಬಿಟ್ಟುಕೊಟ್ಟಿಲ್ಲ

ಶ್ರೀ ಸಿದ್ದರಾಮಯ್ಯ ನಮ್ಮ ಕ್ಷೇತ್ರಕ್ಕೆ ಶಿಫಾರಸ್ಸು ಆಗಿತ್ತಲ್ಲ ಯಾರು ಹೊಡೆದು ಹಾಕಿದರು? ನೀವೇ? ನೀವಾ ಹೊಡೆದು ಹಾಕಿದ್ದು?

ಶ್ರೀ ಬಾಲಚಂದ್ರ ಜಾರಕಿಹೊಳಿ ಯಾವುದೂ ಹೊಡೆದಾಕಿಲ್ಲ ಏಕೆಂದರೆ ಇನ್ನೊಂದು ಲಿಸ್ಟ್‌ನಲ್ಲಿ ನಾವು ಮಾಡುತ್ತೇವೆ

ಅಧ್ಯಕ್ಷರು ಈಗ ಪ್ರಶ್ನೋತ್ತರ ಮುಗಿದಿದೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಸಿದ್ದು ಸವದಿ ನನ್ನ ಪ್ರಶ್ನೆ ಉಳಿದಿದೆ ನನಗೆ ಅವಕಾಶ ಕೊಡಿ

ಅಧ್ಯಕ್ಷರು ಇಲ್ಲ ಇಲ್ಲ ಒಂದು ಗಂಟೆಯಾಗಿ ಹೋಯಿತು ನೀವು ಲೇಟಾಗಿ ಬಂದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ

ಶ್ರೀ ಸಿದ್ದು ಸವದಿ ಬಹಳ ಮುಖ್ಯವಾಗಿದೆ ದಯಮಾಡಿ ಅವಕಾಶ ಕೊಡಿ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ದಿನಾಂಕ 12-07-07 ರಂದು ನಾಲ್ಕನೇ ಪಟ್ಟಿಯ ಲಿಖಿಯ ಮೂಲಕ ಉತ್ತರಿಸುವ 40 ಪ್ರಶ್ನೆಗಳ ಪೈಕಿ 36 ಉತ್ತರಗಳನ್ನು ಮಂಡಿಸಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

ಶ್ರೀ ಸಿದ್ದು ಸವದಿ ಒಂದು ನಿಮಿಷದಲ್ಲಿ ಕೇಳುತ್ತೇನೆ ಅವಕಾಶ ಕೊಡಿ ಸರ್

ಅಧ್ಯಕ್ಷರು ಆಯಿತು ಕುಳಿತುಕೊಳ್ಳಿ, ಏನು ಮಾಡುವುದಕ್ಕೆ ಆಗುವುದಿಲ್ಲ ನಿಮಗೆ ಇಷ್ಟ ಬಂದ ಹಾಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ

ಶ್ರೀ ಸಿದ್ದು ಸವದಿ ಸಾಕಷ್ಟು ಬಾರಿ ಅವಕಾಶ ಕೊಟ್ಟಿದ್ದೀರಿ ದಯಮಾಡಿ ಒಂದು ಅವಕಾಶ ಕೊಡಿ

ಅಧ್ಯಕ್ಷರು ಈಗ ಅವಕಾಶ ಇಲ್ಲ ಒಂದು ಗಂಟೆಯಾಗ ಮೇಲೆ ನೀವು ಲೇಟಾಗಿ ಬಂದಿರಿ ಪ್ರಶ್ನೆಯೆಲ್ಲ ಲ್ಯಾಪ್ಸ್ ಆಯಿತು

ಶ್ರೀ ಸಿದ್ದು ಸವದಿ ಎರಡೆರಡು ಗಂಟೆಯಾಗಿದೆ, ಒಂದೇ ಒಂದು ನಿಮಿಷ ಅವಕಾಶ ಮಾಡಿಕೊಡಿ ನನ್ನದು ಬಹಳ ಮುಖ್ಯವಾದ ಪ್ರಶ್ನೆಯಿದೆ

ಅಧ್ಯಕ್ಷರು ದಯಮಾಡಿ ಸದಸ್ಯರು ಅರ್ಥ ಮಾಡಿಕೊಳ್ಳಿ ಬಿಎಸಿಯಲ್ಲಿ ತೀರ್ಮಾನವಾಗಿದೆ ಈಗಾಗಲೇ ಒಂದು ಗಂಟೆಯಾಯಿತು ಇಲ್ಲದಿದ್ದರೆ ರಿಪಿಟೇಷನ್ ಆಗುತ್ತದೆ ಪ್ರತಿ ದಿನ ಎರಡು ಗಂಟೆ ಮಾಡಬೇಕಾಗುತ್ತದೆ ಅದು ಸಾಧ್ಯವಾಗುವುದಿಲ್ಲ

ಶ್ರೀ ನೆ ಲ ನರೇಂದ್ರ ಬಾಬು ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಡಿ

ಶ್ರೀ ಜಿ ಎಸ್ ಗಡ್ಡದೇವರ ಮಠ್ ನಮ್ಮ ಪ್ರಶ್ನೆ ಬರುವುದು ಅಪರೂಪ ನಮಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು ಈಗ ವರದಿ ಒಪ್ಪಿಸುವುದು

ಶ್ರೀ ನೆ ಲ ನರೇಂದ್ರ ಬಾಬು ನಮ್ಮ ಮೇಲೆ ಏನು ಕರುಣೆಯಿಲ್ಲವಲ್ಲ

2) ವರದಿ ಒಪ್ಪಿಸುವುದು

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಅಧ್ಯಕ್ಷರು ಸಾರ್ವಜನಿಕ ಉದ್ಯಮಗಳ ಸಮಿತಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ 115 ನೇ ವರದಿಯನ್ನು ಸಮಿತಿಯ ಪರವಾಗಿ ದಿನಾಂಕ 12-07-2007 ರಂದು ಸದನದಲ್ಲಿ ಮಂಡಿಸುತ್ತಿದ್ಧೇನೆ

ಅಧ್ಯಕ್ಷರು ಮಂಡಿಸಲಾಯಿತು

ವಿಷಯ ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 115ನೇ ವರದಿ

ಅಧ್ಯಕ್ಷರು ಈಗ ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಸ್ವಲ್ಪ ಎಲ್ಲರೂ ಕುಳಿತುಕೊಳ್ಳಿ

ಶ್ರೀ ನೆ ಲ ನರೇಂದ್ರ ಬಾಬು' ಸ್ವಾಮಿ ಎರಡು ಪ್ರಶ್ನೆಯಿದೆ ಕೇಳಿ ಬಿಡುತ್ತೇವೆ ಅವಕಾಶ ಮಾಡಿಕೊಡಿ ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಸಹಾಯಕ್ಕೆ ಬರಬೇಕು ನಮಗೆ ಅವಕಾಶ ಮಾಡಿಕೊಡಿ

ಶ್ರೀ ಜಿ ಎಸ್ ಗಡ್ಡದೇವರ ಮಠ ಐದು ನಿಮಿಷ ಲೇಟಾಗಿ ಬಂದೆವು ನಮಗೆ ದಯವಿಟ್ಟು ಅವಕಾಶ ಕೊಡಿ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಬೇಕು

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಯಡಿಯೂರಪ್ಪನವರೇ, ದಯಮಾಡಿ ಇಲ್ಲಿ ಕೇಳಬೇಕು ಸುಮಾರು 20 ವರ್ಷಗಳಿಂದ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ

ಶ್ರೀ ಜಿ ಎಸ್ ಗಡ್ಡದೇವರ ಮಠ ಅಪರೂಪಕ್ಕೆ ನಮಗೆ ಯಾವಾಗಲೋ ಒಮ್ಮೆ ಪ್ರಶ್ನೆ ಬರುತ್ತದೆ ನೀವು ನಮಗೆ ಅವಕಾಶ ಕೊಡಬೇಕು

ಶ್ರೀ ನೆ ಲ ನರೇಂದ್ರ ಬಾಬು ದಯವಿಟ್ಟು ನಮಗೆ ಅವಕಾಶ ಮಾಡಿಕೊಡಬೇಕು

ಶ್ರೀ ಜಿ ಎಸ್ ಗಡ್ಡದೇವರ ಮಠ ದಯವಿಟ್ಟು ನಮಗೆ ಎರಡು ನಿಮಿಷ ಅವಕಲಾಶ ಕೊಡಿ ನಾವು ಅಲ್ಲೆಲ್ಲ ಜನರಿಗೆ ಹೇಳಿ ಬಂದಿರುತ್ತೇವೆ

ಅಧ್ಯಕ್ಷರು ದಯವಿಟ್ಟು ಕುಳಿತುಕೊಳ್ಳಿ ಈ ರೀತಿ ನೀವು ನಿಂತು ಕೊಂಡು ಮಾತನಾಡಿದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ನೀವು ನಿಧಾನಕ್ಕೆ ಬಂದರೆ ನಾವೇನು ಮಾಡುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ಒಂದು ಗಂಟೆಯ ಮೇಲಾಗಿದೆ ದಯಮಾಡಿ ಸಹಕರಿಸಿ

ಶ್ರೀ ನೆ ಲ ನರೇಂದ್ರ ಬಾಬು ಹಿರಿಯ ಸದಸ್ಯರಿಗೆ ಅವಕಾಶ ಮಾಡಿಕೊಡುತ್ತೀರಿ, ಹೊಸಬರಿಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ ರಾಜ್ಯದಲ್ಲಿ 14 ಸಾವಿರ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ದಿನಗೂಲಿ ನೌಕರರ ಪ್ರತಿಭಟನೆ ಕರ್ನಾಟಕ ರಾಜ್ಯದಲ್ಲಿ ಪ್ರಾರಂಬವಾಗಿದೆ 84 ರಲ್ಲಿ ಅವರು ನೇಮಕಗೊಂಡಿದ್ದಾರೆ ಈಗಾಗಲೇ ಸುಮಾರು 14 ಸಾವಿರ ಜನ ನೌಕರರು-ಕೆಲಸ ಮಾಡುತ್ತಿದ್ದಾರೆ ನಾನು ಮುಖ್ಯಮಂತ್ರಿಯಾದಾಗ ಕೂಡ ನಮ್ಮಲ್ಲಿ ಗುಲ್ಬರ್ಗಾದಲ್ಲಿ ಆಗಿದ್ದಂಥ ಸಂದರ್ಭದಲ್ಲಿ ನಾವು ಮತ್ತು

ಮಲ್ಲಿಖಾರ್ಜುನ ಖರ್ಗೆಯವರು ಹೋಗಿ ಭೇಟಿಯಾಗಿದ್ದೆವು ನಾಲ್ಕು ಸಾರಿ ಉನ್ನತ ಮಟ್ಟದ ಸಭೆ ನಡೆಸಿದ್ದೇವೆ ಆಗ ಸಮಸ್ಯೆ ಸುಪ್ರೀಂ ಕೋರ್ಟ್‌ನಲ್ಲಿತ್ತು ಹೀಗಾಗಿ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಮುಖ್ಯಕಾರ್ಯದರ್ಶಿಗಳು ಮತ್ತು ಕಾನೂನು ಸಚಿವರು ಕೂಡ ಹೇಳಿದ್ದಾರೆ ಈ 14 ಸಾವಿರ ಜನರು ಬಹಳ ಕಷ್ಟದಲ್ಲಿದ್ದಾರೆ 15 ದಿನಗಳ ಹಿಂದೆ ಮತ್ತು ಈಗಲೂ ಕೂಡ ಚಕ್ಕರಾಯನ ಕೆರೆಯ ಜಾಗದಲ್ಲಿ ಇವರು ಮುಷ್ಕರದಲ್ಲಿದ್ದಾರೆ ಇವರ ಸಮಸ್ಯೆಯನ್ನು ಮಾನವೀಯತೆಯ ಆಧಾರದ ಮೇಲೆ ನೋಡಬೇಕಾಗುತ್ತದೆ ನಾನು ಆಗ ಯಡಿಯೂರಪ್ಪ ನವರೊಡನೆ ಅವರು ಶಿವಮೊಗ್ಗದಲ್ಲಿದ್ದಾಗ ಮಾತನಾಡಿದೆ ನಾನು ಮುಖ್ಯ ಮಂತ್ರಿಗಳಿಗೆ ಹಾಗೂ ಪ್ರಕಾಶ್‌ರವರ ಹತ್ತಿರ ಕೂಡ ಮಾತನಾಡಿದ್ದೇನೆ ಹೋದ ಸಲ ಇದೇ ಒಂದು ಸದನದಲ್ಲಿ ಯಡಿಯೂರಪ್ಪನವರು ಏನು ಹೇಳಿದ್ದಾರೆ ಅಂದರೆ ಅವರಿಗೆ ನಾವು ತೆಗೆದುಹಾಕುವುದಿಲ್ಲವೆಂದು ಹೇಳಿದ್ದಾರೆ ಹೀಗಿರುವಾಗ ನೀವು ಅವರನ್ನು ಪರ್ಮನೆಂಟ್ ಮಾಡುವುದಕ್ಕೆ ಏನು ತೊಂದರೆಯಿದೆ? already they are working, ಅದರಲ್ಲಿ ಬಿಎ ಎಂಎ ಓದಿಕೊಂಡವರೂ ಇದ್ದಾರೆ ರೇವಣ್ಣನವರು ಅಧ್ಯಕ್ಷತೆಯಲ್ಲಿ ಇದನ್ನು ಸರಿಪಡಿಸಬೇಕೆಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದೆ ರೇವಣ್ಣನವರು ಕೂಡ ಒಂದು ಸಭೆ ಕರೆದಿಲ್ಲ

ಆದ್ದರಿಂದ ನಾನು ಹೇಳುವುದೇನೆಂದರೆ, ಮಾನವೀಯತೆ ದೃಷ್ಟಿಯಿಂದ 14,000 ದಿನಗೂಲಿ ನೌಕರರನ್ನು ಖಾಯಂ ಗೊಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಮಾನ್ಯ ರೇವೂನಾಯಕ್ ಬೆಳಮಗಿ ಯವರಿಗೆ ಮತ್ತು ಮಾನ್ಯ ದರ್ಶನಪುರರವರಿಗೆ ಹಾಗೂ ಇವತ್ತಿನ ಇದಿವಸ ಎಲ್ಲಾ ಕಡೆಗೆ ಗೊತ್ತಿರುವಂತೆ ರಾಜ್ಯದ ಎಲ್ಲಾ ಕಡೆ ಈ ರೀತಿಯಾದ ಪ್ರತಿಭಟನೆಗಳು ನಡೆಯುತ್ತಿವೆ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ವಿಶೇಷವಾಗಿ ಹಣಕಾಸಿನ ಸಚಿವರು ಮತ್ತು ಉಪ ಮುಖ್ಯಮಂತ್ರಿಗಳಾಗಿದ್ದಾರೆ ಆದ್ದರಿಂದ ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ದಿನಗೂಲಿ ನೌಕರರು ಮುಷ್ಕರವನ್ನು ನಡೆಸುತ್ತಿದ್ದಾರೆ ತಾವು ಅವರ ಬೇಡಿಕೆಗೆ ಸ್ಪಂದಿಸಿ ಏನಾದರೂ ಮಾಡಿ ಇದಕ್ಕೆ ಪೂರ್ಣವಿರಾಮ ಕೊಡತಕ್ಕಂಥ ಕೆಲಸವನ್ನು ಮಾಡಬೇಕು ಅವರು ಈಗಾಗಲೇ ಸಾಕಷ್ಟು ಹತಾಷರಾಗಿದ್ದಾರೆ ಅವರು ಇಲ್ಲಿಗೆ ಬಂದು ತಮ್ಮನ್ನೂ ಕೂಡ ಭೇಟಿ ಮಾಡಿದ್ದಾರೆ ಇವತ್ತಿನ ದಿವಸ ಜಕ್ಕರಾಯನ ಕೆರೆಯಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ ಇಲ್ಲಿಯವರೆಗೆ ಸರ್ಕಾರದ

ವತಿಯಿಂದ ಅಲ್ಲಿಗೆ ಹೋಗಿ ಅವರುಗಳನ್ನು ಭೇಟಿ ಮಾಟಿ ಸಾಂತ್ವನ ಮಾಡತಕ್ಕಂಥಾ ಪ್ರಯತ್ನ ಮಾಡಿಲ್ಲ ಪ್ರಜಾಪ್ರಭುತ್ವದಲ್ಲಿ ಇಂಥ ಒಂದು ಘಟನೆ ಮುಷ್ಕರ ನಡೆದಾಗ, ಸುಮಾರು 20 ರಿಂದ 22 ವರ್ಷಗಳವರೆಗೆ ಸೇವೆ ಮಾಡಿರತಕ್ಕಂಥ ಸಿಬ್ಬಂದಿಗಳಿರುವದರಿಂದ ತಾವು ಇದರ ಬಗ್ಗೆ ತೀರ್ಮಾನ ಮಾಡಲೇಬೇಕಾಗುತ್ತದೆ ಆದ್ದರಿಂದ ಈ ವಿಯಷವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಒಟ್ಟಾರೆ ಏನೆಂದರೆ, ಈ ಒಂದು ಪ್ರತಿಭಟನೆ ಮಾಡುತ್ತಿರುವ ದಿನಗೂಲಿ ನೌಕರರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಸರ್ಕಾರ ತಿಳಿಸಬೇಕು ಇವತ್ತು ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲಿರುವುದರಿಂದ ಅವರಿಗೆ ನಾನು ಕೇಳುವುದೇನೆಂದರೆ ತಾವು ಹಣಕಾಸಿನ ಸಚಿವರಾಗಿರುವುದರಿಂದ ಇದರ ಬಗ್ಗೆ ತಾವು ಸೂಕ್ತವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ದಿನಗೂಲಿ ನೌಕರರು ಹೋರಾಟ ಮಾಡುತ್ತಿರುವ ಶಿಬಿರಕ್ಕೆ ಮಾನ್ಯ ಯಡಿಯೂರಪ್ಪನವರು ಬಹಳ ಹಿಂದೆ ಹೋಗಿದ್ದರು ಖಂಡಿತವಾಗಿ ಖಾಯಂ ಮಾಡುವ ಬಗ್ಗೆ ಸಂಪೂರ್ಣ ಪ್ರಯತ್ನದಲ್ಲಿರುತ್ತೇವೆಂಬ ಬರವಸೆಯನ್ನು ಕೊಟ್ಟು ಬಂದಿದ್ದರು ಮತ್ತೆ ಈ ಸರ್ಕಾರದ ಅನೇಕ ಜನ ಮಂತ್ರಿಗಳು ಅಲ್ಲಿಗೆ ಹೋಗಿ ಅವರುಗಳನ್ನು ಭೇಟಿ ಮಾಡಿ ಬಂದಿದ್ದಾರೆ ಅವರುಗಳೂ ಕೂಡ ಇಲ್ಲಿಗೆ ನಾಲ್ಕಾರು ಸಾರಿ ಬಂದಿದ್ದಾರೆ ಈಗ ಅಂತಿಮವಾಗಿ ಮಳೆ ಗಾಳಿ ಯಾವುದಕ್ಕೂ ಲೆಕ್ಕಿಸದೆ ಸುಮಾರು 15 ರಿಂದ 20 ಸಾವಿರ ಜನ ಜಕ್ಕರಾಯನ ಕೆರೆಯಲ್ಲಿ ಮಲಗಿದ್ದಾರೆ ಅವರು ಇಲ್ಲಿ ಅಮರಣಾಂತರ ಮುಷ್ಕರ ಮಡುತ್ತಿದ್ದಾರೆ ಪ್ರಾಣವನ್ನು ಕಳೆದು ಕೊಳ್ಳುವುದಕ್ಕೂ ಸಿದ್ಧರಿದ್ದೇವೆಂಬ ಮಟ್ಟಕ್ಕೆ ಕೆಲವರು ಬಂದಿದ್ದಾರೆ ಆದ್ದರಿಂದ ಅವರುಗಳನ್ನು ಖಾಯಂ ಮಾಡುತ್ತೇವೆಂಬ ಸ್ಪಷ್ಟವಾದಂದ ಮತ್ತು ನೇರವಾದಂಥ ಉತ್ತರವನ್ನು ಇವತ್ತು ಸರ್ಕಾರ ಕೊಡಬೇಕು ಇಲ್ಲದಿದ್ರೆ ಅವರು ಸತ್ಯಾಗ್ರಹವನ್ನು ಬಿಟ್ಟು ಹೋಗತಕ್ಕಂಥ ಪ್ರಶ್ನೆಯೇ ಇಲ್ಲ ಸುಮಾರು 20 ವರ್ಷಗಳಿಂದ ದಿನಗೂಲಿ ನೌಕರರಾಗಿ ಕೆಲಸ ಮಾಡಕೊಂಡು ಬಂದಿದ್ದಾರೆ ಆದ್ದರಿಂದ ಮಾನವೀಯತೆ ದೃಷ್ಟಿಯಿಂದ ಅವರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಇವರ ಬಗ್ಗೆ ಸರ್ಕಾರ ಈಗಾಗಲೇ ಬಹಳಷ್ಟು ಸಮಿತಿಗಳನ್ನು ಮಾಡಿತ್ತು ಮತ್ತೆ ಸಚಿವ ಸಂಪುಟದಲ್ಲಿಯೂ ಕೂಡ ಇದರ

ಬಗ್ಗೆ ಬಹಳಷ್ಟು ಸಾರಿ ಚರ್ಚೆಯಾಗಿದೆ ಆದರೂ ಕೂಡ ಯಾವುದೇ ರೀತಿಯ ತೀರ್ಮಾನಗಳು ಆಗಿಲ್ಲ ನಿಮಗೆ ಅವರ ಬಗ್ಗೆ ಕರುಣೆಯಿಲ್ಲವೇ? ನಮ್ಮ ರಾಜ್ಯದಲ್ಲಿ ಬೇರೆ ನೌಕರರಿಗೆ ಒಂದು ರೀತಿ ಮತ್ತು ಈ ನೌಕರರಿಗೆ ಒಂದು ರೀತಿ ಮಾಡತಕ್ಕಂಥಾದ್ದು ಸರಿಯಾದ ಕ್ರಮವಲ್ಲ ಆದ್ದರಿಂದ ಇಂಥ ದಿನಾಂಕದಿಂದ ಅವರುಗಳನ್ನು ಖಾಯಂ ಮಾಡುತ್ತೇವೆಂಬುದರ ಬಗ್ಗೆ ತಾವು ಸ್ಪಷ್ಟವಾದ ಮತ್ತು ನೇರವಾದ ಉತ್ತರವನ್ನು ಕೊಡಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸಿನ ಸಚಿವರು) ಮಾನ್ಯ ಅಧ್ಯಕ್ಷರೆ, 1980 ರಿಂದ ಹಿಂದಿನಿಂದಲೂ ಸುಮಾರು 13 ರಿಂದ 14 ಸಾವಿರ ಜನ ದಿನಗೂಲಿ ನೌಕರರಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ ಮಾನ್ಯ ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ಧರ್ಮಸಿಂಗ್‌ರವರು ಮತ್ತು ಶ್ರೀ ವಾಟಳ್ ನಾಗರಾಜ್‌ರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಾಲ್ಕು ಬಾರಿ ಸಭೆ ಕರೆದು ಈ ಸಮಸ್ಯೆಯ ನಿವಾರಣೆ ಬಗ್ಗೆ ಪ್ರಯತ್ನ ಮಾಡಿದ್ದಾರೆ ಈಗ ನಮ್ಮ ಸರ್ಕಾರ ಸಚಿವ ಸಂಪುಟದ ಉಪ ಸಮಿತಿ ಮಾಡಿ ಮಾನ್ಯ ರೇವಣ್ಣನವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದೆ ಕಳೆದ ಬಾರಿ ದಿನಗೂಲಿ ನೌಕರರು ಸತ್ಯಾಗ್ರಹ ಮಾಡಿದಂಥಾ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ಮಾತನಾಡಿ ಬನ್ನಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ನಾನು ಅಲ್ಲಿಗೆ ಹೋಗಿ ಮಾತನಾಡಿ ಕೊಂಡು ಬಂದಿದ್ದೇನೆ ಮತ್ತೆ ಮಾನ್ಯ ಧರ್ಮಸಿಂಗ್‌ರವರು ನನಗೆ ದೂರವಾಣಿ ಮಾಡಿ ಹೇಳಿದ್ದರು ಮತ್ತೆ ಕ್ಯಾಬಿನೆಟ್ ಸಭೆ ಮಾಡತಕ್ಕಂಥ ಸಂದರ್ಭದಲ್ಲಿ ಸತ್ಯಾಗ್ರಹ ಮಾಡುತ್ತಿದ್ದ ದಿನಗೂಲಿ ನೌಕರರಲ್ಲಿ ಕೆಲವು ಪ್ರಮುಖರನ್ನು ಕರೆಸಿ ಇವರ ಬಗೆ ಕ್ಯಾಬಿನೆಟ್‌ನಲ್ಲಿಯೂ ಕೂಡ ಪ್ರಸ್ತಾಪ ಮಾಡಿದ್ದೇನೆ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಆದಷ್ಟು ಬೇಗ ಈ ವಿಷಯದ ಬಗ್ಗೆ ಚರ್ಚೆಮಾಡುತ್ತೇವೆಂದು ಮತ್ತು ನಾವು ಏನು ಮಾಡುತ್ತೇವೆಂಬುದರ ಬಗ್ಗೆ ಕೂಡ ಅವರಿಗೆ ಹೇಳಿ ಕಳುಹಿಸಲಾಗಿತ್ತು ಅನೇಕ ಜನ ಪದವೀದರರನ್ನು ಇಷ್ಟು ವರ್ಷಗಳವರೆಗೆ ದುಡಿಸಿಕೊಂಡು ಹೋಗತಕ್ಕಂಥದು ಯಾವುದೇ ಒಂದು ಸರ್ಕಾರಕ್ಕೆ ಗೌರವ ತರತಕ್ಕಂಥ ಸಂಗತಿಯಲ್ಲ ಮಾನವೀಯತೆ ದೃಷ್ಟಿಯಿಂದ ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂಬುದರಲ್ಲಿ ಎರಡು ಮಾತಿಲ್ಲ ಆದರೆ ಏತಕ್ಕಾಗಿ ಇಷ್ಟು ತಡವಾಯಿತೆಂಬುದು ಮತ್ತು ಹಿಂದಿನ ಸರ್ಕಾರಗಳು ಈ ಬಗ್ಗೆ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ

ಎನ್ನತಕ್ಕಂಥದ್ದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಯಾವ್ಯಾವ ಜ್ವಲಂತ ಸಮಸ್ಯೆಗಳನ್ನು ಹಿಂದಿನ ಸರ್ಕಾರಗಳು ಬಿಟ್ಟು ಹೋಗಿವೆಯೋ ಆ ಎಲ್ಲಾ ಸಮಸ್ಯೆಗಳನ್ನು ಒಂದೊಂದಾಗಿ ಪರಿಶೀಲನೆ ಮಾಡಿ ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಇದನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪದಿದ್ದರೂ ಸಹ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ ನಾವು ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿದ್ದೇವೆ ಮಾನ್ಯ ರೇವಣ್ಣನವರ ಅಧ್ಯಕ್ಷತೆಯಲ್ಲಿನ ಕ್ಯಾಬಿನೆಟ್ ಸಬ್ ಕಮಿಟಿಯು ಸಭೆಯನ್ನು ಮಾಡಿ ಇದರ ಸಾಧಕ ಬಾಧಕಗಳ ಬಗೆ ಪರಿಶೀಲನೆ ಮಾಡಿ ಸುಪ್ರೀಂ ಕೋರ್ಟ್‌ನ ಆದೇಶದಂತೆ ಕಾನೂನಿನ ಚೌಕಟ್ಟನ್ನು ನೋಡಿಕೊಂಡು ಮಾನವೀಯತ್ತೆ ದೃಷ್ಟಿಯಿಂದ ಇದನ್ನು ಪರಿಶೀಲನೆ ಮಾಡುತ್ತೇವೆ ತಕ್ಷಣ ಇದರ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ರೇವಣ್ಣನವರಿಗೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಮತ್ತೆ ಇದಕ್ಕಿಂತ ಹೆಚ್ಚು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ ನಾನು ಒಂದು ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡಿದ್ದು ಹಣಕಾಸಿನ ಪರಿಣಾಮಗಳನ್ನೂ ಸಹ ನೋಡಬೇಕಾಗುತ್ತದೆ ಇದು ನೆನ್ನೆ ಮೊನ್ನೆಯಿಂದ ಆಗಿರತಕ್ಕಂಥದ್ದಲ್ಲ ಯಡಿಯೂರಪ್ಪ ಮತ್ತು ಮಾನ್ಯ ಕುಮಾರಸ್ವಾಮಿ ಸರ್ಕಾರ ಬಂದ 18 ತಿಂಗಳಿಂದೀಚೆಗೆ ಇದು ಆಗಿರತಕ್ಕಂಥದ್ದಲ್ಲ ಅನೇಕ ವರ್ಷಗಳಿಂದ ಸುಪ್ರೀಂ ಕೋರ್ಟ್ ಆದೇಶ ಮತ್ತು ಬೇರೆ ಬೇರೆ ಕಾರಣಗಳಿಂದ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗಿಲ್ಲ ಎನ್ನತಕ್ಕಂಥದರ ಬಗ್ಗೆ ಮಾಜಿ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ ಈಗಾಗಲೇ ಅನೇಕ ಸಮಸ್ಯೆಗಳನ್ನು ನಾವು ಬಗೆಹರಿಸುತ್ತಿದ್ದೇವೆ ಇವತ್ತಲ್ಲಾ ನಾಳೆ ಈ ಸಮಸ್ಯೆಯನ್ನು ಸಹ ಬಗೆಹರಿಸುತ್ತೇವೆ ಅವರು ನೆಮ್ಮದಿಯಿಂದ ಮತ್ತು ಗೌರವದಿಂದ ಜೀವನ ನಡೆಸಬೇಕೆಂಬುದು ನಮ್ಮ ಅಪೇಕ್ಷೆ ಇದೆ ಈ ನಿಟ್ಟಿನಲ್ಲಿ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡಿ ಇದರ ಬಗ್ಗೆ ಏನು ಮಾಡಬಹುದೆಂಬುದರ ಬಗ್ಗೆ ಒಂದು ನಿರ್ಧಾರಕ್ಕೆ ಬರುತ್ತೇವೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಈ ರೀತುಯಾದ ಭರವಸೆಗಳು ಈ ಸದನದಲ್ಲಿ ಬಹಳಷ್ಟು ಆಗುವೆ ತಾವು ಸ್ಪಷ್ಟವಾದ

ಹೇಳಿಕೆಯನ್ನು ಕೊಡಬೇಕು ಈ ರೀತಿಯಾದ ಹೇಳಿಕೆಯನ್ನು ಮೊದಲೂ ಕೂಡ ಕೊಟ್ಟದ್ದೀರಿ ಆದ್ದರಿಂದ ನೇರವಾಗಿ ಒಂದು ಸ್ಪಷ್ಟವಾದ ಉತ್ತರ ಹೇಳಿ ಹಿಂದಿನ ಅನೇಕ ಸರ್ಕಾರಗಳು ಮಾಡಿರಕ್ಕಂಥ ಕಾರ್ಯಕ್ರಮಗಳನ್ನು ನಾವು ಈಗ ಮಾಡುತ್ತಿದ್ದೇವೆ ಅವರು ಒಪ್ಪದಿದ್ದರೂ ಕೂಡ ಚಿಂತೆ ಇಲ್ಲ, ನಾವು ಮಾಡುತ್ತೇವೆಂದು ತಾವು ಹೇಳಿದ್ದೀರಿ ನೀವು ಮಾಡಿ ಗಟ್ಟಿಗರೆಂದು, ಬಹಳ ನಿಸ್ಸೀಮರೆಂದು ಅನಿಸಿಕೊಳ್ಳಿ ನಮ್ಮದೇನು ಅಭ್ಯಂತರವಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ

ಶ್ರೀ ವಾಟಾಳ್ ನಾಗರಾಜ್ ಎಷ್ಟು ದಿವಸದಲ್ಲಿ ತೀರ್ಮಾನ ತೆಗೆದು ಕೊಳ್ಳುತ್ತೀರಿ?

ಶ್ರೀ ಬಿ ಎಸ್ ಯಡಿಯೂರಪ್ಪ ಈ ರೀತಯಾದ ಜ್ವಲಂಥ ಸಮಸ್ಯೆಗಳ ಬಗ್ಗೆ ಎಷ್ಟು ದಿಒವಸ ಮತ್ತು ಒಂದು ಅಥವಾ ಎರಡು ತಿಂಗಳುಎಂದು ಹೇಳುವುದಕ್ಕೆ ಬರುವುದಿಲ್ಲ ಮಾನವೀಯತೆ ದೃಷ್ಟಿಯಿಂದ ನೀವು ಕೊಟ್ಟಂಥ ಸಲಹೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವದರ ಬಗ್ಗೆ ಏನೇನು ಮಾಡಬಹುದಾಗಿದೆಯೋ ಅದರ ಬಗ್ಗೆ ಗಮನ ಕೊಡುತ್ತೇವೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ರೇವಣ್ಣನವರ ಅದ್ಯಕ್ಷತೆಯಲ್ಲಿ ಕ್ಯಾಬಿನೆಟ್ ಸಬ್ ಕಮಿಟಿ ರಚನೆ ಮಾಡಲಾಗಿದೆ ಆದರೆ ಅವರು ಒಂದು ಸಲ ಕೂಡ ಸಭೆ ಮಾಡಿಲ್ಲ ಅವರಿಗೆ ತಾವು ಹೇಳಬೇಕು ಒಂದು ವೇಳೆ ಸಭೆ ಮಾಡತಕ್ಕಂಥ ಮನಸ್ಸು ಅವರಿಗಿಲ್ಲದಿದ್ದರೆ, ಅಲ್ಲಿಗೆ ಬೇರೊಬ್ಬರನ್ನು ಕುಳ್ಳಿರಿಸಿ ಕ್ಯಾಬಿನೆಟ್ ಉಪ ಸಮಿತಿ ಕೆಲಸ ಮಾಡಲಿ ನಾವು ಏಕೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೆಂದರೆ, ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟ್ ಅಂತಿಮ ತೀರ್ಮಾನ ಕೊಟ್ಟಿರಲಿಲ್ಲ ಸುಪ್ರೀಂ ಕೋರ್ಟ್‌ನಲ್ಲಿ ಈ ಮ್ಯಾಟರ್ ಇದ್ದಾಗ ತೀರ್ಮಾನ ತೆಗೆದುಕೊಂಡರೆ ಸಬ್‌ಜ್ಯುಡಿಸ್ ಆಗುತ್ತದೆಂದು we have not taken decision ಈಗ ಅದನ್ನೂ ಕೂಡ ಕೊಟ್ಟಿದೆ ಆದರೆ ಈಗ ಸುಪ್ರೀಂ ಕೋರ್ಟ್ ಕೊಟ್ಟಿರುವಂಥ ತೀರ್ಮಾನ ಕೂಡ ಅವರ ಪರವಾಗಿಲ್ಲ, ಗ್ರಾಮೀಣ ಕೃಪಾಂಕ ವಿಷಯ ದಲ್ಲಿ

ಶ್ರೀ ಬಿ ಎಸ್ ಯಡಿಯೂರಪ್ಪ ಸುಪ್ರೀಂ ಕೋರ್ಟ್‌ನಲ್ಲಿ ಅವತ್ತು ಯಾವ ಸ್ಥಿತಿ ಇತ್ತೋ ಅದೇ ಸ್ಥಿತಿ ಇವತ್ತೂ ಕೂಡ ಇದೆ ಏನು ವ್ಯತ್ಯಾಸ ಆಗಿಲ್ಲ

ಶ್ರೀ ಎನ್ ಧರ್ಮಸಿಂಗ್ ಅವರ ಪರವಾಗಿ ಕೊಟ್ಟಿಲ್ಲವೆಂದು ನಾನು ಹೇಳುತ್ತಿದ್ದೇನೆ 20 ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರತಕ್ಕಂಥ ಜನರಿದ್ದಾರೆ ಆದ್ದರಿಂದ ಏನಾದರೂ ಮಾಡಿ you have to solve the problem ಮಾನವೀಯತೆಯ ದೃಷ್ಟಿಯಿಂದ ಅವರ ಬಗ್ಗೆ ಪರಿಶಿಲನೆ ಮಾಡಿ ಅವರಿಗೆ ಏನಾದರೂ ಅನುಕೂಲ ಮಾಡಿಕೊಟ್ಟರೆ, you will get the credit

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ಕ್ಯಾಬಿನೆಟ್ ಸಬ್ ಕಮಿಟಿ ಇದೆ ಮಾನವೀಯತೆಯ ದೃಷ್ಟಿಯಿಂದ ಇವರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ ಇದನ್ನು ಮಾಡಲೇಬೇಕು ಏಕೆಂದರೆ ಸುಮಾರು 27 ರಿಂದ 28 ವರ್ಷಗಳವರೆಗೆ ಕೆಲಸ ಮಾಡಿಕೊಂಡು ಬಂದಿದ್ದಾರೆ ಈಗ ಅವರಿಗೆ ವಯಸ್ಸಾಗಿರುವುದರಿಂದ ಅವರು ಬೇರೆ ಕಡೆ ಕೆಲಸ ಮಾಡುವುದಕ್ಕೆ ಹೋಗುವುದಕ್ಕೆ ಆಗುವುದಿಲ್ಲ ಅವರುಗಳನ್ನು ನೌಕರಿಯಿಂದ ತೆಗೆದರೆ ಅವರು ಎಲ್ಲಿಗೂ ಹೋಗುವುದಕ್ಕೆ ಆಗುವುದಿಲ್ಲ ನಮ್ಮ ದೃಷ್ಟಿಯಿಂದ ಅಲ್ಲಿ ಮುಖ್ಯವಾಗಿ ರೋಸ್ಟರ್ ತೊಂದರೆ ಇದೆ ಆದ್ದರಿಂದ ನೀವು ಏನು ಮಾಡಬೇಕೆಂದರೆ ರೋಸ್ಟರ್ ಎಷ್ಟು ಇದೆಯೋ ಅಷ್ಟು ಅವರನ್ನು ಅಕಾಮಿಡೇಟ್ ಮಾಡಿಕೊಂಡು ಬ್ಯಾಕ್‌ಲಾಗ್ ಇದ್ದರೆ, ಬ್ಯಾಕ್‌ಲಾಗ್ ಹುದ್ದೆಯನ್ನು ಸ್ಯಾಂಕ್ಷನ್ ಮಾಡಿ ಇವರಿಗೆ ಸಹಾಯ ಮಾಡಬೇಕಾಗುತ್ತದೆ ಈ ರೀತಿಯಾಗಿ ತಾವು ನಿರ್ಣಯ ಮಾಡಿದರೆ ಮಾತ್ರ ಕಷ್ಟದಲ್ಲಿರುವಂಥ ಜನರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ದಿನಗೂಲಿ ನೌಕರರು ಜಕ್ಕರಾಯನ ಕೆರೆಯಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ ಅಲ್ಲದೆ ಅವರು ಜೀವನ್ಮರಣ ಪ್ರಶ್ನೆಯಲ್ಲಿದ್ದಾರೆ ಆದ್ದರಿಂದ ಮಾನ್ಯ ಉಪಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಭರವಸೆ ಕೊಡುತ್ತೀರಾ?

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೇ ಚುನಾವಣೆ ಕಾಲದಲ್ಲಿ ಭರವಸೆ ಕೊಡುವುದಿಲ್ಲವೇ?

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಒಂದು ತಿಂಗಳ ಹಿಂದೆಸತ್ಯಾಗ್ರಹ ಮಾಡುತ್ತಿದ್ದ ಸಂದರ್ಭದಲ್ಲಿ ನಾನು ಖುದ್ದಾಗಿ ಅಲ್ಲಿಗೆ ಹೋಗಿ ಅವರ ಜೊತೆ ಮಾತನಾಡಿ ಅವರನ್ನು ವಿದಾನ ಸೌಧಕ್ಕೆ ಕರೆದುಕೊಂಡು ಬಂದು ಮಾತುಕತೆ ನಡೆಸಿ ಇದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದೇನೆ ಈಗ ನಾನು ಅವರಲ್ಲಿ ವಿನಂತಿ ಮಾಡುವುದೇನೆಂದರೆ, ದಯಮಾಡಿ ತಮ್ಮ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಳ್ಳಬೇಕು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡು ತ್ತೇನೆ ಆದಷ್ಟು ಬೇಗ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಇದರ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ ಆದ್ದರಿಂದ ಈ ಮನೆಯ ಮೂಲಕ ಅವರಲ್ಲಿ ವಿನಂತಿ ಮಾಡುವುದೇನೆಂದರೆ, ಈ ಸತ್ಯಾಗ್ರಹವನ್ನು ಕೈ ಬಿಡಿ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತೇವೆ ದಯಮಾಡಿ ತಾವು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಅವರು ನೀಡಿರತಕ್ಕಂಥ ಉತ್ತರ ನನಗೆ ಸಮಾಧಾನವಾಗಲಿಲ್ಲ ನಾನು ಸಭಾತ್ಯಾಗ ಮಾಡುತ್ತೇನೆ ಮಾನ್ಯ ಯಡಿಯೂರಪ್ಪನವರು ಈ ರೀತಿಯಾಗಿ ಹೇಳುವುದು ಸರಿಯಲ್ಲ ತಾವು ಎಷ್ಟು ಶಕ್ತಿಯುತವಾಗಿ ಇದರ ಬಗ್ಗೆ ಇಲ್ಲಿ ಕೂಗಾಡುತ್ತಿದ್ದೀರಿ ಮತ್ತು ಮಾತನಾಡುತ್ತದ್ದೀರಿ ಅಲ್ಲಿಗೆ ಹೋಗಿ ತಾವು ಈ ರೀತಿ ಏಕಾಗಿದ್ದೀರಿ? ಪ್ರತಿ ಸಾರಿಯೂ ಈ ಮಾತನ್ನು ಹೇಳಿಸಿಕೊಳ್ಳುವುದಕ್ಕೆ ನಿಮಗೆ ಯಾವ ರೀತಿಯಾಗುತ್ತದೆ ಇದು ಸರಿಯಾದ ಕ್ರಮವಲ್ಲ ಅವರು ಮಳೆ ಗಾಳಿಗೆ ಲೆಕ್ಕಿಸದೆ ಹತ್ತಾರು ಸಾವಿರ ಜನರು ಇಲ್ಲಿಗೆ ಬಂದು ಸತ್ಯಾಗ್ರಹ ಮಾಡುತ್ತಿದ್ದಾರೆ ಮತ್ತೆ ಅಮರಣಾಂತರ ಉಪವಾಸ ಕುಳಿರುಕೊಂಡಿದ್ದಾರೆ ಅವರ ಬಗ್ಗೆ ನಿವು ಈ ರೀತಿಯಾಗಿ ಹಾರಿಕೆ ಉತ್ತರ ಕೊಡತಕ್ಕಂಥದ್ದು ಸರಿಯಲ್ಲ ಬಹಳ ನೋವಿನಿಂದ ನಾನು ಸಭಾತ್ಯಾಗ ಮಾಡುತ್ತೇನೆ

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನನ್ನ ಎರಡು ಪ್ರಶ್ನೆಗಳು ಇವೆ ನಾನು ಕೇಳಲೋ ಬೇಡವೋ? ರಿಪ್ಲೈ ಬಂದಿದೆಯಾ? -

ಅಧ್ಯಕ್ಷರು ಶೂನ್ಯವೇಳೆ ಪ್ರಶ್ನೆಯಾ?

ಶ್ರೀ ಕೆ ಶ್ರೀನಿವಾಸ ಗೌಡ ಏನು ಸ್ವಾಮಿ ಮಾತನಡಲೋ ಬೇಡವೋ?

ಅಧ್ಯಕ್ಷರು ತಡೆಯಿರಿ ಸ್ವಾಮಿ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ತಾನೆ?

ಶ್ರೀ ನೆ ಲ ನರೇಂದ್ರಬಾಬು ಒಂದು ನಿಮಿಷ

ಶ್ರೀ ಕೆ ಶ್ರೀನಿವಾಸ ಗೌಡ ನನ್ನದು ಶೂನ್ಯ ವೇಳೆಯ ವಿಷಯ, ತಾವು ಆಮೇಲೆ ಮಾತನಾಡಿ

ಶ್ರೀ ನೆ ಲ ನರೇಂದ್ರಬಾಬು ಒಂದು ನಿಮಿಷ ಸರ್, ಸನ್ಮಾನ್ಯ ಅಧ್ಯಕ್ಷರೆ, ನಾವು ಇಬ್ಬರು ಸದಸ್ಯರು ದಯವಿಟ್ಟು ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡೆವು ತಾವು ಅವಕಾಶವನ್ನು ಕೊಡಲಿಲ್ಲ ಈ ತಾರತಮ್ಯ ಮಾಡಿದ್ದಕ್ಕಾಗಿ ನಾವು ಮನನೊಂದು ಸಭಾತ್ಯಾಗ ಮಾಡುತ್ತೇವೆ

ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಜಿ ಎಸ್ ಗಡ್ಡದೇವರಮರ ಮತ್ತು ನೆ ಲ ನರೇಂದ್ರಬಾಬುರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು ಆಯಿತು ನೀವು ಫ್ರೀ ಇದ್ದೀರಿ, ನಿಮಗೆ ಹಕ್ಕಿದೆ ನೀವು ಮಾಡಿ

ಆ) ವಿಷಯ ಕೋಲಾರದ ರೇಷ್ಮೆ ಕಾಲೇಜಿನಲ್ಲಿ ಬಿಎಸ್ಸಿ ಕೋರ್ಸ್ ಪ್ರಾರಂಭಿಸುವುದರ ಬಗ್ಗೆ

ಶ್ರೀ ಕೆ ಶ್ರೀನಿವಾಸ ಗೌಡ(ಕೋಲಾರ) ಮಾನ್ಯ ಅಧ್ಯಕ್ಷರೆ, ಬೆಂಗಳುರು ಕೃಷಿ ವಿಶ್ವವಿದ್ಯಾನಿಲಯದ ಮೂಲಕ ಕೋಲಾರ ಜಿಲ್ಲೆಯಲ್ಲಿ ಒಂದು ರೇಷ್ಮೆ ಕಾಲೇಜು ನಡೆಯುತ್ತಿದೆ ಆ ರೇಷ್ಮೆ ಕಾಲೇಜಿನಲ್ಲಿ ಇತ್ತೀಚೆಗೆ ಬಿಎಸ್ಸಿ ಮಾಡಿದವರಿಗೆ ಹೆಚ್ಚು ಹೆಚ್ಚಿಗೆ ಕೆಲಸ ಸಿಗದಿರುವುದರಿಂದ ಅಡ್ಮಿಷನ್ ಕಡಿಮೆಯಾಗಿದೆ ನಾನು ಕೃಷಿ ಮಂತ್ರಿ ಆಗಿದ್ದಾಗ ಒಂದು ಸೂಚನೆಯನ್ನು ಕೊಟ್ಟಿದ್ದೆ ಅಲ್ಲಿ ಬಿಎಸ್ಸಿ ಯವರಿಗೆ ಅಗ್ರಿ ಕೋರ್ಸ್ ಶುರುಮಾಡಿ ಎಂದು ಅದಕ್ಕೆ ಯೂನಿವರ್ಸಿಟಿಯವರು ಮತ್ತು ಆ ಕಮಿಟಿ ಕೂಡ ಒಪ್ಪಿದ್ದಾರೆ ಅವರು ಕೇವಲ 2 ಕೋಟಿ ರೂಗಳನ್ನು ಈ ವರ್ಷ ಶುರು ಮಾಡಲಿಕ್ಕೆ ಕೇಳುತ್ತಿದ್ದಾರೆ ಆದರೆ ಅದನ್ನು ಇದುವರೆಗೆ ಕೊಟ್ಟಿಲ್ಲ ಈ ಬಗ್ಗೆ ತಮ್ಮ ಮೂಲಕ ಮಾನ್ಯ ಕೃಷಿ ಮಂತ್ರಿಗಳಿಗೆ ಶೂನ್ಯ ವೇಳೆಯಲ್ಲಿ ಉತ್ತರವನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ

ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ಸದಸ್ಯರು ಹಿಂದೆ ಸಚಿವರಾಗಿದ್ದಾಗ ಅದನ್ನು ಒಂದು ಲೆವೆಲ್‌ಗೆ ತಂದು ಇಟ್ಟಿದ್ದರು ಆದರೆ ನಾನು ಬಂದ ಮೇಲೆ ಯಾರು ಇದರ ರೆಪ್ರೆಸೆಂಟೇಷನ್ ಮಾಡಲಿಲ್ಲ ಯಾವ ಫೈಲ್ ಕೂಡ ನನ್ನ ಹತ್ತಿರ ಬರಲಿಲ್ಲ ಒಂದು ತಿಂಗಳ ಹಿಂದೆ ಮಾನ್ಯ ಕೃಷ್ಣ ಭೈರೇಗೌಡರು ಇನ್‌ಛಾರ್ಜ್ ಮಂತ್ರಿ ಇಬ್ಬರೂ ಸೇರಿ ನನಗೆ ಮಾತನಾಡಿದಾಗ, ತಕ್ಷಣ ಆ ಸಂಭಂಧ ಪಟ್ಟ ಫೈಲ್ ತರಿಸಿ ನೋಡಲಾಗಿ, ಅದಕ್ಕೆ financial approval ಬೇಕಾಗಿದೆ ನಾವು ಈಗ already Deputy CMಅವರಿಗೆ ಸಚಿವ ಸಂಪುಟದಲ್ಲಿನಾನು ಮತ್ತು incharge ಮಂತ್ರಿಗಳು ಮಾತನಾಡುದ್ದೇವೆ ಅಲ್ಲಿಂದ VCಯವರಿಗೆ ಹೊಸ ಒಂದು ಆದೇಶವನ್ನೂ ಕೊಟ್ಟಿದ್ದೇನೆ immidiate ಆಗಿ ಹೊಸ proposal ವರ್ಷ ವರ್ಷಕ್ಕೆ BSc Agriculture course start ಮಾಡುವುದಕ್ಕೆ ಎಷ್ಟು ವೆಚ್ಚವಾಗುತ್ತದೆ ಎನ್ನುವುದರ ಬಗ್ಗೆ ಒಂದು ಹೊಸ proposalನ್ನು ಕಳುಹಿಸಿಕೊಡಿ ಎಂದು ಹೇಳಿದ್ದೇನೆ mostly ಅದು ನಾಳೆ ನನಗೆ ಬರಬಹುದು proposal ತಕ್ಷಣ ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅದನ್ನು ಬಹಳ ಶೀಘ್ರವಾಗಿ ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಕೆ ಶ್ರೀನಿವಾಸ ಗೌಡ ತಾವು ಒಂದು ಕೆಲಸವನ್ನು ಮಾಡಿ

ಶ್ರೀ ಬಂಡೆಪ್ಪ ಕಾಶೆಂಪೂರ್ ಮಾನ್ಯ ಶ್ರೀನಿವಾಸ ಗೌಡರೆ, ಈ ಮಾತನ್ನು ತಾವು ಬಜೆಟ್‌ಗಿಂತ ಮುಂಚೆ ಹೇಳಿದ್ದರೆ, ನಾನು ಬಜೆಟ್‌ನಲ್ಲಿ ಸೇರಿಸಿಕೊಳ್ಳುತ್ತಿದ್ದೆ ನೋಡಿ ನನಗೆ ಯಾರೂ ಹೇಳಿಲ್ಲ

ಶ್ರೀ ಕೆ ಶ್ರೀನಿವಾಸ ಗೌಡ ನಾನು ನಿಮ್ಮ ಹತ್ತಿರ ಮಾತನಾಡಿದಾಗ ನೀವು ಮಾಡಿದ್ದೇನೆಂದು ಹೇಳಿರುತ್ತೀರಿ ನಾನು ಅದಕ್ಕಾಗಿ ಸುಮ್ಮನೆ ಇದ್ದೆ ಈಗ ನಾನು ಏನು ಹೇಳುತ್ತೇನೆಂದರೆ, ಅಡ್ಮಿಷನ್‌ಗೆ ನೀವು ಇನಸ್ಟ್ರಕ್ಷನ್ ಕೊಡಿ, ಅದಕ್ಕೆ ನೀವು ಆಮೇಲೆ ದುಡ್ಡನ್ನು ಕೊಡಿ

ಶ್ರೀ ಬಂಡೆಪ್ಪ ಕಾಶೆಂಪೂರ್ ನಾವು ನೀವು ಮತ್ತು ವೈಸ್‌ಚಾನ್ಸಲರ್ ಕುಳಿತುಕೊಂಡು ಇದಕ್ಕೆ ಒಂದು ತೀರ್ಮಾನವನ್ನು ತೆಗೆದು ಕೊಳ್ಳೋಣ Academic involvement ಇರುವುದರಿಂದ ಇದರ ಬಗ್ಗೆ Vice Chancellor ಜೊತೆಯಲ್ಲಿ ಕುಳಿತುಕೊಂಡು ಇದನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದು ಕೊಳ್ಳುತ್ತೇನೆ

ಶ್ರೀ ಕೆ ಶ್ರೀನಿವಾಸ ಗೌಡ O K.

ಇ) ವಿಷಯ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಿಂದ 22 ಜನರನ್ನು ವರ್ಗ ಮಾಡಿರುವ ಬಗ್ಗೆ

ಶ್ರೀ ಎಸ್ ಆರ್ ಮೋರೆ ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ವೈದ್ಯಕೀಯ ಸಚಿವರಾದ ಆಚಾರ್ಯರವರನ್ನು ಕೇಳುತ್ತಿದ್ಧೇನೆ Hubli Institute ನಿಂದ ಹಠಾತ್ತಾಗಿ 22 ಜನ ಡಾಕ್ಟರ್‌ನ್ನು ವರ್ಗಾವಣೆ ಮಾಡಿದ್ದೀರಿ ತಮಗೆ ಕಿಮ್ಸ್ ಬಗ್ಗೆ ಈಗಾಗಲೇ ಹೆಚ್ಚು ಮಾಹಿತಿ ಇದೆ ಈಗ ನಮ್ಮ Indian Medical Council ಅದರ intake ಅನ್ನು ಕಡಿಮೆ ಮಾಡುತ್ತದೆ ಆದ್ದರಿಂದ ಈ ವರ್ಗಾವಣೆಯನ್ನು ನೀವು cancel ಮಾಡಬೇಕು ಮುಂಚೆ ಯಾರ್‍ಯಾರು ಯಾವ್ಯಾವ ಜಾಗದಲ್ಲಿ ಇದ್ದರೋ ಅಲ್ಲಿಯೇ ಅವರನ್ನು ಮರು ವರ್ಗಾವಣೆ ಮಾಡಬೇಕೆಂದು ಹೇಳಿ, ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ ಇದು ಬಹಳ ಪ್ರಾಮುಖ್ಯವಾದ ವಿಷಯ ವಾಗಿದೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ತಾವು ಏನು reply ಕೊಡುತ್ತೀರಿ ಎಂದು ನನಗೆ ಗೊತ್ತಿದೆ, ಮಾನ್ಯ ಸಚಿವರಿಗೆ ನಾನೊಂದು ಸ್ಪಷ್ಟವಾದ ಪ್ರಶ್ನೆಯನ್ನು ಕೇಳುತ್ತೇನೆ ಒಂದು ಕಾಲದಲ್ಲಿ 200intake ಇತ್ತು ಅದು 50 ಕ್ಕೆ ಬಂತು, ಪುನಃ ಎಸ್,ಎಂ ಕೃಷ್ಣರವರ ಕಾಲದಲ್ಲಿ ಎಲ್ಲಾ 99% vacancy ಗಳು fill up ಆಗಿ 158 intake ಆಯಿತು ನಾನು 22 ಜನರನ್ನು ಏಕೆ ವರ್ಗಾವಣೆ ಮಾಡಿದಿರಿ ಎಂದು ನಿಮ್ಮನ್ನು ಕೇಳುತ್ತೇನೆ Filling up is not important You are totally neglecting northern Karnataka area You are biased against the northern Karnataka area Hubli Medical ಕಾಲೇಜು ಒಂದು Prestigious ಕಾಲೇಜು Entire north Karnataka ಕ್ಕೆ ಅದೊಂದು ದೊಡ್ಡ್ ಕಾಲೇಜು ಅದಕ್ಕೆ ನೀವು ಇನ್ನು 22 ಜನರನ್ನು fill up ಮಾಡಬಹುದು ಆದರೆ ನೀವು ಏಕೆ transfer ಮಾಡಿದಿರಿ? ನೀವು ಮೊದಲು ಅದಕ್ಕೊಂದು ಉತ್ತರವನ್ನು ಕೊಡಿ

ಶ್ರೀ ಎಸ್ ಎಸ್ ಪಾಟೀಲ ದಯವಿಟ್ಟು ಆ ಕಿಮ್ಸ್ ಆಸ್ಪತ್ರೆಯನ್ನು ಮುಚ್ಚಿ ಬಿಡಿ ಏನು ಮಾಡುವುದು ಹೇಳಿ ಅಲ್ಲಿ ಬೆಡ್‌ಗಳು ಇಲ್ಲದಿರುವುದ ರಿಂದ ನೆಲದ ಮೇಲೆ ಮಲಗಿಸಿರುತ್ತಾರೆ ಮೊನ್ನೆ KMC ಗೆ visit ಮಾಡಿದಾಗ ನೆಲದ ಮೇಲೆ ರೋಗಿಗಳನ್ನು ಮಲಗಿಸಿದ್ದರು ಅಲ್ಲಿಗೆ ಹೆಚ್ಚುಗೆ

ಬೆಡ್‌ಗೆ ಅನುಮತಿಯನ್ನು ಕೊಡುವುದು ಬಿಟ್ಟು ಅಲ್ಲಿರುವ ಡಾಕ್ಟರ್‌ನ್ನು ತೆಗೆಯುತ್ತಾ ಹೋಗುತ್ತೀರಿ ನಿಮ್ಮನ್ನು ಯಾರು ಕೇಳುವವರೇ ಇಲ್ಲ ಇದು ಎಂತಹ ನಿರ್ಣಯ ದಯವಿಟ್ಟು ನೀವೇ ಹೇಳಿ ನೋಡೋಣ

ಶ್ರೀ ಬಿ ಎಸ್ ಯಡಿಯೂರಪ್ಪ ಅವರು ಉತ್ತರವನ್ನು ಹೇಳುತ್ತಾರೆ ಒಂದು ನಿಮಿಷ

ಅಧ್ಯಕ್ಷರು ಉತ್ತರವನ್ನು ಹೇಳುವುದಕ್ಕೆ ಬಿಡಿಯಪ್ಪಾ ನೀವು ಉತ್ತರವನ್ನು ಕೇಳದೇ ಎಲ್ಲರೂ ನಿಂತುಕೊಂಡರೆ ಹೇಗೆ? ನೊ ನೊ ಡಿ ಆರ್ ಪಾಟೀಲರೇ ಅವರು ಪ್ರಶ್ನೆಯನ್ನು ಕೇಳಿದ್ದಾರೆ ಅವರಿಗೆ ಉತ್ತರವನ್ನು ಕೊಡುತ್ತಾರೆ ಇಲ್ಲರೂ ಒಂದೇ ಸಲ ಎದ್ದು ನಿಂತುಕೊಂಡು ಬೊಬ್ಬೆ ಹಾಕಿದರೆ ಹೇಗೆ?

ಶ್ರೀ ಬಿ ಎಸ್ ಯಡಿಯೂರಪ್ಪ ತಾವು ಅಲ್ಲಿ ಕುಳಿತುಕೊಂಡು ಕಳಕಳಿಯನ್ನು ವ್ಯಕ್ತಪಡಿಸಿದರೆ ನಮ್ಮ ಅಭ್ಯಂತರವಿಲ್ಲ ಆದರೆ ಕಿಮ್ಸ್ ಆಸ್ಪತ್ರೆ 100 ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವಂಥ ಈ ಕಾಲದಲ್ಲಿ 100 ಕೋಟಿ ರೂಗಳನ್ನು ನಾವು ತೆಗೆದು ಇಟ್ಟಿದ್ದೇವೆ ಇಡೀ ರಾಜ್ಯದಲ್ಲಿ ಪ್ರತಿಷ್ಠಿತವಾದಂಥ ಆ ಒಂದು ಆಸ್ಪತ್ರೆಗೆ ಎಲ್ಲಾ ಸೌಲಭ್ಯಗಳು ಬೇಕು ಎಲ್ಲಾ ಅನುಕೂಲತೆಗಳು ಬೇಕು ಎನ್ನುವುದು ಈ ಸಮ್ಮಿಶ್ರ ಸರ್ಕಾರದ ಕಳ ಕಳಿ ಇದ್ದುದರಿಂದ 100 ಕೋಟಿ ರೂಗಳನ್ನು ತೆಗೆದು ಇಟ್ಟಿದ್ದು 1/3 ಹಣವನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ ಅದನ್ನು ಮುಚ್ಚುವಂಥ ಪ್ರಶ್ನನೆಯೇ ಇಲ್ಲ ತಾವು ಹಿರಿಯರು ಅದರ ಬಗ್ಗೆ ತಮಗೆ ಗೊತ್ತಿದೆ ಇಲ್ಲಿ ಹೇಳಿದರೆ ನಾನು ನೇರವಾಗಿ ಹೇಳುತ್ತೇನೆ 4–5 Government Medical College ಆಗುತ್ತಿವೆ, ಆ Government college ಗಳು ಇತಿಹಾಸದಲ್ಲಿ ಆಗಿರಲಿಲ್ಲ ನಾವು ಕೊಡುತ್ತಿದ್ದೇವೆ MBBS ಗೆ ಹೋಗು ವಂಥ ಮಕ್ಕಳಿಗೆ ಅನುಕೂವಾಗಬೇಕು, ಸ್ವಲ್ಪ ವ್ಯತ್ಯಾಸಗಳು ಆಗಿವೆ, ತಕ್ಷಣ ನಿಮ್ಮ ಕಿಮ್ಸ್ ಆಸ್ಪತ್ರೆಗೆ ತೊಂದರೆ ಆಗದ ರೀತಿಯಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ಬೆಳಿಗ್ಗೆ ನಾನು ಮುಖ್ಯಮಂತ್ರಿಗಳು, ಸಚಿವರು ಮಾತನಾಡಿದ್ದೇವೆ ಆದ್ದರಿಂದ ಇದನ್ನು ರಾಜಕೀಯಕ್ಕೆ ಬಳಸಬೇಡಿ ಇದನ್ನು ಸರಿ ಮಾಡುತ್ತೇವೆ

ಶ್ರೀ ಆರ್ ವಿ ದೇಶಪಾಂಡೆ ಅದನ್ನು ಸರಿಪಡಿಸಿ No No I don't agree I don't agree

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಅದರ ಕಾರಣಗಳು ತಮಗೆ ಗೊತ್ತಿದೆ ಅಗತ್ಯ ಇರುವ ಸಿಬ್ಬಂದಿಯನ್ನು ಕೊಡುವುದಕ್ಕೆ ನಾನು ಈಗಾಗಲೇ ಮಾತನಾಡಿದ್ದೇನೆ, ಅದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ, ಸಂಧರ್ಭ ವನ್ನು ನೀವು ಅರ್ಥಮಾಡಿಕೊಳ್ಳಬೇಕು ರಾಜಕಾರಣ ಮಾಡುವುದಕ್ಕೆ ಹೋದರೆ ನಾವು ಏನು ಮಾಡುವುದು?

ಶ್ರೀ ಆರ್ ವಿ ದೇಶಪಾಂಡೆ ತಾವು 100 ಕೋಟಿ ರೂಗಳನ್ನು ಇಟ್ಟಿದ್ದಿರ ಸಂತೋಷ ತಾವು 13 ಹಣವನ್ನು ರಿಲೀಸ್ ಮಾಡುದ್ದೀವೆಂದು ಹೇಳಿದಿರ ಸಂತೋಷ ತಾವು ಇಂಪ್ಲಿಮೆಂಟ್ ಮಾಡಿಸಿ, ಇಲ್ಲಿ ಒಂದು ಪ್ರಶ್ನೆ ಇದೆ 5 ಮೆಡಿಕಲ್ ಕಾಲೇಜನ್ನು ಮಾಡಿಸಿರುವುದು ಧರ್ಮಸಿಂಗ್ ಸಾಹೇಬರು ಮುಖ್ಯಮಂತ್ರಿಗಳು ಇದ್ದಾಗ ಅದಕ್ಕೆ ಅವರು ಮಂಜೂರಾತಿ ಕೊಟ್ಟರು, ತಾವು ಅದಕ್ಕೆ ಬೆಂಬಲವನ್ನು ಕೊಟ್ಟಿರುತ್ತೀರಿ ನಿಮಗೆ ನಾವು ಕಾರವಾರದಲ್ಲಿ ಒಂದು ಮೆಡಿಕಲ್‌ಕಾಲೇಜ್ ಮಾಡಿ ಎಂದು ಹೇಳಿದಾಗ ಪರಿಶೀಲನೆ ಮಾಡುತ್ತೀವೆ ಎಂದು ಹೇಳಿದಿರಿ, ಅದು ಇರಲಿ ನಾನು ನಿಮಗೆ ಏನು ಹೇಳುತ್ತೇನೆಂದರೆ, ನೀವು ಮೆಡಿಕಲ್ ಕಾಲೇಜ್‌ಗಳನ್ನು ಸ್ಯಾಂಕ್ಷನ್ ಮಾಡಿಕೊಂಡು ಹೋಗಿ, ಮೆಡಿಕಲ್ ಕಾಲೇಜಿನ ಫ್ಯಾಕಲ್ಟಿಗಳನ್ನು ಟ್ರಾನ್ಸ್ಫರ್ ಮಾಡುತ್ತಿದ್ದೀರಿ What are you doing? ಇಲ್ಲಿಯೂ injustice ಅಲ್ಲಿಯೂ injustice ಇವತ್ತು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಬೇಕಾದರೆ ಒಳ್ಳೆಯ ಫ್ಯಾಕಲ್ಟಿ ಬೇಕು ಅದನ್ನು ಮಾಡಿಕೊಳ್ಳಿ highschool ಗಳನ್ನು ಕೊಡುತ್ತಿರಿ ಜೂನಿಯರ್ ಕಾಲೇಜ್‌ಗಳನ್ನು ಕೊಡುತ್ತೀರಿ, ಯಾವ ಫ್ಯಾಕಲ್ಟಿ ಇಲ್ಲ, ಟೀಚರ್ಸ್ ಇಲ್ಲ 500 ಹೈಸ್ಕೂಲುಗಳನ್ನು ಮಂಜೂರು ಮಾಡಿದಿರಿ ಅದು ಏನು ಸಾಧನೆಯಲ್ಲ 500 ಹೈಸ್ಕೂಲುಗಳನ್ನು ಮಾಡುವುದಕ್ಕಿಂತ 100ಮಾಡಿ, ಒಳ್ಳೆಯ infrastructure ಕೊಡಿ ಒಳ್ಳೆಯ teachers ಕೊಡಿ ಆಗ ಅದಕ್ಕೆ ಗೌರವ ಬರುತ್ತದೆ ಇಲ್ಲದಿದ್ದರೆ mess up ಆಗಿ ನಾಳೆ ನಿಮಗೆ ಶಾಪ ಹಾಕುತ್ತಾರೆ ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರವನ್ನು ಕೊಟ್ಟದ್ದಾರೆಂದರೆ, to compensate those 5 colleges I don't agree This is not correct ಅಲ್ಲಿ ಕಳುಹಿಸುವುದಕ್ಕೆ

ಅದನ್ನು ಮಾಡಿ ಅಲ್ಲಿ ಒಳ್ಳೆಯ faculty ಕೊಡಿ ಒಳ್ಳೆಯ doctors, ಕೊಡಿ But you could not have done this you have admit that you have done wrong and you should say sorry at a time 22 ಜನ faculty ಗಳನ್ನು ವರ್ಗಾವಣೆ ಮಾಡಿದ್ದೀರಲ್ಲಾ that is the biggest blunder you have done you have to say sorry to the House

ಶ್ರೀ ಧರ್ಮ ಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮೋರೆಯವರು ಪ್ರಶ್ನೆಯನ್ನು ಕೇಳಿದ್ದಾರೆ ಎಸ್ ಎಸ್ ಪಾಟೀಲ್‌ರವರು ಡಿ ಆರ್ ಪಾಟೀಲ್‌ರವರು ಮತ್ತು ವಿಶೇಷವಾಗಿ ಮಾನ್ಯ ದೇಶಪಾಂಡೆಯವರು ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಈ ಕಿಮ್ಸ್ ಆಸ್ಪತ್ರೆ ಏನು ಇದೆ ಇಡೀ ಕರ್ನಾಟಕದಲ್ಲಿ that is one of the prestigious institutions ಮತ್ತು ವಿಶೇಷವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಒಳ್ಳೆಯ ಜನಾಭಿಪ್ರಾಯ ಮೂಡಿಸತಕ್ಕಂದ ರೀತಿಯಲ್ಲಿ ಕೆಲಸ ಮಾಡುತ್ತಿದೆ ನೀವು ಅದಕ್ಕೆ 100 ಕೋಟಿ, 70 ಕೋಟಿ ರೂಗಳನ್ನು ಕೊಡಿ, ಅದರ ಬಗ್ಗೆ ನಮ್ಮ ತಕರಾರು ಏನು ಇಲ್ಲ ನೀವು ಹಣ ಕೊಟ್ಟಿದ್ದಿರಿ ನೀವು ಬಜೆಟ್‌ನಲ್ಲಿ ಬೇರೆ ಬೇರೆದಕ್ಕೆ ಹಣ ಕೊಟ್ಟಂತೆ ಇದಕ್ಕೂ ಹಣವನ್ನು ಕೊಟ್ಟಿದ್ದೀರಿ ನಾವು ಇದಕ್ಕೆ ಅಭಾರಿಯಾಗಿದ್ದೇವೆ ಈಗ ಕೇಳತಕ್ಕಂಧ ಪ್ರಶ್ನೆ ಇಷ್ಟೇ ಮಾನ್ಯ ಆಚಾರ್ಯರವರು ಬಹಳಷ್ಟು ವಿಚಾರ ಮಾಡಿ ಕೆಲಸ ಮಾಡುತ್ತಾರೆನ್ನುವ ಅಭಪ್ರಾಯ ನಮಗೆ ಇದೆ ಆದರೆ ದಿಡೀರನೆ ತಾವು ವರ್ಗಾವಣೆಯನ್ನು ಮಾಡಿದಿರಿ ಅದಕ್ಕೆ ಕಾರಣ ವೇನು? ನಾವು ರಾಜಕಾರಣ ಮಾಡುತ್ತಿಲ್ಲ ಅಲ್ಲಿ ಪ್ರತಿಭಟನೆ ನಡೆಯುತ್ತಿದೆ ಆ ರೀತಿಯ ಒಂದು ಶಿಕ್ಷಣ ಸಂಸ್ಥೆಯಲ್ಲಿ ಹಠಾತ್ತನೆ ವರ್ಗಾವಣೆ ಮಾಡಿದ್ದರಿಂದ ಆ ವಾತಾವರಣ ನಿರ್ಮಾಣವಾಗಿದೆ that is not the way

ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡತಕ್ಕಂಧ ರೀತಿಯಲ್ಲಿ ಜನಾಬಿಪ್ರಾಯ ಮೂಡಿಸುವಂಥ ಧೈರ್ಯವಿದ್ದರೂ ಕೂಡ there, you have failed You have to admit it ಒಂದು prestigious ಸಂಸ್ಥೆಗೆ ಧಕ್ಕೆ ತರುವಂಥ ರೀತಿಯಲ್ಲಿ ನಿಮ್ಮ ವರ್ಗಾವಣೆ ಮಾಡುವ ನೀತಿಯಿದೆ ಅದನ್ನು ನಾವು ಖಂಡಿಸುತ್ತೇವೆ ಇದು ನಮ್ಮ ಮನಸ್ಸಿಗೆ ಬರಲಾರದಂಥ ವಿಷಯ, ಬೇರೆ ಹಣವನ್ನು ಕೊಡತಕ್ಕಂಥದ್ದು, ಮೆಡಿಕಲ್ ಕಾಲೇಜಿಗೆ

ಕೊಡತಕ್ಕಂಥ ರೀತಿಯಲ್ಲಿ ಯಡಿಯೂರಪ್ಪನವರೂ ಕೂಡ ನಾನು ಮುಖ್ಯ ಮಂತ್ರಿಯಾದಾಗ, ಅಲ್ಲಿರತಕ್ಕಂಥ ಎಲ್ಲಾ ನಾಗರೀಕರೂ ಬಂದಾಗ ನಾವು ಕೂಡ ಶಿವಮೊಗ್ಗಕ್ಕೆ ಮೆಡಿಕಲ್ ಕಾಲೇಜು ಕೊಟ್ಟಿದ್ದೇವೆ 350 ಪ್ರತಿಭಾವಂತ ಹಳ್ಳಿಯ ವಿದ್ಯಾರ್ಥಿಗಳಿಗೆ monopoly ಯನ್ನು ರೀತಿಯಲ್ಲಿ ನಾವು ಮೆಡಿಕಲ್ ಕಾಲೇಜು ಕೊಟ್ಟಿದ್ದೇವೆ ಅದಕ್ಕೆ ಅದು ಸರಿಯಾದ ರೀತಿಯಲ್ಲಿ ನಡೆಯುತ್ತದೆ ಆದರೆ ಇದರಲ್ಲಿ ನೀವು ಮಾಡಿದ್ದೂ ತಪ್ಪು ಆ ರೀತಿ ನೀವು ಮಾಡಬಾರದು, ಮಾಡತಕ್ಕಂಥ ಮನಸ್ಸು ತಮಗೇಕೆ ಬಂತು ಎನ್ನುವುದು ನಮ್ಮ ಪ್ರಶ್ನೆಯಾಗಿದೆ

ಅಧ್ಯಕ್ಷರು ಈಗ ಶೂನ್ಯ ವೇಳೆ ಸಮಯದಲ್ಲಿ ಚರ್ಚೆಗೆ ಅವಕಾಶವಿಲ್ಲ ಬಹಳ ಗಂಭೀರವಾದಂಥಹ ವಿಚಾರವೆಂದು ಸದಸ್ಯರುಗಳಿಗೆ ಅವಕಾಶ ಕೊಟ್ಟಿದ್ದೇನೆ ಪ್ರತಿಯೊಂದು ವಿಚಾರಕ್ಕೂ ಶೂನ್ಯವೇಳೆಯಲ್ಲಿ ಚರ್ಚೆಯಾದರೆ ಹೌಸ್ ನಡೆಸುವುದು ಹೇಗೆ? ಈಗಾಗಲೇ ಸದನ ಆರಂಭವಾಗಿ 5 ದಿವಸ ಮುಗಿಯಿತು ಇದು ಆರನೇ ದಿನ, ಇದುವರೆಗೆ demands ತೆಗೆದುಕೊಳ್ಳಲಿಕ್ಕೆ ಆಗಲೇ ಇಲ್ಲ I cant understand

ಶ್ರೀ ಡಿ ಆರ್ ಪಾಟೀಲ್ ಈಗ ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೆ ಅನುಮತಿ ಪಡೆಯಲಿಕ್ಕೆ ಎಂ ಸಿ ಐ ಅನುಮತಿ ಪಡೆದುಕೊಳ್ಳಲಿಕ್ಕೆ ತಾತ್ಕಾಲಿಕ ವಾಗಿ ವ್ಯವಸ್ಥೆ ಮಾಡಿಸಿದ್ದಿರಿ, ಅದು ನನಗೆ ಅರ್ಥವಾಗುತ್ತದೆ ಅದಕ್ಕೆ ಅನುಮತಿ ಸಿಕ್ಕಿದ ಕೂಡಲೇ ವರ್ಗಾವಣೆ ಮಾಡಿ ಯಡಿಯೂರಪ್ಪ ನವರು ಬಜೆಟ್ಟಿನಲ್ಲಿ ಸಾಕಷ್ಟು ಹಣಕಾಸನ್ನು ಇಟ್ಟಿದ್ದಾರೆ ಇದು ತಮಗೆ ಗೊತ್ತಿರಬೇಕು ಇದು ಸುವರ್ಣ ಮಹೋತ್ಸವದ ವರ್ಷ ಆದುದರಿಂದ ಅದಕ್ಕೆ ಏನು ತೊಂದರೆಯಾಗಬಾರದು ಪ್ರಾಧ್ಯಾಪಕರಿಗೆ ವೇತನವನ್ನು ಹೆಚ್ಚು ಮಾಡಿ, ಬೇಗ ರೆಕ್ರೂಟ್ ಮಾಡುವ ಹಾಗಾದಾಗ ಈ ಎಲ್ಲಾ ಸೌಲಭ್ಯಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ, ಇನ್‌ಟೇಕ್ ಹೆಚ್ಚು ಮಾಡಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಆ ಕೆಲಸವನ್ನು ಆಚಾರ್ಯರವರು ಬೇಗನೇ ಮಾಡಬೇಕೆಂದು ಒತ್ತಾಯಿಸುತ್ತೇನೆ

f ಅ

f ಅ

ಶ್ರೀ ಕೆ ಆರ್ ರಮೇಶ್ ಕುಮಾರ್(ಶ್ರೀನಿವಾಸ ಪುರ) ಯಡಿಯೂರಪ್ಪ ನವರು ಒಂದು observation ಮಾಡಿದರು, ಪಾಪ ಬಹಳ ನೋವಿನಿಂದ ಹೇಳಿದರು, ಇಷ್ಟೆಲ್ಲಾ ಮಾಡಿದ್ದೇವೆ, ನೀವು ರಾಜಕಾರಣ ಮಾಡಲಿಕ್ಕೆ ಹೋಗಬೇಡಿ ಎಂದು ಸುಮ್ಮನೆ ಜಸ್ಟ್ ನಿಮ್ಮ ಅಟೆನ್ಷನ್‌ಗೆ ಒಂದು

ವಿಚಾರವನ್ನು ತರುತ್ತೇನೆ ನಿಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂಥಹ autonomous institutions ಎಷ್ಟು ಇವೆ? ಒಂದು particular institution ನಲ್ಲಿ ನಿಮ್ಮ ಮೇಲೆ ಹೆಚ್ಚು ಪ್ರಭಾವ ಬೀರುವವಂಥ ಒಬ್ಬ ಸಂಭಂಧೀಕರು ಅಲ್ಲಿದ್ದಾರೆಂದು ಹೇಳಿ ಇಡೀ ಸರ್ಕಾರವೇ ಅವರೆದುರಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೀರಿ You extend all facilities to that institution do you extend the same facility to all other institutions? ವಾಣಿ ವಿಲಾಸಕ್ಕೆ, ನಿಮ್ಹಾನ್ಸ್‌ಗೆ ಸಿಗುತ್ತಿದೆಯೇ? ಬೇರೆ ಎಲ್ಲಾ institutionsಗೆ ಸಿಗುತ್ತಿದೆಯೇ? One particular institution ಸಂಜಯಗಾಂಧಿ ಸಂಸ್ಥೆಗೆ ಸಿಗುತ್ತಿದೆಯೇ? ಇದು ಗೊತ್ತಿಲ್ಲವೇ ನಿಮಗೆ? ಎಲ್ಲಾ ಮುಲಾಜುಗಳಲ್ಲಿ ನಲುಗಿ ಹೋಗಿಬಿಟ್ಟಿದ್ದೇವೆ ದೊಡ್ಡವರು ಎಂದರೆ ಪ್ರಭಾವಿತರು ಎಂದರೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇವೆ ಮೆರಿಟ್‌ಗೆ ತಿಲಾಂಜಲಿ ಕೊಟ್ಟಿದ್ದೇವೆ, ನಾನು ಬಾಯಿ ಬಿಟ್ಟು ಹೇಳಬೇಕೇ? ಏನೇನು ನಡೆದಿದೆ ಅಲ್ಲಿ ಎಂದು ಗೊತ್ತಲ್ಲವೆ? Then, you please come out with the details ಸಂಜಯಗಾಂದಿ ಸಂಸ್ಥೆಗೆ ಎಷ್ಟು inancial assistance ಕೊಟ್ಟಿದ್ದಿರಿ? ಜಯದೇವ, ಕಿದ್ವಾಯಿ ಸಂಸ್ಥೆಗಳಿಗೆ ಎಷ್ಟು ಕೊಟ್ಟಿದ್ದಿರಿ? ಡೀಟೇಲ್ಸ್ ಎಲ್ಲಾ ಕೊಡಿ, ನೋಡೋಣ they are all independent institutions each one is more important than the other ಎಲ್ಲವನ್ನೂ ಸಮಾನವಾಗಿ ನೋಡಿದ್ದೀರಾ? ರಾಜಕಾರಣ ಅಲ್ಲಿಯೂ ಇದೆ, ರಾಜಕಾರಣ ಅಂದರೆ ಹೇಗೆ ಯಡಿಯೂರಪ್ಪನವರೇ? ಅಭಿವೃದ್ಧೀ ವಿಚಾರದಲ್ಲಿ ಜನಪರವಾದ ಕೆಲಸ ಮಾಡುವಂಥ ವಿಚಾರದಲ್ಲಿ ಮುಲಾಜಿರಬಾರದು, ನಾವು ಅಲ್ಲಿ ಮುಲಾಜಿಗೆ ಬಗ್ಗಿಬಿಟ್ಟಿದ್ದೇವೆ ಸಂಜಯಗಾಂಧಿ ಸಂಸ್ಥೆಯಲ್ಲಿ ಬಡವನಿಗೆ ಗ್ರೀನ್ ಕಾರ್ಡ್ ತೆಗೆದುಕೊಂಡು ಹೋದವನಿಗೆ 20 00 ರೂ ರಸೀದಿ ಬರೆದುಕೊಡುತ್ತಾರೆ ಅದೊಂದೇನೆ ಸರ್ಕಾರಿ ಸಂಸ್ಥೆ ಜಯದೇವ ಒಂದೇನೆ ಸರ್ಕಾರಿ ಸಂಸ್ಥೇ ಸಂಜಯಗಾಂದಿ ವಾಣಿ ವಿಲಾಸ ಸಂಸ್ಥೆಗಳಿಗೆ ಹಣ ಬೇಡವೇ? ಕಿದ್ವಾಯಿಗೆ ಬೇಡವೇ? ಕಿದ್ವಾಯಿಗೆ ಹೋಗಿ ನೋಡಿ, ಪರಿಸ್ಥಿತಿ ಏನಾಗಿದೆಯೆಂದು ಗೊತ್ತಾಗುತ್ತದೆ ಧರ್ಮ ಶಾಲೆಯಲ್ಲಿ ಮಲಗಲಿಕ್ಕೂ ಕೂಡ ಜಾಗ ಇಲ್ಲ Depending upon the proximity they have to themen in power, you extend the facilitis in the Government

ಅಧ್ಯಕ್ಷರು ಮಾತನಾಡಿ, ಇದರ ಬಗ್ಗೆ ಉತ್ತರ ಕೊಡಿ

ಶ್ರೀ ಎಸ್ ಎಸ್ ಪಾಟೀಲ್ ಬೆಡ್ಸ್ ಇಲ್ಲ, ನೆಲದ ಮೇಲೆ ಹಾಸಿಗೆ ಹಾಸಿ ಮಲಗಿಸುತ್ತಿದ್ದಾರೆ ನೋಡಿ

ಡಾ ವಿ ಎಸ್ ಆಚಾರ್ಯ(ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು) ಮಾನ್ಯ ಹೊನ್ನಳ್ಳಿ ಜಬ್ಬರ್‌ಖಾನ್ ಮೋರೆ ಮತ್ತು ಇತರೆ ಪ್ರತಿಪಕ್ಷದ ಮಾನ್ಯ ಸದಸ್ಯರುಗಳು ಈ ಪ್ರಶ್ನೆ ಎತ್ತಿದ್ದಕೆ ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ ನಾನು ಆ ಉತ್ತರವನ್ನು ಮತ್ತೆ ಓದಲಿಕ್ಕೆ ಹೋಗುವುದಿಲ್ಲ ಒಂದು ವಿಷಯವನ್ನು ಸದನದ ಮಾನ್ಯ ಎಲ್ಲಾ ಸದಸ್ಯರಿಗೂ ಹೇಳುತ್ತಿದ್ದೇನೆ ಆರು ಮೆಡಿಕಲ್ ಕಾಲೇಜುಗಳನ್ನು ರಾಜ್ಯದಲ್ಲಿ ಕಳೆ ವರ್ಷ ನೀಡಿ, ಈ ವರ್ಷ ಪ್ರಾರಂಭ ಮಾಡಲಿಕ್ಕೆ ಪ್ರಾಮಾಣಿಕವಾದಂಧ ಒಂದು ಪ್ರಯತ್ನವನ್ನು ನಾವು ಮುಂದುವರೆಸಿಕೊಂಡು ಇವತ್ತು ಒಂದು ಹಂತದಲ್ಲಿ ಯಶಸ್ವಿಯಾಗಿದ್ದೇವೆ ಈ ಆರು ಕಾಲೇಜುಗಳ ಪೈಕಿ ಮೂರು ಕಾಲೇಜುಗಳು ಕಳೆದ ವರ್ಷ ಪ್ರಾರಂಭವಾಗುದೆ ಉಳಿದಂತೆ ಶಿವಮೊಗ್ಗ, ರಾಯಚುರು ಬಿದರ್ ಜಿಲ್ಲೆಗಳಲ್ಲಿ ಈ ವರ್ಷ ಪ್ರಾರಂಭವಾಗಲಿದೆ ಇದರ ಪೈಕಿ ಬೀದರ್ ಕಾಲೇಜಿಗೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಅನುಮತಿಯನ್ನು ನೇರವಾಗಿ ಕೊಟ್ಟಿದ್ದಾರೆ ಉಳಿದ 5ರ ಬಗ್ಗೆ ಇರುವಂಧ ಅಲ್ಪಸ್ವಲ್ಪ ನ್ಯೂನತೆಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅವರು ತಿಳಿಸಿದ್ದಾರೆ ನಾವು ಕೇಂದ್ರ ಸರ್ಕಾರದೆ ದುರು ಆ ಒಂದು ಇನ್‌ಸ್ಪೆಕ್ಷನ್ ಟೀಮ್ ಬಂದು ಹೋದ ನಂತರ ಏನೇನು ಸುಧಾರಣೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಮತ್ತು ಏನೇನು ಸುಧಾರಣೆ ಕ್ರಮಗಳಿಂದ ನಮ್ಮ ಕೊರತೆ ಆ ಪರಿಮಿತಿಯೊಳಗೆ ಬಂದಿದೆಯೆಂದು ಹೇಳುವಂಧಹ ಒಂದು compliance report ಕೊಟ್ಟಿರು ಆ compliance report ಅನ್ನು ಪರಿಗಣಿಸಿ ನಮ್ಮ 5 ಕಾಲೇಜುಗಳಿಗೂ ಅನುಮತಿ ಸಿಗುವಂಧ ಹಂತದಲ್ಲಿ ನಾವಿದ್ದೇವೆಂದು ಸದನಕ್ಕೆ ತಿಳಿಸಲಿಕ್ಕೆ ನನಗೆ ಸಂತೋಷವಾಗುತ್ತಿದೆ ಇದು ಇಡೀ ರಾಜ್ಯದ ವೈದ್ಯಕೀಯ ಶಿಕ್ಷಣ, ಅದರಲ್ಲಿಯೂ ಪ್ರತಿಭಾವಂಧ ಬಡ ವಿದ್ಯಾರ್ಥಿಗಳಿಗೆ ಮುಟ್ಟುವಂಧ ಈ ಸೀಟುಗಳ ಬಗ್ಗೆ ಈ ಸರ್ಕಾರ ಹಿಂದಿನ ತಮ್ಮ ನೇತೃತ್ವದ ಸರ್ಕಾರ ಅದಕ್ಕೆ ಬೀಜ ಬಿತ್ತಿದ್ದು ಅದನ್ನು ನಾವು ಒಪ್ಪುತ್ತೇವೆ, ನಮ್ಮ ಸರ್ಕಾರ ಆ ಬಗ್ಗೆ ಕ್ರಮ ಕೈಗೊಂಡಿದೆ ಏನಾಗಿದೆ ಎಂದರೆ ನಮ್ಮ

ಈ ಒಂದು ವ್ಯವಸ್ಥೆ ಮಾಡುವಾಗ ಅರಲ್ಲಿ ಪ್ರತಿ ಇಲಾಖೆಯಲ್ಲಿ Anatomy, Physiology, Bio Chemistry, ಮಾತ್ರವಲ್ಲ, clinical subjects ಸಹ ಪ್ರಥಮ ವರ್ಷ ಅದರಲ್ಲಿ teaching programme ಇಲ್ಲ ಇವತ್ತು ಶಿವಮೊಗ್ಗ ರಾಯಚೂರು, ಬೀದರ್‌ಗೆ ನಮಗೆ ಮೆಡಿಸಿನ್, ಸರ್ಜರಿ ಇತ್ಯಾದಿ ಗೈನಕಲಾಜಿ clinical subjects ಗೆ teaching programme ಇಲ್ಲ, ನಮಗೆ ಅದೆಲ್ಲಾ ಗೊತ್ತಿದೆ ಆದರೆ ಆ ಇಲಾಖೆಯಲ್ಲಿ ಸಹ ಒಬ್ಬರಾದರೂ ಪ್ರೊಫೆಸರು ಅಥವಾ ಅಸೋಸಿಯೇಟ್ ಪ್ರೊಫೆಸರ್ ಇರಬೇಕು ಎಂದು ಎಂ ಸಿ ಐ ನಾರ್ಮ್ಸ್ ಇವೆ ಮತ್ತು ನೇರವಾಗಿ ಮಾನ್ಯ ಅಧ್ಯಕ್ಷರೇ ಇದು ಬಹಳ ಮುಖ್ಯ ತಾವೆಲ್ಲರೂ ಇದನ್ನು ಪರಿಗಣಿಸಬೇಕು ಡಾ ನಾಗಪ್ಪನವರು ನನ್ನ ಹಾಗೆ ಅವರೊಬ್ಬರು ಹಿರಿಯ ವೈದ್ಯರು, ಅವರಿಗೆ ಗೊತ್ತಾಗುತ್ತದೆ ಈ middle level and top level teachers ಅಂದರೆ ಅಸೋಸಿಯೇಟ್ ಪ್ರೊಫೆಸರ್ ಮತ್ತು ಪ್ರೊಫೆಸರ್ಸ್ ನೇರವಾಗಿ ನಾವು ಎಷ್ಟು advertisement ಕರೆದರು ಬರುವುದಿಲ್ಲ ಅವರು ಬೇರೆ ಯಾವುದೋ ಕಾಲೇಜಿನಲ್ಲಿರುತ್ತಾರೆ ಅಂಥದ್ದರಲ್ಲಿ ನಾವು ಮಾಡಿದಂದ ಪ್ರಥಮವಾದ ಕ್ರಮ ಎಂದರೆ ಯಾರ‍್ಯಾರು ಕೆಳಹಂತದಲ್ಲಿದ್ದಾರೆ ಅವರಿಗೆ ಸೇವೆ, ಅರ್ಹತೆ ಇದೆ ಅವೆಲ್ಲವನ್ನೂ ಪರಿಗಣಿಸಿ ಅಸಿಸ್ಟೆಂಟ್ ಪ್ರೊಫೆಸರ್‌ನಿಂದ ಅಸೋಸಿಯೇಟ್ ಪ್ರೊಫಸರ್ ಆಗಿ ಮತ್ತು ಪ್ರೊಫೆಸರ್ ಆಗಿ ಮುಂಬಡ್ತಿ ಕೊಟ್ಟಿದ್ದೇವೆ ಅದರಿಂದ ಹೆಚ್ಚು ಕಡಿಮೆ ನಮ್ಮಲ್ಲಿರುವಂಥ ಬೆಂಗಳೂರು, ಮೈಸೂರು ಹುಬ್ಬಳ್ಳಿ ಬೆಂಗಳೂರು ಬಳ್ಳಾರಿ ಜಿಲ್ಲೆಗಳಲ್ಲಿ ಎಷ್ಟೋ ವರ್ಷಗಳಿಂದ ಪ್ರಮೋಷನ್ ಇಲ್ಲದೇ ಇರುವವರಿಗೆ ಅವರ ಅರ್ಹತೆಗನುಗುಣವಾಗಿ ಎಂ ಸಿ ಐ ಮಾನದಂಡದ ಪ್ರಕಾರ ಪ್ರಮೋಷನ್ ಕೊಟ್ಟಿದ್ದೇವೆ ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿ ಹಿಂದೆ 200 ಪ್ರವೇಶಾವಕಾಶ ಇದ್ದುದು ಹೌದು ಆದರೆ ಅಲ್ಲಿಯ ವ್ಯವಸ್ಥೆಗಳು ಕಡಿಮೆಯಾಗಿ 100 ರಿಂದ 50 ಕ್ಕೆ ಪ್ರವೇಶ ಮಿತಿ ಬಂತು ಮತ್ತು ಒಂದು ಹಂತದಲ್ಲಿ affiliation and recognition ಎರಡೂ ಕೈತಪ್ಪಿ ಹೋಗುವಂಥಹ ಪ್ರಸಂಗ ಬಂದಾಗ ಅದನ್ನು atonomous institute ಮಾಡಿ ಕಳೆದ 10-12 ವರ್ಷಗಳಿಂದ ಸಾಕಷ್ಟು ಕಾಳಜಿ ವಹಿಸದ್ದೇವೆ ಇವತ್ತು ನಾನು ಸಂತೋಷದಿಂದ ಹೇಳಬಯಸುತ್ತೇನೆ 200 ಪ್ರವೇಶ ಮಿತಿ ಇದ್ದಾಗ ಎಷ್ಟು ಸ್ಟಾಫ್ ಇರಬಹುದೆಂದು ಸೀಲಿಂಗ್ ಹಾಕಿದರು ಇವತ್ತು ಅಲ್ಲಿ 333 ಜನ ಇದ್ದಾರೆ ನಮ್ಮ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಅಲ್ಲಿ ಎಷ್ಟು ಜನ ಪ್ರಾಧ್ಯಾಪಕರು ಇರಬೇಕೆಂದಿದೆ ಅಷ್ಟೂ ಜನ

ಪೂರ್ತಿಯಾಗಿ ಇದ್ದಾರೆ ಆದರೆ ಇವತ್ತಿನ ಪ್ರವೇಶ ಮಿತಿ ನೂರಕ್ಕೆ, ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ನಮ್ಮ ಮೋರೆ ಮತ್ತು ಇತರ ಸದಸ್ಯರು ಪರಿಗಣಿಸಬೇಕು ಇವತ್ತಿನ ನೂರು ಪ್ರವೇಶ ಮಿತಿಗೆ 220 ಜನ ಇದ್ದರೆ ಸಾಕು with P G Programme 270ಜನ ಇದ್ದರೆ ಸಾಕು ದೇಶಪಾಂಡೆಯವರೇ, ಆದರೆ 220ರ ಬದಲಿಗೆ ಅಲ್ಲಿ 333 ಜನ ಇದ್ದಾರೆ ಒಂದು ದೃಷ್ಟಿಯಿಂದ ಇವರು free hold, MCI ಮಾಡಿರುವ fixed ಗಿಂತ ಮಿಕ್ಕಿರುವ ಸ್ಟಾಫ್, ಆದ್ದರಿಂದ ಅವರನ್ನು ನಾವು ಡಿಸ್ಟರ್ಬ್ ಮಾಡಲಿಲ್ಲ ಯಾವಾಗ ಇಡೀ ರಾಜ್ಯದ ಪ್ರಶ್ನೆ ಬಂತು ಅಲ್ಲಿ ಉತ್ತರ ಕರ್ನಾಟಕ, ಬೀದರ್, ರಾಯಚೂರು, ಬೆಳಗಾಂ ಇದೆ, ಹಾಗಾಗಿ ಈ ಕಾಲೇಜುಗಳಿಗೆ ಬೇಕಾಗುವಂಥ assistant professor, professor ಒಂದೊಂದು ಇಲಾಖೆಯಲ್ಲಿ ಒಬ್ಬೊಬ್ಬರನ್ನಾದರೂ ನಾವು ಬಹಳ ಎಚ್ಚರಿಕೆಯಿಂದ ವಾಕ್ ಇನ್ ಇಂಟರ್‌ವ್ಯೂ ಇತ್ಯಾದಿಗಳನ್ನು ಮಾಡಿ, ರೆಕ್ರೂಟ್‌ಮೆಂಟ್ ಮೋಡ್‌ನಲ್ಲಿ ರೆಕ್ರೂಟ್‌ಮೆಂಟ್ ಮಾಡುತ್ತೇವೆ ಮಾನ್ಯ ಪ್ರತಿ ಪಕ್ಷದ ನಾಯಕರಿಗೆ ಒಂದು ಮಾತನ್ನು ಹೇಳುತ್ತೇನೆ ನಮ್ಮ ಡೈರೆಕ್ಟರ್ಸ್ ಪ್ರಾಂಶುಪಾಲರನ್ನು ಹೊರ ರಾಜ್ಯಗಳಿಗೆ, ಗುಜರಾತ್, ಮಹಾರಾಷ್ಟ್ರ ಪಶ್ಚಿಮ ಬಂಗಾಳ ಒರಿಸ್ಸಾವರೆಗೆ ಹೋಗಿ ಅಲ್ಲಿಯ ಪೇಪರ್‌ಗಳಿಗೆ ಜಾಹೀರಾತು ಕೊಟ್ಟು ಒಳ್ಳೆಯ ಅದ್ಯಾಪಕರನ್ನು ಆಯ್ಕೆ ಮಾಡಲಿಕ್ಕೆ ನಾವು ಕಳೆದ ಒಂದು ವರ್ಷದಿಂದ ಕ್ರಮ ತೆಗೆದುಕೊಂಡಿದ್ದೇವೆ ಅನಂತರ ಅಧ್ಯಾಪಕರಿಗೆ ಅವರ ವೇತನವನ್ನು ಹೆಚ್ಚಿಸುವ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ ಯಾವಿದೇ ಒಂದು ಕಾನೂನಿನ ಉಲ್ಲಂಘನೆ ಮಾಡದೆ ನಾಳೆ ಈ ವಿಷಯ ಕೋರ್ಟಿಗೆ ಹೋಗಬಾರದು ಎನ್ನುವ ದೃಷ್ಟಿಯಿಂದ ಬೇಸಿಕ್ ಅಷ್ಟನ್ನೇ ಇಟ್ಟುಕೊಂಡು 40% of the basic ಅನ್ನು Teaching allowance ಆಗಿ ಕೊಡುತ್ತಿದ್ದೇವೆ ಆದರೆ PG allowance ಎಂದು 3%-6% ಆಮೇಲೆ ಅವರಿಗೆ non practice allowance ಎಂದು ಕೊಟ್ಟು ಆಕರ್ಷಕವಾಗಿ ಮಾಡಿ, ಇವತ್ತು ನಮ್ಮ staff associate professor, professor, ಆಗುವ ಹಂತದಲ್ಲಿ ನಮ್ಮಿಂದ ಬಿಟ್ಟು ಬೇರೆ ಕಡೆಗೆ ಖಾಸಗಿಯವರ ಆಕರ್ಷಣೆಗೆ ಹೋಗುವುದನ್ನು ತಡೆದು ಅವರನ್ನು ನಮ್ಮಲ್ಲಿ ಇರುವ ಹಾಗೆ ಮಾಡಿದ್ದೇವೆ ಬೇರೆ ಕಡೆ ಇರುವವರು ಕೂಡ ನಮ್ಮ ಕಡೆಗೆ ಬರುವ ಹಾಗೆ ಮಾಡಿದ್ದೇವೆ ಆದರೆ ಮೊನ್ನೆ ಮೇ ಅಖೈರು ಜೂನ್ ತಿಂಗಳಲ್ಲಿ ಮಾಡಿದಾಗ inspection ಗೆ ಬಂದಾಗ ನಮ್ಮಲ್ಲಿ ಇನ್ನೊಂದು ತೊಂದರೆ ಎಂದರೆ MCI ಅವರು ಈ

District Hospitals, 6 ಕಡೆಯಿರುವ ಬೆಳಗಾಂನ್ನು ಬಿಟ್ಟು ಮುಂಚೆಯೇ Medical education ಮುಖಾಂತರ ಉಳಿದ Distric Hospitals ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕರ್ನಾಟಕ ಸರ್ಕಾರದ್ದೇ Owner ship ಅಂತ ಹೇಳಿದರೂ ಕೂಡ ಅವರು ಕೇಳದೇ ಇರುವಂಥಹ ಸಂದರ್ಭ ಇತ್ತು ಕೊನೆಗೆ ಅದಕ್ಕೂ ಕೂಡ ಕ್ಯಾಬಿನೆಟ್‌ನಲ್ಲಿ ನಿರ್ಣಯವನ್ನು ಮಾಡಿ, ಅದು Medical educationಗೆ District Hospital ಗಳನ್ನು ತೆಗೆದುಕೊಳ್ಳುವಂಥಹ ನಿರ್ಣಯವನ್ನು ಮಾಡಿದೆವು ಈ ರೀತಿಯಾಗಿ ಏನೇನು ಪ್ರಶ್ನವನ್ನು ಕಷ್ಟಪಟ್ಟು ಮಾಡಬಹುದಾದ ಎಲ್ಲವನ್ನೂ ಕೂಡ ಮಾಡಿದ ನಂತರವೂ ಅಲ್ಪ ಸ್ವಲ್ಪ ಕಡಿಮೆಯಾದಾಗ ನಮಗೆ Associate Professor, assistant professor, ಎಲ್ಲಿ surplus ಇದ್ದಾರೆ, ಎಲ್ಲಿ Indian Medical Council ನ ದಾಖಲೆಯಲ್ಲಿ ಅವರು ಅತಿ ಅಗತ್ಯ ಎಂದು ಹೇಳುವ ದಾಖಲೆ ಇಲ್ಲ Free Hold ಆಗಿದ್ದಾರೆ ಅಂತಹವರನ್ನು ಮಾತ್ರ ತಾತ್ಪೂರ್ವಕ ದೃಷ್ಟಿಯಿಂದ ನಾವು ಇಲ್ಲಿಗೆ ತಂದು ಹಾಸನಕ್ಕೆ ಒಬ್ಬರು, ಬೆಳಗಾಂ ಗೆ ಇಬ್ಬರು, ಶಿವಮೊಗ್ಗಕ್ಕೆ 5ಜನ, ರಾಯಚೂರಿಗೆ 12 ಜನರನ್ನು ಒಟ್ಟಿಗೆ 20 ಜನರನ್ನು ನಾವು ವರ್ಗಾವಣೆ ಮಾಡಿರುವುದರಿಂದ ಅವರು ಹೋಗಿ Inspection ಟೈಂನಲ್ಲಿ report ಮಾಡಿದ್ದರಿಂದ ನಮ್ಮ ಕೊರತೆಗಳು ಕಡಿಮೆಯಾದುದು ಮತ್ತು ಇವರು ಯಾರು ಬಹುತೇಕ Anotomy, Physiology, Pharmaphology, bio chemistry ಇರುವಂಥಹದ್ದು ಮತ್ತು ಉಳಿದ clinical section ನಲ್ಲಿ ಕೇವಲ 6 ಜನರು ಮಾತ್ರ Medicine surgery ನಿಂದ ಒಬ್ಬರು ಮತ್ತು pediatircs ನಿಂದ ಒಬ್ಬರು, dental science ನಿಂದ ಒಬ್ಬರು ಈ ರೀತಿಯಾಗಿ clinical section ನಿಂದ ಬಹಳ ಕಡಿಮೆ ಜನರನ್ನು ಆದರೆ 20 ಜನರು ಅವರೆಲ್ಲರೂ ಕೂಡ ಹುಬ್ಬಳ್ಳಿಯಲ್ಲಿದ್ದಾರೆ ಆ ದಿವಸ ಹಾಜರಾಗಿ ಬಂದಂತಹ ನಮ್ಮ teaching programme ಇಲ್ಲಿ ಇನ್ನು ಪ್ರಾರಂಭವಾಗಲಿಲ್ಲ ಹಾಗಾಗಿ ಅವರ ಅವಶ್ಯಕತೆ ಇಲ್ಲ ಅವರು ಎಲ್ಲಿ ಕೆಲಸವನ್ನು ಮಾಡುತ್ತಾರೋ ಅವರೆಲ್ಲರನ್ನೂ ನಾವು ಹುಬ್ಬಳ್ಳಿಯಲ್ಲಿಟ್ಟದ್ದೇವೆ ಅವರಿಗೆ ಯಾವುದೂ inconvenience ಆಗಲಿಲ್ಲ ಸೆಪ್ಟೆಂಬರ್ 30ರೊಳಗೆ ಅಂದರೆ ನಮ್ಮ teaching programme ಪ್ರಾರಂಭವಾಗುವುದಕ್ಕೆ ಅದು ಕೊನೆಯ ದಿವಸವಾಗಿರುತ್ತದೆ ಆ ದಿವಸದೊಳ ಗಡೆ ಕೊನೆಯ ಮುಂಚಿನ ದಿವಸ ಅಕ್ಟೋಬರ್ 1 ರಿಂದ ಪ್ರಾರಂಭವಾಗ ಬೇಕು ಸೆಪ್ಟೆಂಬರ್ 30 ರೊಳಗೆ

ನಾವು ಅಲ್ಲಲ್ಲಿಯೇ ನೇಮಕ ಮಾಡಿಕೊಳ್ಳುವುದಕ್ಕೆ ಕ್ರಮವನ್ನು ತೆಗೆದು ಕೊಳ್ಳುತ್ತೇವೆ ಇಡೀ ರಾಜ್ಯದ ದೃಷ್ಟಿಯಿಂದ ತಾವು ನಮಗೆ ಸಹಕಾರವನ್ನು ಮಾಡಬೇಕು ತಪ್ಪು ಸಂಕೇತಗಳು ಯಾವುದು ಬರಬಾರದು ನಾವು ತೆಗೆದುಕೊಂಡಿರುವಂತಹ ಯಾವುದೇ ಕಾಯಿದೆಯು ಕೂಡ ಉಲ್ಲಂಘನೆ ಯಾಗಿರುವುದಕ್ಕೆ ಯಾವುದೇ ರೀತಿಯ ತೊಂದರೆ ಹುಬ್ಬಳ್ಳಿ medical college KIMS ಗೆ ಆಗುವುದಿಲ್ಲ ಇದಕ್ಕೆ ರಾಜ್ಯದ ಹಿತದೃಷ್ಟಿಯಿಂದ ಇಡೀ ಸದನದ ಸಹಕಾರ ಬೇಕೆಂದು ನಾನು ಈ ಉತ್ತರವನ್ನು ಹೇಳುತ್ತಿದ್ದೇನೆ

ಶ್ರೀ ಎಸ್ ಎಸ್ ಪಾಟೀಲ್ ಕ್ಲಿಯರ್ ಎಂದು ಹೇಳಿದಂತಾಯಿತು ಹಾಗಾದರೆ ಏನು ಮಾಡುವುದು? ಎಲ್ಲರೂ ಕೇಳುತ್ತಾರಲ್ಲಾ? ಅಲ್ಲಿ ಪರಿಸ್ಥಿತಿ ಏನಿದೆ, ಅದರ ಬಗ್ಗೆ ತಾವು ಸಮರ್ಥನೆ ಮಾಡಿಕೊಂಡರೆ ನಾವು ವರ್ಕ್ ಮಾಡುತ್ತೇವೆಂದು ಅವರು ನೇರವಾಗಿ ಹೇಳಿದ್ದಾರೆ

ಉ) ವಿಷಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ವ್ಯಾಪಕವಾಗಿ ಹರಡಿರುವ ಬಗ್ಗೆ

ಶ್ರೀ ಕೆ ಜಯಪ್ರಕಾಶ ಹೆಗಡೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಬಹಳ ವ್ಯಾಪಕವಾಗಿ ಹಬ್ಬುತ್ತಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಅವರು ಔಷಧವನ್ನು ಕೊಟ್ಟಿದ್ದಾರೆ, ಸ್ಟ್ಯಾಫ್ ಇಲ್ಲ ಅದಕ್ಕಾಗಿ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ ಔಷಧವನ್ನು ಕೊಟ್ಟು ಸ್ಟ್ಯಾಫ್ ಇಲ್ಲದಿದ್ದರೆ ಏನು ಬಂತು ಅತಿ ಶೀಘ್ರದಲ್ಲಿ ಎಲ್ಲಾ ಭಾಗಕ್ಕೂ ಸ್ವಲ್ಪ ಸ್ಟ್ಯಾಫ್‌ಅನ್ನು ಹಾಕಬೇಕೆಂದು ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಜಯಪ್ರಕಾಶ ಹೆಗಡೆಯವರು ಸ್ವತಃ ನನ್ನ ಹತ್ತಿರ ಮಲೇರಿಯಾ ಪ್ರಕರಣದ ಬಗ್ಗೆ ಮಾತನಾಡಿದ್ದಾರೆ ವಿಶೇಷವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಜಿಲ್ಲೆಯಲ್ಲಿ ಮಲೇರಿಯಾ ಈ ಸಂದರ್ಭದಲ್ಲಿ ಜಾಸ್ತಿಯಾಗಿರುವುದು ಕಂಡು ಬಂದಿದೆ

ಈಗಾಗಲೇ ಅಲ್ಲಿ ಏನು ಔಷಧ ಬೇಕು ಅದನ್ನು ನಾವು ವಿತರಣೆ ಮಾಡಿದ್ದೇವೆ ಈಗ ರಾಜ್ಯಮಟ್ಟದಿಂದಲೂ ಸಹ ಒಂದು ತಜ್ಞರ ತಂಡವನ್ನು ಅಲ್ಲಿಗೆ ಕಳುಹಿಸಿ ಕೊಡುವ ಬಗ್ಗೆ ತೀರ್ಮಾನವನ್ನು ನಮ್ಮ ಇಲಾಖೆಯವರಿಗೆ ತಿಳಿಸಿದ್ದೇವೆ ಈ ವಾರದೊಳಗೆ ಅಲ್ಲಿ ನಮ್ಮ ತಜ್ಞರ ತಂಡವೊಂದು ಅಲ್ಲಿಗೆ ಹೋಗುತ್ತಿದೆ ಅದರ ಜೊತೆಗೆ ನಮ್ಮ ಆರೋಗ್ಯ ಸಹಾಯಕರು ಮುಖ್ಯವಾಗಿ ಅವರು ರಕ್ತ ಪರೀಕ್ಷೆಯನ್ನು ಮಾಡಬೇಕು, ಆ ಭಾಗದಲ್ಲಿ ಅವೇರ್‌ನೆಸ್ ಕ್ರಿಯೇಟ್ ಮಾಡಬೇಕಾಗುದೆ ಅವರಿಗೆ ಮೆಡಿಸಿನ್ ಅನ್ನು ಆ ಟ್ಯಾಬ್ಲೆಟ್‌ನ್ನು ಕೊಡಬೇಕಾಗುದೆ ಅದಕ್ಕಾಗಿ ನಾವು 20 ಜನರನ್ನು ಅಲ್ಲಿ ಸುತ್ತಮುತ್ತಲೂ ಇರುವ ತಾಲ್ಲೂಕಿನ ಎಲ್ಲಿ ಪಿಹೆಚ್‌ಸಿ ಮಲೇರಿಯಾ ಏರಿಯಾ ಇದೆ, ಅಲ್ಲಿಗೆ ಕಳುಹಿಸಿಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೇನೆ ಕೂಡಲೇ ಆ ಬಗ್ಗೆ ಆದೇಶವನ್ನು ಮಾಡುತ್ತೇನೆ ಕರ್ನಾಟಕ ರಾಜ್ಯದಲ್ಲಿ ಈ ತರಹ ಮಲೇರಿಯಾ ಇರತಕ್ಕಂಥಹ ಏರಿಯಾಗಳನ್ನು ನಾವು ಗುರುತು ಮಾಡುತ್ತಿದ್ದೇವೆ ಈಗಾಗಲೇ ನಾವು ಶಿರಹಟ್ಟಿ ಕಡೆ ಮಲೇರಿಯಾ ಆಗಿದೆ ಅಲ್ಲಿ ನಾಲೆ ಬಂದು ವರ್ಷ ಪೂರ್ತಿ ಅಲ್ಲಿ ನೀರು ನಿಲ್ಲುತ್ತದೆ ಅದರಿಂದ ಸೊಳ್ಳೆ ವಿಪರೀತವಾಗಿ ಪ್ರಾರಂಬವಾಗಿ ಅಲ್ಲಿಯೂ ಸಹ ಮಲೇರಿಯಾ ವರ್ಷಪೂರ್ತಿ ಇರುವುದು ನಮ್ಮ ಗಮನಕ್ಕೆ ಬಂದಿದೆ ಆ ಪೂರ್ತಿ ಏರಿಯಾಕ್ಕೆ ಸೊಳ್ಳೆ ಪರದೆಯನ್ನು ಕೊಡುವುದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ ಶಿರಹಟ್ಟಿಯಲ್ಲಿರುವ ಎಲ್ಲಾ ಗ್ರಾಮಕ್ಕೂ ಅಲ್ಲಿರುವಂತಹ ಎಲ್ಲಾ ಮನೆಗಳಿಗೂ ಉಚಿತವಾಗಿ ಎರಡೆರಡು ಸೊಳ್ಳೆಪರದೆಯನ್ನು ಕೊಡುವ ಬಗ್ಗೆ ನಾವು ಕ್ರಮವನ್ನು ತೆಗೆದು ಕೊಳ್ಳುತ್ತದ್ದೇವೆ ಅದರಿಂದಾಗಿ ಮುಂಬರುವ ದಿನಗಳಲ್ಲಿ ಈ ತರಹ ಮಲೇರಿಯಾ ಪ್ರತಿವರ್ಷ ಇದು continues ಆಗಿ ಬರತಕ್ಕಂಥಹ ಏರಿಯಾ ಯಾವುದು ಇದೆ, ಕೋಲಾರ ಹಾಗೂ ಉಡುಪಿ ಇರಬಹದು, ರಾಯಚೂರು ಇಲ್ಲಿ ರೆಗ್ಯುಲರ್‌ಆಗಿ ಬರುತ್ತಿದೆ ಅಂತಹ ಏರಿಯಾಗಳಲ್ಲಿ ಈ ತರಹದ ಜನ ಯಾರು ಬಡವರು ಇದ್ದಾರೆ, ಬೀದಿಯಲ್ಲಿ ಯಾರು ಕೂಲಿ ಕೆಲಸವನ್ನು ಮಾಡುತ್ತಾರೆ, ಬೀದಿಯಲ್ಲಿ ಮಲಗುತ್ತಾರೆ ಅವರುಗಳು ಸೊಳ್ಳೆಯಿಮದ ಕಚ್ಚಿಸಕೊಂಡು ಮಲೇರಿಯಾ ಬರುತ್ತದೆ, ಇವರೆಲ್ಲರಿಗೂ ನಾವು ಸೊಳ್ಳೆ ಪರದೆಯನ್ನೇ ಫ್ರೀ ಆಗಿ ಕೊಡಬೇಕೆಂದು ಆರೋಗ್ಯ ಇಲಾಖೆಯು ಆದಷ್ಟು ಬೇಗನೆ ತೀರ್ಮಾನವನ್ನು ಶೀಘ್ರವಾಗಿ ತೆಗೆದುಕೊಂಡು ಅವರಿಗೆ ಸಹಾಯ ಮಾಡುತ್ತೇವೆ

ಶ್ರೀ ಜಯಪ್ರಕಾಶ ಹೆಗ್ಡೆ stagnant waterನಲ್ಲಿ ಗಪ್ಪಿ ಮೀನುಗಳನ್ನು ಹಾಕುವಂಥಹ ವ್ಯವಸ್ಥೆ ಮಾಡಬೇಕು ಏಕೆಂದರೆ ಅದು ಲಾರ್ವ ಅನ್ನು ತಿನ್ನುತ್ತದೆ ಗಪ್ಪಿ ಮೀನುಗಳನ್ನು ತೆಗೆದುಕೊಂಡು ಹೋಗಿ ಸ್ವಲ್ಪ ಡಿಸ್ಟ್ರಿಬ್ಯೂಟ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಊ) ವಿಷಯ ಶಿರಹಟ್ಟಿ ಕ್ಷೇತ್ರದಲ್ಲಿ ಮಲೇರಿಯಾ ವ್ಯಾಪಕವಾಗಿ ಹರಡಿರುವ ಬಗ್ಗೆ

ಶ್ರೀ ಎಸ್ ಗಡ್ಡದೇವರ ಮಠ(ಶಿರಹಟ್ಟಿ) ಮಾನ್ಯ ಅಧ್ಯಕ್ಷರೆ, ನನಗೆ ಎರಡೇ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ ಆಗಲೇ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ನಾನು ಬರುವುದು 5 ನಿಮಿಷ ತಡವಾದುದರಿಂದ ನಾನು ಅವಕಾಶವನ್ನು ಕಳೆದುಕೊಂಡೆ ಶಿರಹಟ್ಟಿಯೊಳಗೆ ವರವಿ ಕ್ಷೇತ್ರ ಒಂದು ಪುಣ್ಯ ಕ್ಷೇತ್ರವಾಗಿದ್ದರಿಂದ ಸುಮಾರು ಜನ ಯಾತ್ರಾರ್ಥಿಗಳು ಅಲ್ಲಿಗೆ ಬಂದು ಈಗ ಈಗ ಅದು ಮಲೇರಿಯಾ ಕೇಂದ್ರ ಸ್ಥಾನವಾಗಿದೆ ಸುಮಾರು 40 ವರ್ಷದ ಉದ್ದಕ್ಕೂ ವರವಿ ಯಾತ್ರಾಸ್ಥಳವಾದ್ದರಿಂದ ಜನ ಅಲ್ಲಿ ಅಸ್ವಸ್ಥರಾಗಿ ಮಲೇರಿಯಾ ಸಮಸ್ಯೆ ಕಾಡುತ್ತಿದೆ ಏಪ್ರಿಲ್ ತಿಂಗಳೂ ಬಂತೆಂದರೆ ಅಲ್ಲಿ ಮಲೇರಿಯಾ ಬಂತೆಂದು ಊರು ಬಿಟ್ಟು ಹೋಗುವಂಥಹ ಸಂಧರ್ಭ ಸೃಷ್ಟಿಯಾಗಿದೆ ನಾನು ಇಲ್ಲವೆಂದು ಹೇಳುವುದಾಕ್ಕಾಗುವುದಿಲ್ಲ ಸರ್ಕಾರ ದವರು ಈಗಾಗಲೇ 500 medicated mosquito nets ಕೊಟ್ಟಿದ್ದಾರೆ ಆದರೆ ಅಲ್ಲಿ ಇದ್ದಂತಹ ಜನಸಂಖ್ಯೆಗೆ ಅದು ಸಾಲದಾಗಿದೆ ನಮ್ಮ ಭಾಗದ ಮನೆಗಳ ಪರಿಸ್ಥಿತಿ ನಿಮಗೆಲ್ಲ ಗೊತ್ತಿದೆ ನಮ್ಮಲ್ಲಿ ಇರುವುದು ಜನ ದನ ಒಂದೇಕಡೆ ಇರುವಂಥಹ ಪರಿಸ್ಥಿತಿ ಇದೆ ವಿಶೇಷವಾಗಿ ರೈತಾಪಿ ಜನರು ಇರುವುದರಿಂದ ಹಳ್ಳಿಯ ಸುತ್ತಲೂ ಈಗ 100 ಮೀಟರ್‌ನೊಳಗಡೆ ಸುತ್ತುವರಿದಂತಹ ಒಂದು ಹಳ್ಳ ಆಮೇಲೆ ಅದು ಕಬ್ಬದ ಮೇಲೆ ಡಿಪೆಂಡ್ ಆಗಿರುತ್ತದೆ ಅದರಲ್ಲಿ ವಿಶೇಷವಾಗಿ ಜನಗಳು, ದನಗಳು, ಕೂಡಿಯೇ ಇರುವಂಥಹ ವ್ಯವಸ್ಥೆಯಾಗಿದೆ ಅದಕ್ಕಾಗಿ ಮಲೇರಿಯಾದಿಂದ ಮುಕ್ತಿ ಆಗುತ್ತದೆಯೋ ಅಥವಾ ಇಲ್ಲವೋ ಎನ್ನುವಂಥಹದ್ದು ಇದೆ ಸನ್ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದಿಷ್ಟೇ, ಮಲೇರಿಯಾ ಬಂದಾಗ ಒಮ್ಮೆ ಸರ್ಕಾರವು ಜಾಗ್ರತೆಯನ್ನು ಮಾಡುವಂಥಹ ಕೆಲಸವನ್ನು ನಾವು ಇಲ್ಲಿ

ಮಾಡುತ್ತೇವೆ ಆದರೆ ದುರ್ದೈವದ ಸಂಗತಿ ಏನಾಗಿದೆ ಎಂದರೆ ಬಹಳಷ್ಟು ನಮ್ಮ ಗದಗ್ ಜಿಲ್ಲೆಯಲ್ಲಿ ಮಾಡಿರುವಂಥಹ ಸಂದರ್ಭದೊಳಗಡೆ ಮಲೇರಿಯಾ ಪೀಡಿತ ಹಳ್ಳಿ ಎಂದರೆ ವರವಿ ಒಂದೇ ಈ ಅಂಕಿ ಅಂಶಗಳ ಮೇಲೆ ನೀವು ಜಿಲ್ಲಾವಾರು ತೆಗೆದುಕೊಂಡ ಪ್ರದೇಶದೊಳಗಡೆ 120 ನಮ್ಮ ಗದಗ್ ಜಿಲ್ಲೆಯಿಂದ ರಿಪೋರ್ಟ್ ನಲ್ಲಿರುವುದು 120 ಮಲೇರಿಯಾ ಪೇಷೆಂಟ್ ಇದೆ ಎಂದು ಗುರುತು ಮಾಡಿದರೆ, 120 ಪೇಷೆಂಟ್ಸ್ ವರವಿಯೊಳಗೇ ಇರುತ್ತಾರೆ ಆದರೆ ತಾವು ಜಿಲ್ಲಾವಾರು ಆಲೋಚನೆಯನ್ನು ಮಾಡುವುದಾದರೆ, ನೀವು 1000, 1200 ಬೇರ ಬೇರೆ ಜಿಲ್ಲೆಗಳು ಎಂದು ಸಂಖ್ಯೆಗಳೆಂದು ವಿಚಾರ ಮಾಡಿದಾಗ ಅದು ನೆಗ್ಲಿಜೆನ್ಸ್ ನಂಬರ್ ಆಗಿಬಿಡುತ್ತದೆ ಆ ದೃಷ್ಟಿಯೊಳಗಡೆ ಸತತವಾಗಿ ನಮ್ಮ ಶಿರಹಟ್ಟಿ ತಾಲ್ಲೂಕಿನ ವರವಿ ಗ್ರಾಮ ಅಲಕ್ಷ್ಯಕ್ಕೆ ಒಳಪಟ್ಟಂಥಹ ಪ್ರಸಂಗ ಇಲ್ಲಿ ಇದೆ ಅದಕ್ಕಾಗಿ ನಾನು ಮಾನ್ಯ ಅಧ್ಯಕ್ಷರ ಮುಖೇನವಾಗಿ ಸನ್ಮಾನ್ಯ ಅಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ವಿಶೇಷವಾಗಿ ವರವಿ ಕ್ಷೇತ್ರಕ್ಕೆ ನೀವು ಕೊಟ್ಟಂಥಹ 500 ಸೊಳ್ಳೆಪರದೆಗಳನ್ನು ಕೊಡುವಂಥಹದ್ದನ್ನು ಮಾಡಬೇಕು ಅದಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡುವುದು ಆಗಬೇಕು ಶಾಶ್ವತ ಪರಿಹಾರವೆಂದರೆ ನೀವು ಕೇಂದ್ರ ತಂಡದವರಾಗಲಿ ರಾಜ್ಯ ತಂಡದವರಾಗಲಿ, ಅಲ್ಲಿ ಒಂದು ಚೆಕ್‌ಡ್ಯಾಂ ನಿರ್ಮಾಣ ಮಾಡುವುದರ ಜೊತೆಗೆ ಶಾಶ್ವತವಾಗಿ ಹಳ್ಳದಲ್ಲಿ ನೀರನ್ನು ನಿಲ್ಲಿಸುವಂತಹದ್ದನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ ಶಾಶ್ವತ ಪರಿಹಾರವನ್ನು ಕಲ್ಪಿಸಿಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ ವರವಿ ಗ್ರಾಮದ 2 ಕಿ ಮೀ ಸುತ್ತಲೂ ನೀರು ಹರಿದು ಮಲೇರಿಯಾ ಬರತಕ್ಕಂಥಹದ್ದಕ್ಕೆ ಸೊಳ್ಳೆಗಳ ನಿರ್ಮಾಣವಾಗುವುದಕ್ಕೆ ಕಾರಣವಾಗಿದೆ ತಾವು ನಮಗೆ ಅಭಿನಂದನೆಯನ್ನು ಸಲ್ಲಿಸಬೇಕು ನಾವು ಮೊದಲು ತಮ್ಮ ಏರಿಯಾಕ್ಕೆ ಫ್ರೀ ಸೊಳ್ಳೆಪರದೆಯನ್ನು ಕೊಟ್ಟು ಮಲೇರಿಯಾ ಬರದೇ ಇರುವ ಚಾಲನೆ ಮಾಡಿದ್ದೇವೆ ಆಗಲೇ ನಿಮ್ಮ ವರವಿ ಮತ್ತು ತಾಂಡಗಳು ಏನಿದೆ ಆ ಏರಿಯಾದಿಂದ ಸುಮಾರು 675 ಮಲೇರಿಯಾ ಪ್ರಕರಣಗಳು ವರದಿಯಾಗಿದೆ ಆ ದೃಷ್ಟಿಯಿಂದ ಅಲ್ಲಿಯೇ ಒಂದು ಪರೀಕ್ಷೆ ಮಾಡುವುದು ಹಾಗೂ ಔಷಧಿಯನ್ನು ಕೊಡುವ ಬಗ್ಗೆ ವಿತರಣಾ ಕೇಂದ್ರವನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ

ಅಲ್ಲಿಯ ಗ್ರಾಮಸ್ಥರ ಸಹಾಯವನ್ನು ತೆಗೆದುಕೊಮಡು ಅಲಲಿ ಏನು ಕ್ರಮಗಳನ್ನು ತೆಗೆದಕೊಳ್ಳಬೇಕು ಅದನ್ನು ಮಾಡುತ್ತಿದ್ದೇವೆ ಅದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರಿಗೂ ಕೂಡ ಮನವಿಯನ್ನು ಮಾಡಿದ್ದೇವೆ ಪ್ರತಿ ವರ್ಷವೂ ಅಲ್ಲಿ ನೀರು ನಿಲ್ಲುವುದ ರಿಂದಲೇ ಅಲ್ಲಿ ಸಮಸ್ಯೆಯು ಉದ್ಭವವಾಗುತ್ತಿದೆ ಅಲ್ಲಿ ನಾಲೆ ನೀರು ಸರಾಗವಾಗಿ ಹೋದರೆ ಮಲೇರಿಯಾ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಲ್ಲಿಯ ಸಿ ಇ ಒಗಳ ಜೊತೆಯಲ್ಲಿಯೀ ಕೂಡ ನಾವು ಮಾತನಾಡಿದ್ದೇವೆ ಅವರು ಕೂಡ ನೀರು ನಿಲ್ಲುವುದನ್ನು ತಡೆಗಟ್ಟುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ ಫಾಗಿಂಗ್ ಮೆಷಿನ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಹಾಗೂ ಒಂದು ವಾರದೊಳಗೆ ಇಡೀ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ್ರಗಳಿಗೂ 5–5 ಫಾಗಿಂಗ್ ಮೆಷಿನ್‌ಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ

ಶ್ರೀ ದಿನೇಶ್ ಗುಂಡೂರಾವ್ ಅಧ್ಯಕ್ಷರೆ, ನನ್ನದೊಂದು ಹಕ್ಕುಚ್ಯುತಿ ಇದೆ

ಅಧ್ಯಕ್ಷರು ನೀವು ಈಗ ಯಾವ ವಿಚಾರ ಪ್ರಸ್ತಾಪ ಮಾಡುತ್ತಿದ್ದಿರಿ?

ಶ್ರೀ ದಿನೇಶ್ ಗುಂಡೂರಾವ್ ಹಕ್ಕುಚ್ಯುತಿ ವಿಚಾರವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ ನಾನು ಹಕ್ಕುಚ್ಯುತಿ ಮಂಡನೆ ಮಾಡಿದ್ದೆ, ತಾವು ಒಪ್ಪಿಕೊಂಡಿದ್ದಿರಿ ಮತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದೀರಿ

ಅಧ್ಯಕ್ಷರು ಆಯಿತು ಪ್ರಸ್ತಾಪ ಮಾಡಿ

4 ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿ ಚರ್ಚೆ

ವಿಷಯ "ಈಸಂಜೆ" ಪತ್ರಿಕೆಯಲ್ಲಿ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಬಗ್ಗೆ ಪ್ರಕಟವಾಗಿರುವ ಆಕ್ಷೇಪಾರ್ಹ ಪ್ರಕಟಣೆಯ ಬಗ್ಗೆ

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಹಕ್ಕುಚ್ಯುತಿ ಮಂಡಿಸಿರುವ ವಿಚಾರವೇನೆಂದರೆ, ಈ ಸದನದ ಮುಖೇನ ಎ ಟಿ ರಾಮಸ್ವಾಮಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಯಿತು ಸಮಿತಿಯ ಉದ್ದೇಶವೇನೆಂದರೆ ಭೂ ಹಗರಣಗಳ ವಿಚಾರದಲ್ಲಿ, ಭೂ ಕಬಳಿಕೆಯಾಗಿರುವುದು, ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದಲ್ಲಿ ಮತ್ತು ತಮ್ಮ ಸ್ವಾರ್ಥಕ್ಕೋಸ್ಕರ ತಪ್ಪು ಕೆಲಸಗಳನ್ನು ಮಾಡಿದ್ದಲ್ಲಿ, ಅಂತಹುದನ್ನು ಹುಡುಕಿ ಒಂದು ಪಟ್ಟಿ ತಯಾರು ಮಾಡಬೇಕೆಂದು ರಾಮಸ್ವಾಮಿಯವರ ನೇತೃತ್ವದಲ್ಲಿ ಒಂದು ಸಮಿತಿ ರಚನೆಯಾಯಿತು ಇದು ಎಲ್ಲರೂ ಒಪ್ಪತಕ್ಕಂಥ ವಿಚಾರವಾಗಿದೆ ಇದು ಆಗಬೇಕಾಗಿರುವಂಥಾದ್ದು ಯಾರೂ ಕೂಡ ಇದಕ್ಕೆ ವಿರೋಧ ಮಾಡುವುದಿಲ್ಲ ಆದರೆ, ಇವತ್ತು ಎ ಟಿ ರಾಮಸ್ವಾಮಿಯವರ ಸಮಿತಿಯ ಹೆಸರಿನಲ್ಲಿ ಪತ್ರಿಕೆಗಳಲ್ಲಿ ಬರುತ್ತಿರುವ ವರದಿಗಳನ್ನು ನೋಡಿದಾಗ ಇದರ ಹಿನ್ನೆಲೆ ಏನು? ಯಾವ ಉದ್ದೇಶಕ್ಕೋಸ್ಕರ ಇದನ್ನು ಮಾಡುತ್ತಿದ್ದಾರೆ? ಇದಕ್ಕೆ ಬೇರೆ ಕಾರಣಗಳಿವೆಯೇ? ಉದ್ದೇಶಗಳಿವೆಯೇ? ಇದನ್ನು ರಾಜಕೀಯ ಅಸ್ತ್ರವನ್ನಾಗಿ ಉಪಯೋಗಿಸಿಕೊಳ್ಳುವುದಕ್ಕೋಸ್ಕರ ಈ ಸಮಿತಿಯ ಸದಸ್ಯರು ಕೂಡ ಸಮಿತಿಯ ವರದಿಯನ್ನು ತಯಾರಿಸುತ್ತಿದ್ದಾರೆಂಬ ಸಂಶಯ ಕೂಡ ಬರುತ್ತಿದೆ ಏಕೆಂದರೆ ಈ ಸಂಜೆ ಪತ್ರಿಕೆ ಬಗ್ಗೆ ತಮಗೂ ಕೂಡ ಗೊತ್ತಿದೆ ಈ ಪತ್ರಿಕೆಯನ್ನು ಯಾರು ನಡೆಸುತ್ತಾರೆ? ಹೇಗೆ? ಎಂಬುದು ಈ ಪತ್ರಿಕೆಯವರು ದಿನಾಂಕ ಜುಲೈ 4 ನೇ ತಾರೀಖಿನಲ್ಲಿ ಮಾಜಿ ಸಿಂಎಂಗಳ ಭೂ ದಾಹ ಎಂದು ಒಂದು ಹೆಡ್‌ಲೈನ್ ಹಾಕಿದರು ಈ ರೀತಿ ಹೆಡ್‌ಲೈನ್ ಹಾಕಿ ಶ್ರೀಮಾನ್ ರಾಮಕೃಷ್ಣ ಹೆಗಡೆ, ಗುಂಡೂರಾವ್‌ರವರು ಒತ್ತುವರಿ ಮಾಡಿದ್ದಾರೆ, ಭೂ ಕಬಳಿಕೆ ಮಾಡಿದ್ದಾರೆ ಅದು ಎ ಟಿ ರಾಮಸ್ವಾಮಿಯವರ ವರದಿಯಲ್ಲಿ ಬಂದಿದೆ ಇದನ್ನು ಬಯಲಿಗೆಳೆಯುತ್ತಿದ್ದೇವೆ ಎಂದು ತಿಳಿಸಿ, ಮತ್ತು ಇದರಲ್ಲಿ ನನ್ನ ಹೆಸರು ಮತ್ತು ನನ್ನ ತಾಯಿಯವರ

ಹೆಸರನ್ನೂ ಪ್ರಸ್ತಾಪ ಮಾಡಿ ಬರೆದಿದ್ದಾರೆ ನಮ್ಮ ತಂದೆಯವರು, ದಿವಂಗತ ಗುಂಡೂರಾವ್‌ರವರು ಅವರೂ ಕೂಡ ಈ ಸದನದ ಸದಸ್ಯರಾಗಿದ್ದರು ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದರು ಅವರ ಕಾಲದಲ್ಲಿ ಬಹಳ ದೊಡ್ಡದಾಗಿ ಭೂ ಒತ್ತುವರಿ ಮಾಡಿಬಿಟ್ಟಿದ್ದಾರೆ, ದಿನೇಶ್ ಗುಂಡೂರಾವ್‌ರವರು ಕೂಡ ಇದರಲ್ಲಿ ಭಾಗಿಯಾಗಿದ್ದಾರೆ, ಇವರು ಕೂಡ ಕಳಂಕಿತರು ಎಂಬ ಅಭಿಪ್ರಾಯ ವ್ಯಕ್ತವಾಗುವ ರೀತಿಯಲ್ಲಿ ಇವತ್ತಿನ ದಿವಸ ಪತ್ರಿಕೆಗಳಲ್ಲಿ ಬಂದಿದೆ ನಮ್ಮ ತಾಯಿಯವರ ಹೆಸರನ್ನೂ ಕೂಡ ಹಾಕಿದ್ದಾರೆ ಈ ಸಂಜೆ ಪತ್ರಿಕೆಯವರಿಗೆ ಈ ಮಾಹಿತಿ ಎಲ್ಲಿಂದ ಬಂತು? ಎ ಟಿ ರಾಮ ಸ್ವಾಮಿಯವರಿಗೆ ಮತ್ತು ಜಾಮ್‌ದಾರ್‌ರವರಿಗೆ ಗೊತ್ತಿದೆ ಕೂಡಲೇ ಸಿ ಎಂರವರು ಕೂಡ ಇದನ್ನು ಬಹಿರಂಗಗೊಳಿಸುತ್ತಾರೆ ಎಂದು ಬಹಳ ಗಂಭೀರವಾಗಿ ಆರ್ಟಿಕಲ್ ಬರೆದಿದ್ದಾರೆ ಇದನ್ನು ನೋಡಿ ನಿಜಕ್ಕೂ ಆಶ್ಚರ್ಯವಾಯಿತು ಆರ್ ಗುಂಡೂರಾವ್‌ರವರು ಭೂ ಕಬಳಿಕೆ ಎಲ್ಲಿ ಮಾಡಿದರು? ಅದರ ಬಗ್ಗೆ ಮಾಹಿತಿಯನ್ನು ಹಾಕಲಿಲ್ಲ ಅಥವಾ ಬೇರೆಯವರ ಬಗ್ಗೆಯೂ ಬರೆಯಲಿಲ್ಲ ಅವರು ತೀರಿಕೊಂಡು 14 ವರ್ಷಗಳಾದವು ಅವರು ಮುಖ್ಯಮಂತ್ರಿಗಳಾಗಿದ್ದುದು 1980 ರಿಂದ 83 ರವರೆಗೆ ಇಂದಿಗೆ ಸುಮಾರು 24 ವರ್ಷಗಳಾದವು ಹೆಗಡೆಯವರು ತೀರಿಕೊಂಡು ಎಷ್ಟೋ ವರ್ಷಗಳಾದವು ಏಕೆ ಅವರ ಮೇಲೆ ಇವತ್ತು ಈ ರೀತಿ ಕಳಂಕ ಬರತಕ್ಕಂಥಹ ರೀತಿಯಲ್ಲಿ ವ್ಯಕ್ತವಾಗಬೇಕು? ಬರೆಯಬೇಕು? ಇದರ ಹಿನ್ನೆಲೆ ಏನು ಉದ್ದೇಶವೇನು? ನನಗಂತೂ ಗೊತ್ತಿಲ್ಲ ಅದಾದ ನಂತರ, ಬೇರೆ ಪತ್ರಿಕೆಗಳಲ್ಲಿ ಕೂಡ ಬರೆಯುವುದಕ್ಕೆ ಶುರುಮಾಡಿದರು ಇಷ್ಟು ಎಕರೆ ಒತ್ತುವರಿಯಾಗಿದೆ, ನನ್ನ ಫೋಟೋ ಕೂಡ ಹಾಕಿ, ಎಲ್ಲವೂ ಇವತ್ತು ಪ್ರಕಟವಾಗುತ್ತಿದೆ ನಾನು ಕೇಳುವುದೇನೆಂದರೆ ಒಂದು ಕಡೆ ಎ ಟಿ ರಾಮಸ್ವಾಮಿಯವರ ಸಮಿತಿ ವರದಿಯನ್ನು ಅನಧಿಕೃತವಾಗಿ ಈ ರೀತಿ ಬಹಿರಂಗಗೊಳಿಸಬಹುದೇ? ಸದನ ಸಮಿತಿಯ ಕಾರ್ಯ ನಿರ್ವಹಣೆಯಲ್ಲಿ ರೂಲ್ಸ್ ಪ್ರಕಾರ ಸಮಿತಿ ಸಂಪೂರ್ಣವಾಗಿ ವರದಿಯನ್ನು ಈ ಸದನಕ್ಕೆ ಒಪ್ಪಿಸುವವರೆಗೂ ಆ ಸಮಿತಿಯ ಎಲ್ಲಾ ವಿಚಾರಗಳು ಕೂಡ ರಹಸ್ಯ ವಾಗಿರಬೇಕು ಅದನ್ನು ಪ್ರಚಾರಕ್ಕೆ ಉಪಯೋಗಿಸಿಕೊಳ್ಳಬಾರದು ಎಂದು ಇದೆ ಅದು ನಮ್ಮ ರೂಲ್ಸ್‌ನಲ್ಲಿ ಸ್ಪಷ್ಟವಾಗಿದೆ ಇನ್ನೊಂದು ಕಡೆ, ಎ ಟಿ ರಾಮಸ್ವಾಮಿಯವರು ಮತ್ತು ಅವರ ಸಮಿತಿಯ ಸದಸ್ಯರೆಲ್ಲರೂ ಎಲ್ಲಾ ಕಡೆಗಳಿಗೂ ಹೋಗುತ್ತಿರು ತ್ತಾರೆ ಪ್ರೆಸ್ ಕಾನ್ಫರೆನ್ಸ್ ಮಾಡುತ್ತಿರುತ್ತಾರೆ ಈ ರೀತಿ ಪ್ರೆಸ್ ಕಾನ್ಫರೆನ್ಸ್

ನಡೆಸುವುದಕ್ಕೆ ಯಾವ ರೂಲ್ಸ್‌ನಲ್ಲಿ ಅವಕಾಶವಿದೆ? ನನಗೆ ಗೊತ್ತಿಲ್ಲ ಅದರ ಬಗ್ಗೆ ನಾನು ಹೆಚ್ಚು ಕೇಳುವುದಕ್ಕೆ ಹೋಗುವುದಿಲ್ಲ ಅವರು ಒಳ್ಳೆಯ ಕೆಲಸ ಮಾಡಲಿ ಅದಕ್ಕೆ ನಮ್ಮ ಬೆಂಬಲವಿದೆ ಆದರೆ, ಇವತ್ತು ಇದಕ್ಕೆ ಸಂಬಂಧವಿಲ್ಲದಿರುವ ವಿಚಾರಗಳನ್ನೆಲ್ಲ ತೆಗೆದು ತೇಜೋವಧೆ ಗೊಳಿಸುವುದಕ್ಕೆ ಹೊರಟರೆ ಇದು ಯಾವ ನ್ಯಾಯ? ನಾನೇನೋ ಇವತ್ತು ಇಲ್ಲಿಗೆ ಶಾಸಕನಾಗಿ ಆಯ್ಕೆಯಾಗಿ ಬಂದಿದ್ದೇನೆ ನಮ್ಮ ತಂದೆಯವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದರು ಇವರು ಈ ರೀತಿ ಆರ್ಟಿಕಲ್ ಬರೆದುಬಿಟ್ಟು, ನಾನು ಇಲ್ಲದೇ ಹೋಗಿದ್ದರೆ, ಇದನ್ನು ಇಲ್ಲಿ ಯಾರು ಪ್ರಸ್ತಾಪ ಮಾಡುತ್ತಿದ್ದರು? ಇವತ್ತು ರಾಮಕೃಷ್ಣ ಹೆಗಡೆಯವರ ಬಗ್ಗೆ ಬರೆದಿದ್ದಾರೆ ಅವರ ಬಗ್ಗೆ ಇಲ್ಲಿ ಯಾರು ಪ್ರಸ್ತಾಪ ಮಾಡುತ್ತಾರೆ? ಇದು ನನ್ನ ಪ್ರಶ್ನೆ ಮತ್ತು ಇದರ ಜೊತೆಯಲ್ಲಿ ಈ ಜಾಗದ ಬಗ್ಗೆ ಅವರು ಯಾವುದನ್ನು ಹೇಳುತ್ತಿದ್ದಾರೆ ಇದು 1983 ರಲ್ಲಿ ಖರೀದಿಸಿರುವ ಜಾಗ ಇವತ್ತಿಗೂ ಕೂಡ ಕೃಷಿ ಭೂಮಿಯಾಗಿಯೇ ಉಳಿದಿದೆ 70 ಎಕರೆಗಳಷ್ಟು ಜಾಗವನ್ನು ಖರೀದಿಸಲಾಗಿದೆ ಆಗ ಖರೀದಿಸುವಾಗ ಎಕರೆಗೆ 8,000, 9,000 ರೂಪಾಯಿಗಳಿತ್ತು ನಮ್ಮ ತಂಡೆಯವರಿಗೆ ಭೂ ಕಬಳಿಕೆ ಮಾಡಬೇಕೆಂಬ ಆಸೆ ಇದ್ದಿದ್ದರೆ, ಬೆಂಗಳುರಿನ ಸುತ್ತಮುತ್ತ ಸದಾಶಿವ ನಗರದಲ್ಲೋ, ಕೋರಮಂಗಲದಲ್ಲೋ ಇಂದಿರಾನಗರದಲ್ಲೋ ಮಾಡಬೇಕಾ ಗಿತ್ತು ಒಂದು ಸೈಟ್ ಅನ್ನೂ ಅವರು ಜೀವಂಥಹೆಚ್ಚಿಗೆ ಕರೀದಿಸ ಲಿಲ್ಲ ಎಂಎಲ್‌ಎಗಳ ಸೈಟ್ ಎಲ್ಲಿದೆಯೋ ಅಲ್ಲಿಯೇ ನಾವು ಮನೆ ಕಟ್ಟಿರುವುದು ಅವರು ಜೀವಂತವಾಗಿರುವವರೆಗೂ ತಮ್ಮ ಸ್ವಂತ ಮನೆಯಲ್ಲೂ ಅವರು ಉಳಿಯಲಿಲ್ಲ ಈ ರೀತಿಯಲ್ಲಿ ಅವರನ್ನು ತೇಜೋವಧೆ ಮಾಡುವುದಕ್ಕೆ ಹೊರಟುಬಿಟ್ರೆ ಹೇಗೆ? ಯಾಕೆ ಮಾಡುತ್ತಿದ್ದಾರೆ? ಇದರ ಹಿಂದೆ ಏನಾದರೂ ಹುನ್ನಾರವಿದೆಯೇ? ಎಂದು ಕೇಳುತ್ತಿದ್ದೇನೆ ಒಂದು ಕಡೆ ರಾಜಕೀಯದ ಹುನ್ನಾರವಿದೆಯೇ? ಅಥವಾ ನಾವು ಇವತ್ತಿನ ದಿವಸ ರೂಲಿಂಗ್ ಪಾರ್ಟಿ ಮೇಲೆ ಅನೇಕ ಆರೋಪಗಳನ್ನು ಮಾಡುತ್ತಿರುವುದರಿಂದ, ಕಾಂಗ್ರೆಸ್ ಮೇಲೆ ಈ ರೀತಿಯಲ್ಲಿ ಏನಾದರೂ ಕಳಂಕ ತರಬೇಕೆಂಬ ಉದ್ದೇಶವೇನಾದರೂ ಇದೆಯೇ? ಬೆಂಗಳೂರಿನ ಸುತ್ತಮುತ್ತಲೂ ಆಗುತ್ತಿರುವ ಭೂ ಹಗರಣದ ಬಗ್ಗೆ ಇವತ್ತು ಸಾಕಷ್ಟು ಪ್ರಸ್ತಾಪವಾಗುತ್ತಿದೆ ಚರ್ಚೆಯಾಗುತ್ತಿದೆ ಅದರಲ್ಲಿ ಯಾರ್ಯಾರು ಇನ್‌ವಾಲ್ವ್ ಆಗಿದ್ದಾರೆ? ಯಾವ್ಯಾವ ಸಹೋದರರು ಇನ್‌ವಾಲ್ವ್ ಆಗಿದ್ದಾರೆ? ಮಾತನಾಡುವುದು ಇನ್ನು ಬೇಕಾದಷ್ಟು ಇದೆ ಆದರೆ, ಯಾರು

ಏನೂ ಮಾಡಿಲ್ಲದಿರುವ ಜನರ ಮೇಲೆ ಸುಮ್ಮನೆ ಈ ರೀತಿ ನೀವು ಪತ್ರಿಕೆಗಳಲ್ಲಿ ಹಾಕಿ, ತೇಜೋವಧೆ ಮಾಡುತ್ತೇವೆ, ಕಳಂಕ ತರುತ್ತೇವೆ ಎಂದರೆ, ಇದು ಯಾವ ರೀತಿಯಾದ ರಾಜಕಾರಣ ? ಒಂದು ಕಡೆ ಸದನ ಸಮಿತಿಯ ಗೌಪ್ಯತೆ ಬಗ್ಗೆ ರಾಮಸ್ವಾಮಿಯವರು ಒಂದು ದಿನವೂ ಹೇಳಿಕೆ ಕೊಡಲಿಲ್ಲ ಈ ಸಂಜೆ ಪತ್ರಿಕೆಯಲ್ಲಿ ಬಂದಿರುವುದ ಸುಳ್ಳು, ಇದಕ್ಕೂ ನಮಗೂ ಏನೂ ಸಂಭಂಧವಿಲ್ಲ, ಈ ರೀತಿ ಬರೆದಿರುವುದಕ್ಕೂ ನಮಗೂ ಯಾವುದೇ ರೀತಿಯಲ್ಲೂ ನೀವು ಹೋಲಿಸಿಕೊಳ್ಳಬೇಡಿ ಎಂದು ಅವರಾದರೂ ಹೇಳಬೇಕಾಗಿತ್ತು ಅವರೂ ಅದನ್ನು ಹೇಳಲಿಲ್ಲ ಇವತ್ತಿನ ದಿವಸ ಸಾರ್ವಜನಿಕರು ನಾನೂ ಕೂಡ ಬೆಂಗಳೂರಿನಲ್ಲಿ ಶಾಸಕನಾಗಿದ್ದೇನೆ ಪ್ರತಿಯೊಬ್ಬರೂ ಕೂಡ ಪತ್ರಿಕೆ ಓಡುತ್ತಾರೆ ಎಲ್ಲಾ ಪತ್ರಿಕೆಗಳನ್ನು ನೋಡುತ್ತಿದ್ದಾರೆ ಅವರೇನು ತಿಳಿದುಕೊಳ್ಳುತ್ತಾರೆ? ಓಹ್, ದಿನೇಶ್ ಗುಂಡೂರಾವ್‌ರವರು ಕೂಡ ಭೂ ಹಗರಣ ಮಾಡುತ್ತಿದ್ದಾರೆ ಅವರೇನೂ ಕಡಿಮೆ ಇಲ್ಲ ಇವತ್ತು ಅವರು ಬೇರೆಯವರ ಮೇಲೆ ಆರೋಪ ಮಾಡುತ್ತಾರೆ ನಾನೇ ಎಷ್ಟೋ ಸಲ ಆರೋಪ ಮಾಡಿದ್ದೇನೆ, ಇವರೂ ಆರೋಪ ಮಡುತ್ತಾರೆ ಇವರಿಗೂ ಅವರಿಗೂ ಏನು ವ್ಯತ್ಯಾಸ? ಆ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ನೈತಿಕತೆ ಏನಿದೆ? ನಾನು ಇವತ್ತು ಬಹಳ ೧
ಸ್ಪಷ್ಟವಾಗಿ ಹೇಳುತ್ತೇನೆ ನಾವು ಭೂ ವಿಚಾರದಲ್ಲಿ ಒಂದು ತಪ್ಪು ಕೆಲಸವನ್ನೂ ಮಾಡಿಲ್ಲ ಅವತ್ತಿನ ದಿವಸ ನಾವು ಆ ಜಾಗವನ್ನು ಏನು ಖರೀದಿಸಿದ್ದೇವೆ, ಆ ಜಾಗದ ಸುತ್ತಲೂ ಬೇಲಿ ಇದೆ ಇವತ್ತಿಗೂ ಕೂಡ ಅದು ಹಾಗೆಯೇ ಇದೆ ಇವತ್ತಿಗೂ ಅಲ್ಲಿ ಅಗ್ರಿಕಲ್ಚರ್ ಮಾಡುತ್ತಿದ್ದೇವೆ ಆ ಭೂಮಿಯನ್ನು ನಾವೇನೂ ಡೆವೆಲಪ್ ಮಾಡಲು ಹೋಗಿಲ್ಲ ಕನ್ವರ್ಷನ್ ಮಾಡಿಲ್ಲ, ಮಾರಾಟ ಮಾಡಿಲ್ಲ 1983 ರಲ್ಲಿ ನಾವು ತೆಗೆದುಕೊಂಡಿರುವ ಜಾಗದಲ್ಲಿ ಏನಾದರೂ ಸರ್ಕಾರಿ ಜಮೀನುಗಳಿದ್ದರೆ ಅದು ನಮಗೂ ಕೂಡ ಗೊತ್ತಿಲ್ಲ ಆಗ ಜಮೀನು ತೆಗೆದುಕೊಂಡಿದ್ದಾಗ ಅಲ್ಲಿಗೆ ಅಷ್ಟು ದೂರ ಹೋಗಿ ಏಕೆ ತೆಗೆದುಕೊಂಡಿರಿ ಸರ್ ನೀವು ಎಂದು ನಮ್ಮನ್ನು ಸುಮಾರು ಜನ ಕೇಳುತ್ತಿದ್ದರು ಈ ರೀತಿಯಾಗಿ ಮಾತನಾಡತಕ್ಕಂಥದ್ದು, ಹೇಳತಕ್ಕಂಥದ್ದು ಏತಕ್ಕೋಸ್ಕರ, ಅಧ್ಯಕ್ಷರೆ, ಮೊದಲೇ ರಾಜಕಾರಣಿಗಳ ಬಗ್ಗೆ ಜನರು ಸಾರ್ವಜನಿಕವಾಗಿ ಎಷ್ಟರ ಮಟ್ಟಿಗೆ ನಮ್ಮ ಬಗ್ಗೆ ಮಾತನಾಡುತ್ತಾರೆ ಎಂಬುದು ಗೊತ್ತಿದೆ ಇದೊಂದು ವಿಚಾರ ಹೊರಗಡೆ ಬಂದರೆ ಏನಾಗುತ್ತದೆ? ನಾವು ಹೇಗೋ ಒಳ್ಳೆಯ ರೀತಿಯಲ್ಲಿ ಹೋಗಬೇಕೆಂಬ ಆಸೆ ಒಂದು ಕಡೆ

ಇರುತ್ತದೆ ನಾನೇನಾದರೂ ತಪ್ಪು ಮಾಡಿದ್ದರೆ, ನಾನು ಈ ತರಹ ಮಾತನಾಡುತ್ತಿರಲಿಲ್ಲ ಬಹಶಃ ನಾನು ಹೋಗಿ ರಾಮಸ್ವಾಮಿಯವರಿಗೋ, ಅಥವಾ ಮುಖ್ಯಮಂತ್ರಿಯವರ ಹತ್ತಿರ ಹೋಗಿ ಸರ್, ನಾನು ತಪ್ಪು ಮಾಡಿದ್ದೇನೆ ನಾನು ಭೂ ಹಗರಣದಲ್ಲಿ ಇನ್‌ವಾಲ್ವ್ ಆಗಿಬಿಟ್ಟಿದ್ದೇನೆ, ದಯವಿಟ್ಟು ಹೇಗಾದರೂ ಮಾಡಿ ರಕ್ಷಣ ಕೊಡಿ, ಎಂದು ನಾನು ಕೇಳಿಕೊಳ್ಳುತ್ತಿದ್ದೆ ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ರಿತಿ ಸಮಿತಿಯ ಅಥವಾ ಯಾವ ಒಂದು ವರಿದಿ ರೀತ್ಯಾ ನಮ್ಮಲ್ಲೇನಾದರೂ ಇದ್ದರೆ, ಬಂದರೆ, ಸರ್ವೆ ಮಾಡಲಿ ಇದು ನೆನ್ನೆ ಮೊನ್ನೆ ತೆಗೆದುಕೊಂಡಿರುವ ಜಾಗವಾಗಿದೆಯೇ? ಅವತ್ತಿನ ಬೆಲೆ ಏನು? ಇವತ್ತಿನ ಬೆಲೆ ಏನು? ನಾವೇನಾದರೂ ಕ್ರಿಮಿನಲ್ಸ್ ಆಗಿಬಿಟ್ಟಿದ್ದೇವೆಯೇ? ಮತ್ತು ಯಾರೂ ಕೂಡ ಸ್ಪಷ್ಟೀಕರಣ ಕೊಡುವುದಿಲ್ಲ ಅಲ್ಲಿ ಅಷ್ಟು ಒರದರುವರಿಯಾಗಿದೆಯಂತೆ, ಇಲ್ಲಿ ಇಷ್ಟು ಒತ್ತುವರಿಯಾಗಿದೆಯಂತೆ ಎಂದು ಇವತ್ತಿನ ದಿವಸ ಪತ್ರಿಕೆಗಳಲ್ಲಿ ಬರುತ್ತದೆ ಈ ರಿಪೋರ್ಟ್‌ಗಳನ್ನು ಕೊಡುತ್ತಿರುವುದು ಏಕೆ? ಹೇಗೆ ಬಹಿರಂಗವಾಗುತ್ತಿದೆ? ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತ ನನ್ನ ಹತ್ತಿರ 288 ಜನರ ಪಟ್ಟಿ ಇದೆಯೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ ಅವರೇನಾದರೂ ಹೆದರಿಸುತ್ತಿದ್ದಾರೆಯೇ? ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆಯೇ? ನೀವು ಸುಮ್ಮನಿರಿ, ಮಾತನಾಡಬೇಡಿ ಎಂದು ಹೇಳತಕ್ಕಂಥಾದ್ದು ಏನಾದರೂ ಇದೆಯೇ? ನಮಗೆ ಗೊತ್ತಿಲ್ಲ ನಮಗೆ ಅದೇ ಸಂಶಯ ಬರುತ್ತದೆ ಅಧ್ಯಕ್ಷರು ನಮ್ಮನ್ನು ಸದನ ಸಮಿತಿಯ ಸದಸ್ಯರನ್ನಾಗಿ ಮಾಡಿದ್ದಾರ ನಾವು ಬೆಂಗಳೂರು ಸುತ್ತಮುತ್ತಲೂ ಎಲ್ಲಾ ಕಡೆಗಳಿಗೂ ಹೋಗುತ್ತಿದ್ದೇವೆ ಆ ವಿಚಾರವಾಗಿ ನಾವು ಎಲ್ಲಾ ಕಡೆಗಳಲ್ಲೂ ಮಾತನಾಡಿದಾಗ ಬಹುಶಃ ನೀವು ಹೆಚ್ಚು ಮಾತನಾಡುವುದಕ್ಕೆ ಹೋಗಬೇಡಿ, ನೀವು ಸುಮ್ಮನಿರಿ ಎಂದು ಹೆದರಿಸುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆಯೇ? ಈ ರೀತಿಯಾಗಿ ಸರ್ಕಾರದ ಒಂದು ಡಾಕ್ಯುಮೆಂಟ್ ಅನ್ನು ಅಥವಾ ಸರ್ಕಾರದ ಮಾಹಿತಿಗಳನ್ನು ಹಿಡಿದುಕೊಂಡು ಹದರಿಸತಕ್ಕಂಥ, ಬೆದರಿಸತಕ್ಕಂಥ ಪ್ರವೃತ್ತಿ ಏನಿದೆ, ಇದನ್ನು ಇವತ್ತು ನಾವು ಖಂಡಿಸಬೇಕಾಗಿದೆ ಮತ್ತು ನಾನು ಕೇಳುವುದೇನೆಂದರೆ, ರಾಮಕೃಷ್ಣ ಹೆಗಡೆಯವರು ಮಾಜಿ ಮುಖ್ಯಮಂತ್ರಿಗಳಾಗಿದ್ದರು ಅವರು ತೀರಿ ಹೋಗಿ ಎಷ್ಟೋ ವರ್ಷಗಳಾದವು ಅವರ ಫೋಟೋ ಹಾಕಿ ಈ ರೀತಿ ಏಕೆ ಅನವಶ್ಯಕವಾಗಿ ಬರೆಸಿಬಿಡುತ್ತೀರಿ? ನನ್ನ ಒತ್ತಾಯವೇನೆಂದರೆ ಈ ಪತ್ರಿಕೆಯಲ್ಲಿ ಬರೆದಿರುವ ಜರ್ನಲಿಸ್ಟ್, ಪತ್ರಿಕೆಯ ಎಡಿಟರ್,

ಮತ್ತು ಮಾಲೀಕರನ್ನು ಕರೆಸಿ, ನಿಮಗೆ ಯಾರು ಇದನ್ನು ಹೇಳಿದರು ಎಂದು ಅವರನ್ನು ನೀವು ಕೇಳಬೇಕು? ಬೇಕಾದರೆ ಅವರನ್ನು ಈ ಸದನಕ್ಕೆ ಕರೆಸಿ ನಿಮಗೆ ಮಾಹಿತಿ ಎಲ್ಲಿಂದ ಬಂತು? ಯಾವ ಸದಸ್ಯರು ನಿಮಗೆ ಹೇಳಿದರು ಎಂದು ನೀವು ಬರೆದಿರಿ? ಆ ರೀತಿ ಹೇಳಿರತಕ್ಕಂಥವರು ಯಾರು? ಎಂದು ಇಲ್ಲೇ ಅವರನ್ನು ಕೂರಿಸಿ ಕೇಳೋಣ ಅವರು ಸ್ಪಷ್ಟವಾಗಿ ಹೇಳಲಿ ಇವರಿಗೆ ಇವರಿಗೆ ಇಷ್ಟ ಬಂದಂತೆ ಬರೆಯುತ್ತಾರೆ ಜನರಂತು ಪತ್ರಿಕೆಯನ್ನು ನೋಡಿ ಓದುತ್ತಾರೆ ಮಾತನಾಡುತ್ತಾರೆ ನಿಮಗೆ ಈ ಮಾಹಿತಿ ಎಲ್ಲಿಂದ ಬಂತು ಎಂದು ಅವರನ್ನು ಕರೆಸಿ ಕೇಳಿ ಅಧಿಕಾರಿಗಳೇನಾದರೂ ಈ ಮಾಹಿತಿಯನ್ನು ಕೊಟ್ಟಿದ್ದರೆ ಅವರು ಏಕೆ ಕೊಟ್ಟರು? ಅವರಿಗೇನು ಕೊಡಲು ಹಕ್ಕಿದೆ? ಅವರು ಪತ್ರಿಕೆಯಲ್ಲಿ ಎಷ್ಟು ಸೂಕ್ಷ್ಮವಾಗಿ ಬರೆಯುತ್ತಾರೆಂದರೆ ಯಾರದೋ ಮಂತ್ರಿಗಳ ಮಗ ಇದರಲ್ಲಿ ಶಾಮೀಲಾಗಿದ್ದಾರೆಂದು ಬರೆಯುತ್ತಾರೆ ಆ ಮಂತ್ರಿಯವರ ಹೆಸರನ್ನು ಹೇಳುವುದಿಲ್ಲ ಏಕೆಂದರೆ ಅವರ ಪಕ್ಷದವರೇ ಇಲ್ಲಿ ನಮ್ಮ ತಂದೆಯವರು ಮತ್ತು ಹೆಗಡೆಯವರ ಹೆಸರನ್ನು ಹೇಳಿಬಿಡುವುದು ಪಾಪ ಅವರುಗಳು ಇವತ್ತು ಇಲ್ಲವೇ ಇಲ್ಲ ಅವರುಗಳೂ ಕೂಡ ಮಾಜಿ ಮುಖ್ಯಮಂತ್ರಿಗಳು ಇವತ್ತೇನು ಕುಮಾರಸ್ವಾಮಿಯವರು ಈ ಜಾಗದಲ್ಲಿ ಕುಳಿತುಕೊಂಡಿದ್ದಾರೆ, ಅವತ್ತು ಅವರುಗಳೂ ಆ ಜಾಗದಲ್ಲಿ ಕುಳಿತುಕೊಂಡಿದ್ದರು ಆದ್ದರಿಂದ ಇದಕ್ಕೆ ಸಂಭಂದಿಸಿದಂತೆ ಹಕ್ಕುಚ್ಯುತಿ ವಿಚಾರದಲ್ಲಿ ಕೇಳುವುದೇನೆಂದರೆ ಆ ಪತ್ರಿಕೆಯವ್ನನು ಕರೆಸಿ ಈ ಮಾಹಿತಿ ಎಲ್ಲಿಂದ ಬಂತು ಎಂದು ಕೇಳಿ ಇಲ್ಲದಿದ್ದರೆ ಎ ಟಿ ರಾಮಸ್ವಾಮಿ ಯವರು ಎದ್ದುನಿಂತು ಈ ಪತ್ರಿಕೆಯವರು ಹೇಳಿರುವುದು ಸುಳ್ಳು, ನಮ್ಮಲ್ಲಿ ಈ ರೀತಿಯ ವಿಚಾರಗಳು ಇಲ್ಲ, ನಮಗೂ ಇದಕ್ಕೂ ಸಂಭಂಧವಿಲ್ಲ, ನಾವು ಯಾವುದನ್ನೂ ಬಹಿರಂಗ ಮಾಡಿಲ್ಲವೆಂದು ಹೇಳಲಿ ಅಥವಾ ಇದನ್ನು ನೀವು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ ಪೂರ್ಣವಾಗಿ ಪರಿಶೀಲನೆ ಮಾಡಿ ಚೆಕ್‌ಅಪ್ ಮಾಡಿ ಎನ್‌ಕ್ವೈರಿ ಮಾಡಿಸಿ ಇವರು ಪ್ರತಿ ದಿವಸ ಎಲ್ಲಾ ಕಡೆ ಹೋಗಿ ನಮ್ಮ ಹತ್ತಿರ 288 ಜನರ ಪಟ್ಟಿಯಿದೆ ಎಂದು ಏಕೆ ಹೇಳಬೇಕು?

ಶ್ರೀ ಎ ಟಿ ರಾಮಸ್ವಾಮಿ ಇದರ ಬಗೆ ಸರ್ಕಾರ ಉತ್ತರ ಕೊಡಬೇಕು ಮಾನ್ಯ ಅದ್ಯಕ್ಷರೆ, ತಾವು ಅನುಮತಿ ಕೊಟ್ಟರೆ ನಾನು ಮಾತನಾಡುತ್ತೇನೆ

ಶ್ರೀ ದಿನೇಶ್ ಗುಂಡೂರಾವ್ ಅದನ್ನು ಏಕೆ ಹೇಳಬೇಕು? ಮುಖ್ಯ ಮಂತ್ರಿಗಳು ಆ ರೀತಿ ಏಕೆ ಹೇಳಿಕೆಯನ್ನು ಕೊಡಬೇಕು? ಒಂದು ವೇಳೆ ಆ ರೀತಿ ಪಟ್ಟಿ ಇದ್ದರೆ ಅಫಿಷಿಯಲ್ ಆಗಿ ಅದನ್ನುಬಿಡುಗಡೆ ಮಾಡಲಿ ಕ್ರಮ ತೆಗೆದುಕೊಳ್ಳಲಿ ಯಾರಿದ್ದಾರೋ ಅವರ ಮೇಲೆ ಕೇಸನ್ನು ದಾಖಲೆ ಮಡಲಿ ಜೈಲಿಗೆ ಹಾಕಲಿ ಯಾರು ಬೇಡವೆನ್ನುತ್ತಾರೆ ಆದರೆ ಈ ರಿತಿ ಮಾಡಿ ಹೆದರಿಸತಕ್ಕದ್ದು ಅವರಿಗೂ ಶೋಭೆ ತರುವುದಿಲ್ಲ ಆರ್ ಗುಂಡೂರಾವ್‌ರವರು ಯಾವತ್ತೂ ನೇರವಾದ ರಾಜಕಾರಣ ಮಾಡಿದ್ದರು ಯಾವತ್ತೂ ಈ ರೀತಿ ಹೆದರಿಸಿಕೊಂಡು ಬೆದರಿಸಿಕೊಂಡು ರಾಜಕಾರಣ ಮಾಡಿದವರಲ್ಲ ಇದು ಎಲ್ಲರಿಗೂ ಗೊತ್ತಿರುವ ವಿಚಾರ ಅವರು ನೇರ ರಾಜಕಾರಣಿ ಇದ್ದಿದ್ದನ್ನು ಇದ್ದಂತೆ ಹೇಳುತ್ತಿದ್ದರು ಇವತ್ತು ಈ ರೀತಿಯಾಗಿ ಎಲ್ಲವನ್ನೂ ತಂತ್ರ ಕುತಂತ್ರ ಮೋಸ ಮಾಯಾ ಮಾಟ ಮಾಡಿಸಿಕೊಂಡು ಕುಳಿತುಕೊಂಡರೆ ಏನಿದು? ನಾನು ಜಾಸ್ತಿ ಮಾತನಾಡಲು ಹೋಗುವುದಿಲ್ಲ ಇದನ್ನು ತಾವು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ ನಾವೂ ಕೂಡ ಇವತ್ತು ಸಾರ್ವತ್ರಿಕವಾಗಿ ತಲೆ ಎತ್ತಿ ಕೆಲಸ ಮಾಡಬೇಕು ಆದ್ದರಿಂದ ತಾವು ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು ಆಯಿತು ಇದರ ಬಗ್ಗೆ ಚರ್ಚೆಏನಿಲ್ಲ ನೀವು ನೀಡಿರುವ ಪ್ರಿವಿಲೇಜ್ ಬಗ್ಗೆ ಮಾತನಾಡುತ್ತೀರೋ ಅವರ ಬಗ್ಗೆ ಮಾತನಾಡುತ್ತೀರೋ? ಅವರು ಎಲ್ಲ ವಿಚಾರಗಳನ್ನು ಹೇಳಿದ್ದಾರೆ

ಶ್ರೀ ಎಸ್ ಕುಮಾರ ಬಂಗಾರಪ್ಪ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ

ಅಧ್ಯಕ್ಷರು You can't, ಅವರು ಪ್ರಿವಿಲೇಜ್ ನೋಟೀಸ್ ಕೊಟ್ಟು ಮಾತನಾಡಿದ್ದಾರೆ You are not the signatory

ಶ್ರೀ ಎಸ್ ಕುಮಾರ ಬಂಗಾರಪ್ಪ ಅವತ್ತು ಅದಕ್ಕೆ ಸಿಗ್ನೇಚರ್ ಮಾಡಿದ್ದೇವೆ

ಅಧ್ಯಕ್ಷರು ತಾವು ಮಾಡಿರುವುದ ಅದಕ್ಕಲ್ಲಾ ದಿನೇಶ್ ಗುಂಡೂರಾವ್ ರವರದ್ದನ್ನು ಅವರೊಬ್ಬರೇ ಸಹಿಮಾಡಿ ಕಳುಹಿಸಿದ್ದಾರೆ ನಿಮ್ಮದೇ ಬೇರೆ

ಶ್ರೀ ಎನ್ ಧರ್ಮಸಿಂಗ್ there are two notices club ಮಾಡಿ ಕೊಟ್ಟಿದ್ದೇವೆ ಮಾನ್ಯ ದಿನೇಶ್ ಗುಂಡೂರಾವ್‌ರವರು ಪ್ರಸ್ತಾಪ ಮಾಡಿ ಸರಿಯಾದ ರೀತಿಯಲ್ಲಿ ಬಹಳ ವಿವಿರವಾಗಿ ಹೇಳಿದ್ದಾರೆ ಆದರೆ ನಾವು ಇಲ್ಲಿ ಯಾರಿಗೆ ಹೇಳಬೇಕು ಎಂಬುದು ನನ್ನ ಪ್ರಶ್ನೆ Is this the way to run the house?

ಅಧ್ಯಕ್ಷರು ಕಂದಾಯ ಸಚಿವರಾದ ಜಗದೀಶ್ ಶೆಟ್ಟರ್‌ರವರು ಇದ್ದಾರಲ್ಲಾ?

ಶ್ರೀ ಎನ್ ಧರ್ಮಸಿಂಗ್ ಶೆಟ್ಟರ್‌ರವರಲ್ಲ ಅಲ್ಲಿ ಯಾರಿದ್ದಾರೆ? ನೀವು ಸುಮ್ಮನೆ ಅಲ್ಲಿ ಯಾರೋ ಕುಳಿತಿದ್ದರೆ ಹೇಳುವುದಿಲ್ಲ ಯಾರ ಹತ್ತಿ ಇದರ ಬಗ್ಗೆ ಹೇಳಬೇಕು? ಯಾರು ಉತ್ತರ ಕೊಡುತ್ತಾರೆ? ಪ್ರಕಾಶ್‌ರವರು ಇದ್ದಾರೆ ಉಪಮುಖ್ಯಮಂತ್ರಿಯವರು ಇದ್ದಾರೆ

ಅಧ್ಯಕ್ಷರು ಇಲ್ಲಿ ಕಂದಾಯ ಸಚಿವರು ಇದ್ದಾರೆ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಆ ಮನೆಗೆ ಹೋಗಿದ್ದಾರೆ ಬರುತ್ತಾರೆ

ಶ್ರೀ ಎನ್ ಧರ್ಮಸಿಂಗ್ ಅವರು ಬಂದಮೇಲೆ ಇದನ್ನು ತೆಗೆದುಕೊಳ್ಳಿ

ಅಧ್ಯಕ್ಷರು ಆಗಲಿ ಅವರು ಬಂದಮೇಲೆ ಇದನ್ನು ತೆಗೆದುಕೊಳ್ಳೋಣ

ಶ್ರೀ ಆರ್ ವಿ ದೇಶಪಾಂಡೆ ದಿನೇಶ್ ಗುಂಡೂರಾವ್‌ದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿಬಿಡಿ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ದಿನೇಶ್ ಗುಂಡೂರಾವ್‌ರವರು ಕ್ಕೊಟ್ಟಿದ್ದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿಬಿಡಿ ಇನ್ನೊಂದು ಇಶ್ಯೂ ಏನಿದೆ ಅದನ್ನು ಚರ್ಚೆಗೆ ತೆಗೆದುಕೊಳ್ಳುವಾಗ ಅವರನ್ನು ಕರೆಸಿ ಚರ್ಚೆ ಮಾಡೋಣ

ಶ್ರೀ ಎನ್ ಧರ್ಮಸಿಂಗ್ ಅವರದನ್ನು ಪ್ರಿವಿಲೇಜ್ ಕಮಿಟಿಗೆ ರೆಪರ್ ಮಾಡಿ

ಶ್ರೀ ಕೃಷ್ಣಭೈರೇಗೌಡ ಅವರಿಗೆ ನ್ಯಾಯ ಸಿಗಬೇಕು ತಾವು ಅವರಿಗೆ ನ್ಯಾಯ ಕೊಡಿ ತಾವು ಸದಸ್ಯರ ರಕ್ಷಣೆಗೆ ಬರಬೇಕು ಇಲ್ಲಿ ಮೀನಾಮೇಷ ಎಣಿಸುವುದೇನಿದೆ? ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ

ಶ್ರೀ ದಿನೇಶ್ ಗುಂಡೂರಾವ್ ತಾವು ನಮ್ಮ ರಕ್ಷಣೆಗೆ ಬರಬೇಕು

ಅಧ್ಯಕ್ಷರು ಕಂದಾಯ ಸಚಿವರು ಏನಾದರು ಹೇಳುವುದಿದ್ದರೆ ಹೇಳಿ

ಶ್ರೀ ಕೃಷ್ಣಭೈರೇಗೌಡ ತಾವು ಇಲ್ಲಿ ಹಕ್ಕುಚ್ಯುತಿಯಾಗಿದೆ ಎಂಬುದನ್ನು ಹೇಳಿ ಎಂದು ನಾವು ಹೇಳುವುದಿಲ್ಲ

ಅಧ್ಯಕ್ಷರು ಕಂದಾಯ ಸಚಿವರು ಏನೋ ಹೇಳಲು ನಿಂತಿದ್ದಾರೆ ಅದನ್ನು ಕೇಳೋಣ

ಶ್ರೀ ಜಿ ವಿಶ್ರೀರಾಮು ರೆಡ್ಡಿ. ಇದನ್ನು ಪ್ರಿವಿಲೇಜ್‌ಗೆ ರೆಫರ್ ಮಾಡಿದ್ದೇವೆಂದು ಹೇಳಿಬಿಡಿ ಆ ವಿಷಯ ಮುಗಿದು ಹೋಗುತ್ತದೆ

ಅಧ್ಯಕ್ಷರು ಅವರು ಏನು ಹೇಳುತ್ತಾರೋ ಹೇಳಲಿ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ನಾನು ಇದನ್ನು ಡಿಫೆಂಡ್ ಮಾಡುತ್ತಿಲ್ಲ ಸರ್ಕಾರದ ಪರವಾಗಿ ಹೇಳಬೇಕಲ್ಲಾ? ಸರ್ಕಾರದ ಮೇಲೂ ಹೇಳಿದ್ದಾರೆ ಸರ್ಕಾರದವರು ಮಾಹಿತಿ ಕೊಟ್ಟಿದ್ದಾರೆಂದು

ಸರ್ಕಾರದವರ ಮೇಲೂ ಅವರು ಅಲಿಗೇಷನ್ ಮಾಡಿದ್ದಾರೆ ಆದ್ದರಿಂದ ನಾವು ಅದರ ಬಗ್ಗೆ ಹೇಳಬೇಕಾಗುತ್ತದೆ ಶಾಸಕರಾದ ಮಾನ್ಯ ದಿನೇಶ್ ಗುಂಡೂರಾವ್‌ರವರು ಇಲ್ಲಿ ಹಕ್ಕುಚ್ಯುತಿ ಮಂಡನೆ ಮಾಡಿ ತಮ್ಮ ಹಲವಾರು ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ ಇವತ್ತು ಪತ್ರಿಕೆಯಲ್ಲಿ "ಮಾಜಿಸಿಎಂಗಳ ಭೂದಾಹ" ಎಂದು ಲೇಖನ ಬಂದಿದೆ ಇದರ ಬಗ್ಗೆ ಹಲವಾರು ವಿಷಯಗಳನ್ನು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ ಇದು ಹಕ್ಕುಚ್ಯುತಿ ಆಗುತ್ತದೆ ಎಂಬ ಬಾವನೆಯನ್ನೂ ಅವರು ವ್ಯಕ್ತ ಪಡಿಸಿದ್ದಾರೆ ಇದಕ್ಕೆ ಸರ್ಕಾರವೇನಾದರೂ ಮಾಹಿತಿ ಕೊಟ್ಟಿದ್ದಾರೆಯೇ ಎಂದು ಪ್ರಶ್ನೆಯನ್ನು ಅವರು ಮಾಡಿದ್ದಾರೆ ಮಾನ್ಯ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸದನದ ಸಮಿತಿ ರಚನೆಯಾಗಿದೆ ಬೆಂಗಳೂರು ನಗರದ ಸುತ್ತಮುತ್ತ ಸರ್ಕಾರದ ಜಮೀನೇನು ಒತ್ತುವರಿಯಾಗಿದೆ, ಎಷ್ಟೆಷ್ಟು ಜಮೀನು ಒತ್ತುವರಿಯಾಗಿದೆ ಎಂಬ ಬಗ್ಗೆ ಸಮೀಕ್ಷೆ ಕೆಲಸ ಆ ಸಮಿತಿಯದ್ದಾಗಿದೆ ಅದರಲ್ಲಿ ಎಲ್ಲಾ ಪಕ್ಷದ ಸದಸ್ಯರೂ ಇದ್ದಾರೆ ಅವರು ಈಗಾಗಲೇ ಒಂದು ಮಧ್ಯಂತರ ವರದಿಯನ್ನು ನಮ್ಮ ಸದನಕ್ಕೆ ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದಾರೆ ಅವರ ತನಿಖೆ ಇನ್ನೂ ಮುಂದುವರೆಯುತ್ತಿದೆ ಇವತ್ತು ಸಹ ವರಿಂದ ಅಮೂಲಾಗ್ರ ವಾದ ವರದಿ ತಮಗೆ ಬರುವುದಿದೆ ಮಾನ್ಯ ರಾಮಸ್ವಾಮಿಯವರು ಸಾಕಷ್ಟು ಸಲ ಪತ್ರಿಕೆಯವರನ್ನು ಕರೆದು ಎಷ್ಟು ಎಕರೆ ಜಮೀನು ಒತ್ತುವರಿಯಾಗಿದೆ ಎಂಬ ಬಗ್ಗೆ ಮಾಹಿತಿಯನ್ನೂ ಹೇಳಿದ್ದಾರೆ ಪತ್ರಕರ್ತರೂ ಹಲವಾರು ಸಂದರ್ಭದಲ್ಲಿ ಕೇಳಿದಂತಹ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ ಕಂದಾಯ ಮಂತ್ರಿಯಾಗಿ ನನಗೆ ಪತ್ರಕರ್ತರು ಹಲವಾರು ಸಂದರ್ಭದಲ್ಲಿ ಕೇಳಿದಂತಹ ಸಂದರ್ಭದಲ್ಲಿ ನಾನು ಎಷ್ಟೆಷ್ಟು ಏನೇನು ಎಂದು ಅಂಕಿ ಅಂಶವನ್ನು ಕೊಟ್ಟಿದ್ದೇನೆ 400ಕ್ಕೂ ಹೆಚ್ಚು ಜನರ ಮೇಲೆ ಈಗಾಗಲೇ ಕ್ರಿಮಿನಲ್ ಕೇಸನ್ನು ನೋಂದಾವಣಿ ಮಾಡಿದ್ದೇವೆ ಅದು ಪಬ್ಲಿಕ್ ರೆಕಾರ್ಡ್ ಆಗಿದೆ ಇವತ್ತು FIR file ಆಗಿದೆ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಪಬ್ಲಿಕ್ ರೆಕಾರ್ಡ್ ಇದೆ, ಯಾರ್ಯಾರ ಹೆಸರಿನಲ್ಲಿದೆ ಎಂಬ ಬಗ್ಗೆ ದಾಖಲೆ ಇದೆ ಇವತ್ತು ಸರ್ಕಾರದ ಕಡೆಯಿಂದ ಅಧಿಕೃತವಾಗಿ ಏನು ಕೊಡಬೇಕೆಂದು ಇದೆ ಅದನ್ನು FIR file ಮಾಡಿದ್ದೇವೆ ಅವರ ಹೆಸರುಗಳನ್ನು disclose ಮಾಡಿದ್ದೇವೆ ಅದನ್ನು ನಾಳೆ ಸದನಕ್ಕೆ ಮಂಡನೆ ಮಾಡಬೇಕೆಂದರೆ ಅದನ್ನೂ ಮಾಡಲು ತಯಾರಿದ್ದೇವೆ ಇವತ್ತು ಪತ್ರಿಕೆಯಲ್ಲಿ ಬಂದ ಸುದ್ದಿಯ ಮೇರೆಗೆ ಸರ್ಕಾರವೇ ಅವರಿಗೆ ಮಾಹಿತಿ ಕೊಟ್ಟಿದೆ ಎಂಬುವ ರೀತಿಯಲ್ಲಿ ಅವರ

ಬಾವನೆಯನ್ನು ವ್ಯಕ್ತಪಡಿಸಿದ್ದು ಸರಿಯಲ್ಲ ಇವತ್ತು ಪತ್ರಿಕೆಗಳಲ್ಲಿ ಮಂತ್ರಿಗಳ ಮೇಲೆ, ಮುಖ್ಯಮಂತ್ರಿಗಳ ಮೇಲೆ ರಾಜಕಾರಣಿಗಳ ಮೇಲೆ, ಶಾಸಕರ ಮೇಲೆ ಅಲಿಗೇಷನ್‌ಗಳು ಬರುತ್ತದೆ ಹೀಗಿರುವಾಗ ಇದು ಹಕ್ಕುಚ್ಯುತಿ ಯಾಗುತ್ತದೆಯೇ ಎಂಬುದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ ನನ್ನ ಪ್ರಕಾರ ಇದು ಹಕ್ಕುಚ್ಯುತಿಯಾಗುವುದಿಲ್ಲ ಇವತ್ತು ಪತ್ರಿಕೆಯಲ್ಲಿ ಬಂದಿರುವ ಸುದ್ದಿಗೂ ಸರ್ಕಾರಕ್ಕೂ ಏನೂ ಸಂಭಂದವಿಲ್ಲ ಸರ್ಕಾರ ಮತ್ತು ನಾವು ಅಧಿಕೃತವಾಗಿ ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ ಆದ್ದರಿಂದ ಅವರು ಸ್ವತಂತ್ರ್ಯವಾಗಿ ಕಾನೂನು ರೀತಿ ಯಾವುದೇ ಕ್ರಮ ತೆಗೆದುಕೊಳ್ಳಲು ಸ್ವತಂತ್ರ್ಯರಾಗಿದ್ದಾರೆ ಆದ್ದರಿಂದ ಇದು ಹಕ್ಕುಚ್ಯುತಿಯಾಗುತ್ತದೋ ಇಲ್ಲವೋ ಎಂಬುದನ್ನು ತಮ್ಮ ವಿವೇಚನೆಗೆ ಬಿಡುತ್ತಿದ್ದೇನೆ ನನ್ನ ಪ್ರಕಾರ ಇದು ಹಕ್ಕುಚ್ಯುತಿಯಾಗುವುದಿಲ್ಲ ತಾವು ಇದರ ಬಗ್ಗೆ ದಯವಿಟ್ಟು ನಿರ್ಣಯ ಕೈಗೊಳ್ಳಬಹುದು

ಶ್ರೀ **ಕೆ ಆರ್ ರಮೇಶ್‌ಕುಮಾರ್** ಸಕಾರದ ಪರವಾಗಿ ಕಂದಾಯ ಮಂತ್ರಿಗಳು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ ಗೆಳೆಯ ದಿನೇಶ್ ಗುಂಡೂರಾವ್‌ರವರು ತಮ್ಮಲ್ಲಿ ಬಹಳ ಸ್ಪಷ್ಟವಾಗಿ ಮನವಿ ಮಾಡಿ ಕೊಂಡಿ ದ್ದಾರೆ ಅವರ ತಂದೆಯವರ ಹೆಸರನ್ನು ಪ್ರಸ್ತಾಪ ಮಡಿದ್ದಾರೆ ಅವರ ತಾಯಿಯವರ ಹೆಸರನ್ನೂ ಪ್ರಸ್ತಾಪ ಮಾಡಿದ್ದಾರೆ ಈ ಸದನದ ಗೌರವಾನ್ವಿತ ಸದಸ್ಯರಾಗಿ ಕೆಲಸ ಮಾಡುತ್ತಿರುವ ದಿನೇಶ್ ಗುಂಡೂರಾವ್‌ರವರ ಹೆಸರನ್ನೂ ಪ್ರಸ್ತಾಪ ಮಾಡಿದ್ದಾರೆ ಅವರ ವರದಿಯಲ್ಲಿ ಸಮಿತಿಯಲ್ಲಿ ಕೆಲಸ ಮಾಡುತ್ತಿರುವ ಒಬ್ಬರು ಸದಸ್ಯರು ನನಗೆ ಈ ವರ್ತಮಾನವನ್ನು ಕೊಟ್ಟರು ಎಂದು ಹೇಳಿ ಬರೆಯುತ್ತಾರೆ ಮಾನ್ಯ ದಿನೇಶ್‌ರವರು ತಮ್ಮಲ್ಲಿ ಹೇಳುವಾಗ ಆ ಬಗ್ಗೆ ವಿವರಣೆ ನೀಡಿದರು ಇಂತಹ ಹೇಳಿಕೆ ಅಚ್ಚಾಗಿ ಪ್ರಚುರವಾದರೂ ಕೂಡ ಆ ಸಮಿತಿಗೆ ಸಂಬಂದಿಸಿದವರು ಯಾರೂ ಕೂಡ ಅದನ್ನು ಅಲ್ಲಗಳೆಯುತಕ್ಕಂಥ ಕೆಲಸವನ್ನು ಇವತ್ತಿನವರೆಗೂ ಮಾಡಲಿಲ್ಲ ಅದೂ ಕೂಡ ಸಾರ್ವತ್ರಿಕವಾಗಿ ಮನ್ನಣೆ ಪಡೆದಿರತಕ್ಕಂಥ ಒಂದು ಪತ್ರಿಕೆ ಸಾವಿರಾರು ಜನವೋ ಅಥವಾ ಲಕ್ಷಾಂತರ ಜನವೋ ಆ ಪತ್ರಕೆಯನ್ನು ಸಹ ಓದುತ್ತಾರೆ ನಾನಜ ಈ ಸದನದ ಸದಸ್ಯನಾಗಿ ಕೆಲಸ ಮಾಡುವುದಕ್ಕೆ ನನ್ನ ಹಕ್ಕಿಗೆ ಚ್ಯುತಿ ಬಂದಿದೆ, ನನಗೆ ಅಗೌರವವಾಗಿದೆ, ಈ ಸದನದಲ್ಲಿ ಇದ್ದು ನಾಯಕರಾಗಿ ಕೆಲಸ ಮಾಡಿ ಹೋಗಿ ಗತಿಸಿದಂತಹ ನನ್ನ ದಿವಂಗತ

ತಂದೆಯವರು ಇಲ್ಲಿದ್ದು ತಮ್ಮನ್ನು ಡಿಫೆಂಡ್ ಮಾಡಿಕೊಳ್ಳುವಂತಹ ಸ್ಥಿತಿಯಲ್ಲಿಲ್ಲ ನನ್ನ ತಾಯಿ ಮನೆಯಲ್ಲಿದ್ದಾರೆ ಅವರ ಹೆಸರನ್ನು ಬೀದಿಗೆ ಎಳೆದಿದ್ದಾರೆ ಎಂದು ಅವರು ಹೇಳಿದರು ಅವರು ಸರ್ಕಾರದ ಮೇಲೆ ಹೇಳಲಿಲ್ಲ ಅವರು ಪತ್ರಿಕೆ ಮೇಲೆ ಮಾತ್ರ ಹೇಳಿದರು ಪತ್ರಿಕಾ ವರದಿಯನ್ನು ಆಧರಿಸಿ ಅವರು ನೋಟೀಸ್ ಅನ್ನು ಕೊಟ್ಟಿದ್ದಾರೆ ಅವರು ಇದನ್ನು ಪ್ರಿವಿಲೇಜ್‌ಗೆ ರೆಫರ್ ಮಾಡಿ ಎಂದು ಮನವಿ ಮಾಡಿಕೊಂಡಿದ್ದಾರೆ ನೀವು defamation case file ಮಾಡಿಕೊಳ್ಳಿ ಎಂದು ಹೇಳಿದಿರಿ defamation case file ಮಾಡಬೇಕಾದ ಕಾಲ ಬಂದರೆ ಯಾರ್‍ಯಾರು ಯಾರ್‍ಯಾರ ಮೇಲೆ defamation case ಹೂಡಬೇಕಾಗುತ್ತದೋ ಹೂಡೋಣ file ಮಾಡಿಕೊಳ್ಳೋಣ ಅಷ್ಟೋ ಇಷ್ಟೋ ಕಾನೂನಿನ ಅರಿವೂ ಇದೆ, ಲಾಯರ್‌ಗಳೂ ಬೇಕಾದಷ್ಟು ಜನ ಇದ್ದಾರೆ ಅದಕ್ಕೆ ನಿಮ್ಮ ಸಲಹೆ ನಮಗೇನೂ ಬೇಕಾಗಿಲ್ಲ ಆತ ಇವತ್ತು ಯಾರ ಮರ್ಜಿಯಲ್ಲೊ ಈ ಸದನದ ಸದಸ್ಯನಾಗಿಲ್ಲ In his own right, he has become the Member of this Hon'ble House It is his privilage that is offended ಯಾವ ಉದ್ದೇಶಕ್ಕಾಗಿ ಈ ಸಮಿತಿಯನ್ನು ರಚನೆ ಮಾಡಿದ್ದಾರೆಂದು ತಾವು ಬಹಳ ಸ್ಪಷ್ಟವಾಗಿ ಹೇಳಿದಿರಿ ಬೆಂಗಳೂರಿನ ಸುತ್ತ ಮುತ್ತ ಇರತಕ್ಕಂಥ ಸರ್ಕಾರಿ ಒಡೆತನದ ಅಥವಾ ಸ್ವಾಮ್ಯದಲ್ಲಿ ಇರತಕ್ಕಂಥ ಜಮೀನನ್ನು ಯಾರು ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಒತ್ತುವರಿ ಮಾಡಿದ್ದಾರೆ, ಕಬಳಿಸಿದ್ದಾರೆ, ಜೀರ್ಣಿಸಿಕೊಂಡಿದ್ದಾರೆ,ಅಂಥಾದ್ದಕ್ಕೆ ಇದು ಅನ್ವಯಿಸುತ್ತದೆ ಅವರದು ದೇವನಹಳ್ಳಿ ತಾಲ್ಲೂಕಿನಲ್ಲಿ ಸರ್ವೆ ನಂಬರ್‌ನಲ್ಲಿ ಇರತಕ್ಕಂಥ ಖಾತೆದಾರರ ವಶದಲ್ಲಿ ಇರತಕ್ಕಂಥ ಜಮೀನು ಆಗಿದೆ 1983 ನೇ ಇಸವಿಯಲ್ಲಿ ಹಣ ಕೊಟ್ಟು sub registrar office ನಲ್ಲಿ ಹಿಂದೆ ಇದ್ದಂತಹ ಮಾಲೀಕರಿಂದ ಕ್ರಮಬದ್ಧವಾಗಿ absolute sale deed ಮಾಡಿಕೊಂಡು ಶುದ್ಧ ಕ್ರಯ ಮಾಡಿಕೊಂಡು ಅವರು ಪಡೆದುಕೊಂಡಿದ್ದಾರೆ ಅವರು ಮತ್ತೊಂದು ಮಾತನ್ನೂ ಸಹ ಹೇಳಿದರು ಒಂದು ವೇಳೆ ನಮ್ಮ ವಶದಲ್ಲಿ ಅವತ್ತಿನಿಂದ ಬೇಲಿ ಹಾಕಿರತಕ್ಕಂಥ ಜಮೀನನ್ನು ನಾವೇನು ಇಟ್ಟುಕೊಂಡಿದ್ದೇವೆ, ನಮ್ಮ ಅರಿವಿಲ್ಲದೇ ಸರ್ಕಾರದ ಜಮೀನು ಏನಾದರೂ ಅದು ಆಗಿದ್ದರೆ, ಒತ್ತುವರಿ-ಗಿತ್ತುವರಿ ಏನಾದರೂ ಆಗಿದ್ದರೆ, ನಮಗೇನೂ ಅದಕ್ಕೆ ಸಂಭಂಧವಿಲ್ಲ ಇವತ್ತೂ ಬೇಕಾದರೆ ತೆಗೆದುಕೊಳ್ಳಿ ಎನ್ನುವಂಥಹ ಮಾತನ್ನು ಹೇಳುತ್ತಾರೆ ಆದರೆ ಆ ವರದಿಯಲ್ಲಿ

ಯಾವ ರೀತಿಯಲ್ಲಿ ಬರುತ್ತದೆ? ಭೂಗಳ್ಳರು ಭೂ ದಾಹ ಎಂದು ಬಂದಿದೆ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಮೂರುವರ್ಷ ಕೆಲಸ ಮಾಡಿ ಸಾರ್ವಜನಿಕ ಜೀವದಲ್ಲಿ ತಮ್ಮದೇ ಆದಂಥಹ ಛಾಪು ಒತ್ತಿ ಹೋದಂದವರು ಕೆಂಪೇಗೌಡ ಮೆಡಿಕಲ್ ಕಾಲೇಜಿಗೆ ಜಾಗ ಬೇಕು ಎಂದು ಕೇಳಿದರೆ, ಯಾವ ಗಂಡಸರಿಗೂ ಧೈರ್ಯವಿರಲಿಲ್ಲ, ನಿಂತ ನಿಂತಲ್ಲೇ ಧೈರ್ಯವಾಗಿ ಅವರು ಜಾಗ ಕೊಟ್ಟರು ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಬೇಕು ಎಂದಾಗ ಜಾಗ ಕೊಟ್ಟರು ಯಾರು ಎಲ್ಲಿ ಕೇಳಿದರೆ ಅಲ್ಲಿ, ಕೆಲವು ಸಲ ನೇರವಾದಂಥ ತೀರ್ಮಾನಗಳಿಂದಾಗಿ ವ್ಯಾಖ್ಯಾನಕ್ಕೆ ಮತ್ತು ವಿಮರ್ಶೆಗೆ ಒಳಗಾದುದೂ ಉಂಟು ಅಂತಹ ಒಬ್ಬ ಮನುಷ್ಯನ ಮೇಲೆ, ಸತ್ತುಹೋಗಿ ಇಷ್ಟು ವರ್ಷಗಳಾದ ಮೇಲೆ, ಈ ರೀತಿ ಹೇಳಲಿಕ್ಕೆ ಮಾನವೀಯತೆ ಬೇಡವೇ? ನಾಗರೀಕತೆ ಬೇಡವೇ?ನಮ್ಮ ಬಗ್ಗೆ ನಮಗೆ ನಾಚಿಕೆ ಆಗುತ್ತಿದೆ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ ಯಾರೂ ಕೂಡ ಇದನ್ನು ಅಲ್ಲಗಳೆಯುತಕ್ಕಂಥ ಸೌಜನ್ಯವನ್ನು ತೋರಿಸಿವುದಿಲ್ಲ ಆ ಹುಡುಗ ಇನು ತರುಣ, ಕಣ್ಣು ಬಿಡುತ್ತಿದ್ದಾನೆ ಮಾನ ಮರ್ಯಾದೆಯಿಂದ ಬದುಕಬೇಕೆಂಬ ಆಸೆ ಪಡುತ್ತಿದ್ದಾನೆ Has'nt he got the right to submit his faith? ನಾನು ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ಬೇಡಿಕೊಳ್ಳುತ್ತೇನೆ ಇದಕ್ಕಿಂತ ನಿಖರವಾದ ಸ್ಪಷ್ಟವಾದ privilege comittee ಗೆ refer ಮಾಡಲಿಕ್ಕೆ ಯೋಗ್ಯವಾದಂಥಹ ಕೇಸ್ ಮತ್ತೊಂದು ಇರಲಿಕ್ಕಿಲ್ಲ ತಾವು ಆ ಘನವಾದಂಥಹ ಸ್ಥಾನವನ್ನು ಅಲಂಕರಿಸಿ ಈ ಸಭೆಯ ಘನತೆ ಗೌರವವನ್ನು ಕಾಪಾಡುತ್ತಿದ್ದೀರಿ ಈ ಸದನದಲ್ಲಿ ಕೆಲಸ ಮಾಡತಕ್ಕಂಥ ಸದಸ್ಯರ ಆತ್ಮಗೌರವವನ್ನು ಕಾಪಾಡತಕ್ಕಂಥ ಸಂಕೇತವಾಗಿ ಅಲ್ಲಿ ಕುಳಿತುಕೊಂಡು ತಕ್ಷಣ ಹಿಂದೆ ಮುಂದೆ ಆಲೋಚನೆ ಮಾಡದೆ ತಾವು ಇದನ್ನು privilege comittee ಗೆ refer ಮಾಡುವುದರಿಂದ, ಈ ರಾಜ್ಯಕ್ಕೆ ಆದಂತಹ, ಒಳ್ಳೆಯದೋ, ಕೆಟ್ಟದ್ದೋ ಸೇವೆ ಮಾಡಿದಂತಹ ಶ್ರೀ ಮಾನ್ ಗುಂಡೂ ರಾಯರ ಆತ್ಮಕ್ಕೆ ನೀವು ಶಾಂತಿ ಒದಗಿಸಿದಂತಾಗುತ್ತದೆ ಆ ಹೆಣ್ಣುಮಗಳು ಯಾರು ಇವತ್ತು ನಮ್ಮ ಸಹೋದರಿ ಮನೆಯ ಒಳಗೆ ಇದ್ದಾರೆ, ಯಾರು ಇಲ್ಲಿ ಬಂದು ಕುಳಿತುಕೊಂಡು ತಮ್ಮನ್ನು ತಾವು ಡಿಫೆಂಡ್ ಮಾಡಲಿಕ್ಕೆ ಆಗುವುದಿಲ್ಲವೋ, ಶ್ರೀಮತಿ ವರಲಕ್ಷ್ಮಿ ಗುಂಡೂರಾವ್‌ರವರು, ಅವರ ಮನಸ್ಸಿಗೆ ಸಮಾಧಾನ ಕೊಟ್ಟಂತಾಗುತ್ತದೆ ನಿರಪರಾಧಿಗಳಿಗೆ ಗೌರವ ಕೊಟ್ಟಂತಾಗುತ್ತದೆ ಆ ಹುಡುಗನ ನೋವಿಗೆ ನೀವು ಶಮನ ಕೊಟ್ಟಂತಾಗುತ್ತದೆ, ದಯಮಾಡಿ

refer ಮಾಡಿ, ಯಾವ ವರದಿಗಾರ ಇದ್ದಾನೋ, ಆತ ಬಂದು ಹೇಳಲಿ, ಎವಿಡೆನ್ಸ್ ಕೊಡಲಿ ಯಾವ ಸಮಿತಿಯ ಸದಸ್ಯ ಅವರಿಗೆ ವರದಿ ಕೊಟ್ಟದ್ದು, ಉನ್‌ಫರ್ಮೇಶನ್ ಕೊಟ್ಟಿಸ್ಸು, ಯಾವ ಆಧರದ ಮೇಲೆ ಬರೆದ ಎಂದು ಹೇಳಲಿ ಇಲ್ಲದಿದ್ದರೆ, privilege comittee ರೆಪೋರ್ಟ್ ಕೊಡಲಿ ಆಮೇಲೆ ಆತನಿಗೆ ಏನು ಶಿಕ್ಷೆ ಕೊಡಬೇಕು ಎಂದು ನಾವು ತೀರ್ಮಾನ ಮಾಡೋಣ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಹೆಸರೂ ಇದರಲ್ಲಿ ಬಳಕೆಯಾಗಿದೆ ಅವರೂ ಕೂಡ ಇಲ್ಲಿ ಮುಖ್ಯಮಂತ್ರಿಗಳಾಗಿದ್ವರು, ನಾಯಕರಾಗಿದ್ದವರು ನಾನು ಈ ಸಮಿತಿಯ ಸದಸ್ಯ ನನಗೆ ಇರುವಂಥಹ ಯಾವುದೇ ಮಾಹಿತಿಯಲ್ಲಿ, ಆ ಸಮಿತಿ ಮುಮದೆ ಪ್ರಸ್ತಾವನೆಗಳು ಬಂದಿಲ್ಲ ಯಾರೇ ಕಾರಣರಾಗಿದ್ದರೆ, ಮಾನ್ಯ ಗುಂಡೂರಾಯರ ಜೊತೆಯಲ್ಲಿ ರಾಮಕೃಷ್ಣ ಹೆಗಡೆಯವರ ಹೆಸರನ್ನೂ ಕೂಡ ಸೇರಿಸಿ ತಾವು ಆದೇಶ ಮಾಡಬೇಕಾಗಿದೆ ಈ ರಾಜ್ಯವನ್ನು ಗೌರವಯುತವಾಗಿ ಆಡಳಿತ ಮಾಡಿ ಹೋದವರಿಗೆಲ್ಲಾ ಈ ಸ್ಥಿತಿಯಾಗಿಬಿಟ್ಟರೆ, ಈ ಸಭೆಗೆ ನಾವು ಬರುವುದು ಕಷ್ಟವಾಗುತ್ತದೆ ಸತ್ತು ಸ್ವರ್ಗ ಸೇರಿದವರ ಬಗ್ಗೆಯೆಲ್ಲಾ ನಾವು ಇಲ್ಲಿ ಕುಳಿತುಕೊಂಡು ಮಾತನಾಡಲಿಕ್ಕೆ ಶುರು ಮಾಡಿದರೆ ನಮಗೆ ಗೌರವ ಬರುವುದಿಲ್ಲ ಅದೇ ಅನ್ವಯವನ್ನು ಹೆಗಡೆಯವರ ಹೆಸರಿಗೂ ಕೂಡ ತಾವು ಮಾಡಬೇಕು privilege comittee ಗೆ ಇದು ಹೋದರೆ, ಹೆಗಡೆಯವರ ಮೇಲೆ ಆಪಾದನೆ ಮಾಡಿರುವುದನ್ನೂ ಸೇರಿಸಿ ತಾವು ರೆಫರ್ ಮಡಬೇಕು

ಶ್ರೀ ಸಿ ಬಿ ಕೃಷ್ಣಭೈರೇಗೌಡ ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಸದಸ್ಯರಾಗಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ ಮಾನ್ಯ ಸಚಿವರು ಉತ್ತರ ಕೊಡುವಾಗ ಕಾನೂನು ರೀತಿ ಸೂಕ್ತ ಕ್ರಮವನ್ನು ಕೈಗೊಳ್ಳಿ ಎಂದು ಹೇಳಿದರು ನಾಳೆ ಮಾನ್ಯ ಸಚಿವರು ಮೇಲೆಯೂ ಇಧೇ ರೀತಿಯಾಗಿ ವೃಥಾ ಆರೋಪಗಳನ್ನು ಮಾಡಿದರೆ, ಒಬ್ಬ ಸದಸ್ಯರಾಗಿ ಅವತ್ತೂ ಅವರು ಇದೇ ಮಾತನ್ನು ಹೇಳುತ್ತಾರೆಯೇ? ಎಂಬುದನ್ನು ಅವರು ಹೇಳಬೇಕಾಗುತ್ತದೆ ತಾವು ಸದಸ್ಯರಾಗಿ ನೀವು ನಿಮ್ಮ ರಕ್ಷಣೆಗೆ ಬರಬೇಕೆಂದು ತಮ್ಮನ್ನು ನಾವು ಪ್ರಾರ್ಥನೆ ಮಾಡಿಕೊಳ್ಳುವುದು ಸೂಕ್ತವಾಗಿದೆ

ಸಮಂಜಸವಾಗಿದೆ ಎನ್ನುವು ನಮ್ಮ ಅಭಿಪ್ರಾಯ ಹಾಗಾಗಿ ಸದಸ್ಯರ ರಕ್ಷಣೆಗೆ ತಾವು ಬರಬೇಕಾಗಿದೆ privilege ಆಗಿದೆ ಎಂದು ತಾವು confirm ಮಾಡಿ ಎಂದೇನೂ ನಾವು ತಮ್ಮನ್ನು ಕೇಳುತ್ತಿಲ್ಲ privilege comittee ಯವರು ಇದರ ಬಗ್ಗೆ ವಿಚಾರಣೆ ಮಾಡಲಿ ಇದರ ಹಿಂದೆ ಏನು? ಮುಂದೆ ಏನು? ಯಾರಿಂದ ಮಾಹಿತಿ ಸಿಕ್ಕಿದೆ? ಅಥವಾ ವೃಥಾ ಇವರು ಇವರನ್ನು ಬ್ಲ್ಯಾಕ್‌ಮೇಲ್ ಮಾಡುವುದಕ್ಕೋಸ್ಕರ ಇದನ್ನು ಸೃಷ್ಟಿ ಮಾಡಿ ಬರೆದಿದ್ದಾರೆಯೇ? ಯಾವುದಾದರೂ ಒಂದು ಆಚೆಗೆ ಬರಬೇಕಲ್ಲವೇ? ನಾಳೆ ಇದರಲ್ಲಿ ಸತ್ಯಾಂಶ ಏನೂ ಇಲ್ಲವೆಮದು ಹೇಳಿಬಿಟ್ಟರೆ, ಅದರಿಂದ ಸುದ್ದಿಯಾಗಿ, ಅದರಿಂದ ಆಗತಕ್ಕಂಥ ಅಪಚಾರವಾದ ನಂತರ ಸುಮ್ಮನೆ ಎಲ್ಲೋ ಒಂದು ಕಡೆ ಏನೂ ಇಲ್ಲವೆಂದು ಹೇಳಿದರೆ ಏನು ಪ್ರಯೋಜನ? ನಾವು ಸದಸ್ಯರು ಗೌರವವಾಗಿ ಸಮಾಜದಲ್ಲಿ ಬಾಳಬೇಕಾಗಿದೆ ಇವತ್ತು ಸದಸ್ಯರ ಗೌರವ ಕಾಪಾಡಬೇಕಾದಂಥಹ ಒಂದು ಜವಾಬ್ದಾರಿ ಯಮ್ಮ ಮೇಲಿದೆ ನಾವು ಕೇಳುತ್ತಿರುವುದು ಹೆಚ್ಚೇನೂ ಇಲ್ಲ privilege comittee ಗೆ ಇದನ್ನು ರೆಫರ್ ಮಾಡಿ, ಅವರು ಅದನ್ನು ವಿಚಚಾರಣೆ ಮಾಡಲಿ ಯಾರು ತಪ್ಪು ಮಾಡಿದ್ದಾರೋ ಬಿಟ್ಟಿದ್ದಾರೋ ಎಂಬುದನ್ನು ನಂತರ ವಿಚಾರಣೆ ಮಾಡೋಣ ತಾವು ನಮ್ಮ ರಕ್ಷಣೆಗೆ ಬರಲಿಲ್ಲವೆಂದರೆ ನಾಳೆ ದಿನ ಪ್ರತಿಯೊಬ್ಬ ಸದಸ್ಯರ ಮೇಲೆ ಈ ರಿತಿ ವೃದಾ ಆರೋಪಗಳು ಬೆಳೆಯುತ್ತಾ ನಿಜವಾಗಿಯೂ ನಾವು ಸದಸ್ಯರಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ದಯವಿಟ್ಟು ತಾವು 'ನಮ್ಮ ರಕ್ಷಣೆಗೆ ಬರಬೇಕು

ಶ್ರೀ ದರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಈಗಾಗಲೇ privilege ಮೇಲೆ ಮಾನ್ಯ ದಿನೇಶ್ ಗುಂಡೂರಾವ್‌ರವರು ಮತ್ತು ಮಾನ್ಯ ಕೃಷ್ಣಭೈರೇಗೌಡರು ಮಾತನಾಡಿದ್ದಾರೆ ವಿಶೇಷವಾಗಿ ಮಾನ್ಯ ರಮೇಶ್ ಕುಮಾರ್‌ರವರು ಬಹಳ ವಿವರವಾಗಿ ಹೇಳಿದ್ದಾರೆ ಇವತ್ತು ಗುಂಡೂರಾವ್ 'ರವರ ಮೇಲೆ ಮಾತ್ರವಲ್ಲ, ಮಾನ್ಯ ರಾಮಕೃಷ್ಣಹೆಗಡೆಯವರ ಮೇಲೂ ಸಹಿತ ಆಪಾದನೆ ಮಾಡಿದ್ದಾರೆ ಇಂತಹ ಒಂದು ಗುರುತರವಾದಂತಹ ಆಪಾದನೆ ಮಾಡುವುದಕ್ಕೆ ಅವರಿಗೆ ಮಹಿತಿ ಎಲ್ಲಿಂದ ಬಂತು? ಆ ಪತ್ರಕೆಗೆ ಯಾರು ಮಾಹಿತಿಯನ್ನು ಕೊಟ್ಟರು ಆ ಸದನ ಸಮಿತಿಯ ಸದಸ್ಯನಾಗಿ ಆ ಬಗ್ಗೆ ನನಗೆನೂ ಗೊತ್ತೇ ಇಲ್ಲವೆಂದು ಇವತ್ತು ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ ಸದನ ಸಮಿತಿ ಸದಸ್ಯರು ಹೇಳಿದ್ದಾರೋ

ಯಾರು ಹೇಳಿದ್ದಾರೋ? ಈ ರೀತಿಯಾಗಿ ಬೆಂಗಳುರು ಸುತ್ತ ಮುತ್ತ ಆಗಿರತಕ್ಕಂಥ ಭೂ ಕಬಳಿಕೆ ಬಗ್ಗೆ ಇವತ್ತಯ ಪ್ರಸ್ತಾಪವಾಗುತ್ತಿದೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಆ ಬಗ್ಗೆ ಹೇಳುತ್ತಿದ್ದಾರೆ ಇವತ್ತು ಸದನ ಸಮಿತಿಯನ್ನು you have constituted ಅದು ತಮ್ಮ prerogative ಇದೆ ಸದನ ಸಮಿತಿಯ ಅಧ್ಯಕ್ಷರಾದ ಮಾನ್ಯ ರಾಮಸ್ವಾಮಿಯವರು, I am answarabel to the house ಎಂದು ಹೇಳಿದ್ದಾರೆ ಸದನ ಸಮಿತಿಯ ವರದಿ ಕೊಟ್ಟಿಲ್ಲ ಸದನದಲ್ಲಿ ಅದು ಬರುತ್ತಿಲ್ಲ ಅದರ ಬಗ್ಗೆ ನಮಗೆ ಗೊತ್ತಾಗಲಿಲ್ಲ ಆದರೆ leakage ಆಗುತ್ತಿದೆ ಎಲ್ಲೆಲ್ಲೋ ಕೂಡ ರೆಪೋರ್ಟ್ ಹೋಗುತ್ತಿದೆ ಇದೆಲ್ಲದರ ಬಗೆ ವಿಸ್ತಾರವಾಗಿ ಮಾತನಾಡಬೇಕಾಗಿದೆ ಆದರೆ ಇವತ್ತು ಮಾನ್ಯ ದಿನೇಶ್ ಗುಂಡೂರಾವ್‌ರವರು ಏನೊಂದೂ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೋ ಅದನ್ನು privilege comittee ಗೆ ರೆಫೆರ್ ಮಾಡುವ ಸೂಕ್ತವಾದಂಥಹ ನಿರ್ಧಾರವನ್ನು ತಾವು ತೆಗೆದು ಕೊಳ್ಳಬೇಕು ಅದು ಆಬೇಕು ಅದು ಆದಮೇಲೆ ನಮ್ಮೆಲ್ಲರಿಗೂ ಕೂಡ ಏನಿದೆ ಎನ್ನುವುದು ಗೊತ್ತಾಗುತ್ತದೆ ಸತ್ಯಾಂಶ ಹೊರಗೆ ಬರುತ್ತದೆ

ಶ್ರೀ ಆರ್ ವಿ ದೇಶಪಾಂಡೆ privilege comittee ಗೆ ಇದನ್ನು ರೆಫೆರ್ ಮಾಡುವುದರಿಂದ ಯಾರಿಗೇನು ಹಾನಿಯಾಗುತ್ತದೆ? ಅದರಿಂದ ಸತ್ಯಾಂಶ ಹೊರಗೆ ಬರುತ್ತದೆ ಹಾಗಾಗಿ ಸರ್ಕಾರದ ಪರವಾಗಿ ಮಾನ್ಯ ಸಚಿವರು ತಕ್ಷಣ ಇದರ ಬಗ್ಗೆ ಒಪ್ಪಿಕೊಳ್ಳಬೇಕಾಗುತ್ತದೆ ಏಕೆಂದರೆ ಒಬ್ಬ ರಾಷ್ಟ್ರ ನಾಯಕರಾದಂಥಹ ರಾಮಕೃಷ್ಣ ಹೆಗಡೆಯವರು ಇರಬಹುದು, ಗುಂಡೂರಾವ್ ಇರಬಹುದು, ಅವರೆಲ್ಲರೂ ರಾಷ್ಟ್ರದ ಸೇವೆ ಮಾಡಿದ್ದಾರೆ ನಾಡಿಗೆ ಸೇವೆ ಮಾಡಿದ್ದಾರೆ ಅನವಶ್ಯಕವಾಗಿ ಅವರ ಹೆಸರನ್ನು ಮತ್ತು ಮಾನ್ಯ ದಿನೇಶ್ ಗುಂಡೂರಾವ್‌ರವರ ಹೆಸರನ್ನು ಪ್ರಸ್ತಾಪ ಮಾಡಿದಾಗ, ತಾವು ಅದನ್ನು ಕೂಡಲೇ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕಾಗಿತ್ತು ಅದರಿಂದ ಹಾನಿ ಏನಾಗುತ್ತದೆ? ಅದರಿಂದ ಸತ್ಯ ಹೊರಗೆ ಬರುತ್ತದೆ ಪ್ರಸ್‌ನವರು ಬರುತ್ತಾರೆ let them come and say, ಯಾರಿದ್ದಾರೆ, ಅಥವಾ ಯಾರಿಲ್ಲವೆಂದು ಆಗ ಸತ್ಯಾಂಶ ಹೊರಗೆ ಬರುತ್ತದೆ ಆದ್ದರಿಂದ ತಕ್ಷಣ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನಾನು ಆ ಸಮಿತಿಯ ಸದಸ್ಯನಾಗಿದ್ದೇನೆ ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ರೋಷನ್‌ಬೇಗ್‌ರವರು ಸಹ ಆ ಸಮಿತಿಯ ಸದಸ್ಯರಾಗಿದ್ದಾರೆ ಅಲ್ಲದೆ ಮಾನ್ಯ ಶ್ರೀರಾಮರೆಡ್ಡಿಯವರೂ ಸಹ ಆ ಸಮಿತಿಯಲ್ಲಿದ್ದಾರೆ ಒಂದು ಸತ್ಯ ಸಂಗತಿಯನ್ನು ಇಲ್ಲಿ ಹೇಳಬೇಕೆಂದರೆ, ಈ ವಿಚಾರಗಳು ನಮ್ಮ ಸಮಿತಿಯ ಮುಂದೆ ಬಂದಿಲ್ಲ ನಮ್ಮ ಸಮಿತಿಯ ಮುಂದೆ ಈ ವಿಚಾರ ಬಂದಿಲ್ಲ ಇದು ಸ್ಪಷ್ಟ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, I am on a point of order ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ ಸಮಿತಿಯ ವರದಿ ಇನ್ನೂ ಸದನದ ಮುಂದೆ ಮಂಡನೆಯಾಗಿಲ್ಲ ಸದನದ ಕಲಾಪಗಳ ವಿವರಗಳನ್ನು ಅವರು ಬಹಿರಂಗವಾಗಿ ಹೇಳುವ ಹಾಗಿಲ್ಲ ಸದನ ಮುಂದೆ ಯಾವಾಗ ಅದು ಬರುತ್ತದೆಂದರೆ, ತಮಗೊಪ್ಪಿಸಿ ತಾವು ನಮಗೆ ಕೊಟ್ಟು ಅದು ಸದನದ ವಸ್ತು ಆದಾಗ ಹಕ್ಕು ಬರುತ್ತದೆಯೇ ಹೊರತು ಸದನದ ಕಲಾಪಗಳ ವಿವರಗಳನ್ನು ನೀವು ಹೊರಗೆಹುವ ಹಾಗಿಲ್ಲ ಒಂದು ಬೇಳೆ ಅದು ಇರುವುದಾದರೆ ಇರಲಿ

ಶ್ರೀ ವಾಟಾಳ್ ನಾಗರಾಜ್ ಕಲಾಪಗಳ ವಿವರಗಳನ್ನು ನಾನು ಇಲ್ಲಿ ಹೇಳುತ್ತಿಲ್ಲ ಸಮಿತಿಯ ಹೆಸರು ಬಂದಾಗ, ಅದರ ಸದಸ್ಯರಾಗಿ ಇಲ್ಲಿ ಕುಳಿತಿರುವ ನಾವು ಮೌನವಾಗಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಸಮಿತಿ ಒಳ್ಳೆಯ ಕೆಲಸ ಮಾಡಿದೆ ಆ ವಿಚಾರ ಬೇರೆ ಆದರೆ ಇಲ್ಲಿ ಹೆಸರುಗಳು ಪ್ರಸ್ತಾಪವಾಗಿರುವುದ ನಮಗೂ ಕೂಡ ನೋವಾಗಿದೆ ಈ ಮಾಹಿತಿ ಯಾರಿಂದ ಬಂತು? ಏಕೆ ಬಂತು? ಎಂಬುದರ ಬಗ್ಗೆ ಸ್ಪಷ್ಟವಾಗಬೇಕಾಗಿದೆ ನಮ್ಮ ವಿಚಾರವನ್ನು ಸ್ಪಷ್ಟಪಡಿಸಿದ್ದೇವೆ ನಮ್ಮ ಸಮಿತಿಗಾಗಲಿ, ನಮಗ್ಯಾರಿಗೂ ಇದು ಗೊತ್ತಿರತಕ್ಕಂಥದ್ದಲ್ಲ ನೀವು ಹಕ್ಕುಚ್ಯುತಿ ಕೊಡುವುದು ಬಿಡುವುದು ನಿಮಗೆ ಬಿಟ್ಟ ವಿಚಾರ ನಮ್ಮ ಸಮಿತಿಯಲ್ಲಿ ಮಾತ್ರ ಈ ಹೆಸರುಗಳು ಯಾವ ರೀತಿಯಾಗಿ ಬಂತು ಎಂಬುದು ಸಮಿತಿಯ ಸದಸ್ಯರಾಗಿ ನಮಗೆ ಗೊತ್ತಿಲ್ಲ ಆದುದರಿಂದ ಸಮಿತಿ ಒಳ್ಳೆಯ ಕೆಲಸವನ್ನು ಮಾಡಿದೆ ಅದರ ಬಗ್ಗೆ ಬೇರೆ ಮಾತಿಲ್ಲ ಮೊದಲನೆಯ ವರದಿಯನ್ನು ಕೊಟ್ಟಿದ್ದೇವೆ ಎರಡನೆ ವರದಿಯನ್ನು ಕೊಡುವುದರಲ್ಲಿದ್ದೇವೆ ಈಗ ಯಾವ್ಯಾವ

ಹೆಸರುಗಳು ಬಂದಿದ್ದಾವೆ, ಇದು ಬಂದಿರುವುದನ್ನು ನೋಡಿದಾಗ ನಮಗೂ ನೋವಾಗಿದೆ ಪಾಪ ಗುಂಡೂರಾಯರು, ರಾಮಕೃಷ್ಣ ಹೆಗಡೆಯವರು ಈ ರಾಜ್ಯಕ್ಕೆ ಮಾಡಿದ ಕೆಲಸ, ಸೇವೆ, ಬಗ್ಗೆ ನಾವು ಬೇರೆ ಮಾತನಾಡು ವಂತಿಲ್ಲ ಶ್ರೀಮಾನ್ ರಮೇಶ್‌ಕುಮಾರ್ ರವರು ಕೆಂಪೇಗೌಡ ಆಸ್ಪತ್ರೆಗೆ ಕೊಟ್ಟಿದ್ದು ಹೇಳಿದರು, ಇಲ್ಲಿ ನಮ್ಮ ವಿಧಾನಸೌದದ ಮುಂದೆ ಅಂಬೇಡ್ಕರ್ ಪ್ರತಿಮೆ ಮಾಡಬೇಕಾದರೆ ಗುಂಡೂರಾಯರು ಕಾರಣರು, ಇದರಲ್ಲಿ ಬೇರೆ ಮಾತಿಲ್ಲ ಇಂಥ ವಿಚಾರಗಳಲ್ಲಿ ನಾವು ಸ್ಪಷ್ಟವಾಗಿ ಹೇಳುವಾಗ ನಾವು ಅವರ ಹೆಸರನ್ನು ತರಬೇಕೆಂದಲ್ಲ ಕೊನೆಯದಾಗಿ ನಮ್ಮ ಸಮಿತಿ ಪ್ರಾಮಾಣಿಕವಾದ ಸತ್ಯಶೋಧನೆಯನ್ನು ನಡೆಸಿದೆ, ಆ ಬಗ್ಗೆ ಬೇರೆ ಮಾತಿಲ್ಲ ಈ ಹೆಸರುಗಳಿಗೂ ನಮ್ಮ ಸಮಿತಿಗೂ ಯಾವುದೇ ಸಂಭಂದವಿಲ್ಲ, ಹಕ್ಕುಚ್ಯುತಿಗೆ ಕಳುಹಿಸಿ ನಮಗೇನಿಲ್ಲ

ಅಧ್ಯಕ್ಷರು ಮಾನ್ಯ ದಿನೇಶ್ ಗುಂಡೂರಾವ್ ಹಾಗೂ ಅನೇಕ ಹಿರಿಯ ಸದಸ್ಯರು ಹೇಳಿದ ಮಾತುಗಳನ್ನು ಕೇಳಿದ್ದೇನೆ ಸರ್ಕಾರದ ಪರವಾಗಿ ಮಾನ್ಯ ಸಚಿವರು ಹೇಳಿದ್ದನ್ನು ಕೇಳಿದ್ದೇನೆ ಈಗ ಈ ಬಗ್ಗೆ ನನ್ನ ರೂಲಿಂಗ್ ಅನ್ನು ರಿಸರ್ವ್ ಮಾಡಿದ್ದೇನೆ(ಗೊಂದಲ) ಆಯಿತು ಕುಳಿತುಕೊಳ್ಳಿ I have reserved my rulıng (ಗೊಂದಲ)I have reserved my rulıng

(ಈ ಸಮಯದಲ್ಲಿ ಕಾಂಗ್ರೆಸ್‌ನ ಕೆಲವು ಸದಸ್ಯರು ಬಾವಿಗೆ ಬಂದರು)

ಶ್ರೀ ಸಿದ್ದರಾಮಯ್ಯ ಮಾನ್ಯ ಅದ್ಯಕ್ಷರೆ, ಇದು ಸರಿಯಲ್ಲ, ರಿಸರ್ವ್ ಮಾಡುವುದಕ್ಕೆ ಹೋಗಬೇಡಿ facts are very very clear Prıma facı he has made out a case ದಯಮಾಡಿ ತಮ್ಮ ರೂಲಿಂಗ್ ಅನ್ನು ರಿಸರ್ವ್ ಮಾಡುವುದಕ್ಕೆ ಹೋಗಬೇಡಿ You refer ıt to the prıvıleges commıttee, please (ಗೊಂದಲ)

ಅಧ್ಯಕ್ಷರು ಇಲ್ಲ ಏನಾಗಿದೆ ಎಂದರೆ are you questıonıng my Rulıng? what ıs thıs? ನಾನು ತಲೆ ಮೇಲೆ ಕೂರಿಸಿಕೊಂಡು ಮಾಡಿಸುವುದಕ್ಕಾಗುತ್ತದೆಯೇ? I have to see ıt I wıll take decı- sıon I have reserved my rulıng, What ıs thıs (ಗೊಂದಲ)

Srı R V DESHAPANDE: Please refer ıt to the Prıvıleges commıttee

ಶ್ರೀ ಸಿದ್ದರಾಮಯ್ಯ ರೂಲಿಂಗ್ ಅನ್ನು ರಿಸರ್ವ್ ಮಾಡುವ ಅಗತ್ಯವಿಲ್ಲ ıt ıs your dıscretıon (ಗೊಂದಲ) It ıs the prıvılege of the Member You have to protect hıs ınterest You have to protect hıs rıght (ಗೊಂದಲ)

ಅಧ್ಯಕ್ಷರು ನಾನು ಎಲ್ಲಾ ಕೇಳಿದ್ದೇನೆ ನೋಡುತ್ತೇನೆ ರೂಲಿಂಗ್ ಕೊಡುತ್ತೇನೆ (ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಸರ್, ಮಹಾನ್ ನಾಯಕರುಗಳ ಹೆಸರಿಗೆ ಕಳಂಕ ತರವುದಾಗಿದೆ ತಾವು ತಕ್ಷಣ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು ರಾಮಕೃಷ್ಣ ಹೆಗಡೆಯವರಾಗಲಿ, ಗುಂಡೂರಾವ್ ಅವರಾಗಲಿ, ರಾಷ್ಟ್ರಮಟ್ಟದಲ್ಲಿ ಕೆಲಸ ಮಾಡಿದ ನಾಯಕರು, ರಾಜ್ಯಕ್ಕೆ ಸೇವೆ ಮಾಡಿದ್ದಾರೆ ಅವರ ಕ್ಯಾರೆಕ್ಟರ್ ಅಸಾಸಿನೇಷನ್ ಆದಾಗ ತಕ್ಷಣ ಪ್ರಿವಿಲೇಜ್ ಕಮಿಟಿಗೆ ರೆಫರ್ ಆಗಬೇಕು (ಗೊಂದಲ)

ಅಧ್ಯಕ್ಷರು ನಾನು ಎಲ್ಲವನ್ನೂ ನೋಡಬೇಕಾಗುತ್ತದೆ

ಶ್ರೀ ಧರ್ಮಸಿಂಗ್ ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ಅಧ್ಯಕ್ಷರು I have got my decısıon I have reserved my rulıng ಆದರೆ ನೀವು ಈ ರೀತಿ ಬೆದರಿಕೆ ಹಾಕಿ ಹೀಗೆ ಎಂದು ಮಾತನಾಡಬೇಡಿ It ıs not correct ನೀವು ಏನು ಮಾತನಡುತ್ತಿದ್ದೀರಿ ಗೌರವವಾಗಿ ಮಾತನಾಡಿ ಇಲ್ಲಿ 30 ವರ್ಷಗಳಿಂದ ಏತಕ್ಕೆ ಇದ್ದೀರಿ? ಏನು ಈ ರೀತಿ ಮಾತನಾಡುವುದಕ್ಕೆ ಇದ್ದೀರಾ? ತಾವು ಏನೂ ಮಾತನಾಡುತ್ತಿದ್ದೀರಿ ನಾನು ನನ್ನ ರೂಲಿಂಗ್ ಅನ್ನು ರಿಸರ್ವ್ ಮಾಡಿದ್ದೇ £ÉzÀ ª É½zÀÛÃÀ Á¬ AUÉ§ AzÀvÉª ÀÄvÀÄAqÀª ÀzÁ? No no,

this is not correct ನನಗೆ ಇರುವ ಅಧಿಕಾರದಲ್ಲಿ ರೂಲಿಂಗ್ ಅನ್ನು ರಿಸರ್ವ್ ಮಾಡಿದ್ದೇನೆ ಈ ಬಗ್ಗೆ ರೂಲಿಂಗ್ ಕೊಡುತ್ತೇನೆ I have reserved my ruling I will give my ruling today (ಗೊಂದಲ) ಈಗ ಸದನವನ್ನು ಎರಡೂವರೆ ಗಂಟೆವರೆಗೆ ಮುಂದೂಡಲಾಗಿದೆ

(ಸದನವನ್ನು ಪುನಃ ಮದ್ಯಾಹ್ನ 2 ಗಂಟೆ 20 ನಿಮಿಷಕ್ಕೆ ಸೇರುವಂತೆ ಮದ್ಯಾಹ್ನ 1 ಗಂಟೆ 35 ನಿಮಿಷಕ್ಕೆ ಮುಂದೂಡಲಾಯಿತು)

ಮತ್ತೆ ಸಭೆಯು ಮದ್ಯಾಹ್ನ 2,58 ಗಂಟೆಗೆ ಪ್ರಾರಂಭಗೊಂಡಿತು ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಕೆ ಜಿ ಬೋಪಯ್ಯ (ಮಡಿಕೇರಿ) ಮಾನ್ಯ ಅಧ್ಯಕ್ಷರೆ, ನಾನು ಪ್ರಿವಿಲೇಜ್ ಮೂವ್ ಮಾಡುತ್ತಿದ್ದೇನೆ

ಅಧ್ಯಕ್ಷರು ನೀವು ನೋಟೀಸ್ಸ್ ಕಳುಹಿಸಿಕೊಡಬೇಕಲ್ಲಾ

ಶ್ರೀ ಕೆ ಜಿ ಬೋಪಯ್ಯ ಮಾನ್ಯ ಅಧ್ಯಕ್ಷರೆ, ಇಂದು ಬೆಳಿಗ್ಗೆ ಸದನದಲ್ಲಿ ನಡೆದಂಥ ವಿಚಾರದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಕು ಇವತ್ತು ಬೆಳಿಗ್ಗೆ ದಿವಂಗತ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಗುಂಡೂರಾವ್‌ರವರ ವಿಚಾರದಲ್ಲಿ Privilege motion move ಮಾಡಿ ಆನಂತರ ಚರ್ಚೆಗಳು ಆಯಿತು ನಾನು ಆ ಜಿಲ್ಲೆಯವನಾಗಿ ಅವರ ಬಗ್ಗೆ ನಮಗೆ ಅತ್ಯಂತ ಗೌರವವಿದೆ ಅವರು ಜಿಲ್ಲೆಯ ಮೇಲೆ ಇಟ್ಟಂಥ ಅಭಿಮಾನದ ಬಗ್ಗೆ ಎರಡು ಮಾತಿಲ್ಲ ಆನಂತರ ಇಲ್ಲಿ ಏನು ಚರ್ಚೆಗಳಾದವು ಅದಕ್ಕೆ ಸರ್ಕಾರದ ವತಿಯಿಂದ ಉತ್ತರ ಬಂದ ಮೇಲೆ ಆದಂಥಹ ಘಟನೆಗಳು ಏನು ಇವೆ, ಇದು ಇಡೀ ಸದನಕ್ಕೆ ಗೌರವ ತರುವಂದಾದ್ದು ಅಲ್ಲ ನಾವು ಹಿಂದೆ ಕುಳಿತು ಕೇಳುತ್ತಿದ್ದೇವೆ ಇಲ್ಲಿ ಪ್ರಯೋಗ ಮಾಡಿದಂಥ ಕೆಲವು ಶಬ್ದಗಳು ಅಧ್ಯಕ್ಷರು, ಒಬ್ಬ ಮಾಜಿ ಪ್ರಧಾನಿಯವರ ಹೆಸರನ್ನು ಹೇಳಿ, ಅವರ ದೂರವಾಣಿಯ ಮುಖಾಂತರ ತಾವು ಕರ್ತವ್ಯವನ್ನು ನಿರ್ವಹಿಸುತ್ತೀರೆನ್ನುವಂಥಾ ಮಾತು, ಈ ಸದನದಲ್ಲಿ ಬರುವುದಾದರೆ, ಇದು ಇಡೀ ಸದನಕ್ಕೆ ಗೌರವ ತರುವಂಥಾದ್ದು ಅಲ್ಲ

ಇಲ್ಲಿ ನಾನು ಕೇಳಿದ್ದೇನೆ, ಅದನ್ನು ಹೇಳಿತ್ತಿದ್ದೇನೆ ಇಲ್ಲಿ ಒಂದು ಸಾರಿಯಲ್ಲ ಸಾಕಷ್ಟು ಬಾರಿ ಆ ಶಬ್ಧಗಳು ಪ್ರಯೋಗವಾಗಿದೆ ಇದು ಪ್ರಥಮಬಾರಿಯಲ್ಲ ಈ ರೀತಿ ಅಧ್ಯಕ್ಷರನ್ನು ಹೆದರಿಸಿ ಅವರಿಗೆ ಬೇಕಾದ ರೀತಿಯಲ್ಲಿ ತೀರ್ಮಾನ ಕೊಡಬೇಕೆನ್ನುವಂಥಾ ಒತ್ತಡವನ್ನು ತರುವಂಥಾದ್ದು ಆದರೆ ನರಾವೆಲ್ಲಾ ಸದನದಲ್ಲಿ ಏಕೆ ಕುಳಿತುಕೊಳ್ಳಬೇಕು? ಸದನದ ಎದುರು ಬೆಂಚಿನಲ್ಲಿರುವವರೇ ಅಧ್ಯಕ್ಷರಾಗಲಿ ಅವರೇ ಮಾತನಾಡಲಿ ಅಲ್ಲೆ ತೀರ್ಮಾನ ಮಡಲಿ ಇದು ಖಂಡಿತ ಈ ಸಭೆಗೆ ಶೋಭೆ ತರುವಂಥಾದ್ದು ಅಲ್ಲ ಆ ಶಬ್ಧವನ್ನು ಯಾರು ಪ್ರಯೋಗ ಮಾಡಿದ್ದಾರೆ ಅದು ಖಂಡಿತ ಸದನದ ಹಕ್ಕುಚ್ಯುತಿ ಯಾಗುತ್ತದೆ ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯವಿದೆ ಇದು ಪ್ರಥಮಬಾರಿಯಲ್ಲ

ಅಧ್ಯಕ್ಷರು ıf you want to move, send notıce

ಅಧ್ಯಕ್ಷರು ಈಗ ಗಮನೆ ಸೆಳೆಯುವ ಸೂಚನೆಗಳನ್ನು ತೆಗೆದು ಕೊಳ್ಳೋಣ

ಶ್ರೀ ಕೆ ಶ್ರೀನಿವಾಸ ಗೌಡ front bench ನಲ್ಲಿ ಒಬ್ಬರೂ ಇಲ್ಲ ಯಾರಿಗೆ ಗಮನ ಸೆಳೆಯೋಣ ಸ್ವಾಮಿ

ಅಧ್ಯಕ್ಷರು ಬರುತ್ತಾರೆ, ಬರುತ್ತಾರೆ

ಶ್ರೀ ಆರ್ ವಿ ದೇಶಪಾಂಡೆ 9 ಖಾಲಿ ಕುರ್ಚಿಗಳಿವೆ

ಶ್ರೀ ಸಿದ್ದರಾಮಯ್ಯ ಇಲ್ಲಿ ಹಾಜರಿರುವ ರಾಮಚಂದ್ರಗೌಡರು ಅಪ್ಪರ್ ಹೌಸನದವರು

ಅಧ್ಯಕ್ಷರು ಮಂತ್ರಿಗಳನ್ನು ಕರೆಸೋಣ

ಶ್ರೀ ಆರ್ ವಿ ದೇಶಪಾಂಡೆ 9 ಖಾಲಿ ಕುರ್ಚಿಗಳಿವೆ ಮಂತ್ರಿಗಳನ್ನು ಕರೆಸಿ ಫಿಲ್‌ಅಪ್ ಮಾಡಿ

ಅಧ್ಯಕ್ಷರು ಆಯಿತು, ಕರೆಸುತ್ತೇನೆ ಕುಳಿತುಕೊಳ್ಳಿ

ಶ್ರೀ ಸಿದ್ದರಾಮಯ್ಯ ಮುಂದುಗಡೆ ಸಾಲಿನಲ್ಲಿ ಒಬ್ಬರೂ ಇಲ್ಲವಲ್ಲ

ಅಧ್ಯಕ್ಷರು ಉಪ ಮುಖ್ಯಮಂತ್ರಿಗಳು ಬಂದರಲ್ಲ ಮಾಧು ಸ್ವಾಮಿಯವರೇ, ನೀವು ಪ್ರಸ್ತಾಪ ಮಾಡಿ ಧ್ರುವನಾರಾಯಣ್‌ರವರೇ, ಮಾಧುಸ್ವಾಮಿವರು ಒಂದು ಮೀಟಿಂಗ್‌ಗೆ ಹೋಗಬೇಕಂತೆ ಮೊದಲು ಅವರು ಪ್ರಸ್ತಾಪ ಮಾಡಲಿ ನಂತರ ನಿಮಗೆ ಅವಕಾಶ ಕೊಡುತ್ತೇನೆ

ಗಮನ ಸೆಳೆಯುವ ಸೂಚನೆಗಳು

ವಿಷಯ "ಸಲ್ಪರು" ಜನಾಂಗಕ್ಕೆ ಸೇರಿದದವರಲ್ಲಿ ಕೆಲವರು 1ಎ ಪ್ರವರ್ಗಕ್ಕೆ ಮತ್ತು ಇನ್ನು ಕೆಲವು 3ಎ ಪ್ರವರ್ಗಕ್ಕೆ ಸೇರಿರುವುದರಿಂದ ತಾರತಮ್ಯ ಉಂಟಾಗಿದ್ದು ಇವರನ್ನು 1 ಎ ಪ್ರವರ್ಗಕ್ಕೆ ಸೇರಿಸುವ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ 2-3 ಜಿಲ್ಲೆಗಳಲ್ಲಿ ಸಲ್ಪರು ಎನ್ನುವ ಒಂದು ಜನಾಂಗವಿದ್ದು, ಇವರನ್ನು 2-3- ಹೆಸರುಗಳಲ್ಲಿ ಕರೆಯುತ್ತಿದ್ದು, ಸಲ್ಪರು, ಸರ್ಪಒಕ್ಕಲಿಗರು ಮುಂತಾದ ಹೆಸರುಗಳಲ್ಲಿ ಕರೆಯುತ್ತಿದ್ದು, ಒಂದೇ ಮನೆಯಲ್ಲಿರುವವರನ್ನೇ ಅವರಿಗೆ ಸಂಬಂಧಪಟ್ಟವರನ್ನೇ ಸಲ್ಪರು ಎಂದು ಶಾಲೆಗೆ ಸೇರಿಸಿದರೆ ಅವರು ಪ್ರವರ್ಗ 1ಎ ನಲ್ಲಿ ಬರುತ್ತಿದ್ದಾರೆ ಅಕಸ್ಮಾತ್ ಯಾರಾದರು ಸರ್ಪ ಒಕ್ಕಲಿಗ ಎಂದು ಬರೆದರೆ ಅವರು ಪ್ರವರ್ಗ 3 ಬಿ ಅಥವಾ 3ಎ ಪ್ರವರ್ಗದಲ್ಲಿ ಬರುತ್ತಿದ್ದಾರೆ ನಮ್ಮ ತಾಲ್ಲುಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಆ ಕೆಟಗರಿಯಲ್ಲಿ ಆರಿಸಿ ಬಂದಿದ್ದಾರೆ ಈ ಕೆಟಗರಿಯಲ್ಲೂ ಆರಿಸಿ ಬಂದು ತಾರತಮ್ಯ ಸೃಷ್ಟಿಯಾಗಿದ್ದು ಅದು ನಿವಾರಣೆಯಾಗಬೇಕು ಈ ಬಗ್ಗೆ ಸನ್ಮಾನ್ಯ ಸಚಿವರ ಗಮನವನ್ನು ನಾನು ಸೆಳೆಯುತ್ತಿದ್ದೇನೆ

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ದಿನಾಂಕ 1-5-1979, 13-10-1986 ಮತ್ತು 30-3-2002ರ ಆದೇಶಗಳಲ್ಲಿ ಸರ್ಪ ಒಕ್ಕಲಿಗರನ್ನು ಒಕ್ಕಲಿಗೆ ಉಪಜಾತಿಗೆ ಸೇರಿಸಲಾಗಿದೆ ವೆಂಕಟಸ್ವಾಮಿ ಆಯೋಗದ ವರದಿಯ ಪ್ರಕಾರ 1984 ರಲ್ಲಿ ಸರ್ಪ ಒಕ್ಕಲಿಗರನ್ನು ಒಕ್ಕಲಿಗ ಜಾತಿಯ ಪರ್ಯಾಯಪದ/ ಉಪಜಾತಿಯೆಂದು ಗುರುತಿಸಲಾಗಿದೆ ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿ ಸಲ್ಪರು ಜಾತಿಯನ್ನು ಪ್ರವರ್ಗ 1 ರಲ್ಲಿ ಸೇರಿಸಲಾಗಿದೆ ಸರ್ಕಾರ ಆದೇಶ ದಿನಾಂಕ 17-09-1994, 30-3-2002 ರ ಪ್ರಕಾರ ಸರ್ಪಒಕ್ಕಲಿಗ ಪ್ರವರ್ಗ 3ಎಕ್ಕೆ ಸೇರಿರುತ್ತದೆ ಸರ್ಪಒಕ್ಕಲಿಗ ಜನಾಂಗದವರು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಲ್ಪರು ಸರ್ಪಒಕ್ಕಲಿಗರು ಒಂದೇ ಜಾತಿಗೆ ಸೇರಿದವರೆಂದು ದಾಖಲೆಗಳ ಸಮೇತ ಮನವಿಯನ್ನು

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮುಂದೆ ಸಲ್ಲಿಸಿದರೆ, ಆಯೋಗವು ಅದನ್ನು ಪರಿಶೀಲನೆ ಮಾಡಿ ಈ ಎರಡು ಜಾತಿಗಳು ಒಂದೇ ಎಂಬ ಬಗ್ಗೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು/ವರದಿ ಮಾಡಿದಲ್ಲಿ ಸರ್ಕಾರ ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬಹುದು ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ನನ್ನ ಬಳಿಯಿರುವ ದಾಖಲೆಗಳನ್ನೆಲ್ಲ ತಮ್ಮ ಕಡೆಗೆ ಕೊಟ್ಟುಬಿಡುತ್ತೇನೆ ಅವರು ಎಷ್ಟುಸಲ ಈ ಆಯೋಗದ ಮುಂದೆ ಹೋಗಿದ್ದಾರೆ ಏನೇನು ದಾಖಲೆಗಳನ್ನು ಕೊಟ್ಟಿದ್ದಾರೆ 1986 ರಿಂದ ಹಿಡಿದು ಈ ವರೆಗೆ ಇವರ ಹಿನ್ನೆಲೆ ಏನು? 1918ನೇ ಇಸವಿಯಲ್ಲಿ ಏನು ನಿರ್ಭಯವಾಗಿತ್ತು ಈ ಎಲ್ಲ ದಾಖಲೆಗಳಿವೆ ಒಕ್ಕಲಿಗ ಎನ್ನುವುದು ಜಾತಿಯ ಹೆಸರಲ್ಲ ಅದೊಂದು ಕಸುಬಿನ ಹೆಸರು ಲಿಂಗಾಯತರನ್ನೂ ಕೂಡ ಒಕ್ಕಲಿಗರು ಎಂದೇ ಕರೆಯುತ್ತಾರೆ ಹಳ್ಳಿಗಳಲ್ಲಿ ವ್ಯವಸಾಯವನ್ನು ಮಾಡಿಕೊಂಡು ಬಂದಿರುವ ಜನರನ್ನು ಒಕ್ಕಲಿಗರು ಎಂದು ಕರೆಯುತ್ತಾರೆ ಆದರೆ, ಲಿಂಗಾಯಿತರು ಎನ್ನುವುದೂ ಒಂದು ಜಾತಿಯಲ್ಲ ಅದೊಂದು occupation ಆ occupation ಮಾಡಿಕೊಂಡಿರುವುದರಿಂದ ಇವರನ್ನು ತಾವು ಒಕ್ಕಲಿಗ ಉಪಜಾತಿಗೆ ಸೇರಿಸಲು ಆಗುವುದಿಲ್ಲ ಇವತ್ತಿವರೆಗೆ ಆಕಸ್ಮಿಕವಾಗಿ ಒಂದೆರಡು ಮದುವೆಯಾಗಿರುವುದು, ಮತ್ತೊಂದು ಬಿಟ್ಟರೆ, ಒಕ್ಕಲಿಗರು ಮತ್ತು ಸಲ್ಪರು ಹಾಗೂ ಸರ್ಪಒಕ್ಕಲಿಗರಲ್ಲಿ ಸಂಭದಗಳು ಬೆಳೆದಿಲ್ಲ ಅಥವಾ ನಡವಳಿಕೆಗಳಾಗಲೀ ಇಲ್ಲವೇ ಇಲ್ಲ ಹೀಗಿರುವಾಗ ಅದನ್ನು ಒಕ್ಕಲಿಗ ಉಪಜಾತಿ ಎಂದು ಏಕೆ ಸೇರಿಸಿದರೋ ಗೊತ್ತಿಲ್ಲ ಅದನ್ನು ಮಾಡಬೇಕಾದರೆ ನೀವು ಕೈಬಿಟ್ಟು ಬಿಟ್ಟಿರಿ 1986ರಲ್ಲಿ ಕೈಬಿಟ್ಟಿರಿ ಆಮೇಲೆ 1994 ರಲ್ಲಿ ಕೈಬಿಟ್ಟಿರಿ ಆ ಜನಾಂಗದವರು association ಮಾಡಿಕೊಂಡು ಅದೆಲ್ಲವನ್ನೂ ಮನವಿ ಮಾಡಿದ್ದಾರೆ ನಾವು ಏಕೆ ಆ ಜನಾಂಗಕ್ಕೆ ಬರುತ್ತೇವೆ ಎಂದು ಹೇಳಿದ್ದಾರೆ ಹೆಚ್ ವಿ ನಂಜುಡಯ್ಯನವರ ಅಧ್ಯಕ್ಷತೆಯಲ್ಲಿ ಆದ ಸಮಿತಿಯ ವರದಿಯ ವಾಲ್ಯೂಮ್ ನಂ 4 ಅನ್ನು ನೋಡಿ ಅನಂತಕೃಷ್ಣ ಅಯ್ಯರ್‌ರವರು ಅವರನ್ನು ಏಕೆ ಕೆಟಗರೈಸ್ ಮಾಡಿದರು ಎನ್ನುವ ಮಾಹಿತಿಯಿಂದ ಹಿಡಿದು ಎಲ್ಲವನ್ನೂ ನಿಮ್ಮ ಸರ್ಕಾರಕ್ಕೆ ಮತ್ತು ನಿಮ್ಮ ಆಯೋಗಕ್ಕೆ ಅವರು ಮನವಿಗಳನ್ನು ಕೊಟ್ಟಿದ್ದಾರೆ ನಿಮ್ಮ ತಾಪತ್ರಯವೇನು ಎಂದು ಇವತ್ತಿನವರೆಗೆ ಅವರನ್ನು ಕೇಳುವರಿಲ್ಲ ಈ

ಬಗ್ಗೆ ನಾನು ವಾಟಾಳ್‌ರವರಿಗೆ ಹೇಳುತ್ತಿದ್ದಾಗ, ಅವರು ರಾಜಕೀಯವಾಗಿ ಏನಾದರೂ ಆಗುತ್ತದೆಯೇ ಎಂದು ಕೇಳಿದರು ಏಕೆಂದರೆ, ಇಡೀ ರಾಜ್ಯದಲ್ಲಿ ಅವರ ಜನಸಂಖ್ಯೆ ಇರುವುದು 30,000 ಅದರಲ್ಲಿ 16,000 ಜನ ಚಿಕ್ಕನಾಯಕನ ಹಳ್ಳಿಯಲ್ಲಿಯೇ ಇದ್ದಾರೆ ಹಾಗಾಗಿ ಇವತ್ತು ಅದನ್ನು ನಾವು ಕೇಳಲೇಬೇಕಾಗಿದೆ ಅವರು ಚಿತ್ರದುರ್ಗದಲ್ಲೂ ಇರುವುದರಿಂದ ಈ ಬಗ್ಗೆ ಉಮಾಪತಿಯವರಿಗೂ ಕಳಕಳಿ ಇದೆ ಇದರಲ್ಲಿ ಎಲ್ಲೋ ಒಂದು ಕಡೆ ತಪ್ಪಾಗಿದೆ ಅವರು ವಾಸ ಮಾಡುತ್ತಿರುವ ಸ್ಥಿತಿ, ಅವರು ಮಾಡುತ್ತಿರುವ ಕಸುಬು, ಅವರಿರುವ ಸ್ಥಾನ ಇವೆಲ್ಲವುಗಳನ್ನು ನಾವು ನಿಮಗೆ ಬಹಳ ಸಲ ಎಕ್ಸ್‌ಪ್ಲೈನ್ ಮಾಡಿದ್ದು ಏನೂ ಮಾಡದಿದ್ದುದರಿಂದ ಇದನ್ನು ನಾವು ಈ ಶಾಸನ ಸಭೆಯಲ್ಲಿ ಹೇಳುತ್ತಿದ್ದೇವೆ ದಯಮಾಡಿ ತಾವು ಅವರ ಮನವಿಯನ್ನು ಸ್ವೀಕಾರ ಮಾಡಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು ಸಲ್ಲರು ಎಂದು ಹೇಳಿ ಈಗಾಗಲೇ ಶಾಲೆಗೆ ಸೇರಿಸಿದವರಿಗೆಲ್ಲಾ ಪ್ರವರ್ಗ 1ಎ ನಲ್ಲಿ educationally reservation ಕೊಟ್ಟು ಬಿಟ್ಟಿದ್ದಾರೆ appointment ಗೆ ಬಂದಾಗ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ educationally ಅವರನ್ನು ನೀವು consider ಮಾಡಿದ್ದೀರಿ ಅದನ್ನೇ ನೀವು ಮುಂದುವರೆಸಿ ಕೊಂಡು ಹೋಗಬೇಕು ಎಲ್ಲಾ ಕಾರಣಕ್ಕೂ ಅವರನ್ನು ಪ್ರವರ್ಗ 1ಎ ನಲ್ಲಿ ತರಲೇಬೇಕು ಎಂದು ಒತ್ತಾಯ ಮಾಡುತ್ತೇನೆ ಆ ಬಗ್ಗೆ ತಾವು ಖಚಿತವಾದ ಒಂದು ಸ್ಪಷ್ಟೀಕರಣವನ್ನು ನೀಡಬೇಕು

ಶ್ರೀ ಕೆ ಶ್ರೀನಿವಾಸ ಗೌಡ ನಮ್ಮ ಸದನದಲ್ಲಿ ಸರ್ಪಒಕ್ಕಲಿಗ ಜನಾಂಗಕ್ಕೆ ಸೇರಿದ ಒಬ್ಬರು ಶಾಸಕರಿದ್ದಾರೆ ಜಾರಕಿಹೊಳಿಯವರ ಭಾರೀ ಸ್ನೇಹಿತರು ಅವರು ಅವರೇ ಈ ವಿಷಯವನ್ನು ಕೇಳಲಿಲ್ಲ ನಮ್ಮ ಮಾಧುಸ್ವಾಮಿಯವರಿಗೆ ಈ ಬಗ್ಗೆ ಬಹಳ ಇಂಟರೆಸ್ಟ್ ಬಂದಿರುವುದು ನಿಜವಾಗಲೂ ಸಂತೋಷ ಧರ್ಮೇಗೌಡರು ಈಗ ಸದನದಲ್ಲಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಶಾಸನ ಸಭೆಯಲ್ಲಿ ಆಯಾ ತಾಲ್ಲೂಕಿನಲ್ಲಿದ್ದೇ ಮಾತನಾಡಬೇಕು, ಆಯಾ ಕ್ಷೇತ್ರದ್ದೇ ಮಾತನಾಡಬೇಕು, ಆಯಾ ಜಾತಿಯವರೇ ಅದನ್ನು ಮಾತನಾಡಬೇಕು ಎನ್ನುವ ಬಾವನೆಗಳನ್ನು ಬರಬಾರದು

ಶ್ರೀ ಕೆ ಶ್ರೀನಿವಾಸ ಗೌಡ ಒಬ್ಬ ಶಾಸಕರೂ ಕೂಡ ಇಲ್ಲದಿದಾರೆ ಎನ್ನುವುದಕ್ಕಾಗಿ ಹೇಳಿದೆ ಆ ಜನಾಂಗ ಒಬ್ಬ ಶಾಸಕರೂ ಇದ್ದಾರೆ ಎನ್ನುವುದು ಈಗ ಈ ಸದನಕ್ಕೆ ತಿಳಿಯಿತಲ್ಲವೇ? ಅವರು, ಇದ್ದಿದ್ದರೆ ಅವರನ್ನೇ ಮಾತನಾಡಿಸಬಹುದಿತ್ತಲ್ಲವೇ? ಅವರು ಈಗ ಇಲ್ಲಿದ್ದರೆ, ಮಾತನಾಡಿ ಎಂದು ನಾನೇ ಅವರಿಗೆ ಹೇಳುತ್ತಿದ್ದೆ

ಶ್ರೀ ಜೆ ಸಿ ಮಾಧುಸ್ವಾಮಿ ಗಮನ ಸೆಳೆಯುವ ಸೂಚನೆಯಲ್ಲಿ ನೀವು ಈ ರೀತಿ ಎದ್ದರೆ ಹೇಗೆ? ಇದರ ಬಗ್ಗೆ ಒಂದು ಪರಿಶೀಳನೆಯನ್ನು ಮಾಡಿಸಬೇಕು ಅವರ ಮನವಿಯನ್ನು ಕೇಳಬೇಕು ನಾನು ಕೇಳಲಿಕ್ಕೆ ಕಾರಣ ಅವರ ಒಟ್ಟು 32–33 ಸಾವಿರ ಜನರಲ್ಲಿ 24,444 ಜನ ತುಮಕೂರು ಜಿಲ್ಲೆಯಲ್ಲಿಯೇ ಇದ್ದಾರೆ ಅದರಲ್ಲಿ 15–16 ಸಾವಿರ ಜನ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿದ್ದಾರೆ

ಶ್ರೀ ಸಿದ್ದರಾಮಯ್ಯ ಜಾತಿ ಆದಾರದ ಸರ್ವೆ ಆಗಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಸರ್ವೆ ಆಗಿದೆ 2001 ರ ಸರ್ವೆಯಲ್ಲಿ ಅವರೆಲ್ಲ ಸಲ್ಪರು ಎಂದು ಬರೆಸಿಕೊಂಡ ಮೇಲೇಯೇ ನಾನು ಇಲ್ಲಿ ರೈಸ್ ಮಾಡುತ್ತಿರುವುದು ಸರ್ವೆ ಆಗಿದೆ ಸಿದ್ದರಾಮಯ್ಯನವರೇ ಇಲ್ಲಿದೆ ತೆಗೆದುಕೊಳ್ಳಿ

ಶ್ರೀ ಸಿದ್ದರಾಮಯ್ಯ ಜಾತಿವಾರು ಸೆನ್ಸಸ್ ಆಗಿಲ್ಲ 1935 ನೇ ಇಸವಿಯ ನಂತರ ಜಾತಿವಾರು ಸೆನಸ್ಸ್ ಆಗಿಲ್ಲ ಎಸ್ ಸಿ /ಎಸ್ ಟಿ ಬಿಟ್ರೆ ಬೇರೆ ಯಾವುದೂ ಕೂಡ ಅಂದರೆ backward communities ಆಗಲೀ other communities ಯಾವುದು ಜಾತಿವಾರು ಸೆನ್ಸಸ್ ಆಗಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ತಾವು ಸ್ವಲ್ಪ ದೂರದಲ್ಲಿದ್ದಿರಿ ನಮ್ಮಲ್ಲಿಯೇ ದೊಡ್ಡ ಜಿಜ್ಞಾಸೆಯಗಿದೆ ನಾವು ಹಿಂದೂಗಳು ಎಂದು ಬರೆದುಕೊಳ್ಳಬೇಕೇ ಅಥವಾ ವೀರಶೈವರು ಎಂದು ಬರೆದುಕೊಳ್ಳಬೇಕೇ ಎಂದು ಜಿಜ್ಞಾಸೆಯಾಗಿ, 7–8 ಕಲಂ ಅನ್ನು ಗೊಂದಲಕ್ಕೆ ಸೃಷ್ಟಿ ಮಾಡಿ 2001 ಸೆನಸ್ಸ್‌ನಲ್ಲಿ ನೀವು ಹೀಗೆಯೇ ಬರೆಸಬೇಕೆಂದು ಎಲ್ಲಾ ಜಾತಿಯವರೂ ಸೂಚನೆಗಳನ್ನು

ಕೊಟ್ಟುಬಿಟ್ಟದ್ದಾರೆ ನಮ್ಮಲ್ಲಿಯೇ ಹೇಳುವುದಾದರೆ, ಚಿದಾನಂದಮೂರ್ತಿಗಳು ನಾವು ಹಿಂದೂಗಳು ಎಂದು ಹೇಳಿದ್ದಾರೆ ವೀರಶೈವ ಮಹಾಸಭಾದವರು ನಾವು ವೀರಶೈವರು ಎಂದು ಬರೆಸಬೇಕೆಂದು ಹೇಳಿದ್ದಾರೆ ರಾಜ್ಯದಲ್ಲಿ ಇಡೀ ಜನಾಂಗಕ್ಕೆ ಸೂಚನೆ ಕೊಟ್ಟಿದ್ದಾರೆ ಜಾತಿವಾರು ಸೆನಸ್ಸ್ ಆಗಿಲ್ಲ ಎಂದು ನೀವು ಹೇಳಬಾರದು

ಶ್ರೀ ಸಿದ್ದರಾಮಯ್ಯ ಇಲ್ಲ ಆಗಿಲ್ಲ

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ ಜಾತಿಯಲ್ಲ, ಧರ್ಮ

ಶ್ರೀ ಜೆ ಸಿ ಮಾಧುಸ್ವಾಮಿ ಧರ್ಮದ ನಂತರ ಜಾತಿ ಎಂದಿರುತ್ತದೆ ಅದರ ಕೆಳಗೆ ಜಾತಿ ಎಂದಿರುತ್ತದೆ ನಾನು ತಿಳಿವಳಿಕೆ ಇಟ್ಟುಕೊಂಡೇ ಇಲ್ಲಿ ಮಾತನಾಡುತ್ತಿದ್ದೇನೆ

ಶ್ರೀ ಸಿದ್ದರಾಮಯ್ಯ. ನಿಮ್ಮದು argument ಆಯಿತು

ಶ್ರೀ ಜೆ ಸಿ ಮಾಧುಸ್ವಾಮಿ argument ಅಲ್ಲ ನಾನು ನನ್ನ ಹತ್ತಿರ ಇರುವ ಮಾಹಿತಿಯನ್ನು ನಿಮಗೆ ಕೊಡುತ್ತೇನೆ

ಶ್ರೀ ಸಿದ್ದರಾಮಯ್ಯ I am not dısputıng you ತಾವು ಏನು ಅಂಕಿ ಅಂಶಗಳನ್ನು ಹೇಳುತ್ತಿದ್ದಿರಿ

ಶ್ರೀ ಜೆ ಸಿ ಮಾಧುಸ್ವಾಮಿ ನೀವುdıspute ಮಾಡಿ, ಸಮತೋಷ ಅದರಿಂದ ನನಗೇನಾಗಬೇಕು ನನ್ನ ಹತ್ತಿರ ಒಂದು ಮಾಹಿತಿ ಇದೆ Statement showıng the census relatıng to salpar communıty sarpa vokkalıga ın Karnataka state ಎನ್ನುವ ಒಂದು ದಾಖಲೆ ನನ್ನ ಹತ್ತಿರ ಇದೆ ಅದು ಸರಿಯೋ ತಪ್ಪೋ ಎನ್ನುವುದನ್ನು ನೀವು ಹೇಳಬೇಕು ಅದರ ಪ್ರಕಾರ ಚಿಕ್ಕನಾಯಕನ ಹಳ್ಳಿಯಲ್ಲಿ 39 ಹಳ್ಳಿಗಳಲ್ಲಿ 2,080 ಕುಟುಂಬಗಳಿವೆ 16928 ಜನಸಂಖ್ಯೆಯಿದ್ದಾರೆ ಎಜುಕೇಟೆಡ್ 60 ಜನರಿದ್ದಾರೆ, ಗ್ರಾಜುಯೇಟ್ಸ್ 23 ಜನರಿದ್ದಾರೆ ನನ್ನ ಹತ್ತಿರ ಮಾಹಿತಿ

ಇದೆ ಅದರ ಆಧಾರ ಮೇಲೆ ನಾನು ಮಾತನಾಡುತ್ತಿದ್ದೇನೆ it may be authenticated ಗುಬ್ಬಿಯಲ್ಲಿ 14 ಹಳ್ಳಿಗಳಲ್ಲಿ 348 ಕುಟುಂಬಗಳಿವೆ 2,312 ಜನಸಂಖ್ಯೆ ಇದೆ ಚಿತ್ರದುರ್ಗದ ಚೆಳ್ಳಕೆರೆಯಲ್ಲಿ 15 ಕುಟುಂಬಗಳು ಮಾತ್ರ ಇದೆ 80 ಜನರಿದ್ದಾರೆ ಹೊಸದುರ್ಗದಲ್ಲಿ 401 ಕುಟುಂಬಗಳಿದ್ದು, 3013 ಜನಸಂಖ್ಯೆ ಇದೆ ಚೆಳ್ಳಕೆರೆಯಲ್ಲಿ 15 ಫ್ಯಾಮಿಲಿ ಇದ್ದು 80 ಜನ ಮಾತ್ರವಿದ್ದಾರೆ ಹೊಸದುರ್ಗದಲ್ಲಿ 3,013 ಪಾಪ್ಯುಲೇಷನ್ ಇದೆ, 401 ಫ್ಯಾಮಿಲಿಗಳು ಇವೆ ಈ ಮಾಹಿತಿ ಜನರಲ್ ಸೆನ್ಸ್‌ಸ್ ನಲ್ಲಿ ಆಗಿರುವಂಥಾದ್ದು ಹಾಸನದಲ್ಲಿ ಕೂಡ ಈ ಜಾತಿಯವರು ಇದ್ದಾರೆ ಹೊಳಲ್ಕೆರೆಯಲ್ಲಿ 47 ಫ್ಯಾಮಿಲೀಸ್ ಇವೆ 339 ಜನಸಂಖ್ಯೆ ಇದೆ ಹಾಸನದ ಅರಸೀಕೆರೆಯಲ್ಲಿ ಮಾತ್ರ 182 ಫ್ಯಾಮಿಲಿ ಇದ್ದು 1430 ಜನಸಂಖ್ಯೆ ಇದೆ ಹಾಸನದಲ್ಲಿ 2 ಸಂಸಾರವಿದ್ದು 10 ಜನ ಮಾತ್ರ ಇದ್ದಾರೆ ಈ ಮಾಹಿತಿಯನ್ನು ಕೊಟ್ಟಿರುವುದರಿಂದ ನಾನು ಮಾತನಾಡುತ್ತಿದ್ದೇನೆ ಸನ್ಮಾನ್ಯ ಸಚಿವರು ಈ ಕಡೆಗೆ ಸ್ವಲ್ಪ ಗಮನ ಹರಿಸಬೇಕು ಇವರು ಬಹಳ ಹಿಂದುಳಿದ ಜನಾಂಗ ಇವತ್ತೂ ನಾವು ಸಲ್ಪರ ಕೇರಿ ಎಂದು ಕರೆಯುತ್ತೇವೆ ಇವತ್ತೂ ನಾವು ಅವರನ್ನು ಸರ್ಪ ಒಕ್ಕಲಿಗರೆಂದು ಕರೆಯುವುದಿಲ್ಲ ಚಿಕ್ಕನಾಯಕನ ಹಳ್ಳಿಗೆ ಬಂದು ನೋಡಿ ಅಲ್ಲಿ ಅವರನ್ನು ನಾವು ಅಲ್ಪರ ಕೇರಿ ಎಂದು ಹೇಳುತ್ತೇವೆ ಅವರನ್ನು ನಾವು ಮುಂದುವರಿದವರೆಂದು ಟ್ರೀಟ್ ಮಾಡುವುದರಲ್ಲಿ ಅರ್ಥವಿಲ್ಲ ದಯಮಾಡಿ ಅವರನ್ನು ಪ್ರವರ್ಗ 1ಎಗೆ ಸೇರಿಸಲಿಕ್ಕೆ ತಾವು ಮನಸ್ಸು ಮಾಡಬೇಕು

ಶ್ರೀ ಸಿದ್ದರಾಮಯ್ಯ ಈಗ ಮಾಧುಸ್ವಾಮಿಯವರು ಹೇಳಿದ ಹಾಗೆ ಆ ಜನಾಂಗದವರನ್ನು ಪ್ರವರ್ಗ 1ಎ ಗೆ ಸೇರಿಸಲಿಕ್ಕೆ ನಮ್ಮದೇನೂ ವಿರೋಧವಿಲ್ಲ ಅವರು ಯಾವುದಕ್ಕೆ ಬೇಕೋ ಸೇರಿಸಿಕೊಳ್ಳಲಿ ನಮ್ಮ ದೇನೂ ತಕರಾರಿಲ್ಲ ಆದರೆ ಜಾತಿವಾರು ಸೆನ್ಸಸ್ ಆಗಿದೆ ಎಂದು ಏನಿದೆ ಅದು ಆಗಿಲ್ಲವೆಂದೇ ಸುಪ್ರೀಂಕೋರ್ಟ್‌ನಲ್ಲಿ ಹಿಂದುಳಿದ ವರ್ಗದವರ ಜಾತಿಯವರ ಬಗ್ಗೆ ಸರಿಯಾದ ರೀತಿಯಲ್ಲಿ ಅಂಕಿ-ಅಂಶಗಳಿಲ್ಲ ಎಷ್ಟು ಜನರಿದ್ದಾರೆ ಅವರೆಷ್ಟು ಸಂಕ್ಯೆಲ್ಲಿದ್ದಾರೆ ಅನ್ನತಕ್ಕಂಥದ್ದರಲ್ಲಿ ನೀವು 27% ಅನ್ನು ಯಾವ ಆಧಾರದ ಮೇಲೆ ಮೀಸಲಾತಿ ಕೊಟ್ಟಿರಿ? ಎಂದು Supreme Court ನಲ್ಲಿ IIM, ITI ಗಳಲ್ಲಿ ಮೀಸಲಾತಿಗೆ stay ಕೊಟ್ಟಿರುವುದೇ ಆ ಆಧಾರದ ಮೇಲೆ ಅದಕ್ಕೆ ಬಜೆಟ್‌ನಲ್ಲಿ ಜಾತಿವಾರು census

ಆಗಬೇಕೆಂದು ರಾಜ್ಯ ಸರ್ಕಾರದಿಂದ 2 ಕೋಟಿ ರೂ 21 ಕೋಟಿ ರೂ ಕೇಂದ್ರ ಸರ್ಕಾರದಿಂದ ಒಟ್ಟು 23 ಕೋಟಿ ರೂ ಹಣ ಇಡಲಾಗಿದೆ It is lying with the permanent backward class commission ಆ permanent backward class commission ಜಾತಿವಾರು censes ಅನ್ನು ಇವತ್ತಿನವರೆಗೆ ಮಾಡಲಿಕ್ಕಾಗಲಿಲ್ಲ ಅದರಿಂದ ಆ ಅಂಕಿ ಅಂಶಗಳನ್ನು ನಿಮಗೆ ಯಾವ ಆಧಾರದ ಮೇಲೆ ಕೊಟ್ಟಿದ್ದಾರೆಯೋ I do not know

ಶ್ರೀ ಜೆ ಸಿ ಮಾದುಸ್ವಾಮಿ ಜಾತಿವಾರು census ಆಗಿಲ್ಲವೆನ್ನುವುದು ಗೊತ್ತು ಆದರೆ, ಅಲ್ಲಿರುವ ಕಾಲಂ ನಂ 7, 8 ಏನಿದೆ, ನೀವು ಹೀಗೆ ಬರೆಸಿಕೊಳ್ಳಿ ಎಂದು ಎಲ್ಲಾ ಜಾತಿಯವರೂ ಆಯಾ ಜಾತಿಗೆ instruction ಕೊಟ್ಟಿರುವುದು ಸತ್ಯ ಅವರು ಮಾಡಿರುವುದು offical ಆಗಿಲ್ಲ ಹಾಗಾಗಿ ಈ association ನಲ್ಲಿ ಎಲ್ಲಾ ಬಂದು ಟೂರ್ ಮಾಡಿದ್ದಾರೆ ಇಡೀ ರಾಜ್ಯದಲ್ಲಿ ಅವರು ಓಡಾಡಿದ್ದಾರೆ census ಬಂದಾಗ ಹೀಗೇ ಬರೆಸಿ ಎಂದು ಬರೆಸಿದ್ದಾರೆ ಈಗ ನಾನು ವೀರಶೈವ ಮಹಾಸಭಾದ್ದು ಹೇಳುತ್ತಿದ್ದೇನೆ ನಮ್ಮೆಲ್ಲರಿಗೂ instruction ಕೊಟ್ಟಿದ್ದಾರೆ ಧರ್ಮ ಎಂದಾಗ ವೀರಶೈವ ಎಂದು ಬರೆಸಿ, ಜಾತಿ ಎಂದಾಗ ಬಂದಾಗ ಲಿಂಗಾಯಿತ ಎಂದು ಬರೆಸಿ, ನಾವು ಹಿಂದೂಗಳಲ್ಲವೆಂದು ಒಂದು ವಾದವಾಗಿದೆ ಇಲ್ಲ ನಾವು ಹಿಂದೂಗಳೇ ಎಂದು ಇನ್ನೊಂದು ವಾದವಾಗಿದೆ ನಾನು ಪರ ವಿರೋಧ ಮಾತನಾಡುತ್ತಿಲ್ಲ all these things have taken palce ಅದು official ಆಗಿದೆಯೋ ಇಲ್ಲವೋ ಗೊತ್ತಿಲ್ಲ But census ಮಾಹಿತಿ ಸಿಗುತ್ತದೆ ದಯಮಾಡಿ ತಾವಿಂದು ನಿರ್ಧಾರ ತೆಗದುಕೊಂಡು ಏನಾದರೂ ಮಾಡಿ ಇವರನ್ನು ಪ್ರವರ್ಗ 1ಎ ಗೆ ತರಬೇಕು

ಶ್ರೀ ಬಾಲಚಂದ್ರ ಜಾರಕಿಹೊಳಿ ಹಿರಿಯ ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು ಅಲ್ಪರು ಸರ್ಪ ಒಕ್ಕಲಿಗರು ಒಂದೇ ಜಾತಿ ಎನ್ನುವ ದೃಷ್ಟಿಯಲ್ಲಿ ಈ ಸದನಕ್ಕೆ ಹೇಳುತ್ತಿದ್ದಾರೆ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಆಧಾರದ ಪ್ರಕಾರ 1994 ರಲ್ಲಿ ಸರ್ಪ ಒಕ್ಕಲಿಗರನ್ನು ಪ್ರವರ್ಗ 1 ರಲ್ಲಿ ಕ್ರಮ ಸಂ 14 ರಲ್ಲಿ ಸಲ್ಪರ ಜಾತಿಯನ್ನು ಗೋಣಿಗೆ ಮನೆ ಎಂಬ ಜಾತಿಗೆ ಸೇರ್ಪಡೆ ಮಾಡಿದರು ಈಗ ಅವರು ಬಹಳ ಸಲ ನಾವು ಹಿಂದುಳಿದ ವರ್ಗದ ಆಯೋಗಕ್ಕೆ ದಾಖಲೆ ಸಮೇತ ಮನವಿ

ಸಲ್ಲಿಸಿದ್ದೇವೆ ಆದರೂ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು ಈಗಾಗಲೇ ಹಿಂದುಳಿದ ವರ್ಗದ ಆಯೋಗ ರಚನೆ ಮಾಡಿ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಿದ್ದು ಮಾನ್ಯ ಸದಸ್ಯರು ಇನ್ನೊಂದು ಸಲ ದಾಖಲೆ ಸಮೇತ ಆ ಆಯೋಗದವರಿಗೆ ಕೊಡಬೇಕು ಏಕೆಂದರೆ ಸಿದ್ದರಾಮಯ್ಯನವರು ಹೇಳಿದ ಹಾಗೆ ಹಿಂದುಳಿದ ಜಾತಿಯವರ ಸಮೀಕ್ಷೆ ಆಗಿಲ್ಲವೆಂದು ಹೇಳುತ್ತಿರುವುದು ನಿಜ ಅದರ ಸಮೀಕ್ಷೆ ಇದುವರೆಗೆ ಆಗಿಲ್ಲ 1937 ನೇ ಇಸವಿ ಬಿಟ್ಟರೆ ಆನಂತರ ನಮ್ಮ ದೇಶ ರಾಜ್ಯದಲ್ಲಿ ಎಲ್ಲಿಯೂ ಯಾವ ತರಹದ ಸಮೀಕ್ಷೆ ಆಗಿಲ್ಲ ಅದಕ್ಕೋಸ್ಕರ ಕರ್ನಾಟಕ ರಾಜ್ಯದಲ್ಲಿ ಆ ತರಹ ಹಿಂದುಳಿದ ವರ್ಗಗಳ ಜಾತಿ ಸಮೀಕ್ಷೆ ನಡೆಯುತ್ತಿದೆ ಅದನ್ನು ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ ಏಕೆಂದರೆ, ಅದಕ್ಕೋಸ್ಕರ 60 ರಿಂದ 65 ಸಾವಿರ ಶಿಕ್ಷಕರು ಬೇಕಾಗುತ್ತಾರೆ ಆಗ 20 ದಿನಗಳ ವೆಕೇಶನ್ ಇರುತ್ತದೆ ಈಗಾಗಲೇ ನಾನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ಜೊತೆ ಕುಳಿತು ಚರ್ಚೆ ಮಾಡಿದ್ದೇನೆ ನಾವು ಡಿಸೆಂಬರ್ ಕೊನೆಯ ವೇಳೆಗೆ ವರದಿ ಕೊಡಬೇಕಾಗಿದೆ ಸಿದ್ದರಾಮಯ್ಯನವರು ಹೇಳಿದ ಹಾಗೆ ಈಗಾಗಲೇ ಅವರು ಹಣಕಾಸು ಸಚಿವರಾಗಿದ್ದಾಗ ಇದರ ಸಲುವಾಗಿ ಹಣ ಇಟ್ಟಿದ್ದರು ಸರ್ಕಾರದಲ್ಲಿ ಕೇಂದ್ರ ಸರ್ಕಾರದ ಹಣ ಸೇರಿದಂತೆ 23 ಕೋಟಿ ರೂ ಸರ್ವೆ ಮಾಡುತ್ತೇವೆ ಆ ಸಮಯದಲ್ಲಿ ಸರ್ಪ ಒಕ್ಕಲಿಗರು ಮತ್ತು ಸಲ್ಪರು ಎಂಬ ಬಗ್ಗೆ ದಾಖಲೆ ಸಹಿತ ಕೊಟ್ಟರೆ ಖಂಡಿತವಾಗಿ ಆ ಜನಾಂಗಕ್ಕೆ ನ್ಯಾಯ ಸಿಗುತ್ತದೆಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ

ಶ್ರೀ ಜೆ ಸಿ,ಮಾಧುಸ್ವಾಮಿ 1996 ರ ಚಿನ್ನಪ್ಪರೆಡ್ಡಿ ಆಯೋಗದಲ್ಲಿ ಇಡೀ ಬ್ಯಾಕ್‌ವರ್ಡ್ ಕಮ್ಯುನಿಟಿ ಲಿಸ್ಟ್‌ನಲ್ಲಿ ಅವರನ್ನು ಇಟ್ಟಿದ್ದರಿಂದ ಸಮಸ್ಯೆ ಉದ್ಭವವಾಗಲಿಲ್ಲ ಅದಾದಮೇಲೆ ನೀವು 1ಎ, 2,3, ಎಂದು ಮಾಡಿಕೊಂಡ ಮೇಲೆ ಸಮಸ್ಯೆ ಆಗಿರುವುದು ಅವರು ಆವತ್ತು ಬ್ಯಾಕ್‌ವರ್ಡ್ ಕಮ್ಯುನಿಟಿನಲ್ಲೇ ಇದ್ದರು ನಾನೇ ಸ್ಪಷ್ಟವಾಗಿ ಹೇಳಿದ್ದೇನೆ 1996 ರಲ್ಲಿ ಚಿನ್ನಪ್ಪರೆಡ್ಡಿಯವರು ಬ್ಯಾಕ್‌ವರ್ಡ್‌ನಲ್ಲಿಟ್ಟು ಕ್ಯಾಟಗರಿ 1 ಕ್ರಮ ಸಂ 14 ಇ ರಲ್ಲಿ ಸಲ್ಪರು ಎಂದು ಇಟ್ಟಿದ್ದರು ಅದಾದಮೇಲೆ ಮಾಡುವಾಗ ಅಕ್ಕೆ ಪೂರಕವಾಗಿ ನಿಮಗೆ ಹೇಳಿದೆ ಮೈಸೂರು ಟ್ರೈಬ್ಸ್ ಮತ್ತು ಕ್ಯಾಸ್ಟ್ ವಾಲ್ಯೂಮ್ ನಂ 4 ಅನ್ನು ನೀವು ನೋಡಿದರೆ, ಎಲ್ ಕೆ ಅನಂತಕೃಷ್ಣ ಅಯ್ಯರ ಕಾಲದಲ್ಲಿ ಒಂದು chapter ಇದೆ ಸಲಹುವ ಒಕ್ಕಲು ಅವರು ಹೇಳುತ್ತಾರೆMembers of

this caste are salahu vokkala in kannada, salahu kapalu in telugu, Lohakaraka in Sanskrit ಈ comunity ಇದು his has no relevance with Vokkaliga community ಒಂದು chapter ಅನ್ನುMysore University ಯವರು ಅವತ್ತು introduce ಮಾಡಿದ್ದಾರೆ ಬಹಳ ವ್ಯಾಪಕವಾಗಿ ಈ ಜನಾಂಗಗಳ ಬಗ್ಗೆ ತಪಶೀಲು ಮಾಡಿಸಿದಾಗ, ದೊರೆತ ಗೆಜೆಟ್ ಕಾಪಿಯನ್ನು ನಿಮಗಿಲ್ಲಿ ಹಾಕಿದ್ದೇನೆ ಇದರಲ್ಲೇನೂ ಮಾತಿಲ್ಲ, ಇದನ್ನೆಲ್ಲ ಆಧಾರಗಳನ್ನಾಗಿಟ್ಟುಕೊಂಡು ದಯಮಾಡಿ ನೀವೇ ತರಿಸಿ, ಒಂದೇ ಮನೆಯಲ್ಲಿ ಹಾಗೂ ಇದ್ದಾರೆ, ಹೀಗೂ ಇದ್ದಾರೆ Certificates ಕೊಟ್ಟಿದೆ ಎಂದು ನಿಮ್ಮ Deputy commissioner, Tumkur ರವರು report ಮಾಡಿದ್ದಾರೆ ನಿಮ್ಮ District officer ಕೂಡ ಹೀಗಾಗಿಬಿಟ್ಟಿದೆ, ಚಿಕ್ಕನಾಯಕನಹಳ್ಳಿಯಲ್ಲಿ ತಿಪಟೂರಿನಲ್ಲಿ ತಾಪತ್ರಯವಾಗಿದೆ ಎಂದು ವರದಿ ಕೊಟ್ಟಿದ್ದಾರೆ ನಿಮ್ಮ assistant commissioner ಇಬ್ಬರು elect ಆದ member ಗಳ ಮೇಲೆ decision ಕೊಡುವಾಗ ಇಲ್ಲ ಅವರು 1ಎ ನಲ್ಲಿ elect ಆಗಿದ್ದಾರೆ, we cannot remove them but term ಆದಮೇಲೆ ನಾವು ಕೊಡಬಾರದೆಂದು ಆದೇಶಗಳನ್ನು ಮಾಡಿದ್ದಾರೆ ಇದು ತಪ್ಪಾಗುತ್ತದೆ ಇದನ್ನು ನೀವು ಎಲ್ಲಿಯಾದರೂ ಸರಿಪಡಿಸಬೇಕಾಗುತ್ತದೆ ದಯಮಾಡಿ, ವಾಸ್ತವವಾಗಿ ಏನು ಬದುಕಿದ್ದಾರೆ ಅದನ್ನು ನೋಡಿಕೊಂಡು small community ಸುಮಾರು 30 ಸಾವಿರ ಸಂಖ್ಯೆಯಲ್ಲಿ ಇಡೀ ರಾಜ್ಯದಲ್ಲಿರುವ ಜನಾಂಗಕ್ಕೆ ಇಷ್ಟೊಂದು ಯೋಚನೆ ಜಿಜ್ಞಾಸೆ ಮಾಡುವ ಅಗತ್ಯವಿಲ್ಲ ದಯಮಾಡಿ ಇವರನ್ನು consider ಮಾಡಬೇಕು

ಶ್ರೀ ಅರಗ ಜ್ಞಾನೇಂದ್ರ ಮಾದುಸ್ವಾಮಿಯವರೇ, ನೀವು ಹೇಳುತ್ತಿರುವುದು, ನಮ್ಮ ಧರ್ಮೇಗೌಡರು ಒಕ್ಕಲಿಗರೇ? ಅವರು ಸರ್ಪ ಒಕ್ಕಲಿಗರು

ಶ್ರೀ ಜೆ ಸಿ ಮಾಧುಸ್ವಾಮಿ ದರ್ಮೇಗೌಡರು ಒಪ್ಪುತ್ತಾರೆಯೇ? ಜ್ಞಾನೇಂದ್ರ ಒಪ್ಪುತ್ತಾರೆಯೇ? ಇನ್ನೊಬ್ಬರು ಒಪ್ಪುತ್ತಾರೆಯೇ ಎಂದು ಈ ಪ್ರಶ್ನೆಗಳನ್ನು ಕೇಳಿಕ್ಕೆ ನಾನು ಚರ್ಚೆ ಮಾಡುತ್ತಿಲ್ಲ

ಶ್ರೀ ಅರಗ ಜ್ಞಾನೇಂದ್ರ, ಅವರ ಬ್ರದರ್‌ಗೆ ನಮ್ಮ ರಿಲೇಟಿವ್‌ನಿಂದ ಹೆಣ್ಣುಕೊಟ್ಟಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಹಾಗಾದರೆ ನಮ್ಮ ಮನೆಯಲ್ಲಿ ಯಾರೋ ಒಬ್ಬರು ಬ್ರಾಹ್ಮಣರನ್ನು ಮದುವೆಯಾದರೆ ನಾವೆಲ್ಲರೂ ಬ್ರಾಹ್ಮಣರೇ? ನೆನ್ನೆ ನಾನು ಮೈಸೂರಿಗೆ ಹೋಗಿ ನಮ್ಮ ಕಸಿನ್ ಅನ್ನು ಬ್ರಾಹ್ಮಣರಿಗೆ ಮದುವೆ ಮಾಡಿಕೊಟ್ಟಿದ್ದೇನೆ

(ಗೊಂದಲ)

ಶ್ರೀ ಬಾಲಚಂದ್ರ ಜಾರಕಿಹೊಳಿ ಈಗ ನಾನು ಮಾಧುಸ್ವಾಮಿಯವರಿಗೆ ಹೇಳುತ್ತೇನೆ, ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವೇ ಒಂದು ಯೋಗ್ಯವಾದ ಸಂಸ್ಥೆಯಾಗಿದೆ ಅದ ಕ್ಕೋಸ್ಕರ ತಾವು ದಾಖಲೆ ಸಮೇತ ಅಲ್ಲಿಗೆ ಅರ್ಜಿ ಕೊಟ್ಟರೆ ಅವರು ಸರಿ ಎಂದರೆ ನಾವು ಖಂಡಿತ ಅದಕ್ಕೆ ಒಂದು ಕ್ರಮ ತೆಗೆದುಕೊಳ್ಳುವ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಡುತ್ತೇನೆ

ವಿಷಯ ರಾಷ್ಟ್ರೀಯ ತೋಟಗಾರಿಕಾ ಯೋಜನೆಯು ರಾಜ್ಯದ 17 ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿದ್ದು ಇನ್ನುಳಿದ ಜಿಲ್ಲೆಗಳಲ್ಲಿ ತೋಟಗಾರಿಕೆ ಹಿಂದುಳಿದಿರುವುದರಿಂದ ಈ ಜಿಲ್ಲೆಗಳಲ್ಲಿ ರಾಜ್ಯ ಅನುದಾನವನ್ನು ಹೆಚ್ಚಿಸುವ ಕುರಿತು

ಶ್ರೀ ಆರ್ ಧ್ರುವನಾರಾಯಣ್(ಸಂತೇಮರಹಳ್ಳಿ) ಮಾನ್ಯ ಅಧ್ಯಕ್ಷರೆ, ನನ್ನ ಗಮನ ಸೆಳೆಯುವ ಸೂಚನೆ ಉಪ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದೆವು ಅವರು ಅದನ್ನು ತೋಟಗಾರಿಕಾ ಸಚಿವರಿಗೆ ಕಳುಹಿಸಿದ್ದಾರೆ ಆದರೆ, ಉಪಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ ದಯಮಾಡಿ ಉಪ ಮುಖ್ಯ ಮಂತ್ರಿಗಳಯು ಕೂಡ ಈ ಗಮನ ಸೆಳೆಯುವ ಸೂಚನೆ ಬಗ್ಗೆ ಗಮನಹರಿಸ ಬೇಕೆನ್ನುವ ಮನವಿಯನ್ನು ಮಾಡುತ್ತೇನೆ ರಾಷ್ಟ್ರೀಯ ತೋಟಗಾರಿಕಾ ಯೋಜನೆಯು ರಾಜ್ಯದ 17 ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿದ್ದು, ಇನದನುಳಿದ ಜಿಲ್ಲೆಗಳಲ್ಲಿ ತೋಟಗಾರಿಕೆ ಹಿಂದುಳಿದಿರುವುದರಿಂದ ಈ ಜಿಲ್ಲೆಗಳಿಗೆ ರಾಜ್ಯ ಅನುದಾನವನ್ನು ಹೆಚ್ಚಿಸುವ ಬಗೆಗೆ ಮಾನ್ಯ ತೋಟಗಾರಿಕೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ

ಶ್ರೀ ಶಶಿಕಾಂತ ಅ ನಾಯಿಕ(ತೋಟಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ತೋಟಗಾರಿಕಾ ಯೋಜನೆಯಡಿಯಲ್ಲಿ ಈಗಾಗಲೇ 17ಜಿಲ್ಲೆಗಳನ್ನು ತೆಗೆದಕೊಂಡು ಅಲ್ಲಿ ಅನೇಕ ಅಭಿವೃದ್ಧಿಗಳನ್ನು ಮಾಡುತ್ತಿದ್ದೇವೆ ಆದರೆ ಅವರು ಕೇಳುತ್ತಿರುವುದು ಈ 17 ಜಿಲ್ಲೆಗೆ ಮಾತ್ರ ಅನುಕೂಲವಾಗುತ್ತದೆ ಇನ್ನುಳಿದ 10 ಜಿಲ್ಲೆ ಗಳಲ್ಲಿ ಇಂಬ್ಯಾಲೆನ್ಸ್ ಆಗುತ್ತದೆ ಆ ಇಂಬ್ಯಾಲೆನ್ಸ್ ಅನ್ನು ಸರಿದೂಗಿಸುವುದಕ್ಕೆ ಆ ಜಿಲ್ಲೆಗಳಿಗೆ ರಾಷ್ಟ್ರೀಯ ತೋಟಗಾರಿಕಾ ಯೋಜನೆಯಲ್ಲಿ ಹಣ ತೊಡಗಿಸದಿದ್ದರೆ ರಾಜ್ಯ ಸರ್ಕಾರದಿಂದ ತಾವು ತೊಡಗಿಸಿ ಎನ್ನತಕ್ಕಂಥ ವಿಚಾರವನ್ನು ಅವರು ವ್ಯಕ್ತಪಡಿಸಿದ್ದಾರೆ ಉಳಿದಂದ ಜಿಲ್ಲೆಗಳೆಂದರೆ ಬೆಂಗಳೂರು ನಗರ, ದಾವಣಗೆರೆ, ಬಳ್ಳಾರಿ ಬೀದರ್ ಚಾಮರಾಜನಗರ, ಮಂಡ್ಯ ರಾಯಚೂರು ಧಾರವಾಢ ಗದಗ ಹಾವೇರಿ ಈ 10 ಜಿಲ್ಲೆಗಳು ಉಳಿದಿವೆ ಇಲ್ಲಿಯೂ ಕೂಡ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಡಿಯಲ್ಲಿ ಸುಮಾರು 16ರಿಂದ17 ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೇವೆ ಅದರ ಜೊತೆಗೆ ಕೀಟ ನಿಯಂತ್ರಣ ನಿರ್ವಹಣೆಯ ಬಗ್ಗೆ ಔಷಧಿ ಸುಗಂಧಿ ಗಿಡಗಳ ಅಭಿವೃದ್ಧಿ ಬಗ್ಗೆ ಸಾವಯವ ಕೃಷಿಯ

ಬಗ್ಗೆ ಕ್ಷೇತ್ರ ನರ್ಸರಿ ಅಭಿವೃದ್ಧಿಯ ಬಗ್ಗೆ ಮಾಹಿತಿಸೇವಾ ತಂತ್ರಜ್ಞಾನದ ಬಗ್ಗೆ ನಿರ್ವಹಣೆ ಮಾರುಕಟ್ಟೆಯ ಬಗ್ಗೆ ಮತ್ತು ಮೆನೇಜ್‌ಮೆಂಟ್ ಬಗ್ಗೆ ಈ ಏಳೆಂಟು ಕಾರ್ಯಕ್ರಮಗಳನ್ನು ಈಗಾಗಲೇ ನಾವು ಹಾಕಿಕೊಂಡಿದ್ದೇವೆ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಜಾರಿಯಲ್ಲಿರ ತಕ್ಕಂಥಾ ಜಿಲ್ಲೆಗಳಿಗೆ ವಿಶೇಷ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಹಿನ್ನೆಲೆಯಲ್ಲಿ ಸುಮಾರು 30 ಕೋಟಿ ರೂಪಾಯಿಗಳನ್ನು ಒದಗಿಸುವಂತೆ ಆರ್ಥಿಕ ಇಲಾಖೆಗೆ ಈಗಾಗಲೇ ಮನವಿ ಮಾಡಿಕೊಂಡಿದ್ದೇವೆ ಆ ಬಗ್ಗೆ ಏನಾದರೂ ಅವರ ಮನವೊಲಿಸಿ ಆ ಕಾರ್ಯಕ್ರಮಕ್ಕೆ ಸ್ವಲ್ಪ ಅನುಕೂಲ ಮಾಡಿಕೊಟ್ಟರೆ ಇದಕ್ಕೆ ಅನುಕೂಲ ಮಾಡಿಕೊಡುವುಕ್ಕೆ ಶಖ್ಯವಾಗುತ್ತದೆ ಇಲ್ಲವಾದರೆ ಈ 7 ಯೋಜನೆಗಳು ಮಾತ್ರ ಅಲ್ಲಿ ಸಿಗುವಧಾದ್ದಾಗುತ್ತದೆ

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಸಚಿವರು 10 ಜಿಲ್ಲೆಗಳನ್ನು ಏನು ಹೇಳಿದರು ಈ 10 ಜಿಲ್ಲೆಗಳಲ್ಲಿ ತೋಟಗಾರಿಕೆ ಬಹಳಷ್ಟು ಹಿಂದೆ ಉಳಿದಿದೆ ಏನು 17 ಜಿಲ್ಲೆಗಳಿಗೆ ರಾಷ್ಟ್ರೀಯ ತೋಟಗಾರಿಕಾ ಯೋಜನೆ ಇದೆ, ಅದರಿಂದ ಬಹಳಷ್ಟು ಅನುಕೂಲವಾಗುತ್ತದೆ ಚಾಮರಾಜನಗರ, ಮಂಡ್ಯ, ರಾಯಚುರು, ಬೀಎರ್, ಗದಗ್ ಇರಬಹದು, ಈ ಎಲ್ಲಾ ಜಿಲ್ಲೆಗಳು ಕೂಡ ಇದರಿಂದ ವಂಚಿತವಾಗಿದೆ ಹಣಕಾಸು ಸಚಿವರೂ ಕೂಡ ಇಲ್ಲಯೇ ಇದ್ದಾರೆ ದಯಮಾಡಿ ನಾವೇನು 10 ಜಿಲ್ಲೆಗಳಿಂದ ವಂಚಿತರಾಗಿದ್ದೇವೆ ಆ ಜಿಲ್ಲೆಗಳಿಗೆ ವಿಶೇಷವಾಗಿ ಹೆಚ್ಚಿನ ಅನುದಾನವನ್ನು ಅವರು ಕೊಡಬೇಕು ಆರ್ದಿಕ ಇಲಾಕೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ ಒಂದೊಂದು ಜಿಲ್ಲೆಗೆ ಒಂದೊಂದು ಕೋಟಿ ರೂಪಾಯಿ ಕೊಡಬೇಕೆನ್ನುವ ಮಾತನ್ನು ಉತ್ತರದಲ್ಲಿ ಹೇಳಿದ್ದಾರೆ ಆದರೆ, 2006-07ರಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಿಂದ 50 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಅದೇರೀತಿ 2007-08 ಕ್ಕೆ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಯೋಜನೆಗೆ 300 ಕೋಟಿ ರೂ, 17 ಜಿಲ್ಲೆಗಳಿಗೆ ಬರುತ್ತಿದೆ ಅಂದರೆ, ಒಂದು ಜಿಲ್ಲೆಯಲ್ಲಿ ಬಹಳಷ್ಟು ಪ್ರಗತಿಯಾಗುವುದು, ಇನ್ನುಳಿದ ಜಿಲ್ಲೆಗಳಲ್ಲಿ ಯಾವುದೇ ಪ್ರಗತಿ ಇಲ್ಲದಿದ್ದಾಗ ಬಹಳಷ್ಟು ಅಸಮತೋಲನ ಉಂಟಾಗುತ್ತದೆ, ನಂಜುಂಡಪ್ಪ ವರದಿ ಪ್ರಕಾರ ಚಾಮರಾಜನಗರ ಬಹಳ ಹಿಂದುಳಿದ ಜಿಲ್ಲೆ ಗದಗ ಬಿದರ್ ರಾಯಚುರು ಇವೆಲ್ಲ ಬಹಳಷ್ಟು ಹಿಂದುಳಿದಿವೆ ಇಲ್ಲಿ ತೋಟಗಾರಿಕಾ ಬೆಲೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಕೊಡಬೇಕೆ ಗಮನ ಕೊಡಬೇಕು

ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ ರಾಷ್ಟ್ರೀಯ ತೋಟಗಾರಿಕಾ ಯೋಜನೆಗೆ ಒಂದೊಂದು ಜಿಲ್ಲೆಗೆ 5 ರಿಂದ 10 ಕೋಟಿ ರೂ ಏನು ಅನುದಾನ ಬರುತ್ತದೋ ಅದೇ ಮಾದರಿಯಲ್ಲಿ ರಾಜ್ಯದ ಅನುದಾನದಿಂದ ಹೆಚ್ಚಿಗೆ ಅನುದಾನ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ ಜೊತೆಗೆ ತೋಟಗಾರಿಕಾ ವಿಶ್ವವಿದ್ಯಾನಿಲಯ ತೆರೆಯಬೇಕೆಂದು ಉದ್ದೇಶವಿಟ್ಟು ಕೊಂಡಿದ್ದಾರೆ ಎರಡೇ ಎರಡು ಹಾರ್ಟಿಕಲ್ಚರ್ ಕಾಲೇಜು ಗಳಿವೆ ಅದಕ್ಕೇ ಒಂದು ಯೂನಿವರ್ಸಿಟಿ ಮಾಡತಕ್ಕಂಥದ್ದಕ್ಕೆ ನೀವು ಅನುದಾನ ಕೊಡುತ್ತೀರಿ ದಯವಿಟ್ಟು ಅದಕ್ಕಿಂತ ಹೆಚ್ಚಿನ ಒತ್ತನ್ನು ಯಾವ 10 ಜಿಲ್ಲೆಗಳಿಂದ ನಾವು ವಂಚಿತರಾಗಿದ್ದೇವೆಯೋ ಆ 10 ಜಿಲ್ಲೆಗಳಿಗೆ ಈ ಸದನದಲ್ಲಿ ಘೋಷಣೆ ಮಾಡಬೇಕು 5 ರಿಂದ 10 ಕೋಟಿ ರೂಪಾಯಿಗಳನ್ನು ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಿಂದ ಯಾವ ರೀತಿ ಬರುತ್ತದೆಯೋ ಅದಕ್ಕೆ ಸರಿಸಮವಾಗಿ ಬಿಡುಗಡೆ ಮಾಡಬೇಕು ಈ 10 ಜಿಲ್ಲೆಗಳಲ್ಲಿ ಈ ತೋಟಗಾರಿಕೆಯನ್ನು ಉಳಿಸಬೇಕು ಎಂಬ ಮನವಿ ಮತ್ತು ಒತ್ತಾಯವನ್ನು ಮಾಡುತ್ತೇವೆ

ಶ್ರೀ ಎಸ್ ಎಸ್ ಪಾಟೀಲ್ ನೀವೀಗ ಏನು ಜಿಲ್ಲೆಗಳನ್ನು ಆಯ್ಕೆ ಮಾಡಿದ್ದಿರಿ, ಯಾವ ಮಾನದಂಡದ ಆದಾರದ ಮೇಲೆ ಆಯ್ಕೆ ಮಾಡಿ ಕೊಂಡಿದ್ಧೀರಿ ಉಳಿದ ಜಿಲ್ಲೆಗಳನ್ನು ಯಾವ ಕಾರಣದಿಂದ ಬಿಟ್ಟಿದ್ದಿರಿ ಸರ್ಕಾರದಿಂದ ಪ್ರೊಪೋಸಲ್ ಹೋಗುವ ಮುಂಚೆಯೇ ತಪ್ಪು ಮಾಡಿದ್ದ ರಿಂದ ನಮ್ಮ ಜಿಲ್ಲೆಗಳು ಇದರಲ್ಲಿ ಸೇರಿಲ್ಲ ತೋಟಗಾರಿಕೆಯಲ್ಲಿ ಮುಂದಿದ್ದ ನಮ್ಮ ಜಿಲ್ಲೆಗಳನ್ನು ಬಿಟ್ಟಿದ್ದೀರಿ ಮಾನ್ಯ ಯಡಿಯೂರಪ್ಪನವರು ಇಲ್ಲಿಯೇ ಇದ್ದಾರೆ ಆ ಜಿಲ್ಲೆಗಳನ್ನು ಸೇರಿಸಿಕೊಳ್ಳುತ್ತೀರಾ ಹೇಗೆ? ಎಂಬ ಬಗ್ಗೆ ಖಂಡಿತವಾಗಿ ಹೇಳಬೇಕಾಗಿದೆ ಇಲ್ಲದಿದ್ದರೆ, ನಾವು ವಂಚಿತರಾಗುತ್ತೇವೆ

ಅಧ್ಯಕ್ಷರು ಗಮನ ಸೆಳೆಯುವ ಸೂಚನೆಯಡಿಯಲ್ಲಿ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಸಚಿವರು ಉತ್ತರ ಕೊಟ್ಟಿದ್ದಾರೆ ಒಂದೋ ಎರಡೋ clarifications ಗೆ ಅವಕಾಶವಿದೆ

ಶ್ರೀ ಪಿ ಟಿ ಪರಮೇಶ್ವರ ನಾಯಕ್ ಇದು ಪ್ರಾಮುಖ್ಯವಾದ ವಿಷಯವಾಗಿದೆ

ಅಧ್ಯಕ್ಷರು ಪ್ರಾಮುಖ್ಯವಾದ ವಿಷಯ ನಿಜ ಆದರೆ, ಅವರು ಕೇಳಿದ್ದಾರೆ ಒಂದೋ ಎರಡೋ clarificationsಗೆ ಅವಕಾಶವಿದೆ

ಶ್ರೀ ಪಿ ಟಿ ಪರಮೇಶ್ವರ ನಾಯಕ್ ಎರಡೆರಡು ನಿಮಿಷ ಅವಕಾಶ ಕೊಡಿ ತೋಟಗಾರಿಕಾ ಬೆಳೆ ಬಗ್ಗೆ ನಮ್ಮ ಭಾಗದಿಂದ ಕೂಡ ಒತ್ತಾಯವಿದೆ

ಅಧ್ಯಕ್ಷರು ಅವರು ಉತ್ತರ ಕೊಟ್ಟಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಅದಕ್ಕೇನು ಸೂತ್ರಗಳಿವೆ? ಚಾಮರಾಜ ನಗರ ಅತೀ ಹಿಂದುಳಿದ ಪ್ರದೇಶವಾಗಿದೆ

ಅಧ್ಯಕ್ಷರು ಈಗ ಬೇಡಿಕೆಗಳ ಮೇಲೆ ಚರ್ಚೆ ಆಗಬೇಕಾಗಿದೆ ಅದರ ಮೇಲೆ ಮಾತನಾಡುವಾಗ ಇದರ ಬಗ್ಗೆ ಸಹ ಮಾತನಾಡಬಹುದು ಅವರು ವಿವರವಾದ ಉತ್ತರ ಕೊಡುತ್ತಾರೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ನಂಜುಂಡಪ್ಪ ವರದಿ ಆಧಾರದ ಪ್ರಕಾರ ಚಾಮರಾಜನಗರ ಅತೀ ಹಿಂದುಳಿದ ಪ್ರದೇಶ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು ಈ ಜಿಲ್ಲೆಗಳನ್ನು ಏಕೆ ಬಿಟ್ಟಿದ್ದಿರಿ? ಕಾರಣವೇನು? ನಮ್ಮಲ್ಲಿ ತೋಟಗಾರಿಕೆಗೆ ಅವಕಾಶವಿಲ್ಲವೇ? ಅವಕಾಶವಿದೆ ಇದನ್ನು ಮಾಡಬೇಕು ಚಾಮರಾಜನಗರ ಜಿಲ್ಲೆ ಬಿಟ್ಟರೆ ತಾರತಮ್ಯ ಮಾಡಿದ ಹಾಗಾಗುತ್ತದೆ ಇದು ಸರಿಯಾದ ಕ್ರಮವಲ್ಲ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ ಇದು ಕೇಂದ್ರ ಸರ್ಕಾರದ ಯೋಜನೆ ಇದೆ

ಶ್ರೀ ಪಿ ಟಿ ಪರಮೇಶ್ವರ ನಾಯಕ್ ಮಾನ್ಯ ಎಸ್ ಎಸ್ ಪಾಟೀಲ್ ರವರು ಮತ್ತು ಆರ್ ಧೃವನಾರಾಯಣ್‌ರವರು ಮಾತನಾಡಿದ ಪ್ರಕಾರ ರಾಷ್ಟ್ರೀಯ ತೋಟಗಾರಿಕಾ ಯೋಜನೆಯಲ್ಲಿ ಈ ರಾಜ್ಯದಲ್ಲಿರುವ 27

ಜಿಲ್ಲೆಗಳಲ್ಲಿ ಕೇವಲ 17 ಜಿಲ್ಲೆಗಳನ್ನು ಆ ಯೋಜನೆಗೆ ಒಳಪಡಿಸಿ 10 ಜಿಲ್ಲೆಗಳನ್ನು ಬಿಟ್ಟಿದ್ದು ಯಾವ ನ್ಯಾಯ? ತೋಟಗಾರಿಕಾ ಬೆಳೆ ಎಲ್ಲಾ ಕಡೆ ರೈತರಿಗೆ ಸಹಕಾರಿಯಾದ ಬೆಳೆ ನಮ್ಮ ಕಡೆಯಂತೂ ರೈತರು ಪದೇ ಪದೇ ಬರಗಾಲಕ್ಕೆ ಒಳಗಾಗುತ್ತಿದ್ದಾರೆ ಮಕ್ಕೆಜೋಳ, ರಾಗಿ, ಊಟದ ಜೋಳ ಬೆಳೆಯುವ ಜನರು ನಾವು ಅಲ್ಲಿ ಮಳೆ ಬರಲಿಲ್ಲವೆಂದರೆ ಬೆಲೆ ಸಂಪೂರ್ಣ ಕೈಬಿಟ್ಟು ಹೋಗುತ್ತದೆ ನಮ್ಮ ಕಡೆ ತೋಟಗಾರಿಕೆ ಬೆಳೆಗೆ ಉತ್ತೇಜನ ಕೊಡುವುದಕ್ಕಾಗುತ್ತಿಲ್ಲ ಅಲ್ಲಿ ಅಭಿವೃದ್ಧಿ ಪಡಿಸುವುದಕ್ಕೂ ಆಗುತ್ತಿಲ್ಲ ಅದಕ್ಕೆ ದಯಮಾಡಿ ಈಗ ಕೇಂದ್ರ ಸರ್ಕಾರದ ಯೋಜನೆಯಲ್ಲಿ 10 ಜಿಲ್ಲೆಗಳನ್ನೇನು ಕೈ ಬಿಟ್ಟಿದ್ದೀರಿ ನಮ್ಮ ಉಪ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ನಮ್ಮ ತೋಟಗಾರಿಕಾ ಸಚಿವರೇನು ಪ್ರಸ್ತಾವನೆ ಕಳುಹಿಸಿದ್ದಾರೆ ಅದರಲ್ಲಿ 10 ಜಿಲ್ಲೆಗಳನ್ನೂಸೇರಿಸಿ ಹೆಚ್ಚಿನ ಅನುದಾನವನ್ನು ಅದಕ್ಕೆ ಕೊಟ್ಟು ಆ ಭಾಗದಲ್ಲಿ ತೋಟಗಾರಿಕಾ ಬೆಳೆಗೆ ಉತ್ತೇಜನ ಕೊಡುವುದಕ್ಕೆ ಉಪ ಮುಖ್ಯಮಂತ್ರಿಗಳು ಸದನದಲ್ಲಿ ಭರವಸೆಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ ಮಾನ್ಯ ಎಸ್ ಎಸ್ ಪಾಟೀಲ್ ರವರು, ವಾಟಳ್ ನಾಗರಾಜ್‌ರವರು ಹೇಳಿದ ಹಾಗೆ ಹಿಂದುಳಿದ ಜಿಲ್ಲೆಯಾದ ಚಾಮರಾಜನಗರ ಕೂಡ ಇದರಿಂದ ವಂಚಿತವಾಗುತ್ತದೆ ಎಂದು ಅವರು ಈಗಾಗಲೇ ಹೇಳಿದ್ದಾರೆ ಇದು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅಡಿಯಲ್ಲಿ ಬರುತ್ತದೆ ಕೇಂದ್ರ ಸರ್ಕಾರ ಇದನ್ನು ನಿರ್ಧಾರ ಮಾಡಿ ಎಲ್ಲೆಲ್ಲಿ ಕೊಡಬೇಕು ಎಂದು ಅವರೇ ಮಾಡಿ ಕಳುಹಿಸಿರುತ್ತಾರೆ ಈಗಾಗಲೇ ಒಂದು ತಿಂಗಳ ಹಿಂದೆ ನಾನೂ ಸಹ ಕಳೆದ ವಾರ ಮಾನ್ಯ ಶರದ್ ಪವಾರ್ ಜೊತೆ ಚರ್ಚಿಸಿ ಈ ಹಿಂದುಳಿದ ಹಳ್ಳಿಗಳನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡಿದ್ದೇನೆ

ಶ್ರೀ ವಿ ಸೋಮಣ್ಣ ರಾಜ್ಯ ಸಕಾರದಿಂದ ನಾವು ಕೇಂದ್ರ ಸರ್ಕಾರಕ್ಕೆ ಏನು ಮನವಿ ಕಳುಹಿಸುತ್ತೇವೆ ಅದನ್ನು ಅವರು ಮಡಿ ಕಳುಹಿಸುತ್ತಾರೆ ಹಣ ಕೊಡುತ್ತಾರೆಂದರೆ ಆ ಹಣ ಫೈನಾನ್ಸ್ ಮಿನಿಸ್ಟರ್‌ರವರಿಗೆ ಹೋಗಿಯೇ ಬರುತ್ತದೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಕೇಂದ್ರ ಸರ್ಕಾರಕ್ಕೆ ಈ 17 ಜಿಲ್ಲೆಗಳು ಮಾತ್ರ ಕಂಡವು, ಉಳಿದ ಜಿಲ್ಲೆಗಳು ಕಾಣಲಿಲ್ಲವೆಂದರೆ ಏನರ್ಥ? ಉಳಿದ ಜಿಲ್ಲೆಗಳನ್ನು ಕೇಳುವವರು ಯಾರು? ನಾವು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇವೆ ತಾವು ಸಂಪೂರ್ಣವಾಗಿ ಒತ್ತಾಯ ಮಾಡಿ ಉಳಿದ ಜಿಲ್ಲೆಗಳನ್ನೂ ಸೇರಿಸಬೇಕು

ಶ್ರೀ ಬಂಡೆಪ್ಪ ಕಾಶಂಪುರ್(ಕೃಷಿ ಸಚಿವರು) ಪ್ರೈಮ್‌ಮಿನಿಸ್ಟರ್ ಪ್ಯಾಕೇಜ್‌ನಲ್ಲಿ ಏನು ಅವರು 6 ಜಿಲ್ಲೆಗಳನ್ನು ಘೋಷಣೆ ಮಾಡಿದ್ದಾರೆಯೋ (ಗೊಂದಲ) ಕೇಂದ್ರ ಸರ್ಕಾರದವರು ಅವರದೇ ಆದ ಸಿಸ್ಟಮ್‌ನಲ್ಲಿ ಹಣ ಕೊಡುತ್ತಾರೆ

ಶ್ರೀ ವಿ ಸೋಮಣ್ಣ ನಾವು ಯಾವುದೇ ಪ್ರೊಪೋಸಲ್ ಅನ್ನು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ಕಳುಹಿಸಿದರೆ ನಾವು ಇಂಥದ್ದನ್ನು ಮಾಡುತ್ತೇವೆ, ಏನು ಮಾಡಬೇಕೆಂದು ಕೇಳುತ್ತಾರೆ ಆಗ ಒಪಿನಿಯನ್ ಆದರೂ ಕೊಡಬಹುದಲ್ಲವೇ?

ಶ್ರೀ ಬಂಡೆಪ್ಪ ಕಾಶಂಪುರ್ ಒಪಿನಿಯನ್ ಕೊಟ್ಟಿದ್ದೇವೆ, ಆದರೆ ಜಿಲ್ಲಾವಾರು ಅವರೇನು ಫಾರ್ಮುಲಾ ಹಾಕಿಕೊಂಡಿರುತ್ತಾರಲ್ಲಾ ಅದಕ್ಕಿಂತ ಹೆಚ್ಚು 13 ಜಿಲ್ಲೆಗಳು ಅಂದರೆ

ಶ್ರೀ ಬಿ ಶಿವರಾಂ ರೈತರ ಆತ್ಮಹತ್ಯೆ ಪ್ಯಾಕೇಜ್ ಕೊಡುವಾಗ ಆತ್ಮಹತ್ಯೆ ಪ್ರಕರಣದ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಕೊಟ್ಟಿದೆ ಇಲ್ಲಿಯೂ ಕೂಡ ಕೇಂದ್ರ ಸರ್ಕಾರ ಹಾರ್ಟಿಕಲ್ಚರ್ ಮಿಷನ್‌ಅನ್ನು 17 ಜಿಲ್ಲೆಗಳಿಗೆ ಕೊಡಬೇಕಾದರೆ ಏನಾದರೂ ಆಧಾರವಿಟ್ಟುಕೊಂಡು ಕೊಟ್ಟಿದೆ ಹಾಗಿಲ್ಲದೆ ಕೊಡಲಿಕ್ಕೆ ಬರುವುದಿಲ್ಲ ರೈತರ ಆತ್ಮಹತ್ಯೆ ಪ್ಯಾಕೇಜನ್ನು ಯಾವುದರ ಮೇಲೆ ಕೊಟ್ಟರು?

ಶ್ರೀ ಬಂಡೆಪ್ಪ ಕಾಶಂಪುರ್ ದಾಖಲಾತಿ ಕೊಟ್ಟಿದ್ದೇವೆ ಜಿಲ್ಲಾವಾರು ಕೊಡಲಿಲ್ಲ ಜಿಲ್ಲಾವಾರು ತೆಗೆದುಕೊಳ್ಳಿ ಎಂದು ಕೊಟ್ಟಿಲ್ಲ

ಶ್ರೀ ಬಿ ಶಿವರಾಂ ನಿಮಗೆ ಗೊತ್ತಿಲ್ಲವೆಂದರೆ ಹೇಲಿ ನನ್ನ ಹತ್ತಿರ ಇದೆ ಕೊಡುತ್ತೇನೆ

ಶ್ರೀ ಬಂಡೆಪ್ಪ ಕಾಶಂಪುರ್ ನನಗೂ ಗೊತ್ತಿದೆ

ಶ್ರೀ ಬಿ ಶಿವರಾಂ ಅವರು ಯಾವ ಆಧಾರ ಇಟ್ಟುಕೊಂಡಿದ್ದಾರೆ? ಯಾವುದೇ ಆಧಾರವಿಲ್ಲದೇ ಕೇಂದ್ರ ಸರ್ಕಾರ ಮಂಜೂರಾತಿ ಮಾಡುವುದಕ್ಕೆ ಬರುವುದಿಲ್ಲ ನೀವು ಹೇಳಿದ್ದು ಸರಿ

ಶ್ರೀ ಬಂಡೆಪ್ಪ ಕಾಶಂಪುರ್ ದಾಖಲಾತಿ ಕೊಟ್ಟಿದ್ದೇವೆ ಆದರೆ ಮಂಜೂರಾತಿ ಮಾಡುವಾಗ ಅವರದೇ ಆದ ಒಂದು ಫಾರ್ಮುಲಾ ಕೊಟ್ಟಿದ್ದಾರೆ

(ಗೊಂದಲ)

ಅಧ್ಯಕ್ಷರು What is the basis ಎಂದು ಕೇಳುತ್ತಾರೆ ಕೇಂದ್ರ ಸರ್ಕಾರವೇ ಇರಬಹುದು

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್ ಧರ್ಮಸಿಂಗ್ ಮುಖ್ಯಮಂತ್ರಿ ಗಳಾಗಿದ್ದಾಗ ಸಹ 6–7 ಜಿಲ್ಲೆಗಳನ್ನು ಮಾತ್ರ, (ಗೊಂದಲ)

ಶ್ರೀ ಹೆಚ್ ತಿಪ್ಪಾರೆಡ್ಡಿ ಬಹಳಷ್ಟು ಜನ ನಮ್ಮ ಜಿಲ್ಲೆಗೆ ಬಂದಿಲ್ಲವೆಂದು ಹೇಳುತ್ತಿದ್ದಾರೆ ನಮ್ಮ ಚಿತ್ರದುರ್ಗ ಜಿಲ್ಲೆಗೆ ಕೊಟ್ಟಿರುವ ಹಣವನ್ನು ತಮ್ಮ ಇಲಾಖೆಯವರು ಬಳಸದೆ ಆ ಹಣ ವಾಪಸ್ ಹೋಗಿದೆ ಜಿಲ್ಲಾ ಪಂಚಾಯತ್‌ನಲ್ಲಿ ಇದರ ಬಗ್ಗೆ ರೆಸಲ್ಯೂಷನ್ ಅಗಿ ದೊಡ್ಡ ಗಲಾಟೆಯಾಗಿದೆ

ಕೆಲವು ಜಿಲ್ಲೆಗಳಿಗೆ ಕೊಟ್ಟಿಲ್ಲ ಇದರ ಬಗ್ಗೆ ತಮ್ಮ ಇಲಾಖೆ ಮುಖಾಂತರ ತಿಳಿದುಕೊಳ್ಳಿ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ ಕಳೆದ ವರ್ಷ ಹೆಚ್ಚಿಗೆ (ಗೊಂದಲ)

ಶ್ರೀ ಬಿ ಶಿವರಾಂ ಪ್ರೈಮ್‌ಮಿನಿಸ್ಟರ್ ಪ್ಯಾಕೇಜಿಗೂ ಒತ್ತಾಯ ಆಯಿತು ಬೇರೆ ಬಿಲ್‌ಗಳು ಆಯಿತೇ? ಆ ತರಹ ಉತ್ತರ ಹೇಳಿದಾಗಲೇ ನೀವು ವ್ಯತ್ಯಾಸವಾಗುವುದು

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ ಸೇರಿಸಿಕೊಳ್ಳುವಂಥ ಹಿನ್ನೆಲೆಯಲ್ಲಿ ಸಹ ಮನವಿ ಮಾಡಿಕೊಂಡಿದ್ದೇವೆ

(ಗೊಂದಲ)

ಶ್ರೀ ಸಿದ್ದರಾಮಯ್ಯ it is Central scheme ಎನ್ನುವುದು ಸೇರಿಸಿಕೊಳ್ಳಿ, ಇದು ಕೇಂದ್ರ ಸರ್ಕಾರ ಮಾಡಿರುವ scheme ಈ scheme ಅನ್ನು ಮಾಡುವಾಗ ಮೊದಲು ಆರೇಳು ಜಿಲ್ಲೆಗೆ ಬಂದಿತ್ತು ಮತ್ತೆ 10–11 ಜಿಲ್ಲೆಗಳು ಸೇರಿದವು ಇದನ್ನು ಅವರೇ ಅಲ್ಲಿಯೇ ಕುಳಿತುಕೊಂಡು ಸೇರಿಸುವುದಕ್ಕಾಗುವುದಿಲ್ಲ ಯಾವ್ಯಾವ ಜಿಲ್ಲೆಗೆ ಮಾಡಬೇಕೆಂಬುದು Planning Department ನವರಾದರೂ ಕೊಡಬೇಕು ಅಥವಾ ಜಿಲ್ಲೆಗಳೆಲ್ಲವನ್ನೂ ಸೇರಿಸಿ ಎಂದು ಸರ್ಕಾರ ಬರೆದಿರಬೇಕು ಇದ್ಯಾವುದೂ ಪ್ರೊಪೋಸಲ್ ಇಲ್ಲದೇ 11 ಜಿಲ್ಲೆಗಳನ್ನು ಇಟ್ಟುಕೊಂಡು ಅವರೇ ಸುಮ್ಮನೆ ರೈಟ್ ಮಾರ್ಕ್ ಹಾಕಿ ಕಳುಹಿಸುವುದಕ್ಕಾಗುವುದಿಲ್ಲ ಅದಕ್ಕೆ ಏನಾದರೊಂದು ಆಧಾರ ಇದ್ದೇ ಇರುತ್ತದೆ ಅದರ ಬಗ್ಗೆ ನಿಮ್ಮ ಅಧಿಕಾರಿಗಳ ಜೊತೆ ವಿಚಾರ ಮಾಡಿ ಆ ತರಹ ಇದೆಯೇ ಇಲ್ಲವೇ ಎಂದು ಕೇಳಿ ಹೇಳಿ ನನಗೆ ಗೊತ್ತಿರುವ ಮಟ್ಟಿಗೆ ಸರ್ಕಾರದಿಂದ ಪ್ರಸ್ತಾವನೆ ಹೋಗಿದೆ ಆತ್ಮಹತ್ಯೆ ಪ್ರಕರಣ ಅದು ಬೇರೆ ವಿಷಯ ಆತ್ಮಹತ್ಯೆ ಎಲ್ಲಿ ಜಾಸ್ತಿಯಾಗಿದೆ ಅದನ್ನು ಆಧಾರವಾಗಿಟ್ಟುಕೊಂಡು ಮಾಡಿದ್ದಾರೆ ಆರು ಜಿಲ್ಲೆ ಮತ್ತು ಏಳು ಜಿಲ್ಲೆ ಸೇರಿ ಹದಿಮೂರು ಜಿಲ್ಲೆಗಳಾಗಿವೆ ಹೀಗಾಗಿ ಇದಕ್ಕೇನಾದರೂ ಆಧಾರ ವಾಗಿಟ್ಟು ಕೊಂಡಿದ್ದಾರೆ,

ಅದನ್ನು ನೀವು ಹೇಳಬೇಕು ನೀವು ಶಿಫಾರಸ್ಸು ಮಾಡಿದ್ದೀರಾ? ಅಥವಾ ನೀವು ಶಿಫಾರಸ್ಸು ಮಾಡಿದ್ದರಲ್ಲಿ 17 ಮಾತ್ರ ಸೆಲೆಕ್ಟ್ ಮಾಡಿ ಉಳಿದವುಗಳನ್ನು ಬಿಟ್ಟುಬಿಟ್ಟಿದ್ದಾರೆಯೇ? ಅಥವಾ ನೀವು ಬರೀ 17 ಜಿಲ್ಲೆಗಳನ್ನು ಮಾತ್ರ ಶಿಪಾರಸ್ಸು ಮಾಡಿದ್ದಿರಾ? ಅದನ್ನು ಹೇಳಬೇಕು

ಶ್ರೀ ವಾಟಾಳ್ ನಾಗರಾಜ್ ಏನೇ ಮಾಡಬೇಕೆಂದರೂ ರಾಜ್ಯ ಸರ್ಕಾರವನ್ನು ಕೇಳುತ್ತಾರೆ ರಾಜ್ಯ ಸರ್ಕಾರದ ಅಂಕಿ ಅಂಶಗಳು ಇಲ್ಲದೇ ಅವರು ಮಾಡುವುದಕ್ಕೆ ಸಾಧ್ಯವಿಲ್ಲ ಆದರೆ ಈ ಹತ್ತು ಜಿಲ್ಲೆಗಳನ್ನು ಬಿಟ್ಟಿರಬೇಕಾದರೆ, ರಾಜ್ಯ ಸರ್ಕಾರವೇ ತಮಗಿಷ್ಟ ಬಂದ ಹಾಗೆ 17 ಜಿಲ್ಲೆಗಳನ್ನು ಕಳುಹಿಸಿಬಿಟ್ಟು ಇನ್ನು 10 ಜಿಲ್ಲೆಗಳನ್ನು ಬಿಟ್ಟಿದ್ದಾರೆ ಹಾಗಾದರೆ ಈ ಹತ್ತು ಜಿಲ್ಲೆಗಳು ತೋಟಗಾರಿಕೆಗೆ ಯೋಗ್ಯವಿಲ್ಲವೆಂದು ನೀವು ತೀರ್ಮಾನ ಮಾಡಿದ್ದೀರಾ? ಸರ್ಕಾರ ಈ ರಿತಿ ಯೋಚಿಸಿದೆಯೇ? ನಿಮಗೆ ಹೇಳುವುದಾದರೆ ಚಾಮರಾಜನಗರ ಜಿಲ್ಲೆ ಅತ್ಯಂತ ಹಿಂದುಳಿದಿರತಕ್ಕಂಥಹ ಜಿಲ್ಲೆ ತೆಂಗು ಸಂಪೂರ್ಣ ನಾಶವಾಗಿದೆ ರೇಷ್ಮೆ ಸಂಪೂರ್ಣ ನಾಶವಾಗಿದೆ ಆ ಜಿಲ್ಲೆ ತೀರ ಕಡಿಮೆ ಜಿಲ್ಲೆಯಾಗಿದೆ ಆದುದರಿಂದ ಈ ಉಳಿದ ಹತ್ತು ಜಿಲ್ಲೆಗಳು ಏನು ಇವೆ, ಅದರ ಬಗ್ಗೆಯೂ ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಮತ್ತು ನೇರವಾಗಿ ಕೇಂದ್ರ ಸರ್ಕಾರಕ್ಕೆ ಹೇಳಬೇಕಾದರೆ ಬೇಗ ಹೇಳಿ ರಾಜ್ಯ ಸರ್ಕಾರ ಹಣ ಕೊಡಬೇಕೇ, ಹಣ ಕೊಡಿ ಯಾವುದಾದರೂ ಮಾಡಿ ಈ ಹತ್ತು ಜಿಲ್ಲೆಗಳನ್ನು ಬಹಳ ಪ್ರಾಮುಖ್ಯವಾಗಿ ಸೇರಿಸಬೇಕು

ಶ್ರೀ ಆರ್ ಧೃವನಾರಾಯಣ್ ಈಗ ತಾವು ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಿಂದ 17 ಜಿಲ್ಲೆಗಳು ಇದರಲ್ಲಿ ಸೇರಿವೆ ಎಂಬ ಬಗ್ಗೆ ಹೇಳುತ್ತಿದ್ದಿರಿ ಅದಕ್ಕೆ ಸರಿಸಮನಾಗಿ ರಾಜ್ಯ ಸರ್ಕಾರ ಅನುದಾನದಲ್ಲಿ ಹಣವನ್ನು ಬಿಡುಗಡೆ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾನ್ಯ ಉಪಮುಖ್ಯಮಂತ್ರಿಗಳಿಗೆ ಮಾಡುತ್ತೇನೆ

ಶ್ರೀ ಬಿ ಶಿವರಾಂ ಹಣವೇ ಅವರು ಇನ್ನು ಖರ್ಚುಮಾಡಿಲ್ಲ

ಶ್ರೀ ಡಿ ಆರ್ ಪಾಟೀಲ್ ರಾಷ್ಟ್ರೀಯ ತೋಟಗರಿಕೆ ಮಿಷನ್‌ನಿಂದ ಕೊಡಲಾರದಂಥ ಜಿಲ್ಲೆಗಳು ಯಾವುದು ಇದೆ, ಆ ಜಿಲ್ಲೆಗಳಿಗೆ ಕೇಂದ್ರ

ಸರ್ಕಾರ ಕೊಡುವಂಥ ಸೌಲಭ್ಯಗಳನ್ನು ತಾವು ರಾಜ್ಯ ಸರ್ಕಾರದವರೇ ಕೊಡಲಿಕ್ಕೆ ಮುಂದೆ ಬಂದು ಬಿಟ್ಟರೆ ಬಹಳ ಅನುಕೂಲವಾಗುತ್ತದೆ

ಶ್ರೀ ಕೆ ಜಯಪ್ರಕಾಶ್‌ಹೆಗಡೆ ಅಲ್ಲ ನೀವು ತಪ್ಪು ಅಭಿಪ್ರಾಯ ರಾಜ್ಯ ಸರ್ಕಾರ ಮುಂದೆ ಬರುವ ಪ್ರಶ್ನೆಯಿಲ್ಲ ಬಂದ ದುಡ್ಡೇ ಖರ್ಚು ಆಗಿಲ್ಲ, ಇದರಲ್ಲಿ ನಮ್ಮ ಜಿಲ್ಲೇನೂ ಸೇರಿಕೊಂಡಿದೆ ಸರಿಸಮಾನಾಗಿ ಹಂಚುವುದು ಎಲ್ಲಿಂದ ಬಂತು

ಶ್ರೀ ಬಿ ಶಿವರಾಂ ಈಗಾಗಲೇ ಹಣವೇ ಬಹಳಷ್ಟು ಹೊರಗಡೆ ಹೋಗಿದೆ ಹಣವೇ ಉಪಯೋಗವಾಗಿಲ್ಲ

(ಗೊಂದಲ)

ಅಧ್ಯಕ್ಷರು ಈಗ let us go to next subject ಸಾಕು ಇಲ್ಲಿಗೆ ಇದನ್ನು ಮುಕ್ತಾಯ ಮಾಡೋಣ clarification ಗೆ ಅವಕಾಶವಿಲ್ಲ ಆದರೂ ಎಲ್ಲರೂ ನಿಂತುಕೊಳ್ಳುತ್ತಿದ್ದೀರಿ ಯಡಿಯೂರಪ್ಪನವರೆ ಫೈನಲ್ ಆಗಿ ಉತ್ತರ ಹೇಳಿಬಿಡಿ ಈ ತರಹ ಆದರೆ ಮಾಡುವುದಕ್ಕೆ ಆಗುವುದಿಲ್ಲ ಎಲ್ಲರೂ ನಿಂತರೆ ಏನು ಮಾಡುವುದು? ಎಲ್ಲದರ ಬಗ್ಗೆನೂ ಚರ್ಚೆ ಮಾಡುವುದಕ್ಕೆ ಇಷ್ಟಪಡುತ್ತಾರೆ ಹೇಳಿದ್ದೇ ಹೇಳುತ್ತಾರೆ ಇದೇನಿದು?

ಶ್ರೀ ಬಿ ಎಸ್ ಯಡಿಯೂರಪ್ಪ ಕೇಂದ್ರ ಸರ್ಕಾರದ ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಿಂದ 2005-06 ರಲ್ಲಿ ಸನ್ಮಾನ್ಯ ಧರ್ಮಸಿಂಗ್ ರವರ ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ನಾವು ಈ 27 ಜಿಲ್ಲೆಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದೆವು ಮೊದಲು 9 ಜಿಲ್ಲೆಗೆ ಅನುಮತಿ ಕೊಟ್ಟರು ಆಮೇಲೆ ನಾವು 27 ಜಿಲ್ಲೆ ಆಗಬೇಕೆಂದು ಒತ್ತಾಯ ಮಾಡಿದಾಗ ಪುನಃ 6 ಜಿಲ್ಲೆ ಕೊಟ್ಟರು ಆಗ ಒಟ್ಟು 15 ಜಿಲ್ಲೆ ಆಯಿತು ನಾವು ಮತ್ತೆ ಹೋಗಿ ಕೇಂದ್ರಕ್ಕೆ ಪ್ರಸ್ತಾವನೆ ತೆಗೆದುಕೊಂಡು ಹೋದೆವು ಆಗ 2 ಜಿಲ್ಲೆ ಕೊಟ್ಟರು ಒಟ್ಟು 17 ಜಿಲ್ಲೆಗಳಾದವು ನಾವು 27 ಜಿಲ್ಲೆಗಳಿಗೆ ಈ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅನ್ವಯ ಅನುಕೂಲವಾಗಬೇಕು, ತೋಟಗಾರಿಕೆ ಬೆಳೆಗಳಿಗೆ ಆದ್ಯತೆ ಸಿಗಬೇಕು, ನಮ್ಮ ರೈತರು ಭತ್ತ, ರಾಗಿ

ಜೋಳ ಬೆಳೆದು ಬದುಕುವುದಕ್ಕೆ ಆಗುವುದಿಲ್ಲ ಹೀಗಿರುವಾಗ ಇದಕ್ಕೆ ಹೆಚ್ಚಿನ ಆದ್ಯತೆ ಸಿಗಬೇಕೆನ್ನುವುದೇ ನಮ್ಮ ಉದ್ದೇಶ ಇದುವರೆಗೆ ನಮಗೆ 89 ಕೋಟಿ ರೂಪಾಯಿ ಬಿಡುಗಡೆಯಾಗಿದೆ 39 ಕೋಟಿ ಖರ್ಚಾಗಿದೆ ಇನ್ನು 50 ಕೋಟಿ ಇದೆ

ಶ್ರೀ ಸಿದ್ದರಾಮಯ್ಯ ಮಾನ್ಯ ಯಡಿಯೂರಪ್ಪನವರೆ, ಆಯಾಯ ವರ್ಷದಲ್ಲಿ ನೀವು ಎಷ್ಟು ಟಾರ್ಗೆಟ್ ಇಟ್ಟುಕೊಂಡಿದ್ದಿರಿ? ಎಷ್ಟು ಇಯರ್ ಮಾರ್ಕ್ ಮಾಡಿದ್ದಿರಿ ನಿಮ್ಮ ಫಿಜಿಕಲ್ ಟಾರ್ಗೆಟ್ ಮತ್ತು ಫೈನಾನ್ಷಿಯಲ್ ಟಾರ್ಗೆಟ್ಎಷ್ಟು? ಇದು ಆಗಿಲ್ಲ 2005-06 ನೇ ಸಾಲಿನಿಂದ ಎಷ್ಟೆಷ್ಟು ಖರ್ಚಾಗಿದೆ ಎಂಬ ಮಾಹಿತಿ ಕೊಡಿ

ಶ್ರೀ ಬಿ ಎಸ್ ಯಡಿಯೂರಪ್ಪ ಈಗ ಹೇಗೋ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ವಿವರವಾಗಿ ನಾವು ಉತ್ತರಿಸುತ್ತೇವೆ ಈಗ ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ ನಮ್ಮ ಪ್ರಯತ್ನ 27 ಜಿಲ್ಲೆಗಳಿಗೆ ಈ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅನ್ವಯ ಅನುಕೂಲವಾಗಬೇಕು ಯಾವುದೇ ಜಿಲ್ಲೆ ಕೈ ಬಿಡಕೂಡದು ತೋಟಗಾರಿಕೆ ಅವಕಾಶ ನಮ್ಮ ರಾಜ್ಯದಲ್ಲಿ ಎಲ್ಲಾ ಬಾಗದಲ್ಲಿ ಇದೆ ನಮ್ಮ ರೈತರಿಗೆ ಬೇರೆ ಬೆಳೆಯನ್ನು ನಂಬಿಕೊಂಡು ಬದುಕುವುದಕ್ಕಾಗಲಾರದ ಉಸಿರು ಕಟ್ಟುವ ಸ್ಥಿತಿಗೆ ಬಂದಿದೆ ಇದನ್ನು ನೋಡಿಕೊಂಡು, ತಾವು ಅನ್ಯಥಾ ಭಾವಿಸದಿದ್ದರೆ, ರಾಜ್ಯದ ಇತಿಹಾಸದಲ್ಲಿ ಮೊದಲಬಾರಿಗೆ ಬಾಗಲ ಕೋಟೆಯಲ್ಲಿ ನಾವು ತೋಟಗಾರಿಕೆ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವು ದಕ್ಕೆ ಅಧಿಕಾರಿಯನ್ನು ನೇಮಿಸಿದ್ದೇವೆ ಈಗಾಗಲೇ ಅದಕ್ಕೆ ಬಳಿಗಾರ್‌ರವರು ಇದ್ದಾರೆ 750 ಎಕರೆ ಜಮೀನು ಅನ್ನು ತೆಗೆದುಕೊಳ್ಳುತ್ತಿದ್ದೇವೆ ತೋಟಗಾರಿಕೆ ಗೆ ಬೇಕಾದ ಎಲ್ಲಾ ಅವಶ್ಯಕ ಅಂಶಗಳನ್ನು ಪರಿಗಣಿಸಿದ್ದೇವೆ

ಶ್ರೀ ಸಿದ್ದರಾಮಯ್ಯ ನಾವು ಏನು ಕೇಳುತ್ತೇವೆ, ನೀವು ಅಷ್ಟಕ್ಕೆ ಮೊದಲು ಉತ್ತರ ಕೊಡಿ ಬೇರೆ ಎಲ್ಲಾ ಏಕೆ ಹೇಳುತ್ತೀರಿ?

ಶ್ರೀ ಬಿ ಶಿವರಾಂ ಮೊದಲು 9 ಇತ್ತು, ನಂತರ ಹೇಗೆ 9 ಆಯಿತು ನಂತರ 2 ಹೇಗೆ ಆಯಿತು? ಅದನ್ನು ನಿವು ಹೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ ನನಗೆ ಪೂರ್ತಿ ಮಾತನಾಡುವುದಕ್ಕೆ ಮೊದಲು ಅವಕಾಶ ಕೊಡಿ ಸಾರ್ ಒಂದು ನಿಮಿಷ ನಾನು ಹೇಳುತ್ತೇನೆ ಕೇಳಿ ಸ್ವಾಮಿ

ಶ್ರೀ ಬಿ ಶಿವರಾಂ ಯಾವ ಆದಾರದ ಮೇಲೆ ಮಡಿದ್ದೇವೆಂದು ಹೇಳುವುದು ಬಿಟ್ಟುಬಿಟ್ಟು ನಾವು ಯೂನಿವರ್ಸಿಟಿಯನ್ನು ಮಾಡಿದ್ದೇವೆ

ಶ್ರೀ ಬಿ ಎಸ್ ಯಡಿಯೂರಪ್ಪ ಈಗ ನಿಮ್ಮ ಪಾಯಿಂಟ್ ಏನು? ದಯಮಾಡಿ ಒಂದು ನಿಮಿಷ ಕೇಳಿ ಸಾರ್ ನೀವು ಹೇಳಿ ಎಂದು ಹೇಳಿದ್ದಕ್ಕೆ ಎದ್ದು ನಿಂತುಕೊಂಡಿದ್ದೇನೆ ಉಳಿದಂಥ 10 ಜಿಲ್ಲೆಗಳಿಗೂ ಕೇಂದ್ರ ಸರ್ಕಾರದಿಂದ ಸವಲತ್ತುಗಳು ಸಿಗಬೇಕು ಅದಕ್ಕೆ ಈಗಾಗಲೇ ನಾಲ್ಕಾರು ಬಾರಿ ಮನವಿ ಮಾಡಿದ್ದೇವೆ ಮತ್ತು ವೈಯಕ್ತಿಕವಾಗಿ ಮತ್ತು ನಿಯೋಗದ ಮೂಲಕ ಹೋಗಿ ಭೇಟಿ ಮಾಡಿದ್ದೇವೆ ನಮ್ಮ ಧರ್ಮಸಿಂಗ್ ರವರು ಮುಖ್ಯಮಂತ್ರಿ ಆದಾಗಿನಿಂದಲೂ ಕೂಡ ಈ ಪ್ರಯತ್ನಗಳು ನಡೆದವು ಅಲ್ಲಿಂದ ಅದು 9 ನಂತರ 6 ಆಗಿ ನಂತರ 2 ಆಗಿ ಒಟ್ಟು 17 ಜಿಲ್ಲೆಗಳು ಸೇರಿವೆ ಉಳಿದ 10 ಜಿಲ್ಲೆಗಳಿಗೂ ಸಹ ನಾವು ಒಟ್ಟಾಗಿ ಸೇರಿ ನಿಯೋಗ ಹೋಗಿ 27 ಜಿಲ್ಲೆಗಳಿಗೂ ಸಿಗಬೇಕೆಂದು ಒತ್ತಾಯ ಮಾಡೋಣ ನಾನು ಏನು ಹೇಳಿದೆ ಎಂದರೆ, ತೋಟಗಾರಿಕೆ ಬೆಳಗೆ ಈ ಸಮ್ಮಿಶ್ರ ಸರಕಾರ ವಿಶೇಷ ಒತ್ತು ಕೊಟ್ಟಿದೆ ಅದಕ್ಕಾಗಿ ಬಾಗಲಕೋಟೆಯಲ್ಲಿ ಒಂದು ವಿಶ್ವವಿದ್ಯಾನಿಲಯ ತೆರೆಯುವುದಕ್ಕಾಗಿ ವಿಶೇಷವಾಗಿ ಹಣ ಖರ್ಚು ಮಾಡುತ್ತಿದ್ದೇವೆ ಅದಕ್ಕೊಬ್ಬ ವಿಶೇಷಾಧಿಕಾರಿಯನ್ನೂ ನೇಮಿಸಿದ್ದೇವೆ ದುಡ್ಡು ಖರ್ಚು ಮಾಡುವುದಕ್ಕೆ ಎಲ್ಲಾ ಸಿದ್ದತೆ ಮಾಡುತ್ತಿದ್ದೇವೆ ಹಾಗಾದರೆ ಇದಕ್ಕೆ ಸಂಭಂದವಿಲ್ಲವೇ, ನಾವು ಇದಕ್ಕೆ ಆದ್ಯತೆ ಕೊಟ್ಟಿದ್ದೇವೆಂದು ಹೇಳಿದೆ

ಶ್ರೀ ಬಿ ಶಿವರಾಂ ನೀವು ಎಲ್ಲಾ ಹೇಳುತ್ತಿದ್ದೀರಿ ಒಂದು ವಿಚಾರ ಹೇಳಿ

ಶ್ರೀ ಸಿದ್ದರಾಮಯ್ಯ ನೀವು ಅದಕ್ಕೆ ಆದ್ಯತೆ ಕೊಟ್ಟಿದಿರಿ ಆಯಿತು ಅದನ್ನು ಡಿಸ್ಪ್ಯೂಟ್ ಮಾಡುವುದಿಲ್ಲ ನೀವು ಉಪಮುಖ್ಯಮಂತ್ರಿಗಳು ಸ್ವಲ್ಪ ಕುಳಿತುಕೊಳ್ಳಿ ನಿಂತು ಕೊಂಡುಬಿಟ್ಟರೆ ಹೇಗೇ? ಆದ್ಯತೆ ಕೊಟ್ಟಿರುವುದು

ಸರಿ, ಅದರ ಬಗ್ಗೆ ನಮ್ಮ ತಕರಾರಿಲ್ಲ ನೀವು ಆದ್ಯತೆ ಕೊಟ್ಟವರು 89 ಕೋಟಿ ಬಂದರು ಅದರಲ್ಲಿ 50 ಕೋಟಿ ಏಕೆ ಖರ್ಚುಮಾಡಲಿಲ್ಲ? ಕೇಂದ್ರ ಸಕಾರದಿಂದ 2005–06ರಲ್ಲಿ ಎಷ್ಟಡು ದುಡ್ಡು ಬಂರು? ಆಯಾಯ ವರ್ಷಗಳಲ್ಲಿ ಎಷ್ಟು ದುಡ್ಡು ಖರ್ಚಾಗಿದೆ what is your physical target and what is your financialtarget ಅದನ್ನು ಸ್ವಲ್ಪ ಹೇಳಿ 50 ಕೋಟಿ ಉಳಿದುಕೊಳ್ಳಬೇಕಾದರೆ ಏನಾದರೂ ಕಾರಣ ಇರಬೇಕಲ್ಲವೇ? ಒಂದೇ ಸಾರಿಗೆ 50 ಕೋಟಿ ಬರುವುದಕ್ಕೆ ಸಾಧ್ಯವಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಬೇಡಿಕೆಗಳ ಮೇಲೆ ಚರ್ಚೆಯಾದಾಗ ಸಂಪೂರ್ಣವಾದ ವಿವರವನ್ನು ಸಂಬಂಧಪಟ್ಟ ಸಚಿವರು ಒದಗಿಸುತ್ತಾರೆ ಈಗ ಇಲ್ಲಿ ಏನು ಪ್ರಶ್ನೆ ಬಂತು ಎಂದರೆ, ಈ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅನ್ವಯ ಕರ್ನಾಟಕ ರಾಜ್ಯದ 27 ಜಿಲ್ಲೆಗಳಿಗೆ ತೆಗೆದುಕೊಳ್ಳುವುದು ಹೇಗೆ ಎನ್ನುವುದು ಚರ್ಚೆ ನಾಲ್ಕಾರು ಬಾರಿ ಪತ್ರ ಬರೆದಿದ್ದೇವೆ ನಿಯೋಗದ ಮೂಲಕವಾಗಿ ಹೋಗಿ ವಿನಂತಿ ಮಾಡಿದ್ದೇವೆ

ಶ್ರೀ ಸಿದ್ದರಾಮಯ್ಯ ನಿಮ್ಮ ಆದ್ಯತೆಯು ಬರಿ ಕಾಗದದ ಮೇಲೆ ಮಾತುಗಳಲ್ಲಿ ಉಳಿದುಕೊಂಡಿದೆ ಕೇಂದ್ರ ಸರ್ಕಾರ ಕೊಟ್ಟಿರುವ 50 ಕೋಟಿ ರೂಪಾಯಿಗಳನ್ನು ಇನ್ನು ಖರ್ಚು ಮಾಡಿಲ್ಲವಲ್ಲ ಏಕೆ? This government is not serious about implementing it

ಶ್ರೀ ಬಿ ಎಸ್ ಯಡಿಯೂರಪ್ಪ ನಿಮ್ಮ ಸಹಕಾರ ಬೇಕು ನಾವೆಲ್ಲಾ ಒಟ್ಟಾಗಿ ಹೋಗಿ ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇರುವಂಥ ಕಾಲದಲ್ಲಿ ಒತ್ತಾಯ ತಂದು 27 ಜಿಲ್ಲೆಗಳಿಗೆ ಇದರ ಉಪಯೋಗ ಮಾಡಿಕೊಳ್ಳುವ ಪ್ರಯತ್ನ ಮಾಡೋಣ ಇದರಲ್ಲಿ ರಾಜಕೀಯ ಬೆರೆಸುತ್ತಿಲ್ಲ ನಿಮ್ಮ ಸಹಾಯವೂ ಬೇಕು 27 ಜಿಲ್ಲೆಗಳಿಗೂ ಇದು ಅನುಕೂಲವಾಗಬೇಕು ದೃಷ್ಟಿಯಿಂದ ರಾಜ್ಯ ಸರ್ಕಾರ ಏನೇನು ಪ್ರಯತ್ನ ಮಾಡಬೇಕೋ ಆ ಎಲ್ಲಾ ಪ್ರಯತ್ನವನ್ನೂ ಮಾಡುತ್ತೇವೆ ನಿಮ್ಮನ್ನು ಜೊತೆಗೆ ಕರೆದುಕೊಂಡು ಹೋಗಿ ಒತ್ತಾಯ ತರವಂಥ ಕೆಲಸ ಮಾಡುತ್ತೇವೆ

(ಗೊಂದಲ)

ಅಧ್ಯಕ್ಷರು ಗಮನ ಸೆಳೆಯುವ ಸೂಚನೆ ಸಂದರ್ಭದಲ್ಲಿ ಈ ತಿತಿ ಮಾಡಿದರೆ ಹೇಗೆ?

ಶ್ರೀ ಬಿ ಎಸ್ ಯಡಿಯೂರಪ್ಪ ಚರ್ಚೆಯ ಕಾಲದಲ್ಲಿ ಉತ್ತರ ಕೊಡುತ್ತೇವೆ

ಅಧ್ಯಕ್ಷರು ಎಸ್ ಎಸ್ ಪಾಟೀಲರೇ ನೀವು ನಿಮ್ಮ ಗಮನ ಸೆಳೆಯುವ ಸೂಚನೆ ಮಾಡುತ್ತೀರೋ ಬಿಡುತ್ತೀರೋ?

ಶ್ರೀ ಬಿ ಶಿವರಾಂ ಯಾವ ಮಾದಂಡದ ಮೇಲೆ ಇದನ್ನು ಆಯ್ಕೆ ಮಾಡಿದ್ದೀರಿ ಅದನ್ನು ಹೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ ಒಂದು ಬೆಟ್ಟು ನೀವು ನನಗೆ ತೋರಿಸಿದರೆ ನಾಲ್ಕು ಬೆಟ್ಟು ನಿಮಗೆ ತೋರಿಸುತ್ತದೆ

ಅಧ್ಯಕ್ಷರು ಬೇಡಿಕೆಯ ಮೇಲೆ ವಿವರವಾಗಿ ಮಾತನಾಡಿ ಬೇಡಿಕೆಯ ವಿವರವಾಗಿ ಚರ್ಚೆಯಾಗಬೇಕು ಅದು ಬಿಟ್ಟು ಸುಮ್ಮನೆ ಟೈಂ ಏಕೆ ವೇಸ್ಟ್ ಮಾಡುತ್ತೀರಿ?

ಶ್ರೀ ಸಿದ್ದರಾಮಯ್ಯ ಸಮಯ ವೇಸ್ಟ್ ಆಗುವುದಿಲ್ಲ

ಅಧ್ಯಕ್ಷರು ಹೌದು ಸ್ವಾಮಿ ಇದು ವೇಸ್ಟ್ ಅಲಲ್ಲವೆ? ಇದು ನನ್ನ ಪ್ರೆಕಾರ ವೇಸ್ಟ್, ಏಕೆಂದರೆ ಮುಂದೆ ಬೇಡಿಕೆಗಳು ಇವೆ,ಅಲ್ಲಿ ನೀವು ವಿವರವಾಗಿ ಮಾತನಾಡಬಹುದು ಇದು ಸರಿಯಲ್ಲ

ಶ್ರೀ ಸಿದ್ದರಾಮಯ್ಯ ನೀವು ಕೋಪಿಸಿಕೊಳ್ಳಬೇಡಿ ನೀವು ಕೋಪಿಸಿ ಕೊಂಡು ಬಿಟ್ಟರೆ ಹೇಗೆ? ಏಕೆ ಇದ್ದಕ್ಕಿದ್ದಂತೆ ಕೋಪ ಜಾಸ್ತಿಯಾಗುತ್ತದೆ

ಅಧ್ಯಕ್ಷರು ಆಗಲ್ಲ ನೋ,ನೋ, ಮುಖ್ಯವಾದ ವಿಚಾರ ಎಂದು ಕ್ಲಾರಿಫಿಕೇಷನ್‌ಗೆ ಕೊಟ್ಟಿದ್ದೇನೆ ಮತ್ತೆ ಮತ್ತೆ ಹೀಗೆ ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ This is a very important Programme ರೈತರಿಗೆ ಅನುಕೂಲವಾಗುವ ಕಾರ್ಯಕ್ರಮವಲ್ಲವೆ? ಈ ಕಾರ್ಯದಿಂದ ಬರಗಾಲದಲ್ಲಿರುವ ಪ್ರದೇಶಗಳಿಗೆ ಅನುಕೂಲವಾಗುವುದಿಲ್ಲವೆ? ಕೇಂದ್ರ ಸರ್ಕಾರ 89 ಕೋಟಿ ರೂಪಾಯಿ ಕೊಟ್ಟಿದ್ದಾರೆ ಅದರಲ್ಲಿ 30 ಕೋಟಿ ರೂಪಾಯಿ 2–3 ವರ್ಷಗಳಿಂದ ಖರ್ಚಾಗಿದೆ ಇನ್ನು 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಲ್ಲ ಈ ಸರ್ಕಾರಕ್ಕೆ ಇಂಪ್ಲಿಮೆಂಟ್ ಮಾಡುವುದಕ್ಕೆ ಬದ್ಧತೆಯಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುವುದಿಲ್ಲವೆ?

ಅಧ್ಯಕ್ಷರು ನೋಡಿ ಎಲ್ಲಾ ಮಾತನಾಡಿಬಿಟ್ಟು ಕೊನೆ ಜೈ ಜೈ ಜೈ

ಶ್ರೀ ಸಿದ್ದರಾಮಯ್ಯ ಇದಕ್ಕೆ ಉತ್ತರ ಹೇಳಬೇಕಲ್ಲವೇ? ಇದಕ್ಕೆ ಯಡಿಯೂರಪ್ಪನವರು ಉತ್ತರ ಹೇಳಿದಿರಾ? ಬೇರೆ ಏನೇನು ಹೇಳುತ್ತಾರೆ ನಮ್ಮದು ಆದ್ಯತೆ ಇದೆ, ನಮ್ಮದು ಹಾರ್ಟಿಕಲ್ಚರ್‌ಗೆ ಆದ್ಯತೆ, ಯೂನಿವರ್ಸಿಟಿ ಮಾಡುತ್ತಿದ್ದೇವೆ, that is not the answer

ಅಧ್ಯಕ್ಷರು ಬೇಡಿಕೆಗಳ ಮೇಲೆ ವಿವರವಾಗಿ ಉತ್ತರ ಕೊಡುತ್ತಾರೆಂದು ಹೇಳಿದ್ದಾರೆ

ಶ್ರೀ ಸಿದ್ದರಾಮಯ್ಯ ನೀವು ಈ ರಿತಿ ಅಡ್ಡಬಂದರೆ ಉತ್ತರವೇ ಸಿಕ್ಕುವುದಿಲ್ಲ, ಪರಿಹಾರವೇ ಸಿಕ್ಕುವುದಿಲ್ಲ

ಅಧ್ಯಕ್ಷರು ಏಕೆ ಉತ್ತರ ಸಿಕ್ಕುವುದಿಲ್ಲ? ಇದು ಬೇರೆ ಇದೆ this is different

ಶ್ರೀ ಬಿ ಶಿವರಾಂ ಗಮನ ಸೆಳೆಯುವ ಸೂಚನೆಯಲ್ಲಿ ಧೃವ ನಾರಾಯಣ ಯಾವ ಆಧಾರದ ಮೇಲೆ ಆಯ್ಕೆ ಮಾಡಿದ್ದಾರೆ ಎಂದು ಕೇಳಿದ್ದಕ್ಕೂ ಮಾಹಿತಿ ಇಲ್ಲವೆಂದರೆ ಹೇಗೆ? ಇದಕ್ಕಿಂತ ಸರ್ಕಾರಕೆ ಏನು ಹೇಳಬಹುದು

ಅಧ್ಯಕ್ಷರು ಶಿವಾರಾಂ ರವರೆ one or two clarifications ಕೇಳಬಹುದು ನಾನು ಸಬ್ಜೆಕ್ಟ್ ಹಾಕಿ ಕೊಟ್ಟಿದ್ದೇನೆ ಮತ್ತೆ ಪದೇ ಪದೇ ಅದನ್ನು ಕೇಳುತ್ತಿದ್ದರೆ ಮತ್ತೊಂದು ಹೇಳುತ್ತಿದ್ದರೆ, ಏನು ಮಾಡುವುದು?

(ಗೊಂದಲ)

ಅಧ್ಯಕ್ಷರು ಆಯಿತು ಇಲ್ಲಿಗೆ ಸಾಕು ಮುಂದಕ್ಕೆ ಹೋಗೋಣ

ಶ್ರೀ ಬಿ ಎಸ್ ಯಡಿಯೂರಪ್ಪ ದಯಮಾಡಿ ಇಲ್ಲ ಕೇಳಿ

ಅಧ್ಯಕ್ಷರು ಸ್ವಾಮಿ ಅದನ್ನು ಮುಗಿಸಿದ್ದೇನೆ

ಶ್ರೀ ಬಿ ಶಿವರಾಂ ಮಾನ್ಯ ಸಚಿವರು ಅವರು ಉತ್ತರ ಹೇಳುವುದಕ್ಕೆ ನಿಂತಿದ್ದಾರೆ

ಶ್ರೀ ಬಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯ ಮಂತ್ರಿಗಳಿಗೆ ನನ್ನದೊಂದು ಚಿಕ್ಕ ಪ್ರಶ್ನೆ ಇದೆ

ಶ್ರೀ ಬಿ ಎಸ್ ಯಡಿಯೂರಪ್ಪ ಕೆಲವು ಅಂಕಿ ಅಂಶಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ 2005–06ರಲ್ಲಿ 44 55 ಕೋಟಿ ರೂಪಾಯಿ ಬಂತು ನಾವು 41 97 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಅದರಲ್ಲಿ ಇನ್ನೂ 2,58 ಕೋಟಿ ರೂಪಾಯಿ ಉಳಿದು ಕೊಂಡಿದೆ 2006–07 ನೇ ಸಾಲಿನಲ್ಲಿ ಜನವರಿ ಮಾರ್ಚ್ ತಿಂಗಳ ಕೊನೆಯವರೆಗೂ ನಮಗೆ ಹಣ ಬಂದಿದೆ ಒಟ್ಟು ನಮಗೆ ಇದುವರೆಗೂ 89 40 ಕೋಟಿ ರೂಪಾಯಿ ಬಂದಿದೆ ಇದರಲ್ಲಿ ನಾವು ಎಷ್ಟು ಖರ್ಚು ಮಾಡಿದ್ದೇವೆಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ ಉಳಿದಂಥ ಹಣ ಇತ್ತೀಚೆಗೆ ಬಂದಿದೆ ಮತ್ತೆ 2007–08 ರಲ್ಲಿ ನಮಗೆ ಇನ್ನೂ ಪ್ರೋಗ್ರಾಂ ಅಪ್ರೂವಲ್ ಆಗಿ ಬಂದಿಲ್ಲ ಆದ್ದರಿಂದ ಈಗ ಬಂದಿರತಕ್ಕಂಥ ಹಣದಲ್ಲಿ ಒಂದು ಪೈಸೆ ಉಳಿಸದೆ ಸಂಪೂರ್ಣವಾಗಿ ಮತ್ತು ಸಮರ್ಪಕವಾಗಿ ಖರ್ಚು ಮಾಡುತ್ತೇವೆ

ಶ್ರೀ ಸಿದ್ದರಾಮಯ್ಯ 2006–07 ನೇ ವರ್ಷ ಈಗಾಗಕೇ ಮುಗಿಯಿತು ಜನವರಿ ಮತ್ತು ಮಾರ್ಚ್ ತಿಂಗಳ ಕೊನೆಯಲ್ಲಿ ಹಣ ಬಂತೆಂದು ತಾವು ಹೇಳುತ್ತೀರಿ ಏಕೆ ಲೇಟ್ ಆಗಿ ಬರುತ್ತದೆ ಹೇಳಿ? ನೀವು ಖರ್ಚು ಮಾಡಿರತಕ್ಕಂಥಹದ್ದಕ್ಕೆ ಯುಟಿಲೈಜೇಷನ್ ಸರ್ಟಿಫಿಕೇಟ್ ಅನ್ನು ಕೊಟ್ಟಿಲ್ಲ 2005–06 ರಲ್ಲಿ ನಿವು ಎಷ್ಟು ಹಣ ಖರ್ಚು ಮಾಡಿದ್ದಿರಿ ಮತ್ತು ಅದರ ಯುಟಿಲೈಜೇಷನ್ ಸರ್ಟಿಫಿಕೇಟ್ ಅನ್ನು ಯಾವಾಗ ಕಳುಹಿಸಿದ್ದಿರಿ ಎಂಬುದನ್ನು ಮತ್ತು ಹಣ ಏಕೆ ತಡವಾಗಿ ಬಂತೆಂಬುದರೆ ಬಗ್ಗೆ ಹೇಳಬೇಕು

ಶ್ರೀ ಬಿ ಸಿ ಪಾಟೀಲ ಸನ್ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಬೇಕು

ಅಧ್ಯಕ್ಷರು ಉತ್ತರ ಹೇಳಿದ್ದಾರೆ ಈಗ ಮುಗಿಸೋಣ ದಯಮಾಡಿ ಬೇರೆಯವರು ಕುಳಿತಿಕೊಳ್ಳಿ ಅವರು ಸಮರ್ಪಕವಾಗಿ ಉತ್ತರ ಹೇಳಿದ್ದಾರೆ ಮಾನ್ಯ ಎಸ್ ಎಸ್ ಪಾಟೀಲರವರೆ ತಾವು ಮಾತನಾಡಿ (ಗೊಂದಲ) ಈಗಾಗಲೇ ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದಾರೆ ಮತ್ತೆ ಎಷ್ಟು ಸಮಯ ಕೊಡುವುದು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಗಮನ ಸೆಲೆಯುವ ಸೂಚನೆ ಮೇಲೆ ಉತ್ತರ ಕೊಟ್ಟ ನಂತರ ಮುಗಿಯುತ್ತದೆ ಮತ್ತೆ ಅದರ ಮೇಲೆ ಎಷ್ಟು ಕ್ಲಾರಿಫಿಕೇಷನ್ ಗೆ ಅವಕಾಶ ಕೊಡುವುದು

ಅಧ್ಯಕ್ಷರು ನೋಡಿ ಮಿಸ್ಟರ್ ಧೃವನಾರಾಯಣ್‌ರವರೆ, ನಿಮಗೆ ಎಷ್ಟು ಅವಕಾಶ ಕೊಟ್ಟರು ತೃಪ್ತಿಯಿಲ್ಲ ಈ ರೀತಿಯಾಗಿ ತಾವು ಏಕೆ ಮಾಡುತ್ತೀರಿ?

(ಗೊಂದಲ)

ಶ್ರೀ ಆರ್ ಧೃವನಾರಾಯಣ್ ರಾಷ್ಟ್ರೀಯ ಅಭಿವೃದ್ಧಿ ಯೋಜನೆಯಡಿ ಯಲ್ಲಿ ಯಾವ 10 ಜಿಲ್ಲೆಗೆ ಅನುದಾನ ಬಂದಿಲ್ಲವೋ ಅಂದ ಜಿಲ್ಲೆಗಳಿಗೆ ರಾಜ್ಯ ಸರ್ಕಾರದ ಅನುದಾನದಿಂದ ಆ ಜಿಲ್ಲೆಗಳಿಗೂ ಕೂಡ ಸರಿಸಮನಾಗಿ

ಕೊಡಿ ಎಂಬ ನನ್ನ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ ದಯಮಾಡಿ ಮಾನ್ಯ ಹಣಕಾಸಿನ ಸಚಿವರು ಉಳಿದ 10 ಜಿಲ್ಲೆಗಳಲ್ಲಿನ ಮಂಡ್ಯ, ಚಾಮರಾಜನಗರ, ಜಿಲ್ಲೆಗಳಿಗೂ ರಾಜ್ಯ ಸರ್ಕಾರದಿಂದ ಅನುದಾನ ಕೊಡತಕ್ಕಂಥದ್ದರ ಬಗೆ ಉತ್ತರ ಬಂದಿಲ್ಲ 17 ಜಿಲ್ಲೆಗಳಿಗೆ ಹಣ ಬಂದಿದೆ, ಸರಿಯಾದ ರೀತಿಯಲ್ಲಿ ಖರ್ಚು ಆಗಿಲ್ಲವೆಂಬುದರ ಬಗ್ಗೆ ಮಾತ್ರ ಈಗ ಚರ್ಚೆಯಾಗಿದೆಯಷ್ಟೆ ನಾನು ಕೇಳುತ್ತಿರುವುದೇನೆಂದರೆ ರಾಷ್ಟ್ರೀಯ ತೋಟಗಾರಿಕೆ ಯೋಜನೆಗಳ ವ್ಯವಸ್ಥೆ ಇಲ್ಲದೆ ಇರತಕ್ಕಂಥ ಉಳಿದ 10 ಜಿಲ್ಲೆಗಳಿಗೂ ಸಹ ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡಿ ಎಂದು ಕೇಳುತ್ತಿದ್ದೇನೆ

ಶ್ರೀ ಬಿ ಎಸ್ ಯಡಿಯೂರಪ್ಪ ಹಣಕಾಸಿನ ಲಭ್ಯತೆ ನೋಡಿಕೊಂಡು ಮುಂದಿನ ದಿನಗಳಲ್ಲಿ ವ್ಯವಸ್ಥೆ ಮಾಡಲಾಗುತ್ತದೆ ರೈತರ ಪ್ರಶ್ನೆ ಬಂದಾಗ ಈ ಸಮ್ಮಿಶ್ರ ಸರ್ಕಾರ ಹಣಕಾಸಿನ ಇತಿಮಿತಿ ನೋಡಿಕೊಂಡು ಧಾರಾಳವಾಗಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸಿದ್ಧವಿದೆ

ಶ್ರೀ ಸಿದ್ಧರಾಮಯ್ಯ ಧಾರಾಳವೆಂದು ಹೇಳುತ್ತಿದ್ದೀರಿ ಆದ್ದರಿಂದ ಇದಕ್ಕೂ ಹಣ ಕೊಡುತ್ತೇವೆಂದು ಹೇಳಿ ರೈತರ ಮತ್ತು ಬಡವರ ಸಮಸ್ಯೆ ಬಂದಾಗ ನಾವು ಧಾರಾಳವಾಗಿದ್ದೇವೆ, ಓಪನ್‌ಮೈಂಡ್ ಇದ್ದೇವೆಂದು ಹೇಳುತ್ತಿದ್ದಿರಿ ಹಾಗಾದರೆ ಕೊಡುತ್ತೇವೆಂದು ಅವರಿಗೆ ಹೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ ರೈತರಿಗೆ ನಾವು ಕೊಟ್ಟಿರುವಷ್ಟು ಸವಲತ್ತು ದೇಶದ ಯಾವ ರಾಜ್ಯದಲ್ಲೂ ಕೂಡ ಕೊಟ್ಟಿಲ್ಲವೆಂದು ನಾನು ಎದೆ ತಟ್ಟಿಕೊಂಡು ಹೇಳುತ್ತೇನೆ ಸ್ವಾತಂತ್ರ್ಯ ನಂತರ ಯಾವ ರಾಜ್ಯ ಕೊಟ್ಟಿದ್ದಾರೆ ಹೇಳಿ?

(ಗೊಂದಲ)

ಅಧ್ಯಕ್ಷರು ಕೊಡುವುದಿಲ್ಲವೆಂದು ಯಾರು ಹೇಳಿದ್ದಾರೆ ಕೊಡುತ್ತೀವೆಂದು ಎಲ್ಲಾ ಸರ್ಕಾರದವರು ಹೇಳುತ್ತಾರೆ

ಶ್ರೀ ಸಿದ್ದರಾಮಯ್ಯ ನಾವು ಮಾಡಿರುವುದನ್ನು ನೀವು ಆಮೇಲೆ ಮಾಡಿದ್ದಿರಷ್ಟೆ

ಶ್ರೀ ಬಿ ಎಸ್ ಯಡಿಯೂರಪ್ಪ ನಾವು ಕಳೆದ 14 ತಿಂಗಳಿನಿಂದ ರೈತರಿಗೆ ಕೊಟ್ಟಿರುವಷ್ಟು ಸವಲತ್ತನ್ನು ಬೇರೆ ಯಾವುದೇ ರಾಜ್ಯದವರು ಕೊಟ್ಟಿಲ್ಲ

(ಗೊಂದಲ)

ಅಧ್ಯಕ್ಷರು ಇದನ್ನು ಇಲ್ಲಿಗೆ ಮುಗಿಸಿ ಮುಂದಕ್ಕೆ ಹೋಗುವುದಕ್ಕೆ ಅವಕಾಶ ಕೊಡಿ

ಶ್ರೀ ಸಿದ್ದರಾಮಯ್ಯ ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳಬೇಕಷ್ಟೆ ಬೇರೆ ಯಾರು ಹೇಳುವುದಿಲ್ಲ ಉಲ್ಲಾಳ ಚುನಾವಣೆಯಲ್ಲಿ 14 ತಿಂಗಳಿನಿಂದ ನೀವು ಮಾಡಿರತಕ್ಕಂಥ ಅಭಿವೃದ್ಧಿ ಕೆಲಸಗಳ ಬಗ್ಗೆ ಹೇಳಿದ್ದೀರಿ ಅಲ್ಲಿ ಏನಾಯಿತು? ನಿಮ್ಮ ಡೆವಲಪ್‌ಮೆಂಟ್‌ಗಳನ್ನು ನಿಮ್ಮ ಮಾತುಗಳನ್ನು ಜನರ‍್ಯಾರು ನಂಬಲಿಲ್ಲ

ಅಧ್ಯಕ್ಷರು ಮಾನ್ಯ ಎಸ್‌ಎಸ್‌ಪಾಟೀಲರವರೆ ತಾವು ಕೇಳಿ ನೀವು ಕೇಳದಿದ್ದರೆ ಅವರು ನಿಂತುಕೊಂಡು ಮಾತನಾಡುತ್ತಲೇ ಇರುತ್ತಾರೆ ಮಾನ್ಯ ಡಿ ಆರ್ ಪಾಟೀಲರವರೆ, ತಾವು ಕುಳಿತುಕೊಳ್ಳುತ್ತೀರೋ ಅಥವಾ ಇಲ್ಲವೋ? ದಯಮಾಡಿ ಕುಳಿತುಕೊಳ್ಳಿ ನಾನು ಮಾನ್ಯ ಎಸ್‌ಎಸ್‌ಪಾಟೀಲರವರನ್ನು ಕರೆದಿದ್ದೇನೆ ಎಲ್ಲಾ ಸದಸ್ಯರು ಈ ರಿತಿ ಮಾಡಿದರೆ ಹೇಗೆ? ನಮಗೂ ಕೂಡ ಪೇಷನ್ಸ್ ಇರುತ್ತದೆ ಎಲ್ಲರೂ ಸುಮ್ಮನೆ ನಿಂತುಕೊಂಡರೆ ಹೇಗೆ? ಮಾನ್ಯ ಪಾಟೀಲ್‌ರವರೆ ತಾವು ಮಾತನಾಡಿ ನನಗೂ ಸಾಕಾಗಿದೆ ನೀವು ಕೇಳಿ ಇಲ್ಲದಿದ್ದರೆ ಕೇಳುವುದಿಲ್ಲವೆಂದು ಹೇಳಿ ನಾನು ಮುಂದಕ್ಕೆ ಹೋಗುತ್ತೇನೆ ದಯಮಾಡಿ ಕೇಳಿ ನಾನು ಅವರನ್ನು ಕರೆದಿದ್ದೇನೆ ದಯಮಾಡಿ ಬೇರೆಯವರೆಲ್ಲರೂ ಕುಳಿತು ಕೊಳ್ಳಬೇಕಷ್ಟೆ ನೀವು ಕೇಳಿ ಸ್ವಾಮಿ ಎಲ್ಲರೂ ಬೇಕಾದರೆ ಮಾತನಾಡಿ ಇಷ್ಟ ಬಂದವರು ಮಾತನಾಡಿ ಕೊಳ್ಳಬಹುದು ನನ್ನದೇನೂ ಇಲ್ಲ

ಇ) ವಿಷಯ ಡಾ ಬಂಜಗೆರೆ ಜಯೊಪ್ರಕಾಶ್ ಅವರು ಬರೆದು ಪ್ರಕಟಿಸಿರುವ "ಅನುದೇವ ಹೊರಗಣವನು" ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ

ಶ್ರೀ ಎಸ್ ಎಸ್ ಪಾಟೀಲ ಮಾನ್ಯ ಅಧ್ಯಕ್ಷರೆ, ಡಾ ಬಂಜಗೆರೆ ಜಯಪ್ರಕಾಶ್ ರವರು "ಅನುದೇವ ಹೊರಗಣವನು" ಅನ್ನುವ ಕೃತಿ ಬರೆದು ಪ್ರಕಟಿಸಿದ್ದು ಅದರಲ್ಲಿ ಅಂಬೇಡ್ಕರ್ ಕುವೆಂಪು, ಬಸವಣ್ಣನವರು ಅಕ್ಕ ನಾಗಮ್ಮ ರವರು ವಗೈರೆ ಬಗ್ಗೆ ಚಾರಿತ್ರ್ಯ ವಧೆ ಮಾಡಿದ್ದಾರೆ ಈ ಬಗ್ಗೆ ಈಗಾಗಲೇ ಬಸವಾಭಿಮಾನಿಗಳು ದಂಗೆ ಏಳುವ ಹಾಗೂ ಸಮಾಜದಲ್ಲಿ ಅಶಾಂತಿ ಹುಟ್ಟುವ ಸಂಬವ ಇರುತ್ತದೆ ಈ ಹಿಂದೆ ಡಾ ಪಿ ವಿ ನಾರಾಯಣ ಅವರ "ಧರ್ಮಕಾರಣ" ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿದಂತೆ ಈ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಾಗೂ ಡಾಕ್ಟರ್ ಬಂಜಗೆರೆ ಜಯಪ್ರಕಾಶ್‌ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಶಿಕ್ಷೆಗೆ ಒಳಪಡಿಸಬೇಕೆಂದು ಕೆಲವು ಸಂಘಟನೆಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವ ಬಗ್ಗೆ ವಿವರವಾದ ಮಾಹಿತಿ ಕೇಳಿ, ಮತ್ತೆ ಧರ್ಮಕಾರಣದ ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡ ಬಗ್ಗೆ ಸರ್ವೋಚ್ಛ ನ್ಯಾಯಾಲಯದ ಆದೇಶವಾಗಿದ್ದು ಈ ಬಗ್ಗೆ ವಿವರ ಕೇಳಿ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯಲು ಬಯಸುತ್ತೇನೆ

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಕನ್ನಡ ಮತ್ತು ಸಂಸ್ಕೃತಿ ಸಚಿವರು ಡಾ ಬಂಜಗೆರೆ ಜಯಪ್ರಕಾಶ್ ರವರ "ಅನುದೇವ ಹೊರಗಣ ವನು" ಎಂಬ ಕೃತಿಯು ಏಪ್ರಿಲ್ 2007 ರಲ್ಲಿ ಬಿಡುಗಡೆಗೊಂಡಿದ್ದು ಇದು ಪ್ರಥಮ ಮುದ್ರಣವಾಗಿರುತ್ತದೆ ಮಾಹಾಕಾರ್ಯದರ್ಶಿ ಅಖಿಲ ಭಾರತ ವೀರಶೈವ ಮಹಾಸಭಾ ಬಸವ ಸಮಿತಿ ಹಾಗೂ ಇನ್ನು ಮುಂತಾದ ಸಂಘಸಂಸ್ಥೆಗಳು ಹಾಗೂ ಡಾ॥ ಹೆಚ್ ಚೆಂದ್ರಶೇಖರ ಮತ್ತು ಇನ್ನಿತರ ಸಾಹಿತಿಗಳು ಈ ಕೃತಿಯಲ್ಲಿ ಬಸವಣ್ಣನವರ ಬಗಗೆ ಹಾಗೂ ಅವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ ಹಾಗೂ ಸೋದರಿ ಅಕ್ಕನಾಗಮ್ಮ ಅವರುಗಳ ಬಗ್ಗೆ ಅಲ್ಲದೆ ಸಂವಿಧಾನ ಶಿಲ್ಪಿ ಡಾ॥ ಬಿ ಆರ್ ಅಂಬೇಡ್ಕರ್ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಜನನದ ಬಗ್ಗೆ ಅತ್ಯಂತ ಕೀಳು

ಮಟ್ಟದ ಅಭಿಪ್ರಾಯಗಳನ್ನು ಸಂಶೋದನೆಯ ಮುಖವಾಡದಲ್ಲಿ ಬರೆದು ಕರ್ನಾಟಕ ಮತ್ತು ಇಡೀ ದೇಶದ ಬಸವಾಭಿಮಾನಿಗಳ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡಿದ್ದಾರೆಂದು ಹಾಗೂ ಈ ಕೃತಿಯು ಪ್ರಚೋದನಾತ್ಮಕ ಹಾಗೂ ಸಾಮಾಜಿಕ ನೆಮ್ಮದಿಗೆ ಭಂಗ ತರುವಂಥಾಗಿದೆ ಎಂದು ತಿಳಿಸಿರುತ್ತಾರೆ ಹಾಗೂ ಸದರಿ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರವನ್ನು ಕೋರಿರುತ್ತಾರೆ

ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕರ ಪ್ರತಿಕ್ರಿಯೆಯಿಂದೆ ಸಮಾಜದಲ್ಲಿ ಈ ಕೃತಿಯು ಪ್ರಟಣೆ ಆಗಿರುವ ದುಷ್ಪರಿಣಾಮವನ್ನು ಗಣನೆಗೆ ತೆಗೆದುಕೊಂಡು ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ ಸಂಕಿ 287 ಕರ ದಿನಾಂಕ 6–7–2007 ರಲ್ಲಿ ಈ ಕೆಳಕಂಡ ಸದಸ್ಯರುಗಳ ನ್ನೊಳಗೊಂಡ ಸತ್ಯಶೋಧನಾ ಸಮಿತಿಯನ್ನು ರಚಿಸಿರುತ್ತದೆ

1 ಶ್ರೀಮತಿ ಗೀತಾ ನಾಗಭೂಷಣ್ ಅಧ್ಯಕ್ಷರು ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ಅಧ್ಯಕ್ಷರು
2 ಪ್ರೊ॥ ಚೆಂದ್ರಶೇಖರ ಪಾಟೀಲ ಅದ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು	ಸದಸ್ಯರು
3 ಪ್ರೊ॥ ಬರಗೂರು ರಾಮಚಂದ್ರಪ್ಪ ಮಾಜಿ ಅಧ್ಯಕ್ಷರು,ಕನ್ನಡ ಅಭಿವೃದ್ದಿ ಪ್ರಾದಿಕಾರ	ಸದಸ್ಯರು
4 ಡಾ॥ ಎಂಎಂ ಕಲಬುರ್ಗಿ, ವಿದ್ವಾಸರು, ಧಾರವಾಢ	ಸದಸ್ಯರು
5 ಶ್ರೀ ಮ ನ ಜವರಯ್ಯ, ಸಾಹಿತಿಗಳು, ಮೈಸೂರು	ಸದಸ್ಯರು
6 ಆಯುಕ್ತರು, ಕನ್ನಡ ಮತ್ತಿ ಸಂಸ್ಕೃತಿ ಇಲಾಖೆ ಬೆಂಗಳೂರು	ಸದಸ್ಯ ಕಾರ್ಯದರ್ಶಿ

ಈ ಆದೇಶದಲ್ಲಿ ಡಾ ಬಂಜಗೆರೆ ಜಯಪ್ರಕಾಶ್ ರವರ "ಅನುದೇವ ಹೊರಗಣವನು" ಕೃತಿಯಲ್ಲಿನ ಸತ್ಯಾಸ್ತ್ಯತೆಗಳನ್ನು ಪರಾಮರ್ಶಿಸಿ ಹತ್ತು ದಿನಗಳ ಒಳಗೆ ಸರ್ಕಾರಕ್ಕೆ ಒಂದು ವರದಿಯನ್ನು ನೀಡಲು ಆದೇಶಿಸಲಾಗಿ ರುತ್ತದೆ ಸದರಿ ಸಮಿತಿಯು ಸಭೆಯನ್ನು ದಿನಾಂಕ 16-7-2007 ರಂದು ನಡೆಸಲಿದೆ ಸಮಿತಿಯು ವರದಿಯನ್ನು ನಿರೀಕ್ಷಿಸಲಾಗಿದೆ

ಈ ಹಿಂದೆ ಡಾ॥ ಪಿ ವಿ ನಾರಾಯಣ ಅವರ ಧರ್ಮಕಾರಣ ಕೃತಿಯನ್ನು ಚೆನ್ನಬಸವಣ್ಣನವರ ಹುಟ್ಟಿನ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಗೃಹ ಇಲಾಖೆಯು ತನ್ನ ಅಧಿಸೂಚನೆ ಸಂಖ್ಯೆಹೆಚ್‌ಡಿ 155 ಎಸ್‌ಎಸ್‌ಟಿ 97 ದಿನಾಂಕ 26-06-1997 ರಲ್ಲಿ ಸದರಿ ಕೃತಿಯನ್ನು ದಂಡ ಸಂಹಿತೆ ಪ್ರಕರಣ 95 ರ ಮೇರೆಗೆ ಮುಟ್ಟುಗೋಲು ಹಾಕಿತು ಹಾಗೂ ಇದೇ ವಿಷಯವಾಗಿ ಮಾನ್ಯ ಉಚ್ಚ ನ್ಯಾಯಾಲಯವು ಸಹ ಧರ್ಮಕಾರಣ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ತೀರ್ಪನ್ನು ನೀಡಿತ್ತು ಅದರಿ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು ಸಹ ಎತ್ತಿ ಹಿಡಿದಿತ್ತು

ಮೇಲಿನ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಗಣನೆಯಲ್ಲಿಟ್ಟುಕೊಂಡು ಸತ್ಯ ಶೋಧನಾ ಸಮಿತಿಯು ನೀಡುವ ವರದಿಯ ಆಧಾರದ ಮೇಲೆ ಸರ್ಕಾರವು ಮುಂದಿನ ಸೂಕ್ತ ಕ್ರಮ ಕೈಗೊಳ್ಳುತ್ತದೆ

ಶ್ರೀ ಎಸ್‌ಎಸ್‌ಪಾಟೀಲ ಮಾನ್ಯ ಅಧ್ಯಕ್ಷರೆ, ನಾನು ಕೇಳುವುದು ಏನೇನು ಸುಪ್ರೀಂ ಕೋರ್ಟಿನ ಆದೇಶಗಳು ಇವೆ, ತಾವು ಅದನ್ನು ಹೇಳಲಿಲ್ಲ ಸ್ಪಷ್ಟವಾಗಿ ಸುಪ್ರೀಂ ಕೋರ್ಟಿನವರು ಕೆಲವು ಸೂತ್ರಗಳನ್ನು ಹೇಳಿರುತ್ತಾರೆ

1 ಧರ್ಮಕಾರಣ ಕೃತಿ, ಐತಿಹಾಸಿಕ ಕೃತಿಯಲ್ಲ ಈ ಕೃತಿ, ಲೇಖಕರ ಕಲ್ಪನೆಗಳ ಮೇಲೆ ರಚಿಸಿದ ಕೃತಿಯಾಗಿದೆ ಹಾಗೂ ಕೃತಿಯ 12 ನೇ ಬಾಗದಲ್ಲಿ ಬರೆದ ಸಂಗತಿಗಳು ಅಂದರೆ, ಕೃತಿಕಾರ ವೇಶ್ಯೆ, ಜಾಟಾಲಿಗೆ ಎಂದು ಹೋಲಿಸಿ ಚೆನ್ನಬಸವಣ್ಣ ಅಕ್ಕ ನಾಗಮ್ಮನ ವಿವಾಹ ಬಾಹಿರ ಪುತ್ರ ಎನ್ನುವುದು ಖಂಡಿತವಾಗಿ ವೀರಶೈವ ಸಮಾಜದವರ ಧಾರ್ಮಿಕ

ಬಾವನೆಗಳಿಗೆ ನೋವುಂಟು ಮಾಡುತ್ತದೆ ಆದ್ದರಿಂದ ಈ ಕೃತಿಯನ್ನು ಕರ್ನಾಟಕ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದ್ದು ಹಾಗೂ ಹೈಕೋರ್ಟ್ ಅದನ್ನು ಎತ್ತಿ ಹಿಡಿದಿದ್ದು ಸರಿಯಾದ ಕ್ರಮವಾಗಿದೆ

2 ಸರ್ಕಾರವು ಒಂದು ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದರಿಂದ ಒಬ್ಬ ಪ್ರಜೆಯ ಸಂವಿದಾನದತ್ತ ಅಭಿವ್ಯಕ್ತಿ ಸ್ವಾಂತ್ರ್ಯವನ್ನು ಮೊಟಕುಗೊಳಿಸುತ್ತದೆ ಎಂದು ಹೇಳುವುದು ನಿಜವಾದರೂ ಸಮಾಜದ ಹಿತರಕ್ಷಣೆಯೇ ಅಥವಾ ಸುಸವ್ಯಸ್ಥೆ ಕಾಪಾಡುವುದೇ ಸರ್ಕಾರದ ಮುಖ್ಯ ಕರ್ತವ್ಯವಾಗುತ್ತದೆಯಾದ್ದರಿಂದ ಸರ್ಕಾರದ ಮುಟ್ಟುಗೋಲು ಆದೇಶವನ್ನು ಎತ್ತಿ ಹಿಡಿಯಬೇಕಾಗುತ್ತದೆ

3 ಭಾರತವು ಅಬೇಕ ಧರ್ಮ ಪಂಧ ಜಾತಿಗಳಿಂದ ಜಾತ್ಯಾತೀತ ದೇಶವಾಗಿದೆ ಆದರೆ ಭಾರತ ದೇಶದಲ್ಲಿ ಶಾಂತಿ ಸುವ್ಯಸ್ಥೆ ಕಾಪಾಡುವುದ ಅದರ ಮುಖ್ಯ ಕರ್ತವ್ಯವಷ್ಟೇ ಅಲ್ಲ, ಧರ್ಮ ಜಾತಿ ಪಂಧಗಳು ಬಿನ್ನ ಬಿನ್ ಧಾರ್ಮಿಕ ಭಾವನೆಗಳು ತತ್ವಗಳನ್ನು ಒಂದು ಗೂಡಿಸುವ ಕಾರ್ಯಕ್ರಮ ಹಾಕಿಕೊಳ್ಳಬೇಕಲ್ಲದೆ ಅವರ ಧಾರ್ಮಿಕ ಬಾವನೆಗಳಿಗೆ ಬಾಂಬ್‌ನಿಂದಾಗಲೇ ಲೇಖನಿಯಿಂದಾಗಲೀ ಪೆಟ್ಟುಬಿದ್ದಾಗ ಅದರಿಂದ ಪ್ರಜೆಗಳನ್ನು ರಕ್ಷಿಸುವಿದೇ ಸರ್ಕಾರದ ಕರ್ತವ್ಯವಾಗಿರುತ್ತದೆ

4 ಭಾರತದ ಸಂವಿಧಾನವು ಒಬ್ಬ ಪ್ರಜೆಗೆ ದಯಪಾಲಿಸಿದ ಮೂಲಭೂತ ಹಕ್ಕುಗಳಲ್ಲಿ ಸಂವಿಧಾನದ 19(1) ವಿಧಿ ಪ್ರಕಾರ ಅಭಿವ್ಯಕ್ತಿ ಸ್ವಾತಂತ್ರ್ಯವು ಒಂದಾದರೂ 19(2) ಅಭಿವ್ಯಕ್ತಿ ಸ್ವಾತಂತ್ರ್ಯವವನ್ನು ಒಬ್ಬ ಪ್ರಜೆ ಸಂವಿಧಾನದ ವಿಧಿ 51(ಇ) ರಲ್ಲಿ ನಮೂದಿಸಿದ ಒಬ್ಬ ಪ್ರಜೆಯ ಕರ್ತವ್ಯವನ್ನು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳಿದೆ 51ಎ(ಜಿ) ಪ್ರಕಾರ ಒಬ್ಬ ಪ್ರಜೆ ಬೇರೆಯವರ ಭಾವನೆಗಳ ಬಗ್ಗೆ ಗೌರವಗಳನ್ನಿಟ್ಟಿಕೊಂಡು ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಪಯೋಗಿಸಬೇಕು ಎಂದು ಹೇಳಿದೆ

5 ಧಾರ್ಮಿಕ ಭಾವನೆಗಳು ಅಥವಾ ನಂಬಿಕೆಗಳು ನೋವುಂಟು ಮಾಡುವುದು ಅಥವಾ ಘಾಸಿ ಗೊಳಿಸುವುದು ಅಂದರೆ ಒಬ್ಬ ಅತಿ ಬುದ್ದಿವಂತ ಅಥವಾ ಬುದ್ಧಿಜೀವಿಯ ಮನಸ್ಸಿನಲ್ಲಿ ಆದರೆ ಅದು ಒಬ್ಬ

ಸರ್ವೇ ಸಾಮಾನ್ಯ ಮನುಷ್ಯನ ಮನಸ್ಸನ್ನು ಅರಿಯುವುದು ಮಾತ್ರ ಗಮನಾರ್ಹವಾಗುತ್ತದೆ

6 ಕೇವಲ ಕಲವೇ ಕಲವು ಸಂಘ ಸಂಸ್ಥೆಗಳು ಮಠಾದೀಶರ ಅಥವಾ ವ್ಯಕ್ತಿಗಳು ಮಾತ್ರ ಕೃತಿಯಲ್ಲಿ ಜನರ ಮನಸ್ಸನ್ನು ನೋಯಿಸುವ ಹಾಗೂ ಘಾಸಿಗೊಳಿಸುವ ಸಂಗತಿಗಳನ್ನು ಸರ್ಕಾರದ ಗಮನಕ್ಕೆ ತಂದರೂ ಸರ್ಕಾರ ಇಂಥ ಕೃತಿಗಳು ಸಮಾಜದಲ್ಲಿಯ ಶಾಂತಿ ಅಥವಾ ಸುವ್ಯಸ್ಥೆಯನ್ನು ಕದಡುವಂತಿದ್ದರೆ ಸರಕಾರ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳ ಬೇಕಾಗುತ್ತದೆ ಸಾರ್ವಜನಿಕ ಪ್ರತಿಭಟನೆ, ಗಲಭೆ ಗೊಂದಲಗಳು ಬೇಕಿಲ್ಲ

7 ಕೃತಿಕಾರನು ಬೇಕೆಂದೆ ಅಥವಾ ಉದ್ದೇಶಪೂರ್ವಕವಾಗಿ ಒಂದು ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸಲೆಂದೇ ಕೃತಿ ರಚಿಸಿದ್ದಾನೆ ಎಂದು ಸಿದ್ದಪಡಿಸುವುದು ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ ಈ ಕೃತಿಯಿಂದ ಒಂದು ಬಾಗದ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುತ್ತದೆ ಎಂದು ಸರ್ಕಾರಕ್ಕೆ ಅನಿಸಿದರೆ ಮುಟ್ಟುಗೋಲು ಹಾಕಿಕೊಳ್ಳುವುದು ಸರ್ಕಾರದ ಕರ್ತವ್ಯವಾಗುತ್ತದೆ

ಸುಪ್ರೀಂ ಕೋರ್ಟ್‌ನಲ್ಲಿ ಆ ಕೇಸ್ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ ನೀವು ಇಲ್ಲಿ ಕಮಿಟಿ ಮಾಡುವ ಅವಶ್ಯಕತೆ ಇಲ್ಲ ಸುಮ್ಮನೆ ಮುಂದೆ ಹಾಕುವುದಕ್ಕೆ ಆ ಕಮಿಟಿಯನ್ನು ಮಾಡಿದ್ದೀರಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೇಳುವವರನ್ನೇ ಆ ಕಮಿಟಿಯಲ್ಲಿ ಹಾಕಿದ್ದೀರಿ ಇದು ಲೀಗಲ್ಲಾಗಿ ಇರುವುದರಿಂದ ಅದರಲ್ಲಿ ಅಡ್ವೋಕೇಟನ್ನು ಈ ಕಮಿಟಿಯಲ್ಲಿ ಹಾಕಿ ಇಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ ಕೃತಿಕಾರನು ಬೇಕೆಂದೇ ಅಥವಾ ಉದ್ದೇಶ ಪೂರ್ವಕವಾಗಿ ಒಂದು ಸಮಾಜದ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸ ಲೆಂದೇ ಕೃತಿಯನ್ನು ಸಿದ್ದಪಡಿಸಿದ್ದಾನೆಂದು ಹೇಳುವುದು ಅವಶ್ಯಕವಿಲ್ಲ ಸ್ಪಷ್ಟವಾಗಿ ಸಿದ್ದಮಾಡಬೇಕೆಂದು ಏನು ಇಲ್ಲ ಇದಕ್ಕೆ ಕಮಿಟಿಯ ಅವಶ್ಯಕತೆ ಇಲ್ಲ ಅಲ್ಲಿ ಬಹಳ ಕೆಟ್ಟದಾಗಿ ಬರೆದಿದ್ದಾರೆ ಡಾ, ಅಂಬೇಡ್ಕರ್ ಮತ್ತು ಕುವಂಪು ಮತ್ತು ಬಸವಣ್ಣನವರ ಬಗ್ಗೆ ಕೂಡ ಬರೆಯುತ್ತಾರೆ ಅವರು ಬರೀ ಸಂಶಯದ ಮೇಲೆ ಹೇಳುತ್ತಾರೆ ಡಾ ಅಂಬೇಡ್ಕರ್ ಹಾಗೂ ಕುವೆಂಪುರವರು ಇಷ್ಟು ಜಾಣರು ಇದ್ದರೆಂದರೆ, ಅವರು ಬ್ರಾಹ್ಮಣರಿಗೆ

ಹುಟ್ಟಿರಬೇಕೆಂದು ಜನ ಮಾತನಾಡಿಕೊಳ್ಳುತ್ತಿದ್ದರು ಎಂದು ಬರೆಯುತ್ತಾರೆ ಅದೇ ರೀತಿ ಬಸವಣ್ಣನವರು ಅಕ್ಕ ನಾಗಮ್ಮ ಲಗ್ನವಾಗುವುದಕ್ಕೆ ಮುಂಚೆ ಹಡೆದಿದ್ದಳು, ಆಕೆ ವೇಶ್ಯೆ ಈ ರೀತಿಯಾಗಿ ಬಸವಣ್ಣನವರಿಗೆ ಬಸವ ಎಂದು ಅಕ್ಕ ಮಹಾದೇವಿ ಬಸವಿ ಆ ಕಾರಣದಿಂದ ಮಾದರ ಸಮಾಜದಲ್ಲಿ ಬಸವಿಗೆ ಬಿಡುತ್ತಿದ್ದರು ಎಂದರೆ, ಹಿಂದೆ ಯಾರು ದಲಿತ ಸಮಾಜದಲ್ಲಿ ಯಾರು ವೈವಾಹಿಕ ಜೀವನ ನಡೆಸಿರತಕ್ಕಂಥ ಪತಿವ್ರತೆಯ ಸ್ತ್ರೀಯರು ಇರಲಿಲ್ಲವೆ? ಆ ರೀತಿಯಲ್ಲಿ ಇವತ್ತು ಎಲ್ಲರ ಮನಸ್ಸನ್ನು ನೋಯಿಸತಕ್ಕಂಥ ಒಂದು ಕೆಟ್ಟ ಕೃತಿ. ಈ ದೃಷ್ಟಿಯಿಂದ ನಾನು ನಿಮಗೆ ಹೇಳುತ್ತೇನೆ, ಇದಕ್ಕೆ ಒಂದು ಕಮಿಟಿ ಮಾಡಿ ಅದರಲ್ಲಿ ಎಲ್ಲರೂ ಅಭಿವ್ಯಕ್ತಿ ಸ್ವಾತಂತ್ರ್ಯದವರನ್ನು ಹಾಕಿರುತ್ತೀರಿ ಇದರಲ್ಲಿ ಲೀಗಲ್ ಪಾಯಿಂಟ್ ಇರುವುದರಿಂದ ಅಡ್ವೋಕೇಟನ್ನು ಸೇರಿಸಬೇಕು ಇನ್ನ ನಮ್ಮ ಶರಣ ಸಾಹಿತ್ಯ ಪರಿತ್ ಅಧ್ಯಕ್ಷರನ್ನು ಈ ಕಮಿಟಿಯಲ್ಲಿ ಸೇರಿಸಬೇಕೆಂದು ತಮ್ಮ ಮೈಲಕ ನಾನು ಅವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಇಲ್ಲದಿದ್ರೆ ಇರ ಬಗ್ಗೆ ರಾಜ್ಯದಲ್ಲಿ ಬಹಳ ಘಾಸಿಯಾಗುತ್ತದೆ ದೊಡ್ಡ ಅನಾಹುತವಾಗುವ ಸಂಭವ ಇದೆ ಬಹಳ ಜನ ಬಸವಾದಿ ಅಭಿಮಾನಿಗಳ ಮನಸ್ಸು ಡಾ.ಅಂಬೇಡ್ಕರ್ ಅಭಿಮಾನಿಗಳ ಮನಸ್ಸು ಹಾಗೂ ಕುವೆಂಪುರವರ ಅಭಿಮಾನಿಗಳ ಮನಸ್ಸು ಬಹಳ ನೋವು ಮಾಡಿದೆ ಈ ಕಾರಣದಿಂದ ದಯವಿಟ್ಟು ಇದನ್ನು ಕೂಡಲೇ ಮುಟ್ಟುಗೋಲು ಹಾಕಿಕೊಳ್ಳಬೇಕು ಇರ ಬಗ್ಗೆ ನೆನ್ನೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಎಲ್ಲವನ್ನೂ ಕೊಟ್ಟಿದ್ದೇನೆ ಮತ್ತು ಹೇಳಿದ್ದೇವೆ ಆ ಕಾರಣದಿಂದ ದಯವಿಟ್ಟು ಕಮಿಟಿ ಮಾಡುವ ಅವಶ್ಯಕತೆ ಇಲ್ಲ ಕೂಡಲೇ ಇದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಅವರ ಮೇಲೆ ಕ್ರಿಮಿನಲ್ ಕೇಸ್ ಕೂಡ ಹಾಕಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ವಿ ಸೋಮಣ್ಣ(ಬಿನ್ನಿ ಪೇಟೆ) ಮಾನ್ಯ ಅಧ್ಯಕ್ಷರೆ, ಡಾ ಬಂಜಗೆರೆ ಜಯಪ್ರಕಾಶ್‌ರವರ "ಆಣಿದೇವ ಹೊರಗಣ" ಎನ್ನುವ ಪುಸ್ತಕ ಏನಿದೆ, ಅದು ನನಗನಿಸುತ್ತದೆ, ಧಾರ್ಮಿಕ ಚಿಂತನೆಗಳಿಗೆ 800 ವರ್ಷಗಳ ಹಿಂದೆ ಕೊಟ್ಟಿರುವಂಥ ಒಂದು ಸಂದೇಶವನ್ನು ಮುಟ್ಟಿಸಿದ್ದಾರೆ ಇವತ್ತು ಬುದ್ಧ, ಬಸವ ಮತ್ತು ಅಂಬೇಡ್ಕರ್‌ರವರು ಈ ರಾಷ್ಟ್ರಕ್ಕೆ ತಮ್ಮದೇ ಆದ ಅಪಾರ ವಾದಂಥ ಕೊಡುಗೆ ನೀಡಿದಂಥ ಮಹನೀಯರುಗಳು ಪ್ರಾಯಶಃ ಪದೇ ಪದೇ ಇದೇ ರೀತಿ ಬಸವಣ್ಣನವರ ಒಳ್ಳೆಯದನ್ನು ಇಡೀ ರಾಷ್ಟ್ರ ಎಲ್ಲೋ ಒಂದು ಕಡೆ ಲೋಕಸಭೆಯಿಂದ ಹಿಡಿದು ಭಾರತೀಯರಾಗಿರತಕ್ಕಂಥ ನಾವೆಲ್ಲರೂ ಕೂಡ ಒಪ್ಪಿಕೊಳ್ಳುವಾಗ ಅಂತಹ ಒಂದು ಪ್ರತಿಷ್ಠಿತ ವ್ಯವಸ್ಥೆಗಳಿಗೆ ಕಾರಣೀಭೂತರಾಗಿರತಕ್ಕಂತಹ ವ್ಯಕ್ತಿಗಳನ್ನು, ಆ ವ್ಯಕ್ತಿಗಳ ಹಿಂದೆ ಇದ್ದಂಥ ಇಲ್ಲದ ಒಂದು ಸಂಶಯಾಸ್ಪದ ಚರಿತ್ರೆಯನ್ನು ಕಟ್ಟಿ ಅವರ ಚಾರಿತ್ರವಧೆಯನ್ನು ಮಾಡತಕ್ಕಂಥ ಲೇಖನ ಏನು ಇದೆ, ಇದು ನಿಜವಾಗಲೂ ಕೂಡ ಖಂಡನೀಯವಾದುದು ಸನ್ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಒಂದು ಸಭೆಯಲ್ಲಿ ಹೋದವಾರ ನಾನು ನೋಡಿದೆ ಯಾವುದೋ ಒಂದು ಧಾರ್ಮಿಕ ಚಿಂತಕರ ಬಗ್ಗೆ ಕೊಟ್ಟಿರುವ ವಿಚಾರಗಳಲ್ಲಿ ಬಸವಣ್ಣನವರಂಥ ಒಬ್ಬ ಮಹಾ ಪುರುಷರು ಈ ರಾಷ್ಟ್ರಕ್ಕೆ ಸಂದೇಶವನ್ನು ನೀಡಿರತಕ್ಕಂಥ ಒಬ್ಬ ವ್ಯಕ್ತಿಯ ಬಗ್ಗೆ ತೇಜೋವಧೆಯನ್ನು ಮಾಡತಕ್ಕಂಥದ್ದು ಆ ಬಸವಾದಿ ಅಭಿಮಾನಿಗಳಿಗೆ ನೋವನ್ನುಂಟುಮಾಡತಕ್ಕಂಥ ಕೆಲಸ ಏನು ಇದೆ, ಇದಕ್ಕಿಂಥ ಹೀನವಾದುದು ಇನ್ನೊಂದಿಲ್ಲ ಇಂತಹ ಕೃತಿಗಳನ್ನು ನಾವು ಏಕೆ ಇಡಬೇಕು ಎನ್ನುವ ದೃಷ್ಟಿಯಿಂದ ಅವರು ಎಲ್ಲೋ ಒಂದು ಕಡೆ ಅವರ ಭಾವನೆಗಳನ್ನು ವೈಯಕ್ತಿಕವಾಗಿ ಅಭಿವ್ಯಕ್ತಪಡಿಸಿದ್ದಾರೋ, ಅಥವಾ ಮುಖ್ಯಮಂತ್ರಿಗಳಾಗಿ ವ್ಯಕ್ತ ಪಡಿಸಿದ್ದಾರೋ ಗೊತ್ತಿಲ್ಲ ಈ ಸದನದಲ್ಲಿ ಅವರು ಇದ್ದಾರೆ, ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ ಪಿ ವಿ ನಾರಾಯಣರವರು ಹಿಂದೆ ಅವರದೇ ಆದ ಒಂದು ಕೃತಿ "ಧರ್ಮಕಾರಣ" ಆ ಕೃತಿಯ ಬಗ್ಗೆ ಗೃಹ ಇಲಾಖೆ ತತ್‌ಕ್ಷಣ ಒಂದು ಆದೇಶವನ್ನು ಮಾಡಿ ಇದೊಂದು ರೀತಿಯ ಮಾರಕವಾಗಿದೆ ಈ ಮಾರಕವಾಗಿರತಕ್ಕಂಥ ಕೃತಿಯನ್ನು ರಾಷ್ಟ್ರದ ಪೀಳಿಗೆ ಎಲ್ಲೋ ಒಂದು ಕಡೆ ಒಂದು ಸಮಾಜ ಮತ್ತೊಂದು ಸಮಾಜದ ಮೇಲೆ ಎತ್ತಿಕಟ್ಟಿ ಹೊಡೆದಾಡತಕ್ಕಂಥ ನೀತಿಗೆ ನಾವು ಕಾರಣೀಭೂತರಾಗಬಾರದು ಎನ್ನುವ

ದೃಷ್ಟಿಕೋನದಿಂದ ಅದನ್ನು ಮುಟ್ಟುಗೋಲು ಹಾಕಿಕೊಂಡರು ಅದನ್ನೇ ಇಲ್ಲಿ ಮಾಡಿದ್ದರೆ ನಿಜವಾಗಲೂ, ನಾವು ನಿಮ್ಮನ್ನು ಹೊತ್ತುಕೊಳ್ಳುತ್ತಿದ್ದೆವು

ನಾವು ಯಾರು ಕೂಡ ಅರ್ಜಿಯನ್ನು ಹಾಕಿ ನಾವು ಇಂತಹ ಸಮಾಜದಲ್ಲಿ ಹುಟ್ಟಬೇಕೆಂದು ಬಂದವರು ಅಲ್ಲ ಆದರೆ ಬಸವಣ್ಣನವರು ಕೇವಲ ಒಂದೇ ಒಂದು ಸಮಾಜಕ್ಕೆ ಕೊಡುಗೆಯನ್ನು ನೀಡಿದವರು ಅಲ್ಲ ಅಂತಹ ಒಬ್ಬ ಪುಣ್ಯ ಪುರುಷನ ಇತಿಹಾಸದಲ್ಲಿ ಎಲ್ಲೋ ಒಂದು ಕಡೆ, ಅವರ ಸಂಭಂಧದ ಚಾರಿತ್ರ ವಧೆ, ಅವರ ತಂದೆ-ತಾಯಿಗಳ ಬಗ್ಗೆ ಮತ್ತು ಅವರು ಮಾಡಿರತಕ್ಕಂಥ ಅನುಕರಣೀಯ, ಪ್ರಾಯಶಃ ಬಸವಣ್ಣನವರು ಯಾವ ಜಾತಿಯಲ್ಲಿ ಹುಟ್ಟಿದರು, ಯಾವ ಸಮಯದಲ್ಲಿ ಯಾವ ಸಂದರ್ಭದಲ್ಲಿ ಹುಟ್ಟಿದರು, ಏನೇನು ಆಯಿತು ಎನ್ನುವುದು ನಮಗೆ ಮುಖ್ಯವಲ್ಲ ನಮಗೆ ಮುಖ್ಯವಾಗಿರ ತಕ್ಕಂಥದ್ದು ಅವರು ಈ ರಾಷ್ಟ್ರಕ್ಕೆ ಕೊಟ್ಟಿರುವಂಥ ಏನೊಂದು ಕೊಡುಗೆ ಇದೆ ಅವರ ಭಾವನೆ ಏನಿದೆ, ಅವರ ಸಂದೇಶ ಏನಿದೆ, ಆ ಸಂದೇಶವನ್ನು ಮಾತ್ರ ನಾವು ತೆಗೆದುಕೊಳ್ಳುತ್ತೇವೆ ಮಹಾತ್ಮ ಗಾಂಧಿಯವರನ್ನು ನಾವು ಮಹಾತ್ಮ ಎಂದು ಕರೆಯುತ್ತೇವೆ ಬಾಬಾ ಸಾಹೇಬ ಅಂಬೇಡ್ಕರವರನ್ನು ನಾವು ಇತಿಹಾಸ ಪುರುಷ ಎಂದು, ಸಂವಿಧಾನ ಶಿಲ್ಪಿ ಎಂದು ಕರೆಯುತ್ತೇವೆ ಇಂತಹ ಅನೇಕ ವ್ಯವಸ್ಥೆಗಳಿಗೆ ಕಾರಣೀಭೂತರಾಗಿರತಕ್ಕಂದ ಇಂತಹ ಮಹಾನ್ ವ್ಯಕ್ತಿಗಳಿಗೆ ಎಲ್ಲೋ ಒಂದು ಕಡೆ ಕುಳಿತುಕೊಂಡು ತನ್ನದೇ ಆದಂಥ ಒಂದು ಸ್ವಾತಂತ್ರ್ಯ ಇದೆ ಎನ್ನುವ ದೃಷ್ಟಿಯಿಂದ ಏನೇನೋ ಊಹೆ ಮಾಡಿಕೊಂಡು ಇಲ್ಲದ್ದನ್ನೆಲ್ಲಾ ಬರೆದು, ಸಾರ್ವಜನಿಕ ಜೀವನದಲ್ಲಿ ಸಂಶಯವನ್ನು ಉಂಟು ಮಾಡುವ ಕೆಲಸಗಳು ಇದು ಯಾರಿಗೂ ಒಳ್ಳೆಯದಲ್ಲ ಮುಂದಿನ ಪೀಳಿಗೆ ಎಲ್ಲೋ ಒಂದು ಕಡೆ, ಇತಿಹಾಸ ಪುರುಷರನ್ನು ಈ ರೀತಿಯಾದ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡು ಮಾಡಿದಾಗ ನಮಗೆ ಯಾರ ಬಗ್ಗೆ ನಂಬಿಕೆ ಬರುತ್ತದೆ ತಾವು ದಯಮಾಡಿ ಇದರ ಬಗ್ಗೆ ಚಿಂತನೆ ಮಾಡಬೇಕಾ ಗುತ್ತದೆ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸದನದಲ್ಲಿ ಇದ್ದಾರೆ, ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಇದ್ದಾರೆ ಪಿ ವಿ ನಾರಾಯಣರವರ ಒಂದು ಲೇಖನವನ್ನು ಸಕಾರ ಯಾವ ರೀತಿ ಮುಟ್ಟುಗೋಲು ಹಾಕಿಕೊಂಡಿರುತ್ತದೆ, ಅವತ್ತು ಯಾವ ರೀತಿ ಸರ್ಕಾರ ಸ್ಪಂದಿಸಿತ್ತು, ಅದೇ ರೀತಿ ಇದಕ್ಕೂ ಕೂಡ ಸ್ಪಂದಿಸ ಬೇಕಾಗುತ್ತದೆ ಒಂದು

ಸತ್ಯ, ಒಂದು ಜಾತಿಯನ್ನು ಇನ್ನೊಂದು ಜಾತಿಯ ಮೇಲೆ ಒಂದು ಸಮಾಜವನ್ನು ಮತ್ತೊಂದು ಸಮಾಜದ ಮೇಲೆ ಎತ್ತಿ ಕಟ್ಟಿತಕ್ಕಂಥ ಈ ನೀಚ ಕೆಲಸ ಯಾರಿಂದಲೂ ಆಗಬಾರದು ಯಾವ ವ್ಯಕ್ತಿಯಿಂದ ಏನು ಕೆಲಸವಾಗಿದೆ, ಏನು ಈ ರಾಷ್ಟ್ರಕ್ಕೆ ಒಂದು ಕಲ್ಯಾಣವಾಗಿದೆ ಅದು ಮಾತ್ರ ಮುಖ್ಯ ವಿನಃ ಬಸವಣ್ಣನವರು ಏನು ಎತ್ತ ಅವರ ಕುಲ ಗೋತ್ರ ನಮಗೆ ಬೇಕಾಗಿಲ್ಲ ಬಸವಣ್ಣನವರ ಆದರ್ಶಗಳು ಬೇಕಾಗಿದೆ 800 ವರ್ಷದ ಬಸವಣ್ಣನವರನ್ನು ಇವತ್ತು ಏಕೆ ಸಾಮಾನ್ಯ ಜನರು ನೆನೆಸಿಕೊಳ್ಳುತ್ತಿದ್ದಾರೆ, ಬಸವಣ್ಣ ಯಾವ ಜಾತಿ ಎಂದು ಕೇಳುತ್ತಿಲ್ಲ, ಆದರೆ ಬಸವಣ್ಣನವರ ವಿಚಾರಗಳು ಏನಿದ್ದವು, ಅವರು ಈ ರಾಷ್ಟ್ರಕ್ಕೆ ಕೊಟ್ಟಿರತಕ್ಕಂಥ ಸಂದೇಶಗಳು ನಮಗೆ ಮಾತ್ರ ಮುಖ್ಯ ಆದ್ದರಿಂದ ಇಂತಹ ಒಂದು ಹೀನವಾದ ಬಾವನೆಗಳಲ್ಲಿ ಯಾವ ಶಬ್ದಗಳನ್ನು ಉಪಯೋಗಿಸಬಾರದು, ಅಂತಹ ಶಬ್ದಗಳನ್ನು ಉಪಯೋಗ ಮಾಡಿ ಇವತ್ತು ಬೇರೆಯವರ ಮನಸ್ಸನ್ನು ಕಲಕತಕ್ಕಂಥಹ ಕೆಲಸ ಏನು ಆಗಿದೆ ಇದು ಯಾರಿಗೂ ಕೂಡ ಆಗಬಾರದು ಮಹಾತ್ಮರನ್ನು ಮಹಾತ್ಮರೆಂದೇ ಕಾಣಬೇಕಾಗುತ್ತದೆ ಆ ದೃಷ್ಟಿಕೋನದಿಂದ ಇನ್ನು ಕೂಡ ಭಾರತೀಯ ರಾಗಿರತಕ್ಕಂಥ ನಾವು ಅವರ ವಂಶ ಯಾವುದು ಮತ್ತೊಂದು ಏನು ಎನ್ನುವುದನ್ನು ಕೀಳುಮಟ್ಟದ ವ್ಯವಸ್ಥೆಗಳಿಗೆ ಅವಕಾಶವನ್ನು ಕೊಡದೇ ಪಿ ವಿ ನಾರಾಯಣರವರ ಕೃತಿಯನ್ನು ಯಾವ ರೀತಿಯಾಗಿ ನೀವು ಮುಟ್ಟು ಗೋಲು ಹಾಕಿಕೊಂಡಿರುತ್ತೀರಿ ಅದೇ ರೀತಿ ಈ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಅದನ್ನು ಬಿಟ್ಟು 6 ಜನರ ಸಮಿತಿ ಮಾಡಿದ್ದಿರಿ ಇದು ಸರಿಯೇ? ಇಲ್ಲಿಯವರೆವಿಗೂ ಹೇಳಿರುವಂಥಹ ಸಂಘ ಸಂಸ್ಥೆಗಳು ಇನ್ನಿತರೆ ಬುದ್ಧಿ ಜೀವಿಗಳು ಸರಿಯಿಲ್ಲ ಅಂತಾನಾ? ದಯವಿಟ್ಟು ಉಪಮುಖ್ಯಮಂತ್ರಿಗಳು ಇದ್ದಾರೆ, ಮುಖ್ಯ ಮಂತ್ರಿಗಳು ಇದ್ದಾರೆ, ಇದು ಒಂದು ಗಂಭೀರವಾದ ವಿಚಾರವಾಗಿದೆ ಎಲ್ಲೋ ಒಂದು ಕಡೆ ಸಮಾಜವನ್ನು ಮತ್ತೊಂದು ಕಡೆ ಯಾವುದೋ ಒಂದು ಪುಸ್ತಕದ ವ್ಯವಸ್ಥೆಯಿಂದ ಅವರಲ್ಲಿರುವಂತಹ ತಾಳ್ಮೆಯನ್ನು ಕದಡತಕ್ಕಂತಹ ಈ ಕೆಲಸ ಏನು ಇದೆ, ಇದು ನಿಜವಾಗಿಯೂ ಕೂಡ ಹೇಯವಾದುದು ದಯಮಾಡಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಶ್ರೀ ಪಿ ವಿ ನಾರಾಯಣರವರ ಕೃತಿಯನ್ನು ಯಾವ ರೀತಿಯಾಗಿ ಮುಟ್ಟುಗೋಲು ಹಾಕಿಕೊಂಡಿದ್ದಿರಿ, ಇದನ್ನು ಕೂಡ ಅದೇ ರೀತಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಇವತ್ತು ಈಗ ಸದನದಲ್ಲಿ

ತಾವು ಅದರ ಬಗ್ಗೆ ತೀರ್ಮಾನವನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ

ಶ್ರೀ ಬಿ ಸಿ ಪಾಟೀಲ (ಹಿರೇಕೆರೂರು) ಮಾನ್ಯ ಅಧ್ಯಕ್ಷರೆ, ಒಂದು ಮಗು ಹುಟ್ಟಿದ ಬಗ್ಗೆ ಸತ್ಯಾಸ್ತ್ಯತೆ ಗೊತ್ತಿರುವುದು ತಾಯಿಗೆ ಮಾತ್ರ, ಜಗತ್ತಿನಲ್ಲಿ ಯಾರಿಗೂ ಗೊತ್ತಿರುವುದಿಲ್ಲ ಯಾರು ಮಗುವಿಗೆ ಜನ್ಮವನ್ನು ಕೊಟ್ಟಿದ್ದಾರೆ ಈ ಮಗು ಯಾರದು ಎಂದು ಅವರಿಗೆ ಮಾತ್ರ ಗೊತ್ತಿರುತ್ತದೆ ಅಂತಹದ್ದರಲ್ಲಿ ಇವತ್ತು ಬಂಜಗೆರೆ ಪ್ರಕಾಶ್‌ರವರು ಬಸವಣ್ಣನವರ ಬಗ್ಗೆ ಡಾ ಅಂಬೇಡ್ಕರ್ ಅವರ ಬಗ್ಗೆ, ಕುವೆಂಪುರವರ ಬಗ್ಗೆ ಅದರಲ್ಲೂ ಈ ದೇಶದಲ್ಲಿ ಯಾರ್‍ಯಾರು ಬುದ್ಧಿವಂತರು ಇದ್ದಾರೆ, ಅವರೆಲ್ಲರೂ ಬ್ರಾಹ್ಮಣರಿಗೆ ಹುಟ್ಟಿರಬಹುದು ಎಂಬ ಸಂಶಯವನ್ನು ವ್ಯಕ್ತಪಡಿಸುತ್ತಾ ಕೀಳು ಮಟ್ಟಕ್ಕೆ ಏನು ಹೋಗಿದ್ದಾರೆ, ಇವತ್ತು ಆ ತಾಯಂದಿರು ಬದುಕಿದ್ದರೆ, ಈ ಪುಸ್ತಕವನ್ನು ಓದಿದಂತಹ ಮಾತುಗಳು ಹೊರಗೆ ಬಂದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿತ್ತು ಇವತ್ತು ಅವರು ತೀರಿ ಹೋಗಿರುವಂಥಹವರು ಆದರೆ ಇವತ್ತು ಇರುವಂತಹ ಬುದ್ಧಿವಂತರ ಬಗ್ಗೆ ಇದನ್ನೆ ಪುಸ್ತಕದಲ್ಲಿ ಬರೆದುಕೊಂಡು ಹೋದರೆ ಇವರಿಗೆ ಯಾವ ಕಡಿವಾಣಗಳು ಇಲ್ಲವೇ? ಇವತ್ತು ವ್ಯಕ್ತಿ ಸ್ವಾತಂತ್ರ್ಯ ಪತ್ರಿಕಾ ಸ್ವಾತಂತ್ರ್ಯ, ಇದೇ ಎಂದು ಹೇಳಿ ತಮ್ಮ ಮನಸ್ಸಿಗೆ ಬಂದಂತೆ ಬರೆದುಕೊಂಡು ಹೋದರೆ, ಇವತ್ತು ಧಾರ್ಮಿಕ ಬಾವನೆಗಳಿಗೆ ಘಾಸಿ ಯನ್ನುಂಟು ಮಾಡುವಂತಹ ಕೆಲಸವನ್ನು ಮಾಡಿದ್ದಾರೆ ಹಿಂದೆ ಮಹಮ್ಮದ್ ಪೈಗಂಬರ್ ಬಗ್ಗೆ ಪತ್ರಿಕೆಯಲ್ಲಿ ಒಂದು ಶಬ್ದ ವ್ಯಕ್ತವಾದಾಗ ಇಡೀ ದೇಶ ಸುಟ್ಟುಹೋಗಿತ್ತು ಆದರೆ ಇವತ್ತು ವೀರಶೈವ ಜನಾಂಗ ಒಕ್ಕಲಿಗ, ದಲಿತರುಗಳು ಇರಬಹುದು, ಎಲ್ಲರೂ ಇವತ್ತು ಸೌಮ್ಯದಿಂದ ತಾಳುತ್ತಾ ಕುಳಿತುಕೊಂಡಿದ್ದಾರೆ ಇವತ್ತು ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ನಾವು ಕಮಿಟಿಯನ್ನು ಮಾಡಿದ್ದೇವೆ 10 ದಿನಗಳ ಕಾಲ ನಮಗೆ ಅವಕಾಶವನ್ನು ಕೊಡಿ ಎಂದು ಹೇಳಿದರೆ ಈ ವಿಷಯ ಬೀದಿ ರಂಪವಾಗಿ ಬೀದಿಯಲ್ಲಿ ಅಶಾಂತಿಯುಂಟಾಗಿ, ಗಲಭೆಗಳು ಆಗಿ ಲಾ ಅಂಡ್ ಆರ್ಡರ್ ಸಮಸ್ಯೆ ಪ್ರಾರಂಭವಾದಾಗ ಮಾತ್ರ ಅದನ್ನು ಮುಟ್ಟುಗೋಲು ಹಾಕಿಕೊಳ್ಳು ವುದಕ್ಕೆ ಮುಂಚೆ ಇವತ್ತು ಏನು ಪರಿಸ್ಥಿತಿ ಉದ್ಭವವಾಗಿದೆ, ತಕ್ಷಣವಾಗಿ C ª ÃUÉ295 L ¦ ¹ Wounding the religious feelings ಮೇಲೆ ಅವರನ್ನು ಬಂದಿಸಬೇಕು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು

ಹಾಕಬೇಕು, ಆ ಪುಸ್ತಕವನ್ನು ತಕ್ಷಣ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ನಾನು ಈ ಮೂಲಕವಾಗಿ ಸರ್ಕಾರವನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು, ಉಪಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು ಎಲ್ಲರೂ ಮಾತನಾಡುವ ಅಗತ್ಯವಿಲ್ಲ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ

ಡಾ ಎಸ್ ಎಸ್ ಪಾಟೀಲ್ ಹೇಳಲಿ ಬಿಡಿ, ಅದು ಬುಕ್ಸ್ ಆಗಿದೆ

ಅಧ್ಯಕ್ಷರು ಈ ಬಗ್ಗೆ ಚರ್ಚೆಯ ಅಗತ್ಯವಿಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಏನೆಂದರೆ, ಆ ಒಂದು ಪುಸ್ತಕದಲ್ಲಿ ಬರೆದಿರುವಂತಹ ಪದಗಳು ಸದನದಲ್ಲಿ ರೆಕಾರ್ಡ್ ಆಗುವುದು ಸೂಕ್ತವಲ್ಲ ಇದರ ಬಗ್ಗೆ ನಾವು ಈಗಾಗಲೇ ಗಮನ ಹರಿಸಿದ್ದೇವೆ ಈ ಒಂದು ವಿಷಯದ ಬಗ್ಗೆ ಸದನದಲ್ಲಿ ಸದಸ್ಯರು ವ್ಯಕ್ತಪಡಿಸಿರುವಂತಹ ಕಳಕಳಿ ಏನು ಇದೆ, ಅದರ ಬಗ್ಗೆ ನಾವು ಯಾವುದೇ ರೀತಿಯ ಸಮಾಜಗಳಿಗೆ, ಇವತ್ತು ಮನಸ್ಸಿಗೆ ನೋವಾಗದೇ ಇರುವಂತಹ ರೀತಿಯಲ್ಲಿ ತೀರ್ಮಾನ ಮಾಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ ಈ ಒಂದು ವಿಷಯದಲ್ಲಿ ಯಾವುದೇ ಕಾರಣಕ್ಕೂ ಸದನದಲ್ಲಿ ಆ ಪದಗಳು ರೆಕಾರ್ಡ್ ಆಗುವುದು ಬೇಡವೆಂದು ನಮ್ಮ ಮನವಿ

ಅಧ್ಯಕ್ಷರು ಆಯಿತು

ಈ) ವಿಷಯ ಅಫಜಲಪುರ ತಾಲ್ಲೂಕಿನಲ್ಲಿ ಬೆಳೆ ವಿಮೆ ಸಮೀಕ್ಷೆಯಲ್ಲಿ ಉಂಟಾಗಿರುವ ದೋಷದ ಕುರಿತು

ಶ್ರೀ ಎಂ ವೈ ಪಾಟೀಲ್ (ಅಫಜಲಪುರ) ಅಫಜಲಪುರ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಿಂದ ಜೋಳ, ತೊಗರಿ, ಸೂರ್ಯಕಾಂತಿ, ಮುಖ್ಯ ಬೆಳೆಗಳು, ಮಳೆ ಅಭಾವದಿಂದ ಬೆಳೆ ಬಾರದೆ ಸತತ ಬರಗಾಲ ಎದುರಿಸುತ್ತಿರುವಾಗ ಬೆಲೆ ವಿಮೆ ಸಮೀಕ್ಷೆಯ ದೋಷದಿಂದ ಅಫಜಲಪುರ ತಾಲ್ಲೂಕಿಗೆ ಅನ್ಯಾಯವಾಗಿದ್ದು, ನೀರಾವರಿ ಸೌಲಭ್ಯವಿರುವ ತಾಲ್ಲೂಕುಗಳಿಗೆ ಬೆಳೆ ವಿಮೆ ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆಯಾಗಿರುವುದನ್ನು ನೋಡಿದರೆ ಈ ಸಮೀಕ್ಷೆಯಲ್ಲಿ ದೋಷ ಕಂಡುಬರುತ್ತಿದೆ ಅಥವಾ ಇದರಲ್ಲಿ ಏನಾದರೂ ಭ್ರಷ್ಟಾಚಾರ ಇರಬಹುದೆಂದು ಕಂಡುಬರುತ್ತಿದೆ ಆದ್ದರಿಂದ ಸರ್ಕಾರ ಇದರ ಬಗ್ಗೆ ಸೂಕ್ತ ತನಿಖೆ ಮಾಡಿ ನ್ಯಾಯ ದೊರಕಿಸಿಕೊಡಬೇಕೆಂಬುದರ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತೇನೆ

ಅಫಜಲಪುರ ಮತ್ತು ಗುಲ್ಬರ್ಗಾ ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಬರಗಾಲವೆಂದು ಹೋದವರ್ಷ ಘೋಷನೆಯಾಗಿತ್ತು ಆ ಸಮಯದಲ್ಲಿ ಬೆಳೆ ವಿಮೆಯ ಸಲುವಾಗಿ ಬಹಳಷ್ಟು ರೈತರು ಬೆಳೆ ವಿಮೆಯನ್ನು ಕಟ್ಟಿದರು ಮಳೆ ಬಾರದೆ ಬೆಳೆ ಯಾವುದು ಬರಲಿಲ್ಲ ಬರಗಾಲವೆಂದು ಸರ್ಕಾರ ಘೋಷಣೆ ಮಾಡಿದೆ ಮಹಾರಾಷ್ಟ್ರದವರು ಅಲ್ಲಿ ನೀರು ಬಿಡುವುದರಿಂದ ನಮ್ಮ ಅಫಜಲಪುರದಲ್ಲಿ ಮಳೆ ಇಲ್ಲದಿದ್ದರೂ ಕೂಡ ಪ್ರವಾಹದಿಂದ ಅನೇಕ ಬೆಳೆಗಳು ನಷ್ಟವಾಗಿ ಹೋಗಿದೆ ಅಂತಹ ಸಂದರ್ಭದಲ್ಲಿ ಇವತ್ತು ಏನಾಗಿದೆ ಎಂದರೆ, ವಿಮಾ ಕಾರ್ಪೊರೇಷನ್‌ನವರು ಅಫಜಲ್‌ಪುರಕ್ಕೆ ಹಣ ನೀಡುವಲ್ಲಿ ತಾರತಮ್ಯವನ್ನು ಮಾಡಿದ್ದಾರೆ ಎಂದು ಅನಿಸುತ್ತದೆ ಏಕೆಂದರೆ ಇವತ್ತು ಜೇವರ್ಗಿಯಲ್ಲಿ 73 ಕೋಟಿ ರೂಪಾಯಿಗಳು ಹಣ ಬಿಡುಗಡೆಯಾಗಿದೆ ನಿಮ್ಮಲ್ಲಿ ತಪ್ಪು ಮಾಹಿತಿ ದೊರಕಿದೆ ಇದರಲ್ಲಿ ಏನಾಗುದೆ ಎಂದರೆ 3 ಹೋಬಳಿ ಮಟ್ಟದಲ್ಲಿ ಅದು ಹಣ ಬಿಡುಗಡೆಯಾಗಿದೆ ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ 73 ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದೆ ಅದಕ್ಕಾಗಿ ಅಫಜಲಪುರದಲ್ಲಿ ಕೇವಲ 44 ಲಕ್ಷ ರುಪಾಯಿಗಳು ಮಾತ್ರ ಬಂದಿದೆ ಆದ್ದರಿಂದ ಇಲ್ಲಿ ಅನ್ಯಾಯವಾಗಿದೆ, ಇಲ್ಲಿ ಸರಿಯಾಗಿ ಸಮೀಕ್ಷೆಯಾಗಿಲ್ಲವೆಂದು ಅನಿಸುತ್ತದೆ ಕೃಷಿ ಇಲಾಖೆಯವರು ಏನು ಮಾಡಿದ್ದಾ

ರೆಂದರೆ, ಅವರ ಹತ್ತಿರ ಸಿಬ್ಬಂದಿಯವರು ಇರದೇ ಇರುವುದಕ್ಕಾಗಿ ಅವರು ರೆವಿನ್ಯೂ ಅಥಾರಿಟಿಗೆ ಈ ಕ್ರಾಪ್ ಕಟ್ಟಿಂಗ್ಸ್ ಎಕ್ಸಪರಿಮೆಂಟನ್ನು ಅವರಿಗೆ ಕೊಟ್ಟಿದ್ದಾರೆ ಕೃಷಿ ಇಲಾಕೆಯವರು ಇದರಲ್ಲಿ ಕೆಲಸವನ್ನು ಮಾಡಿಲ್ಲ ಇಂತಹ ಪರಿಸ್ಥಿತಿಯಲ್ಲಿ ನಮ್ಮ ರೈತರ ಪರಿಸ್ಥಿತಿ ಏನು? ಇದೇ ರೀತಿಯಾಗಿ ಮುಂದುವರೆದರೆ, ಇದು ರೈತರ ಆತ್ಮ ಹತ್ಯೆಗೆ ಕಾರಣವಾಗುತ್ತದೆ ಅವರು ಬೇಕಾದಷ್ಟು ವಿಮೆಯನ್ನು ಕಟ್ಟಿದರೂ ಕೂಡ ಆದರೆ ಬೇರೆ ತಾಲ್ಲೂಕಿವರು ಕಟ್ಟಿರುವುದಿಲ್ಲ ಒಂದೇ ಒಂದು ತಾಲ್ಲೂಕು ಜೇವರ್ಗಿ ತಾಲ್ಲೂಕಿನವರು ಮಾತ್ರ ಕಟ್ಟಿದ್ದಾರೆ ಈ ರೀತಿಯಾದರೆ ಇದು ಅನ್ಯಾಯವಾಗುತ್ತದೆ ಇದನ್ನು ಮತ್ತೆ ಮರುಪರಿಶೀಲನೆ ಮಾಡಬೇಕು ಈ ಬಗ್ಗೆ ಯೋಗ್ಯವಾದಂಥ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ನಮ್ಮ ಎಲ್ಲಾ ರೈತರು ಸಂಪೂರ್ಣವಾಗಿ ಹಣವನ್ನು ಕಟ್ಟಿದ್ದಾರೆ 100% ಲಾಸ್ ಆಗಿದೆ ಎಂದು ಕೃಷಿ ಇಲಾಖೆಯಲ್ಲಿ ರಿಪೋರ್ಟ್ ಇದೆ ಆದರೆ ಸೇಡಂ ತಾಲ್ಲೂಕಿನಲ್ಲಿ ಒಂದು ಪೈಸೆಯೂ ಕೂಡ ಆಗಿಲ್ಲ ಇದು ಯಾವ ರೀತಿಯಾಗಿದೆ ಮಾನ್ಯ ಕೃಷಿ ಸಚಿವರು ಇದಕ್ಕೆ ಏನಾದರೂ ಪರಿಹಾರವನ್ನು ಹುಡುಕಿ ಅದನ್ನು ಸರಿಪಡಿಸಿಕೊಡಬೇಕು

ಶ್ರೀ ಬಂಡೆಪ್ಪ ಕಾಶಂಪೂರ್(ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆಮ ಹಿರಿಯ ಸದಸ್ಯರಾದ ಶ್ರೀ ಎಂ ವೈ ಪಾಟೀಲ್‌ರವರು ಅವರ ತಾಲ್ಲೂಕಿನಲ್ಲಿ ಈ ವರ್ಷ ಸಿಕ್ಕಿಲ್ಲವೆಂದು ಗಾಬರಿಯಾಗಿ ಈ ಒಂದು ವಿಷಯದ ಬಗ್ಗೆ ಗಮನವನ್ನು ಸೆಳೆಯುವ ಪ್ರಯತ್ನವನ್ನು ಮಾಡಿದ್ದಾರೆ ಇದು ಬಹಳ ಸಂತೋಷ ಇದು ಕೇಂದ್ರ ಸರ್ಕಾರದ ಒಂದು ಸಂಸ್ಥೆ National Agricultural Insurance Company ಅಡಿಯಲ್ಲಿ ಈ ಒಂದು ಬೆಳೆ ವಿಮೆ ಮಾಡತಕ್ಕದ್ದು ಇದು ಏನು ಕ್ಲೈಮ್ಸ್ ಬರುತ್ತದೆ ಅದರಲ್ಲಿ 50% state share 50% Government of India ಏನು ಇದೆ ಅದಕ್ಕಿಂತ ಹೆಚ್ಚಿಗೆ ಬಮದಿದೆ ಅವರಿಗೆ ಗೊತ್ತಿದೆ, ಇದು ನೇರವಾಗಿ ಬ್ಯಾಂಕ್ ಮುಖಾಂತರ ಲೋನ್‌ಗೆ ಆಟೋಮಾಟಿಕ್ ಆಗಿ ಲೋನ್‌ನಲ್ಲಿ ಕಟ್ ಆಗುತ್ತದೆ ಲೋನ್ ಇಲ್ಲದೆ ಇದ್ದರೆ ನಾನ್ ಲೋನ್‌ಗೆ ಬ್ಯಾಂಕ್ ಮುಖಾಂತರ ಅವಧಿಯನ್ನು

ಕೊಟ್ಟಿರುತ್ತೇವೆ ಆ ಅವದಿಯ ಪ್ರಕಾರ ಮಡಬೇಕಾಗುತ್ತದೆ ಈಗ ಅವರು ಇನ್ನೊಂದು ವಿಷಯವನ್ನು ಹೇಳಿದರು ಇದರಲ್ಲಿ ಹಲವಾರು ಇಲಾಖೆಗಳು ಸೇರುತ್ತವೆ ನಾವು ಏನು crop cutting experiments ಮಾಡುತ್ತೇವೆ ಇದನ್ನು Department of Econimics & Statics ಮುಖಾಂತರ ಮಾಡುತ್ತೇವೆ ಅದರಲ್ಲಿ Revenue Department village accountant ಇರುತ್ತಾರೆ ನಮ್ಮ Agriculture department ನಿಂದ ಒಬ್ಬರು ಅದಿಕಾರಿ ಇರುತ್ತಾರೆ Assistant, agriculture Assistant, IDBR ನಿಂದ ಗ್ರಾಮ ಸೇವಕರು, ಗ್ರಾಮ ಸೆಕ್ರೆಟರಿಯವರು ಇರುತ್ತಾರೆ ಹಾಗಾಗಿ ಮತ್ತೆ ಕೆಲವು ಕಡೆಗಳಲ್ಲಿ Watershed Agriculture Assistant ಕೊಟ್ಟು ಇದು ಹೋಬಳಿವಾರು ಮಾಡಲಾಗುತ್ತದೆ ಒಂದೊಂದು ಹೋಬಳಿಗೆ ಒಂದೊಂದುCrop minimum 10 experiments ಇದೆ ನಾವು ಮಾಡುವಂಥಹ ಈ ಯೋಜನೆಯು ಮೊದಲಿನಿಂದಲೂ ಬಂದಿದೆ ಸುಮಾರು 2000 ರಿಂದ ಈ ಯೋಜನೆ ಬಂದಿದೆ ಇಡೀ ರಾಜ್ಯದಲ್ಲಿ ನಾವು 77 ಸಾವಿರ crop cutting experiment ಮಾಡುತ್ತಿದ್ದೇವೆ ಹೋಬಳಿವಾರು ತೆಗೆದುಕೊಂಡರೆ ಇದನ್ನು ನಾವು ಯಾರೂ ಫಾರ್ಮುಲಾ ವನ್ನು ಹಾಕಿಕೊಂಡಿರುವುದಿಲ್ಲ National sample syrvey organisation central Government ಅವರದೇ ಆದಂತಹ ಒಂದು ಫಾರ್ಮುಲಾದಲ್ಲಿ random ಆಗಿ ವಿಲೇಜ್‌ವಾರು ತೆಗೆದುಕೊಂಡಿದ್ದಾರೆ ಸಪೋಸ್ ಒಂದು ಎಕರೆಗೆ ಇಷ್ಟು ಎಂದು ಬಂತು, ಅದರಲ್ಲಿ ಪ್ಲಾಟ್ 5x5 ಮೀಟರ್ ಅದು ಕೂಡ ರ್‍ಯಾಂಡಮ್ ಆಗಿ ತೆಗೆದುಕೊಳ್ಳುತ್ತಾರೆ ಹಾಗಾಗಿ ಇದು ಒಂದು ರೀತಿಯಿಂದ ಈ ಯೋಜನೆ ಕೆಲಸ ಮಾಡುತ್ತಿದೆ ಎಂದು ನಾನು ಬಾವಿಸುತ್ತೇನೆ ಆದರೆ ಈಗ 3-4 ವರ್ಷದಿಂದ ಗುಲ್ಬರ್ಗಾದ್ದೇ ಒಂದು example ನ್ನು ತೆಗೆದುಕೊಂಡರೆ 2002-03 ರಲ್ಲಿ ಸುಮಾರು 3 ಕೋಟಿ 36 ಲಕ್ಷ 28 ಸಾವಿರ ರೂಪಾಯಿಗಳು ಅಲ್ಲಿ ಓವರಾಲ್ ಸೆಟಲ್ ಆಗಿದೆ ಅಲ್ಲಿ ಅಫಜಲ್‌ಪುರಕ್ಕೆ ಹೋಗಿದ್ದು ಬರೀ 2 ಸಾವಿರ ರೂಪಾಯಿಗಳು ಈಗ ಜೇವರ್ಗಿದು ಅವರು ಹೇಳುತ್ತಿದ್ದಾರೆ ಅವತ್ತು ಜೀವರ್ಗಿಗೆ ಹೋಗಿದ್ದು 2 ಲಕ್ಷ 48 ಸಾವಿರ ರೂಪಾಯಿಗಳು 2003-04 ರಂದು ತೆಗೆದುಕೊಂಡರೆ 10 ಕೋಟಿ 69 ಲಕ್ಷದ 32 ಸಾವಿರ ರೂಪಾಯಿಗಳು ಜೇವರ್ಗಿಗೆ ಹೋಗಿದೆ 2004-05ರಲ್ಲಿ ಅದೇ ರಿತಿಯಾಗಿ 20 ಲಕ್ಷ 67 ಸಾವಿರ ರೂಪಾಯಿಗಳು ಜೇವರ್ಗಿಗೆ ಹೋಗಿದೆ ಹಾಗಾಗಿ 2005-06 ರಂದು

ತೆಗೆದುಕೊಂಡರೆ ಬರೀ 8 ಸಾವಿರ ರೂಪಾಯಿಗಳು ಅಫಜಲ್‌ಪುರಕ್ಕೆ ಹೋಗಿವೆ ಜೇವರ್ಗಿಗೆ1,77,000-00 ಹೋಗಿದೆ, ವಿಶೇಷವಾಗಿ ಈ ವರ್ಷ 2006-07 ಕ್ಕೆ ತಮಗೆ ಗೊತ್ತಿರುವ ಹಾಗೆ ನಾವು ಈ ಸಮ್ಮಿಶ್ರ ಸರ್ಕಾರ ಬಂದಾಗ ಹಲವಾರು ಚಿಂತನೆ ಮಾಡಿ ಈ ರೈತರ ಪರವಾಗಿ insurance ಏನು ಡಿಲೇ ಆಗುತ್ತಿತ್ತು ಹಿಂದಿನ ರಕವರೀಸ್ ತೆಗೆದರೆ ಒಂದೊಂದು ವರ್ಷದ್ದು ಏನು ಕೊಡಬೇಕಾಗಿತ್ತು 10 ತಿಂಗಳು 8,6, ತಿಂಗಳೂ ಡಿಲೇ ಆಗಿರುವಂಥ ಕ್ಲೇಮ್ಸ್ ಬಂದಂಥ ಪರಿಸ್ಥಿತಿ ಇತ್ತು ಹಾಗಾಗಿ ನಾವೇನು ಮಾಡಿದ್ದೇವೆಂದರೆ ಆ ಪದ್ಧತಿಯಲ್ಲಿ ಮೂರು ಭಾಗ ಮಾಡಿ ಮೊದಲು ಅಲ್ಪಾವದಿ ಇನ್ನೊಂದು ಭಾಗ ಮಧ್ಯಮಾವಧಿ ನಂತರ ದೀರ್ಘಾವದಿ ಮಾಡಿದ್ದೇವೆ ನನಗೆ ಅನ್ನಿಸುವ ಮಟ್ಟಿಗೆ ಎರಡು ತಿಂಗಳೂ ಮೊದಲೇ ಇಡೀ ರಾಜ್ಯಾದ್ಯಂತ 1,11,000 ಫಲಾನುಭವಿಗಳಿಗೆ 10,00,80,000 ರೂಪಾಯಿಗಳನ್ನು ಎರಡು ತಿಂಗಳ ಮೊದಲೇ ಕಳುಹಿಸಿಬಿಟ್ಟಿದ್ದೇವೆ ಈಗ ಮುಂಗಾರುವಿನ ಮೇಜರ್ ಆಗಿ ಮದ್ಯಮಾವದಿ ದೀರ್ಘಾವದಿ ಕ್ರಾಪ್ ಸೆಟಲ್‌ಮೆಂಟ್ ನಮ್ಮ ಮುಂದೆ ಏನಿದೆ, ಸುಮಾರು 138,90,000-00 ರೂಗಳು ಈ ವರ್ಷದಲ್ಲಿ settlement ಆಗುತ್ತಿವೆ ಆದರೆ ಗುಲಬರ್ಗಾ ಜಿಲ್ಲೆಗೆ ಸುಮಾರು 83,19,00,000 ರೂಪಾಯಿಗಳು ಹೋಗಿವೆ ಅದರಲ್ಲಿ ಅಫಜಲ್‌ಪುರದ್ದು ಇನ್ನು ಸರಿಯಾಗಿ ಮಾಹಿತಿ ಸಿಕ್ಕಿಲ್ಲ 4,57,000-00 ರೂಗಳು ಅಫಜಲ್‌ಪುರಕ್ಕೆ ಬಂದಿದೆ ಜೇವರ್ಗಿಗೆ 48,99,94,000-00 ರೂ ಹೋಗಿವೆ ಅದೇ ಗುಲ್ಬರ್ಗಾ ಜಿಲ್ಲೆಗೆ ಅಂದರೆ ನಮ್ಮ ಬಿ ಆರ್‌ಪಾಟೀಲ್ ಇರುವ ಅಳಂದಾ ದಲ್ಲಿ 29,26,54,000-00 ರೂಗಳು ಹೋಗಿವೆ ಸೇಡಂ ಬಂದಿಲ್ಲ ನಿಲ್ ಇದೆ ಎಲ್ಲಾ ತಾಲ್ಲೂಕುಗಳ ಮಾಹಿತಿಯೂ ನನ್ನ ಹತ್ತಿರ ಇದೆ ಹಾಗಾಗಿ ಈಗ ಏನಾಗಿದೆ ಎಂದರೆ ಪಾಟೀಲರು ಕಳೆದ ಸಾರಿ 10 00 ಕೋಟಿ ರೂಗಳು ಬಂದಾಗ ಏನು ಹೇಳಿಲ್ಲ ಈಗೇನಾಗಿದೆಯೆಂದರೆ crop cutting experiments threshold yield ನಲ್ಲಿ ನಮ್ಮದು depend ಆಗಿರುತ್ತದೆ ಈ threshold yield ಅನ್ನು ಅಫಜಲ್‌ಪುರದ್ದು ನಾವು ತೆಗೆದುಕೊಂಡಿದ್ದರೆ ಈಗ ಮೇಜರ್ ಆಗಿ ಒಂದು ಜಿಲ್ಲೆಯಲ್ಲಿ ತೊಗರಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ Threshold yield ಗಿಂತ actual yield ರೂ 261 00 short fall ಇಲ್ಲಿ ಬರುತ್ತಿದೆ ಜೇವರ್ಗಿಯನ್ನು ತೆಗೆದುಕೊಂಡರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿದೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ಮಾನ್ಯ ಸಚಿವರೇ ಅಲ್ಲಿ ಉದ್ದು ಮತ್ತು ಹೆಸರುಬೇಳೆ ಲಾಸ್ ಆಗಿದೆ

ಶ್ರೀ ಬಂಡೆಪ್ಪ ಕಾಶಂಪೂರ್ ಅದನ್ನು ನಾನು ಆಲ್‌ರೆಡಿ ಈ ಎರಡು ತಿಂಗಳ ಮೊದಲೇ ಕಳುಹಿಸಿದ್ದೇನೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ಈಗ ನಷ್ಟವಾಗಿರುವುದು block gram and green gram ಅದಕ್ಕೆ ನಮಗೆ ಹಣ ಕೊಟ್ಟಿಲ್ಲ

ಶ್ರೀ ಬಂಡೆಪ್ಪ ಕಾಶಂಪೂರ್ ಹೌದು ಅರ್ಲಿ ಕ್ರಾಪ್‌ನಲ್ಲಿ ಸುಮಾರು ಗುಲಬರ್ಗಾಕ್ಕೆ, 1,09,18,563–00 ರೂಪಾಯಿಗಳನ್ನು ಕೊಟ್ಟಿದ್ದೇವೆ ಸೇಡಂ ಜಿಲ್ಲೆಯದು short crop details ಕಳುಹಿಸುತ್ತೇವೆ ಹಾಗಾಗಿ ಈ threshold yield ಮೇಲೆ ಏನು depend ಇರುತ್ತದೆ ಅದರಲ್ಲಿ ಸ್ವಲ್ಪ ಕಡಿಮೆಯಾಗಿದೆ ಎಂದು ಹೇಳಬಯಸಿ ಅದರ ಸಂಪೂರ್ಣ ವಿವರವನ್ನು ಮಾನ್ಯ ಸದಸ್ಯರಿಗೆ ಕಳುಹಿಸುತ್ತೇನೆ ಈ ವರ್ಷ ಇಡೀ ಗುಲ್ಬರ್ಗಾ ಜಿಲ್ಲೆಗೆ 8,31,99,000 ರೂಪಾಯಿಗಳ claims settle ಆಗಿದೆಯೆಂದು ಹೇಳಬಯಸುತ್ತೇನೆ

ಶ್ರೀ ಎಂ ವೈ ಪಾಟೀಲ ಮಾನ್ಯ ಅಧ್ಯಕ್ಷರೇ, ಸಚಿವರು ಅಧಿಕಾರಿಗಳು ಬರೆದು ಕೊಟ್ಟಿದ್ದನ್ನು ಹೇಳುತ್ತಿದ್ದಾರೆ, ಅವರೂ ಕೂಡ ನಮ್ಮ ನೆರೆ ಹಾವಳಿಯ ಸಮಯದಲ್ಲಿ ನಮ್ಮ ಜಿಲ್ಲೆಗೆ ಪ್ರವಾಸ ಮಾಡಿದ್ದಾರೆ ನಮ್ಮ ಅಫಜಲಪುರದಲ್ಲಿ ಮಳೆಯಾಗಿಲ್ಲ, ಬೆಳೆಯಿಲ್ಲವೆಂದು ಅವರು ಮನಗಂಡಿದ್ದಾರೆ ಆದರೂ ಕೂಡ ಇವತ್ತು ಅವರು ಅದಿಕಾರಿಗಳು ಬರೆದುಕೊಟ್ಟಿರುವ ಹೇಳಿಕೆಯನ್ನು ಸದನದಲ್ಲಿ ಉತ್ತರಿಸುತ್ತಿದ್ದಾರೆ ನಿಜವಾಗಿ ಹೇಳಿದರೆ ಇವತ್ತು ಪ್ರಾರಂಭದಲ್ಲಿ ಮಳೆ ಬಂತು, ಅದಕ್ಕೂ ಮುಂಚೆ ಪ್ರಾರಂಭದಲ್ಲಿ ಮಳಯೇ ಬರಲಿಲ್ಲ ಮಳೆ ಬರದೆ ನಾಟಿಯಾಗದೆ ಬೆಳೆ ಹೇಗೆ ಬರುತ್ತದೆ? ಇವರೆಲ್ಲಾ ಹೇಳುತ್ತಿದ್ದಾರೆ, crop cutting experiment ಜೇವರ್ಗಿಯದ್ದು ನಮ್ಮದು ಹೋಲಿಸಿ ನೋಡಿ ಎಷ್ಟು ವ್ಯತ್ಯಾಸ ಇದೆ, ಅದರ ಅರ್ಧ ಅರ್ಧದಷ್ಟಾದರೂ ಸಿಗಬೇಕಲ್ಲವೇ ನಮಗೆ? ಅದರ ಅಂಕಿ ಸಂಖ್ಯೆಯೆ ಅವರ ಹತ್ತಿರ ಸರಿಇಲ್ಲ ಮಳೆಯ ಪ್ರಮಾಣ ನಮಗೂ ಜೇವರ್ಗಿಗೂ ಹೋಲಿಸಿದರೆ ಸರಿಸಮಾನವಿದೆ ಹಾಗೂ crop cutting experiment ನಲ್ಲಿಯೂ ವ್ಯತ್ಯಾಸವಿಲ್ಲ ಆದರೆ

ಯಾವ ಆಧಾರದ ಮೇಲೆ ನೀವು ಅಗ್ರಿಕಲ್ಚರ್ ಆಫೀಸರ್ಸ್ ಅಗ್ರಿಕಲ್ಚರ್ ಅಸಿಸ್ಟೆಂಟ್ ಅನ್ನು involve ಮಾಡಿದ್ದೇವೆಂಬುದೆಲ್ಲಾ ಸತ್ಯಕ್ಕೆ ದೂರವಾದ ಸಂಗತಿ ವಿದ್ಯುತ್ ಬಳಸಿ ಲೈನ್ ಮೆನ್ ಕಡೆಯಿಂದ ಕ್ರಾಪ್ ಕಟ್ಟಿಂಗ್ ಮಾಡಿಸಿರಬಹುದು ಏಕೆಂದರೆ ನಿಮ್ಮ ಅಧಿಕಾರಿಗಳು ನಮ್ಮಲ್ಲಿ ನಮ್ಮಲ್ಲಿ ಈ ಬಾರಿ ಹ್ಯಾಂಡ್ಸ್ ಇರಲಿಲ್ಲ ಹಾಗಾಗಿ ರೆವಿನ್ಯೂದವರಿಗೆ ಕೊಟ್ಟಿದ್ದೇವೆ, ಅದರಲ್ಲಿ ನಾವ್ಯಾರೂ involve ಆಗಿಲ್ಲವೆಂದು ಹೇಳುತ್ತಿದ್ದಾರೆ ರೆವಿನ್ಯೂನವರು ನಮಗೆ ಈ ಸಲ ಹಣ ಕೊಡಲಿಲ್ಲ, ಹಾಗಾಗಿ ನಾವು ಅವರುಗೆ ಕ್ರಾಪ್ ಕಟ್ಟಿಂಗ್ experiment ಗೆ ಕೊಟ್ಟಿದ್ದೇವೆಂದು ನಿಮ್ಮವರೇ ಹೇಳುತ್ತಿದ್ದಾರೆ ಇಲು ಯಾವ ರೀತಿಯಿಂದ ಈ ಸಮಸ್ಯೆ ಸರಿಯಾಗುತ್ತದೆಂದು ತಾವೇ ಹೇಳಿ, ಕೃಷಿ ಇಲಾಖೆ ಇರಲಿಲ್ಲವೆಂದರೆ ಇದರ ಸಮೀಕ್ಷೆ ಹೇಗೆ ಸರಿಯಾಗುತ್ತದೆ?

ಶ್ರೀ ಬಂಡೆಪ್ಪ ಕಾಶಂಪೂರ್ ಮಳೆ ಲೆಕ್ಕ ತೆಗದುಕೊಂಡರೆ ಜೂನ್‌ನ್ಲಿ ಚೆನ್ನಾಗಿ ಮಳೆಯಾಗಿದೆ ಅಫಜಲ್‌ಪುರದಲ್ಲಿ ತೆಗೆದುಕೊಂಡರೆ ನಾರ್ಮಲ್ 102 ಎಂಎಂ ಇದ್ದರೆ ಅಲ್ಲಿ ಮಳೆಯಾಗಿರುವುದು 119 ಎಂಎಂ ಅದೇ ರೀತಿ ಜುಲೈನಲ್ಲಿ ನೋಡಿದರೆ ಅಲ್ಲಿ 133 ಎಂಎಂ ಗೆ ಬರೇ 118 ಎಂಎಂ ಆಗಿದೆ ಆಗಸ್ಟ್‌ನಲ್ಲಿ ಬರೇ 40 ಎಂಎಂ ಆಗಿದೆ ಸೆಪ್ಟೆಂಬರ್‌ನಲ್ಲಿ ಮಳೆ ಚೆನ್ನಾಗಿ ಆಗಿದೆ

(ಗೊಂದಲ)

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ಜುಲೈ ಆಗಸ್ಟ್‌ವರೆಗೆ ಬೆಳೆ ಉಳಿಯು ವುದಿಲ್ಲ ಸಚಿವರೇ? ನೀವು ಸಚಿವರಾಗಿ ಈ ರೀತಿ ಮಾತನಾಡಿದರೆ ಹೇಗೆ? ಮಾನ್ಯ ಅಧ್ಯಕ್ಷರೇ ತಾವು ರೈತರಿದ್ದೀರಿ ಹೇಳಿ ಎರಡು ತಿಂಗಳು ಮಳೆ ಬರಲಿಲ್ಲವೆಂದರೆ ಬೆಳೆ ಉಳಿಯುತ್ತದೆಯೇ ಅಲ್ಲಿ ಹೇಳಿ?

ಶ್ರೀ ಬಂಡೆಪ್ಪ ಕಾಶಂಪೂರ್ ಈ ಪದ್ಧತಿ ಇವತ್ತಿನಿಂದ ನಡೆದು ಕೊಂಡು ಬಂದಿಲ್ಲ 2001 ರಿಂದ ಸುಮಾರು 77,000 crop cutting experiment ಆಗಿವೆ ಅದರಲ್ಲಿ 14,000 ಸಿಬ್ಬಂದಿಗಳು ಇದರಲ್ಲಿ in-volve ಆಗಿದ್ದಾರೆ ಹಾಗಾಗಿ ಬಹಳ ದಿವಸಗಳಿಂದ ಹೋಬಳಿವಾರು

ಕ್ರಾಪ್ ಕಟ್ಟಿಂಗ್ experiment ಮಾಡಿದರೆ ಇದರ result ನಮಗೆ ಸರಿಯಾಗಿ ಸಿಗುತ್ತಿಲ್ಲ, ಇದನ್ನು ಪಂಚಾಯತ್‌ವಾರು ಮಾಡಬೇಕೆಂಬ ನಿಟ್ಟಿನಲ್ಲಿ ಬಹಳ ದಿವಸಗಳಿಂದ ಬೇಡಿಕೆ ಇದೆ ಅದು ನಡೆಯುತ್ತಿದೆ ಹಾಗಾಗಿ ನಾವು ಹೆಚ್ಚಿನ ಪ್ರಮಾಣದಲ್ಲಿ ಅನುಕೂಲ ಮಾಡಿಕೊಟ್ಟರೆ ಪರಿಣಾಮಕಾರಿಯಾಗಿ ಅಭಿವೃದ್ಧಿಯಾಗುತ್ತದೆ ಈ ಬಗ್ಗೆ ಹಲವಾರು ಸಾರಿ ಈ system change ಮಾಡಬೇಕೆಂದು ಕೇಂದ್ರ ಸರ್ಕಾರದ ಸಿಬ್ಬಂದಿಯವರೊಂದಿಗೆ ನಾನು ಮಾತನಾಡಿದ್ದೇನೆ ಮತ್ತು ನಮ್ಮ ಕೆಲವು recommendations ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆಂದು ಹೇಳಬಯಸುತ್ತೇನೆ

(ಗೊಂದಲ)

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ಮಾನ್ಯ ಸಚಿವರೇ ತಾವು ಅಲ್ಲಿ ಎನಕ್ವೈರಿ ಮಾಡಿಸಿ ಆ ಕ್ರಾಪ್ ಕಟ್ಟಿಂಗ್ ಸಿಸ್ಟಮ್‌ನಲ್ಲಿ ಕೆಲವು ತೊಡಕುಗಳಿವೆ ಅವರು ಅಲ್ಲಿ ಕರೆಕ್ಟ್ ಆಗಿ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ತನಿಖೆ ಮಾಡಿಸಿ ತನಿಖೆ ಮಾಡಿಸಿದರೆ ಗೊತ್ತಾಗುತ್ತದೆಯಲ್ಲವೇ? ನೀವು ತನಿಖೆ ಮಾಡಿಸಿ ನಮ್ಮ ಭಾಗದಲ್ಲಿ ಸಂಪೂರ್ಣ ಬರಗಾಲ ಬಿದ್ದ ಸ್ಥಳದಲ್ಲಿ ಕ್ರಾಪ್ ಕಟ್ಟಿಂಗ್‌ನಲ್ಲಿ ಏನಾದರೂ ನ್ಯೂನತೆ ಆಗಿದೆಯೇ? ಅಥವಾ ಜಿ ಐ ಸಿ ಯವರು weight ಮಾಡುವುದರಲ್ಲಿ ಏನಾದರೂ ಹೆಚ್ಚುಕಡಿಮೆ ಆಗಿದೆಯೇ? ಅಥವಾ ಅವರಿಂದ clarification ಕೇಳಿ ತಾವೇ conclusion ಗೆ ಬರಲಿಕ್ಕೆ ಹೋಗಬೇಡಿ

ಶ್ರೀ ಬಂಡೆಪ್ಪ ಕಾಶಂಪೂರ್ ಈಗ ನಮ್ಮ ಹತ್ತಿರ ಎಲ್ಲಾ ಮಾಹಿತಿ ಇದೆ ಮಳೆ ಪ್ರಮಾಣದ ಬಗ್ಗೆ ಕ್ರಾಪ್ ಕಟ್ಟಿಂಗ್ ಎಷ್ಟು ಎಲ್ಲೆಲ್ಲಿ ಮಾಡಿದ್ದಾರೆಂಬುದನ್ನು ಸಂಪೂರ್ಣ ಮಾಹಿತಿ ತಮಗೆ ಕಳುಹಿಸಿಕೊಡುತ್ತೇವೆ ಆಮೇಲೆ ಯಾವ್ಯಾವುದು ಹಿಂದಿನದು ಎಷ್ಟು ಬಂದಿದೆಯೆಂದು ಮೊದಲು ನೋಡಿ ಏಕೆಂದರೆ ಬಹಳ ದೊಡ್ಡ ಪದ್ಧತಿ ಇದು

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ನಮ್ಮ ಜಿಲ್ಲೆಯದೊಂದು ತಾವು ಮೀಟಿಂಗ್ ಕರೆದು convince ಮಾಡಿ

ಶ್ರೀ ಬಂಡೆಪ್ಪ ಕಾಶಂಪೂರ್ ಆಯಿತು, ಮೀಟಿಂಗ್ ನಡೆಸುತ್ತೇನೆ ಈ ವಿಷಯದಲ್ಲಿ ದೊಡ್ಡ ಪ್ರಮಾಣದಲ್ಲಿ ಚಿಂತನೆ ಆಗಬೇಕಾಗಿದೆ ಈ ಯೋಜನೆಯಡಿಯಲ್ಲಿ ಹಲವಾರು ಬದಲಾವಣೆಗಳು ಆಗಬೇಕಾಗಿವೆ threshold yield ಅನ್ನು ಇವತ್ತಿನ date ನಲ್ಲಿ ಏನು ತೆಗೆದುಕೊಳ್ಳುತ್ತಿದ್ದೇವೆ ಅಂದರೆ ಒಂದು 3 ಅಥವಾ 5 ವರ್ಷಗಳ average ತೆಗೆದುಕೊಳ್ಳುತ್ತಿದ್ದೇವೆ, ಆದರೆ ರಾಜ್ಯ ಸರ್ಕಾರದಿಂದ average ತೆಗೆದುಕೊಳ್ಳಬೇಡಿ ಎಂದು ನಮ್ಮ recommendations ಹೋಗಿದೆ ಏಕೆಂದರೆ ಮೂರು ವರ್ಷಗಳ ಕಾಲ ಬರಗಾಲ ಬಂದಾಗ ನಾಲ್ಕನೇ ವರ್ಷಕ್ಕೆ ಪರಿಸ್ಥಿತಿ ಅದೇ ಇರುತ್ತದೆ

ಶ್ರೀ ಬಿ ಶಿವರಾಂ ಹೊಸ ಬೆಳೆ ವಿಮೆ ಯೋಜನೆಯನ್ನು ಕೆಲವು ತಾಲ್ಲೂಕುಗಳಲ್ಲಿ ನಿರ್ದಿಷ್ಟವಾಗಿ ಅನುಷ್ಠಾನಕ್ಕೆ ತಂದಿದ್ದಿರಿ ಈಗ ಹೊಸ ಗೈಡ್‌ಲೈನ್ಸ್ ಅನ್ನು ಆ ಹೊಸ ಯೋಜನೆಯಲ್ಲಿ ರೂಪಿಸಿದ್ದಿರಿ ಆ ಯೋಜನೆಯನ್ನು ರೂಪೊಸಿದ್ದಿರಿ ಅದನ್ನು ನಿವಯು ಇತರೆ ಬೆಳೆ ವಿಮೆ ಯೋಜನೆಯಲ್ಲಿ ಜಾರಿಗೊಳಿಸಿದರೆ ಹೇಗಾಗುತ್ತದೆ? ಇಡೀ ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ನಿಧಿಷ್ಟವಾಗಿ ಅನುಷ್ಠಾನಕ್ಕೆ ತಂದಿದ್ದೀರಿ ಈಗ ಆ ಯೋಜನೆಯಡಿ ಹೊಸ guidelines ರೂಪಿಸಿದ್ದಿರಿ ಹೌದಲ್ಲವೇ? ರೂಪಿಸಿರುವ ಆ guidelines ಏನಿದೆ, ಅದನ್ನು ಇತರೇ ಬೆಳೆ ವಿಮೆ ಯೋಜನೆಗೆ ಸಂಬಂದಿಸಿದಂತೆ ಜಾರಿಗೊಳಿಸಿದರೆ, ಹೇಗಾಗುತ್ತದೆ? ಅಂದರೆ ಇದನ್ನು ದೊಡ್ಡದಾಗಿ ತೋರಿಸುವುದಕ್ಕಿಂತಲೂ there is a set of guidelines already issued by the Central Government in that scheme

ಶ್ರೀ ಬಂಡೆಪ್ಪ ಕಾಶಂಪೂರ್. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಕೇಂದ್ರ ಸರ್ಕಾರದವರು ಇಡೀ ರಾಷ್ಟ್ರದ ಮೂರು ರಾಜ್ಯಗಳಲ್ಲಿ ಅಂದರೆ, ಮಹಾರಾಷ್ಟ್ರ, ಜಾರ್ಖಂಡ್ ಮತ್ತು ಕರ್ನಾಟಕ, ಈ ಮೂರು ರಾಜ್ಯಗಳನ್ನು ತೆಗೆದುಕೊಂಡರೆ pilot basis ನಲ್ಲಿ ಜಾರಿಗೊಳಿಸಬೇಕೆಂದು ಹೇಳಿದ್ದಾರೆ ನನಗನ್ನಿಸಿದ ಮಟ್ಟಿಗೆ ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂದಸಿದಂತೆ ಬಹಳ ಮುಂಚಿತವಾಗಿಯೇ 6 ನೇ ತಾರೀಖಿನಂದು notification ಆಗಿ 7 ನೇ ತಾರೀಖೀನಂದು ನಾವೆಲ್ಲರೂ ಇದಕ್ಕೆ support ಮಾಡುತ್ತೇವೆಂದು ಇಲ್ಲಿಗೆ ಅಧಿಕಾರಿಗಳು ಬಂದಿದ್ದರು ಇವತ್ತು ಬೀದರ್ ಬಿಜಾಪುರ ಬಳ್ಳಾರಿ ಚಿತ್ರದುರ್ಗ ಗದಗ ಗುಲ್ಬರ್ಗ ಹಾವೇರಿ ಕೋಲಾರ ಕೊಪ್ಪಳ ತುಮಕೂರು ಹಾಸನ

ಬೆಂಗಳೂರು ಗ್ರಾಮಾಂತರ ಮತ್ತು ಶಿವಮೊಗ್ಗದಂತಹ ಹಲವಾರು ಜಿಲ್ಲೆಗಳಲ್ಲಿ ಸುಮ್ಮನೆ ಒಂದು pilot project ಪ್ರಕಾರ ಏನಿದೆಯೆಂದರೆ, ನಮ್ಮ present condition ನಲ್ಲಿ rain guage stations ಏನಿವೆ ಇವು ಬರೀ taluk level ಗಳಲ್ಲಿ ಮಾತ್ರ ಇದೆ ಹಾಗಾಗಿ ಈ ಜಿಲ್ಲೆಗಳ ಕೆಲವು ತಾಲ್ಲೂಕುಗಳ rain guage station ವ್ಯಾಪ್ತಿಯಲ್ಲಿ ಎಷ್ಟು ಬರುತ್ತರವೋ ಅಷ್ಟನ್ನೂ ಈ ವರ್ಷ ತೆಗೆದುಕೊಂಡಿದ್ದೇವೆ ಮುಂದಿನ ದಿನಗಳಲ್ಲಿ ಇಡೀ ಪಂಚಾಯತ್ ವಾರು rain guage system ಅನ್ನು ಜಾರಿಗೆ ತರಬೇಕೆಂದು ಯೋಜನೆ ಯೊಂದನ್ನು ನಾವು ಈಗ ಹಮ್ಮಿಕೊಳ್ಳುತ್ತಿದ್ದೇವೆ ಹವಾಮಾನ ವಿಮೆ ಯೋಜನೆ ಏನಿದೆ, ಇಡೀ ರಾಜ್ಯದಲ್ಲಿರುವ ಎಲ್ಲಾ ಹಳ್ಳಿಗಳನ್ನೂ ಕವರ್ ಮಾಡುವಂತೆ ಯೋಜನೆ ಹಾಕಿಕೊಳ್ಳುತ್ತಿದ್ದೇವೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ಅಧ್ಯಕ್ಷರೆ, ಸಚಿವರು ಏನು ಹೇಳುತ್ತಿದ್ದಾರೆ, ಇದು ರೈತರಿಗೆ ಸಂಬಂಧಪಟ್ಟಿದ್ದು ಇದು ವಿಮೆಗೆ ಸಂಬಂಧ ಪಟ್ಟಿದ್ದು ಇದರ ಬಗ್ಗೆಯೂ ಮಾತನಾಡಲು ನೀವು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಈಗ ಒಂದು ಸಣ್ಣ ವಿವರಣೆ ಕೇಳುತ್ತೇನೆ ನನಗೆ ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ

ಅಧ್ಯಕ್ಷರು ರೀ ಏನ್ರೀ ಅದು? ಎಲ್ಲರೂ ನೀವು ನೀವೇ ಎದ್ದು ನಿಂತುಕೊಂಡು ಮಾತನಾಡುತ್ತಿದ್ದರೆ ಹೇಗೆ? ಎಲ್ಲರೂ ನಿಂತುಕೊಳ್ಳುವುದು, ಸರಿಯಾಗಿ ಯಾರ ಮಾತೂ ಕೇಳುವುದಿಲ್ಲ

ಶ್ರೀ ಬಂಡೆಪ್ಪ ಕಾಶಂಪೂರ್ rain guage station ಎಲ್ಲಾ ಕಡೆಗಳಲ್ಲೂ ಇದೆ ಹಾಗಾಗಿ ಮುಂಬರುವ ದಿನಗಳಲ್ಲಿ

ಶ್ರೀ ಬಿ ಶಿವರಾಮು ಅಲ್ಲಿ rain guage station ಇಲ್ಲ ಅದಕ್ಕೋಸ್ಕರ particular ಆಗಿ ಇದನ್ನು ನೀವು impliment ಮಾಡುತ್ತೀರೆಂದು ನಾನು ನಿಮ್ಮನ್ನು ಕೇಳುತ್ತಿರುವುದು

ಶ್ರೀ ಬಂಡೆಪ್ಪ ಕಾಶಂಪೂರ್ ಅಲ್ಲಿ rain guage station ಇಲ್ಲವೇ?

ಶ್ರೀ ಬಿ ಶಿವರಾಮು ಇದೆ, ನೀವು ಹೇಳಿದಂತೆ ಯಾವ ರೀತಿ ಇರಬೇಕೋ ಆ ರೀತಿಯಲ್ಲಿ ಇಲ್ಲ

ಶ್ರೀ ಬಂಡೆಪ್ಪ ಕಾಶಂಪೂರ್ ಅದಕ್ಕೆ ಮುಂದಿನ ದಿನಗಳಲ್ಲಿ ಬರೀ ನಿಮ್ಮದೊಂದೇ ತಾಲ್ಲೂಕಲ್ಲ, ಇಡೀ ರಾಜ್ಯಾದ್ಯಂತ ಗ್ರಾಮ ಪಂಚಾಯಿತಿ ಮಟ್ಟದಲ್ಲಿ rain guage station ಹಾಕಿ

ಶ್ರೀ ಬಿ ಶಿವರಾಮು ನೀವು pilot scheme ನಲ್ಲಿ ತೆಗೆದುಕೊಂಡಿದ್ದಿರಿ ತಾನೆ?

ಶ್ರೀ ಬಂಡೆಪ್ಪ ಕಾಶಂಪೂರ್ rain guage station ಇದೆಯೆಂದು ನೀವೇ ಹೇಳುತ್ತೀರಿ ಸರಿಯಾಗಿ ಕೆಲಸ ಮಾಡುವುದಿಲ್ಲ ಏನೂ ಮಾಡುವು ದಿಲ್ಲ, ಅದನ್ನೂ ಕೂಡ ಹೇಳಬೇಕು

ಶ್ರೀ ಬಿ ಶಿವರಾಮು ಈಗ ಸದ್ಯಕ್ಕೆ ಎಲ್ಲೆಲ್ಲಿ ತೆಗೆದುಕೊಂಡಿದ್ದೇವೆಯೋ ಅಲ್ಲಿ rain guage station ಇದೆ ದೆಹಲಿಯಲ್ಲಿರುವ insurance company ಯವರು ಮತ್ತು ನಮ್ಮವರೆಲ್ಲರೂ ಸೇರಿಕೊಂಡು ಇದನ್ನು monitor ಮಾಡುತ್ತಿದ್ದಾರೆ

ಶ್ರೀ ಬಿ ಶಿವರಾಮು ಅವರು ಹೇಳಿದ್ದು ಸಮರ್ಪಕವಾಗಿದೆ ಈ ರಿತಿಯಲ್ಲಿ ಸರಿಯಾಗಿ ಅನುಷ್ಠಾನಗೊಳಿಸದಿರುವುದಕ್ಕ ಇವತ್ತು ಅಫಜಲ ಪುರದಲ್ಲಿ ನೀವೇ ಹೇಳಿದಂತೆ ಎರಡು ತಿಂಗಳು ಜುಲೈ ಮತ್ತು ಆಗಸ್ಟ್ ಮಳೆ ಆಗದಿದ್ದರೂ ಅವರಿಗೆ ಬೆಲೆ ವಿಮೆ ಬಂದಿಲ್ಲವೆಂದು ಹೇಳುತ್ತಿದ್ದಾರೆ ಇವರ ಹತ್ತಿರ ಮಾಹಿತಿ ಸರಿಯಾಗಿಲ್ಲ

ಶ್ರೀ ಬಂಡೆಪ್ಪ ಕಾಶಂಪೂರ್ ಮಾಹಿತಿಗಳೆಲ್ಲವೂ ಇದೆ ಆದರೆ, ತಾವು ಯಾವ ತಾಲ್ಲೂಕಿನ ಬಗ್ಗೆ ಹೇಳುತ್ತಿದ್ದೀರಿ?

ಶ್ರೀ ಬಿ ಶಿವರಾಮು ಹಾಸನ ಜಿಲ್ಲೆ ಬಗ್ಗೆ ಹೇಳುತ್ತಿದ್ದೇನೆ

ಶ್ರೀ ಬಂಡೆಪ್ಪ ಕಾಶಂಪೂರ್ ಹಾಸನದ ಮಾಹಿತಿಗಳಿವೆ ಹಾಸನದಲ್ಲಿ ತಾಲ್ಲೂಕು ಯಾವುದು?

ಶ್ರೀ ಬಿ ಶಿವರಾಮು ಹಾಸನ

ಶ್ರೀ ಬಂಡೆಪ್ಪ ಕಾಶಂಪೂರ್ ಹಾಸನದ್ದು ಇದೆಯಲ್ಲ ಅಲ್ಲಿ rain guage station ಇದೆಯಲ್ಲ

ಅಧ್ಯಕ್ಷರು ಈಗ ನಾವು ವಿತ್ತೀಯ ಕಾರ್ಯಕಲಾಪಗಳಿಗೆ ಹೋಗೋಣ

ಶ್ರೀ ಧರ್ಮಸಿಂಗ್ ಈಗ ಬಂಡೆಪ್ಪ ಕಾಶೆಂಪೂರ್‌ರವರು ಬಹಳಷ್ಟು ತಿಳಿಸತಕ್ಕಂಥ ಪ್ರಯತ್ನ ಮಾಡಿದ್ದಾರೆ ಅವರೂ ತಿಳಿದುಕೊಂಡಿದ್ದಾರೆ ಆದರೆ, ಇದರಿಂದ ಯಾರಿಗೂ ಸಮಾದಾನವಾಗಿಲ್ಲ ಜೇವರ್ಗಿಗೆ ಬಂದದ್ದು ನನಗೇ ಗೊತ್ತಿಲ್ಲ ಜೇವರ್ಗಿಗೆ ಏಕೆ ಬಂತು? ಏನು ಹೋಯಿತು? ನನಗೇ ಗೊತ್ತಿಲ್ಲ ಇವತ್ತೇ ಗೊತ್ತಾದದ್ದು ಆದರೆ, ಶರಣ ಪ್ರಕಾಶ್‌ರವರು ಹೇಳಿದಂತೆ, ಗುಲ್ಬರ್ಗಾ ಜಿಲ್ಲೆಯ ಶಾಸಕರುಗಳ, ಅದುಕಾರಿಗಳ ಸಬೆ ಕರೆಸಿರಿ ಅವರುಗಳ ಸಮಕ್ಷಮದಲ್ಲಿ ಅದರ ಬಗ್ಗೆ ವಿಚಾರ ಮಾಡೋಣ ಸಭೆಯಲ್ಲಿ ಸಮಾಲೋಚನೆಯಾದ ಬಳಿಕ ಎಲ್ಲಿ ಇರುತ್ತದೆಂದು ಅದಿಕಾರಿಗಳಿಂದ ತಿಳಿದುಕೊಂಡು ಅದಕ್ಕೆ ನಿಜವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಿ ಎಂ ವೈ ಪಾಟೀಲರನ್ನು ಯಾರಿಂದಲೂ ತೃಪ್ತಿ ಪಡಿಸಲು ಸಾಧ್ಯವಿಲ್ಲ ಅವರು ಕೇಳುವುದಿಲ್ಲ ಅದಕ್ಕೋಸ್ಕರ ಅವರು ಬಿ ಆರ್ ಪಾಟೀಲರು ಶರಣ ಪ್ರಕಾಶ್ ನಾವು ಮತ್ತು ಖರ್ಗೆಯವರು ಬರುತ್ತೇವೆ ಒಂದು ದಿವಸ ಚರ್ಚೆ ನಡೆಸಲು ಸಭೆ ಕರೆದು ಸಭೆಯಲ್ಲಿ ದೀರ್ಘವಾಗಿ ಸಮಾಲೋಚನೆ ಮಾಡೋಣ

ಅಧ್ಯಕ್ಷರು ಈಗ ವಿತ್ತೀಯ ಕಾರ್ಯ ಕಲಾಪಗಳಿಗೆ ಹೋಗೋಣ, ಈಗ 2007-08 ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ

6) ವಿತ್ತೀಯ ಕಾರ್ಯಕಲಾಪಗಳು

2007–08 ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ

ಬೇಡಿಕೆ ಸಂಖ್ಯೆ 1 ಕೃಷಿ ಮತ್ತು ತೋಟಗಾರಿಕೆ

ಶ್ರೀ ಬಂಡೆಪ್ಪ ಕಾಶೆಂಪೂರ್(ಕೃಷಿ ಸಚಿವರು) ಮಾನ್ಯ ಅದ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಕೃಷಿ ಮತ್ತು ತೋಟಗಾರಿಕೆ ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 2, ಪಶುಸಂಗೋಪನೆ ಮತ್ತು ಮೀನುಗಾರಿಕೆ

ಶ್ರೀ ರೇವು ನಾಯಕ್ ಬೆಳಮಗಿ (ಪಶು ಸಂಗೋಪನಾ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31·3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಪಶು ಸಂಗೋಪನೆ ಮತ್ತು ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಹಾಗೂ ಬಂಡವಾಳ ಕಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 8 ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ

ಶ್ರೀ ಬಿ ಎಸ್ ಯಡಿಯೂರಪ್ಪ(ಹಣಕಾಸು ಸಚಿವರು) (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಶ್ರೀ ದರ್ಮಸಿಂಗ್ ಅಧ್ಯಕ್ಷರೆ, ಬೇಡಿಕೆಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳೇ ಮಂಡಿಸಬೇಕು, ಅವರ ಪರವಾಗಿ ಬೇರೆ ಮಂತ್ರಿಗಳು ಮಂಡಿಸತಕ್ಕದ್ದಲ್ಲ

ಅಧ್ಯಕ್ಷರು ಏನು ಮಾಡೋಣ ಕೆಲವು ಮಂತ್ರಿಗಳು ಇಲ್ಲ

ಬೇಡಿಕೆ ಸಂಖ್ಯೆ 9 – ಸಹಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಸಚಿವರು) ಸಹಕಾರ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, 'ಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಸಹಕಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 10 – ಸಮಾಜ ಕಲ್ಯಾಣ

ಶ್ರೀ ಬಾಲಚಂದ್ರ ಜಾರಕಿ ಹೊಳಿ (ಸಮಾಜಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಸಮಾಜ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ)- ಮಂಜೂರು ಮಾಡಬೇಕೆಂದು ಕೋರುತ್ತೇನೆ

ಶ್ರೀ ಬಸವರಾಜ ರಾಯ ರೆಡ್ಡಿ ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು ರೆಡ್ಡಿಯವರೆ, ಮೊದಲು ಮಂಡನೆಯಾಗಲಿ, ಅನಂತರ ಕೇಳಿ

ಶ್ರೀ ಬಸವರಾಜರಾಯ ರೆಡ್ಡಿ ನಾನು ಗ್ರಾಮೀಣಾಭಿವೃದದ್ದಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿಗಳ ಹತ್ತಿರ ಹೋಗಿ, ಈ ವರ್ಷದ performance budget ಮತ್ತು ವಾರ್ಷಿಕ ವರದಿ ಎರಡನ್ನೂ ಕೊಡಿ ಎಂದರೆ ಇನ್ನೂ ಪ್ರಿಂ ಟ್ ಆಗಿಲ್ಲ ಸರ್, ಲೇಟಾಗುತ್ತದೆ ಎಂಬ ಮಾತನ್ನು ನನಗೆ ಹೇಳಿದ್ದಾರೆ

ಅಧ್ಯಕ್ಷರು ಅದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಅನಂತರ ನೋಡೋಣ ಮೊದಲು ಬೇಡಿಕೆಗಳ ಮಂಡನೆಯಾಗಲಿ

ಬೇಡಿಕೆ ಸಂಖ್ಯೆ 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಶ್ರೀ ಎಚ್ ಕೆ ಕುಮಾರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 14 – ಕಂದಾಯ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಇಲಾಖೆಯ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕಂದಾಯ"**ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 16 – ವಸತಿ

ಶ್ರೀ ಡಿ ಟಿ ಜಯಕುಮಾರ್ (ವಸತಿ ಇಲಾಖೆಯ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ವಸತಿ"**ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ

ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಆರೋಗ್ಯ ಮತ್ತು ಕುಟುಂಬ ಕಲ್ಯಾಣ"ಕ್ಕೆ** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 13 – ಆಹಾರ ಮತ್ತು ನಾಗರೀಕ ಸರಬರಾಜು

ಶ್ರೀ ಬಿ ಎಸ್ ಯಡಿಯೂರಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಆಹಾರ ಮತ್ತು ನಾಗರೀಕ ಸರಬರಾಜಿಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 18 – ವಾಣಿಜ್ಯ ಮತ್ತು ಕೈಗಾರಿಕೆ

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ವಾಣಿಜ್ಯ ಮತ್ತು ಕೈಗಾರಿಕೆಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 26 – ಯೋಜನೆ, ಸಾಂಖಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ

ಶ್ರೀ ರಾಮಚಂದ್ರಗೌಡ (ಯೋಜನೆ, ಸಾಂಖಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಯೋಜನೆ, ಸಾಂಖಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಕೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 27 – ಕಾನೂನು

ಶ್ರೀ ಎಂ ಪಿ ಪ್ರಕಾಶ್ (ಕಾನೂನು ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3,2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕಾನೂನು ಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಶ್ರೀ ಎಂ ಪಿ ಪ್ರಕಾಶ್ (ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಬೇಡಿಕೆ ಸಂಖ್ಯೆ 24,20 – ಇಂಧನ ಮತ್ತು ಲೋಕೋಪಯೋಗಿ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಯವರು) (ಇಂಧನ ಮತ್ತು ಲೋಕೋಪಯೋಗಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31 3 2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಇಂಧನ ಮತ್ತು ಲೋಕೋಪಯೋಗಿ ಗೆ"**

24 ಕಿರಿಯ ಫಾರ್ಮಸಿಸ್ಟ್	4	4	0	–	–
25 ಡಯಟಿಷಿಯನ್	1	0	1	–	8ವರ್ಷ
26 ಕಚೇರಿ ಅಧೀಕ್ಷಕರು	2	2	0	–	–
27 ಪ್ರಥಮದರ್ಜೆಸಹಾಯಕರು	5	5	0	–	–
28 ಇಂಟರ್ನಲ್ ಆಡಿಟರ್	1	1	0	–	–
29 ದ್ವಿತೀಯ ದರ್ಜೆ ಸಹಾಯಕರು	15	15	0	–	–
30 ಫುಡ್‌ಸೂಪರ್‌ವೈಸರ್	1	1	0	–	10–15ವರ್ಷ
31 ಕಿರಿಯ ಶೀಘ್ರಲಿಪಿಗಾರರು	2	1	1	–	–
32 ಬೆರಳಚ್ಚುಗಾರು	2	2	0	–	–
33 ಫಿಜಿಯೋಥರಪಿಸ್ಟ್	4	3	1	–	2 ತಿಂಗಳು
34 ದಂತಮೆಕಾನಿಕ್	1	0	1	–	2ವರ್ಷ
35 ದಂತಹೈಜನಿಸ್ಟ್	1	1	0	–	–
36 ಪ್ರಾಸ್ಥೆಟಿಸ್ಟ್	1	0	1	–	10–15ವರ್ಷ
37 ಆರ್ಥೋಟಿಪಿಸ್ಟ್	1	0	1	–	10–15ವರ್ಷ
38 ಎಲೆಕ್ಟ್ರಿಷಿಯನ್	2	1	1	–	10–15ವರ್ಷ
39 ರೇಡಿಯೋಗ್ರಾಫರ್	2	0	2	–	10 ವರ್ಷ
40 ಕ್ಷಕಿರಣ ತಂತ್ರಜ್ಞರು	3	3	0	–	–
41 ಟೆಕ್ನಿಷಿಯನ್	2	0	2	–	10 ವರ್ಷ
42 ನ್ಯೂರಾಲಜಿ	1	0	1	–	10 ವರ್ಷ
43 ರೆವೆನ್ಯೂ ಇನಸ್ಟ್ರಕ್ಟರ್	1	0	1	–	10 ವರ್ಷ
44 ಇಸಿಜಿ ತಂತ್ರಜ್ಞರು	1	0	1	–	10 ವರ್ಷ
45 ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	5	3	2	–	3 ವರ್ಷ
46 ನೇತ್ರ ಸಹಾಯಕರು	1	1	0	–	–
47 ರಕ್ತ ನಿಧಿ ತಂತ್ರಜ್ಞರು	1	0	1	–	5ವರ್ಷ
48 ಪ್ಯಾರಾಮೆಡಿಕಲ್‌ವರ್ಕರ್	1	1	0	–	5ವರ್ಷ
49 ವಾಹನಚಾಲಕರು	8	1	7	–	2–5ವರ್ಷ

50 ಗ್ರೂಪ್ ಡಿ	269	191	104	ವೃಂದಡಿ	15 ವರ್ಷ
51 ಸ್ಯಾನಿಟರಿ ವರ್ಕರ್ಸ್	25	–	–	–	–
52 ಕಾರ್ಪೆಂಟರ್	1	1	0	–	8–10 ವರ್ಷ
53 ಶೂ ಮೇಕರ್	1	0	1	–	8–10 ವರ್ಷ
54 ಡಯಟ್ ಡಿಸ್ಟ್ರಿಬ್ಯೂಟರ್	1	0	1	–	8–10 ವರ್ಷ
ಒಟ್ಟು	**687**	**506**	**177**		

176(133) ಶ್ರೀ ಹೆಚ್ ಎಸ್ ಶಂಕರ ಲಿಂಗೇಗೌಡ (ಚಾಮರಾಜ)

ಮಾನ್ಯ ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರಿನ ವಿನಾಯಕ ನಗರದಲ್ಲಿರುವ (ಪಡುವಾರಹಳ್ಳಿ) ಪಶುವೈದ್ಯ ಆಸ್ಪತ್ರೆಯನ್ನು ಪ್ರಾರಂಬಿಸಿದ್ದು ಯಾವಾಗ?

ಆ) ಈ ಆಸ್ಪತ್ರೆ ಇರುವ ಜಾಗವು ಸ್ವಂತದ್ದೋ ಅಥವಾ ಬಾಡಿಗೆಯದ್ದೋ ತಿಳಿಸುವುದು

ಇ) ಈ ಆಸ್ಪತ್ರೆಗೆ ಸ್ವಂತ ಜಾಗ ಹೊಂದಲು ಇಲಾಖೆಯು ಕೂಗೊಂಡ ಕ್ರಮವೇನು?

ಶ್ರೀ ರೇವೂನಾಯಕ ಬೆಳಮಗಿ

ಅ) ಮೈಸೂರಿನ ಪಡುವಾರಹಳ್ಳಿಯ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ದಿನಾಂಕ 20–07–1994 ರಲ್ಲಿ ಪ್ರಾರಂಭಿಸಲಾಗಿದೆ

ಆ) ಈ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವು ಗ್ರಾಮಸ್ಥರಿಂದ ಮರದ ದೇವಸ್ಥಾನದ·ಆವರಣದ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಉಚಿತವಾಗಿ ನೀಡಿರುವ ಸ್ಥಳದಲ್ಲಿ ನಡೆಯುತ್ತಿದೆ

ಇ) ಈಗಾಗಲೇ ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಆಪಸಂ/ಆಶಾ/ ಮವೈಸಂವೈ/2006–07 ದಿನಾಂಕ 02–02–2007 ರಲ್ಲಿ ಆಯುಕ್ತರು ಮೈಸೂರು ಮಹಾನ್ರ ಪಾಲಿಕೆ, ಇವರಿಗೆ ಪಶುಚಿಕಿತ್ಸಾಲಯ ಕಟ್ಟಡಕ್ಕಾಗಿ ನಾಗರೀಕ ಸೌಲಭ್ಯದಡಿ ನಿವೇಶನವನ್ನು ಉಚಿತವಾಗಿ ಇಲಾಖೆಗೆ ನೀಡಲು ಕೋರಲಾಗಿರುತ್ತದೆ ಆದರೆ ಇದುವರೆವಿಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಲೀ ಅಥವಾ ಮೈಸೂರು ಮಹಾನಗರ ಪಾಲಿಕೆಯವರಾಗಲೀ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ/ ಜಾಗ ನೀಡಿದ ಕೂಡಲೇ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು

178(392) ಶ್ರೀ ಶಿವರಾಮು ಬಿ (ಗಂಡಸಿ)

ವಿಷಯ ಪರಿಶಿಷ್ಟ ಜಾತಿ/ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ಭರಿಸುವುದು

ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ಪ್ರವೇಶ ಪಡೆಯಲು ಪ್ರವೇಶ ಶುಲ್ಕವನ್ನು ಸರ್ಕಾರದ ತೀರ್ಮಾನದಂತೆ ಸಕಾರ ಭರಿಸುತ್ತದೆಯೇ?

ಆ) ಭರಿಸದಿದ್ದಲ್ಲಿ ಕಾರಣವೇನು?

ಇ) ಯಾವಾಗಿನಿಂದ ಭರಿಸಿರುವುದಿಲ್ಲ?

ಈ) ಕೇಂದ್ರ ಸಕಾರದ ಶಿಷ್ಯ ವೇತನ/ಪ್ರವೇಶ ಅನುದಾನ ರಾಜ್ಯ ಸಕಾರಕ್ಕೆ ಬಂದಿರುತ್ತದೆಯೇ ಬಂದಿದ್ದಲ್ಲಿ ಎಷ್ಟು?

ಉ) ಪ್ರವೇಶ ಶುಲ್ಕ ಭರಿಸಲು ಪ್ರತಿ ವರ್ಷ ಸಕಶ್ರಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಬಾಲಚಂದ್ರ ಆರ್ ಜಾರಕಿಹೊಳಿ

ಅ) ಸಮಾಜ ಕಲ್ಯಾಣ ಇಲಾಖೆ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಪಡೆಯಲು ಸರ್ಕಾರಿ ಸೀಟಿಗೆ ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುತ್ತದೆ

2 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಕೆಯಿಂದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಪಡೆಯಲು ಸರ್ಕಾರಿ ಸೀಟಿಗೆ ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುತ್ತದೆ

3 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ಪ್ರವೇಶ ಪಡೆಯಲು ಶುಲ್ಕವನ್ನು ನೀಡುತ್ತಿರುವುದಿಲ್ಲ ಬದಲಾಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಹೊಂದಿದ್ದು ವಾರ್ಷಿಕವಾಗಿ ರೂ 11,000/-ಕ್ಕಿಂತ ಕಡಿಮೆ ಆದಾಯವುಳ್ಳ (ಪ್ರವರ್ಗ-1ಕ್ಕೆ ಆದಾಯ ಮಿತಿ ಇರುವುದಿಲ್ಲ) ಹಿಂದುಳಿದ ವರ್ಗಗಳ ವಿದ್ಯಾರ್ತಿಗಳ ಪರವಾಗಿ ಸಕಾರದ ಸಮಾನ ಶಿಕ್ಷಣ ಸಂಸ್ಥೆಗಳಲ್ಲಿ ವಿದಿಸಲಾಗಿರುವ ದರಗಳಲ್ಲಿ ಬೋಧನಾ, ಪರೀಕ್ಷಾ ಪ್ರಯೋಗಾಲಯ ಶುಲ್ಕವನ್ನು ಸಂಬಂದಿಸಿದ ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು ಇರ ಜೊತೆಗೆ ಹಿಂದುಳಿದ ವರ್ಗಗಳ ಪ್ರವರ್ಗ 1 ಕ್ಕೆ 1 ರ ವಿದ್ಯಾರ್ಥಿಗಳ ಪ್ರವೇಶ ವಾಚನಾಲಯ ಕ್ರೀಡೆ ಇತ್ಯಾದಿ ಶುಲ್ಕಗಳನ್ನು ಸಹಾ ಸಂಬಂದಿಸಿದ ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) 1 ಸಮಾಜ ಕಲ್ಯಾಣ ಇಲಾಖೆ ಕೇಂದ್ರ ಸರ್ಕಾರದಿಂದ ಶಿಷ್ಯವೇತನ ಪ್ರವೇಶಾನುದಾನ ರಾಜ್ಯ ಸಕಾರಕ್ಕೆ ಬಂದಿರುತ್ತದೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ 2006–07 ನೇ ಸಾಲಿನಲ್ಲಿ ರೂ 5203 48 ಲಕ್ಷಗಳನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಬಿಡುಗಡೆಗೊಳಿಸಿದೆ

2 ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆ ಕೇಂದ್ರ ಪುರಸ್ಕೃತ ಯೋಜನೆಯೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ 2006–07ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ 1156 00 ಲಕ್ಷ ಅನುದಾನ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾಗುತ್ತಿದೆ

3 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕೇಂದ್ರ ಸಕಾರದಿಮದ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿವೇತನಕ್ಕಾಗಿ 2006–07 ನೇ ಸಾಲಿನಲ್ಲಿ ರೂ 663 10 ಲಕ್ಷಗಳನ್ನು ಪಡೆಯಲಾಗುತ್ತದೆ

ಉ) 1 ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗದ ವಿದ್ಯಾರ್ತಿಗಳ ಕುಟುಂಬದ ವಾರ್ಷಿಕ ಆದಾಯ ರೂ 1 00 ಲಕ್ಷದ ಮಿತಿಯೊಳಗೆ ಇದ್ದಲ್ಲಿ ಅಂತಹ ವಿದ್ಯಾರ್ದಿಗಳಿಗೆ ಸರ್ಕಾರವು ಆಯಾ ಸಾಲಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳ ಸರ್ಕಾರಿ ಸೀಟಿಗೆ ನಿಗದಿಪಡಿಸಿದ ಶುಲ್ಕ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ವರ್ಗಗಳ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಗನುಗುಣವಾಗಿ ವೆಚ್ಚವನ್ನು ಭರಿಸಲಾಗುತ್ತದೆ

2 ಹಿಂದುಳಿದ ವರ್ಗಗಳ ಪ್ರವರ್ಗ 1ರ ವಿದ್ಯಾರ್ಥಿಗಳಿಗೆ (ಇಂಜಿನಿ ಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ) ಸರ್ಕಾರದ ಮರು ಪಾವತಿ ದರಗಳಿಗೆ ಪ್ರವೇಶ ಶುಲ್ಕಕ್ಕಾಗಿ ವಾರ್ಷಿಕ ರೂ 1,47,400/– ವರಚ್ಚವನ್ನು ತಗಲುತ್ತದೆ

179(125) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್

ವಿಷಯ ಶಾದಿಮಹಲ್ ನಿರ್ಮಾಣ ಮಾನ್ಯ ಕಾರ್ಮಿಕ ಮತ್ತು ಅಲ್ಪ ಕಲ್ಯಾಣ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) 2006-07 ನೇ ಸಾಲಿನಲ್ಲಿ ಡಾ ನಂಜುಂಡಪ್ಪರವರ ವರದಿಯಲ್ಲಿ ಸೂಚಿಸಿದಂತೆ ಹಿಂದುಳಿದ ತಾಲ್ಲೂಕುಗಳಲ್ಲಿ ಶಾದಿಮಹಲ್ ನಿರ್ಮಾಣಕ್ಕೆ ಸರ್ಕಾರಿ ಆದೇಶ ಪ್ರಕಟಿಸುವುದು ನಿಜವೇ?

ಆ) ಹಾಗಿದ್ದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಶಾದಿಮಹಲ್ ನಿರ್ಮಾಣಕ್ಕೆ ಸಹಾಯ ಹಣ ಒದಗಿಸಲಾಗಿದೆ? (ಹಣದ ಮೊತ್ತ ಹಾಗೂ ಸಂಖ್ಯಾ ವಿವಿರ ನೀಡುವುದು?

ಇ) ಗೌರಿಬಿದನೂರು ಹಿಂದುಳಿದ ತಾಲ್ಲೂಕಾಗಿದ್ದು ಶಾದಿಮಹಲ್ ಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿದ್ದರೂ ಸಹ ಹಣ ಬಿಡುಗಡೆ ಮಾಡದಿರಲು ಕಾರಣವೇನು?

ಈ) ಈಗಲಾದರೂ ಹಣ ಬಿಡುಗಡೆ ಮಾಡಿ ಅನುಕೂಲ ಮಾಡಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಇಕ್ಬಾಲ್ ಅನ್ಸಾರಿ

ಅ) ಈ ಸಂಬಂದ ಯಾವುದೇ ಆದೇಶ ಹೊರಡಿಸಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಅರೇಬಿಯನ್ ಅನ್ವರುಲ್ ಬಾಕಿಯಾಸ್ ಕಮಿಟಿ ಗೌರಿಬಿದನೂರು ಇವರ ವತಿಯಿಂದ ನಿರ್ಮಿಸುತ್ತಿರುವ ಶಾದಿಮಹಲ್ ಕಟ್ಟಡದ ಮಂಜೂರಾತಿ ಗೆ ಪ್ರಸ್ತಾವನೆ ಬಂದಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಅನುದಾನ ಲಭ್ಯತೆ ಹಾಗೂ ಮಾರ್ಗಸೂಚಿಗಳನ್ವಯ ಮಂಜೂರಾತಿ ನೀಡಲಾಗುವುದು

181(127) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್

ವಿಷಯ ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ನಿಲಯ ಪ್ರಾರಂಬಿಸು ವುದು

ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಡಾ ನಂಜುಡಪ್ಪನವರ ವರದಿಯ ಪ್ರಕಾರ ಗೌರಿಬಿದನೂರು ತಾಲ್ಲೂಕನ್ನು ಹಿಂದುಳಿದ ತಾಲ್ಲೂಕಾಗಿ ಘೋಷಣೆಯಾಗಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ತೊಂಡೇಬಾವಿ, ಹುದುಗೂರು, ಗ್ರಾಮಗಳಲ್ಲಿ ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಡದಿರಲು ಕಾರಣವೇನು?

ಇ) ಹಾಗಿದ್ದಲ್ಲಿ ಈಗೇನಾದರೂ ಮಂಜೂರು ಮಡಿ ಈ ಭಾಗದ ವಿದ್ಯಾರ್ತಿಗಳಿಗೆ ಅನುಕೂಲ ಮಡಿಕೊಡಲು ಸಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಆರ್ ಜಾರಕಿಹೊಳಿ

ಅ) ಹೌದು

ಆ)&ಇ) 2007-08 ನೇ ಸಾಲಿನಲ್ಲಿ ಆಯುವ್ಯಯುದಲ್ಲಿ ಒದಗಿಸಲಾದ ಅನುದಾನ ಲಭ್ಯತೆಗೆ ಅನುಸಾರವಾಗಿ75 ಪರಿಶಿಷ್ಠ ಜಾತಿಯ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ ತೊಂಡೇಭಾವಿ ಹುದುಗೂರು ಗ್ರಾಮಗಳಲ್ಲಿ ಪರಿಶಿಷ್ಠ ಜಾತಿಯ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಪ್ರಾರಂಬಿಸುವ ಬಗ್ಗೆ ಮುಮದಿನ ವರ್ಷದ ಆಯವ್ಯಯದಲ್ಲಿ ಒದಗಿಸುವ ಅನುದಾನ ಲಭ್ಯತೆಯನುಸಾರ ಪರಿಶೀಲಿಸಲಾಗುವುದು

182(128) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್

ವಿಷಯ ಪರಿಶಿಷ್ಟ ಜಾತಿಯವರಿಗೆ ಜಮೀನು ಖರೀದಿಸಿ ವಿತರಣೆ

ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿಯವರಿಗೆ ಜಮೀನು ಖರೀದಿ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಜಮೀನು ಖರೀದಿ ಮಾಡಿಕೊಡಲಾಗಿದೆ?

ಆ) ರಾಜ್ಯಾದ್ಯಂತ ಹಾಗೂ ಕೋಲಾರ ಜಿಲ್ಲೆ ಮತ್ತು ಗೌರಿಬಿದನೂರು ತಾಲ್ಲೂಕಿನ ಅಂಕಿಅಂಶಗಳ ವಿವರಗಳನ್ನು ಒದಗಿಸುವುದು?

ಶ್ರೀ ಬಾಲಚಂದ್ರ ಆರ್ ಜಾರಕಿಹೊಳಿ

ಅ) ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ್ ಭೂ ಖರರೀದಿ ಯೋಜನೆಯಡಿ 1990-91 ನೇ ಸಾಲಿನಿಂದ 1006-07 ನೇ ಸಾಲಿನವರೆಗೆ ರಾಜ್ಯಾದ್ಯಂತ ಪರಿಶಿಷ್ಟ ಜಾತಿಯ 26449 ಫಲಾನುಭವಿಗಳಿಗೆ ಜಮೀನನ್ನು ಖರೀದಿಸಿ ನೀಡಲಾಗಿದೆ

ಆ) ರಾಜ್ಯಾದ್ಯಂತ ಪರಿಶಿಷ್ಟ ಜಾತಿಯ 26449 ಫಲಾನುಭವಿಗಳಿಗೆ 40347 33 ಎಕರೆ ಖುಷ್ಕಿ ಹಾಗೂ 5983 25 ಎಕರೆ ತರಿ ಜಮೀನು ಖರೀದಿಸಿ ನೀಡಲಾಗಿದ್ದು, ಇದರಲ್ಲಿ ಕೋಲಾರ ಜಿಲ್ಲೆಯಲ್ಲಿ ಇದುವರೆವಿಗೂ 858 ಪರಿಶಿಷ್ಟ ಜಾತಿಯ ಫಲಾನಿಭವಿಗಳಿಗೆ 1311 11 ಎಕರೆ ಖುಷ್ಕಿ ಹಾಗೂ 201 30 ಎಕರೆ ತರಿ ಜಮೀನನ್ನು ಸಹಾಯಧನ ರೂ 194 06 ಲಕ್ಷ ಹಾಗೂ ಸಾಲ ರೂ197 00 ಲಕ್ಷ ವೆಚ್ಚದಲ್ಲಿ ಖರೀದಿಸಿ ನೀಡಲಾಗಿದೆ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿಗೆ ಇದುವರೆವಿಗೂ 45 ಪರಿಶಿಷ್ಠ ಜಾತಿಯ ಫಲಾನುಭವಿಗಳಿಗೆ 76 00 ಎಕರೆ ಖುಷ್ಕಿ ಹಾಗೂ 5 00 ಎಕರೆ ತರಿ ಜಮೀನನ್ನು ಸಹಾಯಧನ ರೂ 8 98 ಲಕ್ಷ ಹಾಗೂ ಸಾಲ ರೂ 8 98 ಲಕ್ಷ ವೆಚ್ಚದಲ್ಲಿ ಖರಿದಿಸಿ ನೀಡಲಾಗಿದೆ

183(129) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್

ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಸ್ನೆಗಳಿಗೆ ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ ಗೋ ಸಂರಕ್ಷಣೆ ಹಾಗೂ ದೇಶೀ ತಳಿಗಳ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಮಾಡಲಾಗಿದೆ? ಹಾಗೂ ಇದಕ್ಕೆ ವಿನಿಯೋಗಿಸಲಾದ ಹಣವೆಷ್ಟು? ವಿವರ ನೀಡುವುದು?

ಶ್ರೀ ರೇವೂನಾಯಕ ಬೆಳಮಗಿ

ಅ) ಕೋಲಾರ ಜಿಲ್ಲೆಗೆ 2006-07 ನೇ ಸಾಲಿನಲ್ಲಿ ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಕಾರ್ಯಕೆಮದಡಿಯಲ್ಲಿ ಒಟ್ಟು 10 00ಲಕ್ಷಗಳ ಸಹಾಯಾನುಧನವಾಗಿ, ಸಕಾರೇತರ ಸಂಸ್ಥೆಗಳು, ಸೇವಾ ಸಂಸ್ಥೆಗಳು ಹಾಗೂ ದತ್ತಿ ಸಂಸ್ಥೆಗಳಿಗೆ ದೇಶೀ ತಳಿ ಅಭಿವೃದ್ಧಿ ಮತ್ತು ಸಂರಕ್ಷಣೆ ಉದ್ದೇಶಕ್ಕಾಗಿ ಮೂಲಭೂತ ಸೌಕರ್ಯಗಳ ವ್ಯವಸ್ಥೆಗಾಗಿ ಬಿಡುಗಡೆ ಮಾಡಲು ಒದಗಿಸ ಲಾಗಿತ್ತು

ಆ) ಕೋಲಾರ ಜಿಲ್ಲೆಯುಲ್ಲಿ ಈ ಯೋಜನೆ ಅನುಷ್ಠಾನ ಗೊಳಿಸಲಾಗಿಲ್ಲ ಜಿಲ್ಲೆಯಲ್ಲಿ 20 ಎಕರೆ ಜಮೀನು ಹೊಮದಿ 100 ಸ್ಥಳೀಯ ರಾಸುಗಳನ್ನು ಹೊಂದಿ ದೇಶೀ ತಳಿ ಅಭಿವೃದ್ಧೀ ಮತ್ತು ಸಂರಕ್ಷಣೆ ಯಲ್ಲಿ ತೊಡಗಿಸಿಕೊಂಡಿರುವ ಅರ್ಹರಾದ ಯಾವುದೇ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ದತ್ತಿ ಸಂಸ್ತೆಗಳು ಲಭ್ಯವಾಗದ ಕಾರಣ ಅನುಷ್ಠಾನ ಗೊಳಿಸಲಾಗಿಲ್ಲ ಆದ್ದರಿಂದ ಯಾವುದೇ ಅನುದಾನ ವಿನಿಯೋಗಿಸಲಾಗಿಲ್ಲ

184(238) ಶ್ರೀ ಸಿದ್ದು ಸಾವದಿ (ಜಮಖಂಡಿ)

ವಿಷಯ ಮಸೀದಿಗಳ ಜೀರ್ಣೋದ್ಧಾರ

ಮಾನ್ಯ ಮುಖ್ಯಮಂತ್ರಿಗಳಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮಸೀದಿಗಳ ಜೀರ್ಣೋದ್ಧಾರ ಮತ್ತು ಹಜ್ ಯಾತ್ರಿಗಳಿಗಾಗಿ ಹಾಗೂ ವಕ್ಫ್ ಆಸ್ತಿಗಳ ಅಭಿವೃದ್ಧಿಗಾಗಿ 2004 ನೇ ಏಪ್ರಿಲ್‌ನಿಂದ ಇಲಾಖೆಯು ಖರ್ಚು ಮಾಡಿದ ಒಟ್ಟು ಅನುದಾನವೆಷ್ಟು? ತಾಲ್ಲೂಕುವಾರು ವಿವರ ಒದಗಿಸವುದು

ಆ) ಜಮಖಂಡಿ ತಾಲ್ಲೂಕಿನಲ್ಲಿ ಅನೇಕ ಪುರಾತನ ಮಸೀದಿಗಳಿದ್ದು ಈವರೆವಿಗೂ ಜೋರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳದಿರಲು ಕಾರಣವೇನು?

ಇ) ಜಮಖಂಡಿ ರಬಕವಿ ಮತ್ತು ತೇರದಾಳ ನಗರಗಳಲ್ಲಿ ಪುರಾತನ ಮಸೀದಿಗಳು ಹಾಳಾಗುತ್ತಿದ್ದು ಅವುಗಳ ಜೀರ್ಣೋದ್ದಾರ ಕಾರ್ಯವನ್ನು ಎಂದಿನಿಂದ ಕೈಗೊಳ್ಳಲಾಗುವುದು?

ಶ್ರೀ ಕುಮಾರಸ್ವಾಮಿ

ಮಸೀದಿಗಳ ಜೀರ್ಣೋದ್ದಾರ ಮತ್ತು ವಕ್ಫ್ ಆಸ್ತಿಗಳ ಅಭಿವೃದ್ಧಿಗಾಗಿ 2004 ನೇ ಏಪ್ರಿಲ್‌ನಿಂದ 06-07 ರವರೆಗೆ ಈ ಕೆಳಕಂಡಂತೆ ಒಟ್ಟಾರೆ ಅನುದಾನ ಬಿಡುಗಡೆ ಮಾಡಲಾಗಿದೆ

2004-05	**2005-06**	**2006-07**
3 00 ಕೋಟಿ	2,06,20,000	5,74,60,000

ತಾಲ್ಲೂಕು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ ಹಜ್ ಯಾತ್ರಿಗಳಿಗಾಗಿ ಇಲಾಖಾ ವತಿಯಿಂದ ಯಾವುದೇ ಅನುದಾನವನ್ನು ನೀಡಲಾಗುತ್ತಿಲ್ಲ

ಆ) ಜಮಖಂಡಿ ತಾಲ್ಲೂಕಿನ ಅನೇಕ ಪುರಾತನ ಮಸೀದಿಗಳಿಗೆ ಸಂಬಂದಿಸಿದಂತೆ ಮುತವಲ್ಲಿಗಳು ಅಧ್ಯಕ್ಷರು ಕಾರ್ಯದರ್ಶಿಗಳು ಯಾವುದೇ ರೀತಿಯ ಪ್ರಸ್ತಾವನೆಗಳನ್ನು ಜೀರ್ಣೋದ್ಧಾರ ಕಾರ್ಯವನನು ಕೈಗೊಳ್ಳಲು ವಕ್ಫ್ ಮಂಡಳಿಗೆ ಸಲ್ಲಿಸದೇ ಇರುವುದರಿಂದ ಜೋಣೋದ್ಧಾರ ಕಾರ್ಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ ಈ ವಿಷಯದಲ್ಲಿ ಅರ್ಜಿಗಳು ಪ್ರಸ್ತಾವನೆಗಳು ಬಂದಲ್ಲಿ ಅನುದಾನ ಲಭ್ಯತೆಯ ಆಧಾರದ ಮೇಲೆ ಕ್ರಮ ಜರುಗಿಸಲಾಗುವುದು

ಇ) ಜಮಖಂಡಿ, ರಬಕವಿ ಬನಹಟ್ಟಿ ಮತ್ತು ತೇರದಾಳ ನಗರಗಳಲ್ಲಿರುವ ಪುರಾತನ ಮಸೀದಿಗಳ ಜೋಣೋದ್ಧಾರ ಕಾರ್ಯಕ್ಕೆ ಸಂಭಂದಿಸಿದಂತೆ ಆಯಾ ಮಸೀದಿಗಳ ಮುತವಲ್ಲಿಗಳು ಅಧ್ಯಕ್ಷರುಗಳು ಕಾರ್ಯದರ್ಶಿಗಳು ರಾಜ್ಯ ವಕ್ಫ್ ಮಂಡಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಸಹಾಯಾನುಧನವನ್ನು ಅನುದಾನದ ಲಭ್ಯತೆಯ ಆಧಾರದ ಮೇಲೆ ಮಂಜೂರು ಮಾಡಲು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

STATEMENT SHOWING THE DETAILS OF GRAND IN AID SANCTIONED DISTRIC WISE AND TALUK WISE TO WAKF INSTITUTION

Sl No	Sl No	name of the Dist and Taluk	2004-05		2005-06		2006-07		remarks
1		Bangalore(U)							
		Bangalore	24	560000-00	30	97000 00	18	3100000 00	
II		Bangalore (R)							
	1	Magadı Tq	17	370000 00	49	3270000 00	11	650000 00	
	2	Kanakapura Tq	10	200000 00	04	80000 00	01	200000 00	
	3	Devanahallı	13	260000 00	01	20000 00	-	-	
	4	Channapatna	09	180000 00	05	180000 00	02	500000 00	
	5	Ramanagaram	17	370000 00	06	140000 00	05	1540000 00	
	6	Hoskote	11	220000 00	03	60000 00	-	-	
	7	Nelmangala	05	10000 00	08	160000 00	-	-	
	8	Doddballapur	06	120000 00	01	20000 00	-	-	
	9	Anekal	02	40000 00					
			90	**1860000 00**	**77**	**3930000 00**			

III	KOLAR DIST						
1	Srınıvasapura	18	360000 00	02	45000 00	-	-
2	Gowrıbıdnur	13	260000 00	01	20000 00	02	300000 00
3	Chıkkaballapur	09	180000 00	09	180000 00	-	-
4	Chıntamanı	06	120000 00	07	140000 00	-	-
5	Bagepallı	08	160000 00	-	-	-	-
6	Bangarpet	03	60000 00	03	60000 00	-	-
7	Mulbagal	03	60000 00	05	100000 00	35	2425000 00
8	Malur	01	200000 00	06	125000 00	01	300000 00
9	Gudıbanda	01	20000 00	-	-	-	-
10	Sıddlaghatta	-	-	-	-	-	-
11	Kolar	20	53000 00	16	335000 00	-	-
		93	1950000 00	40	825000 00	38	3025000 00

IV		Tumkur District						
	1	Tumkur	25	520000 00	13	700000 00	7	610000 00
	2	Koratagere	06	120000 00	14	860000 00	14	700000 00
	3	Madhugiri	05	100000 00	05	200000 00	1	100000 00
	4	Pavagada	-	00	06	20000 00	-	00
	5	Sira	-	-	06	20000 00	-	00
	6	Kunigal	12	240000 00	10	540000 00	04	550000 00
	7	Tiptur	05	100000 00	02	40000 00	07	1400000 00
	8	C N Halli	-	00	-	-	02	600000 00
	9	Turuvekere	11	220000 00	-	-	-	00
	10	Gubbi	05	100000 00	04	80000 00	01	100000 00
		Total	**70**	**1400000 00**	**54**	**252000 00**	**36**	**4060000 00**
V		Shimoga						
	1	Shimoga	23	480000 00	08	160000 00	-	00
	2.	Bhadravathi	11	240000 00	08	160000 00	-	00

	3	Thırthahallı	07	140000 00	06	120000 00	-	00
	4	Hosanagar	01	20000 00	05	100000 00	-	00
	5	Sorab	05	100000 00	03	60000 00	-	00
	6	Sagar	05	100000 00	05	100000 00	-	00
	7	Shıkarıpura	11	200000 00	05	100000 00	-	00
		Total	63	1280000 00	40	800000 00	04	450000 00
VI		Chıtradurga						
	1	Chıtradurga	08	190000 00	10	200000 00	03	800000 00
	2	Challekote	08	160000 00	09	180000 00	-	-
	3	Hırıyur	11	220000 00	01	20000 00	-	-
	4	Molakalmuru	06	120000 00	01	20000 00	-	-
	5	Holalkere	05	100000 00	06	120000 00	-	-
	6	Hosadurga	05	100000 00	01	20000 00	-	-
		Total	**43**	**890000 00**	**28**	**560000 00**	**03**	**800000 00**

VII		Davengere						
	1	Davengere	33	640000 00	03	60000 00	05	300000 00
	2	Hanhar	10	200000 00	06	120000 00	-	00
	3	Harapanhallı	17	340000 00	01	20000 00	-	00
	4	Jagalur	11	220000 00	01	20000 00	-	00
	5	Honnallı	09	180000 00	02	40000 00	02	300000 00
	6	Channagırı	13	280000 00	18	360000 00	-	00
		Total	**93**	**1860000 00**	**31**	**620000 00**	**7**	**600000 00**
VIII		**Mysore**						
	1	Mysore	26	590000 00	12	170000 00	08	400000 00
	2.	Hunsur	13	260000 00	01	20000 00	-	00
	3	Perıyapatna	16	320000 00	05	100000 00	04	400000 00
	4	Nangangud	03	60000 00		00	-	00
	5	K R Nagar	06	120000 00		00	-	00
	6	H D Kote	01	20000 00	01	20000 00	-	00
	7	T Narasıpura	01	20000 00	03	60000 00	-	00
		Total	**66**	**1390000 00**	**22**	**370000 00**	**12**	**800000 00**

IX		**Chamarajanagar**						
	1	Chamarajanagar	13	260000 00	13	320000 00	08	890000 00
	2	Kollegal	06	120000 00	04	80000 00	05	800000 00
	3	Yelendur	03	60000 00	01	20000 00	02	100000 00
	4	Gundlupet	03	60000 00	05	130000 00	-	00
		Total	**25**	**500000 00**	**23**	**550000 00**	**15**	**1790000 00**
X		**Kodagu**						
	1	Madikeri	13	260000 00	22	440000 00	-	00
	2.	Somwarpet	06	120000 00	08	160000 00	01	100000 00
	3	Virajpet	18	360000 00	07	140000 00	-	00
		Total	**37**	**740000 00**	**37**	**740000 00**	**01**	**100000 00**
XI		**Mandya**						
	1	Mandya	12	30000 00	05	940000 00	02	400000 00
	2	Malawalli	04	80000 00	0	00	0	00
	3	Madur	02	100000 00	01	20000 00	0	00

	4	S R Patna	05	100000 00	03	60000 00	0	00
	5	K R.Pet	01	20000 00	03	60000 00	0	00
	6	Nagamangala	02	40000 00	0	00	02	1200000 00
	7	Pandavpur	02	40000 00	0	00	0	00
		Total	**28**	**680000 00**	**12**	**234000 00**	**04**	**1600000 00**
XII		**Hassan**						
	1	Hassan	01	20000 00	0	00	09	850000 00
	2	Arsıkere	04	80000 00	01	20000 00	0	00
	3	Sakleshpura	03	600000 00	04	80000 00	0	00
	4	C R Patna	02	40000 00	01	20000 00	02	250000 00
	5	Bellur	03	600000 00	01	200000 00	02	450000 00
	6	Holenarasıpura	03	600000 00	01	20000 00	0	00
	7	Arakalgudu	05	100000 00	05	100000 00	0	00
		Total	**21**	**420000 00**	**13**	**260000 00**	**13**	**1550000 00**

XII		**Chıckmagalur**						
	1	Chıckkamagalur	25	500000 00	02	40000 00	25	1150000 00
	2	Kadur	12	240000 00	03	60000 00	07	815000 00
	3	Tarukere	07	140000 00	08	170000 00	05	555000 00
	4	N R Pura	01	20000 00	0	00	0	00
	5	Madhugırı	12	240000 00	0	00	01	100000 00
	6	Koppa	01	20000 00	2	00	0	00
		Total	**58**	**420000 00**	**13**	**2700000 00**	**38**	**2620000 00**
XIV		**Dakshına Kannada**						
	1	Mangalore	30	605000 00	12	240000 00	03	9000000 00
	2	Puttur	07	140000 00	02	40000 00	0	00
	3	Sullıa	08	210000 00	04	80000 00	0	00
	4	Bantwal	06	120000 00	10	200000 00	0	00
	5	Belthangady	03	60000 00	05	100000 00	0	00
		Total	**54**	**1135000 00**	**33**	**660000 00**	**06**	**1300000 00**

XV		**Udupi**				
	1	Udupi	01	100000 00	04	80000 00
	2	Kundapur	06	130000 00	05	100000 00
	3	Karkala	02	50000 00	02	40000 00
		Total	**09**	**280000 00**	**11**	**220000 00**

BELGAUM-DIVISION

Sl No	Sl No	name of the Dist and Taluk	No of Wakf	Amount	No of Wakf	Amount	No of Wakf	Amount
1		Bagalkot District						
	1	Bagalkot	2	40000 00	2	40000 00		
	2	Hungund	2	40000 00	8	160000 00		
	3	Badami	7	140000 00	5	100000 00	1	100000 00
	4	Bilgi	2	50000 00		0 00		
	5	Jamkhandi	1	20000 00				
	6	Mudhol	1	20000 00	2	40000 00		
	7	B Bagewadi	5	100000 00	3	60000 00		
		Total	**20**	**410000 00**	**20**	**400000 00**	**1**	**100000 00**
2		Belgaum District						
	1	Belguam	6	120000 00	2	40000 00		
	2	Hukkeri	9	180000 00	9	180000 00	1	200000 00
	3	Gokak	10	200000 00	3	60000 00		
	4	Ramdurga	2	40000 00	2	40000 00		
	5	Soundatti	2	40000 00	3	60000 00	1	220000 00
	6	Chikkodi	12	240000 00	5	100000 00	8	800000 00

	7	Athanı	2	40000 00	0	0 00	0	
	8	Baılhongal	2	40000 00	3	60000 00	0	
		Total	**47**	**940000 00**	**33**	**660000 00**	**10**	**1220000 00**
III		**Dharwad Dıstrıct**						
	1	Dharwad	9	200000 00	4	80000 00	9	500000 00
	2	Kundgol	4	80000 00	6	120000 00		
	3	Navalgund	4	80000 00	4	150000 00		
	4	Hublı	8	160000 00	12	210000 00		
	5	Hangal	1	20000 00	0	0 00		
		Total	**26**	**540000 00**	**26**	**560000 00**	**9**	**500000 00**
IV		**Bıjapur Dıstrıct**						
	1	Bıjapur	12	350000 00	43	870000 00		
	2	Muddebıhal	3	60000 00	5	135000 00		
	3	B Bagewadı	9	280000 00	13	295000 00		
	4	Indı	8	170000 00	5	135000 00		
	5	Sındgı	2	40000 00	13	295000 00		
	6	Tıkota	1	20000 00	1	20000 00		
		Total	**35**	**920000 00**	**80**	**1750000 00**		

V		**Haveri District**						
	1	Haveri	19	380000 00	12	480000 00	20	3600000 00
	2	Shiggaon	8	160000 00	1	20000 00	12	150000 00
	3	Ranibennur	4	110000 00	3	60000 00	3	200000 00
	4	Hangal	5	100000 00	7	140000 00	30	1250000 00
	5	Hirekerur	7	140000 00	7	300000 00	8	800000 00
	6	Byadagi	3	60000 00	1	20000 00	0	0 00
	7	Savanur	0	0 00	4	80000 00	0	0 00
		Total	**46**	**950000 00**	**35**	**1100000 00**	**79**	**6000000 00**
VI		**Gadag District**						
	1	Gadag	10	200000 00	13	260000 00		
	2	Shirhatti	6	120000 00	7	140000 00		
	3	Nargaund	2	40000 00	3	60000 00		
	4	Ron	0	20000 00	8	160000 00		
	5	Mundargi	1	0 00	3	60000 00		
		Total	**19**	**380000 00**	**34**	**680000 00**		
VII		**Karwar District**						
	1	Karwar	0	0 00	5	100000 00	8	330000 00
	2	Mungund	3	60000 00	0	0 00	12	1750000 00
	3	Sirsi	3	60000 00	0	0 00	0	0 00

4	Sıddapur	14	280000 00	0	0 00	0	0 00
5	Dandellı	1	20000 00	9	180000 00	2	80000 00
6	Ankola	0	0 00	1	20000 00	0	0 00
7	Halıyal	0	0 00	2	40000 00	15	1150000 00
8	Yellapur	0	0 00	0	0 00	2	100000 00
	Total	**21**	**420000 00**	**17**	**340000 00**	**39**	**3410000 00**
			Gulbarga Dıvısıon				
	Bıdar Dıstrıct						
1	Bıdar	53	1200000 00	36	600000 00	2	450000 00
2	Basavakalyan	14	330000 00	8	790000 00	4	575000 00
3	Humnabad	45	1170000 00	44	1740000 00	6	500000 00
4	Bhalkı	8	165000 00	10	310000 00	4	50000 00
5	Aurad	7	140000 00	8	160000 00	0	**0 00**
6	Chıtguppa	16	320000 00	1	50000 00	0	0 00
	Total	143	3325000 00	107	3650000 00	16	1575000 00
	Koppal Dıstrıct						
1	Koppal	13	260000 00	20	400000 00	15	1870000 00
2	Gangavathı	23	460000 00	13	240000 00	19	1950000 00
3	Yelburga	19	380000 00	2	40000 00	18	4500000 00
4	Kushtagı	0	0 00	1	20000 00	0	0 00

	Gulbarga Dıstrıct						
1	Gulbarga	34	700000 00	15	415000 00		
2	Afzalpur	13	260000 00	5	100000 0		
3	Shorapur	8	160000 00	2	40000 00		
4	Jevergı	13	3000000 00	12	320000 00		
5	Aland	22	440000 00	3	60000 00		
6	Yadgır	13	260000 00	9	180000 00		
7	Shalpur	11	220000 00	7	140000 00		
8	Chıncholı	3	60000 00	8	200000 00		
9	Sedum	0	0 00	3	70000 00		
10	Chıtapur	0	0 00	3	60000 00		
	Total	**117**	**2400000 00**	**67**	**1585000 00**		
Belları Dıstrıct							
1	Bellary	15	300000 00	0	0 00	9	2300000 00
2	Hadagalı	11	220000 00	4	160000 00	2	800000 00
3	Sırguppa	3	850000 00	3	60000 00	5	350000 00
4	Kudlıgı	6	120000 00	2	40000 00	0	0 00
5	Hospet	21	485000 00	6	240000 00	1	100000 00
6	Sundup	1	20000 00	8	280000 00	17	450000 00
7	H B Hallı	3	60000 00	7	20000 00	1	2600000 00
	Total	**60**	**1290000 00**	**30**	**800000 00**	**35**	**6600000 00**

	Raıchur Dıstrıct						
1	Raıchur	14	280000 00	8	160000 00		
2	Sındur	21	420000 00	4	80000 00		
3	Devadurga	7	140000 00	2	40000 00		
4	Lıngasgur	18	360000 00	6	120000 00		
5	Manavaı	1	20000 00	13	260000 00		
6	Mudgal	0	0 00	3	60000 00		
	Total	**61**	**1220000 00**	**36**	**720000 00**		
	Grand Total	**1431**	**30000000 00**	**983**	**28810000 00**	**445**	**48260000 00**

185(360) ಶ್ರೀ ಸಿದ್ದು ಸಾವದಿ

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ)ಜಮಖಂಡಿ ಸಾರ್ವಜನಿಕ ಆಸ್ಪತ್ರೆ ಬನಹಳ್ಳಿಯ ಸಮುದಾಯ ಆಸ್ಪತ್ರೆಗಳು ಹಾಗೂ ತಾಲೂಕಿನಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಯ ಕೊರತೆ ಇದ್ದಲ್ಲಿ ಈ ಕೊರತೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದೇ (ಸಂಪೂರ್ಣ ವಿವರ ಒದಗಿಸಿರಿ)

ಆ)ಈ ಎಲ್ಲಾ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರು ಮತ್ತು ಇನ್ನುಳಿದ ಸಿಬ್ಬಂದಿಗಳ ಸಂಖ್ಯೆ ಎಷ್ಟು(ಪೂರ್ಣ ವಿವರವಾದ ಮಾಹಿತಿ ಒದಗಿಸುವುದು)

ಇ)1-4-2006 ರಿಂದ ಈವರೆಗೆ ರಾಜ್ಯದಲ್ಲಿರುವ ಆಸ್ಪತ್ರೆಗಳ ದುರಸ್ತಿ ಮತ್ತು ಮೇಲ್ದರ್ಜೆಗೆ ಏರಿಸಲು ಎಷ್ಟು ಅನುದಾನವನ್ನು ಮಂಜೂರು ಮಾಡಲಾಗಿದೆ (ಪೂರ್ತಿ ಜಿಲ್ಲಾವಾರು ವರದಿ ಒದಗಿಸುವುದು)

ಈ)ಜಮಖಂಡಿ ತಾಲೂಕಿಗೆ ಒದಗಿಸಲಾದ ಅನುದಾನ ಎಷ್ಟು?

ಉ)ಜಮಖಂಡಿ, ಬನಹಟ್ಟಿ ಮತ್ತು ತೇರದಾಳ ನಗರಗಳಲ್ಲಿರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್ ಅಶೋಕ್

ಅ)ಜಮಖಂಡಿ ಸಾರ್ವಜನಿಕ ಆಸ್ಪತ್ರೆ ಬನಹಟ್ಟಿಯ ಸಮುದಾಯ ಆಸ್ಪತ್ರೆಗಳು ಹಾಗೂ ತಾಲೂಕಿನಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಯ ಕೊರತೆ ಇರುತ್ತದೆ ಈ ಕೊರತೆ ನೀಗಿಸಲು ವಿಶೇಷ ನೇರ ನೇಮಕಾತಿಯಿಂದ 500 ವೈದ್ಯಾದಿಕಾರಿಗಳ ಹುದ್ದೆಗಳನ್ನು

ನೇಮಕ ಮಾಡಲು ಅನುಮತಿ ನೀಡಲಾಗಿದ್ದು ಅದರಲ್ಲಿ ಈಗಾಗಲೇ 250 ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದೆ ಉಳಿದ 250 ವೈದ್ಯಾಧಿಕಾರಿಗಳ ಹಿದ್ದೆಯ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ ಹಾಗೂ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಹಾಗೂ 2807 ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ನೇಮಕಾತಿ ಕಾರ್ಯ ಅಂತಿಮ ಹಂತದಲ್ಲಿದ್ದು ನೇಮಕಾತಿ ಕಾರ್ಯ ಮುಗಿದ ಕೂಡಲೇ ಕೊರತೆ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು

ಆ)ಈ ಎಲ್ಲಾ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರು ಮತ್ತು ಇನ್ನುಳಿದ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ

ಹುದ್ದೆ	ಮಂಜೂರು	ಖಾಲಿ
ವೈದ್ಯರು	28	8
ಸಿಬ್ಬಂದಿ	268	74

ಇ)1-4-2006 ರಿಂದ ಈವರೆಗೆ ರಾಜ್ಯದಲ್ಲಿರುವ ಆಸ್ಪತ್ರೆಗಳ ದುರಸ್ತಿ ಮತ್ತು ಮೇಲ್ದರ್ಜೆಗೆ ಏರಿಸಲು ರೂ 35,746 0 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಿಂದ 7ರಲ್ಲಿ ನೀಡಿದೆ)

ಈ) ಜಮಖಂಡಿ ತಾಲೂಕಿಗೆ ಒದಗಿಸಲಾದ ಅನುದಾನ ಈ ಕೆಳಕಂಡಂತಿದೆ

ಲೆಕ್ಕ ಶೀರ್ಷಿಕೆ	06–07ನೇ ಸಾಲಿಗೆ ಒದಗಿಸಿದ ಅನುದಾನ ಲಕ್ಷ ರೂ ಗಳಲ್ಲಿ
2210–03–101–0–73 ಗ್ರಾ.ಆ ಸೇವೆಗಳು, ಆರೋಗ್ಯ ಇಲಾಖೆಯ ಕಟ್ಟಡಗಳ ನಿರ್ವಹಣೆ	5 68
4210–02–103–1–03 ಗ್ರಾ. ಆ ಸೇವೆಗಳು ಆಕುಕ ಕಛೇರಿ ಕಟ್ಟಡ	–

ಉ)ಜಮಖಂಡಿ, ಬನಹಟ್ಟಿ ಮತ್ತು ತೇರದಾಳ ನಗರಗಳಲ್ಲಿರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಆಯವ್ಯಯ ಲಭ್ಯತೆ ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಲಾಗುವುದು

ಅನುಬಂಧ–1

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಬಾಗಲಕೋಟೆ,

ಜಮಖಂಡಿ ತಾಲೂಕು ಆರೋಗ್ಯ ಸಂಸ್ಥೆಗಳ ಸಿಬ್ಬಂದಿ ಮಾಹಿತಿ (ಸಾ ಆಸ್ಪತ್ರೆ ಜಮಖಂಡಿ ಹೊರತು ಪಡಿಸಿ)

ಕ್ರ.ಸಂ	ಹುದ್ದೆಯ ಹೆಸರು	ಮಂಜೂರಾತಿ	ಕಾರ್ಯನರತ	ಖಾಲಿ	ಷರಾ
1	THO	1	1	0	
2	MO	14	13	1	
3	B.HED	3	3	0	
4	Driver	6	6	0	
5	FDA	5	4	1	
6	Jr H A (F)	45	37	8	
7	Jr H A (M)	43	15	28	
8	Jr Lab Tec	8	7	1	

9	Jr N M S	2	2	0
10	Sr H A (F)	8	8	0
11	Sr H A (M)	8	4	4
12	Opp Asst	3	2	1
13	P M W	2	1	1
14	Pharmasist	7	7	0
15	S D A	9	9	0
16	Sr N M S	1	0	1
17	Sr Pharmasist	1	0	1
18	Staff nurse	5	3	2
19	X-Ray-Tec	1	1	0
20	Group "D"	24	22	2
	Total	**196**	**145**	**51**

ನಮೂನೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಬಾಗಲಕೋಟೆ,

ಉಪ ವಿಭಾಗ ಮಟ್ಟದ ಆಸ್ಪತ್ರೆ, ಜಮಖಂಡಿ

ಸಿಬ್ಬಂದಿ ಮಾಹಿತಿ

ಕ್ರ ಸಂ	ಹುದ್ದೆಯ ಹೆಸರು	ಮಂಜೂರಾತಿ	ಕಾರ್ಯನಿರತ	ಖಾಲಿ	ಷರಾ
1	ಹಿರಿಯ ವೈದ್ಯಾಧಿಕಾರಿ/ತಜ್ಞ	12	6	6	
2	ಸಹಾಯಕ ದಂತ ಚಿಕಿತ್ಸರು	1	0	1	
3	ಸಹಾಯಕ ಆಡಳಿತಾಧಿಕಾರಿ	1	0	1	
4	ಕಛೇರಿ ಅಧೀಕ್ಷಕ	1	1	0	
5	ಪ್ರಥಮ ದರ್ಜೆ ಸಹಾಯಕ	3	3	0	
6	ದ್ವಿತೀಯ ದರ್ಜೆ ಸಹಾಯಕ	4	2	2	
7	ಟೈಪಿಸ್ಟ್ ಕಂ ಕ್ಲರ್ಕ	1	0	1	
8	ಹಿರಿಯ ಫಾರ್ಮಾಸಿಸ್ಟ	2	0	2	
9	ಕಿರಿಯ ಫಾರ್ಮಾಸಿಸ್ಟ	2	1	1	
10	ಹಿರಿಯ ಪ್ರಯೋಗಾಲಯ ತಂತ್ರಜ್ಞ	2	2	0	
11	ಕಿರಿಯ ಪ್ರಯೋಗಾಲಯ ತಂತ್ರಜ್ಞ	3	2	1	
12	ಶುಶ್ರೂಷಕ ಅಧೀಕ್ಷಕರು ದರ್ಜೆ-1	1	0	1	
13	ಶುಶ್ರೂಷಕ ಅಧೀಕ್ಷಕರು ದರ್ಜೆ-11	1	0	1	
14	ಹಿರಿಯ ಶುಶ್ರೂಷಕರು	1	0	1	
15	ಕಿರಿಯ ಶುಶ್ರೂಷಕರು	20	18	2	
16	ಕ್ಷ-ಕಿರಣ ತಂತ್ರಜ್ಞರು	3	2	1	
17	ನೇತ್ರ ಸಹಾಯಕರು	1	0	1	
18	ಫಿಸಿಯೋಥೆರಪಿಸ್ಟ್	1	0	1	

19	ಕಿರಿಯ ಆರೋಗ್ಯ ಸಹಾಯಕರು(ಮ)	2	2	0
20	ಹಿರಿಯ ವೈದ್ಯೇತರ ಮೇಲ್ವಿಚಾರಕರು	1	1	0
21	ವಾಹನ ಚಾಲಕರು	2	0	2
22	ಡ ವರ್ಗ ನೌಕರು	33	29	4
23	ಕ್ಷ-ಕಿರಣ ಸಹಾಯಕ	1	0	1
24	ಪ್ರಯೋಗಶಾಲಾ ಸಹಾಯಕ	1	0	1
	ಒಟ್ಟು	**100**	**69**	**31**

ಅನುಬಂಧ-2

2006-7ನೆಯ ಸಾಲಿನಲ್ಲಿ ವಿವಿಧ ಜಿಲ್ಲೆಯ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು 4210-01-110-1-01ಅಡಿಯಲ್ಲಿ ಒದಗಿಸಿರುವ ರೂ 67 50 ಕೋಟಿಗಳ ಅನುದಾನಕ್ಕೆ ಅನುಮೋದಿಸಿರುವ ಜಿಲ್ಲಾವಾರು ಕಾಮಗಾರಿಗಳ ವಿವರ

ಆಸ್ಪತ್ರೆಗಳು	ಅಂದಾಜು ವೆಚ್ಚ
ಜಿಲ್ಲಾ ಆಸ್ಪತ್ರೆ, ಗುಲ್ಬರ್ಗ,ಮೇಲ್ದರ್ಜಯ ಕಾಮಗಾರಿಗಳು	24 00
ಜಿಲ್ಲಾ ಆಸ್ಪತ್ರೆ, ಹಾಸನ, ಮೇಲ್ದರ್ಜೆಯ ಕಾಮಗಾರಿಗಳು	43 50
ಜಿಲ್ಲಾ ಆಸ್ಪತ್ರೆ, ಚಾಮರಾಜನಗರ, ಮೇಲ್ದರ್ಜೆಯ ಕಾಮಗಾರಿಗಳು	4 95
52 ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಮೇಲ್ದರ್ಜೆಯ ಕಾಮಗಾರಿಗಳ	163 00
43 ಸಮುದಾಯ ಆರೋಗ್ಯ ಕೇಂದ್ರಗಳ ಕಾಮಗಾರಿಗಳು	
ತಾಲ್ಲೂಕು ಮಟ್ಟದ ಆಸ್ಪತ್ರೆ, ಶಿಕಾರಿಪುರ ಮೇಲ್ದರ್ಜೆಯ ಕಾಮಗಾರಿಗಳು	4 95
49 ಹಳೇ ಸಮುದಾಯ ಆರೋಗ್ಯ ಕೇಂದ್ರಗಳ ಕಾಮಗಾರಿಗಳು	60 00
ಮೇಲ್ದರ್ಜೆಯ ತಾಲ್ಲೂಕು ಮಟ್ಟದ ಆಸ್ಪತ್ರೆ, ಹೊಳೆ ನರಸೀಪುರ	5 00
ಒಟ್ಟು	305 40

ಅನುಬಂಧ–3

2006–07 ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2210–01–110–1–21 ಯೋಜನೇತರ ಅಡಿಯಲ್ಲಿ ರಾಜ್ಯ ವಲಯದ 0ಆಸ್ಪತ್ರೆಗಳು ದುರಸ್ತಿ ಕಾಮಗಾರಿಗಳು

(ರೂ ಲಕ್ಷಗಳಲ್ಲಿ)

1	ಬೆಂಗಳೂರು ನಗರ ಜಿಲ್ಲಾ ಆಸ್ಪತ್ರೆಗಳು	191 48
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	23 47
3	ಕೋಲಾರ	20 67
4	ತುಮಕೂರು	24 78
5	ಚಿತ್ರದುರ್ಗ	52 32
6	ಮೈಸೂರು	33 00
7	ಚಾಮರಾಜನಗರ	24 92
8	ಮಂಡ್ಯ	11 19
9	ಚಿಕ್ಕಮಗಳೂರು	3 00
10	ಉಡುಪಿ	20 82
11	ಮಡಿಕೇರಿ	2 44
12	ಹಾಸನ	23 42
13	ಬಿಜಾಪುರ	32 88
14	ಬಾಗಲಕೋಟೆ	12 30
15	ಹುಬ್ಬಳ್ಳಿ	13 84
16	ಧಾರವಾಡ	9 07

17	ಗದಗ	7 59
18	ಹಾವೇರಿ	14 81
19	ಗುಲ್ಬರ್ಗ	3 34
20	ಬೀದರ್	6 97
21	ರಾಯಚೂರು	24 92
22	ಕೊಪ್ಪಳ	10 34
	ಒಟ್ಟು	**567 57**

ಅನುಬಂಧ–4

2006–07ನೆಯ ಕೇಂದ್ರದ 12ನೇ ಹಣಕಾಸು ಯೋಜನೆಯ ಅಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ

ತುರ್ತು ನಗಾ ಘಟಕಗಳನ್ನು ನಿರ್ಮಿಸುವ ಜಿಲ್ಲಾವಾರು ಅಂದಾಜು ವಿವರಗಳು

(ಲೆಕ್ಕ ಶೀರ್ಷಿಕೆ 2210–01–800–0–06)

1	ಬೆಂಗಳೂರು ನಗರ ಜಿಲ್ಲಾ ಆಸ್ಪತ್ರೆಗಳು	50 00
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	175 00
3	ತುಮಕೂರು	275 00
4	ಚಿತ್ರದುರ್ಗ	300 00
5	ಶಿವಮೊಗ್ಗ	100 00
6	ಕೋಲಾರ	250 00

7	ದಾವಣಗೆರೆ	198 50
8	ಮೈಸೂರು	150 00
9	ಚಾಮರಾಜನಗರ	50 00
10	ಮಂಡ್ಯ	150 00
11	ಚಿಕ್ಕಮಗಳೂರು	125 00
12	ಹಾಸನ	125 00
13	ದಕ್ಷಿಣ ಕನ್ನಡ	150 00
14	ಉಡುಪಿ	25 00
15	ಬೆಳಗಾವಿ	400 00
16	ಬಿಜಾಪುರ	125 00
17	ಬಾಗಲಕೋಟೆ	25 00
18	ಧಾರವಾಡ	50 00
19	ಗದಗ	25 00
20	ಹಾವೇರಿ	125 00
21	ಗುಲ್ಬರ್ಗ	400 00
22	ಬೀದರ್	75 00
23	ರಾಯಚೂರು	191 50
24	ಕೊಪ್ಪಳ	150 00
25	ಬಳ್ಳಾರಿ	75 00
	ಒಟ್ಟು	**3765 00**

ಅನುಬಂಧ-5

ಲೆಕ್ಕ ಶೀರ್ಷಿಕೆ 2210-01-800-0-52 ಹಾಗೂ 2210-03-103-0-73ರ ಅಡಿಯಲ್ಲಿ ಜಿಲ್ಲಾ ಪಂಚಾಯತ್

ವ್ಯಾಪ್ತಿ ಒಳಪಡುವ ಜಿಲ್ಲಾವಾರು ದುರಸ್ತಿ ಕಾಮಗಾರಿಗಳ ವಿವರಗಳು

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ	2210-03-800-0-52	2210-03-103-0-73
1	ಬೆಂಗಳೂರು ನಗರ	**4 00**	**1 75**
2	ಬೆಂಗಳೂರು(ಗ್ರಾ)	–	0
3	ಚಿತ್ರದುರ್ಗ	1 60	5 54
4	ಕೋಲಾರ	5 60	4 49
5	ದಾವಣಗೆರೆ	1 50	0
6	ತುಮಕೂರು	8 12	10 00
7	ಶಿವಮೊಗ್ಗ	–	1 08
8	ಮೈಸೂರು	2 50	6 35
9	ಚಿಕ್ಕಮಗಳೂರು	2 50	2 50
10	ಚಾಮರಾಜನಗರ	2 00	1 58
11	ಮಂಡ್ಯ	2 00	20 00
12	ಮಡಿಕೇರಿ	0	10 00

13	ಹಾಸನ	2 00	20 00
14	ದಕ್ಷಿಣ ಕನ್ನಡ	1 30	10 00
15	ಉಡುಪಿ	1 00	0 10
16	ಬೆಳಗಾವಿ	3 02	33 00
17	ಬಿಜಾಪುರ	1 50	5 26
18	ಧಾರವಾಡ	3 00	0
19	ಹಾವೇರಿ	1 60	38 49
20	ಬಾಗಲಕೋಟೆ	1 00	8 00
21	ಉತ್ತರ ಕನ್ನಡ	0	7 00
22	ಗದಗ	1 60	8 30
23	ಗುಲ್ಬರ್ಗ	1 60	24 00
24	ಬೀದರ್	1 50	5 00
25	ಕೊಪ್ಪಳ	1 80	9 77
26	ರಾಯಚೂರು	0	3 00
27	ಬಳ್ಳಾರಿ	0	2 33
	ಒಟ್ಟು	**49 86**	**237 54**

ಅನುಬಂಧ-6

2006-07 ಲೆಕ್ಕ ಶೀರ್ಷಿಕೆ 4210-01-110-7-01 ಅಡಿಯಲ್ಲಿ ಅನುಮೋದಿಸಿದ ಕಾಮಗಾರಿಗಳು

(ರೂ ಲಕ್ಷಗಳಲ್ಲಿ)

1	ಪ್ರಾಥಮಿಕ ಆರೋಗ್ಯ ಕೇಂದ್ರ, ಮಸ್ಕಲ್, ತುಮಕೂರು ಜಿಲ್ಲೆ	40 77
2	ಪ್ರಾದಮಿಕ ಆರೋಗ್ಯ ಕೇಂದ್ರ, ಜಿನ್ನಾಗರ, ತುಮಕೂರು ಜಿಲ್ಲೆ	40 77
3	ಪ್ರಾದಮಿಕ ಆರೋಗ್ಯ ಕೇಂದ್ರ, ಜಿನ್ನಾಗರ, ತುಮಕೂರು ಜಿಲ್ಲೆ	40 77
4	ಪ್ರಾದಮಿಕ ಆರೋಗ್ಯ ಕೇಂದ್ರ, ಹೊನ್ನಾವರ, ನಾಗಮಂಗಲ ತಾ ಮಂಡ್ಯ ಜಿಲ್ಲೆ	40 77
5	ಪ್ರಾದಮಿಕ ಆರೋಗ್ಯ ಕೇಂದ್ರ, ಕಾಳಿಂಗನಹಳ್ಳಿ, ಮಂಡ್ಯ ಜಿಲ್ಲೆ	40 77
6	ಪ್ರಾದಮಿಕ ಆರೋಗ್ಯ, ಕ್ರೆಂದ್ರ, ಜಿ ಬೊಮ್ಮನಹಳ್ಳಿ, ಮಂಡ್ಯ ಜಿಲ್ಲೆ	40 77
7	ಪ್ರಾಥಮಿಕ ಆರೋಗ್ಯ ಕೇಂದ್ರ, ಬ್ರಹ್ಮದೇವರಹಳ್ಳಿ, ಮಂಡ್ಯ ಜಿಲ್ಲೆ	40 77
8	ಪ್ರಾಥಮಿಕ ಆರೋಗ್ಯ ಕೇಂದ್ರ, ಹರದನಹಳ್ಳಿ ಹಾಸನ ಜಿಲ್ಲೆ	40 00
9	ಪ್ರಾದಮಿಕ ಆರೋಗ್ಯ ಕೇಂದ್ರ, ಹಿರೇನಲ್ಲೂರು, ಕಡೂರು ತಾ ಚಿಕ್ಕಮಗಳೂರು ಜಿಲ್ಲೆ	40 44
10	ಪ್ರಾಥಮಿಕ ಆರೋಗ್ಯ ಘಟಕ ಹಾಗೂ ವಸತಿ ಗೃಹ ದೊಡ್ಡಪಾಲನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ, ಎಲೇರಾಮಪುರ, ಕೊರಟಗೆರೆ ತಾ ತುಮಕೂರು ಜಿಲ್ಲೆ	31 73
11	ರಾಮನಗರದ ಇಟ್ಟಮಡು ಗ್ರಾಮದಲ್ಲಿನ ವಸತಿ ಗೃಹಗಳು	39 64
	ಒಟ್ಟು	**437 20**

ಅನುಬಂಧ-7

2006-07ನೇ ಸಾಲಿನ ಲೆಕ್ಕ ಶೀರ್ಷಿಕೆ 4210-01-110-7-02
ಜಿಲ್ಲಾ ಪಂಚಾಯತ್

ವ್ಯಾಪ್ತಿಯ ಸ ಆ ಕೇಂದ್ರಗಳ ಅಡಿಯಲ್ಲಿ ಜಿಲ್ಲಾವಾರು
ಅನುದಾನದ ವಿವರಗಳು

(ರೂ ಲಕ್ಷಗಳಲ್ಲಿ)

1 ಬೆಂಗಳೂರು ನಗರ	5 00
2 ಬೆಂಗಳೂರು ಗ್ರಾಮಾಂತರ	5 00
3 ತುಮಕೂರು	5 00
4 ಚಿಕ್ಕಮಗಳೂರು	5 00
5 ಬಾಗಲಕೋಟೆ	5 00
6 ಬಿಜಾಪುರ	5 00
7 ಧಾರವಾಡ	5 00
8 ಉತ್ತರ ಕನ್ನಡ	5 00
9 ಬೆಳಗಾವಿ	5 00
10 ಬಳ್ಳಾರಿ	5 00
11 ಗುಲ್ಬರ್ಗ	5 00

12 ಬೀದರ್	5 00
13 ಕೊಪ್ಪಳ	5 00
14 ರಾಯಚೂರು	5 00
15 ಚಿತ್ರದುರ್ಗ	5 00
16 ಕೋಲಾರ	5 00
17 ಶಿವಮೊಗ್ಗ	5 00
18 ಗದಗ್	5 00
19 ಹಾವೇರಿ	5 00
20 ಚಾಮರಾಜನಗರ	5 00
21 ದಕ್ಷಿಣ ಕನ್ನಡ	5 00
22 ಹಾಸನ	5 00
23 ಮಂಡ್ಯ	5 00
24 ಉಡುಪಿ	5 00
25 ಮೈಸೂರು	5 00
26 ದಾವಣಗೆರೆ	5 00
ಒಟ್ಟು	**153 00**

186(369) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಜಮಖಂಡಿ ತಾಲ್ಲೂಕಿನಲ್ಲಿ ನಾಲ್ಕಾರು ಹಳ್ಳಿಗಳಲ್ಲಿ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದಲ್ಲಿ, ಕೈಗೊಂಡಿರುವ ಕ್ರಮವೇನು?

ಇ) ತಾಲ್ಲೂಕಿನಲ್ಲಿ ಹಾಲಿ ಇರುವ ಚಿಕಿತ್ಸಾ ಕೇಂದ್ರಗಳೆಷ್ಟು? ಸರ್ಕಾರದ ನಿಯಮಾನುಸಾರ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಇನ್ನು ಎಷ್ಟು ಕಡೆ ಪ್ರಾರಂಭಿಸಲಾಗುವುದು?

ಈ) ಇಲಾಖೆಯ ಕಟ್ಟಡಗಳು ಶಿಧಿಲಗೊಂಡಿದ್ದು, ಈ ಕಟ್ಟಡಗಳ ದುರಸ್ಥಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ರೇವೂ ನಾಯಕ್ ಬೆಳಮಗಿ

ಅ) ಹೌದು ಬಂದಿದೆ

ಜಮಖಂಡಿ ತಾಲ್ಲೂಕಿನ ಖಾಜಬೀಳಗಿ, ಸಾಸಲಹಟ್ಟಿ, ಮದರಕಂಡಿ, ಲಿಂಗನೂರು, ಹುನ್ನೂರ, ಕಲಬೀಳಗಿ ಮತ್ತು ಹಿರೆಪಡಸಲಗಿ ಗ್ರಾಮಗಳಲ್ಲಿ ನೂತನ ಪಶುಚಿಕಿತ್ಸಾಲಯ ಪ್ರಾರಂಭಕ್ಕಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ)ಡಾ ಡಿ ಎಂ ನಂಜುಡಪ್ಪರವರ ಪ್ರಾದೇಶಿಕ 'ಅಸಮತೋಲನಾ ವರದಿಯ ಆದಾರದ ಮೇಲೆ ಜಮಖಂಡಿ ಮುಂದುವರಿದ ತಾಲ್ಲೂಕು ಆಗಿದ್ದು, ಒಟ್ಟು 1,18,599 ಜಾನುವಾರು ಘಟಕಗಳಿದ್ದು, ಪ್ರತಿ 5000

ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯದಂತೆ 24 ಪಶು ವೈದ್ಯ ಸಂಸ್ಥೆಗಳು ಇರಬೇಕಿತ್ತು ಆದರೆ ಈಗಾಗಲೇ 25 ಪಶು ವೈದ್ಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ ಆದ್ದರಿಂದ ಪಶು ಚಿಕಿತ್ಸಾಲಯದ ಕೊರತೆ ಇಲ್ಲದ ಯಾವುದೇ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಇನ್ನೂ ಕಾಲ ನಿಗದಿಗೊಳಿಸಲಾಗಿಲ್ಲ

ಜಮಖಂಡಿ ತಾಲ್ಲೂಕಿನಲ್ಲಿ ಒಟ್ಟು 25 ಪಶು ವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಅವುಗಳ ವಿವರ ಈ ಕೆಳಕಂಡಂತಿದೆ

1	ಪಶು ಆಸ್ಪತ್ರೆ	03
2	ಪಶುಚಿಕಿತ್ಸಾಲಯಗಳು	09
3	ಸಂಚಾರಿ ಪಶುಚಿಕಿತ್ಸಾಲಯಗಳು	01
4	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	06
5	ಕೃತಕ ಗರ್ಭಧಾರಣಾ ಕೆಂದ್ರ	06
	ಒಟ್ಟು	**25**

ಡಾ ಡಿ ಎಂ ನಂಜುಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯ ಆಧಾರದ ಮೇಲೆ ಜಮಖಂಡಿ ಮುಂದುವರಿದ ತಾಲ್ಲೂಕು ಆಗಿದ್ದು, ಒಟ್ಟು 1,18,599 ಜಾನುವಾರು ಘಟಕಗಳಿದ್ದು, ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯದಂತೆ 24 ಪಶು ವೈದ್ಯ ಸಂಸ್ಥೆಗಳು ಇರಬೇಕಿತ್ತು ಆದರೆ ಈಗಾಗಲೇ

25 ಪಶು ವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಪಶು ಚಿಕಿತ್ಸಾಲಯದ ಕೊರತೆ ಇಲ್ಲದ ಯಾವುದೇ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಇನ್ನೂ ಕಾಲ ನಿಗದಿಗೊಳಿಸಲಾಗಿಲ್ಲ

ಜಮಖಂಡಿ ತಾಲ್ಲೂಕಿನ ಪಶುಚಿಕಿತ್ಸಾಲಯ ಸಾವಳಗಿ ಮತ್ತು ಮರೆಗುದ್ದಿಯ ಕಟ್ಟಡವನ್ನು ಆರ್ ಐ ಡಿ ಎಫ್ ನಬಾರ್ಡ ಯೋಜನೆಯಡಿ ನಿರ್ಮಾಣ ಪ್ರಾರಂಭಿಸಲಾಗಿದೆ ಪಶು ಆಸ್ಪತ್ರೆ, ಬನಹಟ್ಟಿ ಹಾಗೂ ಪಶು ಚಿಕಿತ್ಸಾಲಯ, ತೊದಲಬಾಗಿ ಕಟ್ಟಡಗಳ ದುರಸ್ಥಿಯನ್ನು ಪ್ರಸ್ತುತ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆ ಲೆಕ್ಕ ಶೀರ್ಷಿಕೆಯಡಿ (ಕಟ್ಟಡ) ಕೈಗೊಳ್ಳ ಲಾಗುತ್ತದೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ನಾವಲಗಿ ಮತ್ತು ಪಶು ಆಸ್ಪತ್ರೆ, ಜಮಖಂಡಿಯ ದುರಸ್ಥಿ ಕಾರ್ಯಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿ ಕಾರ್ಯಕ್ರಮದ ಅಡಿ ಕ್ರಮ ಕೈಗೊಳ್ಳಲಾಗಿದೆ

187(370) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಆರೋಗ್ಯ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಜಮಖಂಡಿ ತಾಲ್ಲೂಕಿನಲ್ಲಿಯ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಸರ್ಕಾರದ ನಿಯಾಮವಳಿಯ ಪ್ರಕಾರ ತಾಲ್ಲೂಕಿನಲ್ಲಿ ಇನ್ನೂ ಏಳು ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಬೇಕಾಗಿದ್ದು ಯಾವಾಗ ಭರ್ತಿ ಮಾಡಲಾಗುವುದು?

ಈ)ಹಾಲಿ ಇರುವ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು?

ಉ)ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಎ ಎನ್ ಎಮ್ ಗಳು ಇರುವುದಿಲ್ಲ ವಾದ್ದರಿಂದ ಯಾವಾಗ ನೇಮಿಸಲಾಗುವುದು?

ಊ) ಎ ಎನ್ ಎಮ್ ಗಳ ಸೆಂಟರ್(ಕಟ್ಟಡಗಳು) ದುರಸ್ಥಿಯಾಗಿದ್ದು ಅವುಗಳನ್ನು ದುರಸ್ಥಿಗೊಳಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು?

ಶ್ರೀ ಆರ್ ಅಶೋಕ್

ಅ)ಬಂದಿದೆ

ಆ) ಜಮಖಂಡಿ ತಾಲ್ಲೂಕಿನಲ್ಲಿ ಗ್ರಾಮೀಣ ಜನಸಂಖ್ಯೆ 2,56,665 ಇರುತ್ತದೆ ಜಮಖಂಡಿ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಆಸ್ಪತ್ರೆ, ಒಂದು ಸಮುದಾಯ ಆರೋಗ್ಯ ಕೇಂದ್ರ ಮತ್ತು ಎಂಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತದೆ ಜನಸಂಖ್ಯೆಗೆ ಅನುಗುಣವಾಗಿ ಇಲ್ಲಿ ಹೆಚ್ಚುವರಿ ಬೇಕಾಗಿರುವ ಕೇಂದ್ರಗಳನ್ನು ತೆರೆಯುವ ಬಗ್ಗೆ ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಇ) ತಾಲ್ಲೂಕಿನ ಒಟ್ಟು ಗ್ರಾಮೀಣ ಜನಸಂಖ್ಯೆ 2,56,665 ಇದ್ದು ಈಗಾಗಲೇ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ಸಮುದಾಯ ಆರೋಗ್ಯ ಕೇಂದ್ರ ಮತ್ತು ಒಂದು ತಾಲ್ಲೂಕು ಆಸ್ಪತ್ರೆ ಇರುತ್ತವೆ ಮಾರ್ಗಸೂಚಿ ಪ್ರಕಾರ ಇನ್ನೂ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಗತ್ಯವಿದೆ ಈ ಬಗ್ಗ ಪರಿಶೀಲಿಸಿ ಅನುದಾನ ಲಭ್ಯತೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು

ಈ) ಜಮಖಂಡಿ ತಾಲ್ಲೂಕಿನ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ 22 ವೈದ್ಯಾದಿಕಾರಿಗಳ ಹುದ್ದೆ ಮಂಜೂರಾಗಿದ್ದು ಅವುಗಳಲ್ಲಿ 20 ವೈದ್ಯಾಧಿ ಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಒಬ್ಬರು ಆಯುಷ್ ವೈದ್ಯಾಧಿಕಾರಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ ಒಂದು ವೈದ್ಯಾಧಿಕಾರಿ ಹುದ್ದೆ ಮಾತ್ರ ಖಾಲಿ ಇದೆ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು 'ನೇಮಕಾತಿ ಆದೇಶ ಹೊರಡಿಸುವಾಗ ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು

ಉ)ತಾಲ್ಲೂಕಿನಲ್ಲಿ ಒಟ್ಟು 45 ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆಗಳು ಮಂಜೂರಾಗಿದ್ದು ಅವುಗಳಲ್ಲಿ 37 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ 8 ಹುದ್ದೆಗಳು ಖಾಲಿ ಇರುತ್ತವೆ

ರಾಜ್ಯದಲ್ಲಿ 23 ಆರೋಗ್ಯ ಸಹಾಯಕಿಯರ ತರಬೇತಿ ಶಾಲೆ ಇದ್ದು ಇದರಲ್ಲಿ ಪ್ರತಿ ವರ್ಷ 720 ಅಭ್ಯರ್ಥಿಗಳು 18 ತಿಂಗಳ ತರಬೇತಿಯನ್ನು ಪಡೆಯುತ್ತಾರೆ ಸದ್ಯಕ್ಕೆ ತರಬೇತಿ ಪಡೆದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಯಾರು ಇರುವುದಿಲ್ಲ ತರಬೇತಿ ಪಡೆದು ಉತ್ತೀರ್ಣರಾಗಿ ಬಂದಂತಹವರಿಗೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು

ಊ) ತಾಲ್ಲೂಕಿನಲ್ಲಿ ಒಟ್ಟು 45 ಉಪಕೇಂದ್ರಗಳಿದ್ದು 31 ಕಟ್ಟಡಗಳಿರುತ್ತವೆ 'ಈ ಕಟ್ಟಡಗಳಲ್ಲಿ ಸಣ್ಣಪುಟ್ಟ ದುರಸ್ತಿಗಳನ್ನು ಜಿಲ್ಲಾ ಪಂಚಾಯತ್ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲಾಗುತ್ತದೆ ಈಗ ಎನ್ ಆರ್ ಹೆಚ್ ಎಂ ಅಡಿಯಲ್ಲಿ ಒದಗಿಸಿರುವ ಮುಕ್ತ ನಿಧಿ ಅಡಿಯಲ್ಲಿ ಹಾಗೂ ಈ ವರ್ಷ ಜಾರಿಯಾಗಲಿರುವ ಕೆ ಎಚ್ ಎಸ್ ಆರ್ ಡಿ ಪಿ ಯೋಜನೆಯಲ್ಲಿಯೂ ದುರಸ್ತಿಗಳಿಗೆ ಅವಕಾಶ ಕಲ್ಪಿಸಲಾಗಿತ್ತದೆ

ಸೋಮಣ್ಣ ವಿ (ಬಿನ್ನಿ ಪೇಟೆ) 188(394)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ)ರಾಜ್ಯದ ಯಾವ ಯಾವ ಖಾಸಗೀ ವೈದ್ಯಕೀಯ ಕಾಲೇಜುಗಳಿಗೆ ಇಲ್ಲಿಯವರೆಗೆ ಡೀಮ್ಡ್ ಯೂನಿವರ್ಸಿಟಿ ಸ್ಥಾನಮಾನವನ್ನು ನೀಡಲಾಗಿದೆ?

ಆ) ರಾಜ್ಯ ಸರಕಾರವು ಜೆ ಎಸ್ ಎಸ್ ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಡೀಮ್ಡ್ ಯೂನಿವರ್ಸಿಟಿ ಸ್ಥಾನಮಾನ ನೀಡಲು ಶಿಫಾರಸ್ಸು ಮಾಡಿ ಕೇಂದ್ರಕ್ಕೆ ಕಳುಹಿಸಿದೆಯೇ?

ಇ) ಕಳುಹಿಸಿದ್ದಲ್ಲಿ, ಮೇಲ್ಕಂಡ ವೈದ್ಯಕೀಯ ಕಾಲೇಜಿಗೆ ಈ ಸ್ಥಾನಮಾನ ದೊರಕಿಸಿ ಕೊಡಲು ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ ಎಸ್ ಆಚಾರ್ಯ

ಅ) 1 ಕಸ್ತೂರ ಬಾ ವೈದ್ಯಕೀಯ ಕಾಲೇಜು, ಮಂಗಳೂರು

2 ಕಸ್ತೂರ ಬಾ ವೈದ್ಯಕೀಯ ಕಾಲೇಜು, ಮಣಿಪಾಲ್

3 ಜೆ ಎನ್ ವೈದ್ಯಕೀಯ ಕಾಲೇಜು, ಬೆಳಗಾಂ

4 ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕ್ಡಾಲೇಜು, ಕೋಲಾರ

ಆ)ಇಲ್ಲ

ಇ) ಉದ್ಭವಿಸುವುದಿಲ್ಲ

189(363) ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ)ಬೆಂಗಳೂರು ನಗರವು ಸೇರಿದಂತೆ ನಾಯಿಗಳ ಕಡಿತದಿಂದ ಇಲ್ಲಿಯವರೆಗೆ ಸತ್ತವರ ಸಂಖ್ಯೆ ಎಷ್ಟು?

ಆ)ನಾಯಿಗಳ ಕಡಿತವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ)ನಾಯಿ,ವಿಷಪೂರಿತ ಹಾವು ಮತ್ತು ಕುದುರೆ ಇವುಗಳ ಕಡಿತಕ್ಕೆ ಒಳಗಾದರೆ ತಕ್ಷಣ ಔಷಧಿಯನ್ನು ಒದಗಿಸಲು ಕೈಗೊಂಡ ಕ್ರಮವೇನು?

ಈ)ರಾಜ್ಯದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳು ಎಷ್ಟು? ಎಷ್ಟು ವೈದ್ಯರ ಕೊರತೆ ಇದೆ?

ಉ)ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಉನ್ನತ ಆರೋಗ್ಯ ದವರೆಗೂ ಜಿಲ್ಲಾವಾರು ವಿವರಗಳನ್ನು ಒದಗಿಸುವುದು?

ಅ)ಬೆಂಗಳೂರು ನಗರವೂ ಸೇರಿದಂತೆ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮೇ ಅಂತ್ಯದವರೆಗೆ ನಾಯಿ ಕಡಿತದಿಂದ ಸತ್ತವರ ಸಂಖ್ಯೆ –37

ಆ)ಈ ಬಗ್ಗೆ ಸ್ಥಳೀಯ ಸಂಸ್ಥೆಗಳು, ಪಟ್ಟಣ ಪಂಚಾಯತ್‌ಗಳು, ಪುರಸಭೆಗಳು ಮತ್ತು ನಗರಸಭೆಗಳು ಕ್ರಮ ಕೈಗೊಂಡಿವೆ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಇ) ನಾಯಿ ಮತ್ತು ಕುದುರೆ –ಈ ಪ್ರಾಣಿಗಳ ಕಡಿತಕ್ಕೆ ಅತ್ಯಾಧುನಿಕವಾದ ಆಂಟಿ ರೇಬಿಸ್ ವ್ಯಾಕ್ಸಿನ್ (ರ್‍ಯಾಬೀಪೂರ್ /ಅಭಯರಬ್ ಚುಚ್ಚುಮದ್ದು) ಮತ್ತು ಟೇಟಾನಸ್ ಟಾಕ್ಸೈಡ್ ಚುಚ್ಚುಮದ್ದುಗಳನ್ನು ಹಾಗೂ ವಿಷಪೂರಿತ ಹಾವು ಕಡಿತಕ್ಕೆ ಆಂಟಿ ಸ್ನೇಕ್ ವೆನಮ್ ಎಂಬ ಚುಚ್ಚುಮದ್ದು ಗಳನ್ನು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಸಲಾಗಿದೆ

ಈ)ರಾಜ್ಯದಲ್ಲಿ ಒಟ್ಟು 2,623 ಸರ್ಕಾರಿ ಆಸ್ಪತ್ರೆಗಳು ಇದ್ದು, 709 ವೈದ್ಯರ ಕೊರತೆ ಇದೆ

ಉ)ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ

ಅನುಬಂಧ-1

ಬೆಂಗಳೂರಿನಲ್ಲಿ ಇತ್ತೀಚೆಗೆ ಬೀದಿನಾಯಿಗಳ ಕಾಟದಿಂದ ಆಗುತ್ತಿರುವ ಅನಾಹುತವನ್ನು ಮನಗಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಾರ್ಡುಗಳಲ್ಲೂ ಹಗಲು ಮತ್ತು ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿ, ಸಂತಾನಹರಣ ಶಸ್ತ್ರ ಚಿಕಿತ್ಸೆಯ ಜೊತೆಗೆ ಸಮಸ್ಯಾತ್ಮಕ ನಾಯಿಗಳನ್ನು ದಯಾಮರಣ ಗೊಳಪಡಿಸಲಾಗಿತ್ತದೆ

2001ನೇ ಇಸವಿಯಲ್ಲಿ ಮೊದಲು ಬೀದಿನಾಯಿಗಳನ್ನು ಕೊಲ್ಲಲಾಗುತ್ತಿತ್ತು ಆದರೆ 2001 ರಿಂದೀಚೆಗೆ ಎಲ್ಲಾ ನಾಯಿಗಳನ್ನು ಕೊಲ್ಲಲು ಕಾನೂನನಲ್ಲಿ ಅವಕಾಶವಿಲ್ಲದ ಕಾರಣ ಮಹಾನಗರ ಪಾಲಿಕೆಯ ಎ ಬಿ ಸಿ ಕಾರ್ಯಕ್ರಮ ಅನ್ವಯ ನಾಯಿಗಳ ಸಂತತಿಯನ್ನು ಕಡಿತಗೊಳಿಸುವ ಉದ್ದೇಶ ಹೊಂದಿದ್ದು, ಇದುವರೆಗೆ ನಾಯಿಗಳ ಶೇಕಡಾ 21 ರಷ್ಟು ಕಡಿಮೆ ಯಾಗಿರುವುದಲ್ಲದೆ ನಗರದ ವ್ಯಾಪ್ತಿಯಲ್ಲಿ ರೇಬಿಸ್ ಪ್ರಕರಣಗಳು ಸಂಪೂರ್ಣ ಇಲ್ಲದಂತಾಗಿರುತ್ತದೆ

ರಾಜ್ಯದ ಇತರೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಾಟ ತಡೆಯಲು ಅವುಗಳನ್ನು ಹಿಡಿದು ಹೊರವಲಯದ ನಿರ್ಜನ ಪ್ರದೇಶದಲ್ಲಿ ಬಿಡಲು ಮತ್ತು ಸಾಕುವ ನಾಯಿಗಳಿಗೆ ಪರವಾನಗಿ ಕಡ್ಡಾಯಗೊಳಿಸಲಾಗಿದೆ ಹಾಗೆಯೇ ಪ್ರಾಣಿ ಜನನ ನಿಯಂತ್ರಣ ಕಾಯಿದೆ ಅಡಿ ಬೀದಿ ನಾಯಿಗಳಿಗೆ ಸರ್ಕಾರೇತರ ಸಂಸ್ಥೆಗಳ ಸಹಕಾರದೊಂದಿಗೆ ಲಸಿಕೆ ನೀಡುವ ಕಾರ್ಯಕ್ರಮದ ಜೊತೆಗೆ ಹುಚ್ಚುನಾಯಿ ರೋಗ ನಿರೋಧಕ ಲಸಿಕೆ ಹಾಕಿಸಿ, ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿ ಬಿಡಲಾಗುತ್ತದೆ ಮತ್ತು 2001ರ ಆದೇಶದ ಪ್ರಕಾರ ದೋಷಪೂರಿತ ನಾಯಿಗಳ ಹುಚ್ಚು ನಾಯಿಗಳ ಮತ್ತು ಮರಣಾಂತಿಕ ಖಾಯಿಲೆಗಳಿಂದ ನರಳುವ ನಾಯಿಗಳನ್ನು ಪಶು ವೈದ್ಯಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ನಂತರ ಚಿರನಿದ್ರೆಗೆ ಒಳಪಡಿ ಸಲಾಗುತ್ತಿದೆ ಬೀದಿನಾಯಿಗಳ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಔಷಧೋಪಚಾರ ಮತ್ತು ರೂ 1000-00ಗಳ ಪರಿಹಾರವನ್ನುಸಹ ನೀಡಲಾಗುತ್ತಿದೆ ಈ ಮೂಲಕ ಬೀದಿನಾಯಿಗಳ ಉಪಟಳವನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಅಲ್ಲದೆ ದಿನಾಂಕ 12–01–2007ರ ಸರ್ಕಾರ ಆದೇಶ ಸಂ ನಅಇ 126 ಎಂಎನ್‌ವೈ 2007ರಲ್ಲಿ ಬೀದಿನಾಯಿಗಳ ನಿಯಂತ್ರಣ ಹಾಗೂ ಎ ಬಿ ಸಿ ಕಾರ್ಯಕ್ರಮದ ಅನುಷ್ಠಾನದ ಪುನರ್ ವಿಮರ್ಶೆಗಾಗಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಉನ್ನತಮಟ್ಟದ ಸಮಿತಿಯನ್ನು ರಚಿಸಲಾಗಿದೆ

ರಾಜ್ಯದಲ್ಲಿ ಇತರೆ ನಗರಸಭೆ/ಪುರಸಭೆ ಹಾಗೂ ಪಟ್ಟಣ ಪಂಚಾಯಿತಿ ಗಳಿಗೆ ಸಂಬಂಧಿದಂತೆ ಪೌರಾಡಳಿತ ನಿರ್ದೇಶಕರು ಬೀದಿ ನಾಯಿಗಳ ಜನನ ನಿಯಂತ್ರಣ ಕೈಗೊಳ್ಳಲು ಏಜೆನ್ಸಿಗಳನ್ನು ನೇಮಕ ಮಾಡಿ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿ ಸುತ್ತೋಲೆಯನ್ನು ಹೊರಡಿಸಿರುತ್ತಾರೆ

ಅನುಬಂಧ–2

ದಿನಾಂಕ 11–07–2007ಕ್ಕೆ ಖಾಲಿ ಇರುವ ವೈದ್ಯಾಧಿಕಾರಿಗಳ ಜಿಲ್ಲಾವಾರು ವಿವರ

ಕ್ರ ಸಂ ಜಿಲ್ಲೆಗಳು ಪ್ರೋಗ್ರಾಮ್ ಟಿಹೆಚ್ಓ ತಜ್ಞರು ಜಿಡಿಎಂಒ

ಅಧಿಕಾರಿಗಳು

1	ಬೆಂಗಳೂರು(ನ)		1	2	6	4
2	ಬೆಂಗಳೂರು(ಗ್ರಾ)	–	6	2	1	
3	ಚಿತ್ರದುರ್ಗ	3	5	5	0	
4	ದಾವಣಗೆರೆ	–	4	9	2	
5	ಕೋಲಾರ	3	10	11	0	

6	ಶಿವಮೊಗ್ಗ	5	6	16	1
7	ತುಮಕೂರು	2	9	26	2
8	ಮೈಸೂರು	3	4	6	2
9	ಮಂಡ್ಯ 3	5	16	0	
10	ಚಾಮರಾಜನಗರ	2	2	5	2
11,	ಕೊಡಗು 2	2	28	0	
12	ದಕ್ಷಿಣ ಕನ್ನಡ	2	2	5	2
13	ಉಡುಪಿ 1	3	13	3	
14	ಚಿಕ್ಕಮಗಳೂರು 3	4	7	2	
15	ಹಾಸನ 3	5	27	2	
16	ಬೆಳಗಾಂ 3	6	28	2	
17	ಬಾಗಲಕೋಟೆ	2	3	7	1
18	ಬಿಜಾಪುರ	4	4	13	1
19	ದಾರವಾಡ	2	4	3	1
20	ಗದಗ್ 2	4	1	1	

21	ಹಾವೇರಿ	5	4	12	3
22	ಉತ್ತರ ಕನ್ನಡ	5	9	20	1
23	ಗುಲ್ಬರ್ಗ	4	7	33	18
24	ಬಳ್ಳಾರಿ	3	3	46	9
25	ರಾಯಚೂರು	–	2	25	17
26	ಕೊಪ್ಪಳ	1	4	20	10
27	ಬೀದರ್	3	4	17	5
	ಒಟ್ಟು	**69**	**126**	**421**	**93**
	ಒಟ್ಟು	**709**			

190(364) ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)

ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ)ರಾಜ್ಯದಲ್ಲಿರುವ ಪಶುಚಿಕಿತ್ಸಾ ಕೇಂದ್ರಗಳು ಎಷ್ಟು?

ಆ)ಅನೇಕ ಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಲ್ಲೆ ಬಂದಿದೆಯೇ?

ಇ)ಪಶುಚಿಕಿತ್ಸಾ ಕೇಂದ್ರಕ್ಕೆ ಔಷಧಿಯನ್ನು ಒದಗಿಸಲು ಸರ್ಕಾರದ ಕೈಗೊಂಡಿರುವ ಕ್ರಮಗಳೇನು?

ಈ)ಲಾಳ ಹೊಡೆಯಲು ಆಧುನಕ ವಿಧಾನವನ್ನು ಅನುಸರಿಸಲು ಸರ್ಕಾರದ ಯೋಚಿಸಿದೆಯೇ?

ಶ್ರೀ ರೇವೋ ನಾಯಕ್ ಬೆಳಮಗಿ

ಅ) ರಾಜ್ಯದಲ್ಲಿ ಒಟ್ಟಾರೆ 3947 ಪಶುಚಿಕಿತ್ಸಾ ಕೇಂದ್ರಗಳಿವೆ ಅವುಗಳ ವಿವರ ಈ ಕೆಳಗಿನಂತಿವೆ

1 ಪಶು ಆಸ್ಪತ್ರೆ	345
2 ಪಶುಚಿಕಿತ್ಸಾಲಯಗಳು	1762
3 ಸಂಚಾರಿ ಪಶುಚಿಕಿತ್ಸಾಲಯಗಳು	174
4 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	1198
5 ಕೃತಕ ಗರ್ಭದಾರಣಾ ಕೇಂದ್ರ	400

6 ಪ್ರಧಾನ ಗ್ರಾಮೀಣಾಭಿವೃದ್ಧಿ ಯೋಜನೆ	06
7 ಪ್ರಾದೇಶಿಕ ಪ್ರಯೋಗಶಾಲೆ	03
8 ಇತರೆ	59
ಒಟ್ಟು	**3947**

ಆ)ಹೌದು 153 ಸಹಾಯಕ ನಿರ್ದೇಶಕರ ಮತ್ತು 993 ಪಶು ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುವುದರಿಂದ ಒಟ್ಟಾರೆ 1146 ಪಶುವೈದ್ಯರ ಕೊರತೆ ಇದೆ

ಇ)ರಾಜ್ಯದ ಎಲ್ಲಾ ಪಶುಚಿಕಿತ್ಸಾ ಕೇಂದ್ರಗಳಿಗೆ ಔಷಧಿ ಪೂರೈಕೆಗಾಗಿ ಒಟ್ಟಾರೆ 1817 157 ಲಕ್ಷಗಳ ಅನುದಾನ 2007-08ನೇ ಸಾಲಿಗೆ ಆಯವ್ಯಯದಲ್ಲಿ ನಿಗದಿಗೊಳಿಸಲಾಗಿದೆ ಇದರಲ್ಲಿ 784 32 ಲಕ್ಷಗಳು ಜಿಲ್ಲಾ ವಲಯದ ಮುಖಾಂತರ ಹಾಗೂ 1033 25 ಲಕ್ಷಗಳ ಅನುದಾನವು ರಾಜ್ಯ ವಲಯದ ಅಡಿಯಲ್ಲಿ ನಗದಿಯಾಗಿರುತ್ತದೆ

ಜಿಲ್ಲಾ ವಲಯದಲ್ಲಿ ನಗದಿಯಾದ ಅನುದಾನದಲ್ಲಿ ಆಯಾ ಜಿಲ್ಲೆಗೆ ಅವಶ್ಯಕವಾದ ಔಷಧಿಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಅನುಮೊದನೆ ಮೇಲೆ ಅವಶ್ಯಕತೆಗನುಗುಣವಾಗಿ ಸರಬರಾಜು ಮಾಡಲು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು ಕ್ರಮವಹಿಸುವರು

ರಾಜ್ಯ ವಲಯದ ಅನುದಾನದಲ್ಲಿ 2003-04ನೇ ಸಾಲಿನ ದರಗುತ್ತಿಗೆಯು ಆಗಸ್ಟ್ -2007ರವರೆಗೆ ಚಾಲ್ತಿಯಲ್ಲಿದ್ದು,18 ರಖಂಗಳಿಗೆ ಸರಬರಾಜು ಆದೇಶ ನೀಡಿ ಎಲ್ಲಾ ಪಶುಚಿಕಿತ್ಸಾ ಕೇಂದ್ರಗಳಿಗೆ ಸರಬರಾಜು ಮಾಡಲು ಈಗಾಗಲೇ ಕ್ರಮವಹಿಸಲಾಗಿದೆ ಉಳಿಕೆ ರಖಂಗಳಿಗೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಜುಲೈ 2007ರ ಅಂತ್ಯಕ್ಕೆ ಪೂರ್ಣಗೊಳ್ಳಬಹುದಗಿದ್ದು, ಅತೀ ಶೀಘ್ರ ಇತರೆ ಔಷಧಿ ರಾಸಾಯನಿಕಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು

ಜಾನುವಾರುಗಳಲ್ಲಿ ಲಾಳ ಹೊಡೆಯಲು ಯಾವುದೇ ಆಧುನಿಕ ಪದ್ಧತಿ ಆವಿಷ್ಕಾರವಾಗದ ಕಾರಣ ಸಾಂಪ್ರದಾಯಿಕ ಪದ್ಧತಿಯೇ ಮುಂದುವರಿದಿದೆ

ಕರ್ನಾಟಕ ವಿಧಾನ ಸಭೆ

ಶುಕ್ರವಾರ 13ನೇ ಜುಲೈ 2007ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆ ಸಭಾಂಗಣದಲ್ಲಿ ಬೆಳಿಗ್ಗೆ 9 30 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು/ಉಪಾಧ್ಯಕ್ಷರು ಶ್ರೀ ಕೃಷ್ಣ ರವರು ಪೀಠವನ್ನು ಅಲಂಕರಿಸಿದ್ದರು

ಶ್ರೀ ಎ ಎಸ್ ಬಸವರಾಜು (ಅರಸೀಕೆರೆ) ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿನಲ್ಲಿ ಮೀನುಗಾರಿಕೆ ಇಲಾಖೆಯ ವತಿಯಿಂದ ನಾಗರಾಜು ಎನ್ನುವವರು ಮೀನುಗಾರಿಕೆ ಸಹಾಯಕ ಅಧಿಕಾರಿ ಆಗಿದ್ದಾರೆ ಆ ಅದಿಕಾರಿ ಅರಸೀಕೆರೆ, ಬೇಲೂರು, ಅರಕಲಗೂಡು ತಾಲ್ಲೂಕುಗಳಿಗೆ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಇವರ ಜೊತೆಯಲ್ಲಿ ನಾಲ್ಕು ಜನ ಸಿಬ್ಬಂದಿವರ್ಗದವರು ಇದ್ದಾರೆ ಅವರು ಯಾರು ಕೂಡ ಕಚೇರಿಯಲ್ಲಿ ಇರುವುದಿಲ್ಲ ಇದಕ್ಕೆ ಕಾರಣವೇನೆಂದರೆ ಈ ಸಹಾಯಕ ಅದಿಕಾರಿಯು ಕಚೇರಿಯಲ್ಲಿ ಇರುವುದಿಲ್ಲ ನಾನು ಮನೆಗಳು ಕೊಟ್ಟಿರುವ ವಿಚಾರವಾಗಿ ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಸರ್ಕಾರದ ಉತ್ತರ 10 ಮನೆಗಳೆಂದು ಹೇಳಿದ್ದಾರೆ ನಾನು ಹೆಚ್ಚುವರಿಯಾಗಿ ಕೇಳಿದ್ದಾನೆ, ಅದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ ಇಲ್ಲಿ ಹೆಚ್ಚುವರಿಯಾಗಿ ಎಷ್ಟು ಕೊಟ್ಟಿದ್ದಾರೆಂಬುದು ಗೊತ್ತಿಲ್ಲ ಆದರೆ ಕಚೇರಿಯಲ್ಲಿ ಯಾರು ಇರುವುದಿಲ್ಲ, ಕಾರಣವೇನೆಂದರೆ, ಮಳೆ ಇಲ್ಲ, ಕೆರೆ ಕಟ್ಟೆಗಳಲ್ಲಿ ನೀರು ಇಲ್ಲ ನೀರು ಇಲ್ಲದೇ ಇರುವ ಜಾಗಗಳಲ್ಲಿ ಮೀನು ಇಲ್ಲ ಮೀನುಗಳಿಲ್ಲವೆಂದು ಕಚೇರಿಯಲ್ಲಿ ಸಿಬ್ಬಂದಿಗಳು ಯಾರು ಇರುವುದಿಲ್ಲ ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು, ಹಾಗೂ ಇಲ್ಲಿ 10 ಮನೆಗಳು foundation ಆಗಿದೆ, ಅರ್ಧ ಗೋಡೆಗಳ ನಿರ್ಮಾಣವಾಗಿದೆ ಹಣ ಬಿಡುಗಡೆಯಾಗಿಲ್ಲ, ಹಣವನ್ನು ಅದಷ್ಟು ಬೇಗ ಬಿಡುಗಡೆ ಮಾಡಿ ಕೊಡಬೇಕೆಂದು ಕೇಳುತ್ತೇವೆ ಇನ್ನು ಹೆಚ್ಚುವರಿಯಾಗಿ ಎಷ್ಟು ಮನೆಗಳನ್ನು ಕೊಡುತ್ತೀರಾ? ಎಂಬ ಬಗ್ಗೆ ತಿಳಿಸಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೀದ್ದೇನೆ

ಶ್ರೀ ಬಿ ನಾಗರಾಜ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ, ನಮ್ಮಲ್ಲಿ ಅದಿಕಾರಿಗಳು ಕೊರತೆ ಇತ್ತು ಇತ್ತೀಚಿಗೆ 50 ಹೊಸ ಅದಿಕಾರಿಗಳನ್ನು Assistant Director Grade-2 ನೇಮಕ ಮಾಡಲಾಗಿದೆ ತಾವು ಹೇಳಿದ ಅಧಿಕಾರಿಯ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಈಗಾಗಲೇ 10 ಮನೆಗಳಲ್ಲಿ 9 ಮನೆಗಳು ಪ್ರಾರಂಭವಾಗಿದೆಯೆಂದು ನಮಗೆ ವರದಿ ಬಂದಿದೆ ಅದಕ್ಕೆ ಪ್ರಥಮ ಕಂತಿನ 10,000 ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಆದೇಶ ಮಾಡಿದೆ ಇನ್ನು ಮಾನ್ಯ ಸದಸ್ಯರು ಹೆಚ್ಚಿನ ಮನೆಗಳನ್ನು ಕೇಳಿದ್ದಾರೆ ಈ ವರ್ಷದ ಬಿಡುಗಡೆಯಲ್ಲಿ ಹೆಚ್ಚಿನ ಮನೆಗಳನ್ನು ಕೊಡುವುದಕ್ಕ ಪ್ರಯತ್ನ ಮಾಡುತ್ತೇನೆ

ಒಬ್ಬ ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಮೀನುಗಾರಿಕೆ ಸಚಿವರನ್ನು ಕೇಳುವುದೇನೆಂದರೆ, ಪ್ರತಿ ವರ್ಷ ಮನೆಗಳನ್ನು ಕೊಡುವ ವಿಚಾರದಲ್ಲಿ ಸಮರ್ಪಕವಾಗಿ ಎಲ್ಲಾ ತಾಲ್ಲೂಕುಗಳಲ್ಲಿ ಕೊಡುವಂಥಾದ್ದು ಆಗುತ್ತಿಲ್ಲ ದಕ್ಷಿಣ ಕನ್ನಡ ಭಾಗದಲ್ಲಿ ಮಾತ್ರ ಮನೆಗಳನ್ನು ಹೆಚ್ಚಾಗಿ ಕೊಡುತ್ತಿದ್ದಾರೆ ದಯವಿಟ್ಟು ಎಲ್ಲಾ ತಾಲ್ಲೂಕಿಗಳಲ್ಲೂ ಮೀನು ಹಿಡಿಯುವವರು ಇದ್ದಾರೆ ಅವರಿಗೆ ಮನೆಗಳನ್ನು ಕೊಡಬೇಕು, ಮತ್ತೆ ಮೀನುಗಾರಿಕೆ ಇಲಾಖೆಯ ಎಲ್ಲೂ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಇಲ್ಲಿ ಅಧಿಕಾರಿ ಇದ್ದಾರೋ ಇಲ್ಲವೋ ಎಂಬುದು ಇಡೀ ತಾಲ್ಲೂಕಿಗೆ ಗೊತ್ತಾಗುತ್ತಿಲ್ಲ ದಯವಿಟ್ಟು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳತ್ತೇನೆ

ಶ್ರೀ ಕೆ ಅಭಯಚಂದ್ರ ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಮೀನುಗಾರಿಕಾ ಪ್ರದೇಶದಲ್ಲೆ ಹೆಚ್ಚು ಮನೆಗಳನ್ನು ಕೊಡಬೇಕು ಈ ವರ್ಷ ಕೊಡುವಾಗ, ಮೀನುಗಾರಿಕಾ ಪ್ರದೇಶಗಳಿಗೆ ಕಡಿಮೆ ಮನೆಗಳನ್ನು ಕೊಟ್ಟಿದ್ದಾರೆ, ಅದನ್ನು 50 ಮನೆಗಳನ್ನು ಕೊಡುವಂತೆ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ ಅಲ್ಲಿ ಮೀನುಗಾರಿಕೆ ಕಸುಬಾಗಿದ್ದು, ಅಲ್ಲಿ ನದಿಗೆ, ಸಮುದ್ರಗಳಿಗೆ ಹೋಗಿ, ಮೀನುಗಳನ್ನು ಹಿಡಿಯುವ ಜನರು ಇದ್ದಾರೆ ಅವರು ಬಹಳ ಕಷ್ಟದಲ್ಲಿ ವಾಸಿಸುವಂಥಾ ಜನರಾಗಿದ್ದಾರೆ ಅದುದರಿಂದ ಮೀನುಗಾರಿಕಾ ಇಲಾಖೆಯಿಂದ ಕೊಡುವ ಹೆಚ್ಚಿನ ಮನೆಗಳನ್ನು ಸಮುದ್ರ ಕಿನಾರೆಯಲ್ಲಿರುವಂಥಾ ಜನರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

(ಗೊಂದಲ)

ಅಧ್ಯಕ್ಷರು ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ ಎಲ್ಲಾ ಸಮಗ್ರವಾಗಿ ಹೇಳುತ್ತಾರೆ, ಎಲ್ಲಾ ಹಾಗೆ ಇದೆ, ಹೀಗೆ ಇದೆಯೆಂದು ಪ್ರಶ್ನೋತ್ತರ ವೇಳೆಯಲ್ಲಿ ಹೇಳುತ್ತಾರೆ

ಶ್ರೀ ಬಿ ನಾಗರಾಜು ಶೆಟ್ಟಿ ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ವರ್ಷ 2,660 ಮನೆಗಳನ್ನು ಹಂಚಲಾಗಿದೆ ಈ ಸರ್ಕಾರ ಬಂದ ಮೇಲೆ ಪ್ರಥಮ ಬಾರಿಗೆ, ಎಲ್ಲೆಲ್ಲಿ ಮೀನುಗಾರರು ಇದ್ದಾರೆ ಅದು ಮೂರು

ಮನೆಯಿಂದ ಹಿಡಿದು, ಈಗಾಗಲೇ ಹೇಳಿದ ಹಾಗೆ 25,30 ಮನೆಗಳನ್ನು ಕೂಡ ಕೊಟ್ಟಿದ್ದೇವೆ ಜನಸಂಖ್ಯೆ ಆಧಾರದ ಮೇಲೆ ಕೊಡಲಾಗಿದೆ

ಅಧ್ಯಕ್ಷರು ಮನೆ ಕೊಡುವುದೆಂದರೆ, ಕಟ್ಟಿ ಕೊಡುವುದು ಇಲ್ಲ, ಏನೂ ಇಲ್ಲ, ಆ ರೀತಿ ಇದೆ ಆದುದರಿಂದ ಕಟ್ಟಿಕೊಡುತ್ತಿದ್ದಾರೋ ಇಲ್ಲವೋ ಎಂಬ ಬಗ್ಗೆ surprise check ಮಾಡುತ್ತಿದ್ದೀರಾ?

ಶ್ರೀ ಬಿ ನಾಗರಾಜ ಶೆಟ್ಟಿ ಮಾಡುತ್ತಿದ್ದೇವೆ

ಅಧ್ಯಕ್ಷರು ಮಾಡುತ್ತಿದ್ದೀರಿ? ಇನ್ನೂ ಮಾಡಿಲ್ಲ

ಶ್ರೀ ನಾಗರಾಜ ಶೆಟ್ಟಿ ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ 10,000 ಮನೆಗಳ ಪ್ಲಾನ್ ಮಾಡಿತ್ತು ಕಳೆದ ಬಾರಿ 2,660 ಮನೆಗಳು, ಈ ವರ್ಷ 2,340 ಮನೆಗಳನ್ನು ಬಿಡುಗಡೆ ಮಾಡುತ್ತಿದ್ದೇವೆ ಆ ಪಟ್ಟಿ ಈಗ ಕೆಳಮಟ್ಟದಿಂದ ಪ್ರಾರಂಭವಾಗುತ್ತಿದೆ ಇದನ್ನು ಎಲ್ಲಾ ಶಾಸಕರುಗಳ ಗಮನಕ್ಕೂ ತರುತ್ತೀದ್ದೇವೆ ಮುಂದಿನ ದಿವಸಗಳಲ್ಲಿ ನಮ್ಮ ಯೋಜನೆ 'ಈ ಮತ್ಸಾಶ್ರಯ ಯೋಜನೆ ಎಂದು 40,000 ರೂಪಾಯಿಗಳಿಗೆ ನಾವು ಧರ್ಮಾರ್ಥವಾಗಿ ಮನೆಗಳನ್ನು ಕಟ್ಟಿ ಕೊಡುವಂಥಾ ವ್ಯವಸ್ಥೆಯಾಗಿದೆ ಅದಕ್ಕೆ ಶೇ 50 ರಷ್ಟು ಹಣ ಕೇಂದ್ರ ಸರ್ಕಾರದಿಂದ ಬರಬೇಕು ಕೇಂದ್ರ ಸರ್ಕಾರದವರು 20,000 ರೂಪಾಯಿಗಳು ಕೊಡಬೇಕು ರಾಜ್ಯ ಸರ್ಕಾರದಿಂದ 20,000 ರೂಪಾಯಿಗಳನ್ನು ಕೊಡಬೇಕು ಆದರೆ 5,000 ಮನೆಗಳು ಏನು ಇದೆ ಫಸ್ಟ್ ಮತ್ತು ಸೆಕೆಂಡ್ ಹಂತದ್ದು ಇದೆ

ಒಬ್ಬ ಸದಸ್ಯರು ಇವರು 5,000 ಮನೆಗಳನ್ನು ಯಾರಿಗೆ ಕೊಟ್ಟಿದ್ದಾರೆ? ಎಲ್ಲಿ ಕೊಟ್ಟಿದ್ದಾರೆ?

ಅಧ್ಯಕ್ಷರು ಮಾನ್ಯ ಮಂತ್ರಿಗಳು ಏನು ಹೇಳೂತ್ತಾರೋ ಹೇಳಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅದು ಅನುದಾನ

ಶ್ರೀ ಜೆ ಸಿ ಶ್ರೀ ರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಅದು ಅನುದಾನ, ಧರ್ಮಾರ್ಥ ಅಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಕತೆ ಹೇಳುತ್ತಿದ್ದಾರೆ, ಕೇಳಿ

ಅಧ್ಯಕ್ಷರು ದರ್ಮಾರ್ಥವೆಂದರೆ, ಮಾನ್ಯ ಸಚಿವರು ಮುಜರಾಯಿ ಸಚಿವರು, ದೇವರಿಗೆ ಧರ್ಮ ಎಂದು ಹೇಳಿ ಅಬ್ಯಾಸವಾಗಿದೆ ಅದಕ್ಕೆ ಹಾಗೆ ಹೇಳಿದ್ದಾರೆ

(ಗೊಂದಲ)

ಶ್ರೀ ಬಿ ನಾಗರಾಜ ಶೆಟ್ಟಿ ಮಾನ್ಯ ಅದ್ಯಕ್ಷರೆ, ಕೇಂದ್ರ ಸರ್ಕಾರದಿಂದ ನಮಗೆ ಇನ್ನು ಹೆಚ್ಚಿನ ಅನುದಾನ ಬಂದರೆ, ಇನ್ನು ಹೆಚ್ಚಿನ ಮನೆಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ

ಅಧ್ಯಕ್ಷರು ಆಯಿತು

ಪ್ರಶ್ನೆ 62(117)

ಮಾನ್ಯ ಸದಸ್ಯರು ಹಾಜರಿರಲ್ಲಿಲ್ಲ

ತೆಂಗಿನ ಬೆಳೆಗೆ ನುಸಿಪೀಡೆ ರೋಗ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 63 (550)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ರಾಜ್ಯದ ಎಷ್ಟು ಪ್ರದೇಶಗಳಲ್ಲಿ ತೆಂಗಿಗೆ ನುಸಿ ಪೀಡೆ ರೋಗ ತಗುಲಿದೆ

2) ನುಸಿ ಪೀಡೆ ರೋಗದಿಂದ ನಾಶವಾಗಿರುವ ತೆಂಗಿನ ಪ್ರದೇಶಗಳು ಎಷ್ಟು

3) ನುಸಿ ಪೀಡೆ ರೋಗದಿಂದ ನಾಶವಾಗಿರುವ ತೆಂಗು ಬೆಳೆಗಾರರಿಗೆ ಸರ್ಕಾರ ಪರಿಹಾರ ಕೊಡುವ ಯೋಜನೆಯನ್ನು ಮಾಡಿದೆಯೇ

4) ನುಸಿ ಪೀಡೆ ರೋಗ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಶ್ರೀ ಶಶಿಕಾಂತ ಅ ನಾಯಕ ತೋಟಗಾರಕೆ ಸಚಿವರು

1) ರಾಜ್ಯದಲ್ಲಿ ಸುಮಾರು 113 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿಗೆ ನುಸಿ ಪೀಡೆ ರೋಗ ತಗುಲಿದೆ

2) ನುಸಿ ಪೀಡೆ ರೋಗದಿಂದ ತೆಂಗಿನ ಪ್ರದೇಶಗಳು ನಾಶವಾಗಿರುವುದಿಲ್ಲ ಆದರೆ ಫಸಲಿನ ನಷ್ಟವುಂಟಾಗಿರುತ್ತದೆ

3) ನುಸಿ ಪೀಡೆ ರೋಗದಿಂದ ನಾಶವಾಗಿರುವ ತೆಂಗು ಬೆಳಗಾರರಿಗೆ ಪರಿಹಾರ ಕೊಡುವ ಕಾರ್ಯಕ್ರಮವಿರುವುದಿಲ್ಲ ನುಸಿ ಪೀಡೆ ನಿವಾರಣೆಗಾಗಿ ಕೀಟ ನಾಶಕ ಹಾಗೂ ಪೌಷ್ಠಿಕಾಂಶಗಳನ್ನು ವಿತರಿಸಲಾಗುತ್ತಿದೆ

4) ನುಸಿ ಪೀಡೆ ರೋಗದ ನಿಯಂತ್ರಣಕ್ಕೆ ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ

1 ನುಸಿ ಪೀಡೆ ನಿಯಂತ್ರಿಸಲು ಹಾಗೂ ತೆಂಗಿನ ಇಳುವರಿ ಹೆಚ್ಚಿಸಲು ತೆಂಗು ಅಭಿವೃದ್ಧಿ ಮಂಡಳಿ ಯಾಜನೆಯಡಿಯಲ್ಲಿ ಪ್ರತಿ ಹೆಕ್ಟೇರ್ ಪ್ರಾತ್ಯಕ್ಷತೆಗೆ 2 ವರ್ಷಗಳ ಅವದಿಗೆ ಪ್ರತಿ ವರ್ಷಕ್ಕೆ ರೂ 17,500ಗಳಂತೆ ಒಟ್ಟು ರೂ 35,000 ಗಳ ಮೌಲ್ಯದ ರಾಸಾಯನಿಕ ಗೊಬ್ಬರ, ಜೈವಿಕ ಗೊಬ್ಬರ, ಔಷಧಿ ಮೊದಲಾದವುಗಳನ್ನು ವಿತರಿಸಲಾಗುತ್ತಿದೆ ಇದರಿಂದನುಸಿ ಪೀಡೆ ನಿಯಂತ್ರಿಸುವುದಲ್ಲದೆ ಇಳುವರಿ ಹೆಚ್ಚುವುದು 2006-07ನೇ ಸಾಲಿನಲ್ಲಿ 1706 ಪಾತ್ಯಕ್ಷತೆಗಳನ್ನು ಕೈಗೊಂಡು 302 37 ಲಕ್ಷಗಳ ವಿನಿಯೋಗಿಸಲಾಗಿದೆ

2007–08ನೇ ಸಾಲಿನಲ್ಲಿ 896 ಹೆಕ್ಟೇರ್ ಪ್ರಾತ್ಯಕ್ಷತೆಗೆ ರೂ 156 80 ಲಕ್ಷಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ ಅದರಲ್ಲಿ ನುಸಿ ನಿಯಂತ್ರಣಕ್ಕೆ ಪ್ರತಿ ಪ್ರಾತ್ಯಕ್ಷತೆಗೆ ರೂ 4030 ಮೌಲ್ಯದ ಔಷಧಿಗಳನ್ನು 3 ಸಲ ಸಿಂಪಡಿಸಲು ವಿತರಿಸಲಾಗುತ್ತದೆ

2 ಜಿಲ್ಲಾ ಪಂಚಾಯತ್ ಯೋಜನೆಯಾದ ರೈತರಿಗೆ ಸಹಾಯ ಯೋಜನೆಯಡಿಯಲ್ಲಿ ಎಲ್ಲಾ ಬೆಳೆಗಳಿಗೆ ಸಸ್ಯ ಸಂರಕ್ಷಣೆಗಾಗಿ ಶೇ 50ರ ರಿಯಾಯಿತಿಯನ್ನು ಗರಿಷ್ಟ ರೂ 200 ರಂತೆ ಪ್ರತಿ ಫಲಾನುಭವಿಗಳಿಗೆ ಔಷದಿ ಖರೀದಿಸಲು ವಿತರಿಸಲಾಗುವುದು ಈ ಉದ್ದೇಶಕ್ಕಾಗಿ 2007–08ನೇ ಸಾಲಿನಲ್ಲಿ ರೂ 80 16 ಲಕ್ಷಗಳನ್ನು ಒದಗಿಸಲಾಗಿದೆ

3 ರಾಜ್ಯ ವಲಯ ಯೋಜನೆಯಾದ ಸಮಗ್ರ ಕೀಟ ಮತ್ತು ರೋಗ ನಿಯಂತ್ರಣದಡಿಯಲ್ಲಿ 2007–08ನೇ ಸಾಲಿನಲ್ಲಿ ರೂ 209 87 ಲಕ್ಷ ಅನುದಾನವಿದ್ದು, ಪ್ರತಿ ಫಲಾನುಭವಿಗಳಿಗೆ ತೆಂಗು ಬೆಳೆಯೂ ಸೇರಿದಂತೆ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಶೇ 50ರ ರಿಯಾಯಿತಿಯಲ್ಲಿ ಗರಿಷ್ಟ ಪ್ರತಿ ಹೆಕ್ಟೇರ್‌ಗೆ ರೂ 1000 ಗಳ ಔಷದಿಯನ್ನು ವಿತರಿಸಲಾಗುವುದು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಪಟ್ಟಿಯಲ್ಲಿ ಕೃಷಿ ಸಚಿವರು ಎಂದು ಇದೆ ಆದರೆ ಈ ಪ್ರಶ್ನೆಗೆ ತೋಟಗಾರಿಕೆ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ನಾನು ಇಬ್ಬರನ್ನು ಕೇಳುತ್ತಿದ್ದೇನೆ ಯಾರು ಬೇಕಾದರೂ ಉತ್ತರ ಕೊಡಬಹುದು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, 555 ಅದು ಸಿಗರೇಟ್ ಬ್ರಾಂಡ್, ಅದನ್ನು ಇವರು ಏಕೆ ಕೇಳುತ್ತಾರೆಂದು ಮೊದಲೇ ಉತ್ತರವನ್ನು ಕೊಡಬೇಕು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ತಾವು ನೋಡಿ, ಪ್ರಶ್ನೆ ಪತ್ರಿಕೆಯಲ್ಲಿ ಇದೆ ಪ್ರಶ್ನೆ 550, ಮಾನ್ಯ ಕೃಷಿ ಸಚಿವರು ಮತ್ತು ಈ ಉತ್ತರ ತೋಟಗಾರಿಕೆ ಸಚಿವರು, ಇಬ್ಬರಿಬ್ಬರಲ್ಲಿ ಯಾವ ಸಚಿವರು ಉತ್ತರವನ್ನು ಕೊಡುತ್ತಾರೆ? ಯಾರಾದರೂ ಉತ್ತರವನ್ನು ಕೊಡಬಹುದು

ಇವರಿಬ್ಬರೂ ಇಲ್ಲವೆಂದರೆ ಬೇರೆ ಯಾರಾದರೂ ಉತ್ತರವನ್ನು ಕೊಡಬಹುದು ಅವರೂ ಇಲ್ಲವೆಂದರೆ ನೀವೇ ಉತ್ತರವನ್ನು ಕೊಡಬಹುದು ನೀವು ಇಲ್ಲವೆಂದರೆ ನಾವೇ ಉತ್ತರವನ್ನು ಕೊಟ್ಟು ಕೊಳ್ಳುತ್ತೇವೆ ಇದು ಹೇಗೆ ಬೇಕಾದರೂ ಆಗಲಿ

ಅಧ್ಯಕ್ಷರು ತೋಟಗಾರಿಕೆ ಸಚಿವರು ಉತ್ತರ ಕೊಡಲಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಮಾನ್ಯ ತೋಟಗಾರಿಕೆ ಸಚಿವರ ಕಷ್ಟ ಅರ್ಥವಾಗಿದೆ ಆದರೂ ಇವತ್ತಿನ ಪರಿಸ್ಥಿತಿಯಲ್ಲಿ ಇವರು ಕೊಟ್ಟಿರುವಂಥಾ ಉತ್ತರ ಸಮಂಜಸವಾಗಿಲ್ಲ ರಾಜ್ಯದಲ್ಲಿ ಸುಮಾರು 1 13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿಗೆ ನುಸಿ ರೋಗ ತಗುಲಿದೆಯೆಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ ಇವತ್ತಿನ ಪರಿಸ್ಥಿತಿಯಲ್ಲಿ ಇವರು ಕೊಟ್ಟಿರತಕ್ಕಂಥ ಉತ್ತರ ಸಮಂಜಸವಾಗಿಲ್ಲ ರಾಜ್ಯದಲ್ಲಿ ಸುಮಾರು 1 ಕೋಟಿ 13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನ ನುಸಿ ಪೀಡೆ ರೋಗ ತಗುಲಿದೆ ಅದನ್ನು ಅವರೂ ಒಪ್ಪಿಕೊಳ್ಳುತ್ತಾರೆ ನುಸಿ ಪೀಡೆ ರೋಗದಿಂದ ತೆಂಗಿನ ಪ್ರದೇಶಗಳು ನಾಶವಾಗಿಲ್ಲ ಎಂದು ಹೇಳುತ್ತಾರೆ ನಾನು ತಮಗೆ ಹೇಳುತ್ತಿದ್ದೇನೆ ಸಾವಿರಾರು ಎಕರೆ ತೆಂಗಿನ ಪ್ರದೇಶ ಸಂಪೂರ್ಣವಾಗಿ ನಾಶವಾಗಿದೆ ಬರೀ ತೆಂಗಿನ ಕಂಬ ಮಾತ್ರನಿಂತಿದೆ ಅದರ ಲೆಕ್ಕದಲ್ಲಿ ನೀವು ಹೇಳಿರಬಹುದು ಆದರೆ, ಮೇಲೆ ಸುಳಿ ಇಲ್ಲ ಗರಿ ಇಲ್ಲ, ತೆಂಗು ಇಲ್ಲ ಪೂರ್ತಿಯಾಗಿ ಒಣಗಿ ಇಡೀ ರಾಜ್ಯದಲ್ಲಿ ತೆಂಗು ಸಂಪೂರ್ಣವಾಗಿ ನಾಶವಾಗಿದೆ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಒಂದು ಕಡೆ ತೆಂಗಿನ ಬೆಳವಣಿಗೆ ಸಂಪೂರ್ಣವಾಗಿ ನಾಶವಾಯಿತು ಸಾವಿರಾರು ಎಕರೆ ಪ್ರದೇಶದಲ್ಲಿ ತೆಂಗು ನಾಶವಾಗಿದೆ ಈಗ ಕಬ್ಬಿಗೂ ರೋಗ ಬರುತ್ತಿದೆ ಅದನ್ನು ತಡೆಯುವವರು ಯಾರು ಇಲ್ಲ ತೆಂಗಿಗೆ ಬರುತ್ತಿರುವ ರೋಗವನ್ನು ತಡೆಯುವವರು ಯಾರೂ ಇಲ್ಲ ರೇಷ್ಮೇ ಸಂಪೂರ್ಣವಾಗಿ ಸತ್ತು ಹೋಯಿತು ಆದ್ದರಿಂದ, ಇವರು ಕೊಟ್ಟಿರತಕ್ಕಂಥ ಉತ್ತರ ಸರಿಯಿಲ್ಲ ಇದನ್ನು ನಾನು ಇಷ್ಟು ಲಘುವಾಗಿ ತೆಗೆದುಕೊಳ್ಳುವುದಿಲ್ಲ ನಾನು ತಮಗೆ ಕೈಮುಗಿದು ಹೇಳುತ್ತೇನೆ, ತೆಂಗು ಬೆಳೆದಂಥ ರೈತರು ನಾಶವಾಗುತ್ತಿದ್ದಾರೆ, ಕೊಬ್ಬರಿ ನಾಶವಾಗುತ್ತಿದೆ ತುಮಕೂರು ಜಿಲ್ಲೆ ನರಕಕ್ಕೆ ಹೋಗುತ್ತದೆ ಈ ಕಡೆ ಕೋಲಾರ ಜಿಲ್ಲೆಯೂ ಹಾಗೇ ಆಗಿದೆ ಇವುಗಳನ್ನು ಉಳಿಸುವುದಕ್ಕೆ ಸರ್ಕಾರದವರು ಸಹಾಯಧನ

ಕೊಡುವಿರಾ? ಎಷ್ಟು ತೆಂಗು ನಾಶವಾಗಿದೆ ಎನ್ನುವುದನ್ನು ಲೆಕ್ಕ ಹಾಕಿ ಸಹಾಯಧನ ಕೊಡುವಿರಾ ಎನ್ನುವುದನ್ನು ದಯವಿಟ್ಟು ಹೇಳಬೇಕು

ಶ್ರೀ ಎ ಎಸ್ ಬಸವಾಜು ತಾವು ಅರಸೀಕೆರೆಯನ್ನು ಬಿಟ್ಟುಬಿಟ್ಟರಿ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ತೆಂಗಿನ ನುಸಿ ರೋಗದಿಂದ ತೆಂಗಿನ ಇಳುವರಿಯಲ್ಲಿ ಬಹಳಷ್ಟು ಹಾನಿಯಾಗಿದೆ ಎಲೆ ತಿನ್ನುವಂಥ ಕೀಟದ ಬಾಧೆಯಿಂದ ತೆಂಗಿನ ಮರ ಹಾಳಾಗಿದೆ ನುಸಿ ರೋಗದಿಂದ ತೆಂಗಿನ ಫಸಲಿನಲ್ಲಿ ತೊಂದರೆಯಾಗಿದೆ ಹಾಗಾಗಿ ಫಸಲಿನಲ್ಲಿ ಮಾತ್ರ ನಷ್ಟ ಉಂಟಾಂಗಿದೆ ಎಂದು ಕೊಟ್ಟಿದ್ದೇವೆ 1998ರಲ್ಲಿ ಈ ನುಸಿ ರೋಗ ಬಂತು ಅದಕ್ಕೆ ನಮ್ಮ ಸರ್ಕಾರ ಒಂದು ಎಕರೆಗೆ ಅಂದರೆ ಉಳಿದ ವ್ಯವಸ್ಥೆಗಳಿಗೆ ಮತ್ತು ರೈತರಿಗೆ 17,500 ರೂಪಾಯಿಗಳನ್ನು ಪ್ರತಿವರ್ಷ ಕೊಡುತ್ತಿದ್ದು, ಒಟ್ಟಿಗೆ ಎರಡು ವರ್ಷಗಳಿಗೆ ಎಂದು ಹೇಳಿ ಸುಮಾರು 35 ಸಾವಿರ ರೂಪಾಯಿಗಳವರೆಗೆ ಉತ್ತೇಜನವಾಗಿ ಕೊಡತಕ್ಕಂಥಾದ್ದಕ್ಕೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ ಕಳೆದ 2–3 ವರ್ಷ ಗಳಿಂದೀಚೆಗೆ ಹೆಚ್ಚು ಮಳೆಯಾಗುತ್ತಿರುವುದರಿಂದ ರಾಜ್ಯಕ್ಕೆ ಅನು ಕೂಲವಾಗುತ್ತಿದೆ ತೆಂಗಿನ ರೋಗ ಈಗ ಮೊದಲಿನಷ್ಟು ಕಾಣುತ್ತಿಲ್ಲ ಅದು ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಆದರೂ ಸಹ, ಅದರ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ನಿರ್ವಹಣೆ ಮಾಡಬೇಕು ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ನಾವು ವಹಿಸಬೇಕಾಗಿದೆ ಈ ರೋಗವನ್ನು ತಡೆಗಟ್ಟಲು ನಮ್ಮ ಅಧಿಕಾರಿಗಳು ಸಾಕಷ್ಟು ಪ್ರಯತ್ನ ಪಟ್ಟಿದ್ದರೂ, ತೆಂಗಿನ ಕವಚದಲ್ಲಿರುವಂಥ ಹುಳವನ್ನು ನಾಶ ಮಾಡಲು ಆಗಿಲ್ಲ ಆ ಕಾರಣದಿಂದಾಗಿ ಈ ರೋಗ ಇವತ್ತಿಗೂ º ÈÆÃ ÃnUÉ§ gÀw®è gÉÆÃvÀÛÂ mass ಆಗಿ ಔಷದಿಯನ್ನು ಹೊಡೆದರೆ ಮಾತ್ರ ಇದಕ್ಕೆ ಅನುಕೂಲವಾಗಬಹುದು ತೆಂಗಿನ ಮರಗಳು ಬಹಳ ಎತ್ತರವಿರುವುದರಿಂದ, ಔಷದಿಗಳನ್ನು ಕೊಟ್ಟರು ಸಹ ಔಷದಿಯನ್ನು ಹೊಡೆಯಲು ರೈತರಿಗೆ ಬಹಳ ತೊಂದರೆಯಿದೆ ಸದಸ್ಯರು ಈ ವಿಷಯದ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ ಅದರ ಬಗ್ಗೆ ಆಲೋಚನೆಯನ್ನು, ಚಿಂತನೆಯನ್ನು ಸರ್ಕಾರ ಮಾಡುತ್ತದೆ

ಅಧ್ಯಕ್ಷರು ರೈತರು ಔಷದಿಯನ್ನು mass ಆಗಿ ಹೊಡೆಯಬೇಕು ಎಂದು ಹೇಳುತ್ತೀರಿ ಸರ್ಕಾರದವರೇ ಔಷದಿಯನ್ನು ಸಿಂಪರಣೆ ಮಾಡಿಸಿ ಅದನ್ನು ಸರ್ಕಾರದವರೇ ಮಾಡಬಹುದಲ್ಲ ಬೇರೆಬೇರೆ ಕಾರಣಗಳಿಗೋಸ್ಕರ ಒಬ್ಬ ರೈತ ಮಾಡುತ್ತಾನೆ ಒಬ್ಬ ರೈತ ಮಾಡುವುದಿಲ್ಲ ಹಾಗಾಗಿ, ಅದನ್ನು ಸರ್ಕಾರದವರೇ ಮಾಡಬಹುದಲ್ಲ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಸರ್ಕಾರದವರು ಮಾಡಿದರೆ ವಯಮಾನಕವಾಗಿ ಮಾಡಬೇಕಾಗುತ್ತದೆ ಆಗ ಬೇರೆಬೇರೆ ಬೆಳೆಗಳಿಗೆ ತೊಂದರೆಯಾಗುತ್ತದೆ

ಅಧ್ಯಕ್ಷರು ಇದರಿಂದಾಗಿ ಸಾವಿರಾರು ರೂಪಾಯಿಗಳು ರೈತರಿಗೆ ನಷ್ಟವಾಗುತ್ತದೆ 5-6 ವರ್ಷಗಳಿಂದ ಸರ್ಕಾರಗಳು ಸುಮ್ಮನೆ ಕಾರನ ಹೇಳಿಕೊಂಡು ಹೋಗುತ್ತಿವೆ ಅದರ ಬದಲು ನೀವೆ ಮಾಡಿ ಅದರಿಂದ ಕಂಟ್ರೋಲ್ ಆಗುವುದಾದರೆ ಮಾಡಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೇ, ವಾಟಾಳ್ ರವರು ಎರಡು ಪ್ರಶ್ನೆಗಳನ್ನು raise ಮಾಡಿದ್ದಾರೆ ನುಸಿ ಪೀಡೆ ಯಾವ ಕಾಲದಿಂದ ಯಾವ ಕಾಲಕ್ಕೆ ಹೋಗುತ್ತದೆ, ಯಾವ ಕಾಲದಲ್ಲಿ ಉಲ್ಬಣವಾಗುತ್ತದೆ, ಅದರ cycle ಏನು ಎನ್ನುವುದನ್ನು ಸನ್ಮಾನ್ಯ ಸಚಿವರು ಅರ್ಥ ಮಾಡಿ ಕೊಳ್ಳಬೇಕು ಔಷದಿ ಕಟ್ಟಿಯೂ ಆ ಮರಗಳನ್ನು ಹುಷಾರು ಮಾಡಲಿಕ್ಕೆ ಆಗಲಿಲ್ಲ ಆದರೆ, ಔಷದಿಯಿಂದ ಬೇಕಾದಷ್ಟು ಜನರ ಜೇಬು ತುಂಬಿಕೊಂಡಿತು ಎಂದು ನಾವು ಹಿಂದೆ ಇಲ್ಲೇ ಗಲಾಟೆ ಮಾಡಿದ್ದೇವೆ ಅದರಿಂದ ಬೇರೆ ಬೇರೆ ಆಗಿ effect ಆಗಿ stem bleeding ಆಗಿ decay ಆಗುವುದಕ್ಕೆ ಶುರು ಅಗಿ, ಬಹಳ ಮರಗಳು ಹೋಗಿರುವುದು ಸತ್ಯ ನಾವು ತೆಂಗು ಬೆಳೆಯುವವರು ತೆಂಗಿನ ಬೆಳೆ ಹೋಗೆ ಇಲ್ಲ ಎಂದು ತಾವು ಹೇಳಬಾರದು ನಮ್ಮೆಲ್ಲರಿಗಿಂತ ಜಾಸ್ತಿ affected ಎಂದರೆ ಕಡೂರು ತಾಲ್ಲೂಕು ಅದು ಬಿಟ್ಟರೆ ಅರಸೀಕೆರೆ, ಚಿಕ್ಕನಾಯಕನಲ್ಲಿ, ಚಾಮರಾಜನಗರಗಳಲ್ಲಿ ಆಗಿದೆ ಪೂರ್ಣವಾಗಿ ಮರಮರಗಳೇ ನಾಶವಾಗಿವೆ ಒಂದು ಕಡೆ ಆ ರೀತಿಯಾಗಿದ್ದರೆ, ಇನ್ನೊಂದು ಕಡೆ, ಕಾಯಿ ಚೆನ್ನಾಗಿ ಬರುವುದಿಲ್ಲವಾದ್ದರಿಂದ, ನುಸಿ ಪೀಡೆಯಿಂದ affect ಆದ ಕೊಬ್ಬರಿ,

ಕಾಯಿಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲಾಗುತ್ತಿಲ್ಲ ಅಷ್ಟೇ ಅಲ್ಲ ರೇಟ್ ಸಹಾ ಬಿದ್ದುಹೋಗಿದೆ ಹೋದ ಸಲವೇನೂ ನೀವು ನಫೆಡ್ ತಂದು ಕೊಂಡುಕೊಳ್ಳುವುದಕ್ಕೆ ಶುರು ಮಾಡಿದಿರಿ ಧಾರಣೆ 3,840 ರೂಪಾಯಿಗಳಿಂದ ಕೆಳಗೆ ಹೋದ ತಕ್ಷಣ ತಾವು market intervention ಮಾಡಬೇಕು ಅದನ್ನು ಇವತ್ತಿನವರೆಗೂ ಮಾಡಿಲ್ಲ ಅದನ್ನು ಯಾವತ್ತು ಮಾಡುತ್ತೀರಿ? ಎರಡನೆಯದು, ವಾಟಾಳರು ಕೇಳಿದ ಹಾಗೆ, ಇವತ್ತು ಕಬ್ಬು ಬೆಳೆದವರಿಗೆ ನಷ್ಟವಾಯಿತು ಕಬ್ಬು ಬೆಳೆಗೆ ನೀವು ಏನೂ ಮಾಡಲಿಕ್ಕಾಗಲಿಲ್ಲ ಕಬ್ಬು ಬೆಳೆದಂಥವರಿಗೆ ಮನೆಗೆ ಇಷ್ಟು ಎಂದೋ, ಎಕರೆ ಇಷ್ಟು ಎಂದೋ ಪರಿಹಾರ ಕೊಟ್ಟಹಾಗೆ ನೀವು ತೆಂಗು ಬೆಳೆಗು ಕೊಡಿ ನೀವು market intervention ಮಾಡದಿದ್ದರೂ ಪರವಾಗಿಲ್ಲ ಆದರೆ ಒಂದು ಮರಕ್ಕೆ 50 ರೂಪಾಯಿ ಎಂದೊ ಅಥವಾ 100 ರೂಪಾಯಿ ಎಂದೂ ನಗದಿ ಮಾಡಿಕೊಡಿ ಅವರು ಔಷಧಿಯನ್ನಾದರೂ ಹೊಡೆದುಕೊಳ್ಳಲಿ, ಮಾರ್ಕೆಟ್ ಗಾದರೂ ತೆಗೆದುಕೊಂಡು ಹೋಗಲಿ ಈ ರೋತಿ ಏನಾದರೂ ಮಾಡಿ ಆ ರೈತ ಬದುಕುವಂಥ ಒಂದು ಸ್ಥಿತಿಯನ್ನು ನಿರ್ಮಾಣ ಮಾಡಬೇಕು ಇವರು ಕೊಟ್ಟಂಥ 600 ರೂಪಾಯಿಗಳ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿಬಿಟ್ಟಿದ್ದರೆ ಇವತ್ತು ನಾವ್ಯಾರೂ ಮಾತನಾಡುತ್ತಿರಲಿಲ್ಲ ಯಾರ‍್ಯಾರು ಕೊಬ್ಬರಿ ಸ್ಟಾಕ್ ಮಾಡಿಕೊಂಡಿದ್ದರೋ ಅವರೆಲ್ಲ ಮಾರುಕಟ್ಟೆಗೆ ತಂದುಬಿಟ್ಟು, ಯಾರ‍್ಯಾರದೋ ಹೆಸರಿನಲ್ಲಿ ಪಹನ ಕೊಟ್ಟುಬಿಟ್ಟು ಸಬ್ಸಿಡಿ claim ಮಾಡುವ ಹಾಗಾಯಿತು ಆವತ್ತೂ ನಾವು ಹೇಳಿದವು

ಅಧ್ಯಕ್ಷರು ಭಾರೀ ಮೋಸ ಅದು

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಒಂದು ಮರಕ್ಕೆ 50 ರೂಪಾಯಿಗಳನ್ನು ಕೊಟ್ಟರೆ ಒಂದು ಎಕರೆಗೆ 2,400 ರೂಪಾಯಿಗಳು ಬರುತ್ತದೆ ಏನಾದರೂ ಮಾಡಿ ಅದನ್ನು ಈಗ ಕೂಡಿ ನೀವೇನು 8 ಎಕರೆಗೆ ಕೊಡುತ್ತೀರಿ, 30 ಕ್ವಿಂಟಾಲ್ಗೆ ಕೊಡುತ್ತೀರಿ, ಅಷ್ಟಕ್ಕೇ ಮಾಡಿಕೊಂಡು ಎಂದು ಕೇಳಿದವೆ ಅದನ್ನು ಕೊಡಲಿಲ್ಲ ಈಗಾಲಾದರೂ ಯೋಚನೆ ಮಾಡಿ ಅಲ್ಲಿ ಕೊಡುವ ಬದಲು ಆಗಿ ಕೊಡಲಿಕ್ಕೆ ಒಂದು ವ್ಯವಸ್ಥೆ ಮಾಡಿ

ಶ್ರೀ ಬಿ ನಂಜಾಮರಿ ಮಾನ್ಯ ಅಧ್ಯಕ್ಷರೇ, ತಿಪಟೂರು ತಾಲ್ಲೂಕಿನಲ್ಲಿ ಮಳೆ ಇಲ್ಲದೇ ಮರಗಳು ಬಿದ್ದು ಗೋಗಿವೆ ಅಲ್ಲಿ ಇವತ್ತು ಕುಡಿಯುವುದಕ್ಕೆ ಸಹ ನೀರು ಇಲ್ಲದ ಹಾಗಾಗಿದೆ ಮಳೆ ಜಾಸ್ತಿಯಾಗಿ ರೋಗ ಹೋಗುತ್ತಿದೆ ಎಂದು ಮಾನ್ಯ ಸಚಿವರು ಹೇಳಿದರು ತೆಂಗಿನ ಬೆಳೆಯಲ್ಲಿ ಇಡೀ ರಾಜ್ಯದಲ್ಲಿ ದೊಡ್ಡ ಕ್ಷೇತ್ರ ತಿಪಟೂರು ಇವತ್ತು ಅಲ್ಲಿ ತೆಂಗಿನ ಬೆಳೆ ಪೂರ್ಣವಾಗಿ ನಾಶವಾಗಿ ಹೋಗಿದೆ ಸಚಿವರು ಆ ತಾಲ್ಲೂಕಿಗೆ ಬೇಟಿ ನೀಡಿ, ತೆಂಗಿನ ಮರಗಳ ಪರಿಸ್ಥಿತಿಯನ್ನು ನೋಡಿ, ಆ ರೈತರಿಗೆ ಏನು ಪರಿಹಾರ ಕೊಡಬೇಕು ಎನ್ನತಕ್ಕಂಥಾದ್ದನ್ನು ವಿಚಾರ ಮಾಡಿ, ದಯವಿಟ್ಟು ಪರಿಹಾರವನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಕೇಳುತ್ತೇನೆ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ 2001ರಲ್ಲಿ ಸುಮಾರು 3 ಲಕ್ಷ ಹೇಕ್ಟೇರ್ ಪ್ರದೇಶದಲ್ಲಿನ ಬೆಳೆ ರೋಗಕ್ಕೆ ತುತ್ತಾಗಿತ್ತು ಆಗ ಸುಮಾರು 4 ಕೋಟಿ 32 ಲಕ್ಷ ತೆಂಗಿನಮರಗಳಿಗೆ ರೋಗ ಬಿದ್ದಿತ್ತು 2006-07ರಲ್ಲಿ, ತಮಗೆ ಉತ್ತರ ಕೊಟ್ಟಿರುವಂತೆ, 1ಕೋಟಿ 13 ಲಕ್ಷ ಹೇಕ್ಟೇರ್ ಪ್ರದೇಶದಲ್ಲಿನ ಬೆಳೆ ರೋಗಪೀಡಿತವಾಗಿದೆ ಅಂದರೆ, ಈಗ ರೋಗ ಕಡಿಮೆಯಾಗಿದೆ ನಮ್ಮ ಅಂದಾಜಿನ ಪ್ರಕಾರ 1 ಕೋಟಿ 70 ಲಕ್ಷ ಮರಗಳಿಗೆ ಈ ರೋಗದ ಬಾದೆಯಿದೆ ತಾವು ಹೇಳಿದಂತೆ, ಅನೇಕ ಕಡೆಗಳಲ್ಲಿ ಮರಗಳು ಹಾಳಾಗಿರುವುದನ್ನು ನಾವು ಒಪ್ಪುತ್ತೇವೆ ರೈತರಿಗೆ ನೇರವಾಗಿ ಹಣ ಕೊಡಬೇಕೆಂದು ತಾವು ಹೇಲಿದಿರಿ 2 ವರ್ಷಗಳಿಗೆ ಅದಕ್ಕೆ ಬೇಕಾಗತಕ್ಕಂಥ ಎಲ್ಲ ಸವಲತ್ತುಗಳ ಜೊತೆಗೆ ನಾವು ಕೊಡತಕ್ಕಂಥ 35 ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದನ್ನು ಮುಂದಿನ ದಿನಮಾನಗಳಲ್ಲಿ ಪರಿಶೀಲನೆ ಮಾಡಿ ತಾವು ಹೇಳಿದ ಹಾಗೆ, ಅದನ್ನು ರೈತರಿಗೆ ನೇರವಾಗಿ ಮುಟ್ಟಿಸಬೇಕಾದಂಥ ಕೆಲಸವನ್ನು ನಾವು ಮಾಡಬೇಕಾಗಿದೆ ಅದರ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತೇವೆ ಎಲ್ಲೆಲ್ಲಿ ಮಳೆ ಜಾಸ್ತಿಯಾಗಿದೆ ಅಲ್ಲಿ ಮಳೆ ಜಾಸ್ತಿಯಾದ ಹಾಗೆ ರೋಗ control ಗೆ ಬರುತ್ತಿದೆ

ಶ್ರೀ ಜಿ ವಿ ಶ್ರೀ ರಾಮರೆಡ್ಡಿ ನಮ್ಮಲ್ಲಿ ಮಳೆಯೇ ಇಲ್ಲ ಕೋಲಾರ ಜಿಲ್ಲೆಯಲ್ಲಿ ಎಲ್ಲ ಬೆಳೆಗಳು ಸಂಪೂರ್ಣವಾಗಿ ಹೋಗಿಬಿಟ್ಟಿವೆ ತೆಂಗಿನ ಮರಗಳೂ ಹೋಗಿಬಿಟ್ಟಿವೆ, ಎಲ್ಲ ಬೆಳೆಗಳೂ ಹೋಗಿಬಿಟ್ಟಿವೆ ಆದರೆ ಇವರು ಏನೂ ಹೋಗಿಯೇ ಇಲ್ಲ ಎಂದು ಹೇಳುತ್ತಿದ್ದಾರೆ

ಅಧ್ಯಕ್ಷರು ರೆಡ್ಡಿಯವರೇ, ಎಲ್ಲ ಕಡೆಗಳಲ್ಲಿಯೂ ಹೋಗಿದೆ ಕೆಲವು ಮೂಲಬೋತವಾದ ವಿಚಾರಗಳು ಇದರಲ್ಲಿ ಅಡಗಿದೆ ತೆಂಗಿನ ಬೆಳೆಗಾರರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ 5–6 ಜಿಲ್ಲೆಗಳಲ್ಲಿ ತೆಂಗು ಬೆಳೆಗಾರರಿದ್ದಾರೆ ಅವರು ನಷ್ಟಕ್ಕೆ ಒಳಗಾಗಿದ್ದಾರೆ ಎಂದು ಎಲ್ಲರೂ ಹೇಳಿದ್ದಾರೆ ಆದ್ದರಿಂದ, ಅದರ ಬಗ್ಗೆ ಅರ್ಧ ಗಮಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಒಂದು ನಮಿಷ

ಅಧ್ಯಕ್ಷರು ಅದನ್ನು ಬಿಟ್ಟು ಹೀಗೆ ಮುಂದುವರಿಸುತ್ತಾ ಹೋದರೆ ಇದು ಮುಗಿಯುವುದಿಲ್ಲ ಸಮಸ್ಯೆಯನ್ನು ಕೂಲಂಕುಷವಾಗಿ ಚರ್ಚೆ ಮಾಡಿ ಏನಾದರೂ ಪರಿಹಾರ ಕಂಡುಕೊಳ್ಳಬೇಕಾಗಿದ್ದಾರೆ ಈಗ ಇದನ್ನು ನಲ್ಲಿಸಿ ಸುಮ್ಮನೆ ಏಕೆ ಮಾತನಾಡುತ್ತೀರಿ

ಶ್ರೀ ವಾಟಾಳ್ ನಾಗರಾಜ್ ತಾವು ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ, ಸರಿ ಹಿಂದೆಯೂ ಇದೇ ರೀತಿಯ ಚರ್ಚೆ ಇಲ್ಲಿ ನಡೆಯಿತು ಈ ಸದನದಲ್ಲಿ ಅರ್ಧ ಗಮಟೆ ಚರ್ಚೆಯಾಯಿತು ಆಗ ಮಾಧುಸ್ವಾಮಿಯವರು ಮಾತನಾಡಿದರು, ನಾನು ಮಾತನಾಡಿದೆ ತಾವು ಕರುಣೆ ಇಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟದ್ದೀರಿ ಈ ಸರ್ಕಾರ ನಜವಾಗಲೂ ಇದೇಯೇ? ಮಾನ್ಯ ಸಂಸದೀಯ ಸಚಿವರು ಈಗ ಇಲ್ಲಿದ್ದಾರೆ, ಹಣಕಾಸು ಸಚಿವರಿದ್ದಾರೆ ಆದ್ದರಿಂದ ಕೇಳುತ್ತಿದ್ದೇನೆ, ಈ ಸರ್ಕಾರ ಇದೆಯೇ? ಇಲ್ಲವೇ? ಯಾರಿದ್ದಾರೆ? ಹೇಳುವವರಿದ್ದಾರೆಯೇ? ಕೇಳುವವರಿದ್ದಾರೆಯೇ? ನಮಗೂ ಕೇಳಿ ಕೇಳಿ ಸಾಕಾಗಿದೆ

ಶ್ರೀ ಚಲುವರಾಯಸ್ವಾಮಿ ಸರ್ಕಾರದ ಬಗ್ಗೆ ಅವರು ಹೇಳುವುದಿದ್ದರೆ ನೇರವಾಗಿ ಹೇಳಬೇಕು ಸರ್ಕಾರ ಸತ್ತು ಹೋಗಿದೆಯೇ ಎಂದು ಅವರು ಹೇಳಿದಂಥ ಪದವನ್ನು ವಾಪಸ್ ತೆಗೆದುಕೊಳ್ಳಬೇಕು

ಅಧ್ಯಕ್ಷರು ತಾವು ಹಿರಿಯ ಸದಸ್ಯರು ಆ ರೀತಿ ಪದಗಳನ್ನು ಉಪಯೋಗ ಮಾಡಬಾರದು ಇದು ಸರಿಯಲ್ಲ ತಾವು ಆ ರೀತಿ ಇಷ್ಟ ಬಂದಂತೆ ಪದಗಳನ್ನು ಉಪಯೋಗಿಸಿದರೆ ಹೇಗೆ?

ಶ್ರೀ ಹೆಚ್ ಸಿ ಬಾಲಕೃಷ್ಣ ತಾವು ಹಿರಿಯ ಸದಸ್ಯರು ತಮ್ಮ ನ್ನು ಇಲ್ಲಿ ಸರಿಯಾಗಿ ಬಳಸಬೇಕು ಸರ್ಕಾರವೇನು? ಬೇವರ್ಸಿಯಾಗಿಲ್ಲ ಅವರು ಗೌರವಯುತವಾಗಿ ಮಾತನಾಡುವುದನ್ನು ಮೊದಲು ಕಲಿತುಕೊಳ್ಳಬೇಕು

(ಗೊಂದಲ)

ಅಧ್ಯಕ್ಷರು ಅದೆಲ್ಲವನ್ನು ಕಡತದಿಂದ ತೆಗಿಸಿ ಹಾಕುತ್ತೇನೆ ಪದಗಳನ್ನೇಲ್ಲಾ ಕಡತದಿಂದ ತೆಗೆದುಹಾಕಿ ಈಗ ಮುಂದಿನ ಪ್ರಶ್ನೆಗೆ ಹೋಗುತ್ತೇನೆ ಶ್ರೀ ಸೋಮಣ್ಣ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಸರ್ಕಾರಕ್ಕೆ ತಂದೆ ಇಲ್ಲ, ತಾಯಿ ಇಲ್ಲ, ಅಣ್ಣ ಇಲ್ಲ ಎಂದರೆ ತಪ್ಪಲ್ಲ ಸರ್ಕಾರ ಸತ್ತು ಹೋಗಿದೆ ಎಂದರೆ ಅದು ಅದರ ಅರ್ಥ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್ ರವರೆ, ನೀವು ಈ ರೀತಿ ಮಾಡಿದರೆ ಹೇಗೆ, ದಯಮಾಡಿ ಕುಳಿತುಕೊಳ್ಳಿ ಈ ವಿಷಯದ ಬಗ್ಗೆ ಗಂಬೀರವಾಗಿ ಚರ್ಚೆಯಾಗಬೇಕು, ಅದಕ್ಕೆ ಅವಕಾಶ ಮಾಡಿ ಕೊಡುತ್ತೇನೆಂದರೂ ಏಕೆ ಈ ರೀತಿ ಮಾಡುತ್ತೀರಿ? ಆ un parlımentary ಪದಗಳನ್ನೇಲ್ಲಾ ಕಡತದಿಂದ ತೆಗೆಸಿ ಹಾಕುತ್ತೇನೆ ಕುಳಿತುಕೊಳ್ಳಿ ಹಿರಿಯ ಸದಸ್ಯರು ಆ ರೀತಿಯಲ್ಲಿ ಮಾತನಾಡಬಾರದು ಈ un-parlımentary ಪದಗಳನ್ನೇಲ್ಲಾ ಕಡತದಿಂದ ತೆಗೆದುಬಿಡಿ ಸೋಮಣ್ಣ ತಾವು ಪ್ರಶ್ನೆ ಕೇಳಿ

ಶ್ರೀ ವಾಟಳ್ ನಾಗರಾಜ್ ನನಗೆ ನೋವಾಗಿದೆ ಸದನದ ಬಾವಿಗೆ ಬಿದ್ದೂ ಬಿದ್ದೂ ಸಾಕಾಗಿದೆ ಈ ವಿಚಾರದಲ್ಲಿ ಆ ರಸ್ತೆಯಲ್ಲಿ ಮಲಗಿಬಿಡುತ್ತೇನೆ ಇದರಲ್ಲಿ ಅನ್ಯಾಯವಾಗಿದೆ ಇದೇನೆಂದು ನನಗೆ ಅರ್ಥವಾಗಲಿಲ್ಲ ಅಲ್ಲಿ ರೈತರು ಸಾಯುತ್ತಿದ್ದಾರೆ ಅದರ ಬಗ್ಗೆ ತಮಗೆ ಯಾವುದೇ ರೀತಿಯಲ್ಲೂ ಚಿಂತನೆ ಇಲ್ಲ

ಅಧ್ಯಕ್ಷರು ಸೋಮಣ್ಣನವರಿಗೆ ಕರೆದಿದ್ದೇನೆ ತಾವು ಕುಳಿತುಕೊಳ್ಳಿ ತಮ್ಮ ವಿಚಾರದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಏಕೆ ಈ ರೀತಿ ಮಾಡುತ್ತೀರಿ ಕುಳಿತುಕೊಳ್ಳಿ ಸೋಮಣ್ಣ ತಾವು ಪ್ರಶ್ನೆ ಕೇಳಿ

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್ ರವರು ಸದನದ ದಾರಿಯಲ್ಲಿ ಬಂದು ಕುಳಿತರು)

ಶ್ರೀ ಆರಗಜ್ಞಾನೇಂದ್ರ, ಇದು ಪ್ರಚಾರ ಪಡೆಯುವುದೋ ಹೇಗೂ?

ಅಧ್ಯಕ್ಷರು ಅದು ಆಯಿತು ಮುಂದಿನ ಪ್ರಶ್ನೆಗೆ ಹೋಗೋಣ ಕುಳಿತುಕೊಳ್ಳಿ ವಿ ಸೋಮಣ್ಣ

(ಗೊಂದಲ)

ಬಿ ಪಿ ಎಲ್ ಪಡಿತರ ಚೀಟಿ

64 (401) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಅನರ್ಹರು ಬಿಪಿಎಲ್ ಪಡಿತರ ಚೀಟಿಗಳನ್ನು ಪಡೆದು ಕೊಂಡಿರುವುದು ಪತೆಯಾಗಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಜನ ಅನರ್ಹರು ಬಿಪಿಎಲ್ ಚೀಟಿ ಪಡೆದಿದ್ದಾರೆಂದು ಅಂದಾಜು ಮಾಡಲಾಗಿದೆ,

ಇ) ಇವರ ಪೈಕಿ, ಎಷ್ಟು ಜನ ಅನರ್ಹರು ಬಿಪಿಎಲ್ ಪಡಿತರ ಚೀಟಿಗಳನ್ನು ವಾಪಸ್ಸು ಮಾಡಿರುತ್ತಾರೆ?

ಈ) ಎಲ್ಲಾ ಅರ್ಹರಿಗೆ ಬಿಪಿಎಲ್ ಕಾರ್ಡುಗಳನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಗೋವಿಂದ ಎಂ ಕಾರಜೋಳ

ಅ) ಹೌದು

ಆ) ರಾಜ್ಯದಲ್ಲಿ ಮನೆ ಮನೆ ಸಮೀಕ್ಷೆಯನ್ನು ನಡೆಸಿ ತಾತ್ಕಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದ್ದು, ಅವುಗಳ ಪೈಕಿ 1,30,200 ಅನರ್ಹರು ಬಿಪಿಎಲ್ ಪಡಿತರ ಚೀಟಿಯನ್ನು ಪಡೆದಿದ್ದಾರೆಂದು ಗುರುತಿಸಲಾಗಿದೆ ಈ ರೀತಿ ಅನರ್ಹರನ್ನು ಗುರುತಿಸುವ ಪ್ರಕಿಯೆ ಜಾರಿಯಲ್ಲಿರುತ್ತದೆ

ಇ) ಈ ಪೈಕಿ 29,046 ಅನರ್ಹರು ಬಿಪಿಎಲ್ ಪಡಿತರ ಚೀಟಿಗಳನ್ನು ವಾಪಸ್ಸು ಮಾಡಿರುತ್ತಾರೆ

ಈ) ಮನೆ ಮನೆ ಸಮೀಕ್ಷಾ ಗುರುತಿಸಲಾದ ಅದು ಫಲಾನುಭವಿಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ

ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ ಈ ಹಿಂದಿನ 7 ನಗರಸಭೆ ವ್ಯಾಪ್ತಿಯಲ್ಲಿ ಪಡಿತರ ಚೀಟಿ ಹೊಂದಿಲ್ಲದಿರುವ ಕುಂಟುಂಬಗಳಿಗೆ ಪ್ರಾರಂಭಿಸಿ 6,20,935 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಈ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಕುಟುಂಬಗಳಿಗೆ ಹೊಸದಾಗಿ ಅರ್ಹತೆಗನುಗುಣವಾಗಿ ಪಡಿತರ ಚೀಟಿಗಳನ್ನು ನೀಡಲಾಗುವುದು

ಶ್ರೀ ವಿ ಸೋಮಣ್ಣ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಇದೊಂದು ಗಂಬೀರವಾದ ಪ್ರಶ್ನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಗೌರವಾನ್ವಿತ ಸದಸ್ಯರಾದ ವಾಟಾಳ್ ನಾಗರಾಜ್ ರವರು ರಸ್ತೆಯಲ್ಲಿ ಮಲಗಿಬಿಟ್ಟಿದ್ದಾರೆ ದಯಮಾಡಿ ಅವರನ್ನು ಕರೆದುಕೊಂಡು ಬರುವ ಪ್ರಯತ್ನ ಮಾಡಬೇಕು

ಅಧ್ಯಕ್ಷರು ಅವರು ಅಲ್ಲಿ ಕುಳಿತಿದ್ದಾರೆ ಬಿಡಿ ದಯಮಾಡಿ ಅವರು ಪ್ರಶ್ನೆ ಕೇಳಲಿ ಅವಕಾಶ ಮಾಡಿ ಕೊಡಿ ಕೆಲವು ಸದಸ್ಯರು ಅವರಿಗೆ ಇಷ್ಟ ಬಂದಂತೆ ನಡೆದುಕೊಂಡರೆ ನಾವೇನೂ ಮಾಡಲು ಸಾಧ್ಯವಾಗುವುದಿಲ್ಲ ದಯಮಾಡಿ ಕುಳಿತುಕೊಳ್ಳಿ ನಾನು ಎಲ್ಲದಕ್ಕೂ ಪ್ರಯತ್ನ ಮಾಡಲು ಆಗುವುದಿಲ್ಲ ಸೋಮಣ್ಣನವರನ್ನು ಕರೆದಿದ್ದೇನೆ ಕುಳಿತುಕೊಳ್ಳಿ ಅವರು ಅಲ್ಲಿ ಹೋಗಿ ಕುಳಿತಿದ್ದಾರೆ ಅದಕ್ಕೆ ಏನು ಮಾಡಲು ಆಗುತ್ತದೆ

ಶ್ರೀ ವಿ ಸೋಮಣ್ಣ ಅನರ್ಹ ಬಿ ಪಿ ಎಲ್ ಪಡಿತರ ಚೀಟಿಗಳು ಪತ್ತೆಯಾಗಿದೆಯೇ ಎಂದು ಕೇಳಿದ್ದಕ್ಕೆ ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ 1,30,266 ಅನರ್ಹರು ಬಿ ಪಿ ಎಲ್ ಪಡಿತರ ಚೀಟಿಯನ್ನು ಪಡಿದಿದ್ದಾರೆಂದು ಹೇಳಿದ್ದಾರೆ ಅದರಲ್ಲಿ ಕೇವಲ 29,046 ಅನರ್ಹರು ಮಾತ್ರ ಪಡಿತರ ಚೀಟಿಯನ್ನು ವಾಪಸ್ ಕೊಟ್ಟಿದ್ದಾರೆಂದು ಹೇಳಿದ್ದಾರೆ ಬಡವರ ಆಹಾರಧಾನ್ಯವನ್ನು ಕಸಿಯತಕ್ಕ ಅನರ್ಹ ಪಡಿತರ ಚೀಟಿದಾರರು 1,30,266 ಎಂದು ಹೇಳಿದ್ದಾರೆ ಈ 1,30,266 ಅನರ್ಹರೇನು ಪಡಿತರ ಚೀಟಿಯನ್ನು ಪಡೆದಿದ್ದಾರೆ ಅವರಲ್ಲಿ 29 ಸಾವಿರ ಜನರು ಮಾತ್ರ ವಾಪಸ್ ಮಾಡಿದ್ದಾರೆ ಉಳಿದವರ ಬಗ್ಗೆ ನೀವು ಯಾವ ರೀತಿಯಾಗಿ ಕ್ರಮ ತೆಗೆದು ಕೊಳ್ಳುತ್ತೀರಿ? ಎಲ್ಲಾ ಅರ್ಹರಿಗೆ ಬಿ ಪಿ ಎಲ್ ಕಾರ್ಡುಗಳನ್ನು ವಿತರಣೆ ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರದಲ್ಲಿ ಮನೆ ಮನೆ ಸಮೀಕ್ಷೆಯನ್ನು ಮಾಡಿ ಫಲಾನುಭವಿಗಳಿಗೆ ತಾತ್ಕಾಲಿಕ ಪಡಿತರ ಚೀಟಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ ತಾತ್ಕಾಲಿಕ ಪಡಿತರ ಚೀಟಿ ಎಂದರೆಏನು? ಶಾಶ್ವತ ಪಡಿತರಚೀಟಿ ಎಂದರೆಏನು? ಈ ಹಿಂದೆ ಪಡಿತರ ಚೀಟಿ ಏನಿತ್ತು ಅದಕ್ಕೆ ಯಾವ ರೀತಿಯಾಗಿ ಬಿ ಪಿ ಎಲ್ ಕಾರ್ಡಿನ ವ್ಯವಸ್ಥೆ ಮಾಡುತ್ತೀರಿ? ನಮ್ಮ ಸರ್ಕಾರ ಹೇಗೆ ತಾತ್ಕಾಲಿಕವೆಂದು ಇದೆಯೋ ಅದೇ ರೀತಿ ಇದಕ್ಕೂ ತಾತ್ಕಾಲಿಕವೆಂದು ಮಾಡಿಕೊಂಡಿದ್ದೀರ? ಇದಲ್ಲದೇ ಬೆಂಗಳೂರು ನಗರ ಜಿಲ್ಲೆಯ ಈ ಹಿಂದಿನ 7 ನಗರ ಸಭೆ ವ್ಯಾಪ್ತಿಯಲ್ಲಿ ಪಡಿತರ ಚೀಟಿ ಹೊಂದಿಲ್ಲದಿರುವ ಕುಟುಂಬಗಳಿಗೆ ಪಡಿತರ ಚೀಟಿ ನೀಡುವ ಉದ್ದೇಶದಿಂದ 75 ಕೇಂದ್ರಗಳನ್ನು

ಪ್ರಾರಂಭಿಸಿ 6,20,935 ಅರ್ಜಿಗಳು ಬಂದಿದೆ ಎಂದು ಹೇಳಿದ್ದಾರೆ ದಯಮಾಡಿ ಸ್ವಲ್ಪ ಸುಮ್ಮನಿರಿ ಇದು ಗಂಭೀರವಾದ ಪ್ರಶ್ನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಿಮ್ಮ ಪ್ರಶ್ನೆಗೆ ನಮ್ಮ ಬೆಂಬಲವೂ ಇದೆ

ಶ್ರೀ ವಿ ಸೋಮಣ್ಣ ಬೆಂಬಲ ಎಲ್ಲಿದೆ? ನೀವು ನಾಲ್ಕು ಜನರು ನೀವು ನೀವೇ ಮಾತನಾಡುತ್ತಿದ್ದೀರಲ್ಲಾ ನಾವೇನಾದರು ಮಾತನಾಡಿದರೆ ಮುಂದುಗಡೆ ಕುಳಿತಿರುವವರು ರೇಗಾಡುತ್ತೀರಿ ನಾವು ಮಾತನಾಡುವಾಗ £Ãª A dısturber ಮಾಡುತ್ತೀರಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವರು ಎತ್ತಿದ್ದು ಒಳ್ಳೆಯ ಪ್ರಶ್ನೆ ಎಂದು ನಾವು ಮಾತನಾಡಿಕೊಳ್ಳುತ್ತಿದ್ದೇವೆ

ಶ್ರೀ ವಿ ಸೋಮಣ್ಣ ಎಲ್ಲಿ ಆ ರೀತಿ ಹೇಳುತ್ತಿದ್ದಿರಿ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನೀವು ಕೇಳಿಸಿಕೊಳ್ಳದೆ ಏನು ಮಾತನಾಡುತ್ತೀರಿ?

ಅಧ್ಯಕ್ಷರು ಹೆಗ್ಡೆಯವರೆ, ಅಲ್ಲಿ ಕುಳಿತಿರುವ ನೀವುಗಳು ಅವರಿಗೆ ಅಡ್ಡಿ ಮಾಡುತ್ತಿದ್ದೀರಿ ಎಂದು ಅವರು ಆಕ್ಷೇಪಣೆ ಮಾಡಿರುವುದು ಅದು ಸರಿಯಲ್ಲ ಅವರು ಮಾತನಾಡಲು ಅವಕಾಶ ಕೊಡಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವರು ಸರಿಯಾಗಿ ಕೇಳಿಸಿಕೊಳ್ಳದೇ ಸುಮ್ಮನೆ ಮಾತನಾಡಬಾರದು

ಶ್ರೀ ಜೆ ಸಿ ಮಾಧುಸ್ವಾಮಿ ವಾಟಾಳ್ ನಾಗರಾಜ್‌ರವರನ್ನು ನಮಗೆ ಹೇಳಿಸಿ ಕರೆಯೋಣವೆಂದು ಮಾತ್ರ ನಾವು ಹೇಳಿದ್ದು ಇಲ್ಲಿ ನಾವೇನು ಅಪರಾಧ ಮಾಡಲಿಲ್ಲ

ಶ್ರೀ ವಿ ಸೋಮಣ್ಣ ಅದನ್ನು ನೀವು ನನಗೆ ಹೇಳಬೇಡಿ I am so sorry ನೀವು ಕುಳಿತುಕೊಳ್ಳಿ ನಾವು ಧರಣಿ ಮಾಡಬೇಕೆಂದು ಹೇಳಿದರು

ಶ್ರೀ ಹೆಚ್ ಸಿ ಬಾಲಕೃಷ್ಣ ಮಾನ್ಯ ಅಧ್ಯಕ್ಷರೆ, ವಾಟಾಳ್ ರವರು ಸರ್ಕಾರದ ಬಗ್ಗೆ ಯೋಚನೆ ಮಾಡಿಕೊಂಡು ಮಲಗಿದ್ದಾರೆ ಮಲಗಲು ಬಿಟ್ಟುಬಿಡಿ!

ಅಧ್ಯಕ್ಷರು ಅವರು ಅಲ್ಲಿ ತಪಸ್ಸು ಮಾಡುತ್ತಿದ್ದಾರೆ! ಮಾಡಲಿ ಬಿಡಿ ನೀವು ನಮ್ಮ ಪ್ರಶ್ನೆಯನು ಕೇಳಿ

ಶ್ರೀ ವಿ ಸೋಮಣ್ಣ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, 75 ಕೇಂದ್ರಗಳನ್ನು ತೆಗೆದು 6,20,930 ಅರ್ಜಿಗಳನ್ನು ಬೆಂಗಳೂರು ನಗರ ಪಾಲಿಕೆಯ ವ್ಯಾಪ್ತಿ ಮತ್ತು ಸಿ ಎಂ ಸಿ ಗಳಲ್ಲಿ ಕೊಟ್ಟಿದ್ದೇವೆಂದು ಹೇಳುತ್ತಾರೆ ಈಗ ಬೃಹತ್ ಬೆಂಗಳೂರು ಆಯಿತು ಬೃಹತ್ ಬೆಂಗಳೂರಿಗೆ ನೀವೇನೂ ಅರ್ಜಿಗಳನ್ನು ಕೊಟ್ಟಿಲ್ಲ 240 ಚದರ ಕಿಲೋಮೀಟ್ ಇದ್ದ ಬೆಂಗಳೂರು ಬೃಹತ್ ಬೆಂಗಳೂರು ಆಗಿ 800 ಚದರ ಕಿಲೋಮೀಟರ್ ಆಗಿದೆ 6,20,900 ಅರ್ಜಿಗಳೇನು ಬಂದಿದೆ ಎಂದು ಹೇಳಿದ್ದಾರೆ, ಎರಡು ತಿಂಗಳಾದರೂ ಒಂದು ಬಿ ಪಿ ಎಲ್ ಕಾರ್ಡು ವಿಲೇವಾರಿ ಮಾಡಿಲ್ಲ ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ Deputy director of Food and civil supply ಅಧಿಕಾರಿಗಳು ಯಾರಿದ್ದಾರೆ ಇವರು ಯಾರಿಗೂ ಬಿ ಪಿ ಎಲ್ ಕಾರ್ಡುನ್ನು ಕೊಡಲು ಇಚ್ಛಾಶಕ್ತಿ ಇಲ್ಲ ಇವತ್ತು 7 ನಗರಸಭೆಗಳಲ್ಲಿ ಮನೆ ಮನೆಗೆ ಹೋಗಿ ಏನು 6 ಲಕ್ಷ ಅರ್ಜಿಗಳನ್ನು ಸ್ವೀಕರಿಸಿದ್ದೇವೆಂದು ಹೇಳಿದ್ದೀರಿ ಯಾರೂ ಮನೆ ಮನೆಗೆ ಹೋಗಿಲ್ಲ

ಶ್ರೀ ಗೋವಿಂದ ಎಸ್ ಕಾರಜೋಳ ನಾವು ಮನೆ ಮನೆಗೆ ಹೋಗಿದ್ದೇವೆಂದು ಹೇಳಲಿಲ್ಲ

ಶ್ರೀ ವಿ ಸೋಮಣ್ಣ 75 ಕೇಂದ್ರಗಳನ್ನು ಮಾಡಿದ್ದೀರಿ ಇದು ಇನ್ನೂ ಸರಿಯಾಗಿ ಬಡ ಜನರಿಗೆ ತಲುಪಿಲ್ಲ ಬಹುತೇಕ ಜನರಿಗೆ ತೆಗೆದುಕೊಳ್ಳಲು ಆಗಲಿಲ್ಲ ಬೆಂಗಳೂರು ಬೃಹತ್ ಬೆಂಗಳೂರು ಆಗಿರುವುದರಿಂದ ಯಾವ ರೀತಿಯಾಗಿ ಅರ್ಜಿಯನ್ನು ವಿತರಣೆ ಮಾಡುತ್ತೀರಿ? 1,30,000 ಅರ್ಹತೆ ಇಲ್ಲದಿರುವ ದೊಡ್ಡ ದೊಡ್ಡವರು ಯಾರು ಬಿ ಪಿ ಎಲ್ ಕಾರ್ಡುಗಳನ್ನು ಪಡೆದರು ಅವರುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಆರ್ ಧ್ರುವನಾರಾಯಣ್ ಅನರ್ಹ ಕಾರ್ಡುಗಳು 1,30,000 ಅಲ್ಲ ಸುಮಾರು 5 ಲಕ್ಷಕ್ಕೂ ಜಾಸಿ ಇದೆ

ಅಧ್ಯಕ್ಷರು ಧ್ರುವನಾರಾಯಣ್ ನಿಮ್ಮನ್ನು ಕರೆದವರು ಯಾರು? ನಿಮ್ಮದು ಈಗೀಗ ಮಧ್ಯ ಮಧ್ಯ ನಿಂತು ಮಾತನಾಡುವುದು ಅತಿಯಾಗಿದೆ

ಶ್ರೀ ವಿ ಸೋಮಣ್ಣ ಯಾವ ಮಾನದಂಡವಾಗಿಟ್ಟುಕೊಂಡು ನೀವು ಅದನ್ನು ಮಾಡಿದ್ದೀರಿ? ಬಿ ಪಿ ಎಲ್ ಕಾರ್ಡನ್ನು ಕೊಡುವ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 20%ಗಿಂತ ಜಾಸ್ತಿ ಜನರು ಬಡವರಿದ್ದಾರೆ, ಕೂಲಿಕಾರ್ಮಿಕರಿದ್ದಾರೆ ಇವರಿಗೆ ಇನ್ನೂ ಸರಿಯಾಗಿ ಅರ್ಜಿಗಳು ವಿತರಣೆಯಾಗಿಲ್ಲ ನೀವು ಈ ಮೊದಲು ಬೆಂಗಳೂರು ನಗರ ಮತ್ತು ಸಿ ಎಂ ಸಿ ಗೆ ಕೊಟ್ಟಿದ್ದೀರಿ ಬೃಹತ್ ಬೆಂಗಳೂರಿಗೆ ಏನು ಮಾಡಿದ್ದೀರಿ? ಇದನ್ನು ಯಾವಾಗ ವಿತರಣೆ ಮಾಡುತ್ತೀರಿ ದಯಮಾಡಿ ಉತ್ತರ ಕೊಡಬೇಕು

ಶ್ರೀ ಗೋವಿಂದ ಎಸ್ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ 1, 30, 266 ಅನರ್ಹರು ಪಡಿತರ ಚೀಟಿಯನ್ನು ಪಡೆದುಕೊಂಡಿದ್ದಾರೆಂದು ಹೇಳಿದ್ದೇವೆ ಅವರಲ್ಲಿ 29 ಸಾವಿರ ಜನರು ಸ್ವತಹ ತಾವೇ ಬಂದು ವಾಪಸ್ ಕೊಟ್ಟಿದ್ದಾರೆ 17,565 ಕಾರ್ಡುಗಳು Cancel ಆಗಿದೆ 66,797 ಕಾರ್ಡುಗಳು ಎ ಪಿ ಎಲ್ ಆಗಿ convert ಆಗಿದೆ ಆದ್ದರಿಂದ 1,30,000 ಅನರ್ಹ ಕಾರ್ಡುಗಳ ಬಗ್ಗೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ

ಯಾರನ್ನೂ ಬಿಟ್ಟಿಲ್ಲ ರಾಜ್ಯದಲ್ಲಿ 1,30,000 ಕಾರ್ಡುಗಳು ಮಾತ್ರ ಅನರ್ಹವಾದದ್ದು ಎಂದು ಅಲ್ಲ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅನರ್ಹ ಕಾರ್ಡುಗಳು ಇದ್ದಾರೆ ಅವರನ್ನು ಪತ್ತೆ ಮಾಡುವ ಕೆಲಸ ದಿನನಿತ್ಯ ನಡೆಯುತ್ತಿದೆ ಇದು ನಿರಂತರವಾಗಿ ನಡೆಯುತ್ತದೆ ತಾವೇನು ಬೃಹತ್ ಬೆಂಗಳೂರಿನ ಬಗ್ಗೆ ಕೇಳಿದ್ದೀರಿ, ಈಗಾಗಲೇ ಬೃಹತ್ ಬೆಂಗಳೂರಿನಲ್ಲಿ include ಮಾಡಿಕೊಂಡಿರುವ ಪ್ರದೇಶವಿದೆ ಅದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಈಗಾಗಲೇ ಕಾರ್ಡುಗಳನ್ನು ಕೊಟ್ಟಿದ್ದೇವೆ ಇನ್ನೂ ಯಾರಿಗೆ ಈ ರಾಜ್ಯದಲ್ಲಿ ಕೊಟ್ಟಿಲ್ಲ ಎನ್ನುವವರಿದ್ದಾರೆ ಅಂತಹವರಿಗೆ ಅರ್ಜಿಕೊಡಲು ಅವಕಾಶ ಮಾಡಿಕೊಟ್ಟಿದ್ದೇವೆ ಸುಮಾರು 40 ಲಕ್ಷ ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ ಅದರಲ್ಲಿ 12 ಲಕ್ಷ ಜನರು ಅರ್ಹರು ಎಂದು ಈಗಾಗಲೇ ಗುರುತಿಸಿದ್ದೇವೆ

ಈಗಾಗಲೇ ಕಾರ್ಡ್ ಹೊಂದಿರುವವರ ಸಂಖ್ಯೆ 2 ಲಕ್ಷದ 19 ಸಾವಿರ ಇದ್ದು, ಬಡವರಿಗೆ ಕಾರ್ಡ್‌ಗಳನ್ನು ಕೊಟ್ಟಿದ್ದು, ಅವರ ಹತ್ತಿರ ಕಾರ್ಡ್‌ಗಳಿವೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬೇಕೆಂದು ಮತ್ತು ನಮ್ಮ ಹತ್ತಿರ ಬಿಪಿಎಲ್ ಕಾರ್ಡ್ ಹಿಂದೆಯೂ ಇರಲಿಲ್ಲವೆಂದು ಏನು ಅರ್ಜಿ ಕೊಟ್ಟಿದ್ದಾರೆ, ಅದರ ಬಗ್ಗೆಯೂ ಪರಿಶೀಲನೆ ಮಾಡುತ್ತಿದ್ದೇವೆ ಪರಿಶೀಲನೆ ಮಾಡಿ ಅವರಿಗೂ ಕೂಡ ಕಾರ್ಡ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ

(ಗೊಂದಲ)

ಅಧ್ಯಕ್ಷರು ಅವರು ಉತ್ತರ ಹೇಳುತ್ತಾರೆ ಕೇಳಿ

ಶ್ರೀ ಗೋವಿಂದ ಎಂ ಕಾರಜೋಳ ಯಾವ ಬಡವರಿಗೆ ಕಾರ್ಡ್ ಸಿಕ್ಕಿಲ್ಲವೆಂದು ಈಗ ತಾವೇನು ಕೇಳಿದಿರಿ, 20% ಇರಲಿ, 25% ಇರಲಿ, ಅವರಿನ್ನೂ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಕೂಡ ಅರ್ಹರು ಯಾರಿದ್ದಾರೆಯೋ ಅವರಿಗೆ ಬಿಪಿಎಲ್ ಕಾರ್ಡ್ ಕೊಡುವ ವ್ಯವಸ್ಥೆಯನ್ನು ಮಾಡುವ ಉದ್ದೇಶದಿಂದಲೇ ಓಪನ್ ಮಾಡಿ ಈಗಾಗಲೇ ಅರ್ಜಿಗಳನ್ನು ತೆಗೆದು ಕೊಂಡಿದ್ದೇವೆ ಅರ್ಜಿಗಳ ಪರಿಶೀಲನೆ ಮುಗಿದ ತಕ್ಷಣ ಕೂಡಲೇ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ

ಶ್ರೀ ವಿ ಸೋಮಣ್ಣ ಬಿಪಿಎಲ್ ಕಾರ್ಡ್ ಹೊಂದಿರುವ ಯಾವ ಜನ ಇವತ್ತು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ, ಅವರು ಹೊಸದಾಗಿ ಅರ್ಜಿ ಹಾಕಿಕೊಳ್ಳಬೇಕಾದ ಅವಶ್ಯಕತೆ ಇಲ್ಲವೇ?

ಶ್ರೀ ಗೋವಿಂದ ಎಂ ಕಾರಜೋಳ ಅವಶ್ಯಕತೆ ಇಲ್ಲ

ಶ್ರೀ ವಿ ಸೋಮಣ್ಣ ತಾವು ಇಲ್ಲಿ ಅವಶ್ಯಕತೆ ಇಲ್ಲವೆಂದು ಹೇಳುತ್ತಿದ್ದೀರಿ ಆದರೆ,ಅಧಿಕಾರಿಗಳೇನು ಮಾಡುತ್ತಿದ್ದಾರೆಂದರೆ, ಯಾರ್‍ಯಾರು ಹತ್ತಿರ ಬಿಪಿಲ್ ಕಾರ್ಡ್‌ಗಳಿವೆ,ಅವರೂ ಕೂದ ಅರ್ಜಿ ಕೊಡಬೇಕೆಂದು ಹೇಳಿದರು ಅವರೇನು ಮಾಡಿದರೆಂದರೆ, ನಮ್ಮ ಹತ್ತಿರ ಕಾರ್ಡ್ ಇದೆ, ನಮಗೆ ಕೊಡುವ ಅವಶ್ಯಕತೆ ಇಲ್ಲವೆಂದು ಹೇಳಿ ಬಹುತೇಕ ಬಿಪಿಎಲ್ ಕಾರ್ಡ್ ಹೊಂದಿರತಕ್ಕಂಥವರು ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗಲಿಲ್ಲ ತೆಗೆದುಕೊಳ್ಳದೇ ಇರತಕ್ಕಂಥವರಿಗೆ ನಮ್ಮ ಕಾರ್ಡ್ ಅನ್ನು Cancel ಮಾಡುತ್ತೇವೆಂದು ಅವರು ಒತ್ತಡ ತರುತ್ತಿದ್ದಾರೆ ಅದಕ್ಕೆ ನಾನು ಅಧ್ಯಕ್ಷರು ಮುಖೇನ ನಮಗೆ ವಿನಂತಿಯನ್ನು ಮಾಡುತ್ತೇನೆ, ಬೆಂಗಳೂರು ನಗರದ ಶಾಸಕರ ಸಭೆಯನ್ನು ಕರೆಯುತ್ತೀರೋ, ಬಿಡುತ್ತೀರೋ ಅದು ನಮ್ಮ ವಿವೇಚನೆಗೆ ಬಿಟ್ಟಿದ್ದು ಆದರೆ, ನೀವೊಂದು ಸೂಚನೆ ಕೊಡಬೇಕಾಗುತ್ತದೆ ಈಗಾಗಲೇ ಯಾರ್‍ಯಾರು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ, ಅದಕ್ಕೆ ಯಾರಿಗೆ ಅರ್ಹತೆ ಇದೆ, ಅಂಥವರ ಕಾರ್ಡ್‌ಗಳಿಗೆ ಮತ್ತೆ ನಾವು ಹೊಸದಾಗಿ ಮಾಡಬೇಕಾದ ಅವಶ್ಯಕತೆ ಇಲ್ಲವೆಂದು ಹೇಳಬೇಕು ಎರಡನೆಯದಾಗಿ, ಹಿಂದೆ ಒಂದು ಸಾರಿ ತಾವು ಬಹುತೇಕ ಸರ್ಕಾರಿ ಅಧಿಕಾರಿಗಳು ಕೂಡ ಬಿಪಿಎಲ್ ಕಾರ್ಡ್ ಪಡೆದಿದ್ದಾರೆಂದು press Statement ಕೊಟ್ಟಿದ್ದಿರಿ ಎಷ್ಟು ಜನ ಆ ರೀತಿ ಕಾರ್ಡ್ ಪಡೆದಿದ್ದಾರೆ? ಅವರ ಮೇಲೇನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಈ ರೀತಿ ಸರ್ಕಾರ ಬಡವರಿಗೆ ಕೊಡತಕ್ಕಂಥ ಏನು ಧಾನ್ಯಗಳಿವೆ, ಸಲಕರಣೆಗಳಿವೆ, ಇದನ್ನು ಅರ್ಹತೆ ಇಲ್ಲದಿರುವ ಜನರು ಯಾರು ಪಡೆದಿದ್ದಾರೆ, ಅದು ಕಾನೂನಿನ ದೃಷ್ಟಿಯಲ್ಲಿ ಅದು ತಪ್ಪಾಗುವುದರಿಂದ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಗೋವಿಂದ ಎಂ ಕಾರಜೋಳ ಈಗಾಗಲೇ ಯಾರ ಹತ್ತಿರ ಬಿಪಿಎಲ್ ಕಾರ್ಡ್ ಇದೆ, ಅಂಥವರು ಮತ್ತೆ ಹೊಸದಾಗಿ ಕಾರ್ಡ್ ತೆಗೆದುಕೊಳ್ಳಬೇಕಾಗಿಲ್ಲ ಯಾರಿಗೆ ಇಲ್ಲ ಅವರು ಮಾತ್ರ ತೆಗೆದುಕೊಳ್ಳಬೇಕು ಆ ಬಗ್ಗೆ ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ ಸರ್ಕಾರಿ ಅಧಿಕಾರಿಗಳು ಕೆಲವರೇನು ಅನರ್ಹರು ಕಾರ್ಡ್ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ ರಾಜ್ಯದಲ್ಲಿ ಈಗಾಗಲೇ ಸುಮಾರು 2 ಸಾವಿರದಷ್ಟು ವಾಪಸ್ಸು ಕೊಟ್ಟಿದ್ದಾರೆ ಅವರ ವಿರುದ್ಧ ಇನ್ನೂ ನಾವೇನೂ ಕ್ರಮ ತೆಗೆದುಕೊಂಡಿಲ್ಲ ಕ್ರಮ ತೆಗೆದುಕೊಳ್ಳಬಾರದೆಂದು ಅವರಿಗೆ ಕಾಲಾವಕಾಶ ಕೊಟ್ಟಿದ್ದೆವು ಅವರು ಸ್ವತಂತ್ರವಾಗಿ ವಾಪಸ್ಸು ಕೊಟ್ಟರೆಂದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೆವು ಅದಕ್ಕಾಗಿ ನಾವು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಮುಂದೆ ಯಾರಾದರೂ ಕಾರ್ಡ್ ಇಟ್ಟುಕೊಂಡರೆ, ಅಂಥವರ ವಿರುದ್ಧ ಸೇವಾ ನಿಯಮಾವಳಿಗಳ ಪ್ರಕಾರ action ತೆಗೆದುಕೊಳ್ಳಲಿಕ್ಕೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆಯನ್ನು ಕೊಡುತ್ತೇನೆ

ಶ್ರೀ ಹೆಚ್ ಸಿ ಬಾಲಕೃಷ್ಣ ಜಿ8, ಜಿ9 ಎಂದು ಮಾಡಿದ್ದಾರೆ ಜಿ9 ಎಂದು ಹೇಳಿದರೆ, ಯಾರಿಗೆ ಕಾರ್ಡ್ ಸಿಕ್ಕಿಲ್ಲವೊ ಅವರಿಗೆ ಕಾರ್ಡ್ ವ್ಯವಸ್ಥೆ ಇದೆ ಇವರ ಅಧಿಕಾರಿಗಳು ಮನೆ ಮನೆಗೆ ಹೋಗಿ ಸಮೀಕ್ಷೆ ಮಾಡಿದ್ದಾರೆ ಎಪಿಲ್ ಇರಲಿ, ಬಿಪಿಎಲ್ ಇರಲಿ ಕಾರ್ಡ್ ಕೊಡಬೇಕೆನ್ನತಕ್ಕಂಥದ್ದು ನಮ್ಮ ಸರ್ಕಾರದ ಆದೇಶವಿದೆ ಆದರೆ, ಜಿ9 ಏಕೆ ಬಂತು? ಅಧಿಕಾರಿಗಳು ಎಲ್ಲರಿಗೂ ಹೇಳಿರುತ್ತಾರೆ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕು ಜಿ9 ರ ಅವಶ್ಯಕತೆ ಏಕೆ ಬಂತು? ಕಾರ್ಡ್ ಸಿಕ್ಕಿಲ್ಲವೆಂದರೆ ಅರ್ಥವೇನು? ಅಧಿಕಾರಿಗಳು ಸಮೀಕ್ಷೆ ಮಾಡಿದ್ದಾರೆ ತಪ್ಪು ಯಾರು ಮಾಡಿದ್ದಾರೆ? ಎಪಿಎಲ್, ಬಿಪಿಎಲ್ ಕಾರ್ಡ್ ಸಿಗಬೇಕಾಗಿತ್ತು ಜಿ9 ಕೊಡಬೇಕು ಜಿ9 ಸರ್ಕಾರ ಕೊಡುತ್ತದೆಯೋ, ಇಲ್ಲವೋ ಹೊರಗಡೆ ನಾವು ಜನರಿಗೆ ಉತ್ತರ ಕೊಡುವುದಕ್ಕಾಗುತ್ತಿಲ್ಲ ಸರ್ಕಾರ ಅದರ ಬಗ್ಗೆ ಏನು ಚಿಂತನ ಮಾಡಿದೆ ಎಂದು ದಯವಿಟ್ಟು ಹೇಳಬೇಕು

ಶ್ರೀ ಧರ್ಮಸಿಂಗ್ ಬಹಳ ಮಹತ್ವವಾದ ಪ್ರಶ್ನೆಯನ್ನು ಸೋಮಣ್ಣನವರು ಕೇಳಿದ್ದಾರೆ ಕೇವಲ ಇವತ್ತು ಸದನದಲ್ಲಿ ಕೇಳತಕ್ಕಂಥ

ಪ್ರಶ್ನೆಗೆ ಇಡೀ ರಾಜ್ಯದ ಬಡವರು ನರೀಕ್ಷೆ ಮಾಡುತ್ತಿದ್ದಾರೆ ಅವರು ಕೆಲಸ ಮಾಡುತ್ತಾರೆ ಏಕೋ ಪಾಪ ಅವರಿಗೇನಾಗಿದೆಯೋ ಗೊತ್ತಿಲ್ಲ ಅವರಿಗೇನೋ CqÀÄÀÉEzÉ E°ÀèÁ ÀÉÉ1 ®PÀëÀ29 Á«gÀ they have identified ಯಾವಾಗ ವಿತರಣೆ ಮಾಡುತ್ತೀರಿ? ಇದನ್ನು ನಾವು ಹೇಳುತ್ತಿಲ್ಲ ಇದರಲ್ಲಿ ರಾಜಕಾರಣ ಮಾಡುತ್ತಿಲ್ಲ ಪಕ್ಷಭೇದ ಮರೆತು ಹೆಚ್ ಸಿ ಬಾಲಕೃಷ್ಣರವರೂ ಕೇಳಿದ್ದಾರೆ ಇವತ್ತು ರಾಜ್ಯದಲ್ಲಿ ಪಡಿತರ ವಿತರಣೆ ಮಾಡುವ ಕಾಲದಲ್ಲಿ ಯಾವ ರೀತಿಯಾಗಿ ತಾವು ಆದೇಶ ಕೊಟ್ಟಿದ್ದೀರಿ? ಕೆಲಸ ಕಾರ್ಯಗಳಾಗುತ್ತದೆ ಎಲ್ಲಿ ಜಿಲ್ಲಾಧಿಕಾರಿಗಳು ಮಾಡುತ್ತಿದ್ದಾರೆ? ಇದರ ಬಗ್ಗೆ ಬಹಳ immediately ಹೇಳಬೇಕು ಬಡವರ ಹೊಟ್ಟೆಗೆ ಅನ್ನ ಕೊಡುವ ಕೆಲಸವಿದು ಅದು ಬಿಟ್ಟು ಬೇರೆ ಅಲ್ಲ ಇವತ್ತು ತಾವು ಹೇಳಿ ಇವತ್ತು ವಿಶ್ವಾಸ ಮೂಡಿಸುವ ರೀತಿಯಲ್ಲಿ ಇಷ್ಟು ಅರ್ಜಿ ಬಂದಿದೆ, ಬಿಪಿಎಲ್, ಕಾರ್ಡ್‌ದಾರರನ್ನು ಎಷ್ಟು identify ಮಾಡಿದ್ದೀರಿ? ಎಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದ್ದೀರಿ ಎಂಬ ಬಗ್ಗೆ ಹೇಳಬೇಕು ಇದು ಬಹಳ ಮಹತ್ವವಾದ ವಿಷಯವಿದೆ ಈ ವಿಷಯದಲ್ಲಿ ಕಾರಜೋಳರವರು ಕೆಲಸ ಮಾಡತಕ್ಕಂಥ ವ್ಯಕ್ತಿಯಿದ್ದಾರೆ ಅದಕ್ಕೇನೋ ಅಡಚಣೆ ಇದೆ ಅದರ ಬಗ್ಗೆ ಸಂಪುಟದಲ್ಲಿ ಚರ್ಚೆಯಾಗುತ್ತಿಲ್ಲ ಇವತ್ತು ಉಪ ಮುಖ್ಯಮಂತ್ರಿಗಳು ಹಣಕಾಸಿನ ತೊಂದರೆ ಇದೆ ಎಂದು ಹೇಳುತ್ತಾರೆ ಅದಕ್ಕೆ ನೆರವು ಮಾಡುತ್ತಿಲ್ಲ ಇಂಥ ಜನರಿಗೆ ಸಂಬಂಧಪಟ್ಟಂಥ ದಿನ ನಿತ್ಯದ ಸಮಸ್ಯೆ ಏನದೆ ಇದರ ಬಗ್ಗೆ ಸುಮ್ಮನೆ ನಾವು ಕೇಳುತ್ತೇವೆ, ನೀವು ಉತ್ತರ ಕೊಡಬೇಕೆಂದಲ್ಲ ನೀವು ಇದಕ್ಕೆ ಸಮರ್ಪಕವಾಗಿ ಉತ್ತರ ಕೊಡಿ ತಾವೂ ಕೂಡ ಪರಿಶಿಷ್ಟ ಜಾತಿ, ಪಂಗಡದಿಂದ ಬಂದವರು ಇವತ್ತೇನು ಅನಾಹುತಗಳು ನಡೆಯುತ್ತಿವೆ, ಅದನ್ನು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಇದರ ಬಗ್ಗೆ ಸಮರ್ಪಕವಾಗಿ ಉತ್ತರ ಕೊಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದು ಗಂಭೀರವಾದ ಉತ್ತರ ಕೊಡಿ

(ಗೊಂದಲ)

ಅಧ್ಯಕ್ಷರು ಪ್ರಶ್ನೋತ್ತರ ಕಾಲದಲ್ಲಿ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ ದಯಮಾಡಿ, ಕುಳಿತುಕೊಳ್ಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ ಇದು ಗಂಭೀರವಾದ ವಿಷಯವಾಗಿದೆ ಎಂದು ನಾನು ಕೇಳುತ್ತಿರುವುದು

ಅಧ್ಯಕ್ಷರು ತಾವೆಲ್ಲ ಒಪ್ಪುವುದಾದರೆ, ಇಹನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ವಿಶೇಷವಾಗಿ, ಹೆಚ್ ಸಿ ಬಾಲಕೃಷ್ಣರವರು ಕೇಳಿದ ಪ್ರಶ್ನೆಗೆ,ನನ್ನ ಅನುಭವಕ್ಕೆ ಬಂದ ಹಿನ್ನೆಲೆಯಲ್ಲಿ (ಗೊಂದಲ) ಯಾರಾದರೂ ಬಡವರು ನಮ್ಮ ಹತ್ತಿರ ಕಾರ್ಡ್ ಇಲ್ಲವೆಂದರೆ ಜಿ9 ಗೆ ಕಳುಹಿಸಿದ್ದೇವೆಂದು ಅಧಿಕಾರಿಗಳು ಹೇಳುತ್ತಾರೆ ಆದರೆ, ಯಾರು ಅನುಕೂಲವಾಗಿದ್ದಾರೆ ಅವರಿಗೆಲ್ಲಾ ಕಾರ್ಡ್ ಕೊಟ್ಟಿದ್ದಾರೆ ಒತ್ತಿ ಹಿಡಿದ ಮೇಲೆ ನಮ್ಮ ಸ್ಥಳೀಯ ಅಧಿಕಾರಿಗಳೇನಿದ್ದಾರೆ, ನಿಮ್ಮ ಪಂಚಾಯಿತಿ Secretary ಗಳು, ನಿಮ್ಮ Food Department ನವರೇನದ್ದಾರೆ, ಕೆಲಸ ಮಾಡುತ್ತಿದ್ದಾರೆ ಅವರಲ್ಲಿ ಯಾರಾದರೂ 10 ಜನರನ್ನು ಒಳಗಡೆ ಕಳುಹಿಸಿದರೆ ಆಗ ಸರಿಯಾಗುತ್ತದೆ ಅಲ್ಲದಿದ್ದರೆ, ಸುಮ್ಮನೆ ಕೇವಲ ಮಾತಾಗುತ್ತದೆ ಬಡವರನ್ನು identify ಮಾಡಿ, ಅವರಿಗೆ ಬಿಪಿಎಲ್ ಕಾರ್ಡ್ ಕೊಡುವುದಕ್ಕೆ ಇದರಲ್ಲಿ 3–4 ಸರ್ಕಾರಗಳು ಸೋತಿವೆ ನಿರ್ದಿಷ್ಟವಾಗಿ ನಮಗೆ ಶಕ್ತಿ ಇದ್ದರೆ, ಮಾಡಿ ಅಲ್ಲದಿದ್ದರೆ, ಆಗುವುದಿಲ್ಲವೆಂದು ಕೈಚೆಲ್ಲಿ ಹೇಳಿಬಿಡಿ ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಆಯಿತು

(ಗೊಂದಲ)

ಅಧ್ಯಕ್ಷರು ವಾಟಾಳ್ ನಾಗರಾಜ್ ರವರು ಎಲ್ಲರಿಗೂ ಸದ್ಬುದ್ಧಿ ಬರಲಿ ಎಂದು ತಪಸ್ಸಿಗೆ ಕುಳಿತುಬಿಟ್ಟಿದ್ದಾರೆ

ಶ್ರೀ ಜಿ ವಿ ದೇವೇಗೌಡ ರೈತರ ಪರವಾಗಿ ಅವರು ಇವತ್ತು ಪೂರ್ತಿ ಮಾಡುತ್ತಾರೆ ರೈತರ ಪರವಾಗಿ ಇವತ್ತು ಅಲ್ಲಿ ಪೂರ್ತಿ ಇರಲೇಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರನ್ನು ಅವರ ಸ್ಥಾನಕ್ಕೆ ಕರೆಸಿ ಸಾರ್

ಅಧ್ಯಕ್ಷರು ನಾವೇನಾದರೂ ಅವರನ್ನು ಕಳುಹಿಸಿದ್ದೇವೆಂದಯೇ? ಅವರೇ walkout ಮಾಡುತ್ತೇವೆಂದು ಅಲ್ಲಿ ಕುಳಿತಿದ್ದಾರೆ

ಶ್ರೀ ಧರ್ಮಸಿಂಗ್ ಅವರು ಸದನ ಮುಗಿಯುವವರೆಗೆ ಇರುತ್ತಾರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿಯೇ ಇದ್ದಾರೆ

(ಗೊಂದಲ)

ಅಧ್ಯಕ್ಷರು ವಾಟಾಳ್ ನಾಗರಾಜ್ ರವರೆ, ಎಲ್ಲ ಸದಸ್ಯರು ಬರಬೇಕು ತಾವೀಗ ಈ ಸದನದಲ್ಲಿ ಚರ್ಚೆಯಲ್ಲಿ ಭಾಗವಹಿಸಿ ದಯಮಾಡಿ ಬನ್ನಿ

ಶ್ರೀ ಧರ್ಮಸಿಂಗ್ ಅವರು ಕೇಳುವ ಪ್ರಶ್ನೆಗೆ ಉತ್ತರ ಕೊಡಬೇಕಲ್ಲವೇ? (ಗೊಂದಲ) ಓದಿಕೊಂಡು ಬರುತ್ತಿಲ್ಲ

ಅಧ್ಯಕ್ಷರು, ನಾನು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ

(ಈ ಸಂದರ್ಭದಲ್ಲಿ ವಾಟಾಳ್ ನಾಗರಾಜ್ ರವರು ತಮ್ಮ ಸ್ಥಾನಕ್ಕೆ ಆಗಮಿಸಿದರು)

ಪ್ರಶ್ನೆ ಸಂ 65(287) (ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಶ್ರೀ ನೆ ಲ ನರೇಂದ್ರ ಬಾಬು ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು No,No ನೀವು authorization ಕೊಟ್ಟಿಲ್ಲ ನಮ್ಮ ಕಾಗದ ನೋಡಿದೆ authorize ಮಾಡಬೇಕು authorize ಮಾಡಿಲ್ಲ ಆ ಕಾರಣದಿಂದ ಮುಂದಿನ ಪ್ರಶ್ನೆಗೆ ಹೋಗೋಣ

ರಾಯಾಚೂರು ಜಿಲ್ಲೆಗೆ ಕೃಷಿ ವಿಶ್ವವಿದ್ಯಾಲಯ ಮಂಜುರಾತಿ

67 (409) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಗೆ ಕೃಷಿ ವಿಶ್ವವಿದ್ಯಾಲಯ ಮಂಜೂರು ಮಾಡುವ ಉದ್ದೇಶ ಸರಕಾರಕ್ಕೆ ಇದ್ದೆಯೇ

ಆ) ಇದ್ದರೆ ಯಾವ ವರ್ಷ ಈ ಕೃಷಿ ವಿಶ್ವವಿದ್ಯಾಲಯು ಪ್ರಾರಂಭಿಸಲಾಗುವುದು?

ಶ್ರೀ ಬಂಡೆಪ್ಪ ಕಾಶಂಪೂರು

ಅ) ಹೌದು

ಆ) ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಲು ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಡಿಸಿಎ (ಸಿಎಸ್‌ಸಿ) 4/2007, ದಿನಾಂಕ 12-06-2007 ರಲ್ಲಿ ರಚಿಸಲಾಗಿದೆ

ವರದಿಯನ್ನು ನರೀಕ್ಷಿಸಿದೆ

ಶ್ರೀ ಎನ್ ಎಸ್ ಬೋಸರಾಜು(ಬಾದರ್ಲಿ ಹಂಪನಗೌಡರವರ ಪರವಾಗಿ) ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಕಳೆದ 14 ತಿಂಗಳಿನಂದ ರಾಯಚೂರು ಜಿಲ್ಲೆಗೆ ಬಂದಿರುವ ಜವಾಬ್ದಾರಿಯುತವಾಗಿರುವ ಸಚಿವರುಗಳು ತಕ್ಷಣ ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾದಬೇಕೆನ್ನುವ ಮಾತನ್ನು ಹೇಳುತ್ತಾ ಬಂದಿದ್ದರು ಈಗಾಗಲೇ ಈ ಕೃಷಿ ವಿಶ್ವವಿದ್ಯಾಲಯ ತುಂಗಭದ್ರಾ ಹಾಗೂ ನಮ್ಮ ಕೃಷ್ಣಾ ನದಿಗಳ ಮೂಲಕ ಸಾಕಷ್ಟು ರೀತಿ ಕೃಷಿಗೆ ಒಳಪಟ್ಟಿರುವ ಪ್ರದೇಶದಲ್ಲಿ ಆಗಬೇಕೆಂದು ಎಸ್ ಎಂ ಕೃಷ್ಣರವರ ಸರ್ಕಾರದಲ್ಲಿ ಧಾರವಾಡ

university ಅಧಿಕಾರಿಗಳ ಮೂಲಕ ಕಮಿಟಿ ರಚಿಸಿದ್ದು, ಅದರ ರಿಪೋರ್ಟ್ ಈಗಾಗಲೇ ಸರ್ಕಾರಕ್ಕೆ ತಲುಪಿದೆ ಆ ವರದಿಯಾಧಾರದ ಮೇಲೆ ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಬೇಕಾಗಿದೆ ಸಚಿವರು, ಮುಖ್ಯಮಂತ್ರಿಗಳು ಆ ಪ್ರದೇಶಕ್ಕೆ ಬಂದಂಥ ಸಂದರ್ಭದಲ್ಲಿ ಅಲ್ಲದೆ ಬೆಳಗಾವಿಯಲ್ಲಿ ನಡೆದಂಥ ಅಧಿವೇಶನದ ಸಂದರ್ಭದಲ್ಲಿ ಸಹಿತ ನಾವು ಈ ವಿಷಯವನ್ನು ಕೇಳಿದಾಗ ತಕ್ಷಣ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕಳೆದ ಸದನದಲ್ಲಿ ಕೊಟ್ಟಿದ್ದಾರೆ ಇವತ್ತು ಹೊಸದಾಗಿ ಸನ್ಮಾನ್ಯ ಹಿರಿಯ ಸಚಿವರು ನೇತೃತ್ವದಲ್ಲಿ ಸಬ್ ಕಮಿಟಿಯನ್ನು ಮಾಡಿದ್ದಾರೆ ಆದರೆ ಈಗಾಗಲೇ ಅಲ್ಲಿ ಜನ ಮಾಜಿ ಶಾಸಕರಾದ ಎಂ ನಾಗಪ್ಪನವರ ನೇತೃತ್ವದಲ್ಲಿ ಹೋರಾಟ ಮಾಡತಕ್ಕಂಥ ಪರಿಸ್ಥಿತಿ ಇದೆ ಕೃಷಿ ಸಚಿವರು ಅಲ್ಲಿಗೆ ಬಂದಾಗಲೆಲ್ಲ ತಕ್ಷಣ ಮಾಡುತ್ತೇವೆಂದು ಹೇಳುತ್ತಾರೆ ಈ ತಕ್ಷಣ ಎಂಬ ಮಾತನ್ನು ಇಟ್ಟು ಅವರು ಹೇಳುತ್ತಾರೆ ಹೀಗಾಗಿ ಇವತ್ತು ಮತ್ತೊಂದು ಸಬ್ ಕಮಿಟಿ ಮಾಡಿ ಇದನ್ನು ಡಿಲೇ ಮಾಡುವ ಪ್ರಯತ್ನವಿದೆ ಎಂದು ಜನರ ಭಾವನೆಯಿದೆ ಆದರೂ ನಮ್ಮ ಪ್ರದೇಶದವರಾದ ಶ್ರೀಮಾನ್ ಪ್ರಕಾಶ್‌ರವರ ನೇತೃತ್ವದಲ್ಲಿ ಕಮಿಟಿಯನ್ನು ಮಾಡಿರುವುದರಿಂದ ತಕ್ಷಣ ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವ ಆಶ್ವಾಸನೆ ನೀಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯಿಸುತ್ತೇನೆ ಈಗಾಗಲೇ ಅಲ್ಲಿ ಬೇಕಾಗಿರತಕ್ಕಂಥ ಸೌಲಭ್ಯಗಳು, 652 ಎಕರೆ ಹೊಲ, ಅದರ ಜೊತೆಯಲ್ಲಿ ಏಳು ಸಾವಿರ ಎಕರೆ Central State farms ದ್ದು ಭೂಮಿ ಇದೆ ಅಲ್ಲಿ ಬೇಕಾಗಿರುವ Laboratory, Auditoriums, Library, ಅಲ್ಲಿ ಬೇಕಾದ ಎಲ್ಲಾ infrastructures ಅಲ್ಲಿದೆ ಹೀಗಿದ್ದರೂ ನೆನ್ನೆ ದಿವಸ ಕ್ಯಾಬಿನೆಟ್‌ನಲ್ಲಿ ಮತ್ತೊಂದು ಡಿಸಿಷನ್ ತೆಗೆದುಕೊಂಡಿದ್ದೀರಿ ಬಾಗಲಕೋಟೆಯಲ್ಲಿ Horticulture University ಮಾಡುತ್ತೇವೆಂದು ನೆನ್ನೆ ಸಭೆಯಲ್ಲಿ ಹೇಳಿದಿರಿ ಮತ್ತು ಸಚಿವ ಸಂಪುಟದ ಸಭೆಯಲ್ಲಿಯೂ ಹೇಳಿದಿರಿ ಅದರೆ ಈಗಾಗಲೇ ಧಾರವಾಡ ವಿಶ್ವವಿದ್ಯಾಲಯದ ಅಧಿಕಾರಿಗಳ ಮುಖಾಂತರ ಏನು ರಿಪೋರ್ಟ ಇದೆ ಅದು ಈಗಾಗಲೇ ಸರ್ಕಾರದ ಮುಂದೆ ಇದೆ, ಹೀಗಿರುವಾಗ ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳದೇ ಮತೋಂದು ಬಾಗಲಕೋಟೆಯಲ್ಲಿ Horticulture University ಮಾಡುತೇವೆಂದು ಹೇಳುತ್ತೀರಿ ಏಕೆ ಈ ರೀತಿಯಾಗಿ ಹಿಂದುಳಿದ ಪ್ರದೇಶವಾಗಿರತಕ್ಕಂಥ ರಾಯಚೂರಿಗೆ ಬಂದ ಕೂಡಲೇ ತಾವು ಎಲ್ಲರೂ ಸಹಿತ ಸರಿಯಾದ

ರೀತಿಯಲ್ಲಿ ಸ್ಪಂದಿಸುತ್ತಿಲ್ಲವೆಂದು ಅಧ್ಯಕ್ಷರ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ ತಾವು ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ, ನಾವು ಈ ಅಧಿವೇಶನದೊಳಗೆ ಇದರ ಬಗ್ಗೆ ತೀವ್ರ ಸ್ವರೂಪವಾದ ಹೋರಾಟವನ್ನು ರಾಯಚುರಿನಿಂದ ಪ್ರಾರಂಭಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ ಮಾನ್ಯ ಬೋಸರಾಜುರವರು ಬಹಳ ಮುಖ್ಯವಾಗಿರುವ ಪ್ರಶ್ನೆಯನ್ನು ಮಾನ್ಯ ಹಂಪನಗೌಡ ಬಾದರ್ಲಿಯವರ ಪರವಾಗಿ ಕೇಳಿದ್ದಾರೆ ಅಲ್ಲಿ ಜನ ಏನು ಮಾತನಾಡುತ್ತಾರೆಂದರೆ, ಮುಖ್ಯಾಮಂತ್ರಿಗಳು ಎರಡು ಸಾರಿ ಬಂದರು, ಕೃಷಿ ವಿಶ್ವವಿದ್ಯಾಲಯವನ್ನು ಇದೇ ವರ್ಷವೇ ಪ್ರಾರಂಭಿಸುತ್ತೇವೆಂದು ಹೇಳಿ ಹೋದರು ಕೃಷಿ ಸಚಿವರು ಕೂಡ Agriculture College ನಲ್ಲಿ ಒಂದು ಸಭೆ ನಡೆದಾಗ ಓಪನ್ ಮೀಟಿಂಗ್‌ನಲ್ಲಿ ಇದೇ ವರ್ಷವೇ ಪ್ರಾರಂಭಿಸುತ್ತೇವೆಂದು ಹೇಳಿ ಹೋದರು ಈಗ ಉಪ ಸಮಿತಿ ಮಾಡಿದ್ದೇವೆಂದು ಹೇಳುವುದರಿಂದ, ಇದು ಸರ್ಕಾರದ ಕಡೆ ಮಾಡುವುದಕ್ಕೆ ಕಣ್ಣೊರೆಸುವ ತಂತ್ರ ಎನ್ನುವ ರೀತಿಯಲ್ಲಿ ಈ ಹೋರಾಟಗಾರರು, ಬುದ್ಧಿಜೀವಿಗಳು ಹಾಗೂ ಇನ್ನಿತರ ಎಲ್ಲಾ ಅಲ್ಲಿರುವ ಸಮಾಜದ ಅಭಿವೃದ್ಧಿಯನ್ನು ಬಯಸುವ ಜನ ನಮ್ಮ ಮೇಲೆ ಅನುಮಾನ ಪಡತಕ್ಕಂಥ ಘಟನೆಗಳು ಮುಂದೆ ನಡೆಯಬಹುದು ದಯವಿಟ್ಟು ನಾವು ಚುನಾಯಿತ ಪ್ರತಿನಿಧಿಗಳು ಇಲ್ಲಿ ಇದರ ಬಗ್ಗೆ ಮಾತನಾಡುತ್ತಿದ್ದೇವೆ ಏಕೆಂದರೆ, ಅವರು ಬಂದು ಇಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ ಅನೇಕ ಸಾರಿ ನಿಯೋಗ ಬಂದು, ಮುಖ್ಯಮಂತ್ರಿಗಳನ್ನು ಮತ್ತು ಕೃಷಿ ಮಂತ್ರಿಗಳನ್ನ ಬೇಟಿಯಾಗಿ ಅಲ್ಲಿರುವ ಪರಿಸ್ಥಿತಿಯನ್ನು ಹೇಳಿದ್ದಾರೆ ದಾರವಾಡ ಯೂನಿವರ್ಸಿಟಿಯವರು ಒಂದು ಸಂಪೂರ್ಣವಾದ ಮಾಹಿತಿಯನ್ನು ಕೂಡ ಕೊಟ್ಟಿದ್ದಾರೆ ಆರ್ಥಿಕ ಹೊರೆ ಕೂಡ ಏನೂ ಆಗುವುದಿಲ್ಲ ಈ ವರ್ಷ ನೀವು ಸಾಧ್ಯವಾದರೆ ನಾಲ್ಕು ಕೋಟಿ ಕೊಡಿ, ಇಲ್ಲಾಂದ್ರೆ ಅದು ಕೂಡ ಬೇಡ ಎನ್ನುವ ರೀತಿಯಲ್ಲಿ ಅವರು ಒಂದು ಮನವಿಯನ್ನು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಆದಕಾರಣ ಆ ಸಂಪುಟ ಉಪ ಸಮಿತಿಯ ಅವಶ್ಯಕತೆಯಿಲ್ಲವೆಂದುನಮ್ಮ ಭಾವನೆಯಿದೆ ದಯವಿಟ್ಟು ಅದನ್ನು ಮಾಡುವುದಾಗಿದ್ದರೆ ಮಾಡಿ ಇಲ್ಲಾಂದ್ರೆ ಕೂಡಲೇಈ ಆಧೀವೇಶನದೊಳಗಡೆ ಸಭೆ ಕರೆದು ಇದಕ್ಕೆ ಇತಿಶ್ರೀ ಹಾಡಬೇಕು,

ನಮಗೆ ಮಂಜೂರುಮಾಡಿ ಮುಂದಿನ ಆಗಸ್ಟ್ 15ರೊಳಗೆ ಇದರ ಉದ್ಘಾಟನೆಯನ್ನು ಮಾಡುವ ಕೆಲಸವನ್ನು ಸರ್ಕಾರ ಮಾಡುತ್ತದೆಯೆ ಎಂದು ತಮ್ಮ ಮೂಲಕ ನಾನು ಅವರನ್ನು ಕೇಳುತ್ತಿದ್ದೇನೆ

ಶ್ರೀ ಬಂಡೆಪ್ಪ ಕಾಶಂಪೂರ್ ಹಿರಿಯ ಸದಸ್ಯರಾದ ಬೋಸರಾಜು ಮತ್ತು ಅಮರೇಗೌಡರವರು ಹೇಳಿದ ಹಾಗೆ, ಆ ಬಾಗದಲ್ಲಿ Agriculture University ಮಾಡುವುದು ಬಹಳ ಅವಶ್ಯಕತೆಯಿದೆ ಹೀಗಾಗಿ ಮೊಟ್ಟಮೊದಲು ತಮ್ಮ ಮುಖ್ಯಮಂತ್ರಿಗಳು ಅಲ್ಲಿಗೆ ಹೋದಾಗ ತಕ್ಷಣವೇ ಇದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು ನಂತರ ನಾನು ಹೋದಾಗ ಕೂಡ ಅದೇ ಮಾತು ಹೇಳಿಕೊಂಡು ಬಂದಿದ್ದೇವೆ ಅದರೆ, ಒಂದು ಅರ್ಥವಾಗುತ್ತಿಲ್ಲ, ಬೋಸರಾಜು ರವರು ಹೇಳಿದ ಹಾಗೆ, ನಾವು ಹಿಂದಿನ ರಿಪೋರ್ಟ್ ಮೇಲೆ ಈ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿಲ್ಲ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿರುವುದಕ್ಕೆ ಏತಕ್ಕೆಂದರೆ, ನಮ್ಮ ಹತ್ತಿರ ಈಗಾಗಲೇ ಎರಡು –Agriculture University ಇವೆ ಬೆಂಗಳೂರು ಮತ್ತು ಧಾರವಾಡದಲ್ಲಿ ಇವೆ ಇನ್ನೊಂದು Agriculture University ಮಾಡಬೇಕೆಂದರೆ ಕೆಲವು ಟೆಕ್ನಿಕಲ್ ಸಮಸ್ಯೆಗಳು ಬರುತ್ತವೆ ಸದನದಲ್ಲಿ ನಾವು ಬಿಲ್ ತರಬೇಕಾಗುತ್ತದೆ ಹೀಗಾಗಿ ICAR ನಿಂದ ಕೆಲವು ದಾಖಲಾತಿಗಳನ್ನು ಕೊಟ್ಟು permission ತೆಗೆದುಕೊಳ್ಳ ಬೇಕಾಗುತ್ತದೆ ಮತ್ತೆ ಇದಕ್ಕೆ ಬೇಕಾದ ದುಡ್ಡನ್ನು ನಾವು ಇಡಬೇಕಾಗುತ್ತದೆ ಇದಕ್ಕೆ ನಾವು ಸೆಪರೇಟಾಗಿ ಕ್ಯಾಬಿನೆಟ್ ಕಮಿಟಿ ಮಾಡಿಕೊಂಡರೆ ಡಿಲೇಯಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ನಾವು ಸಬ್ ಕಮಿಟಿ ಮಾಡಿಕೊಂಡರೆ ಡಿಲೇಯಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ನಾವು ಸಬ್ ಕಮಿಟಿ ಮಾಡಿದ್ದೇವೆ ವಿನಾ ಈ ಕಮಿಟಿ ಮಾಡಿದ್ದರಿಂದ ಅಲ್ಲಿ ಯೂನಿವರ್ಸಿಟಿ ಆಗುತ್ತದೋ ಇಲ್ಲವೋ ಎನ್ನುವ ನಟ್ಟಿನಲ್ಲಿ ಈ ಕಮಿಟಿ ಕೆಲಸ ಮಾಡುವುದಿಲ್ಲ ನಾನು ಪತ್ರಿಕೆಗಳ ಮೂಲಕ ಇದರ ಬಗ್ಗೆ ಮೊದಲೇ ಸ್ಪಷ್ಟೀಕರಣ ಕೊಟ್ಟಿದ್ದೇನೆ ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ಹಾಗೂ ಆ ಭಾಗದ ಜನರ ಕಳಕಳಿ ಏನು ಇದೆ, ಅಲ್ಲಿ ಒಂದು ಯೂನಿವರ್ಸಿಟಿ ಬರಬೇಕೆನ್ನುವ ಏನು ಚಿಂತನೆ ಇದೆ, ಅದರ ಪರವಾಗಿ ನಾವು ಮಾಡುತ್ತಿದ್ದೇವೆ ತಮಗೆ ಹೇಳುವುದೇನೇಂದರೆ, ಈ ಕ್ಯಾಬಿನೆಟ್ ಕಮಿಟಿ ಈ ಎಲ್ಲಾ ಕೆಲಸಗಳನ್ನು ಮಾಡುವುದಕ್ಕೆ ಇದೆ ಮುಂದಿನ ದಿನಗಳಲ್ಲಿ

ಅತಿ ಶೀಘ್ರವಾಗಿ ಈ ಒಂದು ಅಧೀವೇಶನದಲ್ಲಿ ತಂದು ಪಾಸ್ ಮಾಡಿಸಿಕೊಳ್ಳುತ್ತೇವೆ

ಶ್ರೀ ಎನ್ ಧರ್ಮಸಿಂಗ್ ಕೃಷಿ ಸಚಿವರಾದ ಬಂಡೆಪ್ಪ ಕಾಶಂಪೂರ್‌ರವರು ಆ ಭಾಗದಿಂದ ಬಂದಿರತಕ್ಕಂಥವರು ಬೀದರ್ ನವರು ಆಗಿದ್ದೀರಿ ಬೀದರ್ ನಲ್ಲಿ ಆಗಿನ ಕಾಲದಲ್ಲಿ ಕೊಟ್ಟಿದ್ದೇವೆ ಇವತ್ತು ತಾವು ಅದರಲ್ಲಿ ಬಹಳಷ್ಟು ಪ್ರಮುಖ ಪಾತ್ರವಹಿಸಿ, ಏಕೆಂದರೆ ಅಲ್ಲಿ infrastructures ಇದೆ Agriculture College ಇದೆ, ಈಗಾಗಲೇ ಬೋಸರಾಜುರವರು ಹೇಳಿದ ಹಾಗೆ ಅಲ್ಲಿ ನದಿಗಳು ಹರಿಯುತ್ತಿವೆ Agriculture point of view ನಿಂದ ನೋಡಿದರೆ ರೈತರಿಗಾಗಿ ಅಲ್ಲಿ ಎಲ್ಲಾ ಸಾಕಷ್ಟು ಸೌಕರ್ಯಗಳಿವೆ ಜೊತೆಗೆ ರಿಪೋರ್ಟ್ ಮೇಲೆ ಆಧರಿಸಿದೆ ಈಗಾಗಲೇ ತಾವು ಮುಖ್ಯಮಂತ್ರಿಗಳು ಅಲ್ಲಿಗೆ ಹೋದಾಗ ಅಲ್ಲೆಲ್ಲಿ ಆಶ್ವಾಸನೆ ಕೊಟ್ಟಿದ್ದೀರಿ ಆಶ್ವಾಸನೆ ಮೇರೆಗೆ ಆ ಭಾಗದ ಜನರಾಗಿ ನೀವು ಮಾಡಬೇಕು ಬೀಜ ಕೊಡುವುದು ಎಷ್ಟು ಕೊಟ್ಟಿದ್ದೀರಿ ಬಿಟ್ಟಿದ್ದೀರಿ ಅದು ಬೇರೆ ವಿಷಯ ಇದೊಂದು ಕಾಲೇಜ್ ಮಾಡಿದರೆ ಬಂಡೆಪ್ಪ ಕಾಶಂಪೂರ್ ಕಾಲದಲ್ಲಿ ಮತ್ತು ನಮ್ಮ ಪ್ರಕಾಶ್ ರವರ ಕಾಲದಲ್ಲಿ ರಾಯಚೂರಿಗೆ ಯೂನಿವರ್ಸಿಟಿ ಆಗಿದೆ ಎನ್ನುವ ಹೆಸರು ಬರುತ್ತದೆ ಇದಕ್ಕೆ ಪ್ರತ್ಯೇಕವಾಗಿ ಹೆಚ್ಚಿನ ಗಮನ ಕೊಟ್ಟು ಕೃಷಿ ಕಾಲೇಜು, ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ ಬರುವುದಕ್ಕೆ ಪ್ರಾಮಾಣೀಕವಾದ ಪ್ರಯತ್ನ ಮಾಡಿ

ಶ್ರೀ ಎನ್ ಎಸ್ ಬೋಸರಾಜು ನಾನು ಹೇಳಿರುವುದು ಇಷ್ಟೆ ಅವರು ಸಮಯ ನಿಗದಿಪಡಿಸಿ ಎಂದು ಕೇಳುತ್ತೇನೆ ಇದು ಸುಮಾರು ಸತತವಾಗಿ ಹದಿನಾಲ್ಕು ತಿಂಗಳುಗಳಿಂದ ನಡೆಯುತ್ತಿದೆ ಸದನದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿದ್ದಾಗಲೇ ನಾವು ಈ ಹಿಂದೆ ಈ ಪ್ರಶ್ನೆಯನ್ನು ಎತ್ತಿದ್ದೇವೆ ಆಶ್ವಾಶನೆ ಕೊಟ್ಟಿದ್ದರು ಇವತ್ತು ಕೂಡ ನಾವು ಮಾಡುತ್ತೇವೆಂದು ಹೇಳುತ್ತಿದ್ದಾರೆ, ಅವರು ಮಾಡುವುದಿಲ್ಲವೆಂದು ಹೇಳುತ್ತಿಲ್ಲ ಯಾವಾಗ ಮಾಡುತ್ತೀರಿ? ತಕ್ಷಣವೇ ಮಾಡಬೇಕೆನ್ನುವ ಜನರ ಆಶೋತ್ತರಕ್ಕೆ ತಕ್ಷಣ ಸ್ಪಂದನ ಕೊಡಬೇಕೆಂದು ಹೇಳುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ ರಾಯಚೂರಿನಲ್ಲಿ ಕೃಷಿ ಕಾಲೇಜನ್ನು ನಾನು Agriculture Minister ಆಗಿದ್ದಂಥ ಬೀದರ್‌ನಲ್ಲಿ ಪಶು ವೈದ್ಯಕೀಯ ಕಾಲೇಜ್ ನ್ನು ಕೊಟ್ಟಿದೆ ಅದರೆ ಅದರ ಸಾಧಕ-ಬಾಧಕಗಳ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯನ್ನು ನೇಮಕಾತಿ ಮಾಡಿದ್ದು ನಾನು ಅದರ ಅಧ್ಯಕ್ಷನಾಗಿದ್ದೇನೆ ಇನ್ನೊಂದು ವಾರದಲ್ಲಿ ಎಂದು ನನ್ನೆ ಕೂಡ ಹೇಳಿದ್ದೇನೆ ಸಂಬಂಧಪಟ್ಟಿರತಕ್ಕಂಥಾದ್ದು ಅಲ್ಲದೆ ಬೇರೆ ವಿಷಯವೂ ಕೂಡ ಅದಕ್ಕೆ ಸೇರಿಸಬೇಕಾಗಿದೆ ಏಕೆಂದರೆ, ಖಾಸಗೀಕರಣ ಮಾಡಬೇಕೋ ಬೇಡವೋ ಎನ್ನುವ ವಿಚಾರವಿದೆ ಇಲ್ಲಿಯವರೆಗೂ ಕೂಡ ಕೃಷಿ ವಿಚಾರಗಳಿಗೆ ಸಂಬಂಧಪಟ್ಟಂಥ ಅದು ಡೈರಿ ಕಾಲೇಜ್ ಆಗಬಹುದು, ವೆಟರಿನರ ಕಾಲೇಜ್ ಅಗೆರವಹುದು, ಅಗ್ರಿಕಲ್ಚರ್ ಕಾಲೇಜ್ ಆಗಬಹುದು, ಫಾರೆಸ್ಟ್ ಕಾಲೇಜ್ ಆಗಬಹುದು, ಫೀಶರೀಸ್ ಕಾಲೇಜ್ ಆಗಬಹುದು ಇವು ಯಾವುದನ್ನು ಕೂಡ ಖಾಸಗಿ ವಲಯದಲ್ಲಿ ಇಲ್ಲಿಯವರೆಗೆ ಕೊಟ್ಟಿರುವ ಉದಾಹರಣೆಗಳಿಲ್ಲ ಆಂದ್ರಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ, ಈಗ ಖಾಸಗಿ ಕಾಲೇಜುಗಳನ್ನು ಶಿಕ್ಷಣ ಇಲಾಖೆಯವರು ಕೊಟ್ಟಿದ್ದಾರೆ ಆ ಸಂದರ್ಭವಿರುವುದರಿಂದ, ಖಾಸಗೀಕರಣ ಮತ್ತು ಜಾಗತೀಕರಣದ ಹಿನ್ನಲೆಯಲ್ಲಿ ಇದನ್ನು ಕೂಡ ಪರಿಶೀಲಿಸಿ ಎಂದು ಹೇಳಿರುವುದರಿಂದ , ಅದರ ವಿವರಗಳನ್ನು ತೆಗೆದು ಕೊಂಡು ವಾರದೊಳಗಾಗಿ ಸಚಿವ ಸಂಪುಟದ ಉಪ ಸಮಿತಿಯಾಗುತ್ತದೆ ಇದಾದ ಮೇಲೆ ಸನ್ಮಾನ್ಯ ಕೃಷಿ ಸಚಿವರು ಹೇಳಿದಂತೆ ಅದು ಅಸ್ತಿತ್ವಕ್ಕೆ ಬರುತ್ತದೆ

ಎಲ್ಲಾ ದೇವಸ್ಥಾನಗಳಿಗೆ ಪ್ರವೇಶ ಇದೆ, ಎಲ್ಲಿಯೂ ನಿಷೇಧ ಮಾಡಿಲ್ಲವೆಂದು ಸರ್ಕಾರವೇ ಉತ್ತರ ಕೊಟ್ಟರೆ ಹೇಗೆ? ಬಹಶಃ ನನಗೆ ತಿಳಿದ ಮಟ್ಟಿಗೆ ಇವತ್ತಿನ ದಿವಸ 99% ದೇವಸ್ಥಾನಗಳಲ್ಲಿ ನಿಷೇಧ ಇದೆ ತಾವು ಇದರ ಬಗ್ಗೆ ತಪ್ಪು ಉತ್ತರ ಕೊಟ್ಟಿದ್ದೀರಿ ಆದ್ದರಿಂದ, ಎಷ್ಟು ದೇವಸ್ಥಾನಗಳಲ್ಲಿ ಈಗಲೂ ನಿಷೇಧ ಇದೆ ಎಂಬುದರ ಬಗ್ಗೆ ಹೇಳಬೇಕು ಹಿಂದೆ ಜಯಮಾಲ ಪ್ರಕರಣ ಕೇರಳದಲ್ಲಿ ಆಗಿತ್ತು ಇವತ್ತಿನ ದಿವಸ ಕೂಡ ಎಲ್ಲಾ ಜಾತಿಯ ಮಹಿಳೆಯರಿಗೂ ಅಯ್ಯಪ್ಪ ದೇವಸ್ಥಾನ ಒಂದೇ ಅಲ್ಲ ಬೇರೆ ಬೇರೆ ದೇವಸ್ಥಾನಗಳಲ್ಲಿಯೂ ಇವತ್ತೂ ಕೂಡ ನಿಷೇಧ ಇದೆ ಈ ಅಂಕಿ-ಅಂಶಗಳನ್ನು ನಾನು ಕೇಳಿದ್ದೇನೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಬಗ್ಗೆ ಹೇಳುವುದೇನೆಂದರೆ, ಅವತ್ತಿನ ದಿವಸ ಅವರು ಹೆಂಡತಿ ಮಾಡಿದ

ಅಡಿಗೆಯನ್ನು ಸಹ ಊಟ ಮಾಡುವುದಿಲ್ಲವೆಂದು ಅಯ್ಯಪ್ಪಸ್ವಾಮಿ ದೇವರ ಭಕ್ತರೊಬ್ಬರು ನನಗೆ ಹೇಳಿದಾಗ ನನಗೆ ತುಂಬಾ ನೋವಾಯಿತು ಆದ್ದರಿಂದ, ನಾನು ಹೇಳುವುದೇನೆಂದರೆ, ಕೇವಲ ಅಯ್ಯಪ್ಪ ಸ್ವಾಮಿ ದೇವಸ್ಥಾನವಲ್ಲದೇ ನಮ್ಮ ರಾಜ್ಯದ ಬಹುತೇಕ ದೇವಸ್ಥಾನಗಳಲ್ಲಿ ಮಹಿಳೆಯರಿಗೆ ನಿಷೇಧ ಇದೆ ಆದ್ದರಿಂದ, ಎಷ್ಟು ದೇವಸ್ಥಾನಗಳಲ್ಲಿ ಈ ರೀತಿಯಾದ ವ್ಯವಸ್ಥೆ ಇದೆ ಎನ್ನತಕ್ಕಂಥ ಅಂಕಿಗಳು ನಮಗೆ ಬೇಕು ಇಲ್ಲವೆಂದು ಹೇಳಿದರೆ, ಎಲ್ಲೆಲ್ಲಿ ಬಿಡುವುದಿಲ್ಲವೋ ಅಲ್ಲಿಗೆ ನಾನು ಖಂಡಿತವಾಗಿ ಕರೆದುಕೊಂಡು ಹೋಗುತ್ತೇನೆ ನನಗೆ ತಿಳಿದ ಮಟ್ಟಿಗೆ ನಿಮ್ಮ ಊರಿನಲ್ಲಿಯೇ ದಲಿತ ಮಹಿಳೆಯರನ್ನು ದೇವಸ್ಥಾನದ ಒಳಗೆ ಬಿಡುವುದಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ ಬೇಕಾದರೆ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ತಮ್ಮ ಪಕ್ಕದಲ್ಲಿಯೇ ಇದ್ದಾರೆ, ಅವರನ್ನೂ ಸಹ ಕರೆದುಕೊಂಡು ಹೋಗೋಣ ನೇರವಾಗಿ ಎಲ್ಲೆಲ್ಲಿ ಈ ರೀತಿಯಾಗಿದೆಯೋ ಅಲ್ಲಿ ಸರ್ಕಾರ ರಕ್ಷಣೆಗೆ ಬಂದು ಎಲ್ಲರಿಗೂ ಪೂಜೆ ಮಾಡತಕ್ಕಂಥ ಸ್ವಾತಂತ್ರ್ಯ ಕೊಡಬೇಕಾಗುತ್ತದೆ ಮತ್ತೊಂದು ನನ್ನ ಪ್ರಶ್ನೆ ಏನೆಂದರೆ, ಎಷ್ಟು ಜನ ದಲಿತ ಮಹಿಳೆಯರನ್ನು ಪೂಜಾರಿಗಳನ್ನಾಗಿ ನೇಮಿಸಿದ್ದೀರಿ ಈ ಒಂದು ಅಂಕಿ-ಅಂಶಗಳನ್ನು ಕೊಡಿ

ಅಧ್ಯಕ್ಷರು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಗಿವೆ ಈಗ ಎಷ್ಟೋ ವರ್ಷಗಳಾದ ಮೇಲೆ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ ಇದಕ್ಕೆ ಎಲ್ಲರು ಜವಾಬ್ದಾರಿ ಕೂಡ ಇದೆ

ಶ್ರೀ ಬಿ ನಾಗರಾಜ ಸೆಟ್ಟಿ ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ಶಾಸಕರಾದ ಸನ್ಮಾನ್ಯ ಎಸ್ ಎಸ್ ಪಾಟೀಲ್ ರವರು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ ಅವರು ಕೇಳಿರುವ ಪ್ರಶ್ನೆಗೆ ಯಾವಾರೀತಿಯಾಗಿ ಉತ್ತರ ಕೊಟ್ಟಿದ್ದೇವೆಂಬುದನ್ನು ಈಗಾಗಲೇ ಹೇಳಿದ ಹಾಗೆ ಎಲ್ಲಿಯಾದರು ಕಂಡು ಬಂದಲ್ಲಿ ಮತ್ತು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ನಾವು ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವುದೇ ದೇವಸ್ಥಾನಗಳಲ್ಲಿ ಮಹಿಳೆಯರಿಗೆ ದೇವಸ್ಥಾನದೊಳಗೆ ಹೋಗಿ ಪೂಜೆ ಮಾಡುವುದಕ್ಕೆ ಅವಕಾಶವಿದೆ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು

ಅದು ಅವರವರ ಕುಟುಂಬದ ವಿಚಾರವಾಗಿರುವುದರಿಂದ ಅದರ ಬಗ್ಗೆ ನಾವು ಹೆಚ್ಚು ಗಮನಕೊಡುವುದಕ್ಕೆ ಇಚ್ಚೆಪಡುವುದಿಲ್ಲ ಮತ್ತೆ ಅದು ಅವರ ವೈಯಕ್ತಿಕ ಇರಬಹುದು ಕರ್ನಾಟಕ ರಾಜ್ಯದ ಯಾವುದೇ ದೇವಸ್ಥಾನಗಳಲ್ಲಿ ದಲಿತ ಅಥವಾ ಯಾವುದೇ ಮಹಿಳೆಯರಿಗೆ ಒಳಗೆ ಹೋಗುವುದಕ್ಕೆ ಅವಕಾಶ ಇದೆ

ಶ್ರೀ ಎಸ್ ಎಸ್ ಪಾಟೀಲ್ ಕಾಯಿದೆಯಲ್ಲಿ ಅವಕಾಶ ಇದೆ ಎಂದು ಎಲ್ಲರಿಗೂ ಗೊತ್ತಿದೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಸಚಿವರು ಕಾನೂನಿನ ಚೌಕಟ್ಟಿನೊಳಗೆ ಉತ್ತರ ಕೊಟ್ಟಿದ್ದಾರೆ ಇದು ಸಾಮಾಜಿಕವಾದಂಥ ಸಮಸ್ಯೆಯಾಗಿದೆ

(ಗೊಂದಲ)

ಅಧ್ಯಕ್ಷರು ಮಾನ್ಯ ಪಾಟೀಲ್ ರವರೆ, ತಾವು ಕೂಡ ಸಚಿವರಾಗಿ ಕೆಲಸ ಮಾಡ್ಡಿದ್ದೀರಿ ಎಲ್ಲಾ ಸರ್ಕಾರಗಳು ವಿಫಲವಾಗಿವೆ ಆದ್ದರಿಂದ, ಏಕೆ ಸುಮ್ಮನೆ ಕೇಳುತ್ತೀರಿ? ಬಾಲಕೃಷ್ಣರವರೆ ಮುಂದಿನ ಪ್ರಶ್ನೆ ಕೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಸಚಿವರು ತಪ್ಪು ಮಾಹಿತಿ ಕೊಟ್ಟಿದ್ದಾರೆ

ಮಹಿಳೆಯರಿಗೆ ದೇವಸ್ಥಾನಗಳಲ್ಲಿ ಪ್ರವೇಶ

68 (246) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)

ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ರಾಜ್ಯದಲ್ಲಿ ಮಹಿಳೆಯರಿಗೆ ಎಲ್ಲಾ ದೇವಸ್ಥಾನಗಳನ್ನು ಪ್ರವೇಶಿಸಿ ಪೂಜೆ ಮಾಡಲು ಅವಕಾಶವಿದೆಯೇ

ಆ) ರಾಜ್ಯದಲ್ಲಿ ಮಹಿಳೆಯರಿಗೆ ಪ್ರವೇಶ ನಿಷೇದಿಸಿರುವ ದೇವಸ್ಥಾನಗಳಿವೆಯೇ

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಬಿ ನಾಗರಾಜ ಶೆಟ್ಟಿ

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎಸ್ ಎಸ್ ಪಾಟೀಲ್ ಈ ಉತ್ತರ ತಾವು ನೋಡಬೇಕು ಅವರು ಈ ರೀತಿಯಾಗಿ ಉತ್ತರ ಕೊಟ್ಟರೆ ಹೇಗೆ? ಅವರ ಪಕ್ಕದಲ್ಲಿಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಕುಳಿತಿದ್ದಾರೆ ನನ್ನ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಮಹಿಳೆಯರಿಗೆ ಎಲ್ಲಾ ದೇವಸ್ಥಾನಗಳನ್ನು ಪ್ರವೇಶಿಸಿ ಪೂಜೆ ಮಾಡಲು ಅವಕಾಶವಿದೆಯೆ? ಎಂದು ಕೇಳಿದ್ದಕ್ಕೆ ಅವರು ಹೌದು ಎಂದು ಉತ್ತರ ಕೊಟ್ಟಿದ್ದಾರೆ ಕಾಯಿದೆಯಲ್ಲಿದೆ ಅದನ್ನು ಒಪ್ಪೋಣ ನನ್ನ ಎರಡನೇ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಮಹಿಳೆಯರಿಗೆ ಪ್ರವೇಶ ನಿಷೇಧಿಸಿರುವ ದೇವಸ್ಥಾನಗಳಿವೆಯೇ? ಎಂದು ಕೇಳಿದ್ದಕ್ಕೆ ಇಲ್ಲ ಎಂದು

ಉತ್ತರ ಕೊಟ್ಟಿದ್ದಾರೆ ಮಹಿಳೆಯರನ್ನು ನಿಷೇಧ ಮಾಡಿರುವ ದೇವಸ್ಥಾನ ನಮ್ಮ ನಜರಿಗೆ ಬಂದಿಲ್ಲವೆ? ಎಷ್ಟು ತೋರಿಸಲಿ? ಬಹುಶಃ ದಲಿತ ಮಹಿಳೆಯರನ್ನಂತೂ ಯಾವ ಊರಿನಲ್ಲಿ ಯಾವ ದೇವಸ್ಥಾನದಲ್ಲೂ ಬಿಟ್ಟಿಲ್ಲ

ಶ್ರೀ ಆರ್ ಧೃವನಾರಾಯಣ ಮಹಿಳೆಯರಿಗಷ್ಟೆ ಅಲ್ಲ ಪುರುಷರಿಗೂ ನಿಷೇಧವಿದೆ

ಶ್ರೀ ಎಸ್ ಎಸ್ ಪಾಟೀಲ್ ಅದು ಒಂದು ಕಡೆ ಇರಲಿ, ದಲಿತ ರೆಂದರೆ ದಲಿತರೆ ಇವತ್ತಿಗೂ ಕುಡ ಅಸ್ಪೃಷ್ಯತೆ ಆಚರಣೆ ನಿಂತಿಲ್ಲ ನಾನು ಆ ದೃಷ್ಟಿಯಿಂದ ದಲಿತರು ಇನ್ನುವ ಶಬ್ಧ ಹಾಕಿರಲಿಲ್ಲ ಏನು ಉತ್ತರ ಕೊಡುತ್ತಾರೆ ನೋಡೋಣ ಎಂದು ಬೇಕಾಗಿಯೇ ಹಾಕಿರಲಿಲ್ಲ ದಲಿತ ಮಹಿಳೆ ಅಲ್ಲವೆ? ಪ್ರಾಮಾಣಿಕವಾಗಿ ನೀವು ಹೇಳಿ ನೀವು ಮುಜರಾಯಿ ಸಚಿವರಾಗಿ ಈ ರೀತಿಯಾಗಿ ಸುಮ್ಮನೆ ಉತ್ತರ ಕೊಟ್ಟರೆ ಏನು ಮಾಡುವುದು? ಮಹಿಳೆಯರ ರಕ್ಷಣೆಗೆ ಹೋಗುವವರು ಯಾರು ಇದ್ದಾರೆ?

ಅಧಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ ನಾನು ಮುಂದಿನ ಪ್ರಶ್ನೆಗೆ ಅವಕಾಶ ಕೊಟ್ಟಿದ್ದೇನೆ ಮಾನ್ಯ ಬಾಲಕೃಷ್ಣರವರನ್ನು ಸಹ ಕರೆದಿದ್ದೇನೆ

ಶ್ರೀಮತಿ ಭಾಗೀರಥಿ ಮರುಳ ಸಿದ್ಧನಗೌಡ ಮಾನ್ಯ ಅಧ್ಯಕ್ಷರೆ, ನಮಗೂ ಅವಕಾಶ ಕೊಡಿ

ಶ್ರೀ ನೆ ಲ ನರೇಂದ್ರಬಾಬು ಮಹಿಳೆಯರ ಬಗ್ಗೆ ಪ್ರಶ್ನೆ ಇದೆ ಮಹಿಳೆಯರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಿ

ಅಧ್ಯಕ್ಷರು ಈಗಾಗಲೇ ಮುಂದಿನ ಪ್ರಶ್ನೆಗೆ ಹೋಗಿದ್ದೇನೆ

ಶ್ರೀ ಆರ್ ಧ್ರುವನಾರಾಯಣ ಈ ಸರ್ಕಾರ ಮಹಿಳಾ ವಿರೋಧಿ ಸರ್ಕಾರವಾಗಿದೆ

ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಅವ್ಯವಹಾರ

69, (411) ಶ್ರೀ ಬಾಲಕೃಷ್ಣ ಹೆಚ್ ಸಿ (ಮಾಗಡಿ)

ಮಾನ್ಯ ಸಹಕಾರ ಸಚಿವರು ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1 ಬೆಂಗಳೂರು ನಗರದ ಮೈಸೂರು ರಸ್ತೆ ಬಾಪೂಜಿ ನಗರದಲ್ಲಿರುವ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದ ಹಿಂದಿನ ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ಬಾರಿ ಅವ್ಯವಹಾರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದ್ದಯೇ?

2 ಈ ಸಂಘದಲ್ಲಿ ಹಿರಿಯ ಸದಸ್ಯರಿಗೆ ನಿವೇಶನ ಹಂಚದೆ ಸದಸ್ಯರಲ್ಲದವರಿಗೆ ನಿವೇಶನ ಹಂಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3 ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

4 ಸಹಕಾರ ಇಲಾಖೆಯ ಜಿಲ್ಲಾ ನಿಬಂಧಕರು–2 ಬೆಂಗಳೂರು ನಗರ ಇವರ ಮುಂದೆ ಹಿರಿಯ ಸದಸ್ಯರಿಗೆ ನಿವೇಶನ ಹಂಚುವ ಸಲುವಾಗಿ ದೂರು ದಾಖಲು ಮಾಡಲಾಗಿದ್ದು ಜಿಲ್ಲಾ ನಿಬಂಧಕರು–2 ಈ ಕುರಿತು ನ್ಯಾಯಾಲಯದಲ್ಲಿ ಹೆಚ್ಚಿನ ಅವಧಿಯನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

5 ಈ ಸಂಘದ ಅವ್ಯವಹಾರ ಕುರುತು ಉನ್ನತ ಮಟ್ಟದ ಅಧಿಕಾರಿಗಳ ತಂಡ ರಚಿಸಿ, ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಲಾಗುವುದು?

6 ಹಾಗಿದ್ದಲ್ಲಿ ವಿಶೇಷ ನ್ಯಾಯಲಯವನ್ನು ಯಾವಾಗ ಸ್ಥಾಪನೆ ಮಾಡಲಾಗುವುದು?

7 ಹಿರಿಯ ಸದಸ್ಯರಿಗೆ ಯಾವಾಗ ನಿವೇಶನವನ್ನು ಒದಗಿಸುವ ವ್ಯವಸ್ಥೆ ಮಾಡಲಾಗುವುದು?

ಜಿ ಟಿ ದೇವೇಗೌಡ

1) ಹೌದು

2) ಹೌದು

ಅ) 2000–2001 ನೇ ಸಾಲಿನಲ್ಲಿ ಸಂಘದಲ್ಲಿ ನಡೆದಿದ್ದ ನಿಯಮ ಬಾಹಿರ ಚಟುವಟಿಕೆಗಳ ಬಗ್ಗೆ ಪ್ರಕರಣ 65ರಡಿ ಪರಿವೀಕ್ಷಣೆ ನಡೆಸಿ ಪರಿವೀಕ್ಷಣಾ ವರದಿ ಆಧಾರದ ಮೇಲೆ ಸಂಘಸ ಮಾಜಿ ಅಧ್ಯಕ್ಷರು, ಮಾಜಿ ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳು ದುರುಪಯೋಗ 'ಪಡಿಸಿಕೊಂಡಿಲ್ಲ ರೂ 457 69 ಲಕ್ಷ ಮೊಬಲಗಿನ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಪಗಳ ಅದಿನಿಯಮ 1959 ರ ಪ್ರಕರಣ 69 ರಡಿ ಸಹಕಾರ ಸಂಘಗಳ ಉಪನಬಂಧಕರು ಬೆಂಗಳೂರು–1 ಅಧಿಭಾರ ಕ್ರಮ ಕೈಗೊಂಡು ಅವಾರ್ಡ್ ನೀಡಿರುತ್ತಾರೆ ಈ ಅವಾರ್ಡಿನಲ್ಲಿ ಸಂಘದ ಅಧ್ಯಕ್ಷರೆಗಿದ ಶ್ರೀ ರಾಜ್‌ಕುಮಾರ್ ಮತ್ತು ಉಪಾದ್ಯಕ್ಷರಾಗಿದ್ದ ಶ್ರೀ ಎಂ ವಿ ರುದ್ರಾಚಾರಿ ಮತ್ತು ಇವರ ಕುಟುಂಬದವರ ಹೆಸರಿನಲ್ಲಿ ಹೊಂದಿರುವ ವಿವಿಧ ಜಮೀನು ಮತ್ತು ಕಟ್ಟಡಗಳನ್ನು ಬಹಿರಂಗ ಹರಾಜು ಮಾಡಿ ಹಣ ವಸೂಲಿ ಮಾಡಲು ಆದೇಶವಾಗಿರುತ್ತದೆ

ಆ) ಸಂಘದ ಪದಾಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಿಲು ಮಾಡಲಾಗಿದೆ ಸಂಘದ ಮಾಜಿ ಅಧ್ಯಕ್ಷರ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆಯಲ್ಲಿ ಸದರಿಯವರಿಗೆ ಸೆರೆವಾಸದ ಶಿಕ್ಷೆಯಾಗಿದ್ದು ನ್ಯಾಯಾಲಯದಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ

ಇ) ಸಂಘದಲ್ಲಿ ಹಣ ದುರುಪಯೋಗ ಮಾಡಿದವರ ಆಸ್ತಿಗಳನ್ನು ಜಪ್ತಿ ಮತ್ತು ಮಾರಾಟಕ್ಕೆ ಒಳಪಡಿಸಲಾಗಿರುತ್ತದೆ

ಈ) 7 ಜನ ಸದಸ್ಯರಲ್ಲದವರಿಗೆ ನಿವೇಶನ ವಿತರಣೆ ಮಾಡಿದ್ದು ಈ ಬಗ್ಗೆ ಸಂಘದ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ

ಉ) ಅನುಮೋದಿತ ನಕ್ಷೆಯ ರೀತ್ಯಾ ಸಾರ್ವಜನಿಕ ಉದ್ದೇಶಕ್ಕಾಗಿವ ಮೀಸಲಿಟ್ಟ ಜಾಗದಲ್ಲಿ ನಿವೇಶನಗಳನ್ನಾಗಿ ಪರಿವರ್ತಿಸಿ ವಿತರಿಸಿರುತ್ತಾರೆ ಈ ಬಗೆ ಬಿ ಡಿ ಎ ಕ್ರಮವಿಡಬೇಕಾಗಿರುತ್ತದೆ

ಊ) ಸಂಘದ ರೇವಣಿದಾರರ ಜೇಷ್ಠತೆ ಪಟ್ಟಿಯನ್ನು ತಯಾರಿಸಿದ್ದು, ಸದಂ ಜೇಷ್ಠತಾ ಪಟ್ಟಿಯನ್ವಯ ನಿವೇಶನ ಹಂಚಿಕೆ ಬಗ್ಗೆ ಕ್ರಮ ಕೈಗೊಳ್ಳಲು ಸಂಘಗಳ ನಿಬಂಧಕರು ನಿರ್ದೇಶನ ನೀಡಿದ್ದು, ಈ ನಿರ್ದೇಶನದನ್ವಯ ಹಾಲಿ ಆಡಳಿತ ಮಂಡಳಿಯು 160ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಹಿಂದಿನ ಆಡಳಿತ ಮಂಡಳಿಯ ನಿವೇಶನ ಹಂಚಿಕೆಯನ್ನು ರದ್ದು ಮಾಡಿರುತ್ತಾರೆ ಈ ರದ್ದತಿ ಆದೇಶವನ್ನು ಪ್ರಶ್ನಿಸಿ ಒಟ್ಟು 114 ಪ್ರಕರಣಗಳಲ್ಲಿ ಸಂಬಂಧಪಟ್ಟವರು ಸಹಕಾರ ಸಂಘಗಳ ಉಪನಿಬಂಧಕರು-2, ಬೆಂಗಳೂರು ನಗರ ಜಿಲ್ಲೆ ಇವರ ನ್ಯಾಯಲಯದ ಮುಂದೆ ಪ್ರಕರಣ 70 ರಡಿ ದಾವಾ ದಾಖಲಿಸಿದ್ದು ಸದರಿ ದಾವಾಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಪಡಿಸಲು ಸಹಕಾರಿ ಸಂಘಗಳ ಉಪನಿಬಂಧಕರು, ಬೆಂಗಳೂರು-2 ಇವರಿಗೆ ಸೂಚನೆ ನೀಡಲಾಗಿದೆ

ಋ) ಅಲ್ಲದೆ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಪ್ರಕರಣ 64 ರ ವಿಚಾರಣೆಗೆ ಆದೇಶಿಸಿದ್ದು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ ಬೆಂಗಳೂರು ಇವರು ವಿಚಾರಣೆ ನಡೆಸುತ್ತಿದ್ದು, ವಿಚಾರಣಾ ವರದಿ ಸಲ್ಲಿಸಲು ಬಾಕಿ ಇರುತ್ತದೆ

ಈ ಸಂಘದ ನಿವೇಶನ ಹಂಚಿಕೆ ಸಂಬಂಧ ಒಟ್ಟು 114 ದಾವಾ ಪ್ರಕಾರಣಗಳು ಸಹಕಾರ ಸಂಘಗಳ ಉಪನಿಬಂಧಕರು ಬೆಂಗಳೂರು-2 ಇವರ ಮುಂದೆ ದಾಖಲಾಗಿದ್ದು ಇವರು ಈ ಕಾವಾಗಳಲ್ಲದೆ ಇತರೆ 151 ದಾವಾ ಪ್ರಕರನಗಳ ವಿಚಾರಣೆ ನಡೆಸುತ್ತಿರುವುದರಿಂದ ಕೆಲಸದ ಒತ್ತಡದಿಂದ ಹಲವು ಸಂದರ್ಭಗಳಲ್ಲಿ ಹೆಚ್ಚಿನ ಅವದಿ ನೀಡಿರುತ್ತಾರೆ ಆದಾಗ್ಯೂ, ಈ ಸಂಘದ 114 ಪ್ರಕರಣಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಗೊಳಿಸುವಂತೆ ಸದರಿಅಧಿಕಾರಿಯವರಿಗೆ ಸೂಚನೆ ನೀಡಲಾಗಿದೆ

ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದ ದಾವೆಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವಂತೆ ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು-2 ಇವರಿಗೆ ಸೂಚನೆ ನೀಡಲಾಗಿದೆ ಹಿರಿಯ ಸದಸ್ಯರಿಗೆ ನಿವೇಶನ ನೀಡಲು ಸಂಘದ ಹಂತದಲ್ಲಿ ಕ್ರಮವಿಡಬೇಕಾಗಿರುತ್ತದೆ

ಶ್ರೀ ಹೆಚ್ ಸಿ ಬಾಲಕೃಷ್ಣ – ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಸದಸ್ಯರಲ್ಲದೆ ಇರತಕ್ಕಂಥವರಿಗೆ ಸೈಟ್ ಕೊಟ್ಟಿರತಕ್ಕಂಥದರ ಬಗ್ಗೆ ಕೂಡ ಒಪ್ಪಿಕೊಂಡಿದ್ದಾರೆ ಮತ್ತೆ ಜ್ಯೇಷ್ಠತೆಯನ್ನು ಕಡೆಗಣಿಸಿ ಜ್ಯೂನಿಯರ್‌ಗಳಿಗೆ ಸೈಟ್ ಕೊಟ್ಟಿದ್ದಾರೆ ಆದರೆ, ಜ್ಯೂನಿಯರ್‌ಗಳು ಡಿ ಆರ್ ಕೋರ್ಟ್‌ನಲ್ಲಿ ಕೇಸ್ ಹಾಕಿಕೊಂಡಿದ್ದಾರೆ ಕೇಸ್ ಹಾಕಿ 6 ತಿಂಗಳಾಗಿದ್ದು, ಇದುವರೆಗೂ ತೀರ್ಮಾನವಾಗಿಲ್ಲ ಆದ್ದರಿಂದ, ಇದನ್ನು ಎಷ್ಟು ದಿವಸಗಳಲ್ಲಿ ತೀರ್ಮಾನ ಮಾಡುತ್ತಾರೆಂಬುದು ನನ್ನ ಮೊದಲನೇ ಪ್ರಶ್ನೆಯಾಗಿದೆ ಎರಡನೇ ಪ್ರಶ್ನೆ ಏನೆಂದರೆ, ಸಹಕಾರ ಸಂಘಗಳ ಹೆಸರು ಹೇಳಿಕೊಂಡು ಇವತ್ತಿನ ದಿವಸ ಎಲ್ಲಾ ಕಡೆ ದಂಧೆ ಮಾಡುತ್ತಿದ್ದಾರೆ ಆದ್ದರಿಂದ, ಇದಕ್ಕೆ ಕಡಿವಾಣ ಹಾಕುವುದಕ್ಕೆ ತಮ್ಮ ಮುಖಾಂತರ ಸದನ ಸಮಿತಿ ರಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತೆ ಇದಕ್ಕೆ ಇತಿಶ್ರೀ ಹಾಕತಕ್ಕಂಥದಕ್ಕೆ ಸರ್ಕಾರ ಏನಾಕರೂ ತೀರ್ಮಾನ ಮಾಡಿದೆಯೇ? ಜುಡಿಷಿಯಲ್ ಲೇಔಟ್‌ನ್ನು ಜಡ್ಜ್ ಗಳು ಮತ್ತು ಲಾಯರ್ ಗಳು ಸೇರಿಕೊಂಡು ಮಾಡಿದ್ದಾರೆ ಇವತ್ತಿನ ದಿವಸ ಅಲ್ಲಿಯೂ ಕೂಡ ದೊಡ್ಡ ಅವ್ಯವಹಾರ ಆಗಿದೆ ಎಲ್ಲಾ ಕಡೆ ಈ ರೀತಿಯಾದ ಅವ್ಯವಹಾರ ನಡೆಯುತ್ತಿವೆ

ಅಧ್ಯಕ್ಷರು ನೀವು ಕೇವಲ ಬಾಪೂಜಿ ಗೃಹ ನಿರ್ಮಾಣ ಸಂಘದಲ್ಲಿ ಆಗಿರುವ ಅವ್ಯವಹಾರವನ್ನು ಎಷ್ಟು ದಿವಸದಲ್ಲಿ ತೀರ್ಮಾನ ಮಾಡಿ ಕೊಡಲಾಗುತ್ತದೆಂಬುನ್ನು ಹೇಳಬೇಕು ಮತ್ತೆ ಇಡೀ ರಾಜ್ಯದಲ್ಲಿ ಆಗಿರತಕ್ಕಂಥ ಅನಾನೂಕುಲಗಳ ಬಗ್ಗೆ ಅಂದರೆ, ಯಾರೊ ಹೆಸರಿನಲ್ಲಿ ಮೆಂಬರ್ಸ್ ಅಲ್ಲದೇ ಇರತಕ್ಕಂಥ ಯಾರಿಗೋ ಸೈಟ್ ಕೊಡತಕ್ಕಂಥ ವ್ಯವಹಾರ ಬಹಳ ದಿವಸಗಳಿಂದ ನಡೆದುಕೊಂಡು ಬರುತ್ತಿದೆ ಆದ್ದರಿಂದ ಇದರ ತನಿಖೆಗೋಸ್ಕರ ತಮ್ಮ ಮುಖಾಂತರ ಸದನ ಸಮಿತಿ ರಚನೆ ಮಾಡಿ ಇದಕ್ಕೆ ಇತಿಶ್ರೀ ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಜಿ ಟಿ ದೇವೆಗೌಡ – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಹಿಂದೆ ಇದ್ದಂಥ ಆಡಳಿತ ಮಂಡಳಿಯವರು ಸೆರೆವನೆ ವಾಸವನ್ನು ಸಹ ಅನುಭವಿಸಿದ್ದಾರೆ ಇದಾದ ಮೇಲೆ ಹೊಸ ಆಡಳಿತ ಮಂಡಳಿ ಬಂದಿದೆ ಹಿರಿಯ ಸದಸ್ಯರುಗಳಿಗೆ ಅನ್ಯಾಯವಾಗಿದೆ ಎಂದು ನ್ಯಾಯಾಲಯದ ಮೊರೆ ಹೋಗಿದ್ದಾರೆ ಪುನರ್ ಪರಿಶೀಲನೆಗೋಸ್ಕರ ನ್ಯಾಯಾಲಯ ಮತ್ತೆ ನಮ್ಮ ಇಲಾಖೆಗೆ ಕೊಟ್ಟಿದೆ ನಮ್ಮ ಡೆಪ್ಯುಟಿ ರಿಜಿಸ್ಟ್ರಾರ್ ರವರು ಈ ಕೇಸನ್ನು ನಡೆಸುತ್ತಿದ್ದಾರೆ ಸನ್ಮಾನ್ಯ ಸದಸ್ಯರು ಕೇಳಿರತಕ್ಕಂಥದನ್ನು ಕೂಡಲೇ ವಿಲೇವಾರಿ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ

ಶ್ರೀ ಹೆಚ್ ಸಿ ಬಾಲಕೃಷ್ಣ ಮಾನ್ಯ ಅಧ್ಯಕ್ಷರೆ, ಕೂಡಲೇ ಎಂದು ಹೇಳಿದರೆ ಇದು ಸದ್ಯಕ್ಕೆ ಮುಗಿಯತಕ್ಕಂಥ ಕೆಲಸ ಅಲ್ಲ ಎಷ್ಟು ದಿವಸಗಳಲ್ಲಿ ಮಾಡಲಾಗುತ್ತದೆಮದು ಅವರು ನಿರ್ಧಿಷ್ಟವಾಗಿ ಹೇಳಬೇಕು ಒಂದು ಅಥವಾ ಎರಡು ತಿಂಗಳಲ್ಲಿ ಮುಗಿಸುತ್ತೀರಾ, ಹಿಂದಿನ ಮಂತ್ರಿಗಳೂ ಸಹ ಕೂಡಲೇ ಎಂದು ಹೇಳಿಕೊಂಡು ಬಂದಿದ್ದಾರೆ ಅದ್ದರಿಂದ, ಇವರೂ ಸಹ ಕೂಡಲೇ ಎಂದು ಹೇಳತಕ್ಕಂಥದು ಸರಿಯಲ್ಲ 1 ಅಥವಾ 2 ತಿಂಗಳಲ್ಲಿ ಮುಗಿಸುತ್ತೇವೆಂದಾದರೂ ಹೇಳಬೇಕು ಹಾಗೆಯೇ ಇದು ಅಲ್ಲದೇ, ಬೇರೆ ಕಡೆ ಆಗುತ್ತಿರುವಂಥ ಅನ್ಯಾಯಗಳನ್ನು ಯಾವರೀತಿಯಾಗಿ ಸರಿಪಡಿಸಲಾಗುತ್ತದೆ ಎನ್ನತಕ್ಕಂಥವನ್ನು ಸರ್ಕಾರ ದಯವಿಟ್ಟು ಹೇಳಬೇಕು

ಶ್ರೀ ಜಿ ಟಿ ದೇವೇಗೌಡ ತುರ್ತಾಗಿ ಗಮನಹರಿಸಿ ಕ್ರಮ ಕೈ ಗೊಳ್ಳುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಹೆಚ್ ಸಿ ಬಾಲಕೃಷ್ಣ ತುರ್ತಾಗಿ ಎಂದರೆ, 1,2,3 ಅಥವಾ 6 ತಿಂಗಳೆಂದು ಹೇಳಿ ಜ್ಯೂನಿಯರ್ ಮತ್ತು ಸೀನಿಯರ್ ಯಾರೆಂದು ತೀರ್ಮಾನ ಮಾಡುವುದಕ್ಕೆ ಡಿ ಆರ್ ಗಳು 6 ತಿಂಗಳು ಮಾಡಿದ್ದಾರೆಂದರೆ, ಬಡವರಿಗೆ ಮತ್ತು ಅನ್ಯಾಯವಾಗಿರತಕ್ಕಂಥವರಿಗೆ ಸರಿಪಡಿಸತಕ್ಕಂಥದು ಯಾವಾಗ?

ಶ್ರೀ ಜಿ ಟಿ ದೇವೇಗೌಡ – ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಬದಲ್ಲಿ ಇನ್ನೊಂದು ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ ಅದೇನೆಂದರೆ,

ಈಗ ಇರತಕ್ಕಂಥ ಅಧಿಕಾರಿ ಡಿಲೇ ಮಾಡಿದ್ದರೆ ತುರ್ತಾಗಿ ಮಾಡತಕ್ಕಂಥ ಬೇರೆ ಅಧಿಕಾರಿಯನ್ನು ನೇಮಕ ಮಾಡುತ್ತೇನೆ

ಶ್ರೀ ಹೆಚ್ ಸಿ ಬಾಲಕೃಷ್ಣ ಈಗ ಬೇರೆ ಅಧಿಕಾರಿಗೆ ವಹಿಸಿಕೊಟ್ಟರೆ ಮತ್ತೆ 6 ತಿಂಗಳು ತಡವಾಗುತ್ತದೆ ಇರತಕ್ಕಂಥ ಅಧಿಕಾರಿಗಳಿಂದಲೇ ತುರ್ತಾಗಿ ಕೆಲಸ ಮಾಡಿಸಿ ಇಲ್ಲಿ ಅನ್ಯಾಯವಾಗಿದೆ ಆದ್ದರಿಂದ, ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಎಷ್ಟು ದಿವಸ ಎಂದು ಹೇಳ ಬೇಕು 6 ತಿಂಗಳು ಅದವಾ ಒಂದು ವರ್ಷವೆಂದು ಹೇಳಲಿ ಜ್ಯೂನಿಯರ್ಸ್ ಯಾರೆಂದು ತೀರ್ಮಾನ ಮಾಡುವುದಕ್ಕೆ ತುರ್ತಾಗಿ, ಕೂಡಲೇ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು ಈಗ ಇರತಕ್ಕಂಥ ಗೃಹ ನಿರ್ಮಾಣ ಸಂಘಗಳಲ್ಲಿ 100ಕ್ಕೆ 90ರಷ್ಟು ಸಂಘಗಳು ಹೇಸಿಗೆ ಕೆಲಸವನ್ನು ಮಾಡುತ್ತಿದ್ದಾವೆ ಇದಕ್ಕೆ ಈಗಾಗಲೇ ವರದಿ ಕೂಡ ಇದೆ ಆದ್ದರಿಂದ, ತಾವು ಕೂಡ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೀರಿ ಆದ್ದರಿಂದ, ಈ ಒಂದು ಕೊಳೆಯನ್ನು ತೆಗೆಯತಕ್ಕಂಥ ಕೆಲಸವನ್ನು ಮಾಡಿ ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಕೇಳುತ್ತಿದ್ದಾರೆ, ಅದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂಬುದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಿ

ಶ್ರೀ ಜಿ ಟಿ ದೇವೇಗೌಡ ತಾವು ಅಧ್ಯಕ್ಷರಾಗಿ ಒಂದು ಮಾತನ್ನು ಹೇಳಿದ್ದೀರಿ ಇವತ್ತಿನ ದಿವಸ ಉತ್ತಮವಾಗಿ ಕೆಲಸ ಮಾಡತಕ್ಕಂಥ ಸಹಕಾರ ಸಂಘಗಳಿವೆ ತಮ್ಮ ಗಮನಕ್ಕೆ ತರುವುದೇನೆಂದರೆ, ಹೌಸಿಂಗ್ ಸೊಸೈಟಿಗಳಿಗೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳತಕ್ಕಂಥ ಅಧಿಕಾರ ಇಲ್ಲ ಅಥವಾ ಬೇರೆಯವರಿಂದ ಕೊಂಡುಕೊಳ್ಳತಕ್ಕಂಥ ಅಧಿಕಾರ ಕೂಡ ಇಲ್ಲ ಇದೆಲ್ಲಾ ಹಿಂದೆಯೇ ನಿಂತುಹೋಗಿದೆ 300 ಕ್ಕಿಂತ ಹೆಚ್ಚು ಚಿಲ್ಲರೆ ಸಂಘಗಳು ಬೆಂಗಳೂರಿನಲ್ಲಿವೆ ಇವತ್ತಿನ ದಿವಸ ಸುಮಾರು 20 ರಿಂದ 30 ಸಹಕಾರ ಸಂಘಗಳು ಮಾತ್ರ ವ್ಯವಹಾರವನ್ನು ಮಾಡುತ್ತಿವೆ 1995ಕ್ಕಿಂತ ಮುಂಚೆ ಯಾವುದು ಮಾಡಿದ್ದವೋ ಅವುಗಳಲ್ಲಿ ಮಾತ್ರ ಈ ರೀತಿಯಾಗಿ ಬರುತ್ತಿವೆ ಈಗ ಅತಿಕ್ರಮಣ ಮಾಡಿರತಕ್ಕಂಥ ಸಂಘಗಳ ಮೇಲೆ ತುರ್ತಾಗಿ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಒಂದು ಶಿಸ್ತಿನ ಕ್ರಮವನ್ನು ಅಳವಡಿಸತಕ್ಕಂಥ ಕೆಲಸವನ್ನು ನಾವು ಖಂಡಿತ ಮಾಡುತ್ತೇವೆ

ಅಧ್ಯಕ್ಷರು ಆಯಿತು ಅಷ್ಟಾದರೂ ಮಾಡಿ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ ಮಾನ್ಯ ಬಾಲಕೃಷ್ಣರವರೆ, ತಾವು ದಯಮಾಡಿ ಕುಳಿತುಕೊಳ್ಳಿ

ಶ್ರೀ ಹೆಚ್ ಸಿ ಬಾಲಕೃಷ್ಣ ನನ್ನ ಪ್ರಶ್ನೆಗೆ ಸ್ಪಷ್ಟ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿಲ್ಲ 1 ಅಥವಾ 2, 3 ತಿಂಗಳಲ್ಲಿ ಮಡುತ್ತಾರೆಯೋ ಎಂಬುದನ್ನು ಮಾನ್ಯ ಮಂತ್ರಿಗಳು ದಯಮಾಡಿ ಹೇಳಬೇಕು

ಅಧ್ಯಕ್ಷರು ಮಾನ್ಯ ಬಾಲಕೃಷ್ಣರವರೆ, ಆ ರೀತಿಯಾಗಿ ನೀವು ಅವರ ಮೇಲೆ ತಲೆ ಮೇಲೆ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ – ಕೂಡಲೇ ಎಂದು ಹೇಳಿದರೆ ಹೇಗೆ? ಒಂದು ದಿನಾಂಕವನ್ನು ಹೇಳಲಿ?

ಶ್ರೀ ಜಿ ಟಿ ದೇವೆಗೌಡ – ಮಾನ್ಯ ಅಧ್ಯಕ್ಷರೆ, 6 ತಿಂಳಲ್ಲಿ ಮಾಡಿ ಎಂದು ಹೇಳಿದ್ದಾರೆ ಆದರೆ, ನಾನು ಮೂರು ತಿಂಗಳಲ್ಲಿ ಕ್ರಮ ತೆಗೆದು ಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ

ಅಧ್ಯಕ್ಷರು ಆಯಿತು

70 (115) ಶ್ರೀ ಶಂಕರ ಲಿಂಗೇಗೌಡ ಹೆಚ್ ಎಸ್ (ಚಾಮರಾಜ)

ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಉದ್ಯಾನವನಗಳು ಯಾವವು (ವಿವರ ನೀಡುವುದು)

ಆ) ಇವುಗಳಲ್ಲಿ ಯಾವ ಯಾವ ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿ ಪೂರ್ಣ ಗೊಂಡಿದೆ ಇದಕ್ಕೆ ತಗಲಿದ ವೆಚ್ಚ ಎಷ್ಟು?

ಇ) ಯಾವ ಯಾವ ಪಾರ್ಕ್‌ಗಳ ಅಭಿವೃದ್ದಿ ಕಾರ್ಯ ಕೈಗೆತ್ತಿ ಕೊಳ್ಳಬೇಕಾಗಿದೆ ಯಾವಾಗ ಕಾಮಗಾರಿ ಪೂರ್ಣಗೊಳಿಸಲಾಗುವುದು

ಶ್ರೀ ಶಶಿಕಾಂತ ಲ ಅಕ್ಕಪ್ಪನಾಯಕ್

ಅ) ಮೈಸೂರು ನಗರದಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ಉದ್ಯಾನವನಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) 2006-07ನೇ ಸಾಲಿನಲ್ಲಿ ಕರ್ಜನ್ ಪಾರ್ಕ್ ಬ್ಲಾಕ್ 2, ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ, ಕೇಂದ್ರ ಸಸ್ಯಾಗಾರಗಳಲ್ಲಿ ತೋಟಗಾರಿಕೆ ಇಲಾಖೆಯಿಂದ ಕಾಮಗಾರಿ ಕೈಗೊಳ್ಳಲಾಗಿತ್ತು ಕರ್ಜನ್ ಪಾರ್ಕ್ ಬ್ಲಾಕ್ 3 ರ ಅಭಿವೃದ್ದಿಯನ್ನು ಮೈಸೂರು ಮಹಾನಗರ ಪಾಲಿಕೆಗೆ ವಹಿಸಲಾಗಿದೆ ಉಳಿದ ಪಾರ್ಕುಗಳಲ್ಲಿ ನಿರ್ವಹಣೆ ಮಾತ್ರ ಮಾಡಲಾಗುತ್ತಿದೆ ಕಾಮಗಾರಿ ಕೈಗೊಂಡ ಪಾರ್ಕುಗಳ ವಿವರ ಈ ಕೆಳಕಂಡಂತಿವೆ

ಉದ್ಯಾನವನ	ತಗಲಿದ ವೆಚ್ಚ ಲಕ್ಷಗಳಲ್ಲಿ	ಕಾಮಗಾರಿ ಹಂತ
1 ಕರ್ಜ್‌ನ್ ಪಾರ್ಕ್ ಬ್ಲಾಕ್–1	09 30	ಇಂಟರ್ ಲಾಕ್ ಪೇವ್ ಮೆಂಟ್ 06 00ಲಕ್ಷ ಗಾರ್ಡನ್ ಲೈಟ್ಸ 01 80ಲಕ್ಷ ಸ್ಪ್ರಿಂಕಲರ್ ಸಿಸ್ಟಂ ಅಳವಡಿಕೆ 02 00ಲಕ್ಷ ಫೆಬ್ರವರಿ 2007 ರಲ್ಲಿ ಒಟ್ಟು 09 80 ಲಕ್ಷ ರೂಪಾಯಿಗಳನ್ನು ಜಿಲ್ಲಾ ಪಂಚಾಯತ್ ಇಂಜಿನಯರಿಂಗ್ ವಿಭಾಗಕ್ಕೆ ರೇವಣಿ ಇಡಲಾಗಿದೆ ಏಪ್ರಿಲ್ 2007 ರಲ್ಲಿ ಕಾಮಗಾರಿ ಪ್ರಾರಂಭವಾಗಿದೆ
2 ಕರ್ಜ್‌ನ್ ಪಾರ್ಕ್ ಬ್ಲಾಕ್–2	0 50	ಪಂಪ್ ಸೆಟ್ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ
3 ಸರ್ಕಾರಿ ಭವನ	01 50	ಬೋರ್ ವೆಲ್ ಕೊರೆಸುವುದು ವಿದ್ಯತ್ ಶಕ್ತಿ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ
4 ಕೇಂದ್ರ ಸಸ್ಯಾಗಾರ	01 50	01 10 ಲಕ್ಷದ ವೆಚ್ಚದಲಿ ಶೇಡ್ ನೆಟ್ ಮತ್ತು ಹೈಟೆಕ್ ಪಾಲಿ ಹೌಸ್‌ದುರಸ್ಥಿ ಮಾಡಲಾಗಿದೆ ಹಾಗೂ 0 40 ಲಕ್ಷದಲ್ಲಿ ನೆಲಮಟ್ಟದ ವಾಟರ್ ಟ್ಯಾಂಕ್ ದುರಸ್ಥಿ ಪಡಿಸಬೇಕಾಗಿದೆ

ಮೈಸೂರು ನಗರದಲ್ಲಿ ಈ ಕೆಳಕಂಡ ಪಾರ್ಕ್‌ಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬೇಕಾಗಿದೆ

1 ಕರ್ಜ್‌ನ್ ಪಾರ್ಕ್ ಬ್ಲಾಕ್–2

2 ನಿಶಾದ್ ಬಾಗ್ ಪಾರ್ಕ್

3 ಜಲದರ್ಶಿನ ಅತಿಥಿ ಗೃಹ ಉದ್ಯಾನವನ

4 ಜಲಸನ್ನಿದಿ(ಜಿಲ್ಲಾದಿಕಾರಿಗಳು ನವಾಸ)

5 ಪ್ರಾದೇಶಿಕ ಆಯುಕ್ತರ ಕಛೇರಿ ಉದ್ಯಾನವನ

6 ಜಿಲ್ಲಾ ಉದ್ಯಾನವನ

7 ಕೆ ಆರ್ ಆಸ್ಪತ್ರೆ ಉದ್ಯಾನವನ

8 ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ

9 ಗೋರ್ಡನ್ ಪಾರ್ಕ್

10 ಕರ್ನಾಟಕ ವಸ್ತು ಪ್ರದರ್ಶನದ ಆವರಣದ ವಸ್ತು ಪ್ರದರ್ಶನದ ಉದ್ಯಾನವನ

ಈ ಮೇಲ್ಕಂಡ ಉದ್ಯಾನವನಗಳ ಅಭಿವೃದ್ಧಿಗಾಗಿ ಅಂದಾಜು 102 ಲಕ್ಷ ರೂಪಾಯಿಗಳ ಅನುದಾನದ ಅವಶ್ಯಕತೆ ಇದೆ ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು 2007-08 ನೇ ಸಾಲಿನಲ್ಲಿ ತೋಟಗಾರಿಕೆ ಉದ್ಯಾನವನಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ 20 00 ಲಕ್ಷ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ

ಅನುಬಂಧ

(ಕರ್ನಾಟಕ ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ115)

ಮೈಸೂರು ನಗರದಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ

ಉದ್ಯಾನವನಗಳ ವಿವರ ಈ ಕೆಳಕಂಡಂತಿರುತ್ತದೆ

ಉದ್ಯಾನವನಗಳು	ವಿಸ್ತೀರ್ಣ ಎಕರೆಗಳಲ್ಲಿ
1 ಕರ್ಜನ್ ಪಾರ್ಕ್ ಬ್ಲಾಕ್ ಗ1	**05**
2 ಕರ್ಜನ್ ಪಾರ್ಕ್ ಬ್ಲಾಕ್ ಗ2	08
3 ಕರ್ಜನ್ ಪಾರ್ಕ್ ಬ್ಲಾಕ್ ಗ3	08
4 ನಿಷಾದ್ ಬಾಗ್	15
5 ಜಲದರ್ಶಿನಿ ಅತಿಥಿ ಗೃಹ ಉದ್ಯಾನವನ	05
6 ಜಲಸನ್ನಿದಿ(ಜಿಲ್ಲಾಧಿಕಾರಿಗಳ ನವಾಸ)	05
7 ಪ್ರಾದೇಶಿಕ ಆಯುಕ್ತರ ಉದ್ಯಾನವನ	06
8 ಗೋರ್ಡಾನ್ ಪಾರ್ಕ್	05
9 ಜಿಲ್ಲಾ ಉದ್ಯಾನವನ	40
10 ಕೆ ಆರ್ ಆಸ್ಪತ್ರೆ ಉದ್ಯಾನವನ	50
11 ಸರ್ಕಾರಿ ಭವನ ಅತಿದಿ ಗೃಹ ಉದ್ಯಾನವನ	43
12 ಕರ್ನಾಟಕ ವಸ್ತು ಪ್ರದರ್ಶನ ಆವರಣದಲ್ಲಿರುವ ತೋಟಗಾರಿಕೆ ಇಲಾಖೆ ಉದ್ಯಾನವನ	02

13 ಕೇಂದ್ರ ಸಸ್ಯಾಗಾರ 10

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಅಧ್ಯಕ್ಷರೆ, ಮೈಸೂರಿನ ಉದ್ಯಾನ ನಗರ ಇಂದು ಅದ್ವಾನ ನಗರವಾಗಿದೆ ಏಕೆಂದರೆ ಆ ನಗರ ಪ್ರೇಮಿಗಳ ಓಡಾಟದ ಉದ್ಯಾನಿ ನಗರವಾಗಿದೆ ಅದು ಯಾವುದನ್ನು ಕೂಡ ಸಮರ್ಥವಾಗಿ ನಿರ್ವಹಿಸುವಂತಹ ಶಕ್ತಿ ತೋಟಗಾರಿಕೆ ಇಲಾಖೆಯವರಿಗಾಗಲಿ ಅಥವಾ ಕಾರ್ಪೋರೇಷನ್ ನವರಿಗಾಗಲಿ ಖಂಡಿತವಾಗಿಯೂ ಕೂಡ ಇಲ್ಲ ರಾಜಮಹಾರಾಜರುಗಳ ಕಾಲದ 20 ರಿಂದ 40 ಎಕರೆ,10–15 ಎಕರೆಗಳನ್ನು ಬಿಟ್ಟರು ಆದರೆ ಇವೆಲ್ಲವು ಪಾಳುಬಿದ್ದು ಅಲ್ಲಿ ಏನು ನಡೆಯಬಾರದು ಆ ಅವ್ಯಹಾರಗಳು ಅಲ್ಲಿ ನಡೆಯುತ್ತಿದೆ ಅಲ್ಲಿಗೆ ನಾನು ಕೂಡ ಹೋಗಿದ್ದೆ ಕೆಲವನ್ನು ತೋರಿಸಿಲ್ಲವೆಂದು ಹೇಳಿ ಶಾಸಕರೊಬ್ಬರು, ಸಚಿವರೋಬ್ಬರು ತಮ್ಮ ಅಸಹಾಯಕತೆಯನ್ನು ತೋರಿಕೊಂಡರು ಆದರೆ ಇಂತಹ ಒಂದು ಪರಿಸ್ಥಿತಿಯಲ್ಲಿ ನಗರಗಳನ್ನು ಇಡಬಾರದು ನಗರದಲ್ಲಿ ವಾಯುಮಾಲಿನ್ಯ ಜಾಸ್ತಿಯಾಗುತ್ತಿದೆ ಜನಗಳು ದಿನನಿತ್ಯ ತಮ್ಮ ಬೊಜ್ಜನ್ನು ಕರಗಿಸಿಕೊಳ್ಳುವುದಕ್ಕಾಗಿ ಓಡಾಡುವುದಕ್ಕೆ ಹೋಗುತ್ತಾರೆ ಆ ದೃಶ್ಯವನ್ನು ನೋಡಿ ಅವರು ನಾಚಿಕೆಪಟ್ಟುಕೊಂಡು ಹೊರಗೆ ಬರುತ್ತಾರೆ ಅಲ್ಲಿ ನಡೆಯುತ್ತಿರುವಂತಹ ಅವ್ಯವಹಾರವನ್ನು ನೋಡಿ ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದಾರೆ ದಯಮಾಡಿ ತೋಟಗಾರಕಾ ಸಚಿವರು ಉದ್ಯಾನವನಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ಮಾಡಬೇಕೆಂದು ನನ್ನ ಕಳಕಳಿಯ ಪ್ರಾರ್ಥನೆ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಮಾನ್ಯ ಅಧ್ಯಕ್ಷರೆ, ಸುಮಾರು 13 ಪಾರ್ಕ್‌ಗಳು ಮೈಸೂರು ನಗರದಲ್ಲಿದೆ ಈಗಾಗಲೇ ಕರ್ಜನ್ ಪಾರ್ಕ ನಂ 1 ಗೆ 9,80,000,00 ರೂ ಗಳ ವೆಚ್ಚದಲ್ಲಿ ಅಲ್ಲಿ ರಸ್ತೆ ಮತ್ತು ಲೈಟಿಂಗ್ ಬೇರೆ ಬೇರೆ ಇತ್ಯಾದಿ ಕಾಮಗಾರಿಗಳ ಬಗ್ಗೆ ಹಣವನ್ನು ಒದಗಿಸಲಾಗಿದೆ ಮತ್ತು ಕಾಮಗಾರಿಗಳು ಚಾಲ್ತಿಯಲ್ಲಿದೆ ಕರ್ಜನ್ ಪಾರ್ಕ್ ನಂ 2, ಸರ್ಕಾರಿ ಭವನ, ಅತಿಥಿ ಗೃಹ, ಉದ್ಯಾನವನ, ಕೇಂದ್ರ ಸಸ್ಯಾಗಾರಗಳಲ್ಲಿ ತೋಟಗಾರಿಕೆ ಇಲಾಖೆಯಿಂದ ಕಾಮಗಾರಿ ಕೈಗೊಳ್ಳಲಾಗಿತ್ತು ಕರ್ಜನ್ ಪಾರ್ಕ್ ಬ್ಲಾಕ್ 3 ರ ಅಭಿವೃದ್ಧಿಯನ್ನು ಮೈಸೂರು ಮಹಾನಗರ ಪಾಲಿಕೆಗೆ ವಹಿಸಲಾಗಿದೆ ಉಳಿದ ಪಾರ್ಕುಗಳಲ್ಲಿ ನಿರ್ವಹಣೆ ಮಾತ್ರ ಮಾಡಲಾಗುತ್ತಿದೆ ಕಾಮಗಾರಿ

ಕೈಗೊಂಡ ಪಾರ್ಕುಗಳ ವಿವರವನ್ನು ತಮಗೆ ಒದಗಿಸಲಾಗಿದೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಅಲ್ಲಿ ಕೆಲಸ ಏನು ಆಗುತ್ತಿಲ್ಲ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಕ್ರಮ ಕೈಗೊಳ್ಳುತ್ತಿದ್ದೇವೆ

ಆಳಂದ ಪಟ್ಟಣದಲ್ಲಿ ಸಹಕಾರಿ ಸೇವಾಸಂಘ ಸ್ಥಾಪನೆ (VSSNL)

71 (408) ಶ್ರೀ ಬಿ ಆರ್ ಪಾಟೀಲ್(ಆಳಂದ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 ಅಳಂದ ಪಟ್ಟಣದಲ್ಲಿ ಸಹಕಾರಿ ಸೇವಾ ಸಂಘ (ವಿಎಸ್‌ಎಸ್ ಎನ್‌ಎಲ್) ಇಲ್ಲದಿರುವುದು ಸರ್ಕಾರ ಗಮನಿಸಿದೆಯೇ?

2 ಈ ಸಹಕಾರಿ ಸೇವಾ ಸಂಘ ಸ್ಥಾಪನೆ ಮಾಡದಿಲು ಕಾರಣವೇನು?

3 ಆಳಂದ ತಾಲ್ಲೂಕಿನ ಹಿರೋಳ್ಳಿ ಗ್ರಾಮದಲ್ಲಿ ಈ ಮುಂಚಿತವಾಗಿ ವಿಎಸ್‌ಎಸ್‌ಎನ್‌ಎಲ್ ಇದ್ದು ಆದರೆ ಈಗ ಮುಚ್ಚಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

4 ಮನಃ ಅದನ್ನು ಪ್ರಾರಂಭ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಜಿ ಟಿ ದೇವೇಗೌಡ

1 ಅಳಂದ ಪಟ್ಟಣದಲ್ಲಿ ಈ ಹಿಂದೆ ಸೇವಾ ಸಹಕಾರಿ ಸಂಘ ಆಳಂದ ಎಂಬ ಸಂಘವಿದ್ದು ಇದು 1961 ರಲ್ಲಿ ನೋಂದಣಿಯಾಗಿರುತ್ತದೆ ಈ ಸಂಘದ ವ್ಯವಹಾರವು ಸ್ಥಗಿತಗೊಂಡ ಹಿನ್ನೆಲೆಯಲ್ಲಿ 1972ರಲ್ಲಿ ಸ್ಥಾಪನೆಗೊಳಿಸಲಾಗಿದೆ ಪ್ರಸ್ತುತ ಸದರಿ ಸೇವಾ ಸಹಕಾರಿ ಸಂಘವು

ಸ್ಥಾಪನೆಯಲ್ಲಿರುತ್ತದೆ

2 ಸದಸ್ಯರ್ಯಾರು ಮುಂದೆ ಬಾರದೆ ಇರುವುದರಿಂದ ಸಂಘವನ್ನು ಪುನಃಶ್ಚೇತನಗೊಳಿಸಿರುವುದಿಲ್ಲ ಹಾಗೂ ಹೊಸ ಸಂಘದ ಸ್ಥಾಪನೆಗೆ ಸಹಾ ಯಾರು ಪ್ರಯತ್ನಿಸಿರುವುದಿಲ್ಲ

3 ಹಿರೋಳ್ಳಿ ಗ್ರಾಮದಲ್ಲಿ 1976ಕ್ಕಿಂತ ಪೂರ್ವದಲ್ಲಿ ದೊಡ್ಡ ಪ್ರಮಾಣದ ಸಹಕಾರ ಸಂಘ ನಿಯಮಿತ ಹಿರೋಳ್ಳಿ ಇದ್ದು ಇದು ಕಾರ್ಯನಿರತವಾಗಿದ್ದು ದಿನಾಂಕ 30 09 1976ರಲ್ಲಿಸರ್ಕಾರದ ಆದೇಶದಂತೆ ಸಹಕಾರ ಸಂಘಗಳ ಪುನರ್ ರಚನೆಯ ಸಂದರ್ಭದಲ್ಲಿ ಸದರಿ ಸಂಘವನ್ನು ವ್ಯವಸಾಯ ಸೇವಾ ಸಹಕಾರ ನಿಯಮಿತ ಸರಸಾಂಬಾ ಈ ಸಂಘದಲ್ಲಿ ವಿಲೀನಗೊಳಿಸಿ ಸದರಿ ಸಂಘದ ವ್ಯಾಪ್ತಿಯ ಗ್ರಾಮಗಳಿಗೆ ಸೇವೆ ನೀಡಲಾಗುತ್ತಿದೆ

4 ಹಿರೋಳ್ಳಿ ಗ್ರಾಮಸ್ಥರು ಸರಸಾಂಬಾ ವ್ಯವಸಾಯ ಸೇವಾ ಸಹಕಾರ ಸಂಘದಿಂದ ಬೇರ್ಪಡಿಸಿ ಹಿರೋಳ್ಳಿ ಗ್ರಾಮದಲ್ಲಿ ಹೊಸದಾಗಿ ವ್ಯವಸಾಯ ಸೇವಾ ಸಹಕಾರ ಸಂಘವನ್ನು ಹೊಸದಾಗಿ ಸಂಘ ಸ್ಥಾಪನೆ ಮಾಡಲು ಮನವಿ ಸಲ್ಲಿಸಿದ್ದು ಅದನ್ನು ಸಹಕಾರ ಸಂಘಗಳ ನಿಬಂಧಕರು ನಬಾರ್ಡ್ ಮಾರ್ಗಸೂಚಿಗನುಗುಣವಾಗಿ ಪರಿಶೀಲಿಸುತ್ತಿದ್ದಾರೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಆಳಂದ ಒಂದು ಪಟ್ಟಣದಂತೆ ಇದ್ದರೂ ಕೂಡ ಅಲ್ಲಿ ಕಾರ್ಮಿಕರು ಮತ್ತು ರೈತರು ಇದ್ದಾರೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸೇವಾ ಸಹಕಾರಿ ಸಂಘವನ್ನು 1972 ರಲ್ಲಿ ಸ್ಥಾಪನೆಗೊಳಿಸಲಾಗಿದೆ ಪ್ರಸ್ತುತ ಸದರಿ ಸೇವಾ ಸಹಕಾರಿ ಸಂಘವು ಸಮಾಪನೆಯಲ್ಲಿರುತ್ತದೆಂದು ಹೇಳಿರುತ್ತಾರೆ ಅಲ್ಲಿಯ ರೈತರಿಗೆ ಸೇವಾ ಸಹಕಾರ ಸಂಘವು ಸ್ಥಾಪನೆಯಲ್ಲಿರುತ್ತದೆಂದು ಹೇಳಿರುತ್ತಾರೆ ಅಲ್ಲಿಯ ರೈತರಿಗೆ ಸೇವಾ ಸಹಕಾರಿ ಸಂಘವು ತುಂಬಾ ಅವಶ್ಯಕವಾಗಿರುತ್ತದೆ ಪಕ್ಕದ ಗ್ರಾಮದಲ್ಲಿ ಅದನ್ನು ವಿಲೀನಗೊಳಿಸಲಾಗಿದೆ ಎಂದು ಹೇಳಿದ್ದಾರೆ ಹಾಗಾಗಿ ಆಳಂದ ಪಟ್ಟಣದಲ್ಲಿ ಆ ರೈತರಿಗೆ ಅನುಕೂಲ ಮಾಡಿ ಕೊಡುವುದಕ್ಕೆ ಒಂದು ಸಂಘವನ್ನು ಸ್ಥಾಪನೆ ಮಾಡುತ್ತಾರಾ ಎನ್ನುವ ಬಗ್ಗೆ ಸ್ಪಷ್ಟವಾಗಿ

ಹೇಳಬೇಕು ಈಗ ಹಿರೋಳ್ಳಿ ಗ್ರಾಮದಲ್ಲಿಯೂ ಕೂಡ ಈ ಸೇವಾ ಸಹಕಾರ ಸಂಘಗಳ ಅವಶ್ಯಕತೆ ಇದೆ, ಕಾರಣವೇನೆಂದರೆ, ಈಗ ಬಂದಿದೆ ಎಲ್ಲಾ ಕಡೆಗಳಲ್ಲಿ ಬ್ಯಾಂಕುಗಳು ಇಲ್ಲ ಈ ಸಂಘಗಳು ಪಂಚಾಯಿತಿ ಹೆಡ್ ಕ್ವಾರ್ಟರ್ ನಲ್ಲಿ ಇದೆ ಅಲ್ಲಿ ಇವರುಗಳು ಹೋಗಿ ಖಾತೆಗಳನ್ನು ತೆರೆದು ಕೂಲಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು, ಮತ್ತು ಪಡೆಯಬಹುದು, ತನ್ನ ಸರ್ಕಲ್ನ ನೀತಿಯನ್ನು ಪ್ರತಿ ಗ್ರಾಮಪಂಚಾಯಿತಿಗೆ ಏನಾದರೂ ಸಹಕಾರ ಸಂಘಗಳಿಗೆ ಮಾರ್ಪಡಿಸುವ ಉದ್ದೇಶವಿದೆಯೆ? ಇದರ ವ್ಯಾಪ್ತಿಯೇನು? ಈ ನಬಾರ್ಡ್‌ನ ನಿಬಂಧನೆಗಳೇನು? 'ಇದನ್ನು ತಾವು ಹೇಳಬೇಕು ಮತ್ತೊಂದು ಕಡೆ ಒಂದೊಂದು ಗ್ರಾಮದಲ್ಲಿ ಎರಡೆರಡು ಸಂಘಗಳನ್ನು ಮಾಡುವಂತಹ ಪ್ರಯತ್ನಗಳು ಕೂಡ ನಡೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಇದು ಬರಿ ಜಿಲ್ಲಾ ಸಹಕಾರಿ ಬ್ಯಾಂಕುಗಳಿಗೆ ಚುನಾವಣೆಯಲ್ಲಿ ಗೆಲ್ಲಿಸುವುದಕ್ಕೆ ಮಾತ್ರ ಸ್ಥಾಪನೆ ಮಾಡಿಕೊಳ್ಳುವುದಕ್ಕಾಗಿ ಅದು ಜನರಿಗೆ ಅನುಕೂಲ ಮಾಡಿಕೊಡುವುದಕ್ಕಲ್ಲ, ಆ ತರಹ ಏನಾದರೂ ಸರ್ಕಾರ ಯೋಚನೆ ಮಾಡಿಕೊಡುವುದಕ್ಕಲ್ಲ, ಆ ತರಹ ಏನಾದರೂ ಸರ್ಕಾರ ಯೋಚನೆ ಮಾಡಿದೆಯಾ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಮಾನ್ಯ ಅಧ್ಯಕ್ಷರೆ, ಈ ಡಿಸಿಸಿ ಬ್ಯಾಂಕ್ ನಲ್ಲಿ ಏನು ತಾವು ಮೆಂಬರ್‌ಗಳೆಂದು ಮಾಡುತ್ತಿದ್ದೀರಿ?

ಅಧ್ಯಕ್ಷರು ಪ್ರಕಾಶ್‌ರವರೆ ತಮಗೆ ಮಾತನಾಡುವುದಕ್ಕೆ ಯಾರು ಪರ್ಮಿಶನ್ ಕೊಟ್ಟಿದ್ದಾರೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ ನೀವು ಮಾತನಾಡುವುದಕ್ಕಾಗಿ ಎದ್ದು ಮದ್ಯದಲ್ಲಿ ನಿಂತುಕೊಂಡು ಬಿಟ್ಟರೆ ಹೇಗೇ? ಆಯಿತು ತಾವು ಕುಳಿತುಕೊಳ್ಳಿ ತಾವು ಪರ್ಮಿಶನ್ ತೆಗೆದುಕೊಂಡು ಮಾತನಾಡಿ ಮಾನ್ಯ ಸಚಿವರೆ ತಾವು ಉತ್ತರವನ್ನು ಹೇಳಿ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ತಾವು ನನಗೆ ಅವಕಾಶವನ್ನು ಕೊಡುತ್ತೇನೆಂದುಹೇಳದ್ದೀರಿ

ಅಧ್ಯಕ್ಷರು' ತಾವು ದಯಮಾಡಿ ಕುಳತುಕೊಳ್ಳಬೇಕು ನಾನು ಎಲ್ಲರನ್ನು ಗಮನಸಿದ್ದೇನೆ ಎಲ್ಲರು ಇಷ್ಟಬಂದೆ ಹಾಗೆ ಕೇಳುತ್ತಿದ್ದಾರೆ ಒಂದುಗಂಟೆಯೊಳಗೆ ನಾನು ಪ್ರಶ್ನೋತ್ತರವನ್ನುಮುಗಿಸಬೇಕಾಗಿದೆ ದಯಮಾಡಿ ತಾವು ಕುಳಿತುಕೊಳ್ಳಿ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ನಾನು ಕುಳಿತುಕೊಳ್ಳುತ್ತೇನೆ, ಆ ತರಹ ಏನು ಇಲ್ಲ

ಅಧ್ಯಕ್ಷರು ತಾವು ಮಾತನಾಡುವ ಬಗ್ಗೆ ಪರ್ಮಿಶನ್ ಕೇಳಿದ್ದೀರಾ? ನೀವು ಹೀಗೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೇ? ಮಾನ್ಯ ಸಚಿವರೆ ತಾವು ಉತ್ತರವನ್ನು ಹೇಳಿ

ಶ್ರೀ ಜಿ ಟಿ ದೇವೆಗೌಡ ಮಾನ್ಯ ಏನು ಪ್ರಶ್ನೇಯನ್ನು ಕೇಳಿದ್ದಾರೆ ಆಳಂದ ಪಟ್ಟಣದಲ್ಲಿ ಹಿಂದೆ ಆ ಸಂಘವು ವ್ಯವಹಾರವನ್ನು ಮಾಡದೆ ಈಗಾಗಲೇ 72ರಲ್ಲಿ ಅದನ್ನು ಸ್ಥಾಪನೆಗೊಳಿಸಲಾಗಿದೆ ತಾವು ಏನು ಕೇಳುತ್ತಿದ್ದಾರೆ, ಬಹಳಷ್ಟು ಸಂಘಗಳು ಸಮಾಪನೆ ಗೊಳಿಸಲಾಗಿದೆ ಒಂದು ಪಂಚಾಯಿತಿಯಲ್ಲಿ ಒಂದು ಹಳ್ಳಿಯಲ್ಲಿ ಎರಡು ಸಂಘಗಳನ್ನು ಮಾಡತಕ್ಕಂತಹ ಉದ್ದೇಶ ನಮಗೆ ಇಲ್ಲ ಅದನ್ನು ಇತ್ತೀಚೆಗೆ ಮಾಡುತ್ತಿಲ್ಲ ಬಹಳಷ್ಟು ಸಹಕಾರ ಸಂಘಗಳು ಮಾಡಬೇಕೇಂದು ಏನು ಕೇಳುತ್ತಿದ್ದಾರೆ, ಈ ಸಂಘದ ಮಟ್ಟಿಗೆ ಸ್ಥಾಪನೆಗೊಂಡ ನಂತರ ಅಲ್ಲಿರತಕ್ಕಂತಹ ಹಳ್ಳಿಗಳಲ್ಲಿ ಅಕ್ಕಪಕ್ಕದಲ್ಲಿರುವಂತಹ ಸಂಘಗಳಿಗೆ ಸೇರಿಕೊಂಡುಬಿಟ್ಟಿರುತ್ತವೆ ಹೊಸ ಸಂಘಗಳನ್ನು ಮಾಡಬೇಕಾದರೆ ಆ ಸಂಘಗಳವರು ಎನ್ ಒ ಸಿ ಯನ್ನು ಕೊಡಬೇಕಾಗುತ್ತದೆ ನಬಾರ್ಡ್ ಗೈಡ್‌ಲೈನ್ಸ್ ಪ್ರಕಾರ ಪ್ರತಿಯೊಂದು ಸಂಘದವರು ಕನಿಷ್ಟ 5000 ಎಕರೆ ಸಾಗುವಳಿ ಪ್ರದೇಶವನ್ನು ಹೊಂದಿರಬೇಕಾಗುತ್ತದೆ ಸಾಧ್ಯವಾದ ಮಟ್ಟಿಗೆ ಸಹಕಾರ ಸಂಘದ ಕಾರ್ಯ ಸ್ಥಾನದಿಂದ 8 ಕಿ ಮಿ ದೂರ ಒಂದು ಸಂಘದಿಂದ ಇನೋಂದು ಸಂಘಕ್ಕೆ ವ್ಯಾಪ್ತಿ ಇರಬೇಕಾಗುತ್ತದೆ ಕಡಿಮೆ ಅಂದರೆ 50 ಲಕ್ಷ ರೂಪಾಯಿಗಳ ಸಾಲ ಸಾಮರ್ಥ್ಯವನ್ನು ಪಡೆಯತಕ್ಕಂತಹ ಶಕ್ತಿ ಇರಬೇಕಾಗುತ್ತದೆ ಸಾಮಾನ್ಯವಾಗಿ ಒಂದು ಹಳ್ಳಿಯಲ್ಲಿ ಒಂದಕ್ಕಿಂತ ಹೆಚ್ಚಿಗೆ ಇಂತಹ ಸಂಘಗಳು ಆಗುವುದಕ್ಕೆ ಅವಕಾಶವಿಲ್ಲ ಇದು ಆಗಬಾರದು ಕಾರ್ಯಕ್ಷೇತ್ರ ಒಂದಕ್ಕೊಂದು

ಆಕ್ರಮಿಸಬಾರದು, ಪ್ರತಿಯೊಂದು ಸಂಘವು ಕನಿಷ್ಠ 600 ಕುಟುಂಬಗಳನ್ನು ಹೊಂದಿರಬೇಕೆಂದು ಒಂದು ನಬಾರ್ಡ್ ಗೈಡ್‌ಲೈನ್ ಇದೆ ಇದರೊಳಗಡೆ ಬರುವಂತಹ ಸಂಘವನ್ನು ನಾವು ಮಾಡುತ್ತೇವೆ ಇದರೊಳಗಡೆ ಅಂತಹ ಅವಕಾಶಗಳು ಇದ್ದರೆ, ಇದುವರೆಗೂ ಯಾವುದೇ ಪ್ರಸ್ತಾವನೆಯೂ ನಮ್ಮ ಮುಂದೆ ಬಂದಿಲ್ಲ ಒಂದು ವೇಳೆ ಬಂದರೆ ಖಂಡಿತವಾಗಿ ಅದನ್ನು ಸ್ಥಾಪನೆ ಮಾಡಿಕೊಡುತ್ತೇವೆ

ಅಧ್ಯಕ್ಷರು ಇನ್ನು 4 ಪ್ರಶ್ನೆಗಳು ಇವೆ ನೀವೆಲ್ಲರೂ ಒಟ್ಟಿಗೆ ನಿಂತುಕೊಂಡು ಕೇಳಿದರೆ ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ ಆದರೆ ಪಾಟೀಲ್‌ರವರು ನನ್ನದು ಪ್ರಶ್ನೆ ಬಂದಿದೆ ಎಂದು ಚಕಾರ ಎತ್ತಿ ಕುಳಿತಿದ್ದಾರೆ ತಾವುಗಳು ದಯಮಾಡಿ ಸಹಕರಿಸಬೇಕು

ಶ್ರೀ ಬಿ ಆರ್ ಪಾಟೀಲ್ ಇಲ್ಲಿಯೂ ನಮಗೆ ಅವಕಾಶ ಇಲ್ಲವೆಂದರೆ ಹೇಗೇ?

ಅಧ್ಯಕ್ಷರು ತಾವು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಉಳಿದರು ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು

ಶ್ರೀ ಬಿ ಆರ್ ಪಾಟೀಲ್ ನಾನು ಸ್ಪಷ್ಟೀಕರಣವನ್ನು ಕೇಳುತ್ತೀದ್ದೇನೆ

ಅಧ್ಯಕ್ಷರು ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ

ಶ್ರೀ ಬಿ ಆರ್ ಪಾಟೀಲ್ ಹಿರೋಳ್ಳಿ ಗ್ರಾಮಪಂಚಾಯಿತಿಯಲ್ಲಿ ತಾವು ಏನಾದರು ಸಂಘ ಮಾಡುವ ಉದ್ದೇಶವಿದೆಯಾ?

ಶ್ರೀ ಜಿ ಟಿ ದೇವೆಗೌಡ ಮಾನ್ಯ ಸದಸ್ಯರು ಏನು ಕೇಳುತ್ತದ್ದಾರೆ, ಬೇರೆ ಸಂಘದಿಂದ ಎನ್ ಓ ಸಿ ಸರ್ಟಿಫಿಕೇಟನ್ನು ತಂದುಕೊಟ್ಟರೆ ಆ ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಒಂದು ಹಳ್ಳಿಯಲ್ಲಿ ಎರಡು ಸಂಘಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಅಕಸ್ಮಾತ್

ಸಾಧ್ಯವಾಗಿದ್ದರೆ

ಶ್ರೀ ಬಿ ಆರ್ ಪಾಟೀಲ್ ಒಂದು ವೇಳೆ ಆಗಿದ್ದರೆ ಏನು ಮಾಡುತ್ತೀರಿ?

ಶ್ರೀ ಜಿ ಟಿ ದೇವೆಗೌಡ ಒಂದು ವೇಳೆ ಆಗಿದ್ದರೆ ಖಂಡಿತವಾಗಿ ಅದನ್ನು ರದ್ದು ಮಾಡುತ್ತೇವೆ

ಅಧ್ಯಕ್ಷರು ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರೆ ತಾವು ಪ್ರಶ್ನೆಯನ್ನು ಕೇಳಿ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು ದಯಮಾಡಿ ತಾವು ಕೇಳಬೇಕು ಇನ್ನು 4ಪ್ರಶ್ನೆಗಳು ಇವೆ ಅವರದು ಲ್ಯಾಪ್ಸ್ ಆಗುತ್ತದೆ

ಶ್ರೀ ಎನ್ ಧರ್ಮಸಿಂಗ್ Employment guarantee scheme ಏನು start ಆಗಿದೆ ಅದಕ್ಕೆ ಹಳ್ಳಿಯಲ್ಲಿ ಎಲ್ಲರ ಜೊತೆಗೆ 100 ದಿವಸಗಳ ಕಾಲ ಉದ್ಯೋಗ ಕೊಡುವಂತಹ ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮ ಇದೆ ಇವತ್ತು ಅಲ್ಲಿರುವ ಸಂಘಸಂಸ್ಥೆಗಳನ್ನು, ಅಲ್ಲಿರುವ ಬ್ಯಾಂಕುಗಳನ್ನು ತೆಗೆಯುವುದಕ್ಕಾಗುವುದೆಲ್ಲ ಇವತ್ತು ಸಹಕಾರಿ ಬ್ಯಾಂಕುಗಳನ್ನು ಇದ್ದರೆ ಅಲ್ಲಿ ಅಕೌಂಟ್ ಮಾಡುವುದಕ್ಕಾಗುತ್ತದೆ ಅಲ್ಲಿ ಕೆಲಸವನ್ನು ತುಂಬುವುದಕ್ಕಾಗುತ್ತದೆ, ಅ ದೃಷ್ಟಿಯಿಂದ ಇವತ್ತು ಸಹಕಾರಿ ವಿಚಾರವನ್ನು ಮಾಡಬೇಕಾಗುತ್ತದೆ ಈಗ ಬದಲಾದ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಕಾರ್ಯಕ್ರಮವೇನು ಇದೆ, ಅದನ್ನು ಅನುಷ್ಠಾನಗೊಳಿಸುವಂತಹ ರೀತಿಯಲ್ಲಿ ಮಾಡಬೇಕು ಹಾಗು ಅದನ್ನು ಪ್ರಾರಂಭಿಸಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ ಅದರ ಬಗ್ಗೆ ಸರಿಯಾದ ರೀತಿಯಲ್ಲಿ ತಾವು ಉತ್ತರವನ್ನು ಕೊಡಿಸಬೇಕು

ಅಧ್ಯಕ್ಷರು ಈಗ ಪ್ರಶ್ನೋತ್ತರ ಪ್ರಾರಂಭವಾಗಿ 1 ಗಂಟೆಗಳ

ಕಾಲವಾಗಿದೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಸಚಿವರು ಈ ಬಗ್ಗೆ ಉತ್ತರವನ್ನು ಹೇಳಲಿ

ಅಧ್ಯಕ್ಷರು ಮಾನ್ಯ ಸಚಿವರೆ ತಾವು ಉತ್ತರವನ್ನು ಹೇಳಿಬಿಡಿ

ಶ್ರೀ ಜಿ ಟಿ ದೇವೆಗೌಡ ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಕೇಳುತ್ತಿದ್ದಾರೆ, ಖಂಡಿತವಾಗಿ ಆ ದಿಸೆಯಲ್ಲಿ ಸಹಕಾರ ಇಲಾಖೆಯು ಹೊಸ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವ ಬಗ್ಗೆ ಮನವಿಗಳು ಇನ್ನೂ ಸುಮಾರು 50 ರಿಂದ 60 ಅರ್ಜಿಗಳು ಬಂದಿದೆ, ನಬಾರ್ಡ್‌ನ ನಿಯಮದಡಿಯಲ್ಲಿ ಅದನ್ನು ಮಾಡಬೇಕಾಗುತ್ತದೆ ಯಾವುದಕ್ಕೆ ಅವಕಾಶಗಳು ಇವೆ, ಅವೆಲ್ಲವನ್ನೂ ತುರ್ತಾಗಿ ಮಾಡುತ್ತೇವೆ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಮಾನ್ಯ ಅಧ್ಯಕ್ಷರೆ ತಾವು ನನಗೆ ಉಪಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕು ಇದು ಬಹಳ ಮಹತ್ವವಾದ ವಿಷಯವಾಗಿದೆ

ಅಧ್ಯಕ್ಷರು ಆಯಿತು ತಾವು ಕೇಳಿಬಿಡಿ

(ಮುಂದು)

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ನಬಾರ್ಡ್ ಗೈಡಲೈನ್ಸ್ ಪ್ರಕಾರ ನಾವು ರಚನೆ ಮಾಡುತ್ತೇವೆ ಎನ್ನುತ್ತಾರೆ ಇದು ನಮಗೆ ಸಮಾಧಾನಕರವಾದ ಉತ್ತರ ನಮಗೆ ಸಿಕ್ಕಿದೆ ಆದರೆ ಇವತ್ತು ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ನಾನು ಬೇರೆ ತಾಲ್ಲೂಕಿನ ಬಗ್ಗೆ ಮಾತನಾಡುವುದಿಲ್ಲ ನಮ್ಮ ತಾಲ್ಲೂಕಿನಲ್ಲಿ ಒಂದು ಗ್ರಾಮಪಂಚಯಿತಿಗೆ ಒಂದು ಸಹಕಾರ ಸಂಘ ಇದ್ದಾಗಲು ಕೂಡ ಇನ್ನೊಂದು ಸಹಕಾರ ಸಂಘವನ್ನು ರಚನೆ ಮಾಡಿಕೊಳ್ಳುವುದಕ್ಕೆ ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಒಂದು ಸಭೆಯನ್ನು ನಡೆಸಿ, ಚಿಕ್ಕೋಡಿ ತಾಲ್ಲೂಕಿನಲ್ಲಿ ಸುಮಾರು

25-26 ಪ್ರಸ್ತಾವನೆಯನ್ನು ಇವತ್ತು ಸರ್ಕಾರಕ್ಕೆ ಸಲ್ಲಿಸಿದ್ದಾರೆ

ಈಗಾಗಲೇ ಹೋದ ವರ್ಷ 10% ಹೊಸದಾಗಿ ಮೆಂಬರ್ ಮಾಡಿಕೊಳ್ಳಬೇಕೆಂದು ಅದೇಶವನ್ನು ಮಾಡಿದ್ದೀರಿ ಆ ಪ್ರಕಾರವಾಗಿ ಎಲ್ಲಾ ಸಂಘಗಳು ಕೂಡ 10% ಮೆಂಬರ್‌ಗಳನ್ನು ಮಾಡಿದ್ದಾರೆ ನಬಾರ್ಡ್ ಗೈಡಲೈನ್ಸ್ ಪ್ರಕಾರ ಯಾವುದು ಬರುವುದಿಲ್ಲ ಆ ಸಂಘಗಳನ್ನು ತಾವು ಯಾವುದೇ ರಾಜಕೀಯ ಒತ್ತಡಗಳಿಗೆ ಮಣಿಯಬಾರದು ರಾಜಕೀಯ ಒತ್ತಡಗಳಿಂದ 55 ಆಗಿದೆ ಎಂದರೆ ಮಾನ್ಯ ಸಚಿವರು Deputy Registerar ಈ ಪ್ರಸ್ತಾವನೆಯನ್ನು ಸಲ್ಲಿಸಿ ಎಂದು ಪತ್ರವನ್ನು ಕೊಡುತ್ತಾರೆ ಆಗ Deputy Registerar ರವರು ಏನು ಮಾಡುತ್ತಾರೆಂದು ಅವರಿಗೆ ಅದು ಅನಿವಾರ್ಯ ನಾನು ತಮ್ಮ ಮೂಲಕ ಮಾನ್ಯ ಸಹಕಾರ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಈಗಾಗಲೇ ಒಂದು ಸಂಘವು ಚೆನ್ನಾಗಿ ನಡೆಯುತ್ತಿದ್ದಾಗ ಇನ್ನೊಂದು ಸಂಘವನ್ನು ರಚನೆ ಮಾಡಿ ಹಾಳು ಮಾಡುವಂತಹದ್ದು ಆಗಬಾರದು ದಯವಿಟ್ಟು ತಾವು ಗೈಡಲೈನ್ಸ್‌ನ್ನು ಬಿಟ್ಟು ಹೋಗದು ಹಾಗೆ ತಾವು ನೋಡಿಕೊಳ್ಳಬೇಕು ಒಂದು ಗ್ರಾಮಪಂಚಾಯಿತಿ ಒಂದು ಸಂಘವಿದ್ದರೆ ಅದನ್ನು ಬಿಟ್ಟು ಇನ್ನೊಂದು ಸಂಘವನ್ನು ರಚನೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬಾರದು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಜಿ ಟಿ ದೇವೇಗೌಡ ಇಂತಹ ಸಂಘ ಒಂದು ಇದ್ದು ಮತ್ತೊಂದನ್ನು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಹಾಗೂ ಅದನ್ನು ಮಾಡುವುದಕ್ಕೂ ಕೂಡ ಬರುವುದಿಲ್ಲ ಆ ಬಗ್ಗೆ ತಮಗೆ ಅನುಮಾನ ಬೇಡ ನಬಾರ್ಡ್ ನಿಯಮದಡಿಯಲ್ಲಿ ಯಾವುದೇ ಸಂಘಗಳು ಇಲ್ಲದೆ ಇರುವಂತಹ ಹಳ್ಳಿಗಳು ಇವೆ, ಅಲ್ಲಿ ಮಾತ್ರ ಮಾಡುತ್ತೇವೆ

ಅಧ್ಯಕ್ಷರು ಈಗ ಪ್ರಶ್ನೋತ್ತರ ಅವಧಿಯು ಒಂದು ಗಂಟೆಯ ಮೇಲಾಗಿದೆ ಹಿಂದೆ ತೀರ್ಮಾನವಾದ ರೀತಿಯಲ್ಲಿ 4 ಪ್ರಶ್ನೆಗಳಿಗೆ ನಾನು ಅವಕಾಶವನ್ನು ಕೊಡುವುದಕ್ಕಾಗುತ್ತಿಲ್ಲ

ಕಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು

ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು

ಅಧ್ಯಕ್ಷರು ಏನೂ ಮಾಡುವುದಕ್ಕಾಗುವುದಿಲ್ಲ ಇಲ್ಲಿ ಪ್ರಶ್ನೋತ್ತರದ ವೇಳೆಯಲ್ಲಿ ಯಾವ ಸದಸ್ಯರು ಕೂಡ ಸಹಕರಿಸುತ್ತಿಲ್ಲ ಎಲ್ಲರೂ ಜಾಯಿನ್ ಆಗುತ್ತಾರೆ 3–4 ಜನರು ಪ್ರಶ್ನೆಯನ್ನು ಕೇಳುತ್ತಾರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ಹೆಚ್ ಹಾಲಪ್ಪ ಹಾಗೂ ಶ್ರೀ ಎನ್ ಎಲ್ ನರೇಂದ್ರಬಾಬು ರವರುಗಳು ಸದನದ ಬಾವಿಗೆ ಬಂದರು)

ಅಧ್ಯಕ್ಷರು ಎಲ್ಲರು ಸಹಕಾರ ಮಾಡಿದ್ದರೆ, ಅವಕಾಶ ಸಿಗುತ್ತಿತ್ತು ಬರೀ ಉಪಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ ತಾವು ಏನು ಬೇಕಾದರೂ ಮಾಡಿಕೊಳ್ಳಿ, ಕಾನೂನಿನ ಪ್ರಕಾರ ಪ್ರಶ್ನೋತ್ತರ ಅವಧಿಯು ಒಂದು ಗಂಟೆಯ ಕಾಲ ಇರುತ್ತದೆ ಒಂದು ಗಂಟೆ ಆದ ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ತಾವು ಕೇಳಿ, ಸುಮ್ಮನೆ ಇಲ್ಲಿಗೆ ಬಂದು ಮಾತನಾಡುವುದಲ್ಲ ತಾವು ಆಸನ ಬಿಟ್ಟು ಇಲ್ಲಿಗೆ ಬಂದು ಮಾತನಾಡುವುದಕ್ಕೆ ಅವಕಾಶವಿಲ್ಲ ಇಲ್ಲದೆ ಇದ್ದರೆ ತಮ್ಮಗಳನ್ನು ನಿಯಮಗಳ ಪ್ರಕಾರ ಹೊರಗೆ ಕಳುಹಿಸಿಬಿಡುತ್ತೇನೆ ನೋಡಿ ದಯಮಾಡಿ ನೀವುಗಳೆಲ್ಲರೆ ತೀರ್ಮಾನ ಮಾಡಿದ್ದೀರಿ ನಾನು ಎಷ್ಟು request ಮಾಡಿದರೂ ಕೂಡ ಮತ್ತೆ ಮತ್ತೆ ಪ್ರಶ್ನೆಯನ್ನು ಕೇಳುವುದಕ್ಕೆ ನಂತುಕೊಳ್ಳುತ್ತಾರೆ ತಾವುಗಳು ಕೇಳಿ, ಇಲ್ಲಿ ಅಡ್ಡಿ ಮಾಡುತ್ತಿರುವಂತಹವರು ಹಿಂದೆ ಇರುವಂತಹ ಹಿರಿಯ ಸದಸ್ಯರುಗಳು ಜಾಸ್ತಿ ಉಪ ಪ್ರಶ್ನೆಯನ್ನು ಕೇಳುತ್ತಿರುವುದರಿಂದ, ಇಲ್ಲಿ ಯಾರು ಮಾರ್ಗದರ್ಶನವನ್ನು ಮಾಡಬೇಕು,

ಅವರುಗಳು ಅಡ್ಡದಾರಿ ಹಿಡಿಸಿ, ಸದನ ಸರಿಯಾದ ರೀತಿಯಲ್ಲಿ ನಡೆಸುವುದಕ್ಕಾಗದೇ ಇರುವುದಕ್ಕೆ ಹಿರಿಯ ಸದಸ್ಯರುಗಳೇ ಕಾರಣ 3-4 ಜನರು ನಿಂತುಕೊಳ್ಳುತ್ತೀರಿ, ಗಲಾಟೆ ಮಾಡುತ್ತೀರಿ, ಏನು ಮಾಡುವುದು?

ನಾನು ಆಗಿನಿಂದಲೂ ಹೇಳುತ್ತಿದ್ದೇನೆ ಇನ್ನು 4 ಜನರಿಗೆ ಅವಕಾಶವನ್ನು ಕೊಡಬೇಕು ಏನು ತಾವುಗಳು ತಮಾಷೆಯನ್ನು ಮಾಡುತ್ತೀರಿ ಇಲ್ಲಿ ತಾವು ನಿಂತುಕೊಂಡು ಮಾತನಾಡಿದರೆ ಅದು ಚೆನ್ನಾಗಿರುವುದಿಲ್ಲ ಇಲ್ಲಿ ನನ್ನದು ಏನು ಇಲ್ಲ, ಆದರೆ ಈ ರೀತಿ ಮಾಡುವುದಕ್ಕೆ ಅವಕಾಶವಿಲ್ಲ

ಶ್ರೀ ಎಂ ಪಿ ಪ್ರಕಾಶ್ ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯೊಳಗೆ ನಿರ್ಣಯವಾಗಿದೆ

ಅಧ್ಯಕ್ಷರು ನಾನು ಆಗಿನಿಂದಲೇ ಹೇಳುತ್ತಿದ್ದೇನೆ ಇನ್ನು ಪ್ರಶ್ನೆಗಳು ಇವೆ ಎಂದು ಹೇಳುತ್ತಿದ್ದೇನೆ ಯಾರೂ ಸಹಕಾರವನ್ನು ನೀಡುತ್ತಿಲ್ಲ

ಶ್ರೀ ಎಂ ಪಿ ಪ್ರಕಾಶ್ ಬಿಸಿನೆಸ್ ಅಡ್ವೈಸರಿ ಕಮಿಟಿಯೊಳಗೆ ನಾವು ಯಾರೂ ಕೋ-ಆಪರೇಟ್ ಮಾಡದೇ ಇದ್ದರೆ ಅದು ಸಾದ್ಯವಾಗುವುದಿಲ್ಲ

ಅಧ್ಯಕ್ಷರು ಈ ಸಭೆಯು ಒಪ್ಪಿದರೆ, ನಾನು ಈ ದಿನಕ್ಕೆ ಮಾತ್ರ ಅವಕಾಶವನ್ನು ಕೊಡುತ್ತೇನೆ ಇಲ್ಲದಿದ್ದರೆ ದಯಮಾಡಿ ಕೇಳುತ್ತೇನೆ ಎಲ್ಲ ಹಿರಿಯ ಸದಸ್ಯರುಗಳೆ ಜಾಸ್ತಿ ಸಮಯವನ್ನು ತೆಗೆದುಕೊಳ್ಳುವುದು ಸರಿಯಲ್ಲ ಇಲ್ಲದೆ ಇದ್ದರೆ ಏನು ಮಾಡುವುದಕ್ಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ ದಯಮಾಡಿ ಅವರವರ ಪಕ್ಷದ ಸದಸ್ಯರುಗಳಿಗೆ ಅವರುಗಳು ಹೇಳಿಕೊಳ್ಳಬೇಕು

ಶ್ರೀ ಎನ್ ಧರ್ಮಸಿಂಗ್ ಸೋಮವಾರದಿಂದ ತಾವು ಆಗಿ

ಮಾಡುತ್ತೀರಾ?

ಅಧ್ಯಕ್ಷರು ಸೋಮವಾರದಿಂದ ಆದಮೇಲೆ ಮಂಗಳವಾರದಿಂದ ಮಾಡಿ ಎಂದು ಹೇಳುತ್ತೀರಿ ಮಂಗಳವಾರ ಆದ ಮೇಲೆ ಬುಧವಾರದಿಂದ ಮಾಡಿ ಎಂದು ಹೇಳುತ್ತೀರಿ ಅಯಿತು ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ರವರೆ ತಾವು ಪ್ರಶ್ನೆಯನ್ನು ಕೇಳಿ

(ಈ ಹಂತದಲ್ಲಿ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ಹೆಚ್ ಹಾಲಪ್ಪ, ಶ್ರೀ ಎನ್ ಎಲ್ ನರೇಂದ್ರಬಾಬು ರವರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ಹೋದರು)

ಅರೆಕಾಲಿಕ ದೈಹಿಕ ಶಿಕ್ಷಕರ ವೇತನ ನಿಗದ್ಧಿ

72 (405) ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಅರೆಕಾಲಿಕಾ ದೈಹಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರೆಷ್ಟು ? ಎಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ, ಸದರಿಯವರಿಗೆ ಪ್ರತಿ ತಿಂಗಳು ನೀಡುವ ಸಂಬಳವೆಷ್ಟು?

2 ಈ ಶಿಕ್ಷಕರಿಗೆ ಕನಿಷ್ಠ ಕಾಯ್ದೆಯಡಿ ವೇತನ ನಿಗಧಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ

3 ಅರೆಕಾಲಿಕ ಶಿಕ್ಷಕರ ಸೇವೆಯನ್ನು ಪೂರ್ಣಾವಧಿಯೆಂದು

ಪರಿಗಣಿಸಿ ಸಂಬಳ ನಿಗಧಿಗೊಳಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು?

ಶ್ರೀ ಹೆಚ್ ಕೆ ಕುಮಾರ ಸ್ವಾಮಿ

1 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲ ಸೇವಾ ಸಂಸ್ಥೆಗಳಲ್ಲಿ ಅರೆಕಾಲಿಕ-ದೈಹಿಕ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರ ಮಾಹಿತಿಯನ್ನು ಜಿಲ್ಲಾವಾರು ಈ ಕೆಳಕಂಡಂತೆ ಸಲ್ಲಿಸಲಾಗಿದೆ

ಜಿಲ್ಲೆ	ಸಂಖ್ಯೆ	
1	ಮೈಸೂರು	4
2	ದಾವಣಗೆರೆ	2
3	ಬೆಳಗಾವಿ	-
4	ರಾಯಚೂರು	-
5	ಧಾರವಾಡ	4
6	ಗುಲ್ಬರ್ಗ	4
7	ಕೋಲಾರ	1
8	ಶಿವಮೊಗ್ಗ	1
9	ಬೆಂಗಳೂರು	7
ಒಟ್ಟು		23

1 ಇಲಾಖೆಯಲ್ಲಿ ಮೇಲಿನ 9 ಜಿಲ್ಲೆಗಳಲ್ಲಿ ಬೆಳಗಾವಿ ಮತ್ತು ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ 23 ಜನರು ಸುಮಾರು 6 ರಿಂದ 23 ವರ್ಷಗಳಿಂದ ದಿನಕ್ಕೆ 2 ಘಂಟೆಗಳ ಕಾಲ ಅರೆಕಾಲಿಕ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಇವರಿಗೆ ತಲಾ ಪ್ರತಿ ಮಾಹೆಗೆ ರೂ 350–00 ಗಳಂತೆ ಗೌರವ ಧನವನ್ನು ಪಾವತಿಸಲಾಗುತ್ತಿದೆ

2 ಈ ಕುರಿತು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ 1389 ಮತ್ತು 1390 97 ರಲ್ಲಿ ನೀಡಿರುವ ನಿರ್ದೇಶನದಂತೆ ಇವರಿಗೆ ಕನಿಷ್ಠ ವೇತನ ಕಾಯ್ದೆಯಡಿ ವೇತನ ನಿಗಧಿಪಡಿಸುವ ಬಗ್ಗೆ ಆಧಿಕ ಇಲಾಖೆಯ ಸಹಮತಿ ಕೋರಲಾಗಿದೆ

3 ಪೂರ್ಣಾವದಿ ನೌಕರರೆಂದು ಪರಿಗಣಿಸುವ ಪ್ರಶ್ನೆ ಉದ್ಭವಿಸು ವುದಿಲ್ಲ

ಅಧ್ಯಕ್ಷರು ಉಪಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಉಪಪ್ರಶ್ನೆಯನ್ನು ಕೇಳುತ್ತಿಲ್ಲ ಇಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಕೇವಲ ಈ ರಾಜ್ಯದಲ್ಲಿ 24 ಜನರು ಇದ್ದಾರೆ ಅವರುಗಳು 24 ವರ್ಷಗಳಿಂದ ಕೇವಲ 350 ರೂಪಾಯಿಗಳಿಗೆ ಕೆಲಸವನ್ನು ಮಾಡುತ್ತಿದ್ದಾರೆ ಈ ಬಗ್ಗೆ ಕೆಎಟಿಯವರು ಜಡ್ಜ್‌ಮೆಂಟ್‌ನ್ನು ಕೊಟ್ಟಿದ್ದಾರೆ ಜಡ್ಜ್‌ಮೆಂಟ್ ಕೊಟ್ಟು ಸುಮಾರು ವರ್ಷಗಳಾದರೂ ಕೂಡ ಕನಿಷ್ಟ ವೇತನವನ್ನು ಕೊಟ್ಟರೆ ಅದು ಕಾನೂನು ಬಾಹಿರ ಆಗುತ್ತದೆ ಸರ್ಕಾರ minimum wages ಅನ್ನು ಕೊಡುವುದಕ್ಕಾಗುವುಲ್ಲೆ ದರೇನು? ಅರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ ಎಂದು ಇದೆ ಸನ್ಮಾನ್ಯ ಸಚಿವರಲ್ಲಿ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ ಈ ಬಗ್ಗೆ ತಾವು ಆಶ್ವಾಸನೆಯನ್ನು ಕೊಡಬೇಕು –minimum wages ನ್ನು ಕೊಡುತ್ತೇವೆಂದು ತಾವು

ಆಶ್ವಾಸನೆಯನ್ನು ಕೊಡಬೇಕು

ಶ್ರೀ ಹೆಚ್ ಕೆ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಈ ಶಿಕ್ಷಕರು ಮಾತ್ರ 2 ಗಂಟೆಗಳ ಕಾಲ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಕನಿಷ್ಠ ವೇತನ ಕಾಯಿದೆ ಅಡಿ ಮತ್ತು ಅರೆಕಾಲಿಕ ಶಿಕ್ಷಕ ಎಂದರೆ ಕನಿಷ್ಠ 8 ಗಂಟೆಗಳ ಕಾಲ ಕೆಲಸವನ್ನು ಮಾಡಬೇಕು ಆದರೂ ಕೂಡ ಮಾನವೀಯತೆಯ ದೃಷ್ಟಿಯಿಂದ ಮತ್ತು ನ್ಯಾಯಾಧೀಕರಣವು ಕೂಡ ಆದೇಶ ಕೊಟ್ಟಿರುವುದರಿಂದ ನಾವು ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ ಇದಕ್ಕೆ ತಾವು ಅವಕಾಶವನ್ನು ಕೊಡಬೇಕು ಹಾಗೂ ಕನಿಷ್ಠ ವೇತನವನ್ನು ನಿಗಧಿ ಮಾಡಬೇಕೆಂದು ಕೇಳಿದ್ದೇವೆ ನಾವು ಸಹಮತವನ್ನು ನಿರೀಕ್ಷೆ ಮಾಡುತ್ತಿದ್ದೇವೆ ಅಲ್ಲಿಂದ ಬಂದ ತಕ್ಷಣ ಮಾಡುತ್ತೇವೆ

ಅಧ್ಯಕ್ಷರೆ ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಪ್ರಶ್ನೆಯನ್ನು ಕೇಳಿ,

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು 560 ಪ್ರಶ್ನೆಯನ್ನು ಮಾನ್ಯ ಕೃಷಿ ಮಾರುಕಟ್ಟೆ ಸಚಿವರಲ್ಲಿ ಕೇಳುತ್ತಿದ್ದೇನೆ ಏನು ಸದನದಲ್ಲಿ ಮಂತ್ರಿಗಳು ಇಲ್ಲವಲ್ಲಾ?

ಅಧ್ಯಕ್ಷರು ಮಂತ್ರಿಗಳು ಸದನದಲ್ಲಿ ಇದ್ದರಲ್ಲಾ ಎಲ್ಲೋ ಹೊರಟು ಹೋದರಲ್ಲಾ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಂತ್ರಿಗಳು ಸದನದಲ್ಲಿ ಇಲ್ಲವಲ್ಲಾ, ನಮ್ಮ ಪ್ರಶ್ನೆಗೆ ಯಾರು ಉತ್ತರವನ್ನು ಕೊಡುತ್ತಾರೆ

ಅಧ್ಯಕ್ಷರು. ಮಾನ್ಯ ಸಚಿವರು ಇಲ್ಲ ಅವರನ್ನು ಕರೆಸೋಣ ಈಗ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಇದ್ದಾರೆಯೇ? ತಮ್ಮ ಪ್ರಶ್ನೆ ಏನಾಗಿದೆ ಎಂದರೆ, ಪರಿಷ್ಕರಿಸಿದ ಪಡಿತರ ಚೀಟಿ ವಿತರಣೆಯಾಗಿದೆ, ಅದರ ಬಗ್ಗೆ ಅರ್ಧಗಂಟೆ ಕಾಲ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ ಆದ್ದರಿಂದ ಆಗ ತೆಗೆದುಕೊಳ್ಳೋಣ

ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಮಾನ್ಯ ಅಧ್ಯಕ್ಷರೆ, ನಾನು

ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಡಿಕೊಡಬೇಕು ನಾನು ಹಳ್ಳಿಯಲ್ಲಿರುವ ಬಗ್ಗೆ ಮಾತನಾಡಬೇಕಾಗಿದೆ

ಅಧ್ಯಕ್ಷರು ಅರ್ಧಗಂಟೆ ಕಾಲ ಚರ್ಚೆ ಮಾಡಬೇಕೆಂದು ಆಗಿದೆ ಅವತ್ತು ಈ ಬಗ್ಗೆ ಪ್ರಸ್ತಾಪ ಮಾಡೋಣ ಈಗ ಸಮಯವಿಲ್ಲ ಈಗ ಮಾನ್ಯ ಶ್ರೀರಾಮರೆಡ್ಡಿಯವರೆ ತಾವು ಪ್ರಶ್ನೆಯನ್ನು ಕೇಳಿ

ಕೃಷಿ ಮಾರುಕಟ್ಟೆ ಇಲಾಖಾ ವತಿಯಿಂದ ರಸ್ತೆ ಹಾಗೂ ವಸತಿ ಅಭಿವೃದ್ಧಿ

73 (560) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪದ್ರಶ್ನೆಗಳಿಗೆ ಉತ್ತರಿಸುವರೇ

ಅ) ಪ್ರಸ್ತುತ ವರ್ಷ ಕೃಷಿ ಮಾರುಕಟ್ಟೆ ಇಲಾಖೆ ವತಿಯಿಂದ ರಸ್ತೆ ಅಭಿವೃದ್ಧಿ ಸಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮಕೈಗೊಂಡಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ

ಅ) ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಇಲ್ಲ ಆದರೆ ಗ್ರಾಮೀಣ ಸಂತೆಗಳನ್ನು ಆರ್‌ಐಡಿಎಫ್ - XIII ರ ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಗ್ರಾಮೀಣ ಸಂತೆಗಳನ್ನು ನಬಾರ್ಡ್ ಸಹಾಯದಿಂದ ಆರ್‌ಐಡಿಎಫ್- XIII ರ ಯೋಜನೆಯಡಿಯಲ್ಲಿ ನಬಾರ್ಡ್ ಧನ

ಸಹಾಯದೊಂದಿಗೆ ಅಭಿವೃದ್ಧಿಪಡಿಸಲು ನಬಾರ್ಡ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಮಂಜೂರಾತಿ ದೊರೆತ ನಂತರ ಕ್ರಮ ಕೈಗೊಳ್ಳಲಾಗುವುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರಗಳನ್ನು ಕೊಟ್ಟಿದ್ದಾರೆ ಯಾವ ಕಾರಣಕ್ಕೋಸರ ರಸ್ತೆಯ ಕೆಲಸ ಮಾಡುವುದನ್ನು ನಿಲ್ಲಿಸಿದ್ದೀರಿ? ಆ ಬಗ್ಗೆ ತಾವು ಹೇಳಲಿಲ್ಲ ಹಿಂದೆ ಕೃಷಿ ಮಾರು ಕಟ್ಟೆಯಿಂದ ರಸ್ತೆಯ ಕೆಲಸವನ್ನು ಮಾಡುವಂತಹ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಈಗ ಅದನ್ನು ವಾಪಸ್ಸು ಪಡೆದಿದ್ದೀರಿ, ಏಕೆ ವಾಪಸ್ಸು ತೆಗೆದುಕೊಂಡಿದ್ದೀರಿ, ಈಗ ಏತಕ್ಕೆ ಮಾಡುವುದಕ್ಕಾಗುತ್ತಿಲ್ಲ? ಇದಕ್ಕೆ ಏನು ಅಡ್ಡಿ ಆತಂಕಗಳು ಇವೆ, ಏಕೆಂದರೆ ರೂರಲ್ ಏರಿಯಾಗಳಲ್ಲಿ ರಸ್ತೆಯನ್ನು ಮಾಡುವುದಕ್ಕೆ ಭಾರಿ ಅನುಕೂಲವಿತ್ತು, ಈಗ ಏತಕ್ಕಾಗಿ ತೆಗೆದಿದ್ದೀರಿ, ಅದೇ ಪ್ರಶ್ನೆಯ ಭಾಗವಾಗಿ ಸಂತೆಯ ಬಗ್ಗೆ ನಬಾರ್ಡ್‌ನಿಂದ ನಾವು ಲೋನ್ ತೆಗೆದುಕೊಳ್ಳುತ್ತಿದ್ದೇವೆ, ಅವರು ಮಂಜೂರಾತಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ ನಬಾರ್ಡ್‌ನವರನ್ನು ತಾವು ಕೇಳಬಹು ದಾಗಿತ್ತು ರೂರಲ್ ಏರಿರಾಗಳಲ್ಲಿ ಸಂಪರ್ಕ ರಸ್ತೆಗಳು ಬೇಕಾಗುತ್ತದೆ, ಕೃಷಿ ಮಾರುಕಟ್ಟೆಗೆ ಬರತಕ್ಕಂತಹ ತರಕಾರಿಗಳನ್ನು ಲಾರಿಗಳಲ್ಲಿ ತೆಗೆದು ಕೊಂಡು ಬರುವಾಗ ಅವಶ್ಯಕತೆ ಇದೆ ಎಂದು ಹೇಳಿ, ಇದನ್ನು ಯಾವ ಕಾರಣಕ್ಕಾಗಿ ತೆಗೆದಿದ್ದೀರಿ ಈ ಬಗ್ಗೆ ತಾವು ಹೇಳಬೇಕು

ಶ್ರೀ ಶರಣಬಸಪ್ಪ ದರ್ಶನಾಪುರ ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಎಪಿಎಂಪಿ ವತಿಯಿಂದ ರಸ್ತೆಗಳನ್ನು ತೆಗೆದು ಕೊಳ್ಳಬೇಕು ಈಗ ಮೊದಲೇ ಒಂದು ಸಾರಿ ಆಗಿದೆ ಹಿಂದೆ ಮಾನ್ಯ ನಾಗಪ್ಪನವರು ಇದ್ದಂತಹ ಸಂದರ್ಭದಲ್ಲಿ Administrator Rule ಎಲ್ಲಾ ಕಡೆಯಲ್ಲಿ ಇತ್ತು ಆ ಸಂದರ್ಭದಲ್ಲಿ ಅಲ್ಲಿರತಂಕ್ಕಂತಹ ಎಲ್ಲಾ ಹಣವನ್ನು ಒಂದು ಕಡೆಗೆ ಸೇರಿಸಿ, ಒಂದೊಂದು ಎಪಿಎಂಸಿಗೆ 15-15 ಲಕ್ಷ ರೂಪಾಯಿಗಳಂತೆ ರಸ್ತೆಯ ಕೆಲಸವನ್ನು ಕೊಟ್ಟಿದ್ದರು ಮಾನ್ಯ ಪ್ರಕಾಶ್ ಹುಕ್ಕೇರಿಯವರು ಇದ್ದಂತಹ ಸಂದರ್ಭದಲ್ಲಿ 50-50 ಲಕ್ಷ ರೂಪಾಯಿಗಳ ಒಂದು ಪ್ರಪೋಜಲ್‌ನ್ನು ತರಿಸಿ ನಬಾರ್ಡ್ ಸಬ್‌ಕಮಿಟಿಯ ಮುಂದೆ ಅವರು ಇಟ್ಟಿದ್ದರು ಅಂತಹ ಸಂದರ್ಭದಲ್ಲಿ ನಬಾರ್ಡ್ ಸಬ್‌ಕಮಿಟಿಯವರು ಇವತ್ತು ಏನು ಎಪಿಎಂಸಿ ರಸ್ತೆಗಳು, ಕಚ್ಚಾ ರಸ್ತೆಗಳಿಗೆ ನಾವು ದುಡ್ಡು

ಕೊಡುವುದಿಲ್ಲ ಕಂಪ್ಲೀಟಾಗಿ ಡಾಂಬರೀಕರಣವಾಗಿರುವಂತಹ ರಸ್ತೆಗಳಿಗೆ ನಾವು ದುಡ್ಡನ್ನು ಒದಗಿಸುವಂತಹ ಕೆಲಸವನ್ನು ಮಾಡುತ್ತೇವೆಂದಾಗ ಆ ಸಂಧರ್ಭದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಕೂಡ ಈ ವಿಷಯ ಚರ್ಚೆಯಾಯಿತು ಈಗ ನಬಾರ್ಡ್ ವತಿಯಿಂದ ಜಿಲ್ಲಾಪಂಚಾಯಿತಿಯಲ್ಲಿ ವಿಲೇಜ್ ರೋಡ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಅದಕ್ಕಾಗಿ ಹೆಚ್ಚಿಗೆ ಹಣವನ್ನು ಒದಗಿಸುತ್ತೇವೆ ಆಗ ಇದ್ದಂತಹ ಪ್ರಪೋಜಲ್‌ನ್ನು ಶಾಸಕರೆಲ್ಲರೂ ಸೇರಿ ಏನು ತಯಾರು ಮಾಡಿ ಕೊಟ್ಟಿದ್ದರೂ ಅದು ಕೂಡ ನಬಾರ್ಡ್‌ನಲ್ಲಿ ತಂದಂತಹ ಸಂಧರ್ಭದಲ್ಲಿ ಇದೇ ಉತ್ತರವನ್ನು ಸಿಗತಕ್ಕಂತಹದ್ದು ಆಗಿದೆ ಅದಕ್ಕಾಗಿ ಈ ರಸ್ತೆಗಳು ಈಗಾಗಲೇ ನಬಾರ್ಡ್ ಯೋಜನೆಯಲ್ಲಿ ಬರುವಂತಹ ನಮ್ಮ state allocatıon ಏನು ಇದೆ, ಆ allocatıon ನಲ್ಲಿ ಸುಮಾರು 350 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಆಗುತ್ತಿದೆ ನಮಗೆ ಕೇವಲ ಗ್ರಾಮೀಣ ಸಂತೆಗೆ ಪ್ರತಿವರ್ಷ 15 ರಿಂದ 17 ಕೋಟಿ ರೂಪಾಯಿಗಳನ್ನು earmark ಮಾಡಿದ್ದಾರೆ ಈಗ ಲಿಸ್ಟ್ ತಯಾರಾಗಿದೆ, ಅದನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದೇವೆ ಅದು ನಬಾರ್ಡ್‌ಗೆ ಹೋದ ತಕ್ಷಣ ಒಂದು ತಿಂಗಳಲ್ಲಿ ಟೆಂಡರ್‌ನ್ನು ಕರೆಯುವಂಹ ವ್ಯವಸ್ಥೆ ಮಾಡುತ್ತೇವೆ ಹೋದ ಸಾರಿಯೂ ಕೂಡ ಸುಮಾರು 17 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಮಾರು 156 ಗ್ರಾಮಗಳನ್ನು ಕೂಡ ತೆಗೆದುಕೊಂಡಿದ್ದೇವೆಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇವೆ

ಕರ್ನಾಟಕ ರಾಜ್ಯದಲ್ಲಿ ಒಂದೊಂದು ಸಂತೆ ಮಾಡಲಿಕ್ಕೆ ಎಷ್ಟು ಹಣ ಖರ್ಚು ತಗುಲುತ್ತದೆ? ನೀವು 17 00 ಕೋಟಿ ರೂ ಆಗುತ್ತದೆಂದು ಹೇಳುತ್ತಿದ್ದಾರೆ ಒಂದು ಸಂತೆ ಮಾಡಲಿಕ್ಕೆ ಎಷ್ಟು ಹಣ ಖರ್ಚು ಆಗುತ್ತದೆ? ನಮ್ಮ ಯೋಜನೆ ಏನು? ಎಷ್ಟು ಸಂತೆ ಮಾಡಬೇಕೆಂದು ಇದೆ? ಇದರ ಬಗ್ಗೆ ಉತ್ತರ ಹೇಳಿ

ಶ್ರೀ ಶರಣಬಸಪ್ಪಗೌಡ ದರ್ಶನಾಪುರ (ಮಾನ್ಯ ಕೃಷಿ ಮಾರುಕಟ್ಟೆ ಸಚಿವರು) 17 00 ಕೋಟಿ ರೂಪಾಯಿಗಳ ವೆಚ್ಚದಲ್ಲಿ 156 ಸಂತೆಗಳನ್ನು ರಾಜ್ಯದಲ್ಲಿ ತೆಗೆದುಕೊಂಡಿದ್ದೇವೆ, ಕನಿಷ್ಟ 10 00 ಲಕ್ಷರೂ ಗಳಿಂದ 15 00 ಲಕ್ಷ ರೂ ಗಳವರೆಗೂ ಒಂದೊಂದು ಸಂತೆಯನ್ನು ಮಾಡತಕ್ಕಂಥ ಜಾಗದ ವಿಸ್ತೀರ್ಣ ನೋಡಿ ಸಂತೆಗಳನ್ನು ಕೊಡುವುದಕ್ಕೆ ಇದೆ, ಹಿಂದಿನ ವರ್ಷ

17 00 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 156 ಗ್ರಾಮೀಣ ಸಂತೆಗಳನ್ನು ನಾವು ತೆಗೆದುಕೊಂಡಿದ್ದೇವೆ ಈ ವರ್ಷ 15 00 ಕೋಟಿ ರೂ ಗಳನ್ನು ವೆಚ್ಚದಲ್ಲಿ ಸುಮಾರು 140 ಗ್ರಾಮೀಣ ಸಂತೆಗಳನ್ನು ತೆಗೆದುಕೊಳ್ಳುತ್ತೇವೆ ಅದರಲ್ಲಿ ತಮ್ಮ ಕ್ಷೇತ್ರಕ್ಕೆ ಸೇರಿರುವಂಥ ಹೂಳೂರು ಸೇರಿದೆ ನಬಾರ್ಡ್ 11 ರಲ್ಲಿ ಬಾಚೆಪಾಳ್ಯದಲ್ಲಿ ಒಂದು ಸಂತೆ ಮಂಜೂರಾತಿ ಸಿಕ್ಕಿದ್ದು ಜಾಗದ ತೊಂದರೆ ಇರುವುದರಿಂದ ಕಾಮಗಾರಿ ಸ್ಥಗಿತಗೊಂಡಿದೆ ಅಲ್ಲಿ ಆ ಜಾಗದ ತೀರ್ಮಾನವಾದರೆ ಅಲ್ಲಿಯೂ ಕೂಡ ಕೆಲಸ ಪ್ರಾರಂಭ ಮಾಡಬಹುದು ಎಂದು ತಮ್ಮ ಮೂಲಕ ಹೇಳುತ್ತೇನೆ

ಅಧ್ಯಕ್ಷರು ಶ್ರೀ ಹೆಚ್ ಹಾಲಪ್ಪ

ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಬಿಡುಗಡೆ

75 (399) ಶ್ರೀ ಹೆಚ್ ಹಾಲಪ್ಪ (ಹೊಸನಗರ)

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಸ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿನ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ (ಸಂಬಳ) ಎಷ್ಟು ತಿಂಗಳ ಬಾಕಿ ಇದೆ?

ಆ) ಈ ಗೌರವ ಧನವನ್ನು ನೀಡದೆ ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಇ) ಗೌರವ ಧನ ಬಿಡುಗಡೆ ಮಾಡಲು ಏನು ತುರ್ತು ಕ್ರಮ ಕೈಗೊಂಡಿದ್ದಿರಿ?

ಶ್ರೀ ಹೆಚ್ ಕೆ ಕುಮಾರಸ್ವಾಮಿ

ಅ) 2007 ರ ಜೂನ್ ತಿಂಗಳಿನಿಂದ ಬಾಕಿ ಇದೆ

ಆ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಆಡಳಿತ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುತ್ತದೆ ಕೇಂದ್ರ ಸರ್ಕಾರದ ಅನುದಾನ ಬಿಡುಗಡೆಯಾಗಿ ರಾಜ್ಯ ಸರ್ಕಾರದ ಖಾತೆಗೆ ಜಮಾ ಆದನಂತರ ಅನುದಾನವನ್ನು ಜಿಲ್ಲಾ ಪಂಚಾಯತ್ ಗಳಿಗೆ ಮರುಹಂಚಿಕೆ ಮಾಡಲಾಗುತ್ತದೆ ಸದರಿ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ವಿಳಂಬವಾಗಿದ್ದು ಗೌರವಧನ ಬಿಡುಗಡೆ ವಿಳಂಬವಾಗಿರುತ್ತದೆ

ಆ) ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಲ್ಲಿ ವಿಳಂಬವಾದಾಗ ರಾಜ್ಯ ಸರ್ಕಾರದಿಂದ ತಾತ್ಕಾಲಿಕವಾಗಿ ಮುಂಗಡ ಅನುದಾನ ಬಿಡುಗಡೆ ಮಾಡುತ್ತದೆ ಪ್ರಸ್ತುತ 2007–08ನೇ ಸಾಲಿನ ಒಂದನೇ ಕಂತಿನ ಅನುದಾನ 3161 61 ರಂದು ಬಿಡುಗಡೆ ಗೊಳಿಸಲಾಗಿದ್ದು ಬಾಕಿ ಗೌರವಧನ ಪಾವತಿಸಲು ಕ್ರಮ ವಹಿಸಲಾಗಿದೆ

ಶ್ರೀ ಹೆಚ್ ಹಾಲಪ್ಪ – ಉತ್ತರವನ್ನು ಒದಗಿಸಿದ್ದಾರೆ ಜೂನ್ ತಿಂಗಳ ಸಂಬಳ ಮಾತ್ರ ಬಾಕಿ ಇದೆ ಎಂದು ಹೇಳಿದ್ದಾರೆ ಶಿವಮೊಗ್ಗದ ನನ್ನ ಮತಕ್ಷೇತ್ರ ಹೊಸನಗರದಲ್ಲಿ ಏಪ್ರಿಲ್, ಮೇ, ಜೂನ್ ಮೂರು ತಿಂಗಳ ಸಂಬಾಳ ಬಾಕಿ ಇದೆ ಸಾಗರದಲ್ಲಿ ಬಾಕಿ ಇದೆ ಯಾರೋ ತಮ್ಮ ಅಧಿಕಾರಿಗಳು ಉತ್ತರಕ್ಕೆ ಸಹಿ ಹಾಕಿದ್ದಾರೆ, ತಾವು ಸಹಿ ಹಾಕಿಲ್ಲ ಅವರು ತಪ್ಪು ಮಾಹಿತಿ ಕೊಟ್ಟಿದ್ದಾರೆ ಇದರ ಬಗ್ಗೆ ತಾವು ಏನು ಹೇಳುತ್ತೀರೋ ಗೊತ್ತಿಲ್ಲ ಅವರು ತಪ್ಪು ಮಾಹಿತಿ ಕೊಟ್ಟಿದ್ದಾರೆ ಇದರ ಬಗ್ಗೆ ತಾವು ಏನು ಹೇಳುತ್ತೀರೋ ಗೊತ್ತಿಲ್ಲ ಮತ್ತೊಂದು 200–00 ರೂ ಗಳ ಸಂಬಳ ಜಾಸ್ತಿ ಮಾಡುತ್ತೇವೆಂದು ಬಜೆಟ್ಟನಲ್ಲಿ ಹೇಳಿದ್ದರು ಅದು ಏನಾಗಿದೆ ಅದರ ಬಗ್ಗೆ ಹೇಳಬೇಕು ಸಂಬಳ 1550–00 ರೂ ಕೊಡುವುದನ್ನು ಒಟ್ಟಿಗೆ ಕೊಡುತ್ತಿಲ್ಲ, 1000–00 ರೂ ಗಳನ್ನು ಒಂದು ಸಾರಿ, 550–00 ಒಂದು ಸಾರಿ ಕೊಡುತ್ತಿದ್ದೀರಿ, ಈ ರೀತಿ ಮತ್ತೆ ಮತ್ತೆ ಬೇರೆ ಬೇರೆ ಕೊಡುವುದಕ್ಕೆ ಸಮಜಾಯಿಷಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) – ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕರಿಗೆ

ನಾವು ಕೊಡುತ್ತಿರುವ ಗೌರವಧನವೇನಿದೆ ಅದನ್ನು ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರ ಎರಡೂ ಭರಿಸುತ್ತದೆ ಕೇಂದ್ರಸರ್ಕಾರ 1000-00 ರೂ ಗಳನ್ನು ಕೊಡುತ್ತದೆ, ರಾಜ್ಯ ಸರ್ಕಾರ 550-00ರೂ ಗಳನ್ನು ಕೊಡುತ್ತದೆ ಕೇಂದ್ರಸರ್ಕಾರದಿಂದ ಅನುದಾನ ಸಾಮಾನ್ಯವಾಗಿ ಕೊನೆಯ ಹಂತದಲ್ಲಿ ಬಿಡುಗಡೆ ಆಗುತ್ತದೆ, ಫೆಬ್ರವರಿ, ಮಾರ್ಚ್ ತಿಂಗಳಿಗೆ ತಮಗೆ ಹೇಳುವುದಾದರೆ ಕಳೆದ ವರ್ಷ 2006-07 ರಲ್ಲಿ ಕೇಂದ್ರಸರ್ಕಾರದಿಂದ ಏಪ್ರಿಲ್ 19ರಂದು ಒಂದು ಸಾರಿ ಹಣ ಬಿಡುಗಡೆ ಆಗಿದೆ, ಮತ್ತೆ ಕಳೆದ ವರ್ಷದಲ್ಲಿ ಫೆಬ್ರವರಿ 14, ಮಾರ್ಚ್ 15, ಮಾರ್ಚ್ 30 ರಂದು ಹಣ ಬಿಡುಗಡೆಯಾಗಿದೆ, ಇಷ್ಟು ತಡವಾಗಿ ಬರುವುದರಿಂದ ನಾವು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡುವಂಥ ಹಣವನ್ನು ಪ್ರತಿ ತಿಂಗಳೂ ಕೊಡುತ್ತೇವೆ, ಕೇಂದ್ರ ಸರ್ಕಾರದಿಂದ ವಿಳಂಬವಾಗಿ ಬರುವುದರಿಂದ ಈ ರೀತಿ ಆಗುತ್ತಿದೆ ಕೇಂದ್ರಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಿದ್ದೇವೆ ಇನ್ನು ಮುಂದೆ ನಮ್ಮ ಕಾರ್ಯಕರ್ತರಿಗೆ, ಸಹಾಯಕರಿಗೆ ಅನಾನುಕೂಲ ಆಗದಂತೆ ಪ್ರತಿ ತಿಂಗಳು ಹಣ ಬಿಡುಗಡೆ ಮಾಡಬೇಕೆಂದು ಕೇಳಿದ್ದೇವೆ ಈ ವರ್ಷ 2007-08 ರಲ್ಲಿ ಮೊನ್ನೆ ಜೂನ್ 30 ರಂದು ಸುಮಾರು 3100 ಕೋಟಿ ರೂಪಾಯಿಗಳ ಹಣ ಬಿಡುಗಡೆ ಆಗಿದ್ದು ಆ ಹಣ ಕೊಟ್ಟಿದ್ದೇವೆ ಆದರೆ ಸ್ವಲ್ಪ ತಡವಾಗಿ ಈಗ ಕೇವಲ ಜೂನ್ ತಿಂಗಳದ್ದು ಮಾತ್ರ ಬಾಕಿ ಇದೆ ಶಿವಮೊಗ್ಗಕ್ಕೆ ಒಂದು ಕೋಟಿ ಹನ್ನೆರಡು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಇದರಲ್ಲಿ ಏನೋ ಸ್ವಲ್ಪ ವ್ಯತ್ಯಾಸವಾಗಿರಬಹುದು ಅದನ್ನು ಸರಿದೂಗಿಸುತ್ತೇವೆ

ಶ್ರೀ ಹೆಚ್ ಹಾಲಪ್ಪ ಅಧ್ಯಕ್ಷರೇ, ಒಂದು ತಿಂಗಳ ಬಾಕಿ ಅಲ್ಲ, ಮೂರು ತಿಂಗಳ ವೇತನ ಕೊಡಲಿಕ್ಕೆ ಬಾಕಿ ಇದೆ, ತಮಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಹೆಚ್ಚುವರಿ ಗೌರವಧನವೇನದೆ ಅದರ ಬಗ್ಗೆ ಒಂದೆರಡು ದಿನಗಳಲ್ಲಿ ಅದಕ್ಕೆ ಒಂದು ಆದೇಶವನ್ನು ಹೊರಡಿಸ ಲಾಗುತ್ತದೆ

ಅಧ್ಯಕ್ಷರು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು 5ನೇ

ಪಟ್ಟಿ

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) – ದಿನಾಂಕ 13 07 2007 ರಂದು 5ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 56 ಪ್ರಶ್ನೆಗಳ ಪೈಕಿ 47 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು – ಮಂಡಿಸಲಾಯಿತು ಈಗ ಶೂನ್ಯವೇಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯದ ಘಟನೆ ಬಗ್ಗೆ ಕೊಟ್ಟಿದ್ದೀರಿ, ಮಾತನಾಡಿ

2 ಅಧ್ಯಕ್ಷರು ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಬಿಜಾಪುರದ ಮಹಿಳಾ ವಿಶ್ವವಿದ್ಯಾನಲಯುದಲ್ಲಿ ಉಪಕುಲಪತಿಗೆ ಆದಂತಹ ಅವಮಾನದ ಬಗ್ಗೆ

ಶ್ರೀ ಎನ್ ಧರಂಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) ನಿನ್ನೆ ಬಿಜಾಪುರ ಜಿಲ್ಲೆಯಲ್ಲಿ ಮಹಿಳಾ ವಿಶ್ವವಿದ್ಯಾನಲಯದಲ್ಲಿ ರಣರಂಗದ ರೀತಿಯಲ್ಲಿ ಸಾಕಷ್ಟು ಗಲಾಟೆ ಆಗಿದೆ ಇವತ್ತು ಮಹಿಳಾ ವಿಶ್ವ ವಿದ್ಯಾ ನಿಲಯವನ್ನು ಪ್ರಪ್ರಥಮವಾಗಿ ಬಿಜಾಪುರಕ್ಕೆ ಕೊಟ್ಟಿದ್ದಾರೆ

ಅಧ್ಯಕ್ಷರು – ಏನ್ರೀ ಇದು ಸಂತೆ ಏನ್ರೀ, ಮೂರು ವರ್ಷಗಳಾಯಿತು, ಏತಕ್ಕೆ ಅಲ್ಲಿ ಗುಂಪು ಕಟ್ಟಿಕೊಂಡು ನಂತು ಮಾತನಾಡುತ್ತೀರಿ, ಹಿರಿಯರಿರಬಹುದು, ಮೊದಲು ಟಿ ವಿ ಇರಲಿಲ್ಲ, ಈಗ ಟಿ ವಿ ಇದೆ ಎಲ್ಲಾ ತೋರಿಸುತ್ತಾರೆ ನೋಡಿ

ಶ್ರೀ ಎನ್ ಧರಂಸಿಂಗ್ ಉಪ ಕುಲಪತಿಗಳಾಗಿ ಅಲ್ಪಸಂಖ್ಯಾತ ಮಹಿಳೆಯಾದ ಡಾ ಸಯೀದಾ ಅಖ್ತರ್ ರವನ್ನು ಆಗಿನ ಸರ್ಕಾರ

ನೇಮಿಸಿತ್ತು ನಾವು ವಿಷಯದ ಮೆರಿಟ್ ಅಥವಾ ಡಿಮೆರಿಟ್ ಅಥವಾ ಡಿವೆರಿಟ್ ಬಗ್ಗೆ ಮಾತನಾಡಿಲಿಕ್ಕೆ ಹೋಗುವುದಿಲ್ಲ ನಿನ್ನೆ ನಡೆದಿರುವ ಘಟನೆ ನೋಡಿದ ಮೇಲೆ ನಿಜವಾಗಿಯೂ ಕೂಡ ಕರ್ನಾಟಕದಲ್ಲಿ ಸರ್ಕಾರ ಇದೆಯೇ ಇಲ್ಲವೇ ಎಂಬ ಅಭಿಪ್ರಾಯ ಬರುತ್ತಿದೆ ನಿನ್ನೆ ಒಂದು ಸಿಂಡಿಕೇಟ್ ಸಬೆ ನಡೆದಿದೆ ಕುಲಸಚಿವರು ಆ ಸಭೆಗೆ ಹೋಗಲಿಲ್ಲ ಮತ್ತು ಎ ಬಿ ವಿ ಪಿ ಯವರ ಏನು ಒಂದು ಘಟಕ ಇದೆ, ಅವರೆಲ್ಲರು ಅಲ್ಲಿ ಹೋಗಿ ಅಡೆತಡೆ ಮಾಡಿದ್ದಾರೆ

ಅಧ್ಯಕ್ಷರು – ಯಾರು ಅಲ್ಲಿ ನಿಂತಿರುವವರು, ಆ ಕಡೆ ತಿರುಗಿಕೊಂಡು ಮಾತನಾಡುವುದು? ಏನಪ್ಪಾ ನೀವು ಸದನದ ನಿಯಮಗಳನ್ನು ಪಾಲಿಸುವುದಿಲ್ಲ ಎಷ್ಟು ಹೇಳಿದರೂ ಅಷ್ಟೇ ನೀವು

ಶ್ರೀ ಎನ್ ಧರಂಸಿಂಗ್ – ಅಧ್ಯಕ್ಷರೇ, ನಾವು ಒಂದು ಗಂಟೆಯ ಹಿಂದೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಕಾಗದ ಕಳುಹಿಸಿದ್ದೇವೆ ನಾವು ಮಾತನಾಡುವ ಸಮಯದಲ್ಲಿ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇರಲೇಬೇಕು ಸಂಸದೀಯ ವ್ಯವಹಾರಗಳ ಸಚಿವರು ಸದನದಲ್ಲಿರುವುದನ್ನು ನಾನು ಒಪ್ಪುತ್ತೇನೆ ಸಂಬಂಧಪಟ್ಟ ಸಚಿವರು ಇವತ್ತು ಇರಲೇಬೇಕು ಉನ್ನತ ಶಿಕ್ಷಣ ಸಚಿವರಾಗಿ ಶ್ರೀ ಶಂಕರಮೂರ್ತಿಯವರು ಸಾಕಷ್ಟು ಕಡೆ ಹೋಗಿದ್ದಾರೆ ಮೊನ್ನೆ ಪಿ ಜಿ ಸೀಟ್ಸ್ ಬಗ್ಗೆ university wise ಮಾಡಲಿಕ್ಕೆ ಕೇಂದ್ರದೊಂದಿಗೆ ಮಾಡಲಿಕ್ಕೆ Common Civil Code ಆಧಾರದ ಮೇಲೆ ಇವತ್ತು ಬಿಜೆಪಿಯವರು ಏನು ಮಾಡುತ್ತಿದ್ದಾರೆ ಅದನ್ನು ಪಕ್ಷದವರು ಹಿಡಿದಿದ್ದಾರೆ, ಕೊನೆಗೆ ನಾವು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ ಈ ಒಂದು ರಾಜ್ಯದಲ್ಲಿ ಪ್ರಪ್ರಥಮವಾಗಿ ಸ್ಥಾಪನೆಯಾದ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ತನ್ನದೇ ಆದಂತಹ ಒಂದು Sanctity ಇದೆ ಮಹಿಳೆಯರಿಗೆ ಹೆಚ್ಚಿನ ಆದ್ಯತೆ, ಅವಕಾಶ ಕೊಡುವುದಕ್ಕಾಗಿ ಹಿಂದುಳಿದ ಪ್ರದೇಶದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭವಾಗಿದೆ I am not going to defend anybody here – ಇವತ್ತು ಆ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಅಲ್ಪಸಂಖ್ಯಾತ ಮಹಿಳೆಯೊಬ್ಬರು ಕೆಲಸ ಮಾಡುತ್ತಿದ್ದಾರೆ ಅವರ ಮೇಲೆ ಚಾರ್ಜಸ್ ಇರಬಹುದು, ಇವೆಲ್ಲಾ ನೋಡಿದಾಗ ಅಧ್ಯಕ್ಷರೆ,

Chancellor is there, pro Chancellor is there, Vice Chancellor is there ಇಂಥ ಒಂದು ಸಂದರ್ಭದಲ್ಲಿ ಎಲ್ಲಾ ಕಡೆ ಎಬಿವಿಪಿ ಕಾರ್ಯಕರ್ತರು ಹೋಗಿ ಗಲಾಟೆ ಮಾಡತಕ್ಕಂಥ ರೀತಿಯಲ್ಲಿ ಘಟನೆಗಳು ಆಗಿದೆ ಇವತ್ತು ಎಬಿವಿಪಿ ಸರ್ಕಾರ, ಆರ್ ಎಸ್ ಎಸ್ ಸರ್ಕಾರ ಇದೆ, ನನ್ನೆ ಎಲ್ಲಾ ಎಬಿವಿಪಿ ಘಟಕದ ಜನರು ಹೋಗಿ ಬೀಗ ಮುರಿದು ಒಳಗೆ ಹೋಗಿ ಗಲಾಟೆ ಮಾಡಿದ್ದಾರೆ ಆ ಮಹಿಳೆಯನ್ನು ಕಣ್ಣೀರು ಸುರಿಸುವಂತೆ ಮಾಡಿದ್ದಾರೆ ಅದಕ್ಕೆ ನಾನು ಈ ಶೂನ್ಯವೇಳೆಯಲ್ಲಿ ಕೇಳುತ್ತಿದ್ದೇನೆ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಯಾಗಿ ಕೆಲಸ ಮಾಡುವ ಅವಕಾಶ ಆಕೆಗೆ ದೊರೆತಿರುವುದರಿಂದ ಅವರು ಕೆಲಸ ಮಾಡುತ್ತಿದ್ದಾರೆ ಅವರ ವಿರುದ್ಧ ಏನಾದರೂ ಚಾರ್ಜಸ್ ಇದ್ದರೆ you take action against Vice Chancellor That is different ಆದರೂ Chancellor ಮತ್ತು pro chancellor, ಉನ್ನತ ಶಿಕ್ಷಣ ಸಚಿವರು ಇದ್ದಾರೆ ಇವತ್ತು ಇಂಥ ಸಂಧರ್ಭದಲ್ಲಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಏನು ಗಲಾಟೆ ನಡೆಯುತ್ತಿದೆ ಆದರಿಂದ ಕರ್ನಾಟಕ ರಾಜ್ಯದಲ್ಲಿರುವಂಥ ಮಹಿಳೆಯರಿಗೆ ಹೋಗಬೇಕೋ ಬೇಡವೋ ಎನ್ನುವ ರೀತಿಯಲ್ಲಿ ಅಭಿಪ್ರಾಯವಾಗುತ್ತಿದೆ ಹಾಗಾಗಿ ಸರ್ಕಾರ ಇದನ್ನು ನೋಡಬೇಕು You have to set right the things You direct the D C ಅಲ್ಲಿರತಂಕ್ಕಥ ಎಸ್ ಪಿ ಯವರನ್ನು ಕಳುಹಿಸಿ, ಅವರು ಮಾತನಾಡಲಿ, ಮಾತನಾಡಿದ ಮೇಲೆ ವಿಷಯದ ಬಗ್ಗೆ ಚರ್ಚೆ ಮಾಡಬಹುದು, ಅದನ್ನು ಬಿಟ್ಟು ಗಲಾಟೆಗೆ ಅವಾಕಾಶ ಕಲ್ಪಿಸಿ ಕೊಡುವುದಾಗುವುದರಿಂದ ಇವತ್ತಿನ ದಿವಸ ಈ ರಾಜ್ಯದಲ್ಲಿ ರಕ್ಷಣೆ ಯಾರಿಗೂ ಇಲ್ಲ ಮಹಿಳೆಯರಿಗೂ ಇಲ್ಲ ಮತ್ತು ಇವತ್ತು ಅದೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು ಸಮ್ಮಿಶ್ರ ಸರ್ಕಾರದ ಭಾಗವಾಗಿರುವಂತಹ ಬಿ ಜೆ ಪಿ, ಆರ್ ಎಸ್ ಎಸ್, ಎಬಿವಿಪಿ, ಏನದೆ ಇವತ್ತು ಸಾಕಷ್ಟು ಗಲಾಟೆಯನ್ನು ಎಬಿವಿಪಿಯವರು ಮಾಡಿದ್ದಾರೆ, ಬೇರೆ ಪಕ್ಷದವರ್‍ಯಾರೂ ಅಲ್ಲಿ ಗಲಾಟೆ ಮಾಡಿಲ್ಲ ಅಲ್ಲಿ ಏನೇ ಅನಾಹುತವಾದರೂ ಕ್ರಮ ತೆಗೆದುಕೊಳ್ಳಲಿಕ್ಕೆ ಬೇರೆ ಜನರಿದ್ದಾರೆ ಆದುದರಿಂದ ನಾನು ಕೇಳುವುದೇನೆವೆಂದರೆ ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು, ನಮ್ಮ ಗುಲ್ಬರ್ಗಾ ಜಿಲ್ಲೆಯ ಪಕ್ಕದಲ್ಲಿರತಕ್ಕಂಥ ಈ ಒಂದು ಬಿಜಾಪುರ ಜಿಲ್ಲೆಯಲ್ಲಿ ನಡೆದಂಥ ಘಟನೆಗೆ ನಾವೆಲ್ಲರೂ ಕೂಡ ವಿಷಾದ ವ್ಯಕ್ತಪಡಿಸುತ್ತಿದ್ದೇವೆ, ಸರ್ಕಾರ ರಕ್ಷಣೆಯನ್ನು ಕೊಡಬೇಕು,

ಸರ್ಕಾರ ಇದೆಯೆಂಬುದನ್ನು ಖಾತ್ರಿಗೊಳಿಸಬೇಕು ಇವತ್ತು ನಾನು ಸುಮ್ಮನೆ ರಾಜಕೀಯ ಬೆಳೆಸುವ ಕೆಲಸ ಮಾಡುವುದಿಲ್ಲ ಅಲ್ಲಿ ಘಟನೆ ನಡೆದಿದೆ ಘಟನೆ ನಂತರವೇ ಇವತ್ತು ನಾನು ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ Charges ಇದ್ದರೆ, take action ಇವೆಲ್ಲವನ್ನೂ ಇಟ್ಟುಕೊಂಡು ಇವತ್ತಿನ ದಿವಸ autonomous ಆಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದಕ್ಕೆ ಏನು ಹಕ್ಕಿದೆಯೋ, ಅದನ್ನು ಈಗಿನ ಸರ್ಕಾರ ಮೊಡಕುಗೊಳಿಸುತ್ತಿದೆ ಯಾರಿಗೂ ರಕ್ಷಣೆ ಇಲ್ಲ ಇವತ್ತು ಇದೇ ರೀತಿ ಎಲ್ಲಿಯವರೆಗೆ ಸರ್ಕಾರ ನಡೆಸುತ್ತೀರಿ? ಅವರ ಜೊತೆ ಎಲ್ಲಿಯವರೆಗೆ ಹೋಗುತ್ತೀರಿ? ನಮ್ಮ ಹಿಂದಿನ Socialistic background ಏನಿದೆ, ಸಿದ್ಧಾಂತಗಳೇನಿವೆ, ಅವೆಲ್ಲಕ್ಕೂ ತಿಲಾಂಜಲಿ ಕೊಡುವ ಕಾಲ ಬಂದಿದೆ ಸದನದಲ್ಲಿ ಉಪ ಮುಖ್ಯ ಮಂತ್ರಿಗಳಿದ್ದಾರೆ ಇದಕ್ಕೆ ನೇರವಾಗಿ ಸರ್ಕಾರದಿಂದ ಉತ್ತರ ಬಯಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗುರುಮಿರಕಲ್) ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಬಿಜಾಪುರ ಮಹಿಳಾ ವಿಶ್ವವಿದ್ಯಾಲಯದ ಉಪ ಕುಲಪತಿಗೆ ಆದಂತಹ ಅವಮಾನದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅಲ್ಲಿರುವ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ವತಿಯಿಂದ ಸತತವಾಗಿ ಈ ಪ್ರಯತ್ನ ನಡೆದಿದೆ ಅಲ್ಲಿರುವ ಮಹಿಳಾ Vice chancellor ಅವರನ್ನು de-stabilizeಮಾಡಬೇಕು, ಅವರನ್ನು ತೆಗೆದು ಹಾಕಬೇಕು, ಅವರಿಗೆ ಕೆಟ್ಟ ಹೆಸರು ತರಬೇಕು ಮತ್ತು ಯಾವುದೇ ರೀತಿಯಿಂದಲೂ ಅವರಿಗೆ ಸಹಕರಿಸಬಾರದೆಂಬ ಉದ್ದೇಶದಿಂದ ಸತತವಾಗಿ ಒಂದು ವರ್ಷದಿಂದಲೂ ಪ್ರಯತ್ನ ನಡೆದಿರುವುದು ಪ್ರಸ್ತಾಪವಾದ ನಂತರ, ಅದನ್ನು ಸರಿಪಡಿಸುತ್ತೇವೆಂಬ ಮಾತನ್ನೂ ಹೇಳಿದ್ದಾರೆ ಆದರೆ, ಬೇಲಿಯೇ ಹೊಲವನ್ನು ಮೇಯುತ್ತಿರುವಾಗ ಯಾರಿಗೆ ಹೇಳಬೇಕು? ಇವತ್ತು Pro-Chancellor ಎಂದರೆ, ಶಿಕ್ಷಣ ಸಚಿವರೇ ಆಗಿದ್ದಾರೆ ABVP ವಿದ್ಯಾರ್ದಿಗಳಿಗೆ ಟೀ ಕುಡಿಸಿ, ಕೇಳಿಕೊಂಡು, ಹೇಳಿಕೊಂಡು, ನೀವು ಹೋಗಿ ಎಂದು ಹೇಳಿದ್ದರೆ, ಇಂತಹ ಮಾತುಗಳನ್ನು ಹೇಳುವ ಮೂಲಕ ಅವರೇ ಪ್ರಚೋದನೆ ಮಾಡಿದ್ದರೆ, ಎಲ್ಲಿಗೆ ಹೋಗಬೇಕು? ನೀವು enquiry ಮಾಡಿ ಅಥವಾ ಅವರ ಮೇಲೆ allegation ಮಾಡಿ, ಆ ರಿಪೋರ್ಟ್ ತಂದು ತೆಗೆದುಹಾಕುವುದಕ್ಕೆ ಸರ್ಕಾರಕ್ಕೆ, ಗವರ್ನರ್ ಗೆ ಅದಿಕಾರವಿದೆ, Chancellor ಗೆ ಅಧಿಕಾರವಿದೆ Governor ಆ ಕೆಲಸ ಮಾಡಲಿ

ಆದರೆ, ಇವರು ಯಾರು? ಸಿಂಡಿಕೇಟ್ ಸಭೆ ನಡೆದಾಗ ವಿದ್ಯಾರ್ಥಿಗಳು ನುಗ್ಗಿ ಒಳಗೆ ಹೋಗುವುದು ನೀವು ಟಿ ವಿ ಯಲ್ಲಿ ನೋಡಿರಬಹುದು ಬಾಗಿಲು ಮುರಿದು, ಪೊಲೀಸರನ್ನು ಧಿಕ್ಕರಿಸಿ ಒಳಗೆ ಹೋಗಿ ಗಲಾಟೆ ಮಾಡುತ್ತಿದ್ದಾರೆಂದರೆ, ಇದು ಯಾರ ಕುಮ್ಮಕ್ಕು? ಸರ್ಕಾರದ ಕುಮ್ಮಕ್ಕು ಇಲ್ಲದೇ ಆ ವಿದ್ಯಾರ್ಥಿ ಪರಿಷತ್‌ನವರು ಈ ಕೆಲಸ ಮಾಡಲು ಸಾಧ್ಯವಿಲ್ಲ ಇದು ಪ್ರಜಾಪ್ರಭುತ್ವವಲ್ಲ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದವರು ವಿಶೇಷವಾಗಿ ಬಿಜೆಪಿ ನಾಯಕರು ಮತ್ತು ಬಿಜೆಪಿ ಮಂತ್ರಿಗಳು ಆ ವಿದ್ಯಾರ್ಥಿ ಸಂಘಟನೆಗೆ ಇವತ್ತು ಬೆಂಬಲ ನೀಡಿದ್ದಕ್ಕಾಗಿ ಅವರಿಗೆ ಧೈರ್ಯ ಬಂದಿದೆ ಒಬ್ಬ ಮಹಿಳಾ Vice chancellor ರವರ chamber ಹೊಕ್ಕು ಸಿಂಡಿಕೇಟ್ ಮೀಟಿಂಗ್ ನಡೆದಾಗ, ಈ ರೀತಿ ಮಾಡುವುದು ನಿಜವಾಗಿಯೂ ಕರ್ನಾಟಕ ರಾಜ್ಯಕ್ಕೆ ಗೌರವ ತರುವಂಥಾದ್ದಲ್ಲ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯಕ್ಕೆ ಇವತ್ತು ಏನು ಒಳ್ಳೆಯ ಹೆಸರು ಇದೆ, ನಿಜವಾಗಿಯೂ ಇದಕ್ಕೆ ಕಳಂಕ ತರುವ ಕೆಲಸವನ್ನು ಯಾರಾದರೂ ಮಾಡಿದ್ದರೆ, ಅದನ್ನು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ನವರು ಮಾಡಿದ್ದಾರೆ ವಿದ್ಯಾರ್ದಿ ಪರಿಷತ್ತಿನ ಹೆಸರಿನಲ್ಲಿ ಯಾರ್‍ಯಾರು ಗಲಾಟೆ ಮಾಡಿದ್ದಾರೋ, ಮೊದಲು ಅವರನ್ನು ಡಿಬಾರ್ ಮಾಡಬೇಕು, ಅವರನ್ನು ಅರೆಸ್ಟ್ ಮಾಡಬೇಕು, ಅವರನ್ನು ಜೈಲಿಗೆ ಹಾಕಬೇಕು ಅನಂತರ, ಮುಂದಿನ enquiry ಮಾಡಿ ಅದು ಬಿಟ್ಟು ಸಿಂಡಿಕೇಟ್ ಮೀಟಿಂಗ್ ನಡೆದಾಗ ಹೊರಗೆ ಗಲಾಟೆ ಎಬ್ಬಿಸುವುದು, ಕೇಳುವುದು ಅನಂತರ, ನಮಗೆ ಏನು ಹಕ್ಕು ಇದೆಯೆಂದು ಹೇಳುವುದು ಅಥವಾ ಇಲ್ಲಿಂದ ಹೇಳಿದೆ ತರಿಸಿ, ಸಿಂಡಿಕೇಟ್ ಮೀಟಿಂಗ್ ಅನ್ನು ನೀವು postpone ಮಾಡಿ ಎಂದು ಹೇಳುವುದು ಅಧ್ಯಕ್ಷರೆ, ಇಲ್ಲೇ ನಾವು ಈ 1/5, ಮನೆಯ 23 ಅಂದರೆ ಸದಸ್ಯರು ಇದ್ದರೆ ಇಡೀ ಅಸೆಂಬ್ಲಿ ನಡೆಯುತ್ತದೆ ಅಲ್ಲಿ 14 ಸದಸ್ಯರು ಪೈಕಿ 7 ಸದಸ್ಯರು present ಇದ್ದರೆ, ಕೋರಂ ಇದ್ದರೆ, ಮೀಟಿಂಗ್ ಕರೆಯಬಾರದೆಂಬ ಯಾವ ಕಾನೂನು ಇದೆ? 7 ಸದಸ್ಯರು ಇದ್ದರೂ, ನೀವು ಮೀಟಿಂಗ್ ಮಾಡಬೇಡಿ, postpone ಮಾಡಿ' ಎಂದು ನೀವು ಪತ್ರ ಬರೆಯುತ್ತೀರಿ ಅಂದರೆ, ನಿಮಗೆ ಅನುಕೂಲವಾಗುವ ರೀತಿಯಲ್ಲಿ ಮೀಟಿಂಗ್ ನಡೆಸುವುದು ಮತ್ತು ನಿಮಗೆ ಅನಾನುಕೂಲವಾದಾಗ ಬೇಡವೆಂದು ಹೇಳುವುದಿದೆಯಲ್ಲ, ಸರ್ಕಾರದಿಂದ ಈ ರೀತಿಯಾಗಿ ಅಲ್ಲಿಗೆ directions ಹೋದರೆ, ನಾವು ವಿಶ್ವವಿದ್ಯಾನಿಲಯಗಳಿಗೆ ಸ್ವಾತಂತ್ರ್ಯ

ಇದೆಯೆಂದು ತಿಳಿದುಕೊಳ್ಳೋಣವೇ? ಅಥವಾ ಇವತ್ತು ವಿಶ್ವವಿದ್ಯಾನಿಲಯಗಕ್ಕೆ ವಿಶೇಷವಾದ ಕಾನೂನಿನಲ್ಲಿ ಏನು privileges ಕೊಟ್ಟಿದ್ದೇರಿ, ಅದು ಇದೆಯೆಂದು ತಿಳಿದುಕೊಳ್ಳೋಣವೆ? ಇದೇ ರೀತಿಯಾಗಿ Ex-Vice Chancellor ಮೇಲೆ ನೀವು ಮಾಡುತ್ತಿದ್ದೀರಿ ಇದೇ ರೀತಿಯಾಗಿ ಎಲ್ಲಿ roster violate ಮಾಡಿದ್ದಾರೆ, ಅಲ್ಲಿ ನೀವು ಏನು ಮಾಡಿದ್ದೀರಿ? ಇದೇ ರೀತಿಯಾಗಿ ಎಲ್ಲೆಲ್ಲಿ ತಮಗೆ ಬೇಕಾದಂತಹ, ತಮಗೆ ಅನುಕೂಲವಿರತಕ್ಕಂಥ ಜನರನ್ನು appointment ಮಾಡಿಕೊಂಡಂತಹ ಎಷ್ಟೋ ಜನರಿದ್ದಾರೆ, ಅವರ ಬಗ್ಗೆ ಯಾವುದೇ ಕ್ರಮವಿಲ್ಲ ಪಾಪ, 3 ವರ್ಷಗಳಿಂದ ಸತತವಾಗಿ ಒಬ್ಬ ಮಹಿಳೆಗೆ ಕಿರುಕುಳ ನೀಡುತ್ತಿದ್ದಾರೆ ಹಾಗಾದರೆ, ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದು ಏಕೆ? ಡಿ ಎಂ ನಂಜುಂಡಪ್ಪನವರ ವರದಿ ಪ್ರಕಾರ ಹಿಂದುಳಿದ ಭಾಗವಾದ ಬಿಜಾಪುರದಲ್ಲೂ ಒಂದು ಮಹಿಳಾ ವಿಶ್ವವಿದ್ಯಾನಲಯ ಸ್ಥಾಪನೆಯಾಗಬೇಕು ಅದೇ ರೀತಿ ಬೀದರ್‌ನಲ್ಲೂ ಕೂಡ ಒಂದು ಪಶು ಸಂಗೋಪನಾ ವಿಶ್ವವಿದ್ಯಾನಲಯು ಸ್ಥಾಪನೆ ಯಾಗಬೇಕೆಂಬ ಉದ್ದೇಶದಿಂದ ಅಂದಿನ ಕಾಲದಲ್ಲಿ ಈ ಕೆಲಸವನ್ನು ಮಾಡಿದ್ದು,ಅಂದರೆ, ಈ regional imbalance ಅಲ್ಲಿ ಸರಿಪಡಿಸುವ ದೃಷ್ಟಿಯಿಂದ ಮಾಡಿದ್ದರೆ, ಅಲ್ಲಿ 'ಓಹ್, ಬಿಜಾಪುರದಲ್ಲಿ ಅಲ್ಲಿ Safe ಇಲ್ಲ ಅಲ್ಲಿರುವ ಎಲ್ಲರೂ ಸರಿಯಾಗಿ ಕೆಲಸ ಮಾಡುವುದಿಲ್ಲ' ಎಂಬ ಭಾವನೆ ಬರತಕ್ಕಂಥ ರೀತಿಯಲ್ಲಿ ಇವತ್ತು ವರ್ತಿಸಿದರೆ ಮತ್ತು ಮೈನಾರಿಟಿ ಹೆಣ್ಣು ಮಕ್ಕಳೆಲ್ಲರೂ inefficient,, ಅವರಿಗೆ ಯಾವುದೇ ಕರ್ತವ್ಯ ನಿಷ್ಠೆ ಇಲ್ಲ, ಬದ್ಧತೆ ಇಲ್ಲ ಎನ್ನುವುದನ್ನು ತೋರಿಸಿಕೊಡುವುದಕ್ಕೋಸ್ಕರ ಇವತ್ತು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ನವರು ಅಲ್ಲಿಗೆ ಹೋಗಿ ಗಲಾಟೆ ಮಾಡಬೇಕೆ? ಪೋಲೀಸರು ಏನು ಮಾಡುತ್ತಿದ್ದರು? ಇಷ್ಟು ಗಲಾಟೆ ನಡೆದಾಗ ಅಲ್ಲಿ S P ಯವರು ಏನು ಮಾಡುತ್ತಿದ್ದರು? DYSP ಯವರು ಏನು ಮಾಡುತ್ತಿದ್ದರು? Inspector ಏನು ಮಾಡುತ್ತಿದ್ದರು? ಇದೆಲ್ಲವೂ ಕೂಡ ಗೊತ್ತಿದೆ ಅವರು ಗಂಟೆಗಟ್ಟಳೆ ಕೂಗುಹಾಕಿ ಇದು ನಿಜವಾಗಿಯೂ ಮೈನಾರಿಟಿಗೆ, ವಿಶೇಷವಾಗಿ ಮಹಿಳೆಯರನ್ನು depress ಮಾಡುವಂತಹ suppress ಮಾಡುವಂತಹ ಪ್ರಯತ್ನಗಳು ನಡೆದಿವೆ ಏಕೆಂದರೆ, ಇನ್ನು ಮುಂದೆ ಯಾವ ಮಹಿಳೆಯೂ ಕೂಡ ಇಂತಹ ಹುದ್ದೆಗಳನ್ನು ಒಪ್ಪಿಕೊಳ್ಳಬಾರದು ಮುಸ್ಲಿಂ ಮಹಿಳೆಯಾಗಲಿ, ದಲಿತ ಮಹಿಳೆಯಾಗಲಿ ಒಪ್ಪಿಕೊಳ್ಳಬಾರದು ಅಥವಾ ಬೇರೆ ಮಹಿಳೆಯರು ಅಲ್ಲಿಗೆ

ಹೋಗಬಾರದು ನಮಗೆ ಇದು ಬೇಡ ಅಲ್ಲಿಗೆ ಹೋದರೆ, ಈ ರೀತಿ ವರ್ತಿಸುತ್ತಾರೆ' ಎಂಬ ಭಾವನೆ ಬರಬೇಕು ಇದೊಂದೇ ಅಲ್ಲ ಇದೇ]Ãw ABVP ಯವರು ಬೆಂಗಳೂರಿನಲ್ಲಿ ಮಾಡಿದರು ಇವರು ತಪ್ಪು ಮಾಡಿದ್ದರೆ, ನೀವು ಕಾನೂನಿನ ಪ್ರಕಾರ ಶಿಕ್ಷೆ ಕೊಡಿ ರಾಜೀವ್‌ಗಾಂಧಿ ವಿಶ್ವ ವಿದ್ಯಾನಿಲಯದವರು ತಪ್ಪು ಮಾಡಿದ್ದರೆ, ಆ Vice Chancellor ಅವರಿಗೆ ಶಿಕ್ಷೆ ಕೊಡಿ ಆದರೆ, ನೀವ್ಯಾಕೆ ಕಾನೂನನ್ನು ಕೈಗೆ ತೆಗೆದು ಕೊಳ್ಳತಕ್ಕಂಥಾದ್ದು? ನೀವ್ಯಾರು ಅಲ್ಲಿ ನುಗ್ಗತಕ್ಕಂಥಾದ್ದು? ನೀವ್ಯಾರು ಅಲ್ಲಿ ಪೊಲೀಸ್ ಕೆಲಸ ಮಾಡತಕ್ಕಂಥಾದ್ದು? ಈ ರೀತಿಯಾಗಿ ಮಾಡಿ, ಇವತ್ತು ಇಡೀ ಕರ್ನಾಟಕ ರಾಜ್ಯಕ್ಕೆ ಕಳಂಕ ತಂದಿದ್ದಾರೆ ಒಬ್ಬ ಮಹಿಳೆ ಮೇಲೆ direct attack ಮಾಡಿದ್ದಾರೆ ಅವರೆಲ್ಲರ ಮೇಲೂ ಕೇಸ್ ಬುಕ್ ಮಾಡಬೇಕು ಅವರುಗಳನ್ನು ತಕ್ಷಣವೇ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಬೇಕು Vice Chancellor ಏನಿದ್ದಾರೆ, ಅವರು enquiry ಮಾಡಲಿ ಆ Enquiry ಮಾಡಿದ ರಿಪೋರ್ಟ್ ಸಹ ನನಗೆ ಕೊಟ್ಟಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ ಅದನ್ನು ಕೊಡುವಂತೆಯೂ ಇಲ್ಲ ಅದನ್ನು ಅವರ chamber ನಲ್ಲೇ ಇಟ್ಟುಕೊಂಡು ಕುಳಿತಿದ್ದಾರೆಂದು ಪತ್ರಿಕೆಗಳಲ್ಲೂ ವರದಿಯಾಗಿದೆ ಅದು ಒತ್ತಟ್ಟಿಗಿರಲಿ ಅದರ merit and demerit ಮೇಲೆ ನೀವು ಅವರನ್ನು ಶೂಲಕ್ಕೆ ಏರಿಸಿ ಆದರೆ, ನೀವೇ ಕಾನೂನನ್ನು ಕೈಗೆ ತೆಗೆದುಕೊಂಡು ಇವತ್ತಿನ ದಿವಸ ಮಹಿಳೆಯರ ಮೇಲೆ attack ಮಾಡುವಂಥಾದ್ದು, ಬೇಕೆಂತಲೇ ಸಿಂಡಿಕೇಟ್ ಆಫೀಸ್ ಗೆ ಹೋಗಿ ಎಲ್ಲಾ ರೆಕಾರ್ಡ್‌ಗಳನ್ನು ಚಿಂದಿ ಮಾಡುವಂತಹ, ಹರಿಯುವಂತಹ ಯಾವ ಹಕ್ಕು ಕೂಡ ಅವರಿಗೆ ಇಲ್ಲ ನಾನು ಸ್ಪಷ್ಟವಾಗಿ ಹೇಳಬೇಕಾಗಿರುವುದೇನೆಂದರೆ, ಅವರಿಗೆ ಈ ಶಕ್ತಿ ಬಂದದ್ದು, ಪ್ರಚೋದನೆ ಮಾಡಿದ್ದು ಸರ್ಕಾರದಲ್ಲಿರುವ ಮಂತ್ರಿಗಳೇ ಎಂದು ನಾನು ನೇರವಾಗಿ ಆಪಾದನೆ ಮಾಡಬೇಕಾಗಿದೆ ಏಕೆಂದರೆ, ಈ ಶಕ್ತಿ ಅವರಿಗೆ ಬರುತ್ತಿರಲಿಲ್ಲ ಯಾವ ವಿದ್ಯಾರ್ಥಿಗಳೂ ಕೂಡ ಇಷ್ಟೊಂದು ರೀತಿಯಲ್ಲಿ ಧೈರ್ಯ ತಂದುಕೊಂಡು ಅಲ್ಲಿಗೆ ಹೋಗಿ ಈ ಕೆಲಸ ಮಾಡುವುದಿಲ್ಲ ಅದಕ್ಕೋಸ್ಕರ, ಇವತ್ತು fascist Government ಇದೆಯೆಂಬ ಮಾತನ್ನು ನಾವು ಹೇಳಬೇಕಾಗಿದೆ ಇದು ಇವತ್ತು ಅವರ ಕೈಯಲ್ಲಿ ಸಿಕ್ಕಿದೆ ಅದಕ್ಕೆ ಅವರು ಆ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಲ್ಲೆಲ್ಲಿ weakeer section vice Chancellors ಇದ್ದಾರೋ, ಅವರುಗಳ ಮೇಲೆ ಒಂದು ಗೂಬೆ ಕೂರಿಸುವುದು, ಅವರನ್ನು ತೇಜೋವಧೆ

ಮಾಡುವುದು, ಈ ತರಹದ ಕೆಲಸ ಮಾಡುತ್ತಿದ್ದಾರೆ ಆದರೆ, ತಮಗೆ ಬೇಕಾದ, ತಾವು appointmentಮಾಡಿರುವ ಕಡೆಯಲ್ಲಿ ಮಾತ್ರ ಇದು ಇಲ್ಲ ಅವರು defend ಮಾಡಿಕೊಂಡು ಬಂದರು ಅದು ಮೈಸೂರಿನಲ್ಲಿರಬಹುದು ಇನ್ನೊಂದು ಕಡೆ ಇರಬಹುದು ಇದೆಲ್ಲವೂ ಸ್ಪಷ್ಟವಾಗಿ ಏನು ತೋರಿಸುತ್ತಿದೆ ಎಂದರೆ, ಈ ಸರ್ಕಾರ partial attitude ಇಟ್ಟುಕೊಂಡು ಇವತ್ತು act ಮಾಡುತ್ತಿದೆ ಇದು ನನ್ನ ನೇರವಾದ ಆಪಾಧನೆ ವಿದ್ಯಾರ್ಥಿಗಳಿಗೆ ಪ್ರಚೋದನೆ ಮಾಡಿ ವೈಸ್ ಚಾನ್ಸಲರ್ ರವರಿಗೆ destabilize ಮಾಡತಕ್ಕದ್ದು, ಕೆಟ್ಟ ವಾತಾವರಣವನ್ನು ಸೃಷ್ಟಿ ಮಾಡತಕ್ಕದ್ದು, ವಿಶೇಷವಾಗಿ ಈ weaker sectionನ್ನು ಇವರು capable ಇಲ್ಲ ಇವರು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಾಗಿ ಮಾಡುವುದಿಲ್ಲ "ಎಂಬ impressionನ್ನು ಕೊಟ್ಟು ಮುಂದೆ ಯಾವುದೇ post ಈ ರೀತಿಯದ್ದು ಬಂದರೆ ಅವರಿಗೆ ದಕ್ಕಲಾರದ ರೀತಿಯಲ್ಲಿ ಮಾಡುವ ಹುನ್ನಾರ, ಕುತಂತ್ರ ಇವತ್ತು ನಡೆದಿದೆ ವಿದ್ಯಾರ್ಥಿಗಳ ಮೇಲೆ ಏನ್ನು ಕ್ರಮ ತೆಗೆದುಕೊಳ್ಳುತ್ತೀರಿ? ವಿಶೇಷವಾಗಿ ಯಾರು ಇವತ್ತಿನ ದಿವಸ ಅಲ್ಲಿನ ರೆಕಾರ್ಡ್ಸ್‌ನ್ನು ಹರಿದಿದ್ದಾರೆ ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು ಯಾರು ಪ್ರಷೋದನೆ ಮಾಡಿ ಟೀ ಕುಡಿಸಿ ಕರೆದುಕೊಂಡು ಹೋಗಿ ಅಲ್ಲಿ ಗಲಾಟೆ ಮಾಡಲು ವರ್ಷಾನುಗಟ್ಟಲೆ ಪ್ರಯತ್ನ ಮಾಡುತ್ತಿದ್ದಾರೆ ಅದನ್ನೂ ಕೂಡ ಇಲ್ಲಿ ಹೇಳಬೇಕು ಈ ರೀತಿಯಲ್ಲಿ ದಂಗೆ ಏಳುತ್ತಾರೆ ಎಂಬ ಮಾತನ್ನು ನಾನು ಹೇಳುತ್ತೇನೆ ಇವತ್ತು ಎ ಬಿ ವಿ ಪಿ ಗೆ ದಂಗೆ ಮಾಡಲು ನೀವು ಮುಂದೆ ಬಿಟ್ಟರೆ ಮುಂದೆ ಬೇರೆ ಜನರು ಸಹ ಇದನ್ನು ಸಹಿಸುವುದಿಲ್ಲ ಆದಕ್ಕೆ ಪ್ರತೀಕಾರ ಮಾಡುತ್ತಾರೆ, ಅದರ ಫಲವನ್ನು ನೀವು ಅನುಭವಿಸ ಬೇಕಾಗುತ್ತದೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿ ತಮ್ಮಿಂದ ಉತ್ತರವನ್ನು ಬಯಸುತ್ತೇನೆ

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು ನೀವು ಈಗ ಪಾರ್ಲಿಮೆಂಟರಿ Secretary ಅಲ್ಲವೇ?- How can you participate? You can't participate

ಶ್ರೀ ಆರ್ ರೋಷನ್ ಬೇಗ್ ಇದನ್ನು ಶಿಕ್ಷಣ ಸಚಿವರು ಡಿಫೆಂಡ್

ಮಾಡಬೇಕು ನೀವಲ್ಲ ಅದು ನಿಮ್ಮ ಪ್ರಚೋದನೆಯಿಂದಲೇ ಆಗಿದೆ

(ಗೊಂದಲ)

ಅಧ್ಯಕ್ಷರು ಹೆಗಡೆಯವರೆ ನೀವು ಪಾರ್ಲಿಮೆಂಟರಿ Secretary ಆದ್ದರಿಂದ ಕುಳಿತುಕೊಳ್ಳಿ ಆಯಿತು, ಗಲಾಟೆ ಮಾಡುವುದು ಬೇಡಿ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಕರೆದುಕೊಂಡು ಹೋಗಿ ಟೀ ಕುಡಿಸಿ ಗಲಾಟೆ ಮಾಡಿಸುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ರಾಜಕೀಯ ಮಾಡುವವರು ನೀವು ಟಿ`ವಿ ಯಲ್ಲಿ ಬಂದಿದ್ದನ್ನು ನೋಡಿದ್ದೀರಾ?

(ಗೊಂದಲ)

ಅಧ್ಯಕ್ಷರು ಸರ್ಕಾರ ಉತ್ತರ ಕೊಡುವಾಗ ಅವಕಾಶ ಕೊಡುತ್ತೇನೆ

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ ನನಗೂ ಮಾತನಾಡಲೂ ಅವಕಾಶ ಕೊಡಿ

ಶ್ರೀ ಎನ್ ದರ್ಮಸಿಂಗ್ ನಮಗೆ ಮಾತನಾಡಲೂ ಯಾವ ಹಕ್ಕು ಇದೆ? ನಾವು ಸದನ ಪ್ರಾರಂಭವಾಗುವ ಒಂದು ಗಂಟೆ ಮೊದಲೇ ಶೂನ್ಯ ವೇಳೆಯಲ್ಲಿ ಎಂದು ಕೊಟ್ಟಿದ್ದೇವೆ ಇವತ್ತು ಯಾವ ವಿಷಯವನ್ನು ಹೇಳುತ್ತೇವೆ ಅದಕ್ಕೆ ಸಂಬಂದಪಟ್ಟ ಸಚಿವರು ಹಾಜರಿರಬೇಕು ಅವರು ಹಾಜರು ಇರಲಿಲ್ಲವೆಂದರೆ ನಾವು ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಉತ್ತರ ಕೊಡತಕ್ಕವರು ಯಾರು? This is not debatable Immediately, you have to call

ಅಧ್ಯಕ್ಷರು ಅವರು ಆ ಮನೆಯಲ್ಲಿ ಇದ್ದಾರೆ

ಶ್ರೀ ಬಿ ಎಸ್ ಯಡಿಯೂರಪ್ಪ ಸಭಾನಾಯಕರಾಗಿ ಕಾರ್ಯಕಲಾಪವನ್ನು ನಡೆಸುತ್ತಿದ್ದಾರೆ

ಶ್ರೀ ಎನ್ ಧರ್ಮಸಿಂಗ್ ಅವರು ಬಂದು ಹೋಗಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ ತಾವು ಒಂದು ನಿಮಿಷ ಕುಳಿತುಕೊಳ್ಳಿ ನಾನು ನಿಮಗೆ ಉತ್ತರ ಕೊಡುತ್ತೇನೆ ನೀವು ಜವಾಬ್ದಾರಿ ಸ್ಥಾನದಲ್ಲಿದ್ದು ಹಾಗೆಲ್ಲಾ ಮಾತನಾಡಬಾರದು ಅವರೇನು ಓಡಿ ಹೋಗಿದ್ದಾರೆಯೇ? ಆ ಮನೆಯಲ್ಲಿ ಇದ್ದಾರೆ ಕರೆಸಿ ನಿಮಗೆ ಉತ್ತರ ಕೊಡಿಸುತ್ತೇವೆ

ಶ್ರೀ ಎನ್ ಧರ್ಮಸಿಂಗ್ ಅಲ್ಲಿದ್ದರೆ ನಾಡಿದ್ದು ಉತ್ತರ ಕೊಡಿಸಿ ಸೋಮವಾರ ದಿವಸ ಬಂದು ಕೊಡಲಿ

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಒಂದು ವಿನಂತಿಯನು ಮಾಡುತ್ತೇನೆ ಅಲ್ಲಿ ಅವರು ಸಭಾನಾಯಕರು ಎಂದು ವಿರೋದ ಪಕ್ಷದ ನಾಯಕರಿಗೆ ಗೊತ್ತಿದೆ ಅಲ್ಲಿನ ಕಾರ್ಯಕಲಾಪದಲ್ಲಿ ಅವರು ಇಲ್ಲದೇ ಬೇರೆ ಕಡೆ ಇದ್ದಾರೆಂದರೆ ಅವರು ಆರೋಪ ಮಾಡಲಿ ಶೂನ್ಯ ವೇಳೆಯ್ಲಲಿ ಇವರು ಪ್ರಸ್ತಾಪ ಮಾಡಿದ್ದರೆ ಅದೇನು ವಿವರ ಇದೆ ಕೊಡಲಿ ಅವರೇ ಬಂದು ಉತ್ತರ ಕೊಡಬೇಕೋ, ಸರ್ಕಾರದಿಂದ ಯಾರು ಉತ್ತರ ಕೊಡಬೇಕೋ ಅದನ್ನು ಸಮರ್ಥವಾಗಿ ಕೊಡುತ್ತೇವೆ ನಾವು ಅವರ ಹೇಳಿಕೆಯನ್ನು ಕೇಳಲು ಸಿದ್ಧರಾಗಿದ್ದೇವೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಈಗಲೇ ಆಗಬೇಕು, ಎಲ್ಲಿ ಹೋಗಿದ್ದಾರೆ, ಕರೆಸಿ ಎಂದು ಹೇಗೆ ಬೇಕೋ ಹಾಗೆ ? ಸರ್ಕಾರದ ನಮ್ಮದೂ ಜವಾಬ್ದಾರಿ ಇದೆ ನಾವೂ ಅದಕ್ಕೆ ಸಮರ್ಪಕವಾದ ಉತ್ತರ ಕೊಡುತ್ತೇವೆ ಆದರೆ ನೀವು ಆ ರೀತಿ ಆರೋಪ ಮಾಡುವುದು ಸರಿಯಲ್ಲ ಆ ಮನೆಯಲ್ಲಿ ಅವರು ಇಲ್ಲದಿದ್ದರೆ ನೀವು ಹೇಳಿ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಸಭಾನಾಯಕರು ಇಲ್ಲೇ ಇರಬೇಕೆದರೂ ಹೇಳಲಿ ಉತ್ತರ ಕೊಡಲು ನಾವು ತಯಾರಿದ್ದೇವೆ

(ಗೊಂದಲ)

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ ನಾನು ನನ್ನ

ಶ್ರೀ ಸಿದ್ದರಾಮಯ್ಯ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಅವರು ಉತ್ತರ ಕೊಡಬಹುದೇ? ಅವರು ಮಾತನಾಡಲು ನೋಟೀಸ್ ಕೊಟ್ಟಿದ್ದಾರೆಯೇ?

ಶ್ರೀ ಬಿ ಎಸ್ ಯಡಿಯೂರಪ್ಪ ಅವರು ಈ ಮನೆಯ ಸದಸ್ಯರು

ಶ್ರೀ ಸಿದ್ದರಾಮಯ್ಯ ಅವರಿಗೆ ಅಧಿಕಾರ ಇಲ್ಲವೆಂದು ನಾವು ಹೇಳುವುದಿಲ್ಲ ನೋಟೀಸ್ ಕೊಟ್ಟು ಮಾತನಾಡಲಿ ಹಾಗಾದರೆ ಯಾರು ಬೇಕಾದರೂ ಮಾತನಾಡಬಹುದೇ?

(ಗೊಂದಲ)

ಅಧ್ಯಕ್ಷರು ಈ ರೀತಿ ಗಲಾಟೆ ಮಾಡಿಕೊಂಡು ಹೋಗುತ್ತೀರೋ ಅಥವಾ ಅದರ ಬಗ್ಗೆ ಚರ್ಚೆ ಆಗಬೇಕೋ?

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಉತ್ತರ ಕೊಡುತ್ತೇನೆ

ಶ್ರೀ ಸಿದ್ದರಾಮಯ್ಯ ಎಲ್ಲರೂ ದಯಮಾಡಿ ಕುಳಿತುಕೊಳ್ಳಿ, ಶೂನ್ಯ ವೇಳೆಯಲ್ಲ ವಿರೋದ ಪಕ್ಷದ ನಾಯಕರು ಮತ್ತು ಖರ್ಗೆಯವರು ಮಾತನಾಡಿದ್ದಾರೆ ಅವರೂ ಸಹ ನೋಟೀಸ್ ಕೊಟ್ಟಿದ್ದಾರೆ ಅವರಲ್ಲೂ ಒಬ್ಬರು ಇಲ್ಲವೇ ಇಬ್ಬರಿಗೆ ನಾನು ಅವಕಾಶ ಕೊಡಬೇಕಾಗುತ್ತದೆ ಅವರು ಮಧ್ಯದಲ್ಲಿ ಏನೋ ಹೇಳಲು ಮುಂದಾದರು, ಆಗ ನಾನು ನೀವು

ಪಾರ್ಲಿಮೆಂಟರಿ Secretary ಆಗಿದ್ದೀರಿ, ಆದ್ದರಿಂದ ಸಚಿವರು ಉತ್ತರ ಹೇಳಿದ ಮೇಲೆ ಈ ವಿಚಾರದಲ್ಲಿ ಇನ್ನೂ ಏನಾದರೂ ಹೇಳುವುದಾಗಿದ್ದರೆ ಅನಂತರ ನೀವು ಮಾತನಾಡಿ ಎಂದು ನಾನೇ ಅವರಿಗೆ ಹೇಳಿದ್ದೇನೆ ಆದ್ದರಿಂದ ಇದರ ಬಗ್ಗೆ ಮತ್ತೆ ಗಲಾಟೆ ಮಾಡುವ ಅಗತ್ಯವಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಪ್ರತಿಪಕ್ಷದ ನಾಯಕರಾಗಿ ಯಾವುದೇ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವರಿಗೆ ಅವಕಾಶವಿದೆ ಅಥವಾ ಅದು ಬಹಳ ಮಹತ್ವವಾದ ವಿಚಾರವೆಂದು ನಿಮಗೆ ಅನ್ನಿಸಿ ಉಳಿದವರಿಗೂ ಮಾತನಾಡಲು ತಾವು ಅವಕಾಶ ಕೊಟ್ಟರೆ ಅವರು ಮಾತನಾಡುತ್ತಾರೆ ಅದೇ ರೀತಿ ಈ ಕಡೆ ಇರುವ ಗೌರವಾನ್ವಿತ ಸದಸ್ಯರ ಮಾತನಾಡುವ ಹಕ್ಕನ್ನು ನೀವು ಕಿತ್ತುಕೊಳ್ಳಲು ಆಗುವುದಿಲ್ಲ ಶಿಕ್ಷಣ ಸಚಿವರೇ ಉತ್ತರ ಕೊಡಬೇಕೆಂದರೆ ನೀವು ಸಮಯವನ್ನು ನಿಗದಿ ಮಾಡಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರೆ ಅವರು ಬಂದು ಉತ್ತರ ಕೊಡುತ್ತಾರೆ ಅದರೆ ಈ ರೀತಿ ಯಾರೂ ಮಾತನಾಡಬಾರದು ಎಂದು ಬಾಯಿ ಮುಚ್ಚಿಸುವುದು ಸರಿಯಲ್ಲ ಇದನ್ನು ನಾನು ಒಪ್ಪುವುದಿಲ್ಲ

ಶ್ರೀ ಸಿದ್ದರಾಮಯ್ಯ ಯಾರೂ ಅವರ ಬಾಯಿಯನ್ನು ಮುಚ್ಚುತ್ತಿಲ್ಲ

ಶ್ರೀ ಎನ್ ಧರ್ಮಸಿಂಗ್ ನಿಯಮದ ಪ್ರಕಾರ ಬಿಜಾಪುರದಲ್ಲಿ ಆದಂಥ ವಿಶ್ವವಿದ್ಯಾನಿಲಯದ ಘಟನೆಯ ಬಗ್ಗೆ ಶೂನ್ಯ ವೇಳೆಯಲ್ಲಿ ನಾವು ಪ್ರಸ್ತಪ ಮಾಡಿದ್ದೇವೆ ಖರ್ಗೆಯವರು ಕೂಡ ಬರೆದು ಕಳುಹಿಸಿದ್ದಾರೆ, ಅವರೂ ಕೂಡ ಪ್ರಸ್ತಾಪ ಮಾಡಿದ್ದಾರೆ ಇವತ್ತು ಶೂನ್ಯ ವೇಳೆಯಲ್ಲೇನು ಪ್ರಸ್ತಾಪ ಮಾಡಿದ್ದೇವೆ ಅದಕ್ಕೆ ಉನ್ನತ ಶಕ್ಷಣ ಸಚಿವರು ಬರಬೇಕು, ಅವರೇ ಸೂಕ್ತವಾದ ವ್ಯಕ್ತಿ ನೀವು ಸೋಮವಾರ ಉತ್ತರ ಕೊಡಿ ಯಾರು ಶೂನ್ಯ ವೇಳೆಯಲ್ಲಿ ಕೇಳಿದ್ದಾರೆ ಅವರಿಗೆ ಉತ್ತರ ಕೊಡಲು ಅವಕಾಶ ಇದೆ ಯಡಿಯೂರಪ್ಪನವರು ಆ ಕಡೆ ಸಹ ಮಾತನಾಡುತ್ತಾರೆಂದು ಹೇಳಿದ್ದಾರೆ ನಿಮಗೆ permissionsಇದ್ದರೆ ಮಾತನಾಡಿಸಿ

ಶ್ರೀ ಜೆ ಸಿ ಮಾಧುಸ್ವಾಮಿ ಅಧ್ಯಕ್ಷರೆ, ಈ ಘಟನೆಯ ಬಗ್ಗೆ ಮಾಧ್ಯಮಗಳ ಮೂಲಕ ನೋಡಿ ನಮಗೂ ಬಹಳ ಬೇಸರವಾಯಿತು ಇ ಬಿ ವಿ ಪಿ

ಚಳುವಳಿಯ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದವರಲ್ಲಿ ನಾನೂ ಒಬ್ಬ ಆದರೆ ಈ ಮಕ್ಕಳನ್ನು ರಾಜಕಾರಣಕ್ಕೆ ಇಷ್ಟೊಂದು ಬಳಕೆ ಏಕೆ ಮಾಡುತ್ತಿದ್ದಾರೆಂದು ನಮಗೆ ಅರ್ಥವಾಗಲಿಲ್ಲ ಅವರೂ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳು ವಿಶ್ವವಿದ್ಯನಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಕಾನೂನನ್ನು ಮೀರಿವರ್ತಿಸುವುದು ಸಿಂಡಿಕೇಟ್ ಸಭೆ ನಡೆಯುವ ಕಡೆ ನುಗ್ಗಿ ಗಲಾಟೆ ಮಾಡುವುದು ಇದೆಲ್ಲಾ ಹೋರಾಟದ ಭಾಗ ಎಂದು ಬಾವಿಸಿದ್ದರೆ ಸರ್ಕಾರ ನಡೆಸುವವರು ಇದನ್ನು ಕ್ರಮಪಡಿಸಲೇ ಬೇಕು ಒಬ್ಬ ವೈಸ್ ಚಾನ್ಸಲರ್ ಅದರಲ್ಲೂ lady ಒಂದು ಸಿಂಡಿಕೇಟ್ ಸಭೆ ಕರೆದಾಗ ಆ ಸಭೆಯನ್ನು ನಿಲ್ಲಿಸಿ ಎಂದು ನೀವು ಏಕೆ ಆದೇಶ ಕೊಟ್ಟಿರೋ ನಮಗೆ ಅರ್ಥವಾಗುತ್ತಿಲ್ಲ ಸರ್ಕಾರಕ್ಕೆ ಆ ಸಭೆ ನಿಲ್ಲಿಸಲು ಅಧಿಕಾರ ಇದೆಯೇ? ಇದ್ದರೆ ನಿಮ್ಮ ರಿಜಿಸ್ಟ್ರಾರ್ ಏಕೆ ಆ ಆದೇಶವನ್ನು ಕೊಡಲು ಹೋದರು? ನಿಮ್ಮ ರಿಜಿಸ್ಟ್ರಾರ್‌ರವರೇಕೆ ಈ ಹುಡುಗರೊಂದಿಗೆ ಸೇರಿಕೊಂಡು ಈ ಕುತಂತ್ರಗಳನ್ನೆಲ್ಲಾ ಮಾಡುತ್ತಿದ್ದಾರೆ? ಆ ರಿಜಿಸ್ಟ್ರಾರ್ ಸಭೆಯಿಂದ ಆಚೆ ಕುಳಿತುಕೊಂಡು ನಾನು advise ಮಾಡಿದರೂ ಅವರು ಸಭೆ ನಡೆಸುತ್ತಿದ್ದಾರೆಂದು ಏಕೆ ವ್ಯವಹಾರ ಮಾಡುತ್ತಿದ್ದಾರೆ? ಯಾರು ಸಿಂಡೆಕೇಟ್ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕಾಗಿತೋ ಅವರಿಗೆ ರಿಜಿಸ್ಟ್ರಾರ್ ಹೇಳುವಂಥ ಸ್ಥಿತಿ ಏಕೆ ನಿರ್ಮಾಣ ವಾಗಿದೆ ಎಂದು ಮೊದಲು ಹೇಳಬೇಕು ಸಿಂಡಿಕೇಟ್ ಸಭೆಯಲ್ಲಿ ಏನಾದರೂ ತಪ್ಪು ನಡೆದಿದ್ದರೆ, illegal ಆಗಿ ನಡೆದಿದ್ದರೆ ಘನತೆವೆತ್ತ ರಾಜ್ಯಪಾಲರು ಇದ್ದಾರೆ, ಅವರು ಆ ಸಭೆಯ ತೀರ್ಮಾನಗಳನ್ನು ತರಿಸಿಕೊಂಡು ನೋಡಬಹುದು, ರದ್ದು ಮಾಡಬಹುದು, ಪುಸ್ಕರಿಸಬಹುದು, ಸಂವಿಧಾನ ಅವರಿಗೆ ಆ ಹಕ್ಕನ್ನು ಕೊಟ್ಟಿದೆ ನೀವು ಪ್ರೊಟೆಸ್ಟ್ ಮಾಡುವ ಹಕ್ಕನು ಇಟ್ಟುಕೊಂಡಿದ್ದೀರಿ ಅದನ್ನು ಯಾರೂ ಬೇಡವೆಂದು ಹೇಳಲಿಲ್ಲ ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಎಲ್ಲರಿಗೂ ಪ್ರೊಟೆಸ್ಟ್ ಮಾಡುವ ಹಕ್ಕಿದೆ ಆದರೆ ಒಂದು ಸಭೆ ನಡೆಯುವ ಕಡೆ, ನಾಳೆ ಎಲ್ಲರೂ ಒಂದು ಗ್ರಾಮ ಪಂಚಾಯಿತಿ ಸಭೆ illegal ಆಗಿ ನಡೆಯುತ್ತಿದೆ, ವಿಧಾನಸಭೆ illegal ಆಗಿ ನಡೆಯುತ್ತಿದೆ, ನಾವೆಲ್ಲಾ ಬಂದು ಗಲಾಟೆ ಮಾಡಿದ್ದೇವೆ, we have rights, ನಾವು ನಮಗೆ 5 ನಿಮಿಷ time ಕೊಟ್ಟಿದ್ದೆವು, ನೀವು ಕೇಳಲಿಲ್ಲ, ಆದ್ದರಿಂದ ನಾವೇ ಇಲ್ಲೇ ಬಂದು ಕಾನೂನನ್ನು ಕೈಗೆ ತೆಗೆದುಕೊಂಡಿದ್ದೇವೆಂದು ಹೇಳಬಹುದು ಆ ರೀತಿಯಾದರೆ ಯಾವುದೇ ಸಂವಿಧಾನಾತ್ಮಕವಾದ ವ್ಯವಸ್ಥೆಗೆ ಅರ್ಥ ಉಳಿಯುವುದಿಲ್ಲ ಇದನ್ನು

ನಗ್ರಹಿಸಬೇಕಾಗುತ್ತದೆ ಆಕೆ ಒಬ್ಬರು lady ಎಂಬುದನ್ನು ಸಹ ನಾವು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ ಆಕೆ majority lady ನೋ majority ladyನೋ ಅದು ಆಮೇಲಿನ ವಿಚಾರ ಹೆಣ್ಣುಮಕ್ಕಳು ಗೌರವವಾದ ಸ್ಥಾನದಲ್ಲಿರುವ ಎಲ್ಲಾ ಕಡೆ ಈ ರೀತಿ ನಡೆಯುತ್ತಿದೆಯೋ ನಮಗೆ ಗೊತ್ತಿಲ್ಲ Open University ನಲ್ಲೂ ಹೀಗೇ ನಡೆಯುತ್ತದೆ ಬಿಜಾಪುರದಲ್ಲೂ ಹೀಗೇ ನಡೆಯುತ್ತಿದೆ ಮಲ್ಲಿಕಾರ್ಜುನ ಖರ್ಗೆಯವರು ಸೂಕ್ಷ್ಮವಾಗಿ ಹೇಳಿದರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏನು ನಡೆದಿದೆ? ಏಕೆ ವಿಚಾರಣೆಯನ್ನು ಮಾಡುತ್ತಿಲ್ಲ? ಎಷ್ಟು appointment ಮಾಡಿದ್ದಾರೆ? ಎಷ್ಟು illegal ಸಿಂಡಿಕೇಟ್ ಸಭೆಗಳನ್ನು ಮಾಡಿದ್ದಾರೆ ಅದರ ಬಗ್ಗೆಯೂ ತನಿಖೆ ಮಾಡಿಸಿ ಯಾರಿಗೋ ಅಡವಿಟ್ಟುಕೊಂಡಿರುವಂತೆ ಹೀಗೆ ಸರ್ಕಾರ ನಡೆಸುತ್ತಾ ಕುಳಿತುಕೊಂಡು ಬಿಟ್ಟರೆ ಹೇಗೆ? ಯಾರೋ ಹೆದರಿ ಕೊಳ್ಳುವವ ನನ್ನು ಹೆದರಿಸುವುದು, ಇನ್ನ್ಯಾರೋ ಹೆದರಿಸುವವರನ್ನು ಕಂಡರೆ ಹೆದರಿ ಕೊಂಡು ಜೀವನ ಮಾಡುವುದಕ್ಕೆ ಶುರು ಮಾಡಿದರೆ ಇದು ಸರ್ಕಾರ ವಾಗುವುದಿಲ್ಲ ಅಲ್ಲಿಂದಲೂ ಮಾಹಿತಿ ತರಿಸಿ ಎಷ್ಟು appointment ಅನ್ನು ಅಡ್ ಹಾಕ್ ಆಗಿ ಮಾಡಿದ್ದಾರೆ? ಅವರ turn ಯಾವತ್ತು ಮುಗಿಯುತ್ತದೆ ಎನ್ನುವುದು ಇಲ್ಲಿ ಚರ್ಚೆ ಅಗಬೇಕಲ್ಲವೇ? University ಗಳ ಮೇಲೆ ಈ ಸಭೆ ಚರ್ಚೆಯನ್ನೇ ಮಾಡಬೇಕೆಂದಿದ್ದಲ್ಲಿ, ಅದರ ಬಗ್ಗೆ ಸಮಗ್ರವಾಗಿ ಎಲ್ಲವೂ ಚರ್ಚೆಯಾಗಬೇಕು ಯಾವುದೋ appointment ಅನ್ನು approve ಮಾಡಿಸಬಾರದು ಎಂಬ ಉದ್ದೇಶದಿಂದ ಇಷ್ಟೆಲ್ಲಾ ಹುನ್ನಾರ ಮಾಡಿಕೊಂಡು, Vice Chancellor ಗಳು ನಡೆಸುವಂತಹ ಸಭೆಗಳಿಗೆ ಹೋಗಬಾರದು ಅಕಸ್ಮಾತ್ ಅದು illegal ಆಗಿದ್ದರೆ, quorum ಇಲ್ಲದಿದ್ದರೆ, ಕಾನೂನು ಇತ್ತು, ಮಾನ್ಯ ರಾಜ್ಯಪಾಲರು ಇದ್ದರು, Chancellor of the University ಇದ್ದರು, ಅವರಿಗೇನಾದರೂ ಮನವಿ ಮಾಡಿ, appeal ಮಾಡಿ, ಸರ್ಕಾರ ಇತ್ತು, ಅವರಿಗೆ ಹೇಳಿ ಏನು ಬೇಕಾದರೂ ಕ್ರಮ ಜರುಗಿಸಲಿಕ್ಕೆ ಪ್ರಯತ್ನ ಮಾಡುವುದನ್ನು ಬಿಟ್ಟು, ಮೇಲೆ ಬಿದ್ದು ನಡೆಯುವುದು ಒಂದು ಸಂಘಟನೆಯ ಮೂಲ ಧ್ಯೇಯವೆಂದು ಭಾವಿಸಿಕೊಂಡು ನಾವೇನಾದರೂ ಶಾಸನ ಸಭೆಯಲ್ಲಿ ಕುಳಿತುಕೊಂಡಿದ್ದರೆ, ಇದು ದೊಡ್ಡ ಅಪಚಾರವಾಗುತ್ತದೆ ಈ ಬಗ್ಗೆ ತನಿಖೆಯಾಗಬೇಕು ಇಂತಹ ಸ್ಥಾನಗಳಲ್ಲಿ ಇರುವವರಿಗೆ, ವಿಶೇಷವಾಗಿ ಆ ಹೆಣ್ಣು ಮಕ್ಕಳಿಗೆ ಅಥವಾ ಕೆಳಸ್ತರದಿಂದ ತಂದು ನಾವು ಜಾಗ ಕೊಟ್ಟವರಿಗೆ ರಕ್ಷಣೆ ನೀಡಬೇಕಾದಂತಹ

ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ ಅವರೇನಾದರೂ ತಪ್ಪು ಮಾಡಿದ್ದರೆ, ಕಾನೂನು ಬದ್ಧವಾಗಿ ಕ್ರಮ ತೆಗೆದುಕೊಳ್ಳಲಿ Manhandlıng ಮಾಡುವಂತಹ ಸ್ಥಿತಿಯನ್ನು ಮೊದಲು ತಾವು ಸಂಬಂದಪಟ್ಟವರ ಮೇಲೆ actıon ತೆಗೆದುಕೊಳ್ಳಬೇಕು ನಾನು ಈಗ ಒಂದು ಮಾತನ್ನು ಹೇಳುತ್ತಿದ್ದೇನೆ ಎಲ್ಲಾ Unıversıty ಗಳದ್ದೂ ಸಹ ಈಗ ತನಿಖೆ ಆಗಬೇಕಾಗುತ್ತದೆ ಸನ್ಮಾನ್ಯ ಪ್ರಕಾಶ್ ರವರೆ, ಮೈಸೂರು ಯೂನಿವರ್ಸಿಟಿಯಲ್ಲಿ ನಡೆದಿರುವಂತಹ ಪ್ರಮುಖವಾದ ಎಲ್ಲಾ appoıntment ಗಳೂ ಸಹ ಇಲ್ಲಿ ಚರ್ಚೆ ಯಾಗಬೇಕಾಗುತ್ತದೆ ನೀವೆ ಏನಾದರೂ ಕೇವಲ ಬಿಜಾಪುರ Unıversıty ಯಲ್ಲಿ appoıntment ಮಾಡಿರುವುದು ತಪ್ಪು, open Unıversıty ಯ್ಲಲಿ ಮಾಡಿರುವುದು ತಪ್ಪು ಎಂದು ಅಂದುಕೊಂಡಿದ್ದರೆ, ಅದು ಸರಿಯಲ್ಲ ಮೈಸೂರು ವಿಶ್ವವಿದ್ಯಾಲಯ ಈ ವರ್ಷದಲ್ಲಿ ಎಷ್ಟು appoıntment ಮಾಡಿದೆ? ಯಾರ್ಯ್ಯಾರಿಗೆ ಕೊಟ್ಟಿದೆ? ಯಾವ ಆಧಾರದ ಮೇಲೆ ಕೊಟ್ಟಿದೆ ಎಂಬುದನ್ನೂ ಸಹ ಸಭೆಯ ಮುಂದೆ ತನ್ನಿ, ಅದನ್ನು ನಾವು ಚರ್ಚೆ ಮಾಡೋಣ ABVP ಯವರು ಅಲ್ಲಿ ಮಾಡಿದ ಕೆಲಸವನ್ನು ನಾಳೆ ಮೈಸೂರಿನಲ್ಲಿ ಮಾಡುವಂತಹ ಸ್ಥಿತಿಯುನ್ನು ತಾವು ನಿರ್ಮಾಣ ಮಾಡಬಾರದು ಸರ್ಕಾರ ನಡೆಸುತ್ತಿದ್ದರೆ ಆ ವಿವರಗಳನ್ನೆಲ್ಲಾ ಇಲ್ಲಿಗೆ ತನ್ನಿ ಇಲ್ಲಿ ಕುಳಿತುಕೊಂಡು ನಾವು ಆ ಬಗ್ಗೆ charge ಮಾಡುತ್ತಿದ್ದೇವೆ ಹೆದರಿಕೊಳ್ಳುವವರನ್ನು ಹೆದರಿಸುತ್ತಿದ್ದೀರಿ, ಹೆದರಿಸುವವರಿಗೆ ಹೆದರಿಕೊಂಡು ಈ ಸರ್ಕಾರ ನಡೆಸಿಕೊಂಡು ನೀವು ಹೋಗುತ್ತಿದ್ದೀರಿ ಈ ಕ್ರಮವನ್ನು ತಾವು ನಿಲ್ಲಿಸಬೇಕುಸ

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಗೆ ಸಂಬಂಧ ಪಟ್ಟಂತೆ, ಚರ್ಚೆಗೆ ಅವಕಾಶವಿಲ್ಲ ಮಾನ್ಯ ಸದಸ್ಯರು ಹಿರಿಯರಿದ್ದೀರಿ ಈಗ ಈ ವಿಚಾರದಲ್ಲಿ ಶೂನ್ಯ ´ವೇಳೆಯಲ್ಲಿ ಸರ್ಕಾರದ ಗಮನವನ್ನು ಸೆಳೆಯಬೇಕು ಆಗ ತಾವು ಅನುಮತಿ ಕೊಟ್ಟರೆ, ಇಡೀ ಡೀಟೈಲ್ಸ್ ಅನ್ನು ಹೇಳುವಂತಹ ಸಂದರ್ಭವಾಗಬಹುದು, ಆಗ ಅದಕ್ಕೆ ಸರ್ಕರ ಉತ್ತರ ಕೊಡಬೇಕಾಗುತ್ತದೆ ಈ ರೀತಿ ಶೂನ್ಯ ವೇಳೆ ಬದಲಾಗಿ ತಾವು ಬೇರೆ ನಿಯಮಾವಳಿಗಳ ಅಡಿಯಲ್ಲಿ ಚರ್ಚಿಸಲು ನೋಟಿಸ್ ಕೊಡಿ ಆಗ ಇದೆಲ್ಲದರ ಬಗ್ಗೆ ಚರ್ಚೆಯಾಗಲಿ ಅದಕ್ಕೆ ಯಾರದೇನೂ ಆಕ್ಷೇಪಣೆ ಇರುವುದಿಲ್ಲ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿ, ತಾವು ಎಲ್ಲಾ ವಿವರಗಳನ್ನು ಹೇಳುವುದು

ಸರಿಯಾಗುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ - ನಾವು ನೋಟಿಸ್ ಕೊಟ್ಟಿರುವುದರಲ್ಲಿ ಎಲ್ಲವನ್ನೂ ಬರೆದಿದ್ದೇವೆ ದಯಮಾಡಿ ತಾವು ನಮ್ಮ ನೋಟಿಸ್ ಅನ್ನು ತರಿಸಿಕೊಂಡು ಓದಿ

(ಗೊಂದಲ)

ಅಧ್ಯಕ್ಷರು ದಯಮಾಡಿ ನಾನು ಹೇಳುವುದನ್ನು ಕೇಳಿ ನೋಟಿಸ್ ಕಳುಹಿಸಿದ ಎಲ್ಲರಿಗೂ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುವುದು ಸಾಧ್ಯವಾಗುವುದಿಲ್ಲ ಅವಕಾಶ ಕೊಟ್ಟರೆ, ಅದು full debate ಆಗುತ್ತದೆ ಅದಕ್ಕೆ ಈಗ ಅವಕಾಶವಿರುವುದಿಲ್ಲ ಆದ್ದರಿಂದ, ಇದರ ಬಗ್ಗೆ ಈಗ ಸರ್ಕಾರದವರು ಏನು ಉತ್ತರ ಹೇಳುತ್ತಾರೋ, ಕೇಳೋಣ ಇರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸಾರ್, ನಾವೂ ಸಹ ಅದಕ್ಕೆ ಸೈನ್ ಮಾಡಿದ್ದೇವೆ

ಅಧ್ಯಕ್ಷರು ತಾವೂ ಸೈನ್ ಮಾಡಿದ್ದೀರಿ ನಿಜ ಈಗಾಗಲೇ ಇದರ ಬಗ್ಗೆ ಮೂರು ಜನ ಮಾತನಾಡಿದ್ದಾರೆ ಮತ್ತೆ ಅವಕಾಶ ಕೊಟ್ಟರೆ, ಇದು full debate ಆದಂತಾಗುತ್ತದೆ ಆದುದರಿಂದ ಚರ್ಚೆಗೆ ಅವಕಾಶ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ

(ಗೊಂದಲ)

ಸಿಗ್ನೇಚರ್ ಮಾಡಿದವರೆಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಆಗುವುದಿಲ್ಲ ನಿಮ್ಮ ಪರವಾಗಿ ಮುಖಂಡರಾದ ಮಾನ್ಯ ಮಾಧು ಸ್ವಾಮಿಯವರು, ಮಾನ್ಯ ಖರ್ಗೆಯವರು ಮಾತನಾಡಿದ್ದಾರೆ ಈಗ ಸರ್ಕಾರದ ಉತ್ತರ ಏನೆಂದೂ ಕೇಳೋಣ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ – ಸಾರ್, ನಾವು ನಿಯಮಾವಳಿಗಳ ಪ್ರಕಾರ ಹೋಗಬೇಕಾಗುತ್ತದೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಅವರೇ ಒಪ್ಪಿಕೊಂಡ ನೀತಿಯನ್ನು ಅವರು ನಿರಾಕರಿಸಲು ಸಾಧ್ಯವಾಗುವುದಿಲ್ಲ

(ಗೊಂದಲ)

ಅಧ್ಯಕ್ಷರು ಎಲ್ಲರೂ ಸಿಗ್ನೇಚರ್ ಮಾಡಿ ಕೊಡುತ್ತೀರಿ ಸಿಗ್ನೇಚರ್ ಮಾಡಿ ಕೊಟ್ಟ ಎಲ್ಲರಿಗೂ ಸಹ ಕೊಡಬೇಕೆಂದೇನೂ ಇಲ್ಲ ನಾನು ಸಾಕಷ್ಟು ಕೇಳಿದ್ದೇನೆ ಎಲ್ಲಾ ವಿಚಾರಗಳನ್ನೂ ಸಾಕಷ್ಟು ಮಾಡಿದ್ದಾರೆ ಸರ್ಕಾರದ ಪರವಾಗಿ ಈಗ ಸಚಿವರು ಉತ್ತರ ಕೊಡುತ್ತಾರೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಇದು ಬಹಳ ಪ್ರಾಮುಖ್ಯವಾದುದು

(ಗೊಂದಲ)

ಅಧ್ಯಕ್ಷರು ನೀವು ಇಲ್ಲದ ವಿಚಾರಗಳನ್ನೇನೂ ಹೇಳುವುದಿಲ್ಲ ಅವರು ಹೇಳಿದ್ದನ್ನೇ ನೀವೂ ಸಹ ಹೇಳುತ್ತೀರಿ ಈಗ ಮಾನ್ಯ ಸಚಿವರು ಉತ್ತರ ಕೊಡಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಮೇಲ್ಮನೆಯ ಸಭಾ ನಾಯಕರಾಗಿರುವ ಕಾರಣದಿಂದಾಗಿ, ಅವರು ಅಲ್ಲಿದ್ದಾರೆ ಅವರಿಗೂ ಸಹ ಈ ವಿಷಯ ಪ್ರಸ್ತಾಪವಾದ ಬಗ್ಗೆ ತಿಳಿಸಿದ್ದೇನೆ ಇವತ್ತು ಸರ್ಕಾರದ ಗಮನವನ್ನು ನೀವು ಸೆಳೆದಿದ್ದೀರಿ ಇದಕ್ಕೆ ಸಮರ್ಪಕವಾದ

ಉತ್ತರವನ್ನು ಈ ದಿವಸ ಸಾಯಂಕಾಲ ಅಥವಾ ಸಾಧ್ಯವಾಗದಿದ್ದರೆ ಸೋಮವಾರದ ದಿವಸ ಸದನಕ್ಕೆ ನಾವು ಕೊಡುತ್ತೇವೆ

ಅಧ್ಯಕ್ಷರು ಆಯಿತು

(ಗೊಂದಲ)

ಆ) ವಿಷಯ ಎಳೆಯ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿರುವ ಕುರಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಇವತ್ತು ಒಂದು ಆತಂಕಕಾರಿ ವಿಚಾರವೊಂದನ್ನು ನಾನಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ ಉತ್ತರ ಪ್ರದೇಶದಲ್ಲಿ ಸಣ್ಣ ಮಕ್ಕಳನ್ನು ಲೈಂಗಿಕವಾಗಿ ಹೇಗೆ ದುರುಪಯೋಗ ಮಾಡಿಕೊಂಡಿದ್ದರೋ, ಆ ರೀತಿಯಲ್ಲಿ

ಅಧ್ಯಕ್ಷರು – ಉತ್ತರ ಪ್ರದೇಶದ ವಿಷಯ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ ತಾವು ಕೊಟ್ಟ ನೋಟಿಸ್‌ನಲ್ಲಿ ಅದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಬೇಕು ಯಾವ ರೀತಿಯಲ್ಲಿ ಉತ್ತರ ಪ್ರದೇಶದಲ್ಲಿ ಮಕ್ಕಳನ್ನು ಲೈಂಗಿಕವಾಗಿ ಹಿಂಸೆಗೆ ಗುರಿ ಮಾಡಿ ಉಪಯೋಗಿಸಿ ಕೊಂಡರೋ, ಆ ರೀತಿಯಾದಂತಹ ಘಟನೆ ಬೆಂಗಳೂರು ನಗರದಲ್ಲಿ ನಡೆಯುತ್ತಿದೆ ಎಂದು ನಾನು ಹೇಳಲಿಕ್ಕೆ ಹೊರಟಿದ್ದೆ ಉತ್ತರ ಪ್ರದೇಶದ ವಿಚಾರವನ್ನು ನಾನಿಲ್ಲಿ ಪ್ರಸ್ತಾಪ ಮಾಡುತ್ತಿಲ್ಲ

ಅಧ್ಯಕ್ಷರು – **ಆಯಿತು** ಮುಂದುವರೆಸಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಒಬ್ಬ ವ್ಯಕ್ತಿ ಉಚಿತವಾಗಿ ಶಿಕ್ಷಣ ಕೊಡುತ್ತೇವೆ, ವಸತಿ ಕೊಡುತ್ತೇವೆ ಎಂದು ಮಕ್ಕಳನ್ನೆಲ್ಲಾ ಅದರಲ್ಲೂ ಮುಖ್ಯವಾಗಿ ಹೆಣ್ಣುಮಕ್ಕಳನ್ನು ಸೇರಿಸಿಕೊಂಡು, ಅವರಿಗೆ ಸುಮಾರು ಒಂದು ವರ್ಷದಿಂದ

ಲೈಂಗಿಕವಾಗಿ ಕಿರುಕುಳ ಕೊಡುತ್ತಿರತಕ್ಕಂಥ ವಿಚಾರವನ್ನು ಪತ್ರಿಕೆಯಲ್ಲಿ ಓದಿ, ನನಗೆ ಆಘಾತವಾಯಿತು ಇದೇನು ಉತ್ತರ ಪ್ರದೇಶದಲ್ಲಿ ನಡೆದಂತೆ, ಇಲ್ಲೇನಾದರೂ ನಡೆಯಲಿಕ್ಕೆ ಪ್ರಾರಂಭವಾಗಿದೆಯೇ ಎಂದು ನನಗೆ ಆತಂಕ ಶುರುವಾಯಿತು ಒಂದು ವರ್ಷದಿಂದ ಈ ರೀತಿಯಾಗಿ ಅವ್ಯಾಹತವಾಗಿ ಹೆಣ್ಣುಮಕ್ಕಳನ್ನು ಉಚಿತ ವಿದ್ಯಾರ್ಥಿ ನಿಲಯ ಮತ್ತು ವಸತಿ ನಿಲಯವೆಂದು ಹೇಳಿ ಸೇರಿಸಿಕೊಂಡು, ಆ ಮಕ್ಕಳಿಗೆ ನಿರಂತರವಾಗಿ ಲೈಂಗಿಕ ಕಿರುಕುಳವನ್ನು ಕೊಡತಕ್ಕಂಥದ್ದು, ಲೈಂಗಿಕ ಕೆಲಸಗಳಿಗೆ ಉಪಯೋಗಿಸಿಕೊಂಡು, ಅವರಿಗೆ ಮಾನಸಿಕವಾಗಿ ಹಿಂಸೆ ಕೊಟ್ಟು, ಆ ಸಣ್ಣ ಮಕ್ಕಳ ಜೀವದ ಜೊತೆಗೆ ಚೆಲ್ಲಾಟ ಆಡುತ್ತಿದ್ದರೂ ಕೂಡ, ಇದು ಈ ಸರ್ಕಾರದ ಗಮನಕ್ಕೆ ಬರಲಿಲ್ಲವೇ? ಬಂದಿದ್ದರೆ ಈ ಸರ್ಕಾರ ಏನು ಮಾಡುತ್ತಿದೆ? ಈ ಸರ್ಕಾರ ಬದುಕಿದೆಯೋ? ಸತ್ತಿದೆಯೋ? ಇಂತಹ ಒಂದು ದುರಂತ ಅದರ ಗಮನಕ್ಕೆ ಬಂದಿಲ್ಲವೇ? 10–12 ವರ್ಷಕ್ಕಿಂತ ಕೆಳಗೆ ಇರುತಕ್ಕಂಥ ಸಣ್ಣ ಹೆಣ್ಣುಮಕ್ಕಳ ಮೇಲೆ, ಈ ರಾಜ್ಯದ ರಾಜಧಾನಿಯಲ್ಲಿ ಈ ರೀತಿಯಾಗಿ ನಡೆಯುತ್ತಿರುವುದು ಆಘಾತಕಾರಿಯಾದುದು ಬೇರೆ ಎಲ್ಲೋ 100–500 ಕಿ ಮೀ ದೂರದ ಹಳ್ಳಿಯೊಂದರಲ್ಲಿ ಈ ಘಟನೆ ನಡೆದಿಲ್ಲ ಈ ರಾಜಧಾನಿ ಪಕ್ಕದಲ್ಲಿ ನಡೆಯುತ್ತಿದೆ ಈ ಸರ್ಕಾರ ಏನು ಮಾಡುತ್ತಿದೆ? ಸರ್ಕಾರದ ಗಮನಕ್ಕೆ ಇದು ಬಂದಿದೆಯೇ? ಬಂದಿದ್ದರೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇಂತಹ ದುರಂತಗಳಿಗೆ ಅವಕಾಶ ಮಾಡಿಕೊಟ್ಟರೆ, ನಾಳೆ ದಿವಸ ಹೆಣ್ಣು ಮಕ್ಕಳ ಬದುಕಿನ ಗತಿಯೇನು? ನಾಳೆ ಅವರು ಶಾಲೆಗೆ ಹೋಗುತ್ತಾರೆಯೇ? ಓದುತ್ತಾರೆಯೇ? ಏನಾಗುತ್ತದೆ? ಎಂಬ ಬಗ್ಗೆ ಸರ್ಕಾರ ಉತ್ತರ ಕೊಡಬೇಕು

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ ಅದರ ಬಗ್ಗೆ ನಾನೊಂದು Statementಅನ್ನು ಸದನದಲ್ಲಿ ಮಾಡಲಿಚ್ಛಿಸುತ್ತೇನೆ ಶ್ರೀರಮೇಶ್ ಎಂಬುವವರು 2001ರಿಂದ ಬೆಂಗಳೂರು ನಗರದ ಬನ್ನೇರುಘಟ್ಟ ಹತ್ತಿರದ ಸಂಪಿಗೆ ಹಳ್ಳಿಯಲ್ಲಿ 'ಮಮತಾ ಮಕ್ಕಳ ಮನೆ' ಮತ್ತು ' ಜ್ಯೋತಿ ಮಕ್ಕಳ ಮನೆ" ಎಂಬ ಸಂಸ್ಥೆಯನ್ನು ಉಚಿತ ಶಿಕ್ಷಣದ ಹೆಸರಿನಲ್ಲಿ ಎರಡು ಬಾಡಿಗೆ ಮನೆಗಳಲ್ಲಿ ನಡೆಸುತ್ತಿದ್ದಾರೆ ಇಲ್ಲಿ ಒಟ್ಟು 70 ಮಕ್ಕಳು ಇದ್ದು, ಅದರಲ್ಲಿ 40 ಗಂಡು ಮಕ್ಕಳು ಮತ್ತು 30ಹೆಣ್ಣು ಮಕ್ಕಳು ಇದ್ದಾರೆ

ಇವರು ಸುಮಾರು 6-15ವರ್ಷ ವಯಸ್ಸಿನವರಾಗಿದ್ದು, ಇಬ್ಬರು ಮಾತ್ರ 18 ವರ್ಷ ವಯಸ್ಸಿನವರಾಗಿರುತ್ತಾರೆ ಶ್ರೀರಮೇಶ್ ಎಂಬುವವರು ಈ ಸಂಸ್ಥೆಯ ನಿರ್ದೇಶಕರಾಗಿದ್ದು, ಸುದ್ದಿ ಮಾಧ್ಯಮಗಳ ಮತ್ತು ಕರಪತ್ರಗಳ ಮೂಲಕ ದಾನಿಗಳಿಂದ ವಂತಿಗೆಯನ್ನು ಪಡೆದು ಈ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ ಇವರು ಬನ್ನೇರುಘಟ್ಟದಲ್ಲಿ ಒಂದು Guest House ಹೊಂದಿದ್ದು, ಅಲ್ಲಿಗೆ ಬಾಲಕಿಯರನ್ನು ಕರೆದುಕೊಂಡು ಹೋಗಿ ಅಸಭ್ಯವಾಗಿ ನಡೆದುಕೊಂಡಿರುವುದು ಕಂಡುಬರುತ್ತದೆ ಆದರೂ ಈ ಹೆಣ್ಣುಮಕ್ಕಳನ್ನು ವೈದ್ಯರ ಬಳಿಗೆ ಕಳುಹಿಸಿ ಪರೀಕ್ಷೆಗೆ ಒಳಪಡಿಸಲಾಗಿದೆ ಈ ಬಾಲಕಿಯರು ಅನಾಥರಾಗಿರದೆ ಪೋಷಕರನ್ನು ಹೊಂದಿದ್ದು, ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಿಗೆ ಸೇರಿದವರಾಗಿರುತ್ತಾರೆ ಲೈಂಗಿಕ ಕಿರುಕುಳದ ಬಗ್ಗೆ ಬಾಲಕಿಯರು ಅವರ ಪೋಷಕರಿಗೆ ತಿಳಿಸಿದ ಕಾರಣ, ಪೋಷಕರು ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆಯನ್ನು ದಾಖಲು ಮಾಡಿದ್ದರು ಈಗ ಆತನನ್ನು ಬಂದಿಸಿ ನ್ಯಾಯಾಂಗ ಕಸ್ಟಡಿಯಲ್ಲಿ ಇರಿಸಲಾಗಿದೆ ಬೆಂಗಳೂರು ನಗರ ಜಿಲ್ಲೆಯ ನಮ್ಮ ಇಲಾಖೆಯ ಉಪ ನಿರ್ದೇಶಕರು ಮತ್ತು ಇತರೆ ಇಲಾಖೆಗಳು ಈ ಸಂಸ್ಥೆಗಳಿಗೆ ಭೇಟಿ ನೀಡಿ ತನಿಖೆ ನಡೆಸುತ್ತಿದ್ದಾರೆ ಅಲ್ಲದೆ ಬಾಸ್ಕೋ ಮತ್ತು ಅಪ್ಸಾ ಎನ್ನುವಂತಹ ಸಂಸ್ಥೆಗಳವರು ಪೋಷಕರೊಡನೆ ಹೋಗಿ ಅಲ್ಲೇ ಇದ್ದಾರೆ ನಮ್ಮ ಇಲಾಖೆಯವರು ಮತ್ತು ಇವರೆಲ್ಲಾ ಸೇರಿ ಅವರಿಗೆ ಉಚಿತ ಶಿಕ್ಷಣ ಮತ್ತು ಊಟ ಕೊಡುವಂತಹ ವ್ಯವಸ್ಥೆಯನ್ನೂ ಕೂಡ ಮಾಡಲಾಗಿದೆ ಮಾನ್ಯ ಸಭಾಧ್ಯಕ್ಷರೆ, ಈ ಸಂಸ್ಥೆಯವರು ನಮ್ಮ ಇಲಾಖೆಯಿಂದಾಗಲಿ, ಸಮಾಜ ಕಲ್ಯಾಣ ಇಲಾಖೆಯಿಂದಾಗಲಿ ಅಥವಾ ಶಿಕ್ಷಣ ಇಲಾಖೆಯಿಂದಾಗಲಿ ಯಾವುದೇ ರೀತಿಯ ಒಪ್ಪಿಗೆಯನ್ನು ಪಡೆದಿಲ್ಲ ಅವರು ಆ ಪೋಷಕರಿಂದ, paid hostels ಎಂದೇನು ನಾವು ಹೇಳುತ್ತೇವೆಯೋ, ಆ ರೀತಿಯಲ್ಲಿ ಅವರಿಂದ ತಿಂಗಳಿಗೆ ಇಷ್ಟು ಎಂದು ಹಣವನ್ನು ಪಡೆದು ನಡೆಸುತ್ತಿದ್ದರು ಇದು ನಮ್ಮ ಗಮನಕ್ಕೆ ಬಂದ ತಕ್ಷಣವೇ ನಾನು ನನ್ನ ಇಲಾಖೆಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಮಾಹಿತಿಯನ್ನು ಸಂಗ್ರಹಿಸಿದ್ದೇನೆ ಆತ ಈಗಾಗಲೇ ಪೊಲೀಸ್ ಕಸ್ಟಡಿಯಲ್ಲಿದ್ದಾನೆ ನಾವು ಏನು ಮಾಡಬೇಕೋ, ಅದನ್ನೆಲ್ಲಾ ಸಮರ್ಪಕವಾಗಿ ಮಾಡುತ್ತೇವೆ ನಾನೂ ಕೂಡ ಅಲ್ಲಿಗೆ ಭೇಟಿ ಕೊಡುತ್ತೇನೆ ಅಲ್ಲಿ ಏನು ಮಾಡಬೇಕೋ ಅದಕ್ಕೆ ಸರಿಯಾದ ರೀತಿಯಲ್ಲಿ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಈ ಕೆಲಸ 2001 ರಿಂದಲೇ ಪ್ರಾರಂಭವಾಗಿದೆ ಎಂದು ಮಾನ್ಯ ಮಂತ್ರಿಗಳು ಒಂದು ಕಡೆಯಲ್ಲಿ ಹೇಳುತ್ತಿದ್ದಾರೆ ಅವರ ಮೇಲೆ ಅತ್ಯಾಚಾರ ನಡೆದಿದೆಯೇ? ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಲು ಅವರನ್ನು ಇನ್ನೂ ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸುತ್ತಿರುವಾಗ, ಅಲ್ಲಿ ಏನೂ ನಡೆದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಗೆ ಹೇಳುತ್ತಾರೆ? ಲೈಂಗಿಕ ಅತ್ಯಾಚಾರ ಅವರ ಮೇಲೆ ನಡೆದಿಲ್ಲವೆಂದು ಯಾವ ಆದಾರದ ಮೇಲೆ ನೀವು ಹೇಳುತ್ತಿದ್ದೀರಿ ಈ ಘಟನೆ ಇವತ್ತು ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿದೆ ಅದಕ್ಕೆ ಮೊದಲೇ ಇದು ನಿಮಗೆ ಗೊತ್ತಿತ್ತೋ ಇಲ್ಲವೋ ನನಗೆ ತಿಳಿದಿಲ್ಲ ಕಳೆದ ನಾಲ್ಕು ವರ್ಷ ಗಳಿಂದ ನಮ್ಮ ಇಲಾಖೆ ಏನು ಮಾಡುತ್ತಿತ್ತು? ಸರ್ಕಾರ ಏನು ಮಾಡುತ್ತಿತ್ತು? ಘಟನೆ ಸ್ಥಳಕ್ಕೆ ನೀವು ಹೋಗಿದ್ದೀರಾ? ತನಿಖೆ ಪೂರ್ತಿಯಾಗಿದೆಯೇ ಅವರನ್ನು ವೈದ್ಯಕೀಯ ಪರೀಕ್ಷೆಗೆ ಗುರಿಪಡಿಸಿದ್ದೀರಾ? ವೈದ್ಯಕೀಯ ಪರೀಕ್ಷೆಯಲ್ಲಿ ಅವರ ಮೇಲೆ ಯಾವುದೇ ರೀತಿಯಾದಂತಹ ಅತ್ಯಾಚಾರ ನಡೆದಿಲ್ಲವೆಂಬುದು ದೃಢಪಟ್ಟಿದೆಯೇ? ಯಾವ ಆಧಾರದ ಮೇಲೆ ಆಗಿಲ್ಲವೆಂದು ನೀವು ಹೇಳುತ್ತಿದ್ದೀರಿ? ಇಲ್ಲಿ ಕೊಟ್ಟಿರತಕ್ಕಂಥ ದೂರಿನ ಪ್ರಕಾರ ಲೈಂಗಿಕ ಅತ್ಯಾಚಾರ ನಡೆದಿದೆ ಒಂದು ವರ್ಷದಿಂದ ಮಾತ್ರವಲ್ಲ, ಅದು ಸತತವಾಗಿ ನಡೆಯುತ್ತಿದೆ ಎಂದು ಅವರು ಹೇಳುತ್ತಾರೆ ಆದರೆ ನೀವು ನಡೆದಿಲ್ಲವೆಂದು ಹೇಳುತ್ತಿದ್ದೀರಿ ನಡೆದಿಲ್ಲವೆಂದು ಹೇಳುವುದಕ್ಕೆ ನಮ್ಮ ಹತ್ತಿರ ಏನು ಆಧಾರವಿದೆ? ಏನೂ ದಾಖಲೆ ಇಟ್ಟುಕೊಳ್ಳದೆ

ಶ್ರೀ ಹೆಚ್ ಕೆ ಕುಮಾರ ಸ್ವಾಮಿ ಮಾನ್ಯ ಅಧ್ಯಕ್ಷರೆ, ಅವರು ಈಗ ಪತ್ರಿಕೆಗಳ ಆಧಾರದ ಮೇಲೆ ಹೇಳುತ್ತಿದ್ದಾರೆ ನಾನು ನನ್ನ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅದರ ಅಧಾರದ ಮೇಲೆ ಹೇಳುತ್ತಿದ್ದೇನೆ ನಾನು ಕೂಡ ಇವತ್ತು ಭೇಟಿ ಕೊಡುತ್ತೇನೆ, ಈಗ ನಾನು ಮೇಲ್ನೋಟಕ್ಕೆ ಹೇಳಿದ್ದೇನೆ, ವೈದ್ಯರ ಹತ್ತಿರ ಕಳುಹಿಸಿರುವುದರಿಂದ ವೈದ್ಯರ ಅಂತಿಮ ವರದಿ ಏನು ಬರುತ್ತದೆಯೋ ಅದರ ಅಧಾರದ ಮೇಲೆ ಏನು ನಡೆದಿದೆ ಎಂಬುದನ್ನು ತಮಗೆ ಹೇಳುತ್ತೇವೆ

ಅಧ್ಯಕ್ಷರು ಅದನ್ನು ಸೀರಿಯಸ್ ಆಗಿ ಮಾಡಿ

ಶ್ರೀ ಹೆಚ್ ಕೆ ಕುಮಾರ ಸ್ವಾಮಿ ಅಧ್ಯಕಷರೆ, ಸೀರಿಯಸ್ ಆಗಿ ಮಾಡುತ್ತೇವೆ, ನಾವು ಈಗಾಗಲೇ ಆತನ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ, ಸರ್ಕಾರ ಸುಮ್ಮನೆ ಕೈಕಟ್ಟಿಕೊಂಡು ಕುಳಿತಿಲ್ಲ

ವಿಷಯ ಕೋಲಾರ ಕಾರಾಗೃಹದಲ್ಲಿ ಹೊರ ಜಲ್ಲೆಗಳ ಬಂಧಿಗಳನ್ನು ವರ್ಗಾಯಿಸಿರುವುದರಿಂದ ಉಂಟಾಗಿರುವ ಸಮಸ್ಯೆ ಕುರಿತು

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ, ಕೋಲಾರ ಕಾರಾಗೃಹದಲ್ಲಿ ಅಧಿಕೃತವಾಗಿ 92 ಜನ ಬಂಧಿಗಳಿಗೆ ಮಾತ್ರ ಅವಕಾಶವಿದೆ ಅಲ್ಲಿ 231ಕ್ಕು ಹೆಚ್ಚು ಬಂಧಿಗಳಿದ್ದಾರೆ, ಅಲ್ಲಿ 4–5 ದಿವಸಗಳ ಹಿಂದೆ ಆ ಕಾರಾಗೃಗದಲ್ಲಿ ಬೆಂಗಳೂರಿನ ರೌಡಿಗಳನ್ನು ಅಲ್ಲಿ ಹಾಕಿ, ಅಲ್ಲಿನ ಬಂದಿಖಾನೆ ಸಿಬ್ಬಂದಿ ಅವರನ್ನು ಯಾವ ರೀತಿಯಾಗಿ ನಡಸಿಕೊಳ್ಳುತ್ತಿದ್ದಾರೆಂದರೆ, ಅವರಿಗೆ ಎರಡು ಮೊಬೈಲ್ ಘೋನಗಳ್‌ನ್ನು ಕೊಟ್ಟು ಮಾತನಾಡಿಸುವಂಥ ಪರಿಸ್ಥಿತಿಯನ್ನೂ ಇಟ್ಟುಕೊಂಡು, ಒಂದು ಕಾಲ್‌ಗೆ ರೂ 2 ಆದರೆ ರೂ 5 ಗಳನ್ನು ತೆಗೆದುಕೊಳ್ಳುವುದು, ರೊ 3 ಆದರೆ ರೂ10 ತೆಗೆದುಕೊಳ್ಳುವುದು, ಅವರಿಗೆ ಬಿರಿಯಾನಿ ಸೇರಿದಂತೆ, ಒಳ್ಳೊಳ್ಳೆ ಊಟವನ್ನು ಬೇರೆಡೆಯಿಂದ ತರಿಸಿಕೊಡುವುದರ ಮುಖಾಂತರ ಅಲ್ಲಿನ ಕಾರಾಗೃಹದ ಅಧಿಕಾರಿಗಳು ಶಾಮೀಲಾಗಿದ್ದಾರೆ ಈ ಬೆಂಗಳೂರಿನ ರೌಡಿಗಳು, ಅಲ್ಲಿ ಕೈ ಹಿಸುಕುವುದು, ಕಾಲು ಹಿಸುಕುವುದನ್ನು ಮಾಡಿ, 231 ಜನ ಬಂಧಿಗಳು ಅಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು, ಆ ಮೇಲೆ ಅವರನ್ನು ಇಲ್ಲಿಗೆ ಹಾಕಿದ್ದಾರೆ ಈಗಾಗಲೆ ಚಿಂತಾಮಣಿಯಲ್ಲಿ ಇನ್ನೊಂದು ಕಾರಾಗೃಹವನ್ನು ಕಟ್ಟದ್ದೀರಿ, ಅದು ಇದುವರೆವಿಗೂ ಆರಂಭವಾಗಿಲ್ಲ ಈಗ ಈ ಬೆಂಗಳೂರಿನಲ್ಲಿರುವ ಅನೇಕ ಅಪರಾಧಿಗಳನ್ನು ನಮ್ಮಂಥ ಜಿಲ್ಲಾಮಟ್ಟದ ಕಾರಾಗೃಹಕ್ಕೆ ಹಾಕಬೇಡಿ ಏಕೆಂದರೆ, ಈ ಬೆಂಗಳೂರಿನ ನಗರದಲ್ಲಿರುವ ರೌಡಿಸಂ ಆಗಿರಬಹುದು, ನಕ್ಸಲಿಸಂ ಆಗಬಹುದು, LTTESಹಿನ್ನಲೆ ಇರಬಹುದು ಇವ್ಯಾವುವು ಜಿಲ್ಲಾಮಟ್ಟದಲ್ಲಿ ಬಂದಿರುವುದಿಲ್ಲ ನೀವು ಈ ರೀತಿ ಅಲ್ಲಿಗೆ ಹಾಕುವುದರಿಂದ, ಅಲ್ಲಿಯು ಕೂಡ ಈ ಚಟುವಟಿಕೆಯನ್ನು ಉತ್ಪತ್ತಿ ಮಾಡಿದಂತಾಗುತ್ತದೆ ಅಲ್ಲಿಗೆ 92 ಜನ ಹಾಕಬೇಕೆಂದಿದ್ದರೆ 92 ಜನ ಬಂಧಿಗಳನ್ನೆ ಹಾಕಿ, ಬೇಕಾದರೆ ಬೇರೆ ಕಾರಾಗೃಹವನ್ನು ಕಟ್ಟಿ ಈ ರೀತಿಯಾಗದೇ ಇದ್ದರೆ ನಾಳೆ ದಿವಸ ಬೇರೆ ಜಿಲ್ಲೆಗಳಲ್ಲೂ ಕೂಡ ನಮ್ಮ ಬೆಂಗಳೂರಿನಲ್ಲಾದಂತೆ

ಚಟುವಟಿಕೆಗಳು ಪ್ರಾರಂಭವಾಗುತ್ತದೆ, ಇದನ್ನು ನಿಗ್ರಹಿಸಬೇಕಾದರೆ ಈ ಬಗ್ಗೆ ಕ್ರಮವನ್ನು ಜರುಗಿಸಬೇಕೆಂದು ಮಾನ್ಯ ಗೃಹ ಮಂತ್ರಿಗಳನ್ನು ಅಧ್ಯಕ್ಷರು ಮೂಲಕ ಕೇಳುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ 2100 ಅಧಿಕೃತ ಸ್ಥಳಾವಕಾಶವಿದ್ದು ಸದರಿ ಕಾರಾಗೃಹದಲ್ಲಿ ಹಾಲಿ 4900 ಕ್ಕೂ ಬಂದಿಗಳಿದ್ದಾರೆ, ಅವರಲ್ಲಿ ನೆಕ್ಸಲೇಟ್, ಉಗ್ರಗಾಮಿಗಳು, ಎಲ್ ಟಿ ಟಿ ಇ ಸಂಘಟನಾ ಬಂದಿಗಳು, ದಂಡುಪಾಳ್ಯ ಗ್ಯಾಂಗ್ ನಗರದ ವಿವಿಧ ಕುಖ್ಯಾತ ರೌಡಿ ಗುಂಪಿನ ಬಂಧಿಗಳು ಹಾಗೂ ದರೋಡೆ ಪ್ರಕರಣಗಳ ಭಾಗಿಯಾಗಿರುವ ಬಂದಿಗಳೂ ದಾಖಲಿರುವುದಲ್ಲದೆ ಇವರ ಜೊತೆಯಲ್ಲಿ ಇನ್ನೂ ಹಲವಾರು ಪ್ರಕರನಗಳ ರಾಜ್ಯ ಮತ್ತು ಹೊರ ರಾಜ್ಯದ ಬಂದಿಗಳು ದಾಖಲಿರುತ್ತಾರೆ ಅವರುಗಳಲ್ಲಿ ನಗರದ ವಿರೋಧಿ ಕುಖ್ಯಾತ ರೌಡಿ ಗುಂಪಿನವರು ದಾಖಲಿದ್ದು ಇವರನ್ನು ಭದ್ರತೆ ಮತ್ತು ಆಡಳಿತ ಹಿತದೃಷ್ಟಿಯಿಂದ ಮತ್ತು ಬಂದಿಗಳ ಜೀವ ಹಿತದೃಷ್ಟಿಯಿಂದ ರಾಜ್ಯದ ವಿವಿಧ ಕಾರಾಗೃಹಗಳಿಗೆ ಅಗತ್ಯಕ್ಕೆ ತಕ್ಕಂತೆ ವರ್ಗಾಯಿಸಲಾಗುತ್ತಿದೆ ಇದೇ ರೀತಿ ಬೆಂಗಳೂರಿನ ಕಾರಾಗೃಹದಿಂದ ಕೋಲಾರ ಜಿಲ್ಲಾ ಉಪಕಾರಾಗೃಹಕ್ಕೆ ವರ್ಗಾಯಿಸಲಾಗಿರುತ್ತದೆ

ಇತ್ತೀಚೆಗೆ ಕೋಲಾರ ಜಿಲ್ಲೆಯ ಉಪ ಕಾರಾಗೃಹದಲ್ಲಿ ಸ್ಥಳೀಯ ಬಂದಿಗಳಿಗೆ ಕಿರುಕುಳ ನೀಡಲಾಗಿದೆ ಎನ್ನಲಾದ ಬೆಂಗಳೂರು ಮೂಲದ 15 ಬಂದಿಗಳ ಪೈಕಿ ತುಮಕೂರು ಜಿಲ್ಲಾ ಉಪಕಾರಾಗೃಹಕ್ಕೆ ಇಬ್ಬರನ್ನು ಮತ್ತು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ 10 ಜನ ಬಂದಿಗಳನ್ನು ವರ್ಗಾಯಿಸಲಾಗಿದೆ

ಕೋಲಾರ ಜಿಲ್ಲಾ ಉಪ ಕಾರಾಗೃಹದಲ್ಲಿ ಅಧಿಕೃತವಾಗಿ 92 ಬಂದಿಗಳಿಗೆ ಸ್ಥಳಾವಕಾಶ ಕಲ್ಪಿಸಲಾಗಿದ್ದು ಹಾಲಿ ದಿನಾಂಕ 15 06 2007 ಕ್ಕೆ 231 ಕ್ಕೂ ಹೆಚ್ಚು ಬಂದಿಗಳು ದಾಖಲಾಗಿರುತ್ತಾರೆ ಇದೇ ರೀತಿ ತುಮಕೂರು ಚಿತ್ರದುರ್ಗ, ಹಾಸನ, ಮೈಸೂರು, ಮಂಡ್ಯ, ದಾವಣಗೆರೆ, ಬಳ್ಳಾರಿ, ಬೆಳಗಾವಿ ಕಾರಾಗೃಹಗಳಲ್ಲೂ ಅಧಿಕೃತ ಸ್ಥಳಾವಕಾಶಕ್ಕಿಂತ ಹೆಚ್ಚು

ಬಂದಿಗಳಿದ್ದು ಅಲ್ಲಿಗೂ ಸಹ ವಿವಿಧ ವಿರೋಧಿ ರೌಡಿ ಗುಂಪಿನವರನ್ನು ವರ್ಗಾಯಿಸಲಾಗಿದೆ ಈ ರೀತಿ ಬಂದಿಗಳ ಬರ್ಗಾವಣೆಯು ಸ್ಥಳೀಯ ಬಂದಿಗಳಿಗೆ ಕಿರುಕುಳ ನೀಡುವ ದೃಷ್ಟಿಯಿಂದಲ್ಲ ಇದು ಈ ಹಿಂದಿನಿಂದಲೂ ನಡೆದು ಬಂದ ಪ್ರಕ್ರಿಯೆ

ರಾಜ್ಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮರು ಹೊಂದಾಣಿಕ ಅನುದಾನದಲ್ಲಿ 11 ನೂತನ ಕಾರಾಗೃಹಗಳನ್ನು ನಿರ್ಮಿಸಲಾಗಿದೆ ಇದರಲ್ಲಿ ಚಿಂತಾಮಣಿ ಅನುದಾನದಲ್ಲಿ 11 ನೂತನ ಕಾರಾಗೃಹಗಳನ್ನು ನಿರ್ಮಿಸಲಾಗಿದೆ ಇದರಲ್ಲಿ ಚಿಂತಾಮಣಿ ತಾಲ್ಲೂಕು ಉಪ ಕಾರಾಗೃಹವನ್ನು ನಿರ್ಮಿಸಲಾಗಿದೆ ಚಿಂತಾಮಣಿ ತಾಲ್ಲೂಕು ಉಪ ಕಾರಾಗೃಹವನ್ನು ಪ್ರಾರಂಭಿಸಲು ಅಗತ್ಯವಾದ ವಿವಿಧ ವರ್ಗಗಳ ಹುದ್ದೆಗಳನ್ನು ಸೃಜನೆ ಮಾಡುವ ಬಗ್ಗೆ ಪ್ರಸ್ತಾಪನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ ಈ ಹುದ್ದೆಗಳು ಸೃಜನೆಯಾದ ನಂತರ ಚಿಂತಾಮಣಿ ತಾಲ್ಲೂಕು ಉಪ ಕಾರಾಗೃಹವನ್ನು ಪ್ರಾರಂಭಿಸಲಾಗುವುದು

ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದ್ದು ನಿಜಕ್ಕೂ ಸತ್ಯ ಇಲ್ಲಿರುವ ರೌಡಿಗಳು ಆ ಭಾಗಕ್ಕೆ ಹೋದಾಗ ಅನೇಕ ಕಿರುಕುಳಗಳನ್ನು ಕೊಡಬಹುದು ಆದುದರಿಂದ ಆದಷ್ಟು ಮಟ್ಟಿಗೆ ದೊಡ್ಡ ಜೈಲುಗಳಾದ ಇಂಡಲಗ, ಬಳ್ಳಾರಿ,ಮೈಸೂರು, ಬೆಂಗಳೂರಿನಲ್ಲಿ ಸೇರಿಸತಕ್ಕಂತ ಪ್ರಯತ್ನವನ್ನು ಮಾಡುತ್ತದ್ದೇವೆ ಈಗ ಪರಪ್ಪನ ಅಗ್ರಹಾರ ಜೈಲಿನಲ್ಲಿ 4900 ಇರುವ ಖೈದಿಗಳಲ್ಲಿ,ವಿಚಾರಣಾದೀನ ಖೈಧಿಗಳೇ ಹೆಚ್ಚು ಇದ್ದಾರೆ ಇತ್ತೀಚೆಗೆ ಸ್ವಲ್ಪಮಟ್ಟಿಗೆ ನೇಮಕಾತಿಯನ್ನು ಮಾಡಬಹುದೆಂದು ಆರ್ಥಿಕ ಇಲಾಖೆಯವರು ಸಹಮತಿ ಕೊಟ್ಟಿದ್ದರಿಂದ ಕೆಲವು ಸಿಬ್ಬಂದಿವರ್ಗದವರ ನೇಮಕಾತಿ ಪ್ರಕ್ರಿಯೆ ಈಗಾಗಲೇ ನಡೆದಿದೆ ಅದರಲ್ಲಿ ಸುಮಾರು 140ಕ್ಕಿಂತ ಹೆಚ್ಚು ಜನ,11 ಜೈಲರ್ ಗಳು, ಸುಮಾರು 236 ವಾರ್ಡರ್‌ಗಳನ್ನು ನೇಮಕ ಮಾಡಿಕೊಳ್ಳುವುದರ ಬಗ್ಗೆ ಈಗಾಗಲೆ ಸಂದರ್ಶನೆ ನಡೆದಿದೆ ಆ ಸಂದರ್ಶನ ಮುಗಿದ ತಕ್ಷಣವೆ, ಅವರಿಗೆ ಅಲ್ಪಾವಧಿಯ ತರಬೇತಿಯನ್ನು ಕೊಟ್ಟು ಬೇರೆ ಬೇರೆ ಜೈಲುಗಳಿಗೆ ಕಳುಹಿಸುವಂಥ ಕೆಲಸವನ್ನು ಮಾಡುತ್ತೇವೆ ಚಿಂತಾಮಣಿಯಲ್ಲಾದಂತೆ ಈಗ ಜೈಲುಗಳು ಕಟ್ಟುವುದು ಪ್ರಾರಂಭವಾಗಿದೆ, ಸಿಬ್ಬಂದಿ ಇಲ್ಲದೇ ಕಟ್ಟಡಗಳಾಗಿವೆ ಆ ಕಾರಣಕ್ಕಾಗಿ ತಾವು ಹೇಳಿದ

ಸಲಹೆಯನ್ನು ಖಂಡಿತವಾಗಿಯು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಇದಾಗಲಾರದಂತೆ ನೋಡಿಕೊಳ್ಳುತ್ತೇವೆ

ಡಾ ಸುಧಾಕರ ರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ ಗೌಡರ ಪ್ರಶ್ನೆಗೆ ಸಂಬಂದಿಸಿದಂತೆ ಈಗ ಮಂತ್ರಿಗಳು ಕಾರಾಗೃಹದ ನೇಮಕಾತಿಯಾಗುತ್ತಿದೆ ಎಂದು ಹೇಳಿದರು, ಈಗ ಮುಂದಿರುವುದು ದಯವಿಟ್ಟು ಆ ವಿಚಾರವಲ್ಲ ಅಲ್ಲಿ ರಸ್ತೆ ಇಲ್ಲ ಸುಮಾರು ಒಂದು ವರ್ಷದ ಹಿಂದೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಪ್ರಸ್ತಾವನೆ ಬಂದಿತ್ತು ಇವತ್ತಿನವರೆಗೆ ಕಂದಾಯ ಇಲಾಖೆಯಲ್ಲಿ ಆ ರಸ್ತೆ ಅದಲು ಬದಲು ಮಾಡುವುದಾಗಬೇಕು, ಅಲ್ಲಿರುವ ರೈತರು ಜಾಗ ಬಿಟ್ಟುಕೊಡಲು ತಯಾರಿದ್ದಾರೆ, ಸರ್ಕಾರಿ ಜಾಗವನ್ನು ಅವರಿಗೆ ಮಂಜೂರು ಮಾಡಿಕೊಟ್ಟು, ಆ ರಸ್ತೆಯನ್ನು ಅವರಿಗೆ ಮಾಡಿಕೊಡುವುದಿತ್ತು ಆದರೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಕಾರಾಗೃಹವನ್ನು ಕಟ್ಟಲಾಗಿದೆ ಒಂದು ವರ್ಷದಿಂದ ಇದು ಹಾಗೆ ಉಳಿದಿದೆ, ಏತಕ್ಕೆ ಇದು ಒಂದು ವರ್ಷದಿಂದ ಹಾಗೆ ಉಳಿದಿದೆ ಎಂಬುದರ ಬಗ್ಗೆ ಸರ್ಕಾರ ಗಮನಹರಿಸಿ ಅದಷ್ಟು ಬೇಗ ಅದನ್ನು ಮಾಡಿಕೊಟ್ಟರೆ, ಆ ಕಾರಾಗೃಹವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಾಗುವುತ್ತದೆಂದು ಸಂಬಂಧಪಟ್ಟ ಅಧಿಕಾರಿಗಳು ತಳಿಸಿರುತ್ತಾರೆ ದಯವಿಟ್ಟು ಮಂತ್ರಿಗಳು ಕಂದಾಯ ಇಲಾಖೆಯಿಂದ ಈ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಅಲ್ಲಿ ಈ ರಸ್ತೆ ಮಾಡಲು ಸ್ಥಳ ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಅವರು ಹೇಳಿದಂತೆ ಸಿಬ್ಬಂದಿಯ ಕೊರತೆ ಇದೆ ಮತ್ತೆ ಅವರು ಈಗ ಹೇಳಿದ ಪ್ರಸ್ತಾವನೆ ಪರೀಶೀಲನೆ ಹಂತದಲ್ಲಿದ, ಖಂಡಿತವಾಗಿಯೂ ಅದನ್ನು ಗಮನದಲ್ಲಿಟ್ಟು ಕೊಂಡು ಕ್ರಮತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು ಮಹಾದೇವಪ್ಪ ಯಾದವಾಡರವರು, ಮಾತನಾಡುವುದು

ಶ್ರೀ ಮಹಾದೇವಪ್ಪ ಯಾದವಾಡ ಮಾನ್ಯ ಅಧ್ಯಕ್ಷರೆ, ಫೈಲ್ ತಂದಿಲ್ಲ, ಫೋಟೊ ಎಲ್ಲವನ್ನು ತೋರಿಸಬೇಕು, 16ನೇ ತಾರೀಖು, ಸೋಮವಾರ

ಮಾತನಾಡುತ್ತೇನೆ

ಅಧ್ಯಕ್ಷರು ಸದ್ಯಕ್ಕೆ ನಿಮ್ಮಲ್ಲಿ ಮಾಹಿತಿ ಇಲ್ಲ, ಆಯಿತು ಗಮನಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ, ಪಿ ಸಿ ಮೋಹನ್ ಅವರು ಬಂದಿಲ್ಲ, ಲಾಲಾಜಿ ಮೆಂಡನ್ ಅವರು ಮಾತನಾಡುವುದು

3 ಗಮನ ಸೆಳೆಯುವ ಸೂಚನೆ

ವಿಷಯ ಕಾಪು ಕ್ಷೇತ್ರಕ್ಕೆ ಬಯಲು ರಂಗಮಂದಿರ ಮಂಜೂರು ಮಾಡುವ ಬಗ್ಗೆ

ಶ್ರೀ ಲಾಲಾಜಿ ಆರ್ ಮೆಂಡನ್ ಕಾಪು ಮಾನ್ಯ ಅದ್ಯಕ್ಷರೆ, ಕಾಪು ಕ್ಷೇತ್ರಕ್ಕೆ ಬಯಲು ರಂಗಮಂದಿರ ಮಂಜೂರು ಮಾಡುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುತ್ತಾ, ನಮ್ಮ ಕಾಪು ಕ್ಷೇತ್ರ ನಮ್ಮ ಉಡುಪಿ ಜಿಲ್ಲೆಯಲ್ಲಿ ಬರುವುದರಿಂದ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಬಹಳ ಮುಂದುವರೆದ ಜಿಲ್ಲೆಯಾಗಿದೆ ನಮ್ಮ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನ, ಜಾನಪದ, ನಾಟಕಗಳೆಲ್ಲಾ ಬಹಳ ಪ್ರಸಿದ್ಧಿಯಾಗಿದೆ ಇಂತಹ ಒಂದು ಕಲೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ನಮ್ಮ ಕಾಪು ಕ್ಷೇತ್ರ ನಮ್ಮ ರಾಷ್ಟ್ರೀಯ ಹೆದ್ದಾರಿ ಬರುವ ಬಂಗಲೆ, ಮೈದಾನ ಪ್ರದೇಶದಲ್ಲಿ ಬಯಲು ರಂಗಮಂದಿರ ಅವಶ್ಯಕತೆ ಇದೆ ಈಗಾಗಲೆ ಅಲ್ಲಿಯ ಸ್ಥಳೀಯ ಬಂಗಲೆ ಮೈದಾನ ಪ್ರದೇಶಗಳಲ್ಲಿ ಸ್ವಾತಂತ್ರೋತ್ಸವ, ಗಣ ರಾಜ್ಯೋತ್ಸವ ಹಾಗು ಇತರೆ ಶಾಲಾ ಕಾಲೇಜುಗಳ ವಿವಿಧ ಕಾರ್ಯಕ್ರಮಗಳು, ಚಟುವಟಿಕೆಗಳೆಲ್ಲಾ ಅಲ್ಲಿ ನಡೆಯುತ್ತಿದೆ, ಜೊತೆಗೆ ನಮ್ಮಲ್ಲಿ ಹವ್ಯಾಸಿ ವೃತ್ತಿಪರ ನಾಟಕತಂಡಗಳಿವೆ, ಯಕ್ಷಗಾನ ವಿಶೇಷವಾಗಿದೆ ಹಾಗಾಗಿ ಆ ಒಂದು ಬಯಲು ರಂಗಮಂಟಪವನ್ನು ಉತ್ತಮಗೊಳಿಸಿ ನಮಗೊಂದು ರಂಗ ಮಂಟಪವನ್ನು ಕೂಡ ಕೊಟ್ಟರೆ ನಮ್ಮ ಸಾಂಸ್ಕೃತಿಕ ಕಲೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಜೊತೆಗೆ ಇದು ರಾಷ್ಟ್ರೀಯ ಹೆದ್ದಾರಿಯಲ್ಲೇ ಇರುವುದರಿಂದ ವಾಹನ ಸೌಕರ್ಯಕ್ಕು ಕೂಡ ಬಹಳ ಅನುಕೂಲವಿದೆ

ಅಧ್ಯಕ್ಷರು ಗಮನ ಸೆಳೆಯುವುದೆಂದರೆ, ನಿಂತುಕೊಂಡು ಭಾಷಣ

ಮಾಡುವುದೆಂದು ತಿಳಿದುಕೊಂಡಿರೇನು? ನೀವೇನು ಕಳುಹಿಸಿದ್ದೀರಿ ಓದಿ, ಉತ್ತರ ಕೊಡುತ್ತಾರೆ, ಏನಾದರು ಕ್ಲಾರಿಫಿಕೇಷನ್ ಇದ್ದರೆ ತೆಗೆದುಕೊಳ್ಳಿ ಸ್ವಾಮಿ, ಇದೇನಿದು ?

ಶ್ರೀ ಎಂ ಪಿ ಪ್ರಕಾಶ್ [ಗೃಹ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ]

ಕಾಪುವಿನ ಸ್ಥಳೀಯವಾದ ಕಲೆಗಳನ್ನು ಉತ್ತೇಜಿಸಲು ಸುಸಜ್ಜಿತವಾದ ಬಯಲು ರಂಗಮಂದಿರವನ್ನು ನಿರ್ಮಾಣ ಮಾಡುವಂತೆ ಇಲಾಖೆಗೆ ಯಾವುದೇ ಬೇಡಿಕೆ ಬಂದಿರುವುದಿಲ್ಲ

ಕರ್ನಾಟಕ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿ ಗ್ರಾಮೀಣ ಪ್ರದೇಶದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗ ದೊಂದಿಗೆ ಬಯಲು ರಂಗಮಂದಿರವನ್ನು ನಿರ್ಮಿಸುವ ಉದ್ದೇಶದಿಂದ ಬಯಲು ರಂಗಮಂದಿರಗಳ ಯೋಜನೆಯನ್ನು ಜಿಲ್ಲಾ ಪಂಚಾಯಿತಿಗೆ ವರ್ಗಾಯಿಸಲಾಗಿದೆ ಅದರಂತೆ ನಿರ್ಮಾಣಗೊಂಡಿರುವ 222 ಬಯಲು ರಂಗ ಮಂದಿಗಳನ್ನು ಜಿಲ್ಲಾ ಪಂಚಾಯತಿಯ ವ್ಯಾಪ್ತಿಗೆ ಒಳಪಡಿಸಲಾಗಿದೆ ಈ 222 ಬಯಲು ರಂಗ ಮಂದಿಗಳಲ್ಲಿ 140 ಪೂರ್ಣಗೊಂಡಿದ್ದು, 82 ಬಯಲು ರಂಗ ಮಂದಿರಗಳು ಅಪೂರ್ಣವಾಗಿದ್ದು, ಸಂಬಂಧಿತರು ಸ್ಥಳೀಯ ಸಂಪನ್ಮೂಲ ಕ್ರೋಢೀಕರಿಸಿ ಬಯಲು ರಂಗ ಮಂದಿರಗಳನ್ನು ಪೂರ್ಣಗೊಳಿಸಬೇಕಾಗಿದೆ

ನಗರಸಭೆ, ಪುರಸಭೆಗಳ ವ್ಯಾಪ್ತಿಗೆ ಬರುವ ಬಯಲು ರಂಗ ಮಂದಿರಕ್ಕೆ ಸಂಬಂದಿಸಿತ ಯೋಜನೆಯನ್ನು ರಾಜ್ಯ ವಲಯದಲ್ಲಿಯೇ ಮುಂದು ವರಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಒಟ್ಟು 60 ಬಯಲು ರಂಗ ಮಂದಿರಗಳು ಒಳಪಟ್ಟಿವೆ ಈ 60 ಬಯಲು ರಂಗ ಮಂದಿರಗಳಲ್ಲಿ 31 ಬಯಲು ರಂಗ ಮಂದಿರಗಳು ಪೂರ್ಣವಾಗಿದ್ದು, 29 ಬಯಲು ರಂಗ ಮಂದಿರಗಳು ಅಪೂರ್ಣವಾಗಿದ್ದು, ಸಂಬಂದಿತರು

ಸ್ಥಳೀಯ ಸಂಪನ್ಮೂಲ ಕ್ರೋಢೀಕರಿಸಿ ಪೂರ್ಣಗೊಳಿಸಬೇಕಾಗಿದೆ

ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಕಾಪುವಿನ ಕ್ಷೇತ್ರ ವ್ಯಾಪ್ತಿಯಲ್ಲಿ ಬಯಲು ರಂಗ ಮಂದಿರ ನಿರ್ಮಿಸಲು ಸ್ಪಂದನ ಸಾಂಸ್ಕೃತಿಕ ಕಲಾ ವೇದಿಕೆ, ಕುಂಜಾಲುಗಿರಿ, ಕುರ್ತಾಲು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಇವರಿಗೆ ಉಡುಪಿ ಜಿಲ್ಲಾ ಪಂಚಾಯಿತಿಯಿಂದ ರೂ 50 000 –00 ಗಳ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ

ಆ) ವಿಷಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13 ರಲ್ಲಿರುವ ಆಲೂರಿನ ಆಸ್ಪತ್ರೆ ಮತ್ತು ರಸ್ತೆ ಸುಧಾರಣೆ ಬಗ್ಗೆ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಸಚಿವರು)

ಆಲೂರು ಗ್ರಾಮ ರಾಷ್ಟ್ರೀಯ ಹೆದ್ದಾರಿ–13ರ ರಿಂದ 2 ಕಿ ಮೀ ಒಳಗಿರುತ್ತದೆ ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯನಿರ್ವಹಿಸುತ್ತದೆ ರಾಜ್ಯ ಸರ್ಕಾರವು ದಿನಾಂಕ 2/6/2007ರಂದು ಹೊರಡಿಸಿರುವ ಆದೇಶದ ಪ್ರಕಾರ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿದೆ ಅದರಲ್ಲಿ ಇದು ಕುಡ ಒಂದಾಗಿದೆ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಸದರಿ ಆರೋಗ್ಯ ಕೇಂದ್ರಕ್ಕೆ ಆಪರೇಷನ್ ಥಿಯೇಟರ್ ಹಾಗೂ ಹೆರಿಗೆ ವಾರ್ಡಗಳನ್ನು ಹೊಸದಾಗಿ ಕಟ್ಟುವ ಕಾಮಗಾರಿ ಪ್ರಾರಂಭವಾಗಿರುತ್ತದೆ ಅದೇ ತರಹ ವೈದ್ಯರ ವಸತಿ ಗೃಹ ಸಹ ಇದೇ ಪ್ಯಾಕೇಜ್‌ನಲ್ಲಿ ತೆಗೆದುಕೊಳ್ಳಲಾಗಿದೆ, ಈ ಕಾಮಗಾರಿಯು ಇನ್ನೂ ಪೂರ್ಣಗೊಂಡಿರುವುದಿಲ್ಲ

ಇಲ್ಲಿ ಎರಡು ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹಾಗೂ "ಡಿ" ವರ್ಗದ ವಸತಿ ಗೃಹಗಳು ಸಹ ಇರುತ್ತದೆ ಇದರಲ್ಲಿ ಅವರುಗಳು ವಾಸವಾಗಿರುತ್ತಾರೆ

ದಿನಾಂಕ 13/5/2007ರಂದು ಬೆಳಗಿನ ಝಾವ ಸುಮಾರು 5 00

ಗಂಟೆ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ-13 ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸಹಳ್ಳಿಯಿಂದ 3 ಕಿ.ಮೀ ದೂರದ ಸ್ಥಳದಲ್ಲಿ ವಾಹನ ಅಫಘಾತಕ್ಕೀಡಾಗಿರುತ್ತದೆ ಸದರಿ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಜನರಲ್ಲಿ 18 ಜನ ಮೃತಪಟ್ಟಿದ್ದು, ಅವರ ಶವಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸಹಳ್ಳಿಗೆ ಅಂಬುಲೆನ್ಸ್ ಮೂಲಕ ಸಾಗಿಸಿ, ಸಾರ್ವಜನಿಕ ಆಸ್ಪತ್ರೆ, ಕೂಡ್ಲಗಿ, ಸಮುದಾಯ ಆರೋಗ್ಯ ಕೇಂದ್ರ, ಸಿ.ಜೆ ಹಳ್ಳಿ, ಕೊಟ್ಟೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಉಜ್ಜನಿ ಮತ್ತು ಬೆಳ್ಳಿಗಟ್ಟಿಯಿಂದ ವೈದ್ಯರನ್ನು ಕರೆಯಿಸಿ ಶವ ಪರೀಕ್ಷೆ ನಡೆಸಲಾಯಿತು ಸಣ್ಣ ಪುಟ್ಟ ಗಾಯಗೊಂಡ ಜನರನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸಹಳ್ಳಿಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿಗೆ ಆಂಬುಲೆನ್ಸ್ ಮೂಲಕ ಸಾಗಿಸಿ ಚಿಕಿತ್ಸೆ ನೀಡಲಾಯಿತು ಕೆಲವು ಚಿಂತಾನಜಕ ಸ್ಥಿತಿಯಲ್ಲಿದ್ದ ಗಾಯಾಳುಗಳನ್ನು ಆಂಬುಲೆನ್ಸ್‌ನಲ್ಲಿ ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗಕ್ಕೆ ಹೆಚ್ಚಿನ ಚಿಕಿತ್ಸೆಗೆ ಕಳುಹಿಸಲಾಯಿತು

ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿಯು ರಾಷ್ಟ್ರೀಯ ಹೆದ್ದಾರಿ-13ರಲ್ಲಿರುವುದರಿಂದ ಟ್ರಾಮಕೇರ್ ಸೆಂಟರ್ ಮಂಜೂರಾಗಿರುತ್ತದೆ ಈಗಾಗಲೇ ಕಟ್ಟಡದ ಕಾಮಗಾರಿ ಕಾರ್ಯ ಪ್ರಾರಂಭಗೊಂಡಿರುತ್ತದೆ

ಶ್ರೀಮತಿ ಭಾಗೀರಥಿ ಟಿ ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾಹಿತಿ ತಪ್ಪಾಗಿದೆ 21ಜನ ಮೃತಪಟ್ಟಿರುವಂತಹ ಧಾರುಣ ಘಟನೆಯನ್ನು ತಾವೆಲ್ಲಾ ಟಿವಿಯಲ್ಲಿ ನೋಡಿದ್ದೀರಿ ನಾನು ಹಿಂದೆ ನಡೆದ ಅಧಿವೇಶನದಿಂದ ಈ ಅದಿವೇಶನದವರೆಗೆ ಹಲವು ವಿಚಾರಗಳನ್ನು ತಿಳಿಸಿದ್ದೇನೆ ಹೊಸ ಹಳ್ಳಿಯಲ್ಲಿ ಯಾವುದೇ ಟ್ರಾಮ ಸೆಂಟರ್ ಇಲ್ಲ ಇಲ್ಲಿ ಆಂಬುಲೆನ್ಸ್ ಕೂಡ ಇಲ್ಲ ಆಲೂರಿನಲ್ಲಿರುವುದು ಪ್ರಾಥಮಿಕ ಆರೋಗ್ಯ ಘಟಕ ಇದು PHC ಕೂಡ ಆಗಿಲ್ಲ PHC ಯನ್ನು ಮೇಲ್ದರ್ಜೆಗೇರಿಸುತ್ತೇವೆ ಎಂದು ಹೇಳಿದ್ದೀರಿ ಅಲ್ಲಿ ಇದ್ದಂತಹ ಒಬ್ಬ ಮಹಿಳಾ ವೈದ್ಯರನ್ನು ವರ್ಗಾವಣೆ ಮಾಡಿದ್ದೀರಿ ಅಲ್ಲಿ ಒಬ್ಬ ANMs ಇಲ್ಲ ಯಾವುದೇ ವೈದ್ಯರು ಕೂಡ ಇಲ್ಲ ದಿನ ನಿತ್ಯ ನಾನು ಈ ಕೆಲಸ ಮಾಡಬೇಕು ಆದ್ದರಿಂದ ಕೂಡ್ಲಿಗಿಯಿಂದ ಚಿತ್ರದುರ್ಗದವರೆಗೆ ಸುಮಾರು 80 ಕಿ.ಮಿ ನಡುವೆ ನಮಗೆ ಯಾವುದೇ ಈ ರೀತಿಯ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ತಕ್ಷಣ

ಅಲ್ಲಿಗೆ ಒಂದು ಆಂಬುಲೆನ್ಸ್ ಒದಗಿಸಬೇಕು ಇಡೀ ಕ್ಷೇತ್ರದಲ್ಲಿ ಯಾವುದಾದರೂ ಒಂದು ಆಸ್ಪತ್ರೆ ಫುಲ್ ಫ್ಲೆಡ್ಜ್ಡ್ ಇದ್ದರೆ ನಾವು ಕೆಲಸ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರ್ ಇರುತ್ತಾರೆ, ಕೆಲವು ಆಸ್ಪತ್ರೆಗಳಲ್ಲಿ ಔಷಧಿ ಇರುವುದಿಲ್ಲ, ದಯವಿಟ್ಟು ತಾವು ಸಂಪೂರ್ಣವಾದ ವರದಿ ತರಿಸಿಕೊಂದು ಈ 80ಕಿ ಮಿ ನಡುವೆ ನನ್ನ ಕ್ಷೇತ್ರದಲ್ಲಿ ಒಂದು ಟ್ರಾಮ ಸೆಂಟರ್‌ನ್ನು ಮಾಡಿಕೊಡಬೇಕು ಟ್ರಾಮ ಸೆಂಟರ್ ಮಾಡಿ ಅಲ್ಲಿ ಯಾರೂ ಇಲ್ಲದ ಹಾಗೆ ಮಾಡಬಾರದು ಈ ವಿಚಾರದಲ್ಲಿ ನನಗೆ ತೊಂದರೆಯಾಗುತ್ತಿದೆ ಪ್ರತಿನಿತ್ಯ ನಾನು ಬೆಂಗಳೂರಿಗೆ ಬರಬೇಕಾದರೆ ಎಲ್ಲ ಕೆಲಸ ಮಾಡಿ ಬರಬೇಕಾಗುತ್ತದೆ ಈ ಅಪಘಾತದ ವಲಯವೆಂದು ನಾವು ಹೆಸರು ಇಟ್ಟಿದ್ದೇವೆ ನಾವು ಅಲ್ಲಿಂದ ಹಾಗೇಯೇ ಬರುವ ಹಾಗಿಲ್ಲ ದಯಮಾಡಿ ತಾವು ಅಲ್ಲಿ ಒಂದು ಆಸ್ಪತ್ರೆಯನ್ನು ಕೊಡಬೇಕು NH 4ನಲ್ಲಿರುವ ಹೊಸ ಹಳ್ಳಿಯ ಆಸ್ಪತ್ರೆಗೆ ಸಂಪೂರ್ಣ ಪರಿಕರಗಳನ್ನು ಒದಗಿಸಿ ಈ ರೀತಿಯ ಕೆಲಸಗಳಿಗೆ ಸಹಾಯ ಮಾಡಬೇಕೆಂದು ಸಭಾಧ್ಯಕ್ಷರ ಮೂಖಾಂತರತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಆರ್ ಅಶೋಕ್ ಡಾಕ್ಟರ್ ವರ್ಗಾವಣೆ ಆಗಿ ಬೇರೆ ಕಡೆ ಹೋಗಿದ್ದಾರೆ ಡಾಕ್ಟರ್‌ರನ್ನು ಪೋಸ್ಟ್ ಮಾಡುವ ಬಗ್ಗೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ

ಅಧ್ಯಕ್ಷರು ಶಾಸನ ರಚನೆ ಇದೆ, ತೆಗೆದುಕೊಳ್ಳೋಣವಾ?

ಶ್ರೀ ಜೆ ಸಿಮಾಧುಸ್ವಾಮಿ ಇವತ್ತು ಶುಕ್ರವಾರ ಇವತ್ತು ಹೇಗೆ ಶಾಸನ ರಚನೆ ತೆಗೆದುಕೊಳ್ಳುತ್ತೀರಿ? ಖಾಸಗಿ ಸದಸ್ಯರ ನಿರ್ಣಯುಗಳನ್ನು ತೆಗೆದುಕೊಳ್ಳಬೇಕು ಶುಕ್ರವಾರವೂ ಖಾಸಗಿ ಸದಸ್ಯರ ನಿರ್ಣಯ ತೆಗೆದು ಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ APMC Act ಕಳೆದ ಸಾರಿ ಮೂವ್ ಆಗಿ ನಾವು ಅದನ್ನು ವಿರೋಧ ಮಾಡಿ ವಾಪಸ್ ಹೋಗಿದೆ ಶುಕ್ರವಾರ ಅನದಿಕೃತವಾದ ದಿವಸ ಅದಕೃತವಾದ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಹೇಗೆ ಆಗುತ್ತದೆ?

ಅಧ್ಯಕ್ಷರು ನಾಳೆ ತೆಗೆದುಕೊಳ್ಳೋಣವೆಂದು ಬಿಲ್ ಮಂಡನೆಯಾದಾಗ ನೀವೆ ಹೇಳಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇವತ್ತು ಆಗುವುದಿಲ್ಲ, ಬೇಕಾದರೆ ಸೋಮವಾರ ತೆಗೆದುಕೊಳ್ಳಿ ಇವತ್ತು ನಾವು ಬಿಲ್ ಪಾಸ್ ಮಾಡುವುದಕ್ಕಾಗುತ್ತಾ?

ಶ್ರೀ ಜೆ ಸಿ ಮಾಧುಸ್ವಾಮಿ ಮದುವೆ ಮಾಡುವದರ ಬಗ್ಗೆ ಏನಾದರೂ ಒಂದು ತೀರ್ಮಾನವಾಗಬೇಕು ಖಾಸಗಿ ನಿರ್ಣಯವನ್ನು ದಯವಿಟ್ಟು ಇವತ್ತು ಮುಗಿಸಿಕೊಡಿ ನಾವು ಬೇರೆ ಎರಡು ಮೂರು ನಿರ್ಣಯಗಳನ್ನು ಮೂವ್ ಮಾಡುವವರಿದ್ದೇವೆ

ಶ್ರೀ ಜಿ,ವಿ ಶ್ರೀರಾಮರೆಡ್ಡಿ APMC ಬಿಲ್ಲನ್ನು ಶುಕ್ರವಾರ ತೆಗೆದುಕೊಳ್ಳವುದಕ್ಕಾಗುವುದಿಲ್ಲ ಸೋಮವಾರ ತೆಗೆದುಕೊಳ್ಳಿ

ಶ್ರೀ ಎನ್ ಧರ್ಮ್‌ಸಿಂಗ್ ಈ ಬಿಲ್ಲನ್ನು ಸೋಮವಾರ ತೆಗೆದುಕೊಳ್ಳಿ, ಈಗ ಖಾಸಗಿ ನಿರ್ಣಯದ ಮೇಲೆ ಚರ್ಚೆ ಮಾಡಿ

ಅಧ್ಯಕ್ಷರು ಖಾಸಗಿ ನಿರ್ಣಯ ತೆಗೆದುಕೊಳ್ಳೋಣ, ಈ ಸದನ ಯಾವುದೇ ಒಂದು ತೀರ್ಮಾನ ತೆಗೆದುಕೊಳ್ಳದೆ ಅದು ಸಮಾಜದಲ್ಲಿ ಬೈಂಡಿಗ್ ಆಗುತ್ತದೆ

ಶ್ರೀ ಎನ್ ಧರ್ಮ್‌ಸಿಂಗ್ AMPC Act ಬಗ್ಗೆ ಸೋಮವಾರ ಚರ್ಚೆ ತೆಗೆದುಕೊಳ್ಳಿ, ಖಾಸಗಿ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡಿ ಮುಗಿಸಿಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ ನಿಯಮ 234ರ ಕೆಳಗೆ ನಾನು ಒಂದು ನೋಟಿಸ್ ಕೊಟ್ಟಿದ್ದೇನೆ ಆ ಮೇಲೆ ಅವಕಾಶ ಕೊಡುತ್ತೇನೆ ಎಂದು ಹೇಳಿದಿರಿ

ಅಧ್ಯಕ್ಷರು ಆಯಿತು ನೀವು ಪ್ರಸ್ತಾಪ ಮಾಡಿ

4 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ ಸಾರ್ವಜನಿಕ ಉದ್ದಿಮೇಳ ಸಮಿತಿಯ ವರದಿಯನ್ನು ಸದನದಲ್ಲಿ ಚರ್ಚಿಸುವ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಸಾರ್ವಜನಕ ಉದ್ಯಮಗಳ ಸಮಿತಿಯವರು ಏನು ಅವರ ವರದಿಯನ್ನು ಸದನದಲ್ಲಿ ಮಂಡಿಸಿದ್ದಾರೆ, ಆ ವರದಿಯನ್ನು ಚರ್ಚೆ ಮಾಡಲಿಕ್ಕೆ ನಾನು ತಮ್ಮ ಅವಕಾಶವನ್ನು ಕೋರುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ನಿಯಮ 234ರ ಕೆಳಗೆ ಮಾನ್ಯ ಮಾಧುಸ್ವಾಮಿಯವರು ಕೊಟ್ಟಿರತಕ್ಕಂಥದ್ದು ತಾವು ಇಲ್ಲಿ ತೆಗೆದುಕೊಂಡಿದ್ದೀರೆ ನನಗೆ ಒಂದು ಈ ಸಂಪ್ರದಾಯಗಳ ಬಗ್ಗೆ ಮತ್ತು ಇಲ್ಲಿಯವರೆಗೆ ನಡೆದಿರತಕ್ಕಂತಹ 1950ರ ನಂತರ ಇಂತಹ ಯಾವುದೇ ವಿಚಾರವನ್ನು ಕಮಿಟಿ ರಚನೆ ಮಾಡಿರತಕ್ಕಂತಹ ವರದಿ ಬಗ್ಗೆ ಲೋಕಸಭೆಯಲ್ಲಿ ಒಂದು ಬಾರಿ ಚರ್ಚೆ ಆಗಿರುವುದು ಬಿಟ್ಟರೆ ಬೇರೆ ಎಲ್ಲಿಯೂ ಚರ್ಚೆಯಾಗಿಲ್ಲ ಹಾಗೆಯೇ ನಮ್ಮ ವಿಧಾನಸಭೆಯಲ್ಲಿ ಹಿಂದೆ ಒಂದು ಸಲ ವಿರೋಧಪಕ್ಷದ ನಾಯಕರಾದ ಶ್ರೀ ಎಸ್ ಆರ್ ಬೊಮ್ಮಾಯಿಯವರು ಮತ್ತು ಹಾಗೆಯೇ ಅಲ್ಲಿ ಲಕ್ಷ್ಮಿಸಾಗರ್‌ರವರು ಕೊಟ್ಟಿರತಕ್ಕಂತಹ ಎರಡು ಸೂಚನೆಗಳ ಹಿನ್ನಲೆಯಲ್ಲಿ ಒಂದು ಸಲ ಸಿಮೆಂಟ್ ª ÈÀ¢üÀ zÀ¸ÀÛ UÉPAC ಯಲ್ಲಿ ಚರ್ಚೆಯಾಗಿತ್ತು ಅದು ಬಿಟ್ಟರೆ ಪ್ರಾಯಶ ಇಂಥದು ಯಾವಾಗಲೂ ಕೂಡ ಆಗಿಲ್ಲ ಆದ್ದರಿಂದ ಸನ್ಮಾನ್ಯ

ಮಾಧುಸ್ವಾಮಿಯವರು ಹಿರಿಯ ಸದ್ಯಸರು ಅವರ ಗಮನಕ್ಕೆ ತರಲು, ಈ ವಿಚಾರದ ಬಗ್ಗೆ ಕೌಲ್ ಅಂಡ್ ಶಕ್ದಾರ್ ರವರು ಈ ವಿಚಾರವನ್ನು ಹೇಳುತ್ತಾರೆ

"Reports which are not discussed by the House" ಎಂದು ಹೇಳಿ

"By convention, the reports of the following Committees are not discussed

Public Accounts Committee, Estimates Committeee, Committee on Public Undertakings, Committee on Subording Legislation, Committeeon Government Assurances, Committee on Petitions, Committee on Papers Laid on the Table, and Committee on the Welfare of Scheduled Castes and Scheduled Tribes

A discussion may be allowed to be raised in the House in respect of a report of these Committees only if there is a serious disagreement between a Committee and the Government on a specific issue Such a situation has arisen only once since 1947 "

1947 ರ ನಂತರ ಲೋಕಸಭೆಯಲ್ಲಿ ಇಂಥ ಉದಾಹರಣೆಗಳೇ ಆಗಿಲ್ಲ ಅದೇ ರೀತಿ ಎಸ್ಟಿಮೇಟ್ ಕಮಿಟಿಗೆ ಸಂಬಂಧ ಪಟ್ಟಂತೆ Shakdher and Kaul ನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ

"As a convention the reports of the committees like those of the Estimates Committee and Public

Accounts Committee are not discussed in the House "

ಈ ಎಲ್ಲ ಹಿನ್ನಲೆಯಲ್ಲಿ ನಾನು ಈಗಾಗಲೇ ಹೇಳಿದಂತೆ ಇಂಥದ್ದು ಒಂದು ಬಾರಿ ಚರ್ಚೆಯಾಗಿರುವುದು ಬಿಟ್ಟರೆ ಬೇರೆ ಯಾವಾಗಲೂ ಆಗಿಲ್ಲ ಆದುದರಿಂದ ಇದನ್ನು ನಾವು ಚರ್ಚೆಗೆ ತೆಗೆದುಕೊಳ್ಳಬಾರದು ಆದರೆ ಒಂದೊಂದು 'ಸಲ ಇಡೀ ಸದನಕ್ಕೆ ಆ ಅಧಿಕಾರವಿದೆಯೆಂದು ಹೇಳಿ ಹಿಂದೆ ಸಿಮೆಂಟ್ ಹಗರಣಕ್ಕೆ ಸಂಬಂಧಪಟ್ಟಂತೆ ವಿಚಾರ ಬಂದಾಗ 1982 ನೇ ಸಾಲಿನಲ್ಲಿ ಇಂಥ ಒಂದು ಚರ್ಚೆ ಆಗಿದೆ ಆದರೆಸಾಮಾನ್ಯವಾಗಿ ಇಂಥ ಚರ್ಚೆಯಾಗುವುದಿಲ್ಲ ಏಕೆ ಈ ಚರ್ಚೆಯಾಗಬಾರದು? ರಿಪೋರ್ಟ್‌ಗಳ ಬಗ್ಗೆ ಚರ್ಚೆ ಏಕೆ ಆಗಬಾರದು ಎನ್ನತಕ್ಕಂಥದ್ದರ ಬಗ್ಗೆ ನಿರ್ಣಯಗಳು ಬಂದಿದೆಯೆಂದರೆ ಈ ಕಮಿಟಿಗಳಿಗೆ ತನ್ನದೇ ಆಗಿರತಕ್ಕಂಥ ಚಾರಿತ್ಯ ಮತ್ತು ವ್ಯಕ್ತಿತ್ವವಿರುತ್ತದೆ ಆ ಕಮಿಟಿ ಗಳಲ್ಲಿರತಕ್ಕಂತದ್ದನ್ನು ಸರ್ಕಾರ ಸ್ವೀಕಾರ ಮಾಡತಕ್ಕಂಥದ್ದು ಆ ಹಿನ್ನಲೆಯಲ್ಲಿ ಮತ್ತೆ ಸದನದಲ್ಲಿ ಚರ್ಚೆ ಮಾಡುವುದರ ಮೂಲಕವಾಗಿ ಅದರ ಘನತೆ ಕಡಿಮೆಯಾಗುತ್ತದೆ ಏಕೆಂದರೆ, it is already like a House It is a mini House ಯಾವಾಗ ಒಂದು ಕಮಿಟಿಯನ್ನು ನೇಮಕಾತಿ ಮಾಡುತ್ತೇವೆ ಆಗ ಆ ಸಮಿತಿ ಇಡೀ ವಿಧಾನಸಭೆ ಇದ್ದಂತೆಯೇ ಆಗುತ್ತದೆ ಆ ಸಮಿತಿಯಲ್ಲಿ ಬಂದ ವಿಚಾರದ ಬಗ್ಗೆ ಚರ್ಚೆಯಾಗಿ ನಿರ್ಣಯಕ್ಕೆ ಬಂದಿರತಕ್ಕಂಥದ್ದರ ಮೇಲೆ ಮತ್ತೆ ಪುನರಪಿಯಾಗಿರತಕ್ಕಂಥ ಚರ್ಚೆಯನ್ನು ಮಾಡಬಾರದು ಎನ್ನುವಂಥ ಉದ್ದೇಶಕ್ಕಾಗಿಯೇ ಈ ಸತ್ಸಂಪ್ರಾದಾಯಗಳನ್ನು ನಾವು ಪಾಲಿಸಿಕೊಂಡು ಬಂದಿದ್ದೇವೆ ನಾನು ಈಗಾಗಲೇ ಹೇಳಿದಂತೆ ಒಂದು ಬಾರಿ ಮಾತ್ರ ಇಂಥ ಅಪವಾದವಿರುವ ಹಿನ್ನಲೆ ಇರುವುದನ್ನು ಬಿಟ್ಟರೆ ಪ್ರಾಯಶಃ ಇನ್ಯಾವ ಸಂದರ್ಭದಲ್ಲಿಯೂ ಕೂಡ ಅದು ಬಂದಿಲ್ಲ ಅದೂ ಕೂಡ ಚರ್ಚೆ ಯಾಗಬೇಕಿದ್ದರೆ ಸರ್ಕಾರ ಮತ್ತು ವರದಿಯ ಹಿನ್ನಲೆಯಲ್ಲಿ ಆದಂಥದ್ದರಲ್ಲಿ ಏನಾದರೂ ಘರ್ಷಣೆಗಳಾಗಿದ್ದರೆ ಅಥವಾ ಬಿನ್ನಾಬಿಪ್ರಾ ಯಗಳು ವ್ಯಕ್ತವಾಗಿದ್ದರೆ ತಮ್ಮ ವಿವೇಚನೆಯ ಮೂಲಕ ಅದಕ್ಕೆ ಅವಕಾಶ ಕೊಡಬಹುದು ಆದುದರಿಂದ ಈ ಹಿನ್ನಲೆಯಲ್ಲಿ ಅದು ಎಷ್ಟೇ ಗುರುತರವಾದಂಥ ಚರ್ಚೆ ಇದ್ದರೂ ಕೂಡ ಬಜೆಟ್ ಮೇಲೆ ಭಾಷಣ ಮಾಡುವ ಸಂದರ್ಭ ಬಂದಾಗ ಇದನ್ನು ಚರ್ಚಿಸಬಹುದು ಎನ್ನುವಂಥ ಮಾತೂ ಕೂಡ ಇದೆ ಮಾನ್ಯ ಅಧ್ಯಕ್ಷರೆ, ಇವೊತ್ತು ಹೇಗೂ ಕೂಡ ಬಜೆಟ್ ಮೇಲೆ ಭಾಷಣ ಮಾಡತಕ್ಕಂಥದ್ದು ಇದೆ ಇಲ್ಲಿ ಅದೇ Shakdher

and Kaul ನಲ್ಲಿ ಒಂದು ಕಡೆಯಲ್ಲಿ ಏನು ಹೇಳುತ್ತಾರೆಂದರೆ

"Although it is open to the Lok Sabha to discuss reports of the Committee, such discssion is seldom held, but members may make use of the Committee's reports in their speeches during the discussion on the Budget, Demands for Grants etc "

ಆದುದರಿಂದ ಇದು ಬಜೆಟ್ ಅದಿವೇಶನವಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟಂತೆ ಇಲಾಖೆಯ ಮೇಲೆ ಮಾತನಾಡಲೂ ಹೇಗೂ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುತ್ತಾರೆ ಆ ಸಂದರ್ಭದಲ್ಲಿ ಅದರ ಭಗಗಳನ್ನು ಇಲ್ಲಿ ಉದಾಹರಿಸಬಹುದು, ಆ ಭಾಗಗಳನ್ನು ಇಡಿಯಾಗಿ ಕೂಡ ಓದಬಹುದು, ಈ ಹಿನ್ನಲೆಯಲ್ಲಿ ಇಂಧ ಸಂದರ್ಭ ಇರುವುದರಿಂದ, 'such discussion is seldom held, ' ಎನ್ನತಕ್ಕಂಥ ಮಾತನ್ನು ಕೂಡ ಹೇಳುತ್ತಾರೆ ಈ ಹಿನ್ನಲೆಯಲ್ಲಿ, ಮಾನ್ಯ ಮಾಧುಸ್ವಾಮಿಯವರೂ ಕೂಡ ಸತ್ಸಂಪ್ರದಾಯಗಳನ್ನು ಪಾಲಿಸುವುದಕ್ಕೆ ಬಹಳ ಹೋರಾಟವನ್ನು ಸದಾ ಕಾಲ ಮಾಡುತ್ತಿರುತ್ತಾರೆ ಆದುದರಿಂದ ತಾವು ಇದಕ್ಕೆ ಚರ್ಚೆಗೆ ಅವಕಾಶ ಕೊಡದೇ, ಅವರು ಬೇಕಾದರೆ ಈ ವಿಚಾರವನ್ನು ಬಜೆಟ್ ವಿಚಾರದಲ್ಲಿ ಭಾಷಣ ಮಾಡುವಾಗ ಪ್ರಸ್ತಾಪ ಮಾಡಲಿ ಎಂದು ಹೇಳಿ ಈಗಾಗಲೇ ಅವರು 234ನೇ ನಯಮದ ಪ್ರಕಾರ ಏನು ತಮಗೆ ಕೂಟ್ಟಿದ್ದಾರೆ ಅದನ್ನು ತಿರಸ್ಕರಿಸಬೇಕೆಂದು ನಾನು ತಮ್ಮಲಿ ವಿನಯಪೂರ್ವಕವಾಗಿ ವಿನಂತಿ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ನಾನು 234 ರ ನಯಮವನ್ನು ಓದಿಕೊಂಡೇ ಕೊಟ್ಟಿದ್ದೇನೆ Kaul and Shakdher ಅನ್ನು ಕೂಡ ಓದಿಕೊಂಡೇ ಆ ನಂತರ 234ನೇ ನಿಯಮವನ್ನೂ ಕೂಡ ಓದಿದ್ದೇನೆ 234ನೇ ನಿಯಮವನ್ನು ಸಭೆ ಒಪ್ಪುವ ಹಿನ್ನಲೆಯಲ್ಲಿಯೂ ಕೂಡ Kaul and Shakdher ಅನ್ನು ನೋಡೆಯೇ ಒಪ್ಪಿದೆಯೆಂದು ನಾನು ಭವಿಸುತ್ತೇನೆ All the Rules of this State's Legislature are made referring to the Kaul and Shakdher and other

parlimentary proceedings 234ರ ಕೆಳಗೆ ಚಚೆಯಾಗಬೇಕು ಎಂದು ಅವಕಾಶವಿದ್ದಾಗ ನಾನು ಆ ರೂಲ್ಸ್ ಕೋಟ್ ಮಾಡಿಯೇ ತಮಗೆ ಕೊಟ್ಟಿದ್ದೇನೆ ಸತ್ಸಂಪ್ರದಾಯ ಬೇರೆ ಸರ್ಕಾರ ಏನು ಹೇಳುತ್ತದೆ, ಬಿಡುತ್ತದೆ ಅದು ಬೇರೆ ಮಾನ್ಯ ಅಧ್ಯಕ್ಷರೆ, ನಾನು ಕೂಡ ಅವರು ಹೇಳಿದ್ದನ್ನೇ ಹೇಳುತ್ತೇನೆ The Parliment is empowered to discuss, but it may take it up under the demands, ಎನ್ನುವುದೊಂದನ್ನು ಅವರು ಹೇಳಿರುವುದನ್ನು ನಾನು Kaul and Shakdher ನಲ್ಲಿ ಓದಿದ್ದೇನೆ ಆ ಮೊದಲನೆಯ ವಾಕ್ಯವೇ ಹೇಳುತ್ತದೆ, Parliment was empowered to debate, empowered to discuss ಇನ್ನೂ ಹೆಚ್ಚು ಕಾಲಾವಕಾಶ ಮಾಡಿಕೊಡಬೇಕಾದರೆ ಡಿಮ್ಯಾಂಡ್ಸ್ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು, ಅಲ್ಲಿ ಹೇಗೂ ಮಾತನಾಡುತ್ತೀರಿ, ಆಗ ಇದನ್ನು ತೆಗೆದುಕೊಳ್ಳಬಹುದು ಎಂದು ನೀವು ಹೇಳುತ್ತೀರಿ ಆದರೆ ನಾನು ಹೇಳುತ್ತೇವೆ, ನಿಮ್ಮ ಡಿಮ್ಯಾಂಡ್ಸ್ ಮೇಲೆ ಚರ್ಚೆ ಎಷ್ಟರ ಮಟ್ಟಿಗೆ ಆಗುತ್ತದೆ, ಏನು ಏನ್ನುವ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹುಶ ಅವರು ನೋಟಿಸ್ ಕೊಟ್ಟಿ ಮಾಡಿದರೋ ಅಥವಾ ನೋಟಿಸ್ ಕೊಡದೆಯೇ ಮಾಡಿದರೂ, ಎಸ್ಟಿಮೇಟ್ ಕಮಿಟಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಮೇಲೆ ರಿಪೋರ್ಟ್ ಕೊಟ್ಟ ದಿವಸ ಇಲ್ಲಿ ಅದರ ಮೇಲೆ ಚರ್ಚೆಯಾಯಿತು ಅವೂತ್ತಿನ ದಿವಸಗಳಲ್ಲಿ ನಾನೂ ಕೂಡ ಎಸ್ಟಿಮೇಟ್ ಕಮಿಟಿ ಸದ್ಯಸ ನಾನೇ ಡಿಫೆಂಡ್ ಮಾಡುವುದಕ್ಕೆ ಎದ್ದೆ

ಶ್ರೀ ಎಂ ಪಿ ಪ್ರಕಾಶ್ ಕಮಿಟಿ ಸದಸ್ಯರಾದವರೇ ಚರ್ಚೆಯಲ್ಲಿ ಭಗವಹಿಸುವುದಕ್ಕೆ ಅಚಕಾಶವೇ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಭಾಗವಹಿಸಲಿಲ್ಲ ನಾನು ಡಿಫೆಂಡ್ ಮಾಡುವುದಕ್ಕೆ ಎದ್ದೆ, ಸದನದಲ್ಲಿ ಚರ್ಚೆಯಾಗಬಾರದು ಎಂದು ಅವೋತ್ತು ನಾನು ಎದ್ದು ನಿಂತು ಹೇಳಿದೆ ಎನ್ನುವುದನ್ನು ಇಂದು ಹೇಳುವುದಕ್ಕೆ ಹೊರಟೆ ಅಷ್ಟೆ ಹೊರತು I did not be comes party for that discussion ನಾನು ಇಲ್ಲಿಯೇ ಕುಳಿತಿದ್ದೆನಲ್ಲಾ ಆಗ ಹೇಳಿದೆ, "ಏನು ಸಾರ್ ಇದನ್ನು ತೆಗೆದುಕೊಳ್ಳಬೇಕೆ" ಎಂದು ಹೇಳುವುದಕ್ಕೆ ನಾನು ಎದ್ದುನಿಂತುಕೊಂಡೆ ಆಗ ನನ್ನ ಮೇಲೆಯೇ ಒಂದು ಅಟ್ಯಾಕ್ ಆಯಿತು,

ಅದು ಬೇರೆ I welcome it ಅವೂತ್ತು ಕೂಡ ಅಪ್ಪರು ಕೃಷ್ಣಾ ಪ್ರಾಜೆಕ್ಟ್ ಮೇಲೆ ಎಸ್ಟಿಮೇಟ್ ಕಮಿಟಿ ರಿಪೋರ್ಟ್ ಕೊಟ್ಟಿತ್ತು ಈ ಸದನದಲ್ಲಿ ಚರ್ಚೆಯಾಯಿತು ಸಭೆ ಸ್ವೀಕರಿಸಿತು ಸಾರ್ ನಾನು ಬೇರೆ ಕಮಿಟಿ ರಿಪೋರ್ಟ್‌ಗಳನ್ನೂ ಕೂಡ ಓದುತ್ತೇನೆ ಆದರೆ ಇವೂತ್ತು ಕೊಟ್ಟಿರುವ ರಿಪೋರ್ಟ್‌ನಲ್ಲಿ ಬಹಳ ಗಹನವಾದ ವಿಷಯಗಳಿವೆ ತತ್‌ಕ್ಷಣ ನೀವೇನಾದರೂ ಆಕ್ಷನ್ ತೆಗೆದುಕೊಳ್ಳದೇ ಹೋದರೆ ದುರಂತ ಕಾದಿದೆಯೆಂದು ಅವರು ಬಾವಿಸುತ್ತಿದ್ದಾರೆ ಸರ್ಕಾರ ಈ ಕಮಿಟಿ ಶಿಪಾರಸ್ಸುಗಳನ್ನು ಎಷ್ಟು ಒಪ್ಪಿದೆ, ಎಷ್ಟು ಒಪ್ಪಿಲ್ಲವೆನ್ನುವುದನ್ನು ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ ನಾವೇನೋ ಕಮಿಟಿ ಮೆಂಬರ್‌ಗಳು ಟಿ.ಎ, ಡಿ.ಎ, ಆಸೆಗೋ, ಟೂರ್‌ನ ಆಸೆಗೋ ಕೆಲಸ ಮಾಡುತ್ತೀದ್ದೇವೆ ಎನ್ನುವಂಥ ಭಾವನೆ ಇವೊತ್ತು ಬಂದುಬಿಟ್ಟಿದೆ ನಾವು ಕೊಡುವ ಯಾವ ವರದಿ ಇವೊತ್ತು ಕೂಲಂಕುಷವಾಗಿ ಸರ್ಕಾರದ ಲೆವೆಲ್‌ನಲ್ಲಿ ಚರ್ಚೆಯಾಗುತ್ತಿದೆ? ಯಾವ ವರದಿಗೆ ಮಹತ್ವ ಉಳಿದಿದೆ, ಯಾವ ವರದಿ ಮೇಲೆ ತಾವು ಕೈಗೊಂಡ ಕಾರ್ಯಕ್ರಮಗಳನ್ನು ಈ ಸಭೆಯಲ್ಲಾಗಲಿ ಅಥವಾ ಆಕ್ಷನ್ ಟೇಕನ್ ಏನು ಎಂಬುದನ್ನು ನಮ್ಮ ಸಭೆಗಳಲ್ಲಾಗಲಿ ಹೇಳಿದ್ದೀರಿ ಎಂಬುದನ್ನು ನಾನು ವಿಚಾರಣೆ ಮಾಡುವುದಕ್ಕೆ ಹೋದಾಗ we have a doubt Will it go before the eyes of the Government or not ಎನ್ನತಕ್ಕಂಥದ್ದು ನಿಮ್ಮ ದೃಷ್ಟಿಗೆ ಬೀಳುತ್ತದೆಯೋ ಇಲ್ಲವೋ ನೀವು ತಕ್ಷಣ ಕ್ರಮವನ್ನು ಜರುಗಿಸುತ್ತೀರೋ, ಇಲ್ಲವೋ, ಬಹಳ ಹಿಂದೆಯೇ ಸರಿಯಾದ ಕ್ರಮಗಳನ್ನು ಜರುಗಿಸಿದ್ದರೆ ಈ ದುರಂತಗಳು ಆಗುತ್ತಿರಲಿಲ್ಲವೆಂದು ಆ ಕಮಿಟಿ ಹೇಳಿರುವುದು ಸುಮಾರು 600 ರಿಂದ 700 ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ನಷ್ಟವಾಗಿದೆ ಅಧಿಕಾರಿಗಳೇ ಷಾಮೀಲಾಗಿದ್ದಾರೆ ನೀವೆ ಇದನ್ನು ಕಂಪನಿಗಳ ಜೊತೆ ಸೇರಿಕೊಂಡು ನೀವು ದಂಧೆಗಳನ್ನು ಮಾಡಿದ್ದೀರಿ ಎಂದು ಹೇಳಿ ರಿಪೋರ್ಟ್‌ನಲ್ಲಿ ಬಂದಿದ್ದರಿಂದ, ಈ ರಿಪೋರ್ಟ್ ಇವೊತ್ತು ಸಾರ್ವಜನಿಕವಾದದ್ದಾಗುತ್ತದೆ When it is tabled before the House, it will become a public document What is the view of the Assemble about such a scandal ಎಂದು ಯಾರಾದರೂ ಕೇಳಿದಾಗ we are answerable we cannot simply say it is for the Government to take action or neglect ಎನ್ನುವುದಕ್ಕಾಗುವುದಿಲ್ಲ ಆ ರೀತಿ ಇದ್ದರೆ ಇಲ್ಲಿ ಅದು ಟೇಬಲ್ ಆಗುವ

ಅಗತ್ಯವೇ ಇಲ್ಲ, he could have placed it before the Cabinet or concerned Minister ಇಲ್ಲಿ ಇದನ್ನು ಇಡುವ ಉದ್ದೇಶವೇ ನಮ್ಮ ಗಮನಕ್ಕೆ ಬರಬೇಕು, Any Committee is under the House It cannot be above the House It cannot be above the House ಈ ಹೌಸ್ ನಲ್ಲಿ ಕುಳಿತುಕೊಂಡು

ಶ್ರೀ ಎಂ ಪಿ ಪ್ರಕಾಶ್ - ನಾನು ಏನು ಹೇಳುತ್ತೇನೆಂದರೆ

ಶ್ರೀ ಜೆ ಸಿ ಮಾಧುಸ್ವಾಮಿ ನನಗೆ ಮಾತನಾಡಲು ಬಿಡಿ ಸಾರ್, I have heard you enough ಶಾಸನಬದ್ಧವಾಗಿ ಆಗಿರುವ ಯಾವುದೇ ಕಮಿಟಿ ಈ ಮನೆಯ ಅದೀನದಲ್ಲಾಗುವುದು ಮಾನ್ಯ ಅಧ್ಯಕ್ಷರೆ, ತಮ್ಮ ಅಧೀನದಲ್ಲಾಗುವುದು ಆ ಕಮಿಟಿಗಳು ಮಾಡಿದನ್ನು ಸರ್ಕಾರ ಇಂಪ್ಲಿಮೆಂಟ್ ಮಾಡುತ್ತದೆ ಎಂದು ಮಿನಿಸ್ಟಾರ್ ಹೇಳಿಬಿಡಲಿ It will be taken care from tomorrow I will take note of it and I will take action ಎಂದು ಹೇಳಿಬಿಡಲಿ ನಾನು ಆಗ ಇದರ ಚರ್ಚೆಗೆ ಹೋಗುವುದಿಲ್ಲ I am not here to take or waste the time of the House ಒಂದು ಗುರುತರವಾದ ರಿಪೋರ್ಟ್ ನಿಮ್ಮ ನಮ್ಮ ಮುಂದೆ ಸದನದಲ್ಲಿ ಟೇಬಲ್ ಆಗಿದೆ ಕುರಡರ ಹಾಗೆ ಆ ರಿಪೋರ್ಟ್‌ನ್ನು ತೆಗೆದುಕೊಂಡು ನಾವು ಎದ್ದು ಹೋಗಬೇಕೆ? ಅಥವಾ ಏನಾದರೂ ಅದರ ಮೇಲೆ ಮಾತನಾಡಬೇಕೆ ಎಂದು ನಮ್ಮನ್ನು ಕೇಳುವುದಕ್ಕೆ ಬಯಸುತ್ತೇನೆ ಸರ್ಕಾರದ ಕಡೆಯಿಂದ ಅವರು ಅಬ್ಜೆಕ್ಟ್ ಮಾಡಬಹುದು ಆದರೆ ತಾವು ನನಗೆ ಇದರ ಮೇಲೆ ಮಾತನಾಡಲು ಅವಕಾಶ ಕೊಟ್ಟರೆ ನಾನು ಮಾತನಾಡುತ್ತೇನೆ ಏಕೆಂದರೆ, it is for the House and State to decide, Sir ಇದೊಂದು ಪಬ್ಲಿಕ್ ಡಾಕ್ಯುಮೆಂಟ್ ಆಗಿದೆ ಇದರ ಮೇಲೆ ಚರ್ಚೆಯಾಗುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ ಸಾರ್ವಜನಿಕರಿಗೆ ಇದು ಪಾರ್ಟಿಗಳಲ್ಲ ಎಂದು ಹೇಳಿಕೊಳ್ಳಬೇಕಾಗುತ್ತದೆ ಅದರ ಬಗ್ಗೆ ತಾವೇನು ಹೇಳುತ್ತೀರಿ, ಪಾರ್ಲಿಮೆಂಟರಿ ಸಚಿವರು ಏನು ಹೇಳುತ್ತಾರೆ, ಆ ಗೈಡನ್ಸ್‌ನ್ನು ನಾನು ತೆಗೆದುಕೊಳ್ಳುತ್ತೇನೆ ಸಾರ್ I have done my job in telling you that there is a wonderful report 22 ಸಬೆಗಳನ್ನು ಮಾಡಿದ್ದಾರೆ ಬೇಕಾದಷ್ಟು ಬರೆದಿದ್ದಾರೆ ಎಲ್ಲೆಲ್ಲಿ ಅನ್ಯಾಯ

ಆಗಿದೆಯೆಂದು ಬರೆದಿದ್ದಾರೆ ಅದರ ಮೇಲೆ ಆಕ್ಷನ್ ತೆಗೆದುಕೊಳ್ಳವುದಕ್ಕೆ ಸರ್ಕಾರ ನೋಡಬೇಕು ಏಕೆಂದರೆ ಮೇಜರ್ ಆಗಿ ಆಡಳಿತ ನಡೆಸುವವರು ಕಾಗದದ ಮೇಲೆ ಓರ್ ಅಲಾಟ್ಮೆಂಟ್ ಆಗಿ ನಷ್ಟವಾಗಿದೆಯೆಂದು ಬರೆದಿದ್ದಾರೆ Not only officers are put ınto awkward postıon, ಕಾಗದಗಳನ್ನು ಇಟ್ಟುಕೊಂಡು ಎಂ, ಎಂ, ಎಲ್, ಲಕ್ಷಾಂತರ ಟನ್ ಓರ್ ಕೊಟ್ಟು ಇವೊತ್ತು ಈ ರಾಜ್ಯಕ್ಕೆ ನಷ್ಟವಾಗಿದೆಯೆಂದು ಈ ಕಮಿಟಿ ರಿಪೋರ್ಟ್‌ನಲ್ಲಿದೆ ಯಾರು ಈ ಬಗ್ಗೆ ಚರ್ಚೆ ಮಾಡೋದು? 1200 ರೂಪಾಯಿ ರೇಟ್ ಇರುವಾಗ 230 ರೂಪಾಯಿಗೆ ಕೊಡುತ್ತೇವೆಂದು ಅವರು ಬರೆದಿದ್ದಾರೆ ಯಾರದೋ ಒಂದು, 2006 ಕ್ಕೇ ಮುಗಿಯಬಾಕಾದ ಅಗ್ರಿಮೆಂಟ್‌ನ್ನು 2007 ರವರೆಗೆ ಎಕ್ಸ್‌ಟೆಂಡ್ ಮಾಡಿ ಕೈ ತಪ್ಪಿನಿಂದಾಗಿದೆ ಎಂದು ಒಬ್ಬ ಅಧಿಕಾರಿ ಹೇಳಿ, ಒಂದು ವರ್ಷ ಲೀಸ್ ಎಕ್ಸ್‌ಟೆಂಡ್ ಮಾಡಿದ್ದೇವೆ ಎಂದು ಅವರು ಹೇಳಿದ್ದಾರೆ ಬರೇ ಕೈತಪ್ಪಿನಿಂದ ಎಂದಿದ್ದಾರೆ ನಾನು ಇದೇ ರೇಟ್‌ಗೆ ಎಂ,ಎಸ್,ಐ,ಎಲ್ ನವರು ಕೇಳಿದರೆ ಅವರಿಗೆ ಕೊಡದೇ ಖಾಸಗಿಯವರಿಗೆ 413 ರೂಪಾಯಿಗೆ ಕೊಟ್ಟಿದ್ದಾರೆ ಎಂದು ರಿಪೋರ್ಟ್‌ನಲ್ಲಿ ಬರೆದಿದ್ದಾರೆ Is ıt not worth debatıng here? ಇದಕ್ಕಿಂತ ಉತ್ತಮವಾದ ಕೆಲಸವನ್ನು ನಾವು ಎಲ್ಲಿ ಏನು ಮಾಡಬೇಕು ಸಾರ್? ಕಾನೂನುಗಳನ್ನು ಅಡ್ಡಿ ಮಾಡಿಕೊಂಡು ಇಂಥವುಗಳನ್ನೆಲ್ಲಾ ನಾವು ಮುಚ್ಚಿ ಹಾಕುವುದಕ್ಕೆ ಹೋದರೆ, ನನಗೆ ಅರ್ಥವಾಗುವುದಿಲ್ಲ, For what reason we have been eleected and sıttıng here ? ತಾವೇ ನನಗೆ ಗೈಡ್ ಮಾಡಬೇಕು ಸಾರ್

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧು ಸ್ವಾಮಿಯಯವರು ಬಹಳ ಗುರುತರವಾದಂಥ ಒಂದು ಜವಾಬ್ದಾರಿಯುತ ಕೆಲಸವನ್ನು ಮಾಡಿದ್ದಾರೆ ನಾನೂ ಕೂಡ ಈಗಾಗಲೇ ಮಾನ್ಯ ಜ್ಞಾನೇಂದ್ರರವರು ಕೊಟ್ಟಿರತಕ್ಕಂಥ ವರದಿಯನ್ನು ಈಗ ತರಿಸಿಕೊಂಡು ನೋಡಿದೆ ಈಗ ನನ್ನ ಹತ್ತಿರ ಇದೆ ಇಲ್ಲಿ ಮುಖ್ಯಾಂಶಗಳು ಎಂದು ಹೇಳಿರತಕ್ಕಂಥದ್ದನ್ನು ಮೊದಲು ತೆಗೆದು ನೋಡಿದೆ ಅದನ್ನು ಇಲ್ಲಿ ಓದಲಿಕ್ಕೆ ಆಗಲಿಲ್ಲ ಅದರಲ್ಲಿ ಬಹಳ ಗುರುತರವಾದುದು ಇದೆ ನಾನು ಮಾನ್ಯ ಜ್ಞಾನೇಂದ್ರರವರ ಹತ್ತಿರ ಮಾತನಾಡುವಾಗ ಇದರ ಬಗ್ಗೆ ಚರ್ಚೆ ಮಾಡಿದೆ

ತಾವು ಬಹಳ ಉತ್ತಮವಾದಂತಹ ಕೆಲಸವನ್ನು ಮಾಡಿದ್ದೀರಿ ಇದನ್ನು ಮುಚ್ಚಿಡಬೇಕಾಂತಹ ವಿಚಾರ ಇಲ್ಲ ನನ್ನ ಆತಂಕ ಇಷ್ಟೆ, ಇಂತಹ ವಿಚಾರಗಳ § UÉS º ¾ÀÉ z ÉÆgÀ ÁVgÀ ÀvÀ ÀÄ ÁwÀ ÀÄ Rulings ಇವೆ Kaul and Shakdher ನಲ್ಲಿ ಇದೇ ವಿಚಾರವನ್ನು ಮಾತನಾಡುವಾಗ ಹೇಳುತ್ತಾರೆ, ಇಲ್ಲಿ Conference of Chairman of Public Accounts Committee in 1959ರಲ್ಲಿ Speaker ರವರು ಮಾತನಾಡುವಾಗ ಹೇಳುತ್ತಾರೆ

"A rambling discussion of the whole report tends to destroy the effectiveness of the recommendations of the Committee I am, therefore, of opinion that special point should be raised for discussion, more particularly those points where there is an unresolved difference of opinion between the Committee and the Government"

ಈಗ ಬಂದಿದ್ದು, ತಾವು ಹೇಳುತ್ತಿರುವುದು ನಿಜ ಇದರ ಬಗ್ಗೆ ಸರ್ಕಾರ ಒಪ್ಪಿ ಕ್ರಮ ಕೈಗೊಳ್ಳುವುದಾಗಿದ್ದಾರೆ, ಇದರ ಅಗತ್ಯವಿಲ್ಲವೆನ್ನುವ ಅಭಿಪ್ರಾಯವನ್ನು ಕೂಡ ತಾವು ವ್ಯಕ್ತ ಮಾಡಿದ್ದೀರಿ ಆದರೂ ಕೂಡ ಈ ವಿಚಾರಗಳು ಸಾರ್ವಜನಿಕರ ಗಮನಕ್ಕೆ ಬರಬೇಕು ನಾನು ಅದನ್ನು ಒಪ್ಪಿಕೊಳ್ಳುತ್ತೇನೆ ಏಕೆಂದರೆ ಯಾರ್‍ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆಂದು ಹೇಳಿ ಸಾರ್ವಜನಿಕರ ಗಮನಕ್ಕೆ ಬರದೆ ಇದ್ದರೆ, ಇವರು ಮಾಡಿದಂತಹ ಉತ್ತಮವಾದಂತಹ ಕೆಲಸಗಳಾಗಲಿ ಅಥವಾ ನಾವು ಮಾಡಿದಂತಹ ಅವ್ಯವಹಾರವಾಗಲಿ ಬಯಲಿಗೆ ಬೀಳದಿದ್ದರೆ ಅದು ತಪ್ಪಾಗುತ್ತದೆ ಆದ್ದರಿಂದ ಇಲ್ಲಿ ಪ್ರಶ್ನೆ ಬಂದಿರುವಂತಾದ್ದು ಇಷ್ಟೇ, ತಾವು ಎತ್ತಿರುವಂತಹ ವಿಷಯ ಬಹಳ ಮಹತ್ವಪೂರ್ಣವಾದುದು ಆದರೆ ಇದರ ಬಗ್ಗೆ ಸಂಪೂರ್ಣವಾಗಿ ಹೊಸ ಸಂಪ್ರದಾಯ ಸೃಷ್ಟಿಯಾಗುವುದು ಬೇಡ ಒಮ್ಮೊಮ್ಮೆ ಈ ಸದನದಲ್ಲಿ ಹಿಂದೆ 1982ರಲ್ಲಿ ಮಾಣಿಕ್‌ರಾವ್ ಪಾಟೀಲ್‌ರವರಿಗೆ ಸಿಮೆಂಟ್ ಹಗರಣಕ್ಕೆ ಸಂಬಂಧಪಟ್ಟಂತೆ ಒಂದು

ಸಂಧರ್ಭ ಬಿಟ್ಟರೆ ಬೇರೆ ಯಾವುದೇ ಸಂಧರ್ಭದಲ್ಲಿ ಇಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲ ಅದೂ ಕೂಡ observations ಮಾಡಿದ್ದಾರೆ ಮಾನ್ಯ ಅಧ್ಯಕ್ಷರೆ, ಆ observations ಅನ್ನು ಇಲ್ಲಿ ಓದಬೇಕಾಗಿರುವುದು ಬೇಕಾಗಿಲ್ಲ ಆ ದೃಷ್ಟಿಯಿಂದ, ಹೇಗೂ ಈಗ budget ಬಂದಿದೆ ಈಗ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವುದಕ್ಕೆ ಅವಕಾಶವಿಲ್ಲ ತಾವು ನಿಯಮ 234ರಲ್ಲಿ ಅವರಿಗೆ ಅವಕಾಶ ಕೊಟ್ಟರೆ ಬೇರೆಯವರು ಚರ್ಚೆಯಲ್ಲಿ ಸೇರಿಕೊಳ್ಳುವುದಕ್ಕೆ ಬರುವುದಿಲ್ಲ

ಶ್ರೀ ಜಿ ವಿ ರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು ವಿಚಾರವನ್ನು admission ಮಾಡುತ್ತಿಲ್ಲ ನಾನೇನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ನೀವು ಈ ವಿಚಾರವನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿರುವಂತಹ ವಿಚಾರ ಏನಿದೆ, ಅದರ ಬಗ್ಗೆ ನಾನು ಮಾತನಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಇಲ್ಲ ಅದು ಹಾಗೇ ಬರುವುದಿಲ್ಲ ಇದು ಶೂನ್ಯ ವೇಳೆ ಇದ್ದ ಹಾಗ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದು ಶೂನ್ಯವೇಳೆ ಅಲ್ಲ

ಶ್ರೀ ಎಂ ಪಿ ಪ್ರಕಾಶ್ 234 ನಿಯಮ ಹೇಗಿದೆ ಎಂದರೆ, ಈ ನಿಯಮದ ಅಡಿಯಲ್ಲಿ ಯಾರು ವಿಷಯ ಎತ್ತಿರುತ್ತಾರೆ, ಅವರೇ ಮಾತನಾಡಬೇಕು others interfere, Sir, that is the Rules

ಶ್ರೀ ಜಿ ವಿ ಶ್ರೀ ರಾಮರೆಡ್ಡಿ We are not interfering I am only referring the rules

ಅಧ್ಯಕ್ಷರು ಸಾಮಾನ್ಯವಾಗಿ ನಮ್ಮ PAC ಅಥವಾ PUC ಆಗಿರಬಹುದು, ಅನೇಕ report ಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತದೆ ಅವು ಅಲ್ಲಿ ಇಲ್ಲಿ discuss ಆಗುವುದಿಲ್ಲ ಉದಾಹರಣೆಗೆ Mysore Lamps ಸಂಸ್ಥೆ ಬಗ್ಗೆ ಎಂತೆಂತಹ ಹಗರಣಗಳು ಆಗಿವೆ ಎಂದು Public Undertaking Committee ಕೊಟ್ಟಿರತಕ್ಕಂಥ ಇದೆ ಅದರ ಜೊತೆಗೆ

ಲೋಕಾಯುಕ್ತದವರು ಕೊಟ್ಟಿರತಕ್ಕಂಥಾದ್ದು report ಇದೆ ಆದರೆ ವಿಚಾರದಲ್ಲಿ ಏನೂ ಆಕ್ಷನ್‌ಗಳು ಆಗಿಲ್ಲವೆನ್ನುವ ಭವನೆ ಕೂಡ ಇದೆ ಆದ್ದರಿಂದ ಅವರು ಹೇಳಿದರಲ್ಲ, ಸರ್ಕಾರ ಒಪ್ಪುವುದಾದರೆ ಅಗತ್ಯವಿಲ್ಲವೆಂದು ಸರ್ಕಾರ ಇದನ್ನು ಒಪ್ಪಿ, ಇದನ್ನು complete implement ಮಾಡುತ್ತೇವೆ ಯಾರ್ಯಾರು ಹಿರಿಯ ಅಧಿಕಾರಿಗಳು ಪಾಲುದಾರರಾಗಿದ್ದಾರೆಂದು ಹೇಳಿದ್ದಾರೆ ಆ ಹಿರಿಯ ಅಧಿಕಾರಿಗಳೆಲ್ಲರನ್ನೂ ಮನೆಗೆ ಕಳುಹಿಸಿ! ಕಳುಹಿಸುತ್ತಿರಾ? ಏನಾಗಿದೆಯೆಂದರೆ ಸಂಪ್ರದಾಯಗಳನ್ನು ಹಾಕಿಕೊಂಡಿದ್ದಾರೆ ಆ ಸಂಪ್ರದಾಯ ಕಳ್ಳರ ರಕ್ಷಣೆ ಆಗುವಂತಹ ರೀತಿಯಲ್ಲಿ ಆಗಿಬಿಟ್ಟಿದೆ ನನಗೆ ಈ ಮಾತನ್ನು ಹೇಳುವುದಕ್ಕೆ ನೋವಾಗುತ್ತದೆ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವರ ರಕ್ಷಣೆ technical ಆಗಿ ಮಾಡಿಕೊಳ್ಳುವಂತಾದ್ದಾಗಿದೆ ಆ ಕಾರಣದಿಂದ ಈ ಪ್ರಜಾಪ್ರಭುಗಳಿಗೆ ಅರ್ಥವಾಗಲಿ, ತಪ್ಪೇನಿದೆ, ಇಲ್ಲದೆಇದ್ದರೆ ನೀವು ಹೇಳಿ, ನಮ್ಮ ಸಮಿತಿ ಜವಾಬ್ದಾರಿಯಿಂದ ಈ ಕೆಲಸ ಮಾಡಿದೆ ಆ ಸಮಿತಿಯ ವರದಿಯನ್ನು in toto ನಾವು implement ಮಾಡುತ್ತೇವೆಂದು ಹೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಿಯಮ 234 ಅಡಿಯಲ್ಲಿ ಬೇರೆಯವರಿಗೆ ಅವಕಾಶವಿಲ್ಲವೆಂದು ಸ್ಪಷ್ಟವಾಗಿ ಹೇಳಯತ್ತಾರೆ

"The Speaker may after considering the state of business allot such time as may be compatible with the public interest for the discussion of the report of the Committee '

Allow ಮಾಡಿ ಎಂದು ನಾವು ಕೇಳುತ್ತೇವೆ ಅಷ್ಟೇ Allow ಮಾಡಿ ಎಂದು ಕೇಳುವುದಕ್ಕೆ ನಮಗೆ ಅಧಿಕಾರ ಇಲ್ಲವೇ? I can support

ಶ್ರೀ ಎಂ ಪಿ ಪ್ರಕಾಶ್· ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಮಾತ್ರ ಈ ಬಗ್ಗೆ Allow ಮಾಡಿ ಎಂದು ಕೇಳಿಕೊಳ್ಳಬಹುದು ಅದಕ್ಕೆ ಅಧ್ಯಕ್ಷರು ಸಮಾಯಾವಕಾಶ ಕೊಟ್ಟಾಗ ತಾವು ಅದರಲ್ಲಿ ಭಾಗವಹಿಸಬಹುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದನ್ನೇ ನಾನು ಕೇಳಿತ್ತಿರುವುದು

ಶ್ರೀ ಎಂ ಪಿ ಪ್ರಕಾಶ್ ಅದರೆ ಈ ಹಂತದಲ್ಲಿ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಬೆಳಿಗ್ಗೆ rules ತೆಗೆದು ತೋರಿಸಿ notice ಕೊಟ್ಟೆನು ನಾನು Kaul and Shakdher ಓದಿಕೊಂಡು ಬಂದಿದ್ದೆ British Parliment ನಲ್ಲಿ ಕೂಡ ಏನು ನಡೆದಿದೆ ಎಂದು ಓದಿಕೊಂಡು ಬಂದಿದ್ದೇನೆ ನನ್ನನು ಅವರು ಮಾತನಾಡುವುದಕ್ಕೆ ಬಿಟ್ಟರೆ ಇನ್ನೂ ವ್ಯಾಪಕವಾಗಿ ಮಾತನಾಡುತ್ತೇವೆ See, this is a very important issue,Sir, ಎರಡನೆಯದು ಇದು ಬಹಳ urgent ಇದೆ ನಾಳೆ ಬೆಳಿಗ್ಗೆಯಾದರಾದರೂ ಕೂಡ ನೀವು ಅಲ್ಲಿ ಹೋಗುತ್ತಿರುವುದನ್ನು ನಿಲ್ಲಿಸಬಹುದೆಂದು ಅವರು ಬರೆದಿದ್ದಾರೆ ತಕ್ಷಣ ಕ್ರಮ ತೆಗೆದುಕೊಂಡರೆ ನಿಮ್ಮ ರಾಜ್ಯ ಉಳಿಯುತ್ತದೆ ಇಲ್ಲದಿದ್ದರೆ ಮುಳಗಿ ಹೋಗುತ್ತದೆಂದು ಬರೆದಿದ್ದಾರೆ ನೀವು ತಕ್ಷಣ action ತೆಗೆದುಕೊಳ್ಳದೇ ಹೋದರೆ MML ಮುಚ್ಚಿ ಹೋಗುತ್ತದೆಂದು ಬರೆದಿದ್ದಾರೆ Donations ಕೊಟ್ಟಿರುವುದು, ನೀವು loss ನಲ್ಲಿ ಇದ್ದೀರಿ ಎಂದು ಒಂದು ಕಡೆ wage ಕೊಡಲಾರದಂತಹ ಸಂಸ್ಥೆಯವರು, ಯಾರ consideration ಮೇಲೆ 3 ಕೋಟಿ, 5ಕೋಟಿ Charitable Institutions donation ಕೊಟ್ಟಿದ್ದೀರಿ ಯಾವ distinction ಇದೆ ಎಂದು question ಮಾಡಿದ್ದಾರೆ The very existence of the MML is in Stake ಅಂತ ಅವರು ಬರೆದು ನಿಮಗೆ ಬರುವಂತಹ ಸಾವಿರಾರು ಕೋಟಿ ರೂಪಾಯಿ ಎಂದರೆ 700 ಕೋಟಿ ಎನ್ನುವ ಇಂಗಿತವನ್ನು ಅವರು ವ್ಯಕ್ತ ಪಡಿಸಿದಾಗ ಇದಕ್ಕಿಂತ ಒಳ್ಳೆಯ ಚರ್ಚೆ ಸಭೆಯಲ್ಲಿ ಇನ್ನಾವುದು ಆಗಬೇಕು ಮಾನ್ಯ ಅಧ್ಯಕ್ಷರು ತಾವು ಬಹಳ ಖ್ಯಾತಿ ಪಡೆದುಕೊಳ್ಳುತ್ತೀರಿ, ಇದರ ಬಗ್ಗೆ ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು ಯಾರಿಗೆ ಖ್ಯಾತಿ ಬೇಕಾಗಿಲ್ಲ ನನ್ನ ಆಸೆ ಏನೆಂದರೆ ಸರ್ಕಾರಕ್ಕೆ ಖ್ಯಾತಿ ಬರಬೇಕು ಆದ್ದರಿಂದ ಮಾನ್ಯ ಸಚಿವರು in toto ನಾವು ಒಪ್ಪುತ್ತೇವೆಂದರೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, 234 ಕೆಳಗಡೆ debate

ಆಗಿರುವುದು ಬಹಳ ಕಡಿಮೆ ದಯಮಾಡಿ ಅವಕಾಶ ಕೊಡಿ

ಅಧ್ಯಕ್ಷರು ಅದನ್ನು ಒಪ್ಪಿಕೊಳ್ಳುತ್ತೇನೆ, ಅದು ಒಂದೇ ಪ್ರಕರಣದಲ್ಲಿ ಎಂದು ಹೇಳಿದ್ದಾರೆ 1982ನಲ್ಲಿ ಆಗಿದೆ

ಶ್ರೀ ಜೆ ಸಿ ಮಾಧುಸ್ವಾಮಿ Parliment ಅಥವಾ ಯಾವುದೇ Assemble ನಲ್ಲಾಗಲ್ಲಿ 234 ಕೆಳಗಡೆ notice ಕೊಟ್ಟು ಚರ್ಚೆಯಾಗಿರುವುದು ಕಡಿಮೆ ದಯಮಾಡಿ ಅವಕಾಶ ಕೊಡಿ

ಅಧ್ಯಕ್ಷರು 1982ನಲ್ಲಿ ಚರ್ಚೆ ಆಗಿದೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಮಾಧುಸ್ವಾಮಿಯವರೆ, ಮಾನ್ಯ ಪ್ರಕಾಶ್‌ರವರು ಕೂಡ -ಬಹಳ ನೇರವಾಗಿ ಹೇಳಿದ್ದಾರೆ ಅದನ್ನು ನಾವು ಏಕೆ ಚರ್ಚೆ ಮಾಡುವುದಿಲ್ಲವೆಂದರೆ ಅವರು ಕೊಟ್ಟಂತಹ ವರದಿಯನ್ನು ಸರ್ಕಾರ ಸಂಪೂರ್ಣವಾಗಿ ಒಪ್ಪುತ್ತದೆ ಎನ್ನುವ ವಿಚಾರ ವಿದ್ದಾಗ ಅದರ ಚರ್ಚೆ ಬೇಕಾಗಿಲ್ಲವೆಂದು ಹೇಳಿದರು ಈಗ ಮಾನ್ಯ ಅಧ್ಯಕ್ಷರು ಅದನ್ನೆ ಕೇಳುತ್ತಿರುವುದನ್ನು ಇದನ್ನು ಸಂಪೂರ್ಣವಾಗಿ ಒಪ್ಪಿ ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದರೆ ಚರ್ಚೆ ಬೇಕಾಗಿಲ್ಲ ಇಲ್ಲದಿದ್ದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ

ಶ್ರೀ ಕೆ ಶ್ರೀನಿವಾಸಗೌಡ ಈಗ ನೀವು ಈ ವರದಿಯನ್ನು ಒಪ್ಪಿಕೊಂಡಿದ್ದೀರಿ

ಶ್ರೀ ಎಂ ಪಿ ಪ್ರಕಾಶ್ ಒಪ್ಪಿಕೊಂಡಿಲ್ಲ, table ಆಗಿದೆ

ಶ್ರೀ ಕೆ ಶ್ರೀನಿವಾಸಗೌಡ ಇದರ ಬಗ್ಗೆ ಚರ್ಚೆಯಾಗದೇ ನೀವು ಇದನ್ನು ಒಪ್ಪಿಕೊಂಡರೆ in toto ಅವರ ಮೇಲೆ ಕ್ರಮವನ್ನು ಜರುಗಿಸುತ್ತೇವೆಂದು ಹೇಳಿದರೆ, ಇಲ್ಲಿ ಚರ್ಚೆಯಾಗುವ ಅಗತ್ಯವಿಲ್ಲ ಸರ್ಕಾರಕ್ಕೆ ಎಲ್ಲ ಅಧಿಕಾರ ಇದೆ, ಇದರ ಪ್ರಕಾರ ಯಾವ ಅಧಿಕಾರಿಯನ್ನು ಏನು ಬೇಕಾದರೂ ಮಾಡಬಹುದು ನೀವು ಆ ದಿಕ್ಕಿನಲ್ಲಿ ಚಿಂತನೆ ಮಾಡಿದರೆ

ನಾವು ಚರ್ಚೆ ಮಾಡುವ ಅಗತ್ಯವಿಲ್ಲ ಇಲ್ಲದೆ ಇದ್ದರೆ ಚರ್ಚೆ ಮಾಡ ಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಈಗ ತಾವೇ ಹೇಳಿರುವ ಪ್ರಕಾರ ಕಳ್ಳರು ಎನ್ನುವ ಪದವನ್ನು ಉಪಯೋಗಿಸಿದಿರಿ ಆ ಪದವನ್ನು ಅವರೇ ಉಪಯೋಗಿಸಿರುವುದು, ನಾವೇನು ಉಪಯೋಗಿಸುತ್ತಿಲ್ಲ ಕಳ್ಳರನ್ನು ರಕ್ಷಣೆ ಮಾಡುವಂತಹ ವಿಚಾರ ಬೇಡ ಈ ರೀತಿ ಕೊಟ್ಟಿರುವಂತಹ ವರದಿಗಳ ಬಗ್ಗೆ ಬಹಳ ಗುರುತರವಾದಂತಹ ಅನೇಕ ವಿಚಾರಗಳನ್ನು ಹೇಳಿದ್ದಾರೆ ಇದರ ಬಗ್ಗೆ ಚರ್ಚೆ ಮಾಡದೇ ಖಾಲಿ ವಸ್ತುವಾಗಿ ಇಲ್ಲಿ ಕುಳಿತುಕೊಳ್ಳವುದಾದರೆ, ಇದು ಬೇಕಾಗಿಲ್ಲ ಸದನ ಸಮಿತಿಗಳು ಕೊಟ್ಟಂತಹ ವರದಿಗಳು ಏನಿವೆ ಒಂದೂಂದು ವರದಿಯನ್ನು ಬಹಳ ಅಮೂಲ್ಯವಾಗಿ ಕೊಟ್ಟಿದ್ದಾರೆ ಅನೇಕ ವರದಿಗಳಿವೆ ನಮ್ಮ ಸಮಿತಿಯ ಮೊದಲನೇ ವರದಿ ಕೊಟ್ಟಿದ್ದೇವೆ ಅದು ಏನಾಗಿದೆ? ಎಲ್ಲೋ ಒಂದು ಕಡೆ ಮೂಲೆಯಲ್ಲಿ ಕುಳಿತಿದೆ ಅದರ ಬಗ್ಗೆ ಕೂಡ ಚರ್ಚೆಯಾಗಿಲ್ಲ ಸಮಿತಿಗಳು ವರದಿಗಳನ್ನು ಕೊಡುವಂತಹ ಉದ್ದೇಶವೇನು? ಆ ಸಮಿತಿ ಏಕೆ ನೇಮಕವಾಯಿತು? ಆ ಸಮಿತಿ ಏಕೆ ನಡೆಯಬೇಕು? ಸಮಿತಿ ಸಂಪೂರ್ಣವಾಗಿ ಪರಿಶೀಲನೆ ಮಾಡಿ ವರದಿ ಕೊಡುತ್ತದೆ ಇಲ್ಲಿ ವರದಿಯನ್ನು ಓದಿದರೆ ಭಯಾನಕವಾಗಿದೆ, ಗಂಭೀರವಾಗಿದೆ ಇದರ ಬಗ್ಗೆ ತಾವು, ಈ ವರದಿಯನ್ನು ಸರ್ಕಾರ ಯಥಾವತ್ತಾಗಿ ಒಪ್ಪಿಕೊಳ್ಳುವುದಾದರೆ, ಒಂದೇ ಮಾತಿನಲ್ಲಿ ಹೇಳಿದಿರಿ ನಿಮ್ಮ ಮಾತಿನ ಇಂಗಿತ ನೋಡಿದರೆ ಇದು ಚರ್ಚೆಯಾಗಬೇಕು ಎನ್ನುವ ಉದ್ದೇಶ ಇದೆ ಆ ದೃಷ್ಟಿಯಿಂದ ಇದರ ಬಗ್ಗೆ ಚರ್ಚೆಯಾಗದೇ ಇದ್ದರೆ ಸಮಿತಿಗಳಿಗೂ ಗೌರವ ಬರುವುದಿಲ್ಲ ಸಮಿತಿಗಳು ಕೊಟ್ಟಂತಹ ವರದಿಗಳಿಗೂ ಬರುವುದಿಲ್ಲ ಹಾಗಾದರೆ ಆ ವರದಿಯನ್ನು ಇಲ್ಲಿ ಏಕೆ ಕೊಡಬೇಕು? ಅದನ್ನು ತೆಗೆದುಕೊಂಡು ಹೋಗಿ ನಿಮ್ಮ Notice office ಇದೆಯಲ್ಲ ಅಲ್ಲಿ ಇಟ್ಟುಬಿಡುವುದು ಆ ವರದಿ ಈ ಸದನದಲ್ಲಿ ಬರುವುದು ಬೇಕಾಗಿಲ್ಲ ಸದನಕ್ಕೆ ಬಂದರೆ ಇದು ಸಮಗ್ರವಾಗಿ ಚರ್ಚೆಯಾಗಬೇಕು ಚರ್ಚೆಯಲ್ಲಿ ಬೆಳಕು ಚೆಲ್ಲಿ ನಾವು ಸರ್ಕಾರಕ್ಕೆ ಕಾನೂನು ಕ್ರಮವನ್ನು ಜರುಗಿಸಿ ಎಂದು ಹೇಳಬೇಕಾಗುತ್ತದೆ ಇದರ ಚರ್ಚೆ ಅವಶ್ಯಕತೆ ಇದೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳ ಪ್ರಕಾರ

ಸದನ ನಡೆಯಬೇಕಾಗುತ್ತದೆ ಇಲ್ಲದಿದ್ದರೆ ನಾವು ನಿಯಮಾವಳಿಗಳನ್ನು ಏಕೆ ರಚನೆ ಮಾಡಿಕೊಳ್ಳಬೇಕು ಹೇಳಿ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾಗಿರುವಂತಹ ವಿಷಯ ಇದೆ

ಅಧ್ಯಕ್ಷರು ನೀವು member ಏನ್ರಿ, ನೀವು ಹೇಗೆ ಮಾತನಾಡುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ ನಿಯಮ 234 ಕೆಳಗಡೆ ಮಾನ್ಯ ಮಾಧುಸ್ವಾಮಿಯವರು ನೋಟಿಸ್ ಕೊಟ್ಟಿದ್ದಾರೆ

ಅಧ್ಯಕ್ಷರು: ನಿಯಮಾವಳಿಗಳು ಏನಿದೆ ಎಂದು ಹೇಳುತ್ತಾರೆ, ನೋಡೋಣ

ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರು ಏನು ನಿರ್ಧಾರ ಬೇಕಾದರೂ ಕೈಗೊಳ್ಳಬಹುದು ಎಂದರೆ ಏನು ಮಾನ್ಯ ಅಧ್ಯಕ್ಷರಿಗೆ ಸಂಪೂರ್ಣವಾದಂತಹ ಪರಮಾಧಿಕಾರ ಇದೆ ಎಂದು ಅರ್ಥ ನಾವು ಕಾನೂನು ಪ್ರಕಾರ ಹೇಳಿದ್ದೇವೆ ತಾವು ಅಧ್ಯಕ್ಷರು ಏನು ಬೇಕಾದರೂ ನಿರ್ಧಾರ ಕೈಗೊಳ್ಳಬಹುದೆಂದರೆ ಏನು? ಅಂದರೆ ಅಧ್ಯಕ್ಷರಿಗೆ ಸಂಪೂರ್ಣವಾದ ಪರಮಾಧಿಕಾರವಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಅಧ್ಯಕ್ಷರನ್ನು ಹೋಗಲಿಲ್ಲ, ಇದನ್ನು ಸದನದಲ್ಲಿ ಚರ್ಚೆ ಮಾಡಲು ಅನುಮತಿ ಕೇಳುತ್ತಿದ್ದೇವೆ ನಾವು ಚರ್ಚೆಗೆ ಹೋಗಲಿಲ್ಲ, ಇದನ್ನು ಸದನದಲ್ಲಿ ಇಟ್ಟಾಗ, ಇದು ಸದನದ ವಸ್ತುವಾಗುತ್ತದೆ ಅದಕ್ಕೆ ನಾವು ಚರ್ಚೆಗೆ ಅವಕಾಶ ಮಾಡಿ ಕೊಡಿಯೆಂದು ನಾವು ಮಾಡುತ್ತಿದ್ದೇವೆ ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಜಿ ವಿ ಶ್ರೀರಾಮರೆಡ್ಡಿಯವರೆ, ಅಧ್ಯಕ್ಷರು ಯಾವಾಗಲಾದರೂ ಅಡ್ಡಿ ಬಂದರೆ ತಾವು ಈ ಮಾತನ್ನು

ಹೇಳಬಹುದು ಅವರು ಯಾವಾಗಲೂ ಇಂಥ ಚರ್ಚೆಗೆ ಅವಕಾಶ ಮಾಡಿ ಕೊಟ್ಟೆ ಕೊಡುತ್ತಾರೆ ಅದನ್ನು ಬಿಟ್ಟು ಇಷ್ಟೊಂದು ವಾದ ಏಕೆ ಬೇಕು?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದನ್ನು ಅವರು ಹೇಳಲಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಹಿರಿಯ ಸದಸ್ಯರೆಲ್ಲರೂ ಪ್ರಸ್ತಾಪ ಮಾಡಿದಂತೆ, ಎಲ್ಲಾ ವರದಿಗಳನ್ನು ಚರ್ಚೆ ಮಾಡಿರುವಂಥಾ ಉದಾಹರಣೆಗಳು ಇದೆ ಬೇಕಾದಷ್ಟು House Committee ಗಳು ಇವೆ ಆ ಕಮಿಟಿ report ಗಳು ಇಲ್ಲಿ ಚರ್ಚೆಯಾಗು ವುದಿಲ್ಲ 1947ರ ನಂತರ ಒಂದು ಸಾರಿ ಲೋಕಸಭೆಯಲ್ಲಿ ಚರ್ಚೆಯಾಗಿದೆ ಅದೇ ರೀತಿಯಾಗಿ ಈ ಸದನದಲ್ಲಿ ಇಷ್ಟು ವರ್ಷದ ಇತಿಹಾಸದಲ್ಲಿ ಒಂದು ಬಾರಿ ಮಾತ್ರ ಸಿಮೆಂಟ್ ಹಗರಣದ ಬಗ್ಗೆ, ಚರ್ಚೆಯಾಗಿದೆ ಇದು ಏಕೆ ಚರ್ಚೆಯಾಗಬಾರದೆಂದರೆ, ಅದರ ಮಹತ್ವ ಹೊರಟು ಹೋಗುತ್ತದೆ ಆ ಮಹತ್ವ ಹೊರಟು ಹೋಗುವುದರಿಂದ ಅದನ್ನು ಚರ್ಚೆ ಮಾಡಬಾರದೆಂಬ ನಿರ್ಣಯವನ್ನು ಕೊಡ Shakdher & Kaul ರವರು ಹೇಳುತ್ತಾರೆ 'Although it is open to the Lok Sabha ' ಇಲ್ಲಿ ನಿಮಗೆ ಅಧಿಕಾರವಿಲ್ಲವೆಂಬ ಮಾತನ್ನು ಅವರು ಹೇಳುವುದಿಲ್ಲ 'Although it is open to the Lok Sabha to discuss the reports of the Committee, such discussion is seldom held 'ಇದು ಆಗದೇ ಇರುವಂಥಾದ್ದು ಇಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಆಗಾಗ ಮಾಡಬಹುದೆಂದು ಇದೆ seldom ಅಂದರೆ, ಅಪರೂಪ, ಆಗಾಗ ಚರ್ಚೆ ಮಾಡುತ್ತಾರೆ, it is not ಸಂಪೂರ್ಣ

ಶ್ರೀ ಎಂ ಪಿ ಪ್ರಕಾಶ್ ಅದಕ್ಕಾಗಿಯೇ ನಾನು ಹೇಳಿದೆ ಮೊದಲನೆಯ ಹಾಗೆ ಇದೆ ಒಂದೇ ಒಂದು ಉದಾಹರಣೆ 1947ತ ನಂತರ ಲೋಕಸಭೆಯಲ್ಲಿ ಒಂದು ಬಾರಿ ಇಂಥ ಚರ್ಚೆಯಾಗಿರುವಂಥಾದ್ದು ಈ ಸದನದಲ್ಲಿ ಮಾಣಿಕ್ ರಾವ್ ರವರ ಸಿಮೆಂಟ್ ಹಗರಣಕ್ಕೆ ಸಂಬಂದಪಟ್ಟಂತೆ ಒಂದು ಬಾರಿ ಚರ್ಚೆಯಾಗಿರುವಂಥಾದ್ದು ಈ ಎರಡು ಬಾರಿ ಬಿಟ್ಟು

ಸದನದಲ್ಲಿ ಯಾವುದೇ ಸಂದರ್ಭದಲ್ಲಿ ಚರ್ಚೆಯಾಗಿಲ್ಲ ಅಂದರೆ ವರದಿಗಳ ಬಗ್ಗೆ ಚರ್ಚೆಯಾಗಿಲ್ಲ ಆದುದರಿಂದ ಬಗ್ಗೆ ನಿರ್ಧಾರ ಮಾಡಬಾರದೆಂದು ಅಲ್ಲ ಇದಕ್ಕೆ ಅಧಿಕಾರವಿದೆ, ಇಲ್ಲವೆಂಬ ಮಾತನ್ನು ನಾನು ಹೇಳುವುದಿಲ್ಲ ಆದರೆ ಅನೇಕ ವಿಷಯಗಳನ್ನು ಅವರು ಏಕೆ ಹೇಳುತ್ತಾರೆಂದರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಹಾಗಾದರೆ UKP ತುಂಡು ಗುತ್ತಿಗೆಯದು ಎಲ್ಲ Report ಬಂದಮೇಲೆ, ಮಾನ್ಯ ವೈಜನಾಥ್ ಪಾಟೀಲ್ ಅವರೆಲ್ಲರೂ ಡಿಸ್ಕಷನ್ ಮಾಡಿ, ಅದು ಲೋಕಾಯುಕ್ತಕ್ಕೆ refer ಆಯಿತು

ಶ್ರೀ ಎಂ ಪಿ ಪ್ರಕಾಶ್ ಚರ್ಚೆಯಾಗಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ· ಅದು ಸಾಕಷ್ಟು ಚರ್ಚೆಯಾಗಿದೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈಗ ಅದು ನಿಯಮ 234ರ ಅಡಿಯಲ್ಲಿ ಬರಲಿಲ್ಲ ಬಜೆಟ್ ವಿಚಾರದಲ್ಲಿ ಚರ್ಚೆ ಬಂದಾಗ ಆಗಿದೆ ಅದು ನಿಯಮ 234ರ ಅಡಿಯಲ್ಲಿ ಬಂದಿಲ್ಲ, ತಾವು ಬೇಕಾದರೆ ನೋಡಬಹುದು

ಶ್ರೀ ಜೆ ಸಿ ಮಾಧುಸ್ವಾಮಿ ಆಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ವಿರೋಧಪಕ್ಷದ ನಾಯಕರಾಗಿದ್ದರು ಅವರೇ raise ಮಾಡಿದರು, ಬಜೆಟ್ ಮೇಲೆ ಅದನ್ನು ಮಾತನಾಡಲಿಲ್ಲ

SRI M.P.PRAKASH: Sir, it is left to the House I am only submitting that hitherto no such practice has taken place and seldom it has been discussed on the matters of the report Suppose the reports are to be discussed, then it will undermine the dignity of that particular Committee's report Therefore, ನಾನು ಕೇಳುವಂಥಾದ್ದು ಇಷ್ಟೆ ಇದನ್ನು ಒಪ್ಪಬೇಕು, ಒಪ್ಪಬಾರದು, ಎಂಬ ಬಗ್ಗೆ ಸರ್ಕಾರದಲ್ಲಿ ನಿರ್ಧರಿಸಲು ಅಧಿಕಾರ ಇದೆ ಇದಕ್ಕೆ ಒಂದು ಪ್ರೊಸಿಜರ್

ಇದೆ

ಅಧ್ಯಕ್ಷರು ನನ್ನದು ಒಂದೇ ಪ್ರಶ್ನೆ, ಏನೆಂದರೆ ನಾವು ಇಲ್ಲಿ ಡಿಸ್‌ಕಸ್ ಮಾಡಿದರೆ, ಆ dignity of that particular Committee ಎಂದು ಹೇಳುತ್ತಿದ್ದೀರಿ, ಅದು ಹೇಗೆ?

SRI M.P PRAKASH: I will leave it to you Sir

SRI G V SRIRAMA REDDY by discussing the report, the dignity of that particular will be enhanced Otherwise, the dignity of the Committee will be brought down, if we won't discuss it

ಶ್ರೀ ಎಂ ಪಿ ಪ್ರಕಾಶ್ ಆಗಲಿ ಬಿಡಿ, ನಮ್ಮದು ಏನು ಇಲ್ಲ

ಶ್ರೀ ಕೆ ಜಯಪ್ರಕಾಶ್ ನಾವು ಕಮಿಟಿಯಲ್ಲಿ ಕುಳಿತು ಚರ್ಚೆ ಮಾಡಿ, ಏನೇನು ಅವ್ಯವಹಾರಗಳು ಆಗಿದೆಯೆಂಬ ಬಗ್ಗೆ ಚರ್ಚಿಸಿ ನಾವು ಒಳ್ಳೆಯ ವರದಿಯನ್ನು ಕೊಡುತ್ತಿದ್ದೇವೆ ಆ ವರದಿಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕೊಡುತ್ತೇವೆ ಅದರಲ್ಲಿ ಯಾವುದು ಸರ್ಕಾರ ತೀರ್ಮಾನ ತೆಗೆದುಕೊಂಡು ಕ್ರಮ ತೆಗೆದುಕೊಂಡಿದೆಯೆಂಬ ಬಗ್ಗೆ ಸರ್ಕಾರ ಇದುವರೆಗೂ ಆಗಿರುವ ಪಟ್ಟಿಯನ್ನು ಕೊಟ್ಟರೆ, ನಂಬಿಕೆ ಇರುತ್ತದೆ ಇಲ್ಲಿಯವರಗೂ ಸಮಿತಿಯ ವರದಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂಬುದು ನಮಗೆ ಗೊತ್ತಿಲ್ಲ ನಾವು ವರದಿಗಳನ್ನು ಮಾತ್ರ ತಮ್ಮ ಮುನೇಖಾ ಸರ್ಕಾರಕ್ಕೆ ಕೊಡುತ್ತಿದ್ದೇವೆ ಆದರೆ ಕ್ರಮ ತೆಗೆದುಕೊಂಡಿರುವ ಬಗ್ಗೆ ಈ ಸದನಕ್ಕೂ ಗೊತ್ತಾಗುತ್ತಿಲ್ಲ ಈ ವರದಿಗಳು ಎಲ್ಲಿವೆಯೆಂಬುದು ಗೊತ್ತಿಲ್ಲ ಅದಕ್ಕೋಸ್ಕರ ನಾವೇ ಪ್ರಾಕ್ಟಿಸ್ ಶುರು ಮಾಡೋಣ, ಚರ್ಚೆ ಮಾಡುವಂಥಾದ್ದು ಶಾಸಕರು ಸಮಿತಿಯಲ್ಲಿ ಏನು ಕೆಲಸವನ್ನು ಮಾಡುತ್ತಿದ್ದಾರೆಂಬುದು ಗೊತ್ತಾಗಲಿ,

ಇಲ್ಲದಿದ್ದರೆ, ಕೇವಲ ನಾವು ವಾರಕ್ಕೆ ಒಂದು ಸಾರಿ ಕುಳಿತುಕೊಳ್ಳುತ್ತೇವೆ ನಾವು ಬರುತ್ತೇವೆ, TA, DA ತೆಗೆದುಕೊಂಡು ಹೋಗುತ್ತೇವೆಂದು ಆಗಬಾರದು

SRI M.P. PRAKASH. If you are so desirous of discussion, Since there is no prohibition for discussion, the Government has no objection if you want to discuss it

5) ನಿಯಮ 234ರ ಮೇಲೆ ಚರ್ಚೆ

ವಿಷಯ ಸಾರ್ವಜನಿಕ ಉದ್ಯಮಗಳ ಸಮಿತಿಯು ಮೈಸೂರು ಮಿನರಲ್ಸ್ ಬಗ್ಗೆ ನೀಡಿದ ವರದಿ ಬಗ್ಗೆ ಚರ್ಚೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮೈಸೂರು ಮಿನರಲ್ಸ್ ಕಂಪನಿ, ಗಣಿಯನ್ನು ಗುತ್ತಿಗೆಗೆ ತೆಗೆದುಕೊಂಡು, ಅಲ್ಲಿರುವ ಅದಿರನ್ನು ಸರ್ಕಾರದ ಪರವಾಗಿ ಮಾರಟ ಮಾಡಬೇಕು ಇದು ಇಲ್ಲದೇ ಹೋದರೆ, ಸ್ಪರ್ಧೆ ಇರುವುದಿಲ್ಲವೆಂದು ಮೈಸೂರು ಮಿನರಲ್ಸ್ ಲಿಮಿಟೆಡ್ ಕಂಪನಿಯನ್ನು ಇವತ್ತು ಸಂಘಟನೆ ಮಾಡಿ, ಸರ್ಕಾರಕ್ಕೆ ಆಗಲಿ, revenue source ಎಲ್ಲಾ ಖಾಸಗಿಯವರೇ, ರಾಷ್ಟ್ರದ, ರಾಜ್ಯದ ಸ್ವತ್ತನ್ನು ಹಿಡಿದುಕೊಳ್ಳುವುದರ ಬದಲು, ಸಾರ್ವಜನಿಕವಾಗಿ ಸ್ವಲ್ಪ ನಮಗೂ ಏನಾದರೂ ಅನುಕೂಲಗಳಾಗಲಿ ಎಂದು ಮಾಡಿದೆವು ಆ ಸಂಸ್ಥೆಯ ಆಗು ಹೋಗುಗಳ ಬಗ್ಗೆ, ನಮ್ಮ Public Under takings Committee ಯವರು ಬಹಳ ಉತ್ತಮವಾದ ಕೆಲಸವನ್ನು ಮಾಡಿದ್ದಾರೆಂದು, ನಾನು ಅವರನ್ನು ಅದ್ಯವಾಗಿ ಶ್ಲಾಘಿಸುತ್ತೇನೆ ಆದರೆ ಒಂದು ನೋವನ್ನು ಇಲ್ಲಿ ಹೇಳಬೇಕಾಗುತ್ತದೆ ಈ ಸಮಿತಿಯ ಜೊತೆಗೆ ನಮ್ಮಲಿ ಒಂದು C& AG ವ್ಯವಸ್ಥೆಯು ಕೂಡ ಇದೆ Public Accounts Committee ಆಗಲಿ Public Under takings Committee ಆಗಲಿ C&AG ಕೊಡುವ ಮಾಹಿತಿಯನ್ನು ಹೆಚ್ಚು ಆಧರಿಸಿ ಕೆಲಸವನ್ನು ಮಾಡುವುದು C&AG ಯವರ ವರದಿಯನ್ನು ಸರ್ಕಾರ ನಡೆಸುವವರು ಗಮನಿಸಿಬಿಟ್ಟಿದ್ದರೆ, C&AG

ವರದಿಯನ್ನು ಏನೇನು ತಕರಾರುಗಳು ಬರುತ್ತದೆಂಬುದನ್ನು ಸಂಬಂಧಪಟ್ಟ ಖಾತೆಯ ಸಚಿವರಾಗಲಿ ಅಥವಾ ಇನ್ಯಾರಾದರೂ ಕುಳಿತುಕೊಂಡು ಆಗಾಗ್ಗೆ MAz Areview ಮಾಡಿದ್ದಾರೆ, ಅಲ್ಲಿರುವ ದೋಷಗಳನ್ನು ಸರಿಪಡಿಸುವಂಥಾ ಪ್ರಯತ್ನವನ್ನು ಮಾಡಿದ್ದರೆ, ಇಷ್ಟೊಂದು ಹೇರಳವಾದ ಅನ್ಯಾಯ ಮತ್ತು ನಷ್ಟ ರಾಜ್ಯಕ್ಕೆ ಆಗುತ್ತಾ ಇರಲಿಲ್ಲವೆಂದು ಭಾವಿಸುತ್ತೇನೆ ಸಚಿವರುಗಳಿಗೆ ಅಧಿಕಾರವಿದೆ, C&AG ವರದಿ,Comptroller & Auditor General, Karnataka ಏನು ಇದ್ದಾರೆ ಅವರ ವರದಿಯನ್ನು ಆಧರಿಸಿ Public Accounts Committee ಮತ್ತು Public Under takings Committee ಪ್ರಮುಖವಾದ ಕಮಿಟಿಗಳು ಕೆಲಸವನ್ನು ಮಾಡುವುದು ಅದನ್ನು ತಾವುಗಳು ಸಚಿವರಾಗಿದ್ದಾ ಹಂತದಲ್ಲೇ ಸುಮಾರು ವಿಷಯಗಳನ್ನು ಇತ್ಯರ್ಥಗೊಳಿಸಬಹುದು ಇಲ್ಲಿ ದುರದೃಷ್ಟ ಏನಾಗಿದೆಯೆಂದರೆ, ಆಡಿಟ್ ವರದಿಯನ್ನು ಇವತ್ತು ಯಾವುದೇ ಇಲಾಖೆಯಲ್ಲಿ ಸಚಿವರು ರಿವ್ಯೂ ಮಾಡುತ್ತಿದ್ದಾರೆಂಬ ನಂಬಿಕೆ ನಮಗೆ ಉಳಿದುಕೊಂಡಿಲ್ಲ ಇವರು ಅದಿಕಾರಿಗಳಿಗೂ ಕೂಡ ನೋಟಿಸ್‌ಗಳನ್ನು ಮೂರು ತಿಂಗಳುಗಳಿಗೆ ಕೊಡುತ್ತಾರೆ, clarification ಕೊಡಿಯೆಂದು ಹೇಳುತ್ತಾರೆ ಇನ್ನೊಂದು ಅವಕಾಶವನ್ನು ಅವರಿಗೆ ಕೊಡುತ್ತಾರೆ ಮೊದಲೇ inspection report ಕೊಡುತ್ತಾರೆ, ಅಮೇಲೆ ಅಂತಿಮ ವರದಿಯ report ಕೊಡುತ್ತಾರೆ ಈ ಯಾವ ಅವಧಿಯಲ್ಲಾದರೂ ಸಮಜಾಯಿಷಿಯನ್ನು ಕೊಟ್ಟಿದ್ದರೆ, PAC ಕೆಲಸ, PUC ಕೆಲಸ, ಸುಲಭವಾಗುತ್ತದೆ ಆದರೆ ಇವತ್ತು ಈ ಕೆಲಸ ನಡೆಯುತ್ತಾ ಇಲ್ಲ ಆಡಳಿತ ಅಷ್ಟರ ಮಟ್ಟಿಗೆ ಸೊರಗಿ ಹೋಗಿದೆ ಸಚಿವರುಗಳು ಅಷ್ಟರ ಮಟ್ಟಿಗೆ ನಿರಾಸಕ್ತರಾಗಿದ್ದಾರೆ ಆ ಸ್ಥಿತಿ ಬಂದಾಗ, ಈ ಕಮಿಟಿಗಳು ಕೂಡ C& AG ಯವರ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ಅನೇಕ ಚರ್ಚೆಯನ್ನು ಮಾಡಿದೆ

ಶ್ರೀ ಎನ್ ಯೋಗಿಶ್ ಭಟ್ ಮಾನ್ಯ ಜೆ ಸಿ ಮಾಧುಸ್ವಾಮಿಯವರೆ ಒಂದು ನಿಮಿಷ ನಾನು ಮಾತನಾಡುತ್ತೇನೆ ಕಳೆದ 10 ವರ್ಷಗಳಿದ ಆಡಿಟ್ ಆಕ್ಷೇಪಣೆಗಳು carry forward ಆಗಿ ಬಂದಿರುವಂಥಾದ್ದು ಇದೆ ಅದಕ್ಕೆ ಯಾವ ರೀತಿಯ ಉತ್ತರಗಳನ್ನು ಕೊಡದೇ ಇರುವಂಥಾ ಅನೇಕ ದಾಖಲೆಗಳ ಬಗ್ಗೆ ನಾವು Papers Laid Committee ಯಿಂದ ವರದಿಯನ್ನು ಕೊಟ್ಟಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಒಂದು ಪ್ರಮುಖವಾದ ಅಂಗ ಚೆನ್ನಾಗಿ ಕೆಲಸ ಮಾಡಬೇಕೆಂದರೆ, ಹಿಂದಕ್ಕೆ ನೋಡಿಕೊಳ್ಳಬೇಕು ನಾವು ಏನಾದರೂ ಸರಿಯಾದ ದಾರಿಯಲ್ಲಿ ಹೋಗುತ್ತಿದ್ದೇವಾ, ಎಲ್ಲದರೂ ತಪ್ಪು ದಾರಿಯಲ್ಲಿ ಹೋಗುತ್ತಾ ಇದ್ದೇವಾ, ಅದನ್ನು ನಮಗೆ ಹೇಳುವಂಥಾ ಕನ್ನಡಿ ಯಾವುದೆಂದರೆ, ಅದು ಲೆಕ್ಕ ಪರಿಶೋಧನೆ ಯಾವುದೇ ವ್ಯವಸ್ಥೆಯಲ್ಲಿ ನಾವು accountability ಎಂದು ಏನು ಕರೆಯುತ್ತೇವೆ ನಾವು accountable ಆಗಿ ಇದ್ದೇವಾ, ಇಲ್ಲವಾ, ಎಂದು ಹೇಳುವುದಕ್ಕೆ ಒಬ್ಬರು ಬೇಕೆಂದು, ಒಂದು automous organization ಆಗಿ ಇವತ್ತು C & AG Office ಇರುವುದು ನಾನು ಬಹಳ ನೋವಿನಿಂದ ಹೇಳುತ್ತಿದ್'ದೇನೆ ಸರ್ಕಾರಗಳು ಆ ವರದಿಗಳಿಗೆ ಯಾವತ್ತು ಅಷ್ಟಾಗಿ ಗಮನವನ್ನು ಕೊಡಲಿಲ್ಲ ಸಚಿವರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ C & AG Report ನಲ್ಲಿ ನಮ್ಮ ಇಲಾಖೆಯ ಬಗ್ಗೆ ಏನು ಇದೆಯೆಂಬುದನ್ನು ತರಿಸಿಕೊಂಡು ನೋಡಿದ್ದಾರೆ ಇದು Public Accounts Committee ಕೆಲಸ, Public Undertakings Committee ಕೆಲಸವೆಂದು ಹೇಳಿಕೊಂಡು ಕುಳಿತಿರುವುದರಿಂದ, ಕಮಿಟಿಗಳ ಮೇಲೆ workload ಬಹಳ ಜಾಸ್ತಿಯಾಗಿ ರುವುದು ನಾನು ತಮಗೆ ಒಂದು ಮಾತನ್ನು ಹೇಳುವುದೆನೆಂದರೆ, ಅನೇಕ ವರ್ಷಗಳು ಈ ಕೆಲಸವನ್ನು ಮಾಡುವುದಕ್ಕೆ ತೆಗೆದುಕೊಳ್ಳುತ್ತಿದೆ ಇದರ ಮಧ್ಯೆ ಇವತ್ತು ಸಾರ್ವಜನಿಕ ಉದ್ಯಮಗಳ ಸಮಿತಿ ಕೆಲಸ ಮಾಡಿದೆ ಅನೇಕ ಪ್ರಮುಖವಾದ ಅಂಶಗಳನ್ನು ಇವತ್ತು ಈ ವರದಿಯಲ್ಲಿ ನಮ್ಮ ಮುಂದೆ ಇಟ್ಟಿದೆ ಇದರ ಬಗ್ಗೆ ಬೆಳಕು ಚೆಲ್ಲಬೇಕಾಗಿರುವಂಥಾದ್ದು ಸಾರ್ವಜನಿಕ ದೃಷ್ಟಿಯಿಂದ ಒಳ್ಳೆಯದೆಂದು ತಿಳಿದುಕೊಂಡು, ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ಕೇಳಿದ್ದೆ ತಾವು ನನಗೆ ಅಚಕಾಶ ಕೊಟ್ಟಿದ್ದಕ್ಕೆ ತಮಗೆ ಶ್ಲಾಘಿಸುತ್ತೇನೆ ಮೊದಲನೆಯದಾಗಿ, ಇಲ್ಲಿನ ವ್ಯವಸ್ಥೆಗೆ ಒಬ್ಬರು Managing Director ಅಥವಾ ಅದಕ್ಕೆ ಒಬ್ಬರು ಮುಖ್ಯಸ್ಥರೋ ಬೇಕಾಗುತ್ತದೆ MML' ಗೆ 2 ತಿಂಗಳಿಗೆ, 3 ತಿಂಗಳಿಗೆ, 4 ತಿಂಗಳಿಗೆ, ಒಬ್ಬರು MD ಗಳು ಹೋಗುವುದು, ಬರುವುದನ್ನು ಮಾಡಿದ್ದಾರೆ ಒಬ್ಬರು ಸುಮಾರು 2 ವರ್ಷ ಇದ್ದುದನ್ನು ಬಿಟ್ಟರೆ, ಉಳಿದವರ್ಯಾರನ್ನೂ ಇವರು ಹೆಚ್ಚು ದಿನಗಳು ಅಲ್ಲಿ ಇಟ್ಟಿಲ್ಲ ಇಲ್ಲಿ ಬಂದು ಹೋಗಿರುವ 17 ಜನ MD ಗಳನ್ನು 6 ತಿಂಗಳ ಮೇಲೆ, ವರ್ಷದ ಮೇಲೆ ಅಲ್ಲಿ ಈ ಸರ್ಕಾರದವರು ಇಟ್ಟಿಲ್ಲ ಅವರಿಗೆ ಅಲ್ಲಿ ಆಡಳಿತ

ಅರ್ಧವಾಗುವ ಸ್ಥಿತಿಯನ್ನು ನಿರ್ಮಾಣ ಮಾಡಲಿಲ್ಲ ಈ ರೀತಿಯಾದರೆ ಕಷ್ಟವಾಗುತ್ತದೆ ಒಂದು ಸಂಸ್ಥೆಯಲ್ಲಿ ಆಡಳಿತವನ್ನು ನಡೆಸಬೇಕೆಂದರೆ, ಅಲ್ಲಿ ಯಾರಾದರೊಬ್ಬ ಅಧಿಕಾರಿ 1 ವರ್ಷ, 2ವರ್ಷ, 3ವರ್ಷ ಇರಬೇಕು ಇದೊಂದು ವ್ಯವಹಾರ ಮಾಡುವ ಸಂಸ್ಥೆ ಕೇವಲ ಅಧಿಕಾರಿಗಳನ್ನು transfer ಮಾಡುವುದಕ್ಕೆ ಇಟ್ಟುಕೊಂಡಿರುವಂಥ ಸಂಸ್ಥೆಯಲ್ಲ ಅದಿರನ್ನು ತೆಗೆಯಬೇಕು, ಮಾರಬೇಕು, rate ಏನಿದೆ ಎಂದು ನೋಡಬೇಕು, ಯಾರ ಜೊತೆ contractಮಾಡಬೇಕು, ಯಾವಾಗ ಲಾಭ ಮಾಡಬೇಕು, ಯಾವಾಗ ನಷ್ಟವನ್ನು ಕಡಿಮೆ ಮಾಡಬೇಕು, ಇವುಗಳೆಲ್ಲವನ್ನೂ ಆಲೋಚನೆ ಮಾಡಬೇಕಾಗುತ್ತದೆ ಸಮಿತಿಯ ಅಧ್ಯಕ್ಷರು ತಮ್ಮ ವರದಿಯಲ್ಲಿ ಒಂದು ಮಾತನ್ನು ಚೆನ್ನಾಗಿ ಹೇಳಿದ್ದಾರೆ Foreign tour ಮಾಡಿಕೊಂಡು ಬಂಧಂಥವರಾದರೂ, ತಾವು ಚೀನಾ ದೇಶದಲ್ಲಿ ನೋಡಿಕೊಂಡು ಬಂದಂಥಾದ್ದನ್ನು ಇಲ್ಲಿ implement ಮಾಡಲಿಕ್ಕೆ ಪ್ರಯತ್ನ ಮಾಡಿದ್ದರೂ ಕೊಡ ಈ ಸಂಸ್ಥೆಗೆ ಅನುಕೂಲವಾಗುತ್ತಿತ್ತು ಈ foreign tour ಗಾಗಿ 8 ಲಕ್ಷ ಚಿಲ್ಲರೆ ರೂಪಾಯಿಗಳು ಖರ್ಚಾಗಿದ್ದು, ಅದರಿಂದ ಯಾವ ಉಪಯೋಗವು ಆಗಿಲ್ಲ ಆದ್ದರಿಂದ ಅದನ್ನು ಅವರಿಂದ recovery ಮಾಡಿ ಎಂದು ಬರೆದಿದ್ದಾರೆ I feel, ಅವರ 'view ಸರಿಯಾಗಿದೆ ಅದಿಕಾರಿಗಳು ಚೈನಾಗೆ ಹೋಗಿ ಬರುವುದು excursion ಗಾಗಿಯೇ ಅಥವಾ ಇಂಥ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಕೆಲಸ ಮಾಡಲಿಕ್ಕೆ ಎಂದು ಕೇಳುತ್ತೇನೆ ಇದರ ಜೊತೆಗೆ, ನಾನು ವರದಿಯ ಕೆಲವು ಮುಖ್ಯ ಅಂಶಗಳನ್ನು ಹೇಳುತ್ತೇನೆ ಈ ವರದಿ ಎಲ್ಲ ಸದಸ್ಯರ ಕೈಯಲ್ಲಿ ಇರುವುದರಿಂದ ನಾನು ಈ ಬಗ್ಗೆ ಬಹಳ ಹೇಳುವುದಕ್ಕೆ ಹೋಗುವುದಿಲ್ಲ ಪ್ರತಿ ಟನ್ ಕಬ್ಬಿಣದ ಅದಿರನ್ನು 253 ರೂಪಾಯಿಗೆ ಖಾಸಗಿಯವರಿಗೆ ಕೊಡುತ್ತಿದ್ದು, ಇವತ್ತು ಅದರ minimum market price 1 200 ರೂಪಾಯಿಗಳ minimum price ಇರುವಂಥಾದ್ದನ್ನು M M L ನವರು ಬರೀ 253 ರೂಪಾಯಿಗಳಿಗೆ ಅವರ ಮೈನ್ಸ್ ನಿಂದ ತೆಗೆದ ಅದಿರನ್ನು ಬೇರೆಯವರೆಗೆ ಮಾರಾಟ ಮಾಡುತ್ತಿದ್ದಾರೆ ಎಷ್ಟು ಲಕ್ಷ ಟನ್ ಎನ್ನುವುದನ್ನು ಅವರು ಕೊನೆಯಲ್ಲಿ ಹೇಳಿದ್ದಾರೆ ಇಷ್ಟೊಂದು ಲಕ್ಷ ಟನ್ ಅದಿರನ್ನು ಕಡಿಮೆ ಬೆಲೆಗೆ ಮಾರಿದ್ದರಿಂದ ಕರ್ನಾಟಕ್ಕೆ ಎಷ್ಟು ನೂರು ಕೋಟಿ ರೂಪಾಯಿಗಳ ನಷ್ಟವಾಯಿತು ಎನ್ನುವುದನ್ನು ಅಂದಾಜು ಮಾಡಿ ಎಂದು ಹೇಳಿದ್ದಾರೆ 253 ರೂಪಾಯಿಗಳಿರುವುದನ್ನು every Year enhance ಮಾಡುವುದಕ್ಕೆ

ಅವಕಾಶವಿದ್ದರೂ, 253, ರೂಪಾಯಿಗಳಿದ್ದುದ್ದನ್ನು 413 ರೂಪಾಯಿಗಳಿಗೆ ಮಾತ್ರ enhance ಮಾಡಲಾಗಿದೆ ಇದನ್ನು ನೀವು ದೀರ್ಘವಾಗಿ ಕುಳಿತು ಆಲೋಚನೆ ಮಾಡಲಿಲ್ಲ ಯಾವುದೋ ಕಂಪನಿಯವರನ್ನು, ಖಾಸಗಿ ಯವರನ್ನು, ಖಾಸಗಿಯವರನ್ನು ಉಳಿಸಲಿಕ್ಕೆ ಅನುಕೂಲ ಮಾಡಿದ್ದೀರಿ ಎಂದು ವರದಿಯಲ್ಲಿ ಹೇಳಿದ್ದಾರೆ ಮತ್ತೊಂದು ಅಂಶವನ್ನು ನೇರವಾಗಿ ಹೇಳಿದ್ದಾರೆ ಕಲ್ಯಾಣಿ ಸಂಸ್ಥೆಗಳಿಗೆ ಅನುಕೂಲವಾಗುವಂತೆ, ದರಗಳನ್ನು, ನಿಯಮಿತವಾಗಿ ಪರಿಷ್ಕರಿಸದೆ 2003–04ರ ಅಂತ್ಯಕ್ಕೆ 3 27 ಕೋಟಿ ರೂಪಾಯಿಗಳ ನಷ್ಟವನ್ನು ಕಂಪನಿಯು ತನ್ನ ಅಧಿಕಾರಿಗಳ ದೆಸೆಯಿಂದ ಅನುಭವಿಸಿತು " 2004–05ರಲ್ಲಿ 67 ಕೋಟಿ ರೂಪಾಯಿಗಳ ನಷ್ಟವಾಯಿತು ಇದು ಸಾಲದೆಂಬಂತೆ, 31–03–2006 ರವರೆಗೆ ಹೊಸ ದರವು ಜಾರಿಯಲ್ಲಿರುತ್ತದೆ ಎಂದು ಆ ಸಂಸ್ಥೆಗೆ ತಿಳಿಸಬೇಕಾದಂಥ Managing Director, ಅದು 31–03–2007ರವರೆಗೆ ಎಂದು ಪ್ರಮಾದದಿಂದ ಆಗಿದೆ ಎಂಬ ನೆಪ ಹೇಳಿದ್ದು, ಇದರಿಂದ ಸುಮಾರು 70 ಕೋಟಿ ರೂಪಾಯಿಗಳ ನಷ್ಟದ ಹೊರೆ ಕಂಪನಿಯ ಮೇಲೆ ಬಿದ್ದಿದೆ 31–03–2006ದವರೆಗೆ ಮಾತ್ರ Agreement ಅನ್ನು renew ಮಾಡಬೇಕಾದ್ದಂಥ Managing Director, ಅದನ್ನು 31–03–2007 ರವರೆಗೆ renew ಮಾಡಿಬಿಟ್ಟು, 2007ರವರೆಗೆ ಏಕೆ renew ಮಾಡಿದಿರಿ ಎಂದರೆ, ಪ್ರಮಾದದಿಂದ ಆಗಿದೆ, ಕೈ ತಪ್ಪಿನಿಂದ ಆಗಿದೆ ಎಂದು ಹೇಳಿದ್ದಾರೆ ಆ ಒಂದು ಸಣ್ಣ ದೋಷದಿಂದ M M L ಗೆ 70 ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಸಮಿತಿಯವರು ಹೇಳಿದ್ದಾರೆ 2007–08ರ ಅವದಿಗೆ ಪರಿಸ್ಕರಿಸಬೇಕಾಗಿದ್ದ ದರವನ್ನು ಇಂದಿನವರೆಗೂ ಮಾಡಿಲ್ಲ ಪ್ರತಿಟನ್‌ಗೆ 1,200 ರೂಪಾಯಿಗಳಿದ್ದರೂ ಕೂಡ ದರವನ್ನು ಪರಿಷ್ಕರಿಸದೇ 314 ರೂಪಾಯಿಗಳನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಇದರ ಪ್ರಕಾರ, ಹಳೆಯ ದರವನ್ನೇ ಮುಂದುವರೆಸಿದ್ದರಿಂದ ನೂರಾರು ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಹೇಳಿದ್ದಾರೆ ಇದರ ಜೊತೆಗೆ, M S I L ನವರು ನಾವು ಇದನ್ನು market price ನಲ್ಲಿ ಕೊಂಡುಕೊಳ್ಳುತ್ತೇವೆ market price ಗಿಂತ 100–200 ರೂಪಾಯಿಗಳ ವ್ಯತ್ಯಾಸವನ್ನು ಅವರು ಕೇಳಿದ್ದರೆ, M S I L ಗೆ ಕೊಟ್ಟರೆ audit objection ಆಗುತ್ತದೆ ಎಂದು ಹೇಳಿ ಖಾಸಗಿಯವರಿಗೇ ಅದಿರನ್ನು ಮಾರುತ್ತಿದ್ದೀರಿ M S I L ಒಂದು sister concern ಅವರಿಗೆ ಕೊಟ್ಟಿದ್ದರೆ, ಅಕಸ್ಮಾತ್

ಉಳಿದಿದ್ದರೆ ಅಲ್ಲಿ ಉಳಿಯುತ್ತಿತು ಅಥವಾ ಇಲ್ಲಿ ಉಳಿಯುತ್ತಿತ್ತು M S I L ಗೆ ಕೊಡಬೇಕಾದುದನ್ನು ತಪ್ಪಿಸಿ ನೀವು ಖಾಸಗಿಯವರ ಜೊತೆ ಗೊತ್ತುವಳಿ ಮಾಡಿಕೊಂಡಿದ್ದೀರಿ ಅದರಿಂದಾಗಿ M M L ಗೆ ನಷ್ಟವಾಗಿದೆ ಎಂದು ವರದಿಯಲ್ಲಿ ಹೇಳುತ್ತಾರೆ ಅದಿರೆತ್ತುವ ದರವನ್ನು M M T C ಸಂಸ್ಥೆಯ ಖರೀದಿ ದರದ ಆಧಾರದ ಮೇಲೆ ನಿಗದಿ ಪಡಿಸುವಂಥ ಅವೈಜ್ಞಾನಿಕವಾಗಿ ಕಲಮು ಅಳವಡಿಸಿ ನಷ್ಟ ಮಾಡಿದ್ದೀರಿ ಎಂದು ಹೇಳಿದ್ದಾರೆ Purchase ಗೆ ನೀವು market price ಎಂದು ಹೇಳಲಿಲ್ಲ M M T C price ಅನ್ನು ಇಟ್ಟುಕೊಂಡಿರಿ ಅದರ ಆಧಾರದ ಮೇಲೆ ತೆಗೆದುಕೊಂಡು ಸಂಸ್ಥೆಗೆ ನಷ್ಟ ಮಾಡಿದ್ದೀರಿ ಇದರ ಜೊತೆಗೆ, ಅದಿರನ್ನು ತೆಗೆಯುವಾಗ, ಅಲ್ಲಿ ಎಷ್ಟು sieve ಇತ್ತು, ಉಂಡೆಗಳಿತ್ತು, fines ಇತ್ತು ಎನ್ನುವುದನ್ನು ಹೇಳಿ ಸ್ಪಷ್ಟವಾದ agreement ಮಾಡದೇ ಇರುವುದರಿಂದ ನಷ್ಟವಾಗಿದೆ ಎಂದು ಹೇಳುತ್ತಿದ್ದಾರೆ ಅದರಿಂದ ಇದುವರೆಗೆ ಈ ಸಂಸ್ಥೆಗಳಿಂದ ಪಡೆದಿರುವ 57 86 ಲಕ್ಷ ಟನ್ ಗಳಷ್ಟು ನವಿರು ಕಬ್ಬಿಣಕ್ಕೆ ನೀಡಿರುವ 14 47 ಕೋಟಿ ರೂಪಾಯಿಗಳು ಕಂಪನಿಯ ಹಿತಾಸಕ್ತಿ ಬಲಿಕೊಟ್ಟು ಉದ್ದೇಶಪೂರ್ವಕವಾಗಿ ಮಾಡಿದ ಆರ್ಥಿಕ ಹಾನಿ' ಎಂದು ಅವರು ತಮ್ಮ ವರದಿಯಲ್ಲಿ ಬರೆದಿದ್ದಾರೆ ಉದ್ದೇಶ ಪೂರ್ವಕವಾಗಿ ಮಾಡಿದ ಆರ್ಥಿಕ ಹಾನಿ ಎನ್ನುವುದು ಸಮಿತಿಯವರು ಬರೆದಿದ್ದಾರೆ ಇದರ ಜೊತೆಗೆ, 2005–06ರ ಅವಧಿಯಲ್ಲಿ ಒಟ್ಟು 3,39,685 ಟನ್ ಕಬ್ಬಿಣದ- ಅದಿರನ್ನು ಟನ್‌ವೊಂದಕ್ಕೆ 314 ರೂಪಾಯಿಗಳ ಬೆಲೆಯಲ್ಲಿ ಮಾರಾಟ ಮಾಡಿದ್ದು 22 35 ಕೋಟಿ ರೂಪಾಯಿಗಳ ನಷ್ಟವುಂಟಾಯಿತು ಎಂದು ಆಕ್ಷೇಪ ಮಾಡಲಾಗಿದೆ' ಎಂದು ನಮೂದಿಸಿದ್ದಾರೆ After the comment of the C & A G ಇದನ್ನು ಮಾಡಿದ್ದಾರೆ ಸನ್ಮಾನ್ಯ ಸಂಸದೀಯ ಸಚಿವರೇ ಇದು ಬಹಳ ಗಹನವಾದ ವಿಷಯ C & A G report ಬಂದ ಮೇಲೂ ಕೂಡ, ಮಾಡಬೇಡಿ ಎಂದರೂ ಕೂಡ ಮಾಡಿಕೊಂಡಿದ್ದಾರೆ 'ಒಪ್ಪಂದದಲ್ಲಿ ಯಾವುದೇ ನಿಗದಿತ ಆಧಾರ/ಸೂತ್ರ ಇಲ್ಲದಿರುವುದರಿಂದ ಕಂಪನಿಯ ನಷ್ಟ ಅನುಭವಿಸುವುದು ಮುಂದುವರೆಯಬಹುದಾಗಿದೆ ಎಂಬ ಆತಂಕವನ್ನೂ ಈ ವರದಿಯಲ್ಲಿ ಸಿ ಎ ಜಿ ಯವರು ಸ್ಪಷ್ಟವಾಗಿ ವ್ಯಕ್ತ ಪಡಿಸಿದ್ದಾರೆ ಜೂನ್ 2006ರಲೇ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಇದುವರೆವಿಗೂ ಸರ್ಕಾರವು ಸಿ ಎ ಜಿ ಯವರಿಗೆ ಉತ್ತರವನ್ನು ಕಳುಹಿಸಿಲ್ಲವೆಂಬುದು, ಸರ್ಕಾರದ ದೋರಣೆ ಈಗಲೂ ಕೂಡ ಬದಲಾಗಿಲ್ಲವೆಂಬುದನ್ನು ಸಾಬೀತುಪಡಿಸುತ್ತದೆ

ಎಂದು ಹೇಳಿದ್ದಾರೆ ನಾನು ಏಕೆ ಇದನ್ನು ಇಲ್ಲಿ raise ಮಾಡುತ್ತಿದ್ದೇನೆಂದರೆ, ಸರ್ಕಾರ ನಡೆಸುವವರೇನಾದರೂ ಆವತ್ತು C & A G report ಅನ್ನು ಓದಿಬಿಟ್ಟರೆ ಈ ರಿಪೋರ್ಟ್ ಇಲ್ಲಿ ಬರುತ್ತಿರಲ್ಲಿಲ್ಲ, ನಾವು ಇದನ್ನು ಇಲ್ಲಿ ಬರುತ್ತಿರಲ್ಲಿಲ್ಲ, ನಾವು ಇದನ್ನು ಇಲ್ಲಿ ಹೇಳವುದೂ ಬೇಕಾಗಿರಲ್ಲಿಲ್ಲ ಜಿಂದಾಲ್ ನವರಿಗೆ ಮತ್ತು ಕಲ್ಯಾಣಿಯವರಿಗೆ ರಾಜ್ಯ ಸರ್ಕಾರವನ್ನು ಮಾರಿಕೊಳ್ಳುವ ಸ್ಥಿತಿ ಏನಿದೆ ಎನ್ನುವುದು ನಮಗೆ ಅರ್ಥವಾಗಬೇಕು ಸಮಿತಿಯವರು ಸ್ಪಷ್ಟವಾಗಿ ಹೇಳಿದ್ದಾರೆ ಈ ಹಗಲು ದರೋಡೆಗೆ ಕುಮ್ಮಕು ಕೊಡುವಂತೆ ಹತ್ತು ವರ್ಷಗಳಾದರೂ ಇನ್ನೂ ಈ ಜಂಟಿ ವ್ಯಾಪಾರೋದ್ಯಮ ಷೇರುದಾರರ ಒಪ್ಪಂದವನ್ನು ಇತ್ಯರ್ಥಗೊಳಿಸದೇ, ಸರ್ಕಾರದ ಅನುಮೋದನೆ ಪಡೆಯುವದನ್ನು ಮುಂದುಡುತ್ತಾ, ತನ್ನ ಅನದಿಕೃತ ವ್ಯವಹಾರವನ್ನು ಮುಂದುವರೆಸಿದೆ ಇದು ಜಿಂದಾಲ್ ನವರಿಗೆ ರಾಜ್ಯ ಖನಿಜ ಸಂಪತ್ತನ್ನೇ ಧಾರೆ ಎರೆದು ಕೊಟ್ಟು ಅವರೇ ಸಿದ್ದಪಡಿಸಿದ ಕುಣಿಕೆಗೆ ಕತ್ತು ಒಡ್ಡಿದಂತೆ ಈ ವ್ಯವಹಾರದಲ್ಲಿನ ಒಪ್ಪಂದಗಳು, ಕರಾರುಗಳು, ಒಡಂಬಡಿಕೆಗಳು ಇತ್ಯಾದಿ ಇದಕ್ಕೆ ನೇರ ಕಾರಣವಾಗಿವೆ ಇದು findings of the Committee ಇದರಿಂದ ಸಮಿತಿಯ ಗೌರವ, ಘನತೆ ಕಡಿಮೆಯಾಗುತ್ತಿಲ್ಲ ಬದಲಿಗೆ ಹೆಚ್ಚಾಗುತ್ತಿದೆ ಅವರು ಹೇಳಿದ condition ನೀವು ಒಪ್ಪಿಕೊಂಡು, ಅವರಿಗೇ material supply ಮಾಡಿಕೊಂಡು, 10 ವರ್ಷಗಳಾದರೂ ಇದುವರೆಗೂ contract renew ಮಾಡುವ ಕೃಪೆ ತೋರಿಸದೇ, ಕೋಟ್ಯಾಂತರ ರೂಪಾಯಿಗಳ ಅದಿರನ್ನು ಅವರಿಗೆ ಕೊಟ್ಟು, ನಮಗೆ ಕೋಟ್ಯಂತರ ರೂಪಾಯಿಗಳ ನಷ್ಟವನ್ನು ಮಾಡಿದ್ದೀರಿ 'ಎಂ ಎಂ ಎಲ್ ಸಂಸ್ಥೆಯ ತಮ್ಮೊಂದಿಗಿನ ವ್ಯವಹಾರದ ಬಗ್ಗೆ ಸರಿಯಾದ ಮಾಹಿತಿ ಕೊಟ್ಟಿಲ್ಲದ ಕಾರಣ ತಮಗೆ ಸಮಿತಿಯ ಮುಂದೆ ಹೇಳಿಕೆ ಕೊಡಲು ಅವಕಾಶ ಕೋರಿದ ಜಿಂದಾಲ್ ಸಮೂಹ, "ಈಗ ಜಂಟಿ ವ್ಯಾಪಾರೋದ್ಯಮವು ಲಾಭಗಳಿಸಿದ್ದು, ಇನ್ನು ಮುಂದೆ ಡಿವಿಡೆಂಟ್ (ಲಾಭಾಂಶ) ಕೊಡುತ್ತೇವೆಂದು" ಸಮಿತಿಯನ್ನೇ ಹಾದಿ ತಪ್ಪಿಸಲು ಪ್ರಯತ್ನಿಸಿದ್ದು, ಇತಂಹ ಹಲವು ಪ್ರಕರಣಗಳಲ್ಲಿ ಒಂದು ಷೇರುದಾರರ ಒಪ್ಪಂದವೇ ಆಗದೆ, ರೂ 1 74 ಕೋಟಿ ಮೌಲ್ಯದ ಷೇರುಗಳ ಹಂಚಿಕೆಯು ಆಗದೇ ಲಾಭಂಶದ ಹಂಚಿಕೆಯು ಸಾಧ್ಯವಿಲ್ಲ ಇದರಿಂದ ಸರ್ಕಾರಕ್ಕೆ ಬರುವಂತಹ ಲಾಭಾಂಶವನ್ನು ಕೂಡ ಜಿಂದಾಲ್ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಇದಕ್ಕೆ ವಿ ಎಂ ಪಿ ಎಲ್ ಗೆ ಅಧ್ಯಕ್ಷರಾಗಿರುವ ಎಂ ಎಂ, ಎಲ್ ನ ವ್ಯವಸ್ಥಾಪಕ ನಿರ್ದೇಶಕರು

ಮತ್ತು ಇಲಾಖೆಯ ಕಾರ್ಯದರ್ಶಿಯವರು ಹೊಣೆಗಾರರಾಗಿರುತ್ತಾರೆ ಇದರ ಜೊತೆಗೆ, ಉಂಡೆ ಮತ್ತು ಅದಿರುಗಳ ಅನುಪಾತ 30 70 ರಂತೆ ಪರಿಗಣಿಸಿ ಒಪ್ಪಂದ ಮಾಡಿಕೊಂಡು, 7 93ರ ಅನುಪಾತದ ಲೆಕ್ಕ ಕೊಟ್ಟು ವಿ ಎಂ ಪಿ ಎಲ್ ನವರು ಕಂಪನಿಗೆ ನಷ್ಟವನ್ನುಂಟು ಮಾಡಿದರು ಇಷ್ಟೇ ಅಲ್ಲದೇ ಕನಿಷ್ಟ ವಾರ್ಷಿಕ ಅದಿಮೌಲ್ಯವನ್ನು ಕೂಡ ಪಾವತಿಸಿಲ್ಲ ವಿಪರ್ಯಾಸವೆಂದರೆ, ಎಂ,ಎಂ,ಎಲ್,ನ ವ್ಯವಸ್ಥಾಪಕ ನಿರ್ದೇಶಕರೇ ಈ ಉದ್ಯಮದ ಅಧ್ಯಕ್ಷರು ಇವರುಗಳು ಬೇರೆಯವರ ಸೂತ್ರದ ಗೊಂಬೆಯೆಂತೆ ವರ್ತಿಸಿದುದೇ ಈ ಎಲ್ಲಾ ನಷ್ಟಗಳಿಗೂ ಕಾರಣ ಎಂದು ಹೇಳಿದ್ದಾರೆ After the deliberations of 22 meetings Public Undertakings Committee ಹೇಳುತ್ತಿದೆ, ಬೇರೆಯವರ ಸೂತ್ರದ ಗೊಂಬೆಯಂತೆ M D ಯವರು ವರ್ತಿಸುತ್ತಿದ್ದಾರೆ ಎಂದು ಹೇಳುತ್ತಿದೆ' ಎಂ,ಎಂ,ಎಲ್ ನ ಆಡಳಿತ ಮಂಡಳಿ ಆ ಸಂಸ್ಥೆಗೆ ಸಂಪೂರ್ಣ ಶರಣಾಗಿರುವುದು ಸ್ಪಷ್ಟವಾಗಿದೆ ತನ್ನದೇ ನೀತಿ ಸಂಹಿತೆಯಂತೆ 50 ಲಕ್ಷ ರೂಪಾಯಿಗಲೂ ಮಿಗಿಲಾದ ವೆಚ್ಚನ್ನು ಸರ್ಕಾರದ ಆಣತಿಗಾಗಿ ಕಾದಿರಿಸಬೇಕಿದ್ದರೂ, ಅದನ್ನು ನಿರ್ಲಕ್ಷಿಸಿ ಗಣಿಗಳ ಅಭಿವೃದ್ಧಿಗಾಗಿ 372 ಲಕ್ಷ ರೂಪಾಯಿ ಖರ್ಚು ಮಾಡಿದ್ದು ಉದ್ದಟತನ ಈ ಲೋಪಕ್ಕ ಎಂ,ಎಂ,ಎಲ್ ಕಂಪನಿಯ ಅಧಿಕಾರಿಗಳ ಉದ್ದೇಶ ಪೂರ್ವಕ ವರ್ತನೆಯೇ ಕಾರಣ ಎಂದು ನೇರವಾಗಿ ಹೇಳಿದ್ದಾರೆ

"ಎಂ ಎಂ ಎಲ್ ಸಂಸ್ಥೆಯು ತನ್ನ ದುರ್ಗತಿಯ ಕಾಲದಲ್ಲೂ ರೂ 76 09 ಲಕ್ಷವನ್ನು ತನ್ನ ಸ್ವಂತ ಹಣದಿಂದ ಕೊಡುವಂತೆ ಮಾಡಿದ ಈ ರೀತಿಯ ನಷ್ಟಗಳಿಗೆ ಎಂ ಎಂ ಎಲ್ ಕಂಪನಿಯ ಅಧಿಕಾರಿಗಳ ಉದ್ದೇಶಪೂರ್ವಕ ವರ್ತನೆಯೇ ಕಾರಣ"

ಇವರೆಲ್ಲರನ್ನು ಕರೆದು interact ಮಾಡಿ, findings ಎಲ್ಲ ನಾವಿಲ್ಲಿ ಓದುವುದಕ್ಕಾಗುವುದಿಲ್ಲ ಅವರಿಗೆ ಅವಕಾಶ ಕೊಟ್ಟು ಅವರ ಹೇಳಿಕೆ ಕೇಳಿ ಮಾಡಿರುವ ವರದಿ ಇದಾಗಿದೆ ಅದರ ಮೇಲೆ ಬಂದಿರುವುದರಲ್ಲಿ ಇಷ್ಟನ್ನು ನೀವು ಮಾಡ್ತಿದಿರಿ ಏತಕ್ಕೋಸ್ಕರ ಈ ಸರ್ಕಾರ ಈ ಕೆಲಸಗಳನ್ನು ಮಾಡುತ್ತಿದೆ ಎನ್ನುವುದು ನಮಗೆ ಅರ್ಥವಾಗಬೇಕಾಗಿದೆ

"ಎಂ.ಎಸ್.ಐ ಎಲ್ ಕಬ್ಬಿಣದ ಅದಿರುಗಳನ್ನು ಎಂ ಎಂ ಟಿ ಸಿ ದರದಲ್ಲೇ ಕೊಳ್ಳಲು ಮುಂದಾದರೂ ಒಪ್ಪದೇ ಜಿಂದಾಲ್ ಸಮೂಹಕ್ಕೆ ಮಾರಿದ್ದು, ಎಂ.ಎಂ.ಎಲ್ ಕಂಪನಿಯನ್ನು ಬೇರೆಯವರಿಗೆ ಅಡವಿಟ್ಟಿರುವುದು ಸ್ಪಷ್ಟವಾಗುತ್ತದೆ ಎಂ ಎಸ್ ಐ ಎಲ್ ರಾಯಲ್ಟಿ ಕೊಡಲು ಒಪ್ಪಲಿಲ್ಲ, ತೂಕದ ವಿಚಾರದಲ್ಲಿ ತಗಾದೆ ಇತ್ತು ಎಂದೆಲ್ಲಾ ನೆವ ಹೇಳಿದ ಅದಿಕಾರಿಗಳು, ಅತ್ಯಂತ ಕಡಿಮೆ ಅದಿಮೌಲ್ಯಕ್ಕೆ ಜಿಂದಾಲ್ ಸಮೂಹಕ್ಕೆ ಮಾರಿದ್ದು ಒಂದು ಖಾಸಗಿ ಸಂಸ್ಥೆಗೆ ಅನುಕೂಲ ಮಾಡಲು ಏನೆಲ್ಲಾ ಕಸರತ್ತು ಮಾಡಿದ್ದಾರೆ ಎಂಬುದು ಗೋಚರವಾಗುತ್ತದೆ"

ಈ ಬಗ್ಗೆ ನಾನು ಬಹಳ ಹೊತ್ತು ತೆಗೆದುಕೊಳ್ಳದೇ ಈ ವರದಿಯನ್ನು ತಾವೆಲ್ಲ ಓದುತ್ತೀರಿ ಎಂದು ತಿಳಿದುಕೊಂಡು "ರಾಜಕಾರಣಿಗಳು ಹಾಗೂ ಅಧಿಕಾರಿಗಳು ಹಾಗೂ ಅದಿಕಾರಿಗಳು "Sir, with pain, ಮಾತನಾಡ ಬೇಕಾದರೆ ರಾಜಕಾರಣಿಗಳು ಎಂದು ಸೇರಿಸಿಕೊಂಡು

"ರಾಜಕಾರಣಿಗಳು ಮತ್ತು ಅದಿಕಾರಿಗಳು ನಿರ್ದಿಷ್ಟ ಸಂಸ್ಥೆಗಳಿಗೆ ಅದಿರು ಸರಬರಾಜು ಮಾಡಿ ಎಂದು ಶಿಫಾರಸ್ಸು ಪತ್ರ ಕೊಟ್ಟಿದ್ದನ್ನೇ ನೆಪಮಾಡಿಕೊಂಡು, ಆ ಖರೀದಿದಾರರಿಗೆ ಮಾರುಕಟ್ಟೆ ದರಕ್ಕಿಂತ ಅತಿ ಕಡಿಮೆ ದರದಲ್ಲಿ ಟೆಂಡರ್ ಕೂಡ ಕರೆಯದೇ ಅದಿರು ಮಾರಾಟ ಮಾಡಿ ರೂ 168 32 ಕೋಟಿಗಳ ನಷ್ಟವಾಗಿದ್ದು, ಇದಕ್ಕೆ ಕಂಪನಿಯ ಅಂದಿನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅವರ ಅಧಿಕಾರಿಗಳೇ ಕಾರಣ"

That is the point ಯಾರೋ letter ಕೊಟ್ಟರೆಂದು ಒಬ್ಬರು Managing Director ಆ letter ಅನ್ನೇ ಇಟ್ಟುಕೊಂಡು 168 ಕೋಟಿ ರೂಪಾಯಿಗಳಷ್ಟರ material ಅನ್ನು ಕೊಟ್ಟುಬಿಟ್ಟಿದ್ದಾರೆಂದರೆ ಏನಾದರೂ ರಾಜಕೀಯ ಮಾಡುವವರಿಗೆ ಗೌರವ ಉಳಿಯುತ್ತದೆಯೇ? ತಾವು ಹೇಳಬೇಕು ರಾಜಕಾರಣಿಗಳು ಯಾರು? ಯಾವ position ನಲ್ಲಿ letter ಕೊಟ್ಟಿದ್ದಾರೆ?ಅದು ಆದೇಶವೇ? ಅಥವಾ request? Request ಅನ್ನು ಏಕೆ reject ಮಾಡುವುದಕ್ಕಾಗುತ್ತಿರಲಿಲ್ಲ? ಆದೇಶ ಕೊಟ್ಟಿದ್ದಾರೆ, ಇದು illegal order ಎಂದು ಏಕೆ ಹೇಳುವುದಕ್ಕಾಗುತ್ತಿರಲಿಲ್ಲ? ಅವರನ್ನು ಇಟ್ಟುಕೊಂಡು ಇವರ್ಯಾಕೆ ಈ ಪಾಪದ ಕೆಲಸವನ್ನು ಮಾಡುವುದಕ್ಕೆ

ಹೋದರು?

ಶ್ರೀ ಸಿದ್ದರಾಮಯ್ಯ Minister ಅಲ್ಲದೇ ಇವರು ಹೇಗೆ ಆದೇಶ ಕೊಡುವುದಕ್ಕೆ ಬರುತ್ತದೆ?

ಶ್ರೀ ಜೆ ಸಿ ಮಾಧುಸ್ವಾಮಿ ಹೇಳಬೇಕು We have ti know ಇಲ್ಲಿ ಕುಳಿತಿರುವವರು ನಾವೂ ಸಹ ರಾಜಕಾರಣಿಗಳೇ ಯಾರ್ಯಾರಿಗೆ ಕೊಟ್ಟರು? ಏತಕ್ಕೆ ಕೊಟ್ಟರು? ಎಷ್ಟೆಷ್ಟು ಟನ್ ಕೊಟ್ಟರು? ಈ ರೇಟ್ ನಲ್ಲಿಯೇ ಕೊಡು ಎಂದು ಹೇಳಿದರೇ? ಅಥವಾ ಮಾರ್ಕೆಟ್ ರೇಟ್‌ನಲ್ಲಿಯೇ ಕೊಡು ಎಂದು ಹೇಳಿದರೇ? ತಾವು ಸರ್ಕಾರ ನಡೆಸುವವರು ತನಿಖೆಯನ್ನು ನಡೆಸಿ ಈ ಸಭೆಯ ಮುಂದೆ ತರಬೇಕು ಏಕೆಂದರೆ, ಈ MML ಬಗ್ಗೆ ಬಹಳ ದಿವಸಗಳಿಂದ ಚರ್ಚೆ ಮಾಡಬೇಕೆಂದಿದ್ದ ವಸ್ತುವಾಗಿತ್ತು MML ಗೆಂದು ಸಾವಿರಾರು ಹೆಕ್ಟೇರ್ ಜಮೀನನ್ನು ನೀವು ರಾಜ್ಯದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ಲೀಸ್ ಅನ್ನು ತಪ್ಪಿಸಿಬಿಟ್ಟು, ರಾಜ್ಯಕ್ಕೆಂದು ನೀವು ಉಳಿಸಿಕೊಂಡು, ಈ ತರಹ ಯಾರ್ಯಾರನ್ನೋ ಸಾಕಿಕೊಂಡು ಅವರ ಹಂಗಿನಲ್ಲಿ ಅಧಿಕಾರ ನಡೆಸಿ, ಅವರ ಹಂಗಿನಲ್ಲಿ ನಮ್ಮನ್ನೂ ತಂದು, ಮೂಗಿಗೆ ತುಪ್ಪ ಸವರುವಂಥ ಕೆಲಸವನ್ನು ಮಾಡುವುದಾದರೆ, ಈ ಸರ್ಕಾರದಲ್ಲಿ ಏನು ನಡೆದಿದೆ ಎನ್ನುವುದನ್ನು ಹೇಳಬೇಕಲ್ಲವೇ? ಹೇಗೆ ನಡೆಸಿದ್ದೀರಿ ಹೇಲಿ 168 ಕೋಟಿ ಚಿಲ್ಲರೆ ರೂಪಾಯಿ ನಷ್ಟವಾಗಲಿಕ್ಕೆ ರಾಜಕಾರಣಿಗಳ ಕೊಟ್ಟಿರುವ ಕಾಗದ ಕಾರಣವೆಂದು ಹೇಳಿ ಅವರ ಸಭೆಯ ಮುಂದೆ ವ್ಯಕ್ತವಾಗಿದ್ದು, ಅವರ ಸ್ಪಷ್ಟವಾಗಿ ಬರೆದಿದ್ದಾರೆ That means to say, the Officer has deposed before the Committee ನಾನು ಇಂಥ ಒತ್ತಡಕ್ಕೆ ಮಣಿದಿದ್ದೇನೆ, ಇಂಥವರು ಹೇಳಿದವರಿಗೆ ಕೊಟ್ಟಿದ್ದೇನೆಂದು ಏನು ಹೇಳಿದ್ದಾರೆ, ಅದು ಈ ಸಭೆಯ ಮುಂದೆ ಬರಬೇಕು ಏಕೆಂದರೆ, ಅವರಿಗೆ ಈ ಮಾಹಿತಿ ಹೋಗಿರುವುದಿಲ್ಲ ನಾನು ಇಂಥಿಂಥವರ ಕಾಗದ ತೆಗೆದುಕೊಂಡು ಇಂಥಿಂಥವರಿಗೆ ಕೊಟ್ಟಿದ್ದೇನೆಂದು ಅವನು ಅವರಿಗೆ ಹೇಳುವುದಿಲ್ಲ ಇಲ್ಲಿ ಹೇಳಬೇಕು ಇದು ಶಾಸನ ಸಭೆ ಇಲ್ಲಿ ಚರ್ಚೆಯಾಗಬೇಕು ರಾಷ್ಟ್ರದ ಸ್ವತ್ತನ್ನು ಮಾರಲಿಕ್ಕೆ ನಮಗೆ ಅಧಿಕಾರ ಕೊಟ್ಟವರಾರು? ಅದನ್ನು ಕಾಪಾಡಲಿಕ್ಕೆ ಎಂದು ಜನ ನಮ್ಮನ್ನು ಎಂಎಲೆ ಮಾಡಿರುವುದು ಮಾರಾಟ ಮಾಡುವುದಕ್ಕಲ್ಲ ಹೆತ್ತ ತಂದೆ ತಾಯಿಗಳ

ಋಣ ತೀರಿಸಿ ಎಂದರೆ ನಮ್ಮ ಸಾಲಕ್ಕೆ ಅವರನ್ನು ಹರಾಜು ಹಾಕುತ್ತೇವೆಂದಲ್ಲ ನಾವು ಸರ್ಕಾರ ನಡೆಸುವುದು ಈ ಪಾಪ ಕೃತ್ಯಗಳನ್ನು ಯಾರು ಮಾಡಿದ್ದು? ಏಕೆ ನಮ್ಮಗಳ ಬಾಯಿಗೆ ಇವತ್ತು ತುಪ್ಪ ಸವರುತ್ತಿದ್ದೀರೆಂದು ನಮಗೆ ಅರ್ಥವಾಗಬೇಕಲ್ಲ? ಮಾನ ಮರ್ಯಾದೆ ಗೌರವ ಇರುವ ಯಾರೂ ಇಲ್ಲಿ ಶಾಸನ ಸಭೆಯಲ್ಲಿ ಕುಳಿತುಕೊಂಡು ರಾಜಕಾರಣಿಗಳಾಗಿ ಬದುಕ ಬಾರದೆ? ಯಾರದೋ ತೆವಲಿಗೆ ಇಡೀ ಸಮೂಹ, ಇಡೀ ವ್ಯವಸ್ಥೆ, ಇಡೀ d£ÁAUÀE ª ÀÆD¥Á¢vÀ ÁÜÀÀ è¤AvÀPÉ ¼À ÉPÉ Yes, we have been treated as villains in public, we have been treated as villains in media we have been treated as Dacoits ಎಂಎಲ್‌ಗಳು, ರಾಜಕೀಯದವರೆಂದರೆ ಕೇಡಿಗಳೆಂದು ನೋಡುವ ಕಾಲಕ್ಕೆ ನಮ್ಮನ್ನು ನಿಲ್ಲಿಸಿದ್ದೀರಿ ಇದೆಲ್ಲ ಯಾರು ಮಾಡಿದ ಪಾಪ? ಈ ಪಾಪವೆಲ್ಲ ಜಗತ್ತಿಗೆ ಗೊತ್ತಾದರೆ ನಮ್ಮನ್ನು ಏನಂತಾರೆ? ನಾವು ಇವತ್ತು ಏತಕ್ಕೆ ಲಾಯಕ್ಕಾಗಿದ್ದೇವೆ?

ಅಧ್ಯಕ್ಷರು ಏನಂತಾರೆಂದರೆ, ಏನು ಅನ್ನುತ್ತಿದ್ದಾರೆಂದು ಹೇಳಿ

ಶ್ರೀ ಜೆ ಸಿ ಮಾಧುಸ್ವಾಮಿ ಆ ರೀತಿಯ ಅನ್ನಿಸುವುದನ್ನು ತಪ್ಪಿಸಿ ಯಾರೋ ತಿಂದಿದ್ದಕ್ಕೆ ಎಲ್ಲರಿಗೂ ಏಕೆ ಅನ್ನಿಸುತ್ತೀರಿ? ಇದಕ್ಕಾಗಿ ನೀವು ಕುಳಿತುಕೊಂಡು ಏನು ಮಾಡಿದ್ದೀರಿ?

"ಈಗಿನ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರದ ಕಾರ್ಯದರ್ಶಿಗಳಾಗಿದ್ದಾಗ ಸಭೆಯಲ್ಲಿ ಕಂಪನಿಯು 3000ಕೋಟಿ ಲಾಭ ಮಾಡುವಲ್ಲಿ 200 ಕೋಟಿ ರೂಪಾಯಿ ಮಾತ್ರ ಮಾಡಿದೆ ಎಂದು ಹೇಳುತ್ತಿದ್ದರು" ಎಂದು ಅವರೇ ಹೇಳಿದ್ದಾರೆ We could have made a profit of Rs 3000 crores In place of that, we have earned only Rs 200 crores ಮುಂದುವರಿದು,

"ಅದರಂತೆ, ಈಗ ದಿನಕ್ಕೆ 10 ಕೋಟಿ ಲಾಭ ಮಾಡಬೇಕು, ಮಾಡಿದ್ದಾರಯೇ? ನಾನು ಬರೆದ ಒಂದು ಪತ್ರವನ್ನು ಇಟ್ಟುಕೊಂಡು ಎಲ್ಲಾ ಕಡೆ ಮಿಸ್ ಗೈಡ್ ಮಾಡುತ್ತಾ ಬಂದರು ಎಂದು ಅವರು ಹಾಲಿ

ವ್ಯವಸ್ಥಾಪಕ ನಿರ್ದೇಶಕರ ಮೇಲೆ ಅರೋಪಿಸಿದರು, ಅಲ್ಲದೆ, ಮುಂದೆ ಜಿ ಎಸ್,ಪಿ ಮೆಃ ಶಿವಶಂಕರ್ ಗ್ರಾನೈಟ್ಸ್ ರವರಿಗೆ ಇವರು (ಪ್ರಸಕ್ತ ವ್ಯವಸ್ಥಾಪಕ ನಿರ್ದೇಶಕರು) ರೂ 231–00 ಗಳಿಗೆ ಕರಾರು ಮಾಡಿಕೊಂಡು ಕಂಪನಿಗೆ ರೂ 12 75ಕೋಟಿ ನಷ್ಟವಾಗಲು ಕಾರಣವಾಗಿರುವು ಇದೆ "

ಏನು ಸಾರ್ ಇದು? ಬೋರ್ಡ್ ಮುಂದೆ ಹೋಗುವುದಿಲ್ಲ, ಸರ್ಕಾರದ ಮುಂದೆ ಹೋಗುವುದಿಲ್ಲ Agreement renew ಮಾಡುವುದಕ್ಕೆ ನೀವು Cabinet ತೀರ್ಮಾನ ತೆಗೆದುಕೊಳ್ಳುವುದಿಲ್ಲ ಒಬ್ಬ Managing Director, just because he is Managing Director ಇಡೀ ರಾಜ್ಯದ ಸ್ವತ್ತನ್ನು ಮಾರಬಹುದು, ಅವರು ಯಾರ ಜೊತೆಯಲ್ಲಾದರೂ ವ್ಯವಹಾರ ಮಾಡಬಹುದು, ಎಷ್ಟಕಾದರೂ ಮಾಡಿಕೊಳ್ಳಬಹುದೆಂದರೆ ನೀವೇಕೆ ಸರ್ಕಾರ ನಡೆಸುತ್ತಿದ್ದೀರಿ? 1200 ರೂ ಗೆ ಒಂದು ಟನ್ ಕಬ್ಬಿಣದ ಅದಿರನ್ನು ನೀವು ಕೊಟ್ಟುಬಿಡಿ ನೋಡೋಣ ಎಷ್ಟು ಜನ ಗಿರಾಕಿಗಳನ್ನು ಕಳುಹಿಸಲಿ? MML ಗೆ ಎಷ್ಟು ಜನ ಬೇಕು ಹೇಳಿ? ಖಾಸಗಿಯವರು ಬೇಡ, ನಿಮ್ಮ MSIL ನವರು ನವರು ಕೇಳಿದರರೂ ನೀವೇಕೆ ಕೊಡುತ್ತಿಲ್ಲ? Market price ನಲ್ಲಿ ಕೊಡಿ ಎಂದರೆ, what prevented you in giviing ಯಾರವರು? ನಿಮಗೆ ಎಷ್ಟು ಕೊಟ್ಟಿದ್ದಾರೆ? ಜಿಂದಾಲ್, ಕಲ್ಯಾಣಿ, ಶಿವಶಂಕರ್ ರವರು ಯಾರು? ಎಲ್ಲಿಂದ ಬಂದರು? ಅವರುಗಳೆಲ್ಲ Helicopter ನಲ್ಲಿ ಹೇಗೆ ಓಡಾಡುತ್ತಾರೆ? 'ನಿಮ್ಮ ಹತ್ತಿರ ಅದಿರು ತೆಗೆದುಕೊಂಡವರು ಅವರೆಲ್ಲ Helicopter ನಲ್ಲಿ ಓಡಾಡುತ್ತಿದ್ದಾರೆ' ಎಂದು ಅವರೇ ಬರೆಯುತ್ತಾರೆ ಈ ಸಂಸ್ಥೆ ಗೌರವವಾಗಿ ನಿಮ್ಮ staff ಗೆ ಸಂಬಳ ಕೊಡುವ ಸ್ಥಿತಿಗೆ ನಿರ್ಮಾಣ ಮಾಡಿಕೊಂಡೆ ಎಂದು ಹೇಳಿದ್ದಾರೆ ಇವರೆಲ್ಲ ಯಾರ್ ಸಾರ್? ನಿಮ್ಮ ಹತ್ತಿರ ಯಾರ್ಯಾರು ಮಾಡಿದ್ದಾರೆ, materials purchase ಮಾಡಿದ್ದಾರೆ, they are owning Helicopters ಇದನ್ನು ಕಮೀಟಿ ಬರೆದಿರುವುದು, ನಾನಲ್ಲ ನೀವು ಲೇಬರ್ ಕೊಡುವುದಿಕ್ಕಾಗುವುದಿಲ್ಲ ವೆಂದು ಇವತ್ತು ಕುಳಿತಿದ್ದೀರಿ MML employees ಗೆ ಒಂದು ಎರಡು ವರ್ಷದು arrears ಇನ್ನು settlement ಮಾಡಲಿಲ್ಲ ಯಾವಾಗ ದುಡ್ಡು ಮಾಡಬಹುದಿತ್ತು, ಆಗ ನೀವು ಹಣ ಮಾಡಲಿಲ್ಲ ಯಾವಾಗ ಹಣ ಮಾಡಬಹುದಿತ್ತು, ಆಗ ಹಣ ಮಾಡದೇ, Public sectors ಯಾವುದೂ ಉಳಿಯುವುದಿಲ್ಲ, Public sectors ಅನ್ನು ಮುಚ್ಚಬೇಕು,

Public sectors ಅನ್ನು controal ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿಕೊಂಡು ಬಂದರೆ ಇವತ್ತು ಸಾರ್ವಜನಿಕ ಸಂಸ್ಥೆಗಳು ಉಳಿಯುವುದು ಹೇಗೆ? ಅಲ್ಲಿ ಇರುವ ನೌಕರರರ ಗತಿ ಏನು? ನಿಮಗೆ ಬರಬೇಕಾದ Non-tax Revenue Receipts ಈ ರಾಜ್ಯಕ್ಕೆ ನೀವೇನು ಹೇಳಿಕೊಂಡು ತಿರುಗಾಡುತ್ತಿದ್ದೀರಲ್ಲ, ಸಿದ್ದರಾಮಯ್ಯನವರು ಚೆನ್ನಾಗಿ ಹೇಳಿದರು Non-tax Revenue Receipts ಬೇಡವೇ? ಇವೆಲ್ಲ ರಾಜ್ಯಕ್ಕೆ ವರಮಾನವಲ್ಲವೇ 100,200ಕೋಟಿ ರೂ ಬಂದರೆ, ಅಲ್ಲೆಲ್ಲಾದರೂ ನಮಗೆ ನೀರಾವರಿ ಮಾಡುವುದಕ್ಕಾಗುತ್ತಿರಲ್ಲಿಲ್ಲವೇ? Non-tax Revenue Receipts ಈ ಬೇಡವೇ? ಇಂಥ source ಗಳನ್ನು ಪ್ರಕೃತಿ ಕೊಟ್ಟಿರುವ ಸಂಪತ್ತನ್ನು ಲೂಟಿ ಮಾಡುವುದಕ್ಕೆ ತಾವು ಬಿಟ್ಟು ಈ ಬಗ್ಗೆ ನಾನು ಇವತ್ತು ನಾವು ಯಾವ ಭಾಷೆಯ ಬಳಸಬೇಕೋ ಬಬಗೆ ಅರ್ಥವಾಗುವುದಿಲ್ಲ, ಕೆಟ್ಟ ಭಾಷೆಗಳನ್ನು ಬಳಸಿ ಬಳಸಿ ಸಾಕಾಗಿದೆ ಪ್ರಕಾಶ ರವರೆ ನಾವು ನಿಮ್ಮ ಬಗ್ಗೆ ಬಹಳ ಗೌರವವಿಟ್ಟು ಕೊಂಡಿದ್ದೇವೆ ಎಲ್ಲಿಯಾದರೂ ಒಂದು ಕಡೆ ಇವೆನ್ನೆಲ್ಲ Cabinet ಮುಂದಿಟ್ಟು ಚರ್ಚೆ ಮಾಡಿ ಇದು ಸರ್ಕಾರ ಸ್ವಾಮಿ You are the cusodian of five and add crores people of Karnataka and land, revenue, asset of this State ನಿಮ್ಮನ್ನು ನಂಬಿ ಇವತ್ತು ರಾಜ್ಯವೆಲ್ಲ ಕುಳಿತಿದ್ದಾಗ ದೋಚಿಕೊಂಡು ಹೋಗುತ್ತಿದ್ದರೂ ನೀವೇನೂ ಮಾಡುವುದಿಲ್ಲವೆಂದರೆ, ಶಾಮೀಲಾಗಿರಬೇಕು ಅಥವಾ ನೀವು ಅಸಹಾಯಕರಾಗಿರಬೇಕು ಎಂಬ ಅನುಮಾನ ನಮಗೆ ಬಂದಿದೆ "ಒಂದು ಪಾಪವನ್ನು ಮಾತು ಹೇಳಿದ್ದಾರೆ If you are party and if you bearing a sin, you are equal to a sinner

ಶ್ರೀ ಎಂ ಪಿ ಪ್ರಕಾಶ್ 150 ಕೋಟಿ ರೂ ಹಗರಣದಲ್ಲಿಯೇ ನಾನು ಶಾಮೀಲಾಗಿದ್ದೇನೆಂದು ಬಂದೇಬಿಟ್ಟಿದೆಯಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಅದರ ಜೊತೆಗೆ ಇದೂ ಇದೆಯೇ?

ಶ್ರೀ ಎಂ ಪಿ ಪ್ರಕಾಶ್ ಇಲ್ಲಿ ಹೇಳಿಕೊಳ್ಳುವುದೇನೂ ಉಳಿದಿಲ್ಲ ನೀವು ಹೇಳಿದಂತೆ, ಅದು ಯಾರಾದರೂ ಏನಾದರೂ ಹೇಳಿಕೊಂಡಿರಲಿ, 150 ಕೋಟಿ ರೂ ಗಳನ್ನು ನಾನು ಸಂಗ್ರಹಣೆ ಮಾಡಿದ್ದೇನೆಂದು ಅಪಾದನೆ

ಬಂದುಬಿಟ್ಟಿದೆಯಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಾವು ಮಾಡಿದ ಅಪಾದನೆಯಲ್ಲ, ನಿಮ್ಮ ಗೆಳೆಯರು, ನಿಮ್ಮ ಜೊತೆಯಲ್ಲಿರುವವರು ಮಾಡಿದ್ದು

ಶ್ರೀ ಜೆ ಸಿ ಮಾಧುಸ್ವಾಮಿ ಇದರ ಜೊತೆಗೆ, ಈಗ ಗೆ ಸೇರಿರುವಜಂಭುನಾಧನ ಹಳ್ಳಿ ಮೈನ್ಸ್ ಏಪ್ರಿಲ್‌ನಲ್ಲಿಯೇ ಆಗಬೇಕಾಗಿತ್ತು ನಿಮಗೆ ಗೊತ್ತು ಆದರೆ, ಇವತ್ತಿನವರೆಗೆ ಮಾಡಿಲ್ಲ ಮಾಡಲಿಲ್ಲವೇಕೆ? ಒಂದು ದಿವಸ ಹೋದರೆ ಅವನು 20,000 ಟನ್ lift ಮಾಡುತ್ತಾನೆ, 7 ದಿವಸ ಹೋದರೆ ಇನ್ನೊಂದು 20,000 ಟನ್ lift ಮಾಡುತ್ತಾನೆ ಇವತ್ತು 500,600 truck move ಆಗುತ್ತದೆ ನಮಗೆ ಇದು ಸ್ವಲ್ಪ ಅನುಭವ ವಾಗಿಬಿಟ್ಟಿದೆ ನಾನೂ ನಿಮ್ಮ ಹಾಗೇ Mining area ದಲ್ಲಿ ಬದುಕಿದ್ದೇನೆ ನಿಮ್ಮದು ಸ್ವಲ್ಪ ದೂರವಿರಬಹುದು ನನ್ನ ಮನೆಯಿಂದ ಮೂರೇಮೂರು ಕಿ ಮೀ ನಲ್ಲಿ Mines blast ಆಗುವುದಿದೆ ಪುಣ್ಯಕ್ಕೆ ನಾವು ಆಚೆ ಉಳಿದು ಕೊಂಡಿದ್ದೇವೆಲ್ಲಪ್ಪ ದೇವರೆ ಎನ್ನುವ ಸ್ಥಿತಿಗೆ ಬಂದುಬಿಟ್ಟಿದ್ದೇವೆ ಸಾರ್ ಅಂಥ ಕಡೆ everday is a day for the Government ಪ್ರತಿ ದಿವಸ ಕೂಎ ನಿಮಗೆ ಸಾವಿರಾರು, ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಆದಾಯ ತರುವ ದಿನಗಳಲ್ಲಿ ನೀವು renew ಮಾಡಬೇಕಾದ agreement ಅನ್ನು renew ಮಾಡುವುದಿಲ್ಲ, ಮುಂದುವರಿಸಿಕೊಂಡು ಹೋಗಲಿ ಎಂದು ಬಿಟ್ಟು ಕುಳಿತು ಬಿಟ್ಟರೆ, ಅವನು ಕೊರ್ಟ್‌ಗೆ ಹೋಗುತ್ತಾನೆ, ಒಂದು, ಎರಡು ವರ್ಷವೂ agreement ಅನ್ನು ಬೇಕೆಂದೇ enhance ಮಾಡಿಸಿಕೊಳ್ಳುತ್ತಾನೆ This is all with commitment You are connived

ಶ್ರೀ ಎನ್ ಯೋಗಿಶ್ ಭಟ್ ಯಾವ್ಯಾವ ವರ್ಷಗಳಲ್ಲಿ ಈ ಹಗರಣ ನಡೆಯಿತು ಎನ್ನುವಂಥ ಮಾಹಿತಿ ಕೊಟ್ಟರೆ ಹೆಚ್ಚು ಉಪಯುಕ್ತವಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಭಟ್‌ರವರೆ, ವರದಿ ಇರುವುದರಿಂದ ನಾನು ಪೂರ್ಣ ಓದಬಾರದೆಂದು gist ಹೇಳಿಕೊಂಡು ಹೋಗುತ್ತಿದ್ದೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ Report ಕೊಟ್ಟವರು ನಿಮ್ಮ ಪಕ್ಕದಲ್ಲಿಯೇ ಇದ್ದಾರೆ ಆ report ಓದಿಕೊಂಡೆ ಗೊತ್ತಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ You are right ನೀವಿನ್ನೂ exhaustive ಆಗಿ ಕೊಟ್ಟಿದ್ದೀರಿ I appreciate But ವರದಿ table ಆಗಿರುವುದರಿಂದ ನೂರಕ್ಕೆ ನೂರು ಓದುವುದು ಬೇಡವೆಂದು ನಾನು ಇದ್ದೆ

ಶ್ರೀ ಎಂ ಪಿ ಪ್ರಕಾಶ್ ನೀವು ಎಲ್ಲಿ ಸೇರಿಕೊಂಡಿದ್ದೀರೋ ಎಂದಾಗಬಾರದು ಡೇಟ್ ಹೇಳಿಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ ನಾನೇ? ನಾನೆಂದೂ ಸರ್ಕಾರ ನಡೆಸಿಲ್ಲ We maintained the advantage

ಶ್ರೀ ಜಿ ವಿ ರಾಮರೆಡ್ಡಿ ಸರ್ಕಾರ ನಡೆಸಿದವರಿಗೆ disadvantage ಇದೆ ಎಂದು ಹೇಳಿ ಈ ರೀತಿ ನಡೆದುಕೊಂಡು ಹೋಗಬಹುದೆಂದು ಅದರ ಅರ್ಥ? ಅಪಾದನೆಗೆ ಗುರಿಯಾಗುವ ಪ್ರಶ್ನೆಯಲ್ಲ Advantage ಇದೆ ಎಂದು ಹೇಳಿದರೆ, ಹಾಗಾದರೆ ಸರ್ಕಾರ ನಡೆಸುವವರಿಗೆ ಎಲ್ಲವೂ disadvantage ಎಂದು ಹೇಳಿ ಕೆಲವು disadvantage ಗಳನ್ನು ಸುಮ್ಮನೆ ನೋಡಿಕೊಂಡಿರಿಎಂದು ಹೇಳಲಿಕ್ಕಾಗುತ್ತದೆಯೇ?

ಶ್ರೀ ಜೆ ಸಿ ಮಾಧುಸ್ವಾಮಿ ಇಲ್ಲ, ಇಲ್ಲ ಕಮಿಟಿ ರಿಪೋರ್ಟ್ ಮೇಲೆ

ಶ್ರೀ ಎಂ ಪಿ ಪ್ರಕಾಶ್ ಸರ್ಕಾರದ ಹೊರಗಡೆ ಇದ್ದು ಸರ್ಕಾರಕಿಂತಲೂ ಚೆನ್ನಾಗಿ ಕಮಾಯಿಸುವುದು ಗೊತ್ತಿರುತ್ತದೆ ಆದ್ದರಿಂದ ಎಲ್ಲರೂ ಸತ್ಯ ಸಂಧರೆಂದು ಹೇಳಬೇಕಾದಂಥದ್ದೇನೋ ಇಲ್ಲಿಲ್ಲ ಪ್ರಶ್ನೆ ಬಂದಿರುವುದು, ಯಾವ ಅವಧಿಯಲ್ಲಿ ಆಯಿತು? ಎನ್ನುವಂಥ ಪ್ರಶ್ನೆ ಕೇಳಿದರು ಅದಕ್ಕೆ ಉತ್ತರ ಕೊಡಿ

ಶ್ರೀ ಜೆ ಸಿ ಮಾಧುಸ್ವಾಮಿ ಅದು ಬಹಳ ಹೊತ್ತು ತೆಗೆದುಕೊಂಡು

ಬಿಡುತ್ತದೆಂದು ನಾನು ಹೇಳಲು ಹೋಗಲಿಲ್ಲ ಹೇಳಿ ಎಂದರೆ, ಓದುತ್ತೇನೆ ಎಲ್ಲರ ಹತ್ತಿರವೂ ರಿಪೋರ್ಟ್ ಇದೆ ಎಂದು ನಾನು ಓದಲಿಲ್ಲ ನಮಗೇನಿಲ್ಲ ಇದು tabled report ಅಲ್ಲವೇ ಸಾರ್? ಎಲ್ಲವನ್ನು ಏಕೆ ಓದಬೇಕೆಂದು ಓದಲಿಲ್ಲ ಹಾಗಾಗಿ ಇದರ ಬಗ್ಗೆ ಇನ್ನು ಅನೇಕ ಜನರು ಚರ್ಚೆ ಮಾಡಬಹುದು ಎಂದು ಭಾವಿಸಿದ್ದೇನೆ ತಕ್ಷಣ ಸರ್ಕಾರದವರು ಈ ವರದಿಯನ್ನು ಅನುಷ್ಠಾನಕ್ಕೆ ತರುವ ತೀರ್ಮಾನ ತೆಗೆದುಕೊಳ್ಳಬೇಕು ತಕ್ಷಣ ಆ property ಯನ್ನು ಮಾಡಬೇಕು ಈಗ ಯಾರ್‍ಯಾರು ಲೂಟಿ ಮಾಡಿದ್ದಾರೆ ಅಥವಾ ಲೂಟಿ ಮಾಡಲಿಕ್ಕೆ ಶಾಮೀಲಾಗಿದ್ದಾರೆ, ಸರೀಕಾಗಿದ್ದಾರೆ, ಅವರನ್ನು identify ಮಾಡಿ ಅವರ ಮೇಲೆ action ತೆಗೆದುಕೊಳ್ಳಬೇಕು ಆಮೇಲೆ ಯಾರ್‍ಯಾರು Mines, Ore ಇದೆಲ್ಲ ನಮ್ಮಪ್ಪನ ಆಸ್ತಿ ಎಂದು ಕಾಗದ ಕೊಡುತ್ತಿದ್ದಾರೆ, ಅವರ್‍ಯಾರೋ ಬೃಹಸ್ಪತಿಗಳು, ದೊಡ್ಡವರಂತೆ ಕೇವಲ 288 ಜನರದ್ದು ಇಷ್ಟೇ ಇದೆ, ಒಂದು ಸೈಟ್ ತೆಗೆದುಕೊಂಡರೆ ಏನಾಯಿತು ಸಾರ್? ಈಗ Mines ಕಾಗದ ಕೊಡುವುದನ್ನು ಬಿಟ್ಟು ಎಂದು ಇದೇನೂ ನಮಗೆ ಅನಿಸುವುದಿಲ್ಲ ಕಾಗದದಲ್ಲಿ 10,20,30,000 ಟನ್ ಪಾಸ್ ಆಗಿ ಬಿಟ್ಟರೆ, ಬೆಂಗಳೂರಿನಲ್ಲಿ 2 ಸೈಟ್ ತೆಗೆದುಕೊಳ್ಳಬಹುದು ಏನು ಅದೇ ಬಹಳ ಎಂದು ಹೇಳಿ ನಾವು ಮಾತನಾಡಿಕೊಂಡು ಕುಳಿತಿದ್ದೇವೆ ಈ ಪುಣ್ಯಾತ್ಮನನ್ನೂ ಸ್ವಲ್ಪ ಆಚೆ ತರಬೇಕು It is your moral responsibility you have to do it ಏತಕ್ಕೆ ನೀವು MML Company ಯನ್ನು Mysore Lamps ಅನ್ನು Soaps and Detergent Company ಯನ್ನು ಮುಚ್ಚುತ್ತಿದ್ದೀರಿ? ಒಂದು ಕಡೆ, ಕೆಲಸವಿಲ್ಲವೆಂದಲ್ಲ, ಹೊಡೆದುಕೊಂಡು ತಿನ್ನುವುದಕ್ಕೆ ಜಮೀನನ್ನು ಕೂಡ ತಿನ್ನುವ ಆಸೆ ಇದೇನೂ ಸುಳ್ಳಲ್ಲ ಕಾಲ ಕಾಲಕ್ಕೆ ಅದರ ಮೇಲೆ ಕಣ್ಣಿಟ್ಟು, ನಾವು ಇದನ್ನು "ಉಂಡವರ ಮನೆಯಲ್ಲಿ ಜಂತಿ ಎಣಿಸುವುದು" ಎನ್ನುತ್ತೇವೆ ಯಾರ ಮನೆಗಾದರೂ ಊಟಕ್ಕೆ ಹೋದರೆ, ಜಂತಿ ಎಣಿಸುವುದು, ನಾಳೆ ಬಂದು ಏನೇನು ಕದಿಯಬಹುದು ಇವರ ಮನೆಯಲ್ಲಿ ಎಂದು ಜಂತಿ ಎಣಿಸುವುದು ನಾವೆಲ್ಲ ಜಂತಿ ಹಾಕಿಬಿಟ್ಟು ಹೆಂಚು ಹಾಕುತ್ತೇವಲ್ಲ ಹೆಂಚು ತೆಗೆದು ಜಂತಿ ಇಳಿದು ಇಳಿಯುವುದಕ್ಕೆ ಉಂಡವರ ಮನೆಯ ಜಂತಿ ಎಣಿಸುವಂಥ ಸರ್ಕಾರಗಳು ಬಂದರೆ, ಊಟಕ್ಕೆ ಹಾಕಿದವರ ಗತಿ ಏನು ಎಂದು ಹೇಳಿ ನನಗರ್ಥವಾಗಬೇಕಾಗಿದೆ ಈ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು ಯಾವ ರೀತಿ ತನಿಖೆ ಮಾಡಿಸುತ್ತೀರಿ? ಮತ್ತೆ, ಈ

ವರದಿಯನ್ನು ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತರುತ್ತೀರಿ ಎಂಬ ಬಗ್ಗೆ ಉತ್ತರ ಹೇಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ನಾನು ಹೆಚ್ಚಿಗೆ ವಿಚಾರ ಹೇಳಲಿಕ್ಕೆ ಹೋಗುವುದಿಲ್ಲ ಪ್ರಮುಖವಾದ ಒಂದು ವಿಷಯವನ್ನು ನಾವೆಲ್ಲರೂ ಗಮನಿಸಬೇಕಾಗಿದೆ ತಾರೀಖುಗಳನ್ನು ಹೇಳಿ ಎಂದು ಮಾನ್ಯ ಯೋಗಿಶ್ ಭಟ್‌ರವರು ಹೇಳಿದರು ಇದು ಬಹಳ ಹೆಚ್ಚಾಗಿ 1999 ರಿಂದೀಚೆಗೆ ಈ ವರದಿಯಲ್ಲಿ mention ಮಾಡಿದ್ದಾರೆ 1999 ರಿಂದೀಚೆಗೆ ಇದರಲ್ಲಿ ದೊಡ್ಡ fraud ನಡೆದಿರುವುದೇನೆಂದರೆ, ಈ ಒಂದು ಕಂಪನಿಗೆ ಅದಿರನ್ನು ಮಾರಲಿಕ್ಕೆ ನೀವು ಒಪ್ಪಂದ ಮಾಡಿಕೊಂಡಿರಿ ಆ ಒಪ್ಪಂದ ಮಾಡಿಕೊಂಡಾದ ಮೇಲೆ ಆಗಿರತಕ್ಕಂಥ ಅನಾಹುತಾಗಳು 1999 ರಿಂದೀಚೆಗೆ ಎಂದು ಹೇಳಿ ವರದಿಯಲ್ಲಿ ಬಂದಿದೆ ಇವತ್ತು ನಾವು ಖಾಸಗೀಕರಣದ ಬಗ್ಗೆ ಬಹಳ ಹೆಮ್ಮೆ ಪಡುತ್ತಿದ್ದೇವೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯನ್ನು ನಷ್ಟವನ್ನು ಅನುಭವಿಸುತ್ತವೆ, ಇವರು ನಡೆಸುವುದು ಬೇಡ, ಬಿಳಿ ಆನೆಗಳು, ಇವುಗಳನ್ನು ಸಾಕಲಿಕ್ಕಾಗುವುದಿಲ್ಲ ಎಂದು ಎಲ್ಲ ಕಡೆ ಪ್ರಚಾರ ಮಾಡಿಬಿಟ್ಟಿದ್ದೇವೆ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು, ಸರ್ಕಾರಿ ಸ್ವಾಮ್ಯದ ಯಾವುದೇ ಕಂಪನಿಗಳು ನಷ್ಟವಾಗುವುದಿಲ್ಲ, ಅದನ್ನು ನಷ್ಟ ಮಾಡಿಸಿದ್ದೇವೆ ವ್ಯವಸ್ಥಿತವಾಗಿ, ಬಹಳ ಬುದ್ಧಿವಂತಿಕೆಯಿಂದ, ಪ್ರಜ್ಞಾಪೂರ್ವಕವಾಗಿ ಆಡಳಿತ ನಡೆಸುವ ಜನರು, ನಡೆಸಲಿಕ್ಕೆ ಸೂಚನೆ ಕೊಡುವ ಜನ ವ್ಯವಸ್ಥಿತವಾಗಿ ನಾವು ಪ್ರಯತ್ನ ಮಾಡಿ ಅವುಗಳನ್ನು ನಷ್ಟದಲ್ಲಿ ತಂದಿದ್ದೇವೆ ಎಂ ಎಂ ಎಲ್ ಅನ್ನು ಸ್ಥಾಪನೆ ಮಾಡಿದ ಉದ್ದೇಶವೇನು? ವ್ಯಾಪರದಲ್ಲಿ ಏಕ ಸ್ವಾಮ್ಯ ವಿರಬಾರದು, ಸರ್ಕಾರದ ಮಧ್ಯ ಪ್ರವೇಶವಿರಬೇಕು ಎನ್ನುವ ದೃಷ್ಟಿಯಿಂದ ಎಂಎಂಎಲ್ ಸ್ಥಾಪನೆಯಾಗಿದೆ ಆದರೆ, ಇವರು ಸ್ವತಃ ವ್ಯಾಪಾರ ಮಾಡುವ ಬದಲು ಬೇರೆ ಕಂಪನಿ ಜೊತೆ ವ್ಯಾಪರದಲ್ಲಿ ಪಾಲು ಹಂಚಿಕೊಳ್ಳಲಿಕ್ಕೆ ಹೋಗಿದ್ದರು ಅದರ ಪಾಪದ ಫಲವನ್ನು ಇವತ್ತು ನಾವು ಅನುಭವಿಸಬೇಕಾಗಿ ರತಕ್ಕಂಥದ್ದು ಎನ್ನುವುದನ್ನು ನಮ್ಮ ಸ್ನೇಹಿತರಾದ ಈ ಸಮಿತಿಯ ಅಧ್ಯಕ್ಷರು ವರದಿಯನ್ನು ಕೊಟ್ಟಿದ್ದಾರೆ ಆ ಸಮಿತಿ ವರದಿ ಕೊಟ್ಟಿದೆ ಈ ವರದಿಯಲ್ಲಿ ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡಲಿಕ್ಕಿರುವ ವಿಚಾರ ಯಾವುದೆಂದರೆ, ನೀವು 1999ರಲ್ಲಿ 253 ರೂ ಗಳಿಗೆ ಪ್ರತಿ ಟನ್ ಅದಿರು ಸಾಗಿಸಲಿಕ್ಕೆ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡಿರಿ ಆ ಒಪ್ಪಂದದ ಪ್ರಕಾರವೇ

ಪ್ರತಿ ವರ್ಷ ನೀವು ದರವನ್ನು ಪರಿಷ್ಕರಣೆ ಮಾಡಬೇಕಾಗಿತ್ತು ಪ್ರತಿ ವರ್ಷ ಅದನ್ನು renew ಮಾಡಬೇಕಾಗಿತ್ತು ಆ ಒಪ್ಪಂದಲ್ಲಿದ್ದಂಥ ಷರತ್ತುಗಳ ಪ್ರಕಾರವೇ ಮಾಡಬೇಕಾಗಿತ್ತು ಆದರೆ, ಸತತವಾಗಿ 2007 ರವರೆಗೂ ಕೂಡ ನೀವು ಪರಿಷ್ಕರಣೆ, renew ಮಾಡಲಿಲ್ಲ ಇದನ್ನು ಯಾರು ತಡೆದರು? ಏಕೆ ತಡೆದರು? ತಡೆದ ಮಹಾನುಬಾವರು ಯಾರು? ಯಾರಿಗೆ ಪ್ರಯೋಜನ ಮಾಡಲಿಕ್ಕೆ ತಡೆದರು? ಇಡೀ ವರದಿಯಲ್ಲಿ ನಾನು ಗಮನಿಸಿರುವುದು 3 ಕಂಪನಿಗಳಿಗೆ ಲಾಭ ಮಾಡಿಕೊಳ್ಳಲಿಕ್ಕೆ ನೀವು ಮಾಡಿದ್ದೀರಿ ಜಿಂದಾಲ್, ಕಲ್ಯಾಣಿ, ಶಿವಶಂಕರ್ ಈ ಮೂರು ಕಂಪನಿಗಳಿಗೆ ಬಹಳ ಪ್ರಮುಖವಾಗಿ ಲಾಭ ಮಾಡಿಕೊಳ್ಳಲಿಕ್ಕೆ 1999 ರಿಂದೀಚೆಗೆ ನೀವು ಮಾಡಿದ್ದೀರಿ ಇದರ Consideration ಏನು? Kalyani Group ಯಾರದು? ಇದರ ಪಾಲುದಾರರು ಯಾರು? ಇದರಲ್ಲಿ ಯಾರ್ಯಾರು ಇದ್‌ದಾರೆಂದು ಸರ್ಕಾರ ಇವತ್ತು ಬಹಿರಂಗ ಮಾಡಬೇಕು ಸತ್ಯ ಹರಿಶ್ಚಂದ್ರರು ಎಂದು ಹೇಳಿ ದೇಶಾದ್ಯಂತ ಪೇಪರುಗಳಲ್ಲಿ advertisement ಕೊಡುತ್ತಿದ್ದ ಜನ ನಾನು ಈ ರಾಜ್ಯವನ್ನು ಉದ್ದಾರ ಮಾಡಲಿಕ್ಕೆ ಬಂದಿದ್ದೇನೆಂದು ಹೇಳಿ pose ಕೊಟ್ಟು ಸರ್ಕಾರಗಳಿಗೆ ಸವಾಲು ಮಾಡತಕ್ಕಂಥವರೇ ಈ Kalyani Group ನ ಪಾಲುದಾರರು ಸರ್ಕಾರ ಹೇಳಲಿ ಇವರ ಸಂಬಂದಿಕರು, ಇವರ ಪಾಲುದಾರಾರರು ಯಾರ್ಯಾರು ಸಂಬಂಧ ಇದ್ದಾರೆ? ಏನು ಸಂಬಂಧ ಇದ್ದಾರೆಂದು ಹೇಳಬೇಕು ಜಿಂದಾಲ್ ಎಂದ ತಕ್ಷಣ ನನಗೆ ಆಸ್ಪತ್ರೆಯೇ ಜ್ಞಾಪಕ ಬರುತ್ತದೆ ರಾಜ್ಯ ಸಭಾ seat ಜ್ಞಾಪಕ ಬರುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಜಿಂದಾಲ್ ಎಂದರೆ ರಾಜ್ಯಸಭಾ seat ಗೆ try ಮಾಡಿದ್ದನ್ನು ಈಗ ನೆನಸಿಕೊಳ್ಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಆಸ್ಪತ್ರೆ ಎಂದು ಏಕೆ ಹೇಳಿದೆ ಎಂದರೆ, ನಮ್ಮ ದುರದೃಷ್ಟಕ್ಕೆ ಆ ಆಸ್ಪತ್ರೆ ಎಲ್ಲಿದೆ ಎಂದು ನಾನು ನೋಡಿಲ್ಲ, ಅಂಥ ಸ್ಥಿತಿ ನಮಗೆ ಇನ್ನೂ ಬಂದಿಲ್ಲ ಎಲ್ಲಾ ಮುಖಂಡರು ಆಸ್ಪತ್ರೆಗೆ ಹೋಗಿ admit ಆಗಿಬಿಡುವುದೆ ಯಾವ ಕಾರಣಕ್ಕೆ admit ಆಗುತ್ತಾರೋ ನನಗೆ ಗೊತ್ತಿಲ್ಲ ಅಂದರೆ ನಮ್ಮಂಥವರಿಗೆ ಅನುಮಾನ ಬರುತ್ತದೆ ದೊಡ್ಡ ದೊಡ್ಡ ಮುಂಖಡರೆಲ್ಲ ಹೋಗಿ ಆ ಆಸ್ಪತ್ರೆಯಲ್ಲಿ join ಆಗಿ ಅವರ ಜೊತೆ ಒಪ್ಪಂದ ಮಾಡಿಕೊಂಡಿರಬಹುದು

ಶ್ರೀ ಎಂ ಪಿ ಪ್ರಕಾಶ್ ಆಸ್ಪತ್ರೆಯ ಜಿಂದಾಲ್‌ಗೂ ಆ ಜಿಂದಾಲ್‌ಗೂ À§ Az ಹಿ®ಣಿC z ÃAlluminum ನದು, ಇದು ಸೀತಾರಾಮು ಜಿಂದಾಲ್ ರವರು ಅವರೇ ಬೇರೆ

ಶ್ರೀ ಜಿ ವಿ ಶ್ರೀರಾಮುರೆಡ್ಡಿ ನನಗೆ ಜ್ಞಾಪಕ ಬಂದಿದ್ದನ್ನು ಹೇಳುತ್ತಿದ್ದೇನಷ್ಟೆ. ಆಮೇಲೆ ರಾಜ್ಯಸಭಾ ಸ್ಥಾನಕ್ಕೆ ಪ್ರಯತ್ನ ಮಾಡಿದರು

ಅಧ್ಯಕ್ಷರು ಲೋಕಸಭೆ, ರಾಜ್ಯಸಭೆಗಾದರೂ ಮಾಡಲಿ ಅಲ್ಲಿ ಏನೇನು ಅವ್ಯವಹಾರ ಮಾಡಿದ್ದಾರೆ, ನಿಮ್ಮ ಅದಿಕಾರಿಗಳು ಅವರಿಗೆ ಯಾವ ರೀತಿ ಸಹಕರಿಸಿದ್ದಾರೆ ಅದರ ಬಗ್ಗೆ ಹೇಳಿ ಬೇರೆ ವಿಚಾರ ನಮಗೇಕೆ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನೀವು ಹೊರಗಿನ Industrialists ಅನ್ನು ಕರೆದುಕೊಂಡು ಬಂದು ಇಲ್ಲಿ ರಾಜ್ಯಸಭಾ member ಮಾಡುತ್ತೀರಿ ಯಾರೋ ಒಬ್ಬ ಇನ್ನೊಬ್ಬ ಪ್ರಯತ್ನ ಮಾಡಿದರೆ, ಆ industrialist ಪ್ರಯತ್ನ ಮಾಡಿದರೆ ಅವನು ಸರಿಯಿಲ್ಲವೆಂದು ಹೇಳುತ್ತೀರಿ ಒಬ್ಬ ಬೀದರ್ ನವರು ಬಂದು ಕಲ್ಯಾಣಿ group ನಲ್ಲಿರಬಹುದು, NICE company ಯುವನೇ ಇರಬಹುದು, ನಾವಿಲ್ಲಿ ಉದ್ದಾರ ಮಾಡುವುದಕ್ಕೆ ಬಂದಿರುವುದು, ಅವನು ಬೀದರ್‌ನವ, ಹುಟ್ಟಿದ್ದು ಬೀದರ್ ನಲ್ಲಿ ಅವನು ಸಾಯುವುದು ಅಲ್ಲಿಯೇ ಅವನ ಬೀಗರು ಇರುವುದು ಅಲ್ಲಿ, ಎಲ್ಲದಕ್ಕೂ ಸಾರಸಗಟಾಗಿ ಒಂದೇ ಔಷದಿ ಹಚ್ಚುವುದಕ್ಕೆ ಹೋಗಬೇಡಿ ಕೆಲವು ಜನರ ಬ್ಯಾಕ್‌ಗ್ರೌಂಡ್ ನೀವು ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು ಅದನ್ನು ಬಿಟ್ಟು ಎಲ್ಲರಿಗೂ ನೀವು ಮಸಿ ಬಳಿಯುವುದಕ್ಕೆ ಶುರು ಮಾಡಿದರೆ ಏನಾಗುತ್ತದೆ, ನಾಳೆ ಕರ್ನಾಟಕದವರೂ ಒಬ್ಬರೂ ಇರುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಕಳ್ಳರನ್ನು ಹೊರಗಡೆಯುವರು ಒಳಗಡೆಯವರು ಎಂದು ಎರಡು ಭಾಗ ಮಾಡುತ್ತೀರಾ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನೋ ನೋ ಕಳ್ಳರು ಇದ್ದರೆ ಶಿಕ್ಷೆ ಕೊಡಿ ಅದನ್ನು ಬಿಟ್ಟು ನೀವು ಏನು ಮಾಡುತ್ತಿದ್ದೀರಿ ಎಂದರೆ, ಕಳ್ಳರು

ಎನ್ನಲಿಲ್ಲ ನಿಮ್ಮ ದೃಷ್ಟಿಯಿಂದ ಯಾರು ಚೆನ್ನಾಗಿರುತ್ತಾರೋ ಅವರಿಗೆ ಒಂದು ಹೇಳವುದು

ಶ್ರೀ ಜೆ ಸಿ ಮಾಧುಸ್ವಾಮಿ ಯಾರಿಗೆ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಯಾರೇ ಇರಬಹುದು ಇನ್ನೊಬ್ಬರು ಅವನು ರಾಜ್ಯಸಭಾ ಮೆಂಬರ್ ಆದ ಹಾಗದರೆ ರಾಮಸ್ವಾಮಿ ಹೇಗೆ ಬಂದ? ರಾಜೀವ್ ಚಂದ್ರಶೇಖರ್ ಹೇಗೆ ಬಂದ? ಸುಮ್ಮನೆ ಅವೆಲ್ಲಾ ಮಾತನಾಡುವುದು ಬೇಡ

ಶ್ರೀ ಜೆ ಸಿ ಮಾಧುಸ್ವಾಮಿ ರಾಮಸ್ವಾಮಿ ಇರಬಹುದು ಮತ್ತೊಬ್ಬರು ಇರಬಹುದು, ಕುದುರೆ ವಿಷಯಕ್ಕೆ ಬಂದಾಗ ರಾಮಸ್ವಾಮಿಯವರ ಹೆಸರು ಹೇಳುತ್ತೇವೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಏನೇನು ತೆಗೆದುಕೊಂಡು ಹಾಕಿದರು, ಎಲ್ಲಾ ನಮಗೆ ಗೊತ್ತಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಸರಿ ಬಿಡಿ ಹಾಗಾದರೆ ಏನು ಗೊತ್ತಿದೆ ತಾವು ಹೇಳಬೇಕು

ಅಧ್ಯಕ್ಷರು ಕೈಗಾರಿಕೊದ್ಯಮಿಗಳ ಕತೆಗಳು ಬೇಡಿ

ಶ್ರೀ ಜೆ ಸಿ ಮಾಧುಸ್ವಾಮಿ ರಾಮಸ್ವಾಮಿ ವಿಷಯ ನಮ್ಮನ್ನು ಕೇಳಿದರೆ ನಮಗೆ ಹೇಗೆ ಗೊತ್ತು ಸಾರ್ ? ನಮಗೂ ಶ್ರೀರಾಮರೆಡ್ಡಿಗೂ ಗೊತ್ತೇ? ಹಾಗಾದರೆ ಹೇಳಿಬಿಡಿ, ಈ ರಾಜ್ಯದವರು ಏನು ಬೇಕಾದರೂ ಮಾಡಿಕೊಳ್ಳಬಹುದು, ಹೊರಗಡೆಯವರನ್ನು ಮಾತ್ರ ಟೀಕೆ ಮಾಡಿ ಎಂದರೆ, ಅಷ್ಟೆ ಮಾಡುತ್ತೇವೆ

ಅಧ್ಯಕ್ಷರು ಆ ರೀತಿಯಲ್ಲ ಕೈಗಾರಿಕೊದ್ಯಮಗಳಿಗೆ ಬೇರೆ ಬೇರೆ

ಪಕ್ಷಗಳ ಜೊತೆಗೆ ಸ್ನೇಹ ಇರುತ್ತದೆ ಅವೆಲ್ಲ ಇಲ್ಲಿ ಬೇಡ ಈಗ ಏನಾಗಿದೆ ಎಂದರೆ, ಎಂಎಂಎಲ್ ಬಗ್ಗೆ ಅದರ ಅವ್ಯವಹಾರಗಳ ಬಗ್ಗೆ ಅಷ್ಟನ್ನು ಮಾತ್ರ ಹೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಎಂಎಂಎಲ್ ಬಗ್ಗೆಯೇ ಹೇಳುತ್ತಿರುವುದು ಅಲ್ಲಿ ಈ ಕಲ್ಯಾಣಿ ಗ್ರೂಪ್ ಮೇಜರ್ ಆಗಿರುವುದು

ಅಧ್ಯಕ್ಷರು ಆ ವಿಚಾರ ಹೇಳಿ ಅಲ್ಲಿ ಏನೇನು ಅವ್ಯವಹಾರ ಆಗಿದೆ ಅದನ್ನು ಹೇಳಿ ಉಳಿದ ವಿಚಾರ ನಿಮಗೇಕೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಬಹಳ ಸ್ಪಷ್ಟವಾಗಿ ಮೂರು ಕಂಪನಿಗಳು ಎಂದು ಹೇಳಿದೆ (1)ಕಲ್ಯಾಣಿ) (2) ಜಿಂದಾಲ್ (3) ಶಿವಶಂಕರ ಈ ಮೂರು ಕಂಪನಿಗಳೆಂದು ನಾನು ಬಾರಿ ಸ್ಪಷ್ಟವಾಗಿ ಹೇಳಿದ್ದೇನೆ ಈ ಕಲ್ಯಾಣಿ ಗ್ರೂಪ್ ಜೊತೆಗೆ ಮೊದಲು 1999 ರಲ್ಲಿ ಒಪ್ಪಂದ ಮಾಡಿಕೊಂಡಿರುವ ಪ್ರಕಾರವೇ ಪ್ರತಿ ವರ್ಷ ಅದಿರಿನ ದರವನ್ನು ಪರಿಷ್ಕೃತ ಮಾಡಬೇಕಾಗಿತ್ತು 2007 ರವರೆಗೆ ಮಾಡಲಿಲ್ಲ ಇದು ಮೇಜರ್ ಬೆನಿಪಿಟ್ ಆಗಿರುವುದು ಕಲ್ಯಾಣಿ ಗ್ರೂಪ್‌ಗೆ ಜಿಂದಾಲ್ ನವರಿಗೂ ಬೆನಿಫಿಟ್ ಆಗಿದೆ ಶಿವಶಂಕರ್ ರವರಿಗೂ ಬೆನಿಪಿಟ್ ಆಗಿದೆ ಈ ಬೆನಿಫಿಟ್ ಮಾಡಲಿಕ್ಕೆ ಕಾರಣಕರ್ತರಾಗಿರುವವರು ಇದರಲ್ಲಿ ಕೆಲಸ ಮಾಡಿದ್ದಂಥ ಅಧಿಕಾರಗಳೇ ಬಾರಿ ನೋವಿನ ವಿಚಾರ ಏನೆಂದರೆ, ಯಾವ ಅಧಿಕಾರಿಗಳು ಈ ರಾಜ್ಯದ ಜನರು ಕೊಟ್ಟಿರುವ ಟ್ಯಾಕ್ಸ್ ನಿಂದ ಸಂಬಳ ತೆಗೆದುಕೊಂಡು ಈ ರಾಜ್ಯದ ಜನತೆಯು ಹಿತಾಸಕ್ತಿಯನ್ನು ಕಾಪಾಡುವುದು ಮತ್ತು ಸರ್ಕಾರದ ಹಿತಾಸಕ್ತಿಯನ್ನು ಕಾಪಾಡಲಿಕ್ಕೆ ಕೆಲಸ ಮಾಡಲಿಕ್ಕೆ ಅಲ್ಲಿಗೆ ಹೋದರು, ಅವರೇ ಇವರ ಜೊತೆಗೆ ಶಾಮೀಲಾಗಿರುವುದು ಅವರು ಶಾಮೀಲಾಗಿ ಈ ಕಂಪನಿಗಳಿಗೆ ಲಾಭ ಮಾಡಿಕೊಳ್ಳಲಿಕ್ಕೆ ಮಾಡಿರುವ ಒಂದು ಕೆಲಸ ಇದು ಮತ್ತೆ ಜಿಂದಾಲ್ ಹಾಗೂ ಶಿವಶಂಕರ್ ರವರ ಜೊತೆಯಲ್ಲೊ ಒಪ್ಪಂದ ಮಾಡಿಕೊಂಡಿದ್ದಾರೆ ಇವೆಲ್ಲವೂ ನಡೆದಿರುವುದು 1999 ರಿಂದ 2007 ರವರೆಗೆ ನಮಗೆ ಗೊತ್ತಿಲ್ಲಾ, ಯಾವ ಸರ್ಕಾರನೊ, ಯಾರು ಲೆಟರು ಕೊಟ್ಟರೋ ಯಾರು ಯಾರಿಗೆ ಕೊಟ್ಟರೋ ನಮಗೆ ಗೊತ್ತಿಲ್ಲ, 1999 ರಿಂದ 2007ನೇ ಸಾಲಿನವರೆಗೆ ಯಾರ್‍ಯಾರು ಅಧಿಕಾರದಲ್ಲಿದ್ದರೋ

ಅವರೆಲ್ಲರೂ ಕೂಡ ಭಾಗಿಗಳು ಎಂದು ಈ ವರದಿಯಲ್ಲಿ ಇದೆ

ಅಧ್ಯಕ್ಷರು ಲೆಟರುಗಳು ಕೊಟ್ಟರು ಸರಿ ಈಗ ಎಲ್ಲದಕ್ಕೊ ಲೆಟರ್ ಕೊಡುವಂಥ ಸಂಪ್ರದಾಯ ಬೆಳೆದು ಬಿಟ್ಟಿದೆ ಅದರೆ, ಅದೇನು ಆದೇಶವಲ್ಲ ಸಂಬಂಧಪಟ್ಟವರು ಆದೇಶ ಮಾಡಿದರೆ ಸರಿ ಇದಲ್ಲದೆ ಹೋದರೆ ಇವರು ಹೇಗೆ ಆ ಲೆಟರುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ? That particular MD is responsible Oral ಆಗಿ ಹೇಳಿದ್ದರೆ ಹೇಗಾಗುತ್ತದೆ? He is answerable ಅ ನೀವು ಅವರ ಬಗ್ಗೆ ಹೇಳಬೇಕು ಈಗ ಏನಾಗಿದೆ ಎಂದರೆ, ಕೆಟ್ಟ ಸಂಪ್ರದಾಯವನ್ನು ಸರ್ಕಾರಗಳು ಬೆಳೆಸಿಕೊಂಡು ಬಿಟ್ಟಿವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಹೇಳುವುದು ನೂರಕ್ಕೆ ನೂರು ಸತ್ಯವಿದೆ ಲೆಟರು ಕೊಟ್ಟ ತಕ್ಷಣ ಅದಿಕಾರಿಗಳು ಅದನ್ನು ಒಪ್ಪಬೇಕೆಂದೇನೂ ಇಲ್ಲ ಕೆಲವರು ಕೊಟ್ಟಂತಹ ಲೆಟರುಗಳನ್ನು ಕೆಲವು ಅದಿಕಾರಿಗಳು ರಿಜೆಕ್ಟ್ ಮಾಡುತ್ತಾರೆ ಕೆಲವರು ಒಪ್ಪುವುದಿಲ್ಲ ಇಲ್ಲೀಗಲ್ ಇದ್ದರೆ ರಿಜೆಕ್ಟ್ ಮಾಡಬೇಕಾಗುತ್ತದೆ

ಶ್ರೀ ಸಿದ್ದರಾಮಯ್ಯ ಕೆಲವು ಕಂಪನಿಗಳು ಏನು ಇವೆ, ಕಂಪನಿಗಳು minister ಬರೆದಿರುವ ಲೆಟರನ್ನೇ ರಿಜೆಕ್ಟ್ ಮಾಡಿರುತ್ತಾರೆ ಇವರಿಗೆ ಅನುಕೂಲವಾಗುವುದಾದರೆ ಯಾರೋ ಲೆಟರು ಬರೆದಿದ್ದರೆ ಅದನ್ನು ತೆಗೆದುಕೊಂಡು ಅದಕ್ಕೆ ಕೊಟ್ಟುಬಿಡುತ್ತಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹೌದು ನೀವು ಹೇಳುವುದು ಕರೆಕ್ಟ್

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಈಂಥವರ ಹತ್ತಿರ ಹೋಗಿ ಲೆಟರು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇನ್ನು ಕೆಲವು ಸಂದರ್ಭದಲ್ಲಿ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಮಂತ್ರಿಗಳೋ ಮತ್ತೊಬ್ಬರೋ ಯಾರೋ ಒಂದು ಲೆಟರು ಕೊಡುತ್ತಾರೆ ಇವರಿಗೆ ಅನುಕೂಲವಾಗುವ ಹಾಗೆ ಇದ್ದರೆ, ಮಂತ್ರಿಗಳು ಲೆಟರು ಕೊಟ್ಟಿದ್ದಾರೆ ಸಾರ್ ನಾನೇನು

ಮಾಡುವುದು ಎಂದು ಇನ್ನೊಬ್ಬರಿಗೆ ಹೇಳಿಬಿಡುತ್ತಾರೆ ಇವರಿಗೆ ಅನಾನುಕೂಲ ಆಗುವುದಿದ್ದರೆ ಮಂತ್ರಿ ಹೇಳಿದರು ಕೊಡಲ್ಲ ಹೋಗಿ ಎಂದು ಹೇಳಿ ಹೊರಗೆ ಕಳುಹಿಸಿ ಬಿಡುತ್ತಾರೆ ಇವರು ಆ ಲೆಟರ್ ಅನ್ನು ಕನ್ಸೀಡರ್ ಮಾಡಬೇಕೆಂದೇನೂ ಇಲ್ಲ, ಅದರೆಅಧಿಕಾರಿಗಳು ಲೂಟಿ ಹೊಡೆಯುವುದಕ್ಕೆ ಈ ಪತ್ರಗಳೇ ಕಾರಣವಾಗಿದೆ ಅದಿಕಾರಿಗಳು ಲೂಟಿ ಹೊಡೆಯುವುದಕ್ಕೆ ಈ ಪತ್ರವನ್ನು ನೆಪವನ್ನಾಗಿ ಮಾಡಿಕೊಂಡಿದ್ದಾರಷ್ಟೆ ಇದರಲ್ಲಿ ಪತ್ರಗಳು ಕೊಟ್ಟಿರುವವರೆಲ್ಲರಿಗೂ ಕೊಟ್ಟಿದ್ದಾರೆಂದೇನೂ ಇಲ್ಲ ಅಧಿಕಾರಿಗಳು ಈ ಪತ್ರವನ್ನು ಉಪಯೋಗಿಸಿಕೊಂಡಿದ್ದಾರೆ ಆ ರೀತಿಯಲ್ಲಿ ಇವತ್ತು ಇದರಲ್ಲಿ ಹೆಚ್ಚಿನ ಪಾಲು ಪಡೆದವರಲ್ಲಿ ಅಧಿಕಾರಿಗಳೇ ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ " ಕೋತಿ ಮೊಸರು ತಿಂದು ಮೇಕೆಯ ಮೂತಿಗೆ ಒರೆಸಿಬಿಡುತ್ತಂತೆ" ಅದು ಮೂತಿಗೆ ಮತ್ತಿಕೊಂಡಿರುವುದು ಎಲ್ಲರಿಗೂ ಕಾಣುತ್ತದೆ, ಅದರೆ ಇದು ನುಂಗಿರುವುದು ಯಾರಿಗೂ ಕಾಣಿಸುವುದಿಲ್ಲ ನಮ್ಮ ಪರಿಸ್ಥಿತಿ ಈ ರೀತಿಯಾಗಿದೆ ನಾನು ಏನು ಹೇಳುತ್ತೇನೆಂದರೆ, 2007ನೇ ಸಾಲಿನವರೆಗೆ ಒಪ್ಪಂದ ಮಾಡಿಕೊಂಡಿದ್ದರೆ ಏನಾಗುತ್ತಿತ್ತು? 2005, ವರದಿ ಇರುವುದು Agreement stands up to 2007 ರವರೆಗೂ ಯಾರ್‍ಯಾರು ಅದಿಕಾರಿಗಳು ಇದ್ದರೋ ಅವರ ಮೇಲೆ ಸರ್ಕಾರ ಕಾನೂನು ಪ್ರಕಾರ ತಕ್ಷಣ ಕ್ರಮ ತೆಗೆದು ಕೊಳ್ಳುವಂಥ ಧೈರ್ಯ ತೆಗೆದುಕೊಳ್ಳಬೇಕು ಇವತ್ತು ಸರ್ಕಾರ ಮನಸ್ಸು ಮಾಡಿದರೆ, ಇದನ್ನು ತಡೆಯಬಹುದು 2-3 ಅಧಿಕಾರಿಗಳಿಗೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆ ಕೊಟ್ಟುಬಿಟ್ಟರೆ ಬೇರೆಯವರಿಗೂ ಇನ್ನು ಮುಂದೆ ನಾವು ಮಾಡಬಾರದೆನ್ನುವ ಹೆದರಿಕೆ ಬರುತ್ತದೆ

ಅಧ್ಯಕ್ಷರು ಶಿಕ್ಷೆ ಕೊಡುವವರು ಯಾರು ಸ್ವಾಮಿ?

ಶ್ರೀ ಜಿ ವಿ ಶ್ರೀರಾಂರೆಡ್ಡಿ ಸರ್ಕಾರ ನೀವು ಅದ್ಯಕ್ಷರು ಈ ರೀತಿ ಹೇಳಿದರೆ ನಾವೇನು ಮಾಡುವುದು?

ಅಧ್ಯಕ್ಷರು ಅದೆಲ್ಲ ನಮಗೆ ಗೊತ್ತಿಲ್ಲ ಸ್ವಾಮಿ, ನಮ್ಮ ಸಿದ್ದ ರಾಮಯ್ಯನವರು, ನೀವು ಕಾಡಿನಿಂದ ಬಂದವರು, ಕಾಡಿನಿಂದ ಬಂದವರು, ಎಂದು ಹಾಸ್ಯ ಮಾಡುತ್ತಾರೆ ಅದಕ್ಕಾಗಿ ನಾನು ಕೇಳಿಕೊಂಡೆ ಸ್ವಾಮಿ

ಶ್ರೀ ಸಿದ್ದರಾಮಯ್ಯ ನೀವು ಸ್ಪೀಕರ್ ಆದವರೇ ಹೀಗೆ ಹೇಳಿಬಿಟ್ಟರೆ ಯಾರೂ ಮಾತನಾಡುವುದೇ ಬೇಡ ಏಕೆ ಮಾತನಾಡುವುದು?

ಅಧ್ಯಕ್ಷರು ಈ ದೇಶ ಆಳಿದವರು, ಆಳತಕ್ಕಂಥವರು, ಇದನ್ನೆಲ್ಲಾ ಕೇಳಿದಿರಿ, ಅದಕ್ಕೆ ಈ ವಿಚಾರ ಕೇಳಿದೆ ಸ್ವಾಮಿ ನನಗೆ ಗೊತ್ತಿಲ್ಲ

ಶ್ರೀ ಸಿದ್ದರಾಮಯ್ಯ ನೀವು ಕೂಡ minister ಆಗಿದ್ದೀರಿ ಅರು ತಿಂಗಳೋ ಒಂದೂವರೆ ವರ್ಷವೋ minister ಆಗಿದ್ದವರು

ಅಧ್ಯಕ್ಷರು ಆರು ತಿಂಗಳಿನಲ್ಲಿ ಏನು ಗೊತ್ತಾಗುತ್ತದೆ?

ಶ್ರೀ ಸಿದ್ದರಾಮಯ್ಯ ಆರು ತಿಂಗಳಲ್ಲ ಒಂದೂವರೆ ವರ್ಷ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಅದು ಆ ರೀತಿಯಲ್ಲ ಆರು ತಿಂಗಳು ಇದ್ದರೇನು ಒಂದು ವರ್ಷ ಇದ್ದರೇನು, ನೂರು ಆಕಳು ಗಳಲ್ಲಿ ಒಂದು ಹೋರಿ ಇರುತ್ತದೆ ಅದಕ್ಕೆ ಸುಮ್ಮನೆ ಒಂದು ವರ್ಷ, ಆರು ತಿಂಗಳು, ಎನ್ನುವ ಪ್ರಶ್ನೆಯಲ್ಲ ನೀವು ಕೂಡ ಆರು ತಿಂಗಳಿನಲ್ಲಿ ಟೇಸ್ಟ್ ನೋಡಿದ್ದೀರಲ್ಲವೆ? ಅದರ ಜೊತೆಗೆ ನೀವು ಇಬ್ಬರೂ ಒಂದೇ ಆಫೀಸ್ನಲ್ಲಿ ಇದ್ದವರು ನಮಗೆ ಚೆನ್ನಾಗಿ ಗೊತ್ತಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸರ್ಕಾರಕ್ಕೆ ಇವತ್ತೇನಾದರೂ ಪ್ರಮಾಣಿಕ ವಾದ ಕಾಳಜಿ ಇದ್ದು ಅಟ್ ಲೀಸ್ಟ್ ಇಬ್ಬರು, ಮೂರು ಜನ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮ ತೆಗೆದುಕೊಂಡು ಬಿಟ್ಟರೆ, ಇನ್ನು ಮುಂದೆ ಯಾದರೂ ಇಂಥ ಅನಾಹುತಗಳನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದ, ಎನ್ನುವುದು ನನ್ನ ಆಬಿಪ್ರಾಯ

ಅಧ್ಯಕ್ಷರು ನನ್ನದೊಂದು ಸಲಹೆ ಏನೆಂದರೆ, ಈಗ ಚರ್ಚೆ ಯಾಗುತ್ತಿದೆ Let the Government come out with a report after three months before the House ನನಗೆ ಅನ್ನಿಸುವುದು, otherwise ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ CBI enquiry ಆಗಬೇಕು

ಅಧ್ಯಕ್ಷರು ಯಾವುದಾದರೂ ಒಂದು, ಇಲ್ಲಿ ಅವ್ಯವಹಾರವಾಗಿದೆ ಎಂದು ಈಗ ಚರ್ಚೆ ಮಾಡುತ್ತಿದ್ದೇವೆ, they should come out with performance report

ಶ್ರೀ ಜಿ ವಿ ಶ್ರೀರಾವರೆಡ್ಡಿ ಇದ್ದಕ್ಕೆ CBI enquiry ಅಗಲೇ ಬೇಕು, ಇಲ್ಲಾಂದ್ರೆ ಸುಮ್ಮನೆ ಬಿಡುವುದಕ್ಕೆ ಆಗುವುದಿಲ್ಲ ಈ ವರದಿ ಪ್ರಕಾರ 700 ಕೋಟಿ ರೂಪಾಯಿ ಸರ್ಕಾರಕ್ಕೆ ಬರುವ ಹಣ ನಷ್ಟವಾಗಿದೆ

ಶ್ರೀ ಕೆ ಶ್ರೀನಿವಾಸ ಗೌಡ ನೀವು ಸರ್ಕಾರಕ್ಕೆ ಡೈರೆಕ್ಷನ್ ಕೊಡಬಹುದು ನೀವೇ ಡೈರೆಕ್ಷನ್ ಕೊಡಿ

ಅಧ್ಯಕ್ಷರು 700 ಕೋಟಿ ರೂಪಾಯಿಗಳನ್ನು ನಷ್ಟ ಮಾಡಿದ್ದಾರೆ ಇದರಲ್ಲಿ ಯಾರ್‍ಯಾರು ಇನ್ ವಾಲ್ವ್ ಆಗಿದ್ದಾರೆ, ಯಾರ್‍ಯಾರು ಸೇರಿದ್ದಾರೆಂದು ಗೊತ್ತಾಗಬೇಕಾದರೆ, CBI enquiry ಮಾಡಲಿ ಸರ್ಕಾರ ತಕ್ಷಣ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿ ಇದನ್ನು ಏನಾದರೂ ಉಳಿಸಬೇಕಾದರೆ ಈ ಕೆಲಸ ಮಾಡಿದರೆ, ಸರ್ಕಾರದ ಸ್ವಾಮ್ಯದಲ್ಲಿರುವ ಸಂಸ್ಥೆಗಳು ಉಳಿಯುತ್ತವೆ ಅಲ್ಲಿ ಕೆಲಸ ಮಾಡುವ ನೌಕರರು ಬದುಕುತ್ತಾರೆ, ಸರ್ಕಾರಕ್ಕೆ ಅಧಾಯ ಬರುತ್ತದೆ non tax revenue ಸರ್ಕಾರಕ್ಕೆ ಎಷ್ಟು ಹಚ್ಚಾದರೆ ಅಷ್ಟು ಸರ್ಕಾರಕ್ಕೆ ಲಾಭ ಇದೆ ಆದ್ದರಿಂದ, ತಮ್ಮ ಮೂಲಕ ನಾನು ಏನು ಕೇಳುತ್ತೇನೆಂದರೆ, ಮೊದಲನೇಯದಾಗಿ ಈ ಸರ್ಕಾರ ಸಂಪೂರ್ಣವಾಗಿ ಈ ವರದಿಯನ್ನು ಅಂಗೀಕರಿಸಬೇಕು (1) In toto Government has to accept this report, (2) enquiry must be conducted and concerned officer must be punished

ಶ್ರೀ ಜಿ ವಿ ಶ್ರೀರಾಮರೆಡ್ಡಿ ಯಾರ್‍ಯಾರು ಗಿಲ್ಟಿ ಇದ್ದಾರೆ ಮತ್ತು ಯಾರ್‍ಯಾರು ತಪ್ಪು ಮಾಡಿದ್ದಾರೆಯೋ ಅವರುಗಳನ್ನು ತಕ್ಷಣ ಶಿಕ್ಷೆಗೆ ಗುರಿಪಡಿಸಬೇಕು ಈ ಒಂದು ವರದಿಯ ಆಧಾರದ ಮೇಲೆ ಸರ್ಕಾರ ತನಿಖೆ ಮಾಡಬೇಕು ಮತ್ತೆ C B I ತನಿಖೆ ಕೂಡ ಆಗಬೇಕೆಂದು ನಾನು

ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) – ಮಾನ್ಯ ಅಧ್ಯಕ್ಷರೆ, ಸಮಿತಿಯವರು ಒಳ್ಳೆಯ ಪ್ರಯತ್ನವನ್ನು ಮಾಡಿದ್ದಾರೆ ಈ ಹಿಂದೆಯೂ ಕೂಡ ಸದನದಲ್ಲಿ ಅನೇಕ ವರದಿಗಳು ಬಂದಿವೆ ಆದರೆ, ಚರ್ಚೆ ಯಾಗಿಲ್ಲ ವಷ್ಟೆ ಇದಕ್ಕಿಂಥ ದೊಡ್ಡ ದೊಡ್ಡ ಅನಾಹುತಗಳಾಗಿರತಕ್ಕಂಥ ಸಂಸ್ಥೆಗಳಿವೆ ನಾನು ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಅಧ್ಯಕ್ಷನಾಗಿ ನೀಡಿದಂಥ ವರದಿಗಳ ಬಗ್ಗೆ ಪತ್ರಿಕೆಗಳಲ್ಲಿ ಬಂತು ಆದರೆ, ಸದನದಲ್ಲಿ ಚರ್ಚೆಯಾಗಲಿಲ್ಲ ನಾನೇ ಅಧ್ಯಕ್ಷನಾಗಿದ್ದರಿಂದ ಆ ವರದಿಗಳ ಮೇಲೆ ಚರ್ಚೆ ಮಾಡುವುದಕ್ಕೆ ಆಗಲಿಲ್ಲ ಆದ್ದರಿಂದ, ಆ ಸಂದರ್ಭದಲ್ಲಿ ನೀಡಿರತಕ್ಕಂಥ ವರದಿಗಳನ್ನು ತೆಗೆದು ನೋಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಸೋಪ್ ಅಂಡ್ ಡಿಟರ್ಜೆಂಟ್ ಮತ್ತು ಕೆ ಪಿ ಸಿ ಎಲ್ ಸಂಸ್ಥೆಗಳು millking cow ಎಂದು ಹೇಳುವುದಕ್ಕೆ ಬಯಸುತ್ತೇನೆ ಕೇವಲ ರಾಜಕಾರಣದ ಮುಖಂಡರ ಬಗ್ಗೆ ಮಾತ್ರ ನಾನು ಹೇಳುತ್ತಿಲ್ಲ ಇದರಲ್ಲಿ ಅಧಿಕಾರಿ ವರ್ಗಗಳ ಬಗ್ಗೆ ಹೆಚ್ಚಾಗಿ ಬರೆಯಲಾಗಿದೆ ಪತ್ರದ ಬಗ್ಗೆ ಇದರಲ್ಲಿ ಹೇಳಿದ್ದಾರೆ ಸದನದಲ್ಲಿ ಚರ್ಚೆಯಾಗಿರುವ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥದನ್ನು ಕಾನೂನು ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲವೆಂದು ಅವರೇ ಬರೆದು ಕಳುಹಿಸುತ್ತಾರೆ ಕೇವಲ ಪತ್ರವನ್ನು ಬರೆದಿದ್ದು, ಅದರಲ್ಲಿ ಇಂತಿಷ್ಟು ರೇಟ್ ಗೆ ಕೊಡಿ ಎಂದು ಬರೆದಿದ್ದಾರೆಯೇ? ಇಷ್ಟು ರೇಟ್ ಗೆ ಕೊಡಿ ಎಂದು ಯಾರು ಬರೆದಿಲ್ಲ ಪತ್ರವನ್ನು ಕೊಟ್ಟಿರುವುದು ತಪ್ಪೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ ಒಂದು ವೇಳೆ ಪತ್ರವನ್ನು ಕೊಟ್ಟಿದ್ದರೆ, ಇಂಥ ದರದಲ್ಲಿ ಕೊಡಿ ಎಂದು ಹೇಳಿಲ್ಲ 1200 ರೂಪಾಯಿಗೆ ಹೋಗುವುದಿಲ್ಲ 200,300 ರೂಪಾಯಿಗೆ ಕೊಡಿ ಎಂದು ಯಾರೂ ಪತ್ರದಲ್ಲಿ ಬರೆದಿರುವುದಿಲ್ಲ ಆದರೆ, ಅದನ್ನು ಆಧಾರವಾಗಿಟ್ಟುಕೊಂಡು ಲಾಭವನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ ಸಿ ಎ ಜಿ ರವರು 10% ನಲ್ಲಿ ಇಷ್ಟು ಕಂಡು ಬಂದಿದೆ tip of the ice burg ಇನ್ನೂ ಎಷ್ಟಿದೆ ಎಂಬುದು ನಮಗೆ ಗೊತ್ತಿಲ್ಲ ಪ್ರತಿಯೊಂದು ಸಂಸ್ಥೆಯ ಬಗ್ಗೆ ಸರ್ಕಾರ ಸಂಪೂರ್ಣವಾಗಿ ತನಿಖೆ ಮಾಡಿದರೆ ಇನ್ನಷ್ಟು ಅವ್ಯವಹಾರವಾಗಿರತಕ್ಕಂಥದ್ದು ಹೊರಕ್ಕೆ ಬರುತ್ತದೆ ಕೇವಲ 10% ನಲ್ಲಿ 700 ಕೋಟಿ ಅವ್ಯವಹಾರ ಆಗಿರುವುದು ಗೊತ್ತಾಗಿದೆ ಕೇಲವು ವ್ಯವಹಾರಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು

ಇದೆ 10% ನಲ್ಲಿ 700 ರಿಂದ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ಆಗಿರುವುದು ಸಿಕ್ಕಿದರೆ ಉಳಿದದ್ದರಲ್ಲಿ ಎಷ್ಟು ಬರುತ್ತದೆಂಬುದನ್ನು ತಮ್ಮ ಹತ್ತಿರ ಕೇಳುವುದಕ್ಕೆ ಇಷ್ಟಪಡುತ್ತೇನೆ ಒಂದು ಸಂಸ್ಥೆಗೆ ಒಬ್ಬ ಎಂ ಡಿ ಯನ್ನು ನೇಮಕ ಮಾಡಿದಾಗ ಕನಿಷ್ಟ 2 ವರ್ಷಗಳ ಕಾಲ ಅವರು ಅಲ್ಲಿ ಕೆಲಸ ಮಾಡುವಂತೆ ಮಾಡಬೇಕೆಂದು ನಾವು ಸಮಿತಿ ವತಿಯಿಂದ ಶಿಫಾರಸು ಮಾಡಿದ್ದೇವೆ ಇಲ್ಲಿ ನೋಡಿದರೆ 1,2 ತಿಂಗಳು ಮತ್ತು ಒಂದು ವರ್ಷಕ್ಕೆಲ್ಲಾ ವರ್ಗಾವಣೆ ಮಾಡಲಾಗಿದೆ ಅಂದರೆ, ಇದು temporary ಯಾಗಿ stop gap arrangement ಆಗಿದೆಯಷ್ಟೆ ದೊಡ್ಡ ಹುದ್ದೆಗೆ ಹೋಗುವುದಕ್ಕಿಂತ ಮುಂಚೆ ಇದು stop gap arrangement ಆಗುತ್ತದೆ ಅದರ ಮಧ್ಯದಲ್ಲಿ ಏನೇನು ಆಗುತ್ತವೆ ಎಂಬುದನ್ನು ನಾವು ಈಗ ಕಂಡಂಥಾಗಿದೆ ಮತ್ತೆ ಹಿಂದೆ ಯಾವ ಅಧಿಕಾರಿ ತಪ್ಪು ಮಾಡಿರತಕ್ಕಂಥದನ್ನು ಮುಂದೆ ಬರತಕ್ಕಂಥ ಅಧಿಕಾರಿ ಆ ವಿಷಯವನ್ನು ತಂದಿಲ್ಲ ಅಂದರೆ ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಕೊಟ್ಟಿಲ್ಲ ಮತ್ತೆ ಇದನ್ನು ನೋಡುವ ಪ್ರಯತ್ನವನ್ನು ಮಂತ್ರಿಗಳೂ ಸಹ ಮಾಡಿಲ್ಲ ಮಂತ್ರಿಗಳ ಗಮನಕ್ಕೆ ಅಧಿಕಾರಿಗಳೂ ಸಹ ತಂದಿಲ್ಲ ಇದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ ಮತ್ತೆ ಅಧಿಕಾರಿಗಳು ಪ್ರವಾಸ ಹೋಗಿರುವ ಬಗ್ಗೆ ಹೇಳುವುದಾದರೆ, ಅವರು ಎಷ್ಟು ಕಡೆ ಪ್ರವಾಸ ಹೋಗಿದ್ದಾರೆಂದು ಮತ್ತು ಎಷ್ಟು ವೆಚ್ಚ ಮಾಡಿದ್ದಾರೆಂದು ಹಾಗು ಅವರು ಪ್ರವಾಸಕ್ಕೆ ಹೋಗಿ ಬಂದ ನಂತರ ಎಷ್ಟು ಬಿಸನೆಸ್‌ನ್ನು ಆ ಸಂಸ್ಥೆಗೆ ತಂದಿದ್ದಾರೆ ಎನ್ನತಕ್ಕಂಥದರ ಬಗ್ಗೆಯೂ ಕೂಡ ಲೆಕ್ಕ ಹಾಕಬೇಕಾಗುತ್ತದೆ ಕೇವಲ ಈ ಒಂದು ಸಂಸ್ಥೆಯಲ್ಲಿ ಅಲ್ಲದೇ ಪ್ರತಿಯೊಂದು ಸಂಸ್ಥೆಯಲ್ಲಿಯೂ ಇದರ ಬಗ್ಗೆ ತನಿಖೆ ಮಾಡಬೇಕು ಕೇವಲ ದೆಹಲಿಗೆ ಹೋಗಿ ಬಂದಿದ್ದರೂ ಕೂಡ ಏತಕ್ಕೆ ಎಂದು ಕೇಳಬೇಕು ಅವರ ಸ್ವಂತ ಅಥವಾ ಸಂಸ್ಥೆಯ ಕೆಲಸಕ್ಕೂ ಎಂಬ ಮಾಹಿತಿಗಳನ್ನು ತೆಗೆದುಕೊಳ್ಳಬೇಕು ಇವತ್ತಿನ ದಿವಸ ವಿಧಾನ ಸೌಧದಲ್ಲಿಯೂ ಕೂಡ ಅಧಿಕಾರಿಗಳ ಛೇಂಬರ್ ತರಹ ಯಾವುದೂ ಇಲ್ಲ MSIL ನವರು ಖಂಡಿತ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಅವರು ಲಾಟರಿ ಮತ್ತು ಅಬ್ಕಾರಿ ವ್ಯವಹಾರದಿಂದಲೂ ಒಳ್ಳೆಯ ಲಾಭವನ್ನು ಮಾಡಿದ್ದಾರೆ ಅಂದರೆ, distribution of liquor ನಲ್ಲಿ ಲಾಭ ಮಾಡಿದ್ದರೆ ಈಗ ಅದನ್ನು ಕೊಡುವುದು ಕೂಡ ತೆಗೆದಾಯಿತು ಇಲ್ಲಿ ಪುನ MSIL ಮುಖಾಂತರ ಕೊಟ್ಟರೆ ಆ ಸಂಸ್ಥೆಗೂ ಸಹ ಲಾಭವಾಗುತ್ತಿತ್ತು ಮತ್ತೆ ಸರ್ಕಾರಕ್ಕೂ ಲಾಭ

ಬರುತ್ತಿತ್ತು ಏಕೆಂದರೆ, ಸರಿಯಾದ ಲೆಕ್ಕ ಸಿಗುತ್ತಿತ್ತು ಈಗಾಗಲೇ ಎಲ್ಲಾ ವಿಷಯವನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಸಂಸ್ಥೆಯ ಅಧಿಕಾರಿ ಮತ್ತು ನೌಕರರುಗಳಿಗೆ ಸಂಬಳ ಕೊಡತಕ್ಕಂಥದಕ್ಕೆ ಮತ್ತು ಸ್ವಯಂ ನಿವೃತ್ತಿ ಪಡೆದು ಕೊಂಡಿರುವವರಿಗೆ ಭತ್ಯೆಯನ್ನು ಪಾವತಿ ಮಾಡುವುದಕ್ಕೆ ಹಣ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಇರುವಾಗ ಕೋಟ್ಯಾಂತರ ರೂಪಾಯಿಗಳನ್ನು ಖಾಸಗಿಯವರಿಗೆ ಸುಮ್ಮನೆ ಕೊಟ್ಟುಬಿಟ್ಟರೆ? ಅವರಿಗೆ ಲಾಭ ಮಾಡಬೇಕಾದರೆ ಅಧಿಕಾರಿಗಳು ಸುಮ್ಮನೆ ಸಹಿ ಹಾಕಿ ಕೊಟ್ಟು ಬಿಟ್ಟರೆ? ಆದ್ದರಿಂದ, ಈ ಎಲ್ಲವರ ಬಗ್ಗೆ ಸರ್ಕಾರ ತನಿಖೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ ಸಮಿತಿಯ ಅವಧಿಯನ್ನು ತಾವು 2 ವರ್ಷ ಮಾಡಿರುವುದಕ್ಕೆ ತಮಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ ನಮಗೆ ಇದರಿಂದ ಒಳ್ಳೆಯದಾಗುವುದು ಏನೆಂದರೆ, ಒಂದು ವರ್ಷದ ಅವಧಿಯಲ್ಲಿ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಉತ್ತರವನ್ನು ಕೊಡಿ ಎಂದು ಕೇಳಿರುತ್ತೇವೆ ಅವರು ಆ ಪ್ರಶ್ನೆಗಳನ್ನು ಉತ್ತರ ಕೊಡದೆ ಒಂದು ವರ್ಷ ಅವದಿಗೆ ತಳ್ಳಿಕೊಂಡು ಹೋಗುತ್ತಾರೆ ಹೊಸ ಸಮಿತಿ ಬಂದರೆ ಹಿಂದಿನ ಸಮಿತಿಯಲ್ಲಿ ಏನಾಗಿದೆ ಎಂದು ಹೊಸ ಸಮಿತಿಯವರಿಗೆ ಗೊತ್ತಾಗುವುದಿಲ್ಲ ಒಂದು ವರ್ಷಗಳ ಕಾಲ ಉತ್ತರವನ್ನೇ ಕೊಡದೇ ಕೆಲವು ಸಲ ನಮಗೆ ಬೇರೆ ಸಭೆಗೆ ಹೋಗಬೇಕೆಂದು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಕರೆದಿದ್ದಾರೆಂದು ಮತ್ತು ತಾವು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಸಿಗಲಿಲ್ಲವೆಂದು ಸಮಿತಿ ಸಭೆಗೆ ಬರುವುದಕ್ಕೆ ಆಗುತ್ತಿಲ್ಲವೆಂದು ಒಂದು ವರ್ಷದವರೆಗೆ ಕಾಲ ತಳ್ಳಿಕೊಂಡು ಹೋಗುತ್ತಾರೆ ಒಂದು ವರ್ಷದ ನಂತರ ಹೊಸ ಸಮಿತಿ ಬಂದಾಗ ಇದ್ದನ್ನೇ ಮುಂದು ವರಿಸಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಇರುತ್ತಿತ್ತು ಆದ್ದರಿಂದ, ತಾವು ಸಮಿತಿಯ ಅವಧಿಯನ್ನು 2 ವರ್ಷಗಳವರೆಗೆ ಮಾಡಿರತಕ್ಕಂಥದು ಒಳ್ಳೆಯದಾಯಿತು ಒಂದು ವರ್ಷದಿಂದ 2 ವರ್ಷಗಳವರೆಗೆ ಮಾಡಿರತಕ್ಕಂಥದರ ಬಗ್ಗೆ ಕೆಲವರಲ್ಲಿ ಭಿನ್ನಾಭಿಪ್ರಾಯ ಇರಬೇಕು ಒಂದು ಟರ್ಮ್ ಅನ್ನು ಎರಡು ಭಾಗವನ್ನಾಗಿ ಮಾಡಿ ಎರಡೂವರೆ ವರ್ಷ, ಎರಡೂವರೆ ವರ್ಷ ಮಾಡಿದರೆ ಎಲ್ಲಾ ಸಮಿತಿಗಳು ಉತ್ತರವನ್ನು ತರಿಸಿಕೊಂಡು ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಸಿ ಎ ಜಿ ರವರು ಕೊಟ್ಟಿರುವ ವರದಿಯ ಮಾಹಿತಿಯ ಜೊತೆಗೆ ಸಮಿತಿಯವರು sumoto ಪ್ರಶ್ನೆ ಕೇಳಿ ಉತ್ತರಗಳನ್ನು ತರಿಸಿಕೊಳ್ಳುವ ಅದಿಕಾರ ಇರುತ್ತದೆ ಈ ಸಮಿತಿಯುವರು ಆ ರೀತಿಯಾಗಿ ಮಾಡಿದ್ದಾರೆಂದು ನಾನು

ಭಾವಿಸಿಕೊಂಡಿದ್ದೇನೆ ಏಕೆಂದರೆ, ಅವರು ಕೇವಲ 10% ನಷ್ಟು ಮಾಡಿದ್ದರೆ ಉಳಿದದ್ದನ್ನು ನಾವು ಮಾಡುವುದಕ್ಕೆ ಸಾದ್ಯವಾಗುತ್ತದೆ ಇಲ್ಲದಿದ್ದರೆ ಏನಾಗುತ್ತದೆಂದರೆ, ಒಂದು ವರ್ಷ ಸಮಿತಿ ಅವಧಿ ಇದ್ದಾಗ ನಾವು ಬಂದು ಕುಳಿತುಕೊಂಡು ಹೋಗುವುದು ಮತ್ತು ಮುಂದಿನ ವರ್ಷ ಹೊಸ ಸಮಿತಿ ಒದು ಅವರು ಒಂದು ಅಥವಾ ಎರಡು ವರದಿಯನ್ನು ಮಾತ್ರ ಕೊಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು ಇವತ್ತಿನ ದಿವಸ ಒಂದೊಂದು ಸಮಿತಿಯವರು 10–12 ವರದಿಗಳನ್ನು ಕೊಡತಕ್ಕಂಥದು ನಿರ್ಮಾಣವಾಗಿದೆ ಈ ಸರ್ಕಾರ ಬಂದ ಮೇಲ್ರೆ ಅಂದರೆ, ಕಾಂಗ್ರೆಸ್–ಜೆ ಡಿ ಎಸ್ ಸರ್ಕಾರ ಅಥವಾ ಜೆ ಡಿ ಎಸ್–ಬಿಜೆಪಿ ಸರ್ಕಾರ ಬಂದ ಮೇಲೆ ಎಷ್ಟು ವರದಿಗಳನ್ನು ಸದನದ ಮುಂದೆ ಮಂಡಿಸಿದ್ದಾರೆಯೋ ಅವೆಲ್ಲವನ್ನೂ ಸಹ ತಾವು ತರಿಸಿ ಪರಿಶೀಲನೆ ಮಾಡಬೇಕು ಅದರಲ್ಲಿ ಏನೇನು ತಪ್ಪುಗಳಾಗಿವೆ ಎಂಬುದನ್ನು ಮತ್ತು ಯಾರ್ಯಾರು ಅದಕ್ಕೆ ಸಂಬಂಧಪಟ್ಟಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಸರ್ಕಾರದ ಸ್ವಾಮ್ಯದಲ್ಲಿ ಸುಮಾರು 10–50 ಸಂಸ್ಥೆಗಳಿದ್ದು ಕೇವಲ ಈ ಒಂದು ಸಂಸ್ಥೆ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಲ್ಲಾ ಸಂಸ್ಥೆಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ ಈ ಎಲ್ಲಾ ವ್ಯವಸ್ಥೆಯಲ್ಲಿ ಕೇವಲ ಪತ್ರಗಳನ್ನು ಕೊಟ್ಟವರು ಅಪರಾಧಿಗಳಲ್ಲ ಯಾರು ಆದೇಶವನ್ನು ಮಾಡಿದ್ದಾರೆ ಅವರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಿ ಆದರೆ, ಈ ಸದನದಲ್ಲಿ ನಾವು ಕುಳಿತುಕೊಂಡು ಕುಡಿಯುವ ನೀರಿನ ವ್ಯವಸ್ಥೆಗೆ ಮತ್ತು ಆಶ್ರಮ ಮನೆಗಳಿಗೆ ತೀರ್ಮಾನ ತೆಗೆದುಕೊಂಡಿದ್ದರೂ ಸಹ ಸಂವಿಧಾನ ಮತ್ತು ಕಾನೂನು ಅಡ್ಡ ಬರುತ್ತದೆಂದು ಹೇಳಿದಂಥ ಅಧಿಕಾರಿಗಳೇ ಇಲ್ಲಿಗೆ ಬಂದಿದ್ದಾರೆ ಇದರಲ್ಲಿರ ತಕ್ಕಂಥ ಅಧಿಕಾರಿಗಳ ಪಟ್ಟಿಯನ್ನು ನಾನು ನೋಡಿದ್ದೇನೆ ಅವತ್ತಿನ ದಿವಸ ವಿರೋಧ ಮಾಡಿರುವಂಥವರೇ ಇಲ್ಲಿದ್ದಾರೆ ಆದ್ದರಿಂದ, ಕೇವಲ ಪತ್ರವನ್ನು ಕೊಟ್ಟ ಕೂಡಲೇ ಆದೇಶವನ್ನು ಮಾಡಿದ್ದೇವೆಂದು ಹೇಳಿತಕ್ಕಂಥದು ತಪ್ಪು ಆಗುತ್ತದೆ ಒಂದು ವೇಳೆ ಮಂತ್ರಿಗಳ ಸ್ಥಾನದಿಂದ ಆದೇಶವನ್ನು ಮಾಡಿದರೆ ಮಂತ್ರಿಗಳು ಸಹ ತಪ್ಪುಗಾರರಾಗುತ್ತಾರೆಂದು ಹೇಳುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲರೂ ಇದರ ಬಗ್ಗೆ ಮಾತನಾಡಿದ್ದಾರೆ ಆದ್ದರಿಂದ, ನಾನು ಹೆಚ್ಚು ಸಮಯ

ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ ಸಾರ್ವಜನಿಕ ಉದ್ದಿಮೆ ಸಮಿತಿ ಕೊಟ್ಟಿರುವ ವರದಿಗೆ ನಿಜವಾಗಿಯೂ ಕೂಡ ಸ್ವಾಗತಾರ್ಹ ನನಗೆ ತಿಳಿದ ಮಟ್ಟಿಗೆ ಅಧಿಕಾರಿಗಳು ಅಥವಾ ರಾಜಕಾರಣಿಗಳ ಮೇಲೆ ಈ ರೀತಿಯಾದ ಗುರುತರವಾದಂಥ ಅಪರಾಧಗಳು ಇದ್ದರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ತಾವು ಕೊಟ್ಟಿದ್ದೀರಿ ಮುಂದಿನ ದಿನಗಳಲ್ಲಿ ಬೇರೆ ಬೇರೆ ಕಮಿಟಿಯವರು ಈ ರೀತಿಯಾದ ಗುರುತರವಾದಂಥ ವರದಿಗಳನ್ನು ಮಂಡಿಸಿದಾಗ ಅದರ ಮೇಲೂ ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮೊದಲನೆಯದಾಗಿ ಹೇಳುವುದಕ್ಕೆ ಬಯಸುತ್ತೇನೆ ನನಗೆ ಬಂದ ಮಾಹಿತಿ ಪ್ರಕಾರ 60 ಲಕ್ಷಟನ್ ಕಬ್ಬಿಣದ ಅದಿರನ್ನು ಜಿಂದಾಲ್ ರವರಿಗೆ ಕೊಟ್ಟಿದ್ದಾರೆ ಆದರೆ, ಇವತ್ತಿಗೂ ಕೂಡ ಎಮ್ ಎಮ್ ಎಲ್ ಅಥವಾ ಸರ್ಕಾರಕ್ಕೆ ಕಟ್ಟಬೇಕಾಗಿರತಕ್ಕಂಥ ಹಣದಲ್ಲಿ ಒಂದು ರೂಪಾಯಿಯನ್ನೂ ಸಹ ಕೊಟ್ಟಿಲ್ಲವೆಂಬ ಮಾಹಿತಿ ಇದೆ ಮಾನ್ಯ ಮಂತ್ರಿಗಳ ಗಮನಕ್ಕೆ ಇದನ್ನು ಏತಕ್ಕೆ ತರುತ್ತಿದ್ದೇನೆಂದರೆ, 220,230 ರೂಪಾಯಿ ದರದಲ್ಲಿ ನಿಗಧಿ ಮಾಡಿರತಕ್ಕಂಥ ದರದಲ್ಲಿಯೂ ಕೂಡ ಎಮ್ ಎಮ್ ಎಲ್ ಅಥವಾ ಸರ್ಕಾರಕ್ಕಾಗಲೀ ಕೊಡದೇ ಅದನ್ನೂ ಕೂಡ ಚರ್ಚೆ ಮಾಡಿ ಸಂಬಂಧಪಟ್ಟಂಥ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು ಮತ್ತೆ ರಾಜಕಾರಣಿಗಳು ಪತ್ರ ಕೊಡುತ್ತಾರೆ ನಾವುಗಳು ವಿರೋಧ ಪಕ್ಷದಲ್ಲಿದ್ದೇವೆ ನಮ್ಮ ಹತ್ತಿರ ಬಂದು ವರ್ಗಾವಣೆ ಅಥವಾ ಇನ್ಯಾವುದಕ್ಕೋ ಪತ್ರ ಕೇಳಿದಾಗ ನಾವು ವಿರೋಧ ಪಕ್ಷದಲ್ಲಿದ್ದೇವೆಂದು ಹೇಳಿದರೂ ಕೂಡ ನೀವು ನನಗೆ ಲೆಟರ್ ಕೊಡಿ ಉಳಿದದ್ದನ್ನು ನಾವು ನೋಡಿಕೊಳ್ಳುತ್ತೇವೆಂದು ಹೇಳುತ್ತಾರೆ ಆಗ ನಾವು ಏನು ಹೇಳುವುದಕ್ಕೆ ಬರುವುದಿಲ್ಲ ನನ್ನ ಲೆಟರ್ ಕೊಟ್ಟರೆ ಸಾಕೆಂದು ಹೇಳುತ್ತಾರೆ ನನ್ನ ಲೆಟರ್ ನೋಡಿದರೆ ಅವರು ಮಾಡುವುದಿಲ್ಲವೆಂದು ಹೇಳಿದರೂ ಕೂಡ ನೀವು ಲೆಟರ್ ನೋಡಿದರೆ ಅವರು ಮಾಡುವುದಿಲ್ಲವೆಂದು ಹೇಳಿದರೂ ಕೂಡ ನೀವು ಲೆಟರ್ ಕೊಡಿ ಎಂದು ಕೇಳುತ್ತಾರೆ ನಾವು ಈ ರೀತಿಯಾದ ಒಂದು ಪರಿಸ್ಥಿಗೆ ತಲುಪಿದ್ದೇವೆ ಏಕೆಂದರೆ, ಲೆಟರ್‌ನ್ನು ನಾವು ಕೊಡುವುದು ಬಿಡುವುದು ಅಂತಹ discretion ಕೂಡ ನಮ್ಮ ಕೈಯಿಂದ ಹೋಗಿಬಿಟ್ಟಿದೆ ಅವರು ಅದನ್ನು ಕೊಟ್ಟರೆ ಕೆಲಸವನ್ನು ಮಾಡಿಕೊಂಡು ಬಿಡೋಣವೆಂದು ಇರುತ್ತಾರೆ ಹಾಗಾಗಿ ಈ ಬಗ್ಗೆ ಸರ್ಕಾರ ಅದೇಶವನ್ನು ಕೊಟ್ಟಿದೆ ಫೈಲ್ ಮೇಲೆ ಆರ್ಡರ್ ಮಾಡಿದರೆ ಅಂತಹದ್ದರ ಮೇಲೆ ಕ್ರಮಗಳನ್ನು ಜರುಗಿಸಬೇಕೆನ್ನುವಂತಹ

ಮಾತನ್ನು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಆರ್ ರೋಷನ್ ಬೇಗ್ ಮಾನ್ಯ ಅಧ್ಯಕ್ಷರೆ, ಮೈಸೂರ್ ಮಿನರಲ್ಸ್ ನ ಬಗ್ಗೆ public Undertaking Committee ಯಿಂದ ಏನು ವರದಿ ಬಂದಿದೆ, ಅದಕ್ಕೆ ತಾವು discussion ಗೆ permission ನ್ನು ಕೊಟ್ಟಿದ್ದೀರಿ, ಅದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ ಅಧಿಕಾರಿಗಳ ಮೇಲೆ ಅದರಲ್ಲಿ ಜಿಂದಾಲ್ ರವರ ಮೇಲಾಗಲಿ, ಕಲ್ಯಾಣಿ ಹಾಗೂ ಶಿವಶಂಕರ್ ಇವರ್ಯಾರು ಲೂಟಿ ಮಾಡಿದ್ದಾರೆ, ಇವರು ಲೂಟಿ ಮಾಡುವುದಕ್ಕಾಗುತ್ತಿರಲಿಲ್ಲ unless politicians, ರಾಜಕಾರಣಿಗಳು ಅಧಿಕಾರಿಗಳ ಸಹಾಯ ಇಲ್ಲದೆ ಇದ್ದರೆ ಅವರುಗಳು ಲೂಟಿ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಅದಕ್ಕಾಗಿನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಸದನದಲ್ಲಿ ಇವತ್ತು ನಾನು ಕೂಡ ಹಿಂದಿನ ಸರ್ಕಾರದಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿದ್ದೆ ಮಂತ್ರಿಮಂಡಲದಲ್ಲಿ ಇದರ ಬಗ್ಗೆ ನನ್ನ ಗಮನಕ್ಕೆ ಯಾವುದೂ ಕೂಡ ಬಂದಿರಲಿಲ್ಲ ಇದನ್ನು ನೋಡಿದಾಗ ಆಗಿನಿಂದಲೂ ಲೂಟಿಯಾಗುತ್ತಿರುವ ಬಗ್ಗೆ this is a fit case for a CBI probe ತಾವು ಸರ್ಕಾರಕ್ಕೆ ಆದೇಶವನ್ನು ಕೊಡಬೇಕು ಸರ್ಕಾರ ಇದನ್ನು CBI ಗೆ refer ಮಾಡಬೇಕು ಆಗ ರೋಷನ್ ಬೇಗ್ ಗೆ ಸಿಮೀತವಾಗಿ CBI CBI ಅಂತ ಹೇಳುತ್ತಿದ್ದರು ನಾನು ಹಜ್ ಯಾತ್ರೆಗೆ ಹೋದರೆ ರೋಷನ್ ಬೇಗ್ ದೇಶವನ್ನು ಬಿಟ್ಟು ಓಡಿಹೋಗಿಬಿಟ್ರಾ ಎಂದು ಆಗ ಹೆಳುತ್ತಿದ್ದರಲ್ಲಾ, ಅಲ್ಲಿ ಕುಳಿತುಕೊಂಡಿದ್ದ ಕೆಲವರು ನಮ್ಮ ನಾಯಕರುಗಳು ಈಗ ಅಲ್ಲಿ ಸರ್ಕಾರದಲ್ಲಿ ಇದ್ದಾರಲ್ಲಾ, Is it not a fit case to refer to CBI when thousands of crores have been looted by these so-called industrialists in connivance with the politicians, in connivance with the bureaucrats? ದಯವಿಟ್ಟು ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಇಡೀ ಸದನ ಬಹಳ ಗಂಬೀರವಾಗಿ ಈ ವಿಚಾರವನ್ನು ಚರ್ಚೆ ಮಾಡಿದೆ ಈ ಬಗ್ಗೆ

ಸರ್ಕಾರ ಕ್ರಮವನ್ನು ಕೈಗೊಳ್ಳಲೇಬೇಕಾಗುತ್ತದೆ ಈಗಾಗಲೇ ಈ ಎಂಎಂಎಲ್ ಗೆ ಸಂಬಂಧಪಟ್ಟಂತಹ ಲೋಕಾಯುಕ್ತಕ್ಕೆ ಇದನ್ನು ಈಗಾಗಲೇ ಕಳುಹಿಸಿ ಕೊಟ್ಟಿದ್ದೇವೆ ಇದನ್ನು ಲೋಕಾಯುಕ್ತದವರು ನೋಡುತ್ತಿದ್ದಾರೆ ಬೇರೆ ಬೇರೆ ಹಗರಣಗಳಿಗೆ ಸಂಬಂಧಪಟ್ಟಂತೆ ಹಿಂದೆ ಇದ್ದಾಗ ಇದನ್ನು ಲೋಕಾಯುಕ್ತದವರು ಕಳುಹಿಸಿಕೊಟ್ಟಿದ್ದರು ಮೊದಲು ಭಟ್ ಸಮಿತಿಗೆ ಇಡೀ ವ್ಯವಸ್ಥೆಯನ್ನು ಕಳುಹಿಸಿಕೊಟ್ಟಿದ್ದೇವು ಭಟ್ ಸಮಿತಿಯ ವಿಚಾರ ತಮಗೆ ಗೊತ್ತಿದ್ದಂತೆ ಅದು ಮುಕ್ತಾಯವಾಯಿತು ಅದಾದನಂರರ ಇಡೀ ಹಗರಣದ ಪ್ರಕರಣ ಲೋಕಾಯುಕ್ತಕ್ಕೆ ಕಳುಹಿಸಿಕೊಟ್ಟಿದ್ದೇವೆ ಇದು ಒಂದು ಕಡೆ ಅಗಿದೆ ಇಂತಹ ಸಮಿತಿಗಳು ಕೊಟ್ಟಿರುವಂತಹ ವರದಿಯನ್ನು ತಿರಸ್ಕರಿಸುವ ಮತ್ತು ಒಪ್ಪುವ ಅಥವಾ ಭಾಗಶಃ ಒಪ್ಪುವ ಮತ್ತು ತಿರಸ್ಕರಿಸುವಂತಹ ಅಧಿಕಾರ ಸರ್ಕಾರಕ್ಕೆ ಇರುವುದರಿಂದ ಅದಕ್ಕೆ ತನ್ನದೇ ಆಗಿರುವಂತಹ ನಿಯಾಮಾವಳಿಗಳು ಇವೆ ಆ ನಿಯಮಾವಳಿಗಳ ಪ್ರಕಾರ ನಾವು ಖಂಡಿತವಾಗಿಯೂ ಕೂಡ ಕ್ರಮವನ್ನು ಕೈಗೊಳ್ಳುತ್ತೇವೆ ಇದರಲ್ಲಿ ಯಾರನ್ನು ಉಳಿಸುವ ಮತ್ತು ರಕ್ಷಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲವೆನ್ನುವಂತಹ ಮಾತನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ

ಅಧ್ಯಕ್ಷರು ಈ ಬಗ್ಗೆ ಸದನದಲ್ಲಿ ವಿಶೇಷವಾಗಿ ನಿಯಮಗಳನ್ನು ಸಡಿಲಿಸಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ ಏಕೆಂದರೆ ಇದು ಗಂಭೀರವಾದ ವಿಚಾರವಾಗಿದೆ ಸುಮಾರು 700 ಕೋಟಿ ರೂಪಾಯಿಗಳಷ್ಟು ಲೂಟಿ ಮಾಡಿದ್ದಾರೆ ಆ ಕಾರಣದಿಂದ ಸರ್ಕಾರದವರು 3 ತಿಂಗಳೊಳಗಡೆ ಏನು DVzÉJAzÀ Performance reportsss ನ್ನು ಸಲ್ಲಿಸಬೇಕೆಂದು ನಾನು ಹೇಳುತ್ತೇನೆ ಈಗ ಬಿಲ್ಲನ್ನು ಯಾವಾಗ ತೆಗೆದುಕೊಳ್ಳಬೇಕು ಹೇಳಿ ಎಪಿಎಂಪಿ ಬಿಲ್ ಬಹಳ ಮುಖ್ಯವಾದುದು ಇದೆ

ಶ್ರೀ ಕೆ ಶ್ರೀನಿವಾಸಗೌಡ ವಿಧೇಯಕಗಳ ಮೇಲೆ ಮಾತನಾಡುವವರು ಇಲ್ಲವೇ?

ಅಧ್ಯಕ್ಷರು ನಿನ್ನೆ ಏನಾಯಿತು ಎಂದರೆ, ಈ ದಿನ ತೆಗೆದು ಕೊಳ್ಳೋಣವೆಂದು ಹೇಳಿದ್ದೀರಿ

ಶ್ರೀ ಸಿದ್ದರಾಮಯ್ಯ ಎಲ್ಲರೂ ಊರಿಗೆ ಹೋಗುವವರಿದ್ದಾರೆ

ಅಧ್ಯಕ್ಷರು ಊರಿಗೆ ಹೋಗುವವರದು ಸರಿಯೇ, ಈ ಬಗ್ಗೆ ಏನಾದರೂ ತೀರ್ಮಾನವಾಗಬೇಕಲ್ಲಾ ಇದನ್ನು ಸೋಮವಾರ ಚರ್ಚೆಗೆ

193 (404) ಶ್ರೀ ಬಾಲರಾಜ್ ಎಸ್ (ಕೊಳ್ಳೆಗಾಲ)

ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ರಾಜ್ಯದಲ್ಲಿ ಅತಿ ಹೆಚ್ಚು ಕರೆಗಳನ್ನು ಕೊಳ್ಳೆಗಾಲವು ಹೊಂದಿರುವುದು ಮತ್ತು ಅತಿ ಹೆಚ್ಚು ಮೀನುಗಾರರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದರೆ ಮೀನುಗಾರಿಕೆ ಸಂಖ್ಯೆಗನುಗುಣವಾಗಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ನೀಡಲು ಆಗಿಂದಾಗ್ಗೆ ಮನವಿ ಸಲ್ಲಿಸಿದ್ದಾಗ್ಯೂ ನೀಡದಿರಲು ಕಾರಣಗಳೇನು ,

ಇ) ಈ ಸಾಲಿನಲ್ಲಿದ್ದರೂ ಮೀನುಗಾರರಿಗೆ ಅವಶ್ಯ ವಸತಿಯನ್ನು ನೀಡಲಾಗುವುದೇ?

ಶ್ರೀ ಬಿ ನಾಗರಾಜ್ ಶೆಟ್ಟಿ

ಅ) ರಾಜ್ಯದ ಇತರೆ ತಾಲ್ಲೂಕುಗಳಲ್ಲಿ ಹೆಚ್ಚು ಕೆರೆಗಳು ಮತ್ತು ಮೀನುಗಾರರಿರುವಂತೆ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಹ ಹೆಚ್ಚು ಕೆರೆಗಳು ಮತ್ತು ಹೆಚ್ಚು ಮೀನುಗಾರರಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಅನುದಾನದ ಲಭ್ಯತೆಗನುಗುಣವಾಗಿ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳನ್ನು ಮಂಜೂರು ಮಾಡಲಾಗುತ್ತಿದೆ

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

194 (123) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ)

ಶ್ರೀ ಶರಣ ಬಸಪ್ಪ ದರ್ಶನಾಪುರ (ಕೃಷಿಮಾರುಕಟ್ಟೆ ಸಚಿವರು)

ಅ ರಾಜ್ಯದಲ್ಲಿ ಕೃಷಿ ಮಾರಾಟ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಯಾವಾಗ ಅಳವಡಿಸಿಕೊಳ್ಳಲಾಗಿದೆ?

ಆ ದ್ವಿತೀಯ ಸಹಾಯಕರ ತಾತ್ಕಾಲಿಕ ಸೇನಾ ಜೇಷ್ಠತಾ ಪಟ್ಟಿಗೆ ಬಂದಿರುವ ಆಕ್ಷೇಪಣೆಗಳನ್ನು (ವಿವರ ನೀಡುವುದು)?

ಇ ಈ ಆಕ್ಷೇಪಣೆಗಳ ಬಗ್ಗೆ ಕೈಗೊಂಡಿರುವ ಕ್ರಮವೇನು ಅವುಗಳನ್ನು ಈವರೆಗೂ ಇತ್ಯರ್ಥಗೊಳಿಸದಿರುವ ಕಾರಣಗಳೇನು?

ಈ ದ್ವಿತೀಯ ದರ್ಜೆ ಸಹಾಯಕರ ಅಂತಿಮ ಸೇವಾಜೇಷ್ಠತಾ ಪಟ್ಟಿಯನ್ನು ಯಾವಾಗ ಪ್ರಕಟಿಸಲಾಗುವುದು?

ಉ ಈ ಇಲಾಖೆಯಲ್ಲಿ ಯಾವ ಯಾವ ದರ್ಜೆಯ ಎಷ್ಟು ಹುದ್ದೆಗಳು ಖಾಲಿ ಇವೆ, ಇವುಗಳಲ್ಲಿ ಎಷ್ಟು ಹುದ್ದೆಗಳನ್ನು ಮೇಲಿನ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು ಈ ನಿಟ್ಟಿನಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪೂರ

ಅ ಕೃಷಿ ಮಾರಾಟ ಇಲಾಖೆಯಲ್ಲಿ ಪರಿಷ್ಕೃತ ಕರಡು ವೃಂದ ಮತ್ತು ನೇಮಕಾತಿಗಳನ್ನು ದಿನಾಂಕ 06/02/2007ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ನಿಯಮಗಳನ್ನು ಸದ್ಯದಲ್ಲಿಯೇ ಹೊರಡಿಸಲಾಗುವುದು

ಆ 6 ವಿವರಗಳನ್ನು ಅನುಬಂಧ–1 ನಲ್ಲಿ ನೀಡಿದೆ

ಇ ಆಕ್ಷೇಪಣೆಗಳನ್ನು ಪರಿಶೀಲಿಸಿದ್ದು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿದೆ

ಉ ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ-2 ನಲ್ಲಿ ನೀಡಿದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮುಂಬಡ್ತಿಗೆ ಲಭ್ಯವಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು

ಅನುಬಂಧ-1

ದಿನಾಂಕ 01/01/2003 ರಲ್ಲಿದ್ದಂತೆ ದ್ವಿತೀಯ ದರ್ಜೆ ಸಹಾಯಕರ ಪದವೃಂದದ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಗೆ ಸ್ವೀಕರಿಸಲಾದ ಆಕ್ಷೇಪಣೆಗಳ ವಿವರ

ಕ್ರಸಂ ಆಕ್ಷೇಪಣೆಸಲ್ಲಿಸಿರುವ ನೌಕರರ ಹೆಸರು ಹಾಗೂ ಹುದ್ದೆ

1 ಎನ್ ಎಸ್ ಕೋಟೂರ, ವರ್ಗೀಕರಣಕಾರರು, ಕೃತವಮಾಸ, ರಾಣೆಬೆನ್ನೂರು

2 ವಿ ನಾಗರಾಜಯ್ಯ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ನಿರ್ದೇಶಕರ ಕಛೇರಿ, ಕೋಲಾರ

3 ಎಸ್ ಪಿ ಹಿರೆಮಠ್, ಮಾರಾಟ ಸಹಾಯಕರು, ಕೃಉಮಾಸ, ಬಳ್ಳಾರಿ

4 ಎ ಎಸ್ ಸ್ವರ್ಣಲತ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ನಿರ್ದೇಶಕರ ಕಛೇರಿ, ಹಾಸನ

5 ಎಮ್ ದೇವೇಂದ್ರಪ್ಪ, ಲೆಕ್ಕಿಗ ದರ್ಜೆ-3, ಕೃಉಮಾಸ, ಚಿತ್ತಾಪುರ

6 ಸಿ ಕೆ ಜೋರಾಪೂರ ದ್ವಿತೀಯ ದರ್ಜೆ ಸಹಾಯಕರು, ಕೃಉಮಾಸ, ಬೆಳಗಾಂ

ಆಕ್ಷೇಪಣೆ ವಿವರ

1 ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಹೆಸರು ಎಸ್ ಕೊಟ್ಟೂರ ಎಂದು ನಮೂದಿಸಿರುವುದನ್ನು ಎನ್ ಎಸ್ ಕೋಟ್ಟೂರ ಎಂದ ನಮೂದಿಸಿರುವುದನ್ನು ಎನ್ ಎಸ್ ಕೋಟ್ಟೂರ ಎಂದು ನಮೂದಿಸಲು ಕೋರಿರುತ್ತಾರೆ

2 ಈ ಹಿಂದೆ ಪ್ರತ್ಯೇಕ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಅವರ ಜೇಷ್ಠತೆ ಕ್ರಮ ಸಂಖ್ಯೆ 180 ರಲ್ಲಿದ್ದು, 1996ರಲ್ಲಿ ಎರಡೂ ಸೇವೆಗಳು ವಿಲೀನಗೊಂಡು ನಂತರ ಅವರ ಜೇಷ್ಠತೆಯು

ಕ್ರಮ ಸಂಖ್ಯೆ 482ರಲ್ಲಿ ಆಗಿರುವುದು ತೃಪ್ತಿಕರವಾಗಿಲ್ಲವೆಂದು ಆಕ್ಷೇಪಿಸಿರುತ್ತಾರೆ

3 ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜೇಷ್ಠತಾ ಪಟ್ಟಿಯ್ಲಿ ಸದರಿಯವರ ಹೆಸರು ಎನ್ ಪಿ ಹಿರೇಮಠ ಎಂದು ನಮೂದಿಸಿರುವುದನ್ನು ಎಸ್ ಪಿ ಹಿರೇಮಠ ಎಂದು ನಮೂದಿಸಲು ಕೋರಿರುತ್ತಾರೆ

4 ದಿನಾಂಕ 31/12/1996ಕ್ಕೆ ಪ್ರಕಟಿಸಿದ್ದ ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಜೇಷ್ಠತೆ ಸಂಖ್ಯೆ 566ರಲ್ಲಿ ಇದ್ದು, ದಿನಾಂಕ 01/01/03 ದ್ದಂತೆ ಪ್ರಕಟಿಸಿರುವೆ ದ್ವಿತೀಯ ದರ್ಜೆ ಸಹಾಯಕರ ಜೇಷ್ಠತಾ ಪಟ್ಟಿಯುಲ್ಲಿ ಅವರ ಹೆಸರು ಕ್ರಮ ಸಂಖ್ಯೆ 570ರಲ್ಲಿ ಪ್ರಕಟಗೊಂಡಿರುವುದಕ್ಕೆ ಆಕ್ಷೇಪಿಸಿ ಕಾರಣಗಳನ್ನು ತಿಳಿಸುವಂತೆ ಕೋರಿರುತ್ತಾರೆ

5 ಜನ್ಮ ದಿನಾಂಕ 28/07/1975 ಎಂಬು ದರ ಬದಲಾಗಿ 28/07/1978 ಎಂದು ಹಾಗೂ ಸೇವೆಗೆ ಸೇರಿದ ದಿನಾಂಕ 10/03/1997ರ ಬದಲಾಗಿ 17/03/1997ಎಂದು ಪ್ರಕಟಿಸಲು ಕೋರಿರುತ್ತಾರೆ

ಸದರಿಯವರು ದಿನಾಂಕ 05/07/1983 ಕ್ಕಿಂತ ಮೊದಲು ಸ್ಥಳೀಯ ಅಭ್ಯರ್ಥಿಯಾಗಿ ಇಲಾಖೆಯಲ್ಲಿ ದ್ವಿತೀಯು 02/07/1986 ರಂದು ಹೊರಡಿಸಲಾದ ಅಧಿಸೂದನೆಯ ಪ್ರಕಾರ ದಿನಾಂಕ 02/07/1986 ರಂದು ಹೊರಡಿಸಲಾದ ಅಧಿಸೂಚನೆಯ ಪ್ರಕಾರ ದಿನಾಂಕ 04/07/1986 ರಿಂದ ದ್ವಿತೀಯ ದರ್ಜೆ ಸಹಾಯಕರಾಗಿ ಮುಂದುವರೆಸಿರುವುದರಿಂದ ದಿನಾಂಕ 04/07/1986ರ ಪ್ರಕಾರ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸುವಂತೆ ಕೋರಿರುತ್ತಾರೆ

ಅನುಬಂಧ-2

ಕ್ರ.ಸಂ	ಪದನಾಮು	ಮಂಜೂರಾಗಿರುವ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1	ನಿರ್ದೇಶಕರು	01	01	——
2	ಹೆಚ್ಚುವರಿ ನಿರ್ದೇಶಕರು	03	03	——
3	ಜಂಟಿ ನಿರ್ದೇಶಕರ ಪದವೃಂದದ ಹುದ್ದೆಗಳು	19	18	01
4	ಉಪ ನಿರ್ದೇಶಕರ ಪದವೃಂದದ ಹುದ್ದಗಳು	22	12	10
5	ಸಹಾಯಕ ನಿರ್ದೇಶಕರ ಪದವೃಂದದ ಹುದ್ದೆಗಳು	47	32	15
6	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	1	1	-
7	ಜಿಲ್ಲಾ ಲೆಕ್ಕಪರಿಶೋಧಕರ ಪದವೃಂದದ ಹುದ್ದೆಗಳು	138	106	32
8	ಅಧೀಕ್ಷಕ ಅಭಿಯಂತರರು	01	01	-
9	ಕಾರ್ಯನಿವಾಹಕ ಅಭಿಯಂತರರು	04	03	01
10	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು /ತಾಂತ್ರಿಕ ಸಹಾಯಕರು	21	20	01

11	ಸಹಾಯಕ ಅಭಿಯಂತರರು	80	60	20
12	ಕಿರಿಯ ಅಭಿಯಂತರರು			
	ಆಕೃತಿ ರಚನಾಕಾರರು	27	22	05
	ಆರ್ಕಿಟೆಕ್ಟ್ ಡ್ರಾಫ್ಟ್ ಮನ್ ಹೆಡ್ ಡ್ರಾಫ್ಟ್ಸ್ ಮನ್			
13	ಅಧೀಕ್ಷರು	148	102	16
14	ಸಹಾಯಕ ಸಂಖ್ಯಾಧಿಕಾರಿ	01	–	01
15	ರಸಾಯನ ತಜ್ಞರು	12	01	01
16	ಹಿರಿಯ ಮಾರುಕಟ್ಟೆ ಮೇಲ್ವಿಚಾರಕರು	147	,95	52
17	ಶೀಘ್ರಲಿಪಿಗಾರರು	19	06	10
18	ಪ್ರಥಮ ದರ್ಜೆ ಸಹಾಯಕರು	350	110	24
19	ಮಾರುಕಟ್ಟೆ ಮೇಲ್ವಿಚಾರಕರು	290	155	00
20	ದಾಟಾ ಫೀಡರ್	06	06	00
21	ಮಾರಾಟ ಸಹಾಯಕರ			
	ಪದವೃಂದದ ಹುದ್ದೆಗಳು	656	517	00
22	ದ್ವಿತೀಯ ದರ್ಜೆ ಸಹಾಯಕರು	253	176	00
23	ಬೆರಳಚ್ಚುಗಾರರು	202	117	83
24	ವಾಹನ ಚಾಲಕರು	154	70	84
25	ಮಾರುಕಟ್ಟೆ ಮೇಲ್ವಿಚಾರಕ ದರ್ಜೆ–4	142	37	105
26	ಅಟೆಂಡರ್	41	10	31
27	ಸಿಪಾಯಿ	596	341	255
28	ಎಲೆಕ್ಟ್ರಿಷಿಯನ್ ಗ್ರೇಡ್–1	02	02	–
29	ಟೆಕ್ನಿಷಿಯನ್ ಗ್ರೇಡ್–1	01	01	–
30	ಟೆಕ್ನಿಷಿಯನ್ ಗ್ರೇಡ್–2	02	02	–

195 (572) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಕೃಷಿ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ (ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಖಾಲಿ ಸ್ಥಳ ವಿವರ ಒದಗಿಸುವುದು)

ಆ) ಖಾಲಿ ಇದ್ದಲ್ಲಿ ಇವುಗಳ ಭರ್ತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಒಕ್ಕಲು ಕಣ ಯೋಜನೆಯಡಿಯಲ್ಲಿ ವೈಯಕ್ತಿಕ ಒಕ್ಕಲು ಕಣ ಇದ್ದುದನ್ನು ಗುಂಪು ಒಕ್ಕಲುಕಣವಾಗಿ ಪರಿವರ್ತಿಸಿರುವುದು ನಿಜವೇ ಇದಕ್ಕೆ ಕಾರಣ ಗಳೇನು,

ಇ) ಈ ಜಿಲ್ಲೆಯಲ್ಲಿ ರೈತರು ಗುಂಪಾಗಿ ವಾಸಿಸದೇ ಗುಡ್ಡಗಾಡು ಬೆಟ್ಟಕಾಡು ಪ್ರದೇಶವಾದ್ದರಿಂದ ಪ್ರತ್ಯೇಕವಾಗಿ ವಾಸಿಸುತ್ತಿರುವುದರಿಂದ ಈ ಮೊದಲಿದ್ದಂತೆ ವೈಯಕ್ತಿಕ ಒಕ್ಕಲುಕಣ ಯೋಜನೆಯನ್ನು ಮುಂದುವರೆಸಲು ಸರ್ಕಾರದ ಮುಂದೆ ಬೇಡಿಗೆ ಇದೆಯೇ,

ಈ) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು (ವಿವರ ನೀಡುವುದು)

ಶ್ರೀ ಬಂಡೆಪ್ಪ ಕಾಶೆಂಪುರ್

ಅ) 93 ಹುದ್ದೆಗಳು ಖಾಲಿ ಇವೆ (ಅನುಬಂಧದಲ್ಲಿ ನೀಡಲಾಗಿದೆ)

93 Post are vacant (Annexure enclosed)

ಆ) ಬಡ್ತಿ ಮತ್ತು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ

2006-07 ನೇ ಸಾಲಿನಲ್ಲಿ ಸಾರ್ವಜನಿಕ ಒಕ್ಕಣೆ ಕಣ ನಿರ್ಮಿಸಲು ಮಾತ್ರ ಇಲಾಖಾ ಮಾರ್ಗಸೂಚಿಯಲ್ಲಿ ನೀಡಲಾಗಿತ್ತು ಆದರೆ ಕೊಡಗು ಜಿಲ್ಲೆಯಲ್ಲಿ ರೈತರು ಗುಂಪಾಗಿ ವಾಸಿಸದೆ ಪ್ರತ್ಯೇಕವಾಗಿ ವಾಸ ಮಾಡುತ್ತಿರುವುದರಿಂದ ವೈಯಕ್ತಿಕ ರೈತರ ಜಮೀನಿನಲ್ಲಿ ಒಕ್ಕಣೆ ಕಣ ನಿರ್ಮಿಸಲು ಅನುಮತಿ ನೀಡಲಾಗಿತ್ತು ಹಾಗೂ ಈ ಸಾಲಿನಲ್ಲೂ ಕೂಡ ಮುಂದುವರೆಸಲಾಗಿದೆ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

<u>ವಿ ಸ ಪ್ರ.ಸಂ 572</u>

ಅನುಬಂಧ

ಕೊಡಗು ಜಿಲ್ಲೆಯಲ್ಲಿ ಕೊಡಗು ಜಿಲ್ಲೆಯ ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ (ತಾಲ್ಲೂಕುವಾರು)

ಕ್ರ.ಸಂ	ಹುದ್ದೆಯ ಹೆಸರು	ಜಕೃನಿ, ಕೊಡಗು	ಜಿಕೃತಕೇಂ, ಕೊಡಿಗೆ	ಸಕೃನಿ ಮಡಿಕೇರಿ	ಸಕೃನಿ ಸೋಮ ವಾರಪೇಟ	ಸಕೃನಿ ವಿರಾಜಪೇಟೆ	ಮ ಆ ಕೇಂದ್ರ ಕೂಡಿಗೆ	ಕೃಷಿ ಪಾಠಶಾಲೆ ಕೂಡಿಗೆ	ಅಧೀಕ್ಷಕರು ಕೃಷಿ ಕ್ಷೇತ್ರ	ಒಟ್ಟು
1	ಜಂಟಿ ಕೃಷಿ ನಿರ್ದೇಶಕರು	–	–	–	–	–	–	–	–	–
2	ಉಪ ಕೃಷಿ ನಿರ್ದೇಶಕರು	–	1	–	–	–	–	–	–	1
3	ಸಹಾಯಕ ಕೃಷಿ ನಿರ್ದೇಶಕರು	–	–	–	–	–	–	–	–	–
4	ಸಹಾಯಕ ಕೃಷಿ ನಿರ್ದೇಶಕರು(ರೈಮ)	–	–	–	–	–	–	–	–	–
5	ಆಡಳಿತ ಅಧಿಕಾರಿ	1	–	–	–	–	–	–	–	1
6	ಆಡಳಿತ ಸಹಾಯಕರು	–	1	–	–	–	–	–	–	1
7	ಕೃಷಿ ಅಧಿಕಾರಿ	5	3	6	5	8	4	1	–	32
8	ಕೃಷಿ ಅಧಿಕಾರಿ(ರೈಮ)	–	–	–	–	–	–	–	–	–
9	ಸಹಾಯಕ ಕೃಷಿ ಅಧಿಕಾರಿ	–	1	4	2	4	–	–	–	11

10	ಸಹಾಯಕ ಕೃಷಿ ಅಧಿಕಾರಿ(ರೈಮ)	–	–	–	–	–	–	–	–	–
11	ಕೃಷಿ ಉಪಕರಣ ಮೇಲ್ವಿಚಾರಕ	–	–	–	–	–	–	–	–	–
12	ಗ್ರೂಪ್ ಡಿ	–	–	–	–	–	–	–	–	–
13	ಅಟೆಂಡರ್	–	–	–	–	–	1	–	–	–
14	ಬಾಣಸಿಗೆ	–	2	–	–	–	–	–	–	–
15	ಕೃಷಿ ಸಹಾಯಕರು	–	1	–	2	5	–	1	2	11
16	ಅಧೀಕ್ಷಕರು	–	–	–	–	–	–	–	–	–
17	ಪ್ರಥಮ ದರ್ಜೆ ಸಹಾಯಕರು	1	1	–	–	–	–	–	–	2
18	ದ್ವಿತೀಯ ದರ್ಜೆ ಸಹಾಯಕರು	–	–	1	1	1	–	–	–	3
19	ಶೀಘ್ರಲಿಪಿಗಾರರು	–	–	–	–	–	–	–	–	–
20	ಬೆರಳಚ್ಚುಗಾರರು	2	–	–	1	1	–	–	–	4
21	ವಾಹನ ಚಾಲಕರು	–	–	–	–	–	–	–	–	–
22	ಪ್ರಯೋಗಶಾಲಾ ಸಹಾಯಕರು	–	–	–	–	–	1	–	–	1
23	ಸಹಾಯಕ ಸಾಂಖಿಕ ಅಧಿಕಾರಿ	–	–	–	–	–	–	–	–	–
	ಒಟ್ಟು	**09**	**10**	**11**	**11**	**19**	**06**	**02**	**02**	**70**

ಕೊಡಗು ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿನ ಖಾಲಿ ಹುದ್ದೆಗಳ ಮಾಹಿತಿ

ಕ್ರಸಂ	ಹುದ್ದೆಗಳು	ಮಡಿಕೇರಿ ಕೇಂದ್ರ ಸ್ಥಳ	ಮಡಿಕೇರಿ ತಾಲ್ಲೂಕು	ಸೋಮವಾರಪೇಟೆ ತಾಲ್ಲೂಕು	ವಿರಾಜಪೇಟೆ ತಾಲ್ಲೂಕು	ಒಟ್ಟು
1	ಅಧೀಕ್ಷಕರು	1	–	–	–	1
2	ರೇಖಾಗಾರರು	2	–	–	–	2
3	ಬೆರಳಚ್ಚುಗಾರರು	1	–	–	–	1
4	ವನಪಾಲಕರು	–	–	–	1	1
5	ಅರಣ್ಯ ರಕ್ಷಕರು	–	3	3	3	9
6	ತೋಟಗಾರರು	–	1	1	1	3
7	ತೋಟಗಾರ ಸಹಾಯಕ	–	1	–	–	1
8	ಸಹಾಯಕ ಕೃಷಿ ಅಧಿಕಾರಿ	1	–	–	2	3
9	ಗ್ರೂಪ್ " ಡಿ "	2	–	–	–	2
	ಒಟ್ಟು	7	5	4	7	23

196 (573) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರವ್ಯಾಪ್ತಿ ಯಲ್ಲಿ ಈವರೆಗೂ ಕ್ರಮವಾಗಿ ಎಷ್ಟು ಜನರಿಗೆ ಬಿಪಿಎಲ್ ಮತ್ತು ಎಪಿಎಲ್ ಕಾರ್ಡುಗಳನ್ನು ವಿತರಿಸಲಾಗಿದೆ ವಿತರಿಸಲು ಬಾಕಿ ಇರುವುದೆಷ್ಟು , (ಕ್ಷೇತ್ರದ ಪಂಚಾಯ್ತಿವಾರು ವಿವರ ನೀಡುವುದು),

ಆ) ಈಗಾಗಲೇ ವಿತರಿಸಿದ ಕಾರ್ಡುಗಳಲ್ಲಿ ಅನಿಲ ಗ್ಯಾಸ್ ಇಲ್ಲದವರಿಗೂ ಅನಲ ಗ್ಯಾಸ್ ಎಂದು ತಪ್ಪಾಗಿ ನಮೂದಾಗಿ ವಿತರಿಸಿರುವುದು ನಿಜವೇ,

ಇ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಈಗಾಗಲೇ ಎಷ್ಟು ಕಾರ್ಡುಗಳನ್ನು ಸರಿಪಡಿಸಲಾಗಿದೆ, (ವಿವರ ಒದಗಿಸುವುದು)

ಈ) ಅದೇ ರೀತಿ ಜಿಲ್ಲೆಯ ತೀವ್ರ ಮಳೆಪೀಡಿತ ಪ್ರದೇಶವಾಗಿದ್ದು ಗುಡ್ಡ ಗಾಡು ಪ್ರದೇಶ ದಲ್ಲಿ ವಿದ್ಯುತ್ ಸಂಪರ್ಕವಿಲ್ಲದೇ ಇರುವುದರಿಂದ ಇದನ್ನು ಪರಿಗಣಿಸಿ ಎಲ್ಲರಿಗೂ ಕನಿಷ್ಠ 3 ಲೀಟರ್ ಸೀಮೆ ಎಣ್ಣೆಯನ್ನು ವಿತರಿಸುವ ಯೋಜನೆ ಸರ್ಕಾರದ ಮುಂದಿದೆಯೇ ಈ ಕುರಿತು ಕೈಗೊಂಡ ಕ್ರಮಗಳೇನು, (ವಿವರ ನೀಡುವುದು),

ಉ) ಈ ಮೊದಲು ಇದ್ದ ಕಾರ್ಡ್ ಒಂದಕ್ಕೆ 20 ಕೆಜಿ ಎಂಬುದರ ಬದಲು ಯೂನಿಟ್ ಬಳಿಕ ಆಧಾರದಲ್ಲಿ ಪ್ರತಿ ವ್ಯಕ್ತಿಗೆ 4 ಕೆಜಿ ಪ್ರಮಾಣಕ್ಕೆ ಬದಲಾಯಿಸಲು ಕಾರಣವೇನು, ಇದರ ಸಾಧಕ ಬಾಧಕಗಳೇನು ತಿಳಿಸುವುದು?

ಶ್ರೀ ಗೋವಿಂದ ಎಂ ಕಾರ್ಜೋಳ

ಅ) ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಈವರೆವಿಗೂ 26,355 ಬಿಪಿಎಲ್, 20687 ಎಪಿಎಲ್ ಕಾರ್ಡುಗಳನ್ನು ವಿತರಿಸಲಾಗಿದೆ ಕ್ಷೇತ್ರವಾರು ಕ್ಷೇತ್ರವಾರು ವಿವರದ ಪಟ್ಟಿಯನ್ನು ಲಗತ್ತಿಸಿದೆ

ಆ) ಕೆಲವು ತಪ್ಪುಗಳು ಆಗಿರುವುದು ನಿಜವಿರುತ್ತದೆ ಇವುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ

ಇ) ಈ ಸಂಬಂಧ ಸಾರ್ವಜನಿಕ ಅಹವಾಲುಗಳ ಕೇಂದ್ರವನ್ನು ತೆರೆದು ಅಹವಾಲುಗಳನ್ನು ಸ್ವೀಕರಿಸಿ ನೊಂದಾಯಿಸಿ ಸಮೀಕ್ಷಾ ತಂಡದಿಂದ ಪುನರ್ ಪರಿಶೀಲನೆ ನಡೆಸಿ ಅದನ್ನು ಫಲಾನುಭವಿಗಳನ್ನು ಪುನಃ ಗುರುತಿಸಿ ಅಂತಹ ಕಾರ್ಡುಗಳನ್ನು ಸರಿಪಡಿಸಿ ಈಗಾಗಲೇ ಸಂಬಂಧಪಟ್ಟ ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ ಮಡಿಕೇರಿ ವಿಧಾನ ಸಬಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪುನರ್ ಪರಿಶೀಲನೆ ನಂತರ ಒಟ್ಟು 3529 ಅನಲ ಪಡಿತರ ಚೀಟಿಗಳನ್ನು ಅನಿಲ ರಹಿತ ಪಡಿತರ ಚೀಟಿಗಳೆಂದು ಗುರುತಿಸಿ ಸರಿಪಡಿಸಲಾಗಿದೆ

ಈ) ಗ್ರಾಮಂತರ ಪ್ರದೇಶದ ಅನಿಲರಹಿತ ಎಲ್ಲಾ ಕುಟುಂಬಗಳಿಗೂ 4 ಲೀಟರ್ ನಂತ ಹಾಗೂ ಪಟ್ಟಣ ಪ್ರದೇಶದ ಅನಿಲರಹಿತ ಕುಟುಂಬಗಳಿಗೆ 6 ಲೀಟರಂತೆ ಸೀಮೆಎಣ್ಣೆ ವಿತ ರಿಸಲಾಗುತ್ತಿದೆ

ಉ) ಈ ಮೊದಲು ಇಡಿಗಂಟಾಗಿ ಆಹಾರಧಾನ್ಯಗಳನ್ನು ನೀಡುವ ಪದ್ಧತಿಯಲ್ಲಿ ಸದಸ್ಯರ ಸಂಖ್ಯೆಯನ್ನು ಪರಿಗಣಿಸದೇ ಒಬ್ಬ ಅದವಾ ಇಬ್ಬರು ಸದಸ್ಯರಿರುವ ಕುಟುಂಬಗಳಿಗೂ ಹಾಗೂ ಹೆಚ್ಚಿನ ಸಂಖ್ಯೆಯ ಸದಸ್ಯರಿರುವ ಕುಟುಂಬಗಳಿಗೂ ಒಂದೇ ಪ್ರಮಾಣದ ಅಂದರೆ, 20 ಕೆ ಜಿ ಅಕ್ಕಿ ಹಾಗೂ 5 ಕೆ,ಜಿ ಗೋಧಿಯನ್ನು ವಿತರಿಸಲಾಗುತ್ತಿತ್ತು ಇದರಿಂದಾಗಿ ಸದಸ್ಯರು ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಆಹಾರ ಧಾನ್ಯಗಳನ್ನು ವಿತರಿಸುವ ಯೂನಿಟ್ ಪದ್ಧತಿಯನ್ನು ಆರಂಬಿಸಲಾಗಿರುತ್ತದೆ ಈ ಪದ್ಧತಿಯಲ್ಲಿ ಪ್ರತೀ ಸದಸ್ಯರಿಗೆ ಸಹಾಯಧನಯುಕ್ತ 4 ಕೆ,ಜಿ ಅಕ್ಕಿ ಜೊತೆಗೆ 1 ಕೆ,ಜಿ ಗೋದಿಯನ್ನು ವಿತರಿಸಲಾಗುತ್ತಿದೆ

ಅನುಬಂಧ

ಮಡಿಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿರಾಜಪೇಟೆ ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯ್ತಿವಾರು ಮತ್ತು ವಿತರಿಸಬೇಕಾಗಿರುವ ಪಡಿತರ ಚೀಟಿಗಳ ವಿವರ

ಕ್ರ.ಸಂ	ಗ್ರಾಮ ಪಂಚಾಯ್ತಿಯ ಹೆಸರು	ವಿತರಿಸಲಾಗಿರುವ ಪಡಿತರ ಚೀಟಿಗಳು	
		ಬಿಪಿಎಲ್	ಎಪಿಎಲ್
1	ಹೊಸೂರು	761	185
2	ಪಾಲಿಬೆಟ್ಟ	926	344
3	ಬಿಳುಗುಂದ	768	205
4	ಸಿದ್ದಾಪುರ	1699	663
5	ಹಾಲುಗುಂದ	475	289
6	ಕಣ್ಣಂಗಾಲು	786	220
7	ಅಮ್ಮತ್ತಿ	908	238
8	ಕಾರ್ಮಾಡು	1000	477
9	ಮಾಲ್ದಾರೆ	1955	232
10	ಚೆನ್ನಯ್ಯನಕೋಟೆ	1646	615
	ಒಟ್ಟು	10924	3168
	ಮಡಿಕೇರಿ ವಿಧಾನಸಬಾ ಕ್ಷೇತ್ರದ ಒಟ್ಟು	**26355**	**20687**

197 (576) ಶ್ರೀ ಧ್ರುವನಾರಾಯಣ ಆರ್ (ಸಂತೇಮಾರಕ ಶ್ರೀ ಬಂಡೇಪ್ಪ ಕಾಶಂಪೂರ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ ಎಣ್ಣೆ ಕಾಳು ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಯ ಗುರಿಯನ್ನು ನಗಧಿ ಪಡಿಸಲು ಇರುವ ಅಧಾರಗಳೇನು?

ಆ ರಾಜ್ಯದಲ್ಲಿ ಮುಖ್ಯವಾಗಿ ಎಣ್ಣೆಕಾಳು ಬೆಳೆಗಳಾದ ನೆಲಗಡಲೆ ಮತ್ತು ಸೂರ್ಯಕಾಂತಿಯ ಬೇಡಿಕೆ ಎಷ್ಟು?

ಇ ಬೇಡಿಕೆಗಿಂ ಕಡಿಮೆ ಉತ್ಪಾದನಾ ಗುರಿ ಇದ್ದಲ್ಲಿ, ಬೇಡಿಕೆ ಮಟ್ಟಕ್ಕೆ ಉತ್ಪಾದನೆ ಹೆಚ್ಚಿಸಲು ಕೈಗೊಂಡ ಕ್ರಮಗಳೇನು?

ಈ ಎಣ್ಣೆಕಾಳು ಮತ್ತು ದ್ವಿದಳ ಧಾನ್ಯಗಳ ಉತ್ಪಾದಕತೆ ರಾಷ್ಟ್ರದ ಸರಾಸರಿ ಇಳುವರಿಗೆ ಸಮನಾಗಿದೆಯೇ?

ಉತ್ಪಾದಕತೆ ಇಳುವರಿಯನ್ನು ಹೆಚ್ಚಿಸಲು ಸಂಶೋಧನಾಲಯಗಳಿಂದ ಹೊಸತಳಿಗಳ ತಂತ್ರಜ್ಞಾನ ಪದ್ಧತಿಗಳೆನ್ನು ಶಿಫಾರಸ್ಸು ಮಾಡಲಾಗಿದೆಯೆ? ಇದ್ದಲ್ಲಿ ಇದನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಂಡೆಪ್ಪಕಾಶೆಂಪೂರ್

ಅ ಬೇಡಿಕೆ ಹಾಗೂ ಜನ ಸಂಖ್ಯೆಗನುಗುಣವಾಗಿ ಇವುಗಳ ಬೆಳೆವಾರು ಉತ್ಪಾಧನಾ ಗುರಿಯನ್ನು ನಿಗಧಿಪಡಿಸಲಾಗುತ್ತಿದೆ

ಆ ರಾಜ್ಯದಲ್ಲಿ ನೆಲಗಡಲೆ ಸೂರ್ಯಕಾಂತಿಯು ವಾರ್ಷಿಕ ಬೇಡಿಕೆಯು ಸುಮಾರು 16 ಲಕ್ಷ ಟನ್ ಗಳೆಂದು ಅಂದಾಜಿಸಲಾಗಿದೆ

ಇ ರಾಜ್ಯದಲ್ಲಿ ಎಣ್ಣೆಕಾಳುಗಳ ಉತ್ಪಾದನೆಯು ಬೇಡಿಕೆಗೆ ಅನುಗುಣವಾಗುಣವಾಗಿರುತ್ತದೆ

ಈ ಇಲ್ಲಾ, ಉತ್ಪಾಧನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಸಂಶೋಧನೆಯ ಫಲಗಳನ್ನು ಅಳವಡಿಸಲಾಗುತ್ತಿದೆ ಇದಕ್ಕಾಗಿ, ಹೊಸ ತಳಿಗಳ ಪ್ರಯೋಗ ತಾಕುಗಳೊಂದಿಗೆ ಪೂರ್ಣಮಟ್ಟದ ಪ್ರಾತ್ಯಕ್ಷಿಕೆಗಳನ್ನು ಸಹ ಏರ್ಪಡಿಸಲಾಗುತ್ತಿದೆ

198 (397) ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಮಾನ್ಯ ಆಹಾರ ನಾಗರಿಕ ಸರವರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಮಲೆನಾಡಿನ (ಶಿವಮೊಗ್ಗ ಜಿಲ್ಲೆ) ಹೊಸನಗರ, ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ LPG ಸಂಪರ್ಕವಿರುವವರಿಗೆ ಪಡಿತರ ಸೀಮೆ ಎಣ್ಣೆಯನ್ನು ಏಕೆ ವಿತರಿಸಲಾಗುತ್ತಿಲ್ಲ,

ಆ) ಮಲೆನಾಡಿನ ಮೇಲ್ಕಂಡ ತಾಲ್ಲೂಕುಗಳಲ್ಲಿ ಪಡಿತರ ಸೀಮೆಎಣ್ಣೆ ಅಡಿಗೆ ಬಳಕೆಗಿಂತ ಬೆಳಕಿಗೆ ಬಳಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಮೇಲ್ಕಂಡ ತಾಲ್ಲೂಕುಗಳಲ್ಲಿ ಬೆಳಕಿಗಾಗಿ ಸೀಮೆಎಣ್ಣೆ ಕೊಡಲು ಇರುವ ತೊಂದರೆಗಳೇನು?

ಶ್ರೀ ಗೋವಿಂದ ಎಂ ಕಾರಜೋಳ

ಅ) ಅನಿಲ ಸಂಪರ್ಕ ಹೊಂದಿರುವವರು ಸಿಲಿಂಡರು ಉಪಯೋಗಿಸುವ ಮೂಲಕ ಸರ್ಕಾರದ ಸಹಾಯಧನ ಸೌಲಭ್ಯ ಪಡೆಯುತ್ತಿರುವುದರಿಂದ ಸೀಮೆಎಣ್ಣೆಗೂ ಸಹ ಸಹಾಯಧನಯುಕ್ತ ಪದಾರ್ಥ ಆಗಿರುವುದರಿಂದ ಒಬ್ಬನೇ ವ್ಯಕ್ತಿ ಎರಡು ಯೋಜನೆಗಳ ಸಹಾಯಧನ ಪಡೆಯುವುದು ಸಮಂಜಸವಲ್ಲ ಜೊತೆಗೆ ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಮಂತ್ರಾಲಯದ ದಿನಾಂಕ 28 2 1997ರ ನಿರ್ದೇಶನದಂತೆ ಸಾರ್ವಜನಿಕ ವಿತರಣಾ ಪದ್ಧತಿಯ ಸೀಮೆಎಣ್ಣೆಯನ್ನು

ಎಲ್ ಪಿ ಜಿ ಸಂಪರ್ಕ ಹೊಂದಿರುವವರಿಗೆ ನೀಡದಿರಲು ಸೂಚಿಸಲಾಗಿರುತ್ತದೆ ಅದರಂತೆ ರಾಜ್ಯದಾದ್ಯಂತ ಏಕರೂಪವಾಗಿ ಅನಿಲ ಸಂಪರ್ಕ ಹೊಂದಿರುವವರಿಗೆ ಪಿ ಡಿ ಎಸ್ ಸೀಮೆಎಣ್ಣೆಯನ್ನು ನೀಡುತ್ತಿರುವುದಿಲ್ಲ

ಆ) ಬಂದಿರುತ್ತದೆ

ಇ) ಮೇಲ್ಕಂಡ ತಾಲ್ಲೂಕುಗಳಲ್ಲಿ ಅನಿಲ ಸಂಪರ್ಕ (ಎಲ್ ಪಿ ಜಿ) ಹೊಂದಿಲ್ಲದ ಎಲ್ಲಾ ಕುಟುಂಬಗಳಿಗೂ ಬೆಳಕಿಗಾಗಿ ಸೀಮೆಎಣ್ಣೆ ಕೊಡಲಾಗುತ್ತಿದೆ ಮಲೆನಾಡಿನ ಹೆಚ್ಚುವರಿ ಸೀಮೆಎಣ್ಣೆ ಬೇಡಿಕೆಯನ್ನು ಅನುಸರಿಸಿ 5000 ಕೆಎಲ್ ಸೀಮೆಎಣ್ಣೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ

ದೇವಸ್ಥಾನಗಳ ಜೀರ್ಣೋದ್ಧಾರ

199 (398) ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಮಾನ್ಯ ಮೀನುಗಾರಿಕಾ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಮುಜರಾಯಿ ದೇವಸ್ಥಾನಗಳ (ಜೀರ್ಣೋದ್ಧಾರ) ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು),

ಆ) ಆರಾಧನಾ ಸಮಿತಿಯ ಮುಖಾಂತರ ದೇವಸ್ಥಾನಗಳ (ಜೀರ್ಣೋದ್ಧಾರ) ಅಭಿವರದ್ಧಿಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು, (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಬಿ ನಾಗರಾಜ್ ಶೆಟ್ಟಿ

ಅ) ಶಿವಮೊಗ್ಗ ಜಿಲ್ಲೆಯ 19 ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿಗಾಗಿ ಒಟ್ಟು ರೂ 13 25ಲಕ್ಷ ಬಿಡುಗಡೆ ಮಾಡಲಾಗಿರುತ್ತದೆ

(ಅನುಬಂಧ - 1ರಲ್ಲಿ ತಾಲ್ಲೂಕುವಾರು ವಿವರ ನೀಡಿದೆ)

ಆ) ಆರಾಧನಾ ಯೋಜನೆಯಡಿಯಲ್ಲಿ ಪ್ರತಿ ವಿಧಾನ ಸಭಾಕ್ಷೇತ್ರಕ್ಕೆ 2006-07 ರಲ್ಲಿ ತಲಾ ರೂ 5 00 ಲಕ್ಷದಂತೆ 224 ವಿಧಾನ ಸಭಾ ಕ್ಷೇತ್ರಗಳಿಗೆ ಒಟ್ಟು ರೂ 1120,00 ಲಕ್ಷಗಳನ್ನು ಸಮನಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಈ ಮೊತ್ತದಲ್ಲಿ ಶಿವಮೊಗ್ಗ ಜಿಲ್ಲೆಯ 8 ವಿಧಾನ ಸಭಾ ಕ್ಷೇತ್ರಗಳಿಗೆ ತಲಾ ರೂ 5 00 ಲಕ್ಷದಂತೆ ಒಟ್ಟು ರೂ,40 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

(ತಾಲ್ಲೂಕುವಾರು ವಿವರವನ್ನು ಅನುಬಂದ-2ರಲ್ಲಿ ಒದಗಿಸಿದೆ)

ಶಿವಮೊಗ್ಗ ಜಿಲ್ಲೆಯ ಮುಜರಾಯಿ ಸಂಸ್ಥೆಗಳಿಗೆ ಜೀರ್ಣೋದ್ಧಾರ ಕಾಮಗಾರಿಗಾಗಿ ಮಂಜೂರು ಮಾಡಲಾದ ಅನುದಾನದ ವಿವರ

ಅನುಬಂಧ-1

ಕ್ರಮ ಸಂ	ತಾಲ್ಲೂಕು	ದೇವಾಲಯದ ಹೆಸರು	ಮೊತ್ತ
